ಶ್ರೀಃ.

ಶ್ರೀ ವ್ಯಾಸ ಮಹರ್ಷಿ ಪ್ರಣೀತ

ಶ್ರೀಮದ್ಭಾಗವತವು

ತೃತೀಯಸ್ಕಂಧವು.

ಕರ್ಣಾಟಕ ವಚನವು

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವತಿಖಾಮಣಿ ಆಳಸಿಂಗರಾಚಾರ್ಯವಿರಚಿತವು.

ಮದ್ರಾಸು

ಆನಂದಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ
ಆರ್. ವೇಂಕಟೇಶ್ವರಕಂಪೆನಿಯವರಿಂದ
ಪ್ರಕಟಿಸಲ್ಪಟ್ಟಿದೆ.

1919

[ALL RIGHTS RESERVED]

All Rights Reserved.

ಕಾಪಿರೈಟ್, ೧೯೧೪—ಈಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, ಆರ್. ವೇಂಕಟೇಶ್ವರಕಂಪನಿಯವರಿಗೆ ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾ ವರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ, ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ತೃತೀಯಸ್ಕಂಧದ ವಿಷಯಾನುಕ್ರಮಣಿಕೆ.

ಅಧ್ಯಾಯಸಂಖ್ಯೆ.	ವಿಷಯಗಳು.	ಪುಟಸಂಖ್ಯೆ
೧.	ವಿದುರನು ಉದ್ಧವನನ್ನು ಕಂಡು ಕೃಷ್ಣವೃತ್ತಾಂತವನ್ನು ಕೇಳಿದುದು.	೩೨೧
೨.	ಉದ್ಧವನು ಶ್ರೀಕೃಷ್ಣನ ಅಗಲಿಕೆಯಿಂದ ದುಃಖಿಸುತ್ತ, ವಿದುರನಿಗೆ ಆ ಕೃಷ್ಣನ ವೃತ್ತಾಂತಗಳನ್ನು ತಿಳಿಸಿದುದು.	೩೩೫
೩.	ಶ್ರೀಕೃಷ್ಣನು ಮಥುರೆಯಲ್ಲಿ ನಡೆಸಿದ ಕಂಸವಧೆಯೇ ಮೊದಲಾದ ಚರಿತ್ರಗಳು.	೩೪೫
೪.	ವಿದುರನು ಬಂಧುಮರಣವನ್ನು ಕೇಳಿ ದುಃಖಿಸುತ್ತ, ಆತ್ಮಜ್ಞಾನವನ್ನು ಪಡೆಯುವುದಕ್ಕಾಗಿ ಮೈತ್ರೇಯರ ಬಳಿಗೆ ಹೋಗುವಂತೆ ಉದ್ಧವರಿಂದ ಪ್ರೇರಿತನಾಗಿ, ಆಮಹರ್ಷಿಯಬಳಿಗೆ ಬಂದುದು.	೩೫೧
೫.	ವಿದುರನ ಪ್ರಾರ್ಥನೆಯಿಂದ ಮೈತ್ರೇಯನು ಆತನಿಗೆ ಮಹತ್ತು ಮೊದಲಾದ ತತ್ವಗಳ ಸೃಷ್ಟಿಕ್ರಮವನ್ನೂ, ಆ ತತ್ವಗಳು ಭಗವಂತನನ್ನು ಸ್ತುತಿಸಿದ ರೀತಿಯನ್ನೂ ವಿವರಿಸಿದುದು.	೩೫೯
೬.	ಪರಮಾತ್ಮನಿಂದ ಮಹದಾದಿತತ್ವಗಳಿಗೆ ಸೃಷ್ಟಿಸಾಮರ್ಥ್ಯವುಂಟಾಗಿ ಅಂಡಸೃಷ್ಟಿಯಾದುದು. ಆ ಅಂಡದಿಂದ ಚತುರ್ಮುಖೋತ್ಪತ್ತಿ ಮುಂತಾದುವುಗಳು.	೩೭೫
೭.	ವಿದುರನು ಮೈತ್ರೇಯನನ್ನು ನಾನಾವಿಧವಾಗಿ ಪ್ರಶ್ನೆಮಾಡಿದುದು.	೩೮೩
೮.	ಮೈತ್ರೇಯಮಹರ್ಷಿಯು ವಿದುರನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿದ್ದುದು.	೩೯೯
೯.	ಬ್ರಹ್ಮನು ಸೃಷ್ಟಿಸಾಮರ್ಥ್ಯವನ್ನು ಪಡೆಯುವುದಕ್ಕಾಗಿ ಪರಮಪುರುಷನನ್ನು ಸ್ತುತಿಸಿದುದು.	೪೦೫

೧೦. ಮೈತ್ರೇಯಮುನಿಯು ಪ್ರಾಕೃತವೈಕೃತಗಳೆಂಬ ಸೃಷ್ಟಿಭೇದಗಳನ್ನು ವಿದುರನಿಗೆ ತಿಳಿಸಿದುದು. ೪೨೬

೧೧. ಮೈತ್ರೇಯನು ವಿದುರನಿಗೆ ಕಾಲಸ್ವರೂಪವನ್ನೂ ಅದರ ಪರಿಮಾಣಭೇದಗಳನ್ನೂ ತಿಳಿಸಿದುದುದು. ೪೩೮

೧೨. ಚತುರ್ಮುಖಬ್ರಹ್ಮನಿಂದ ನಡೆದ ಪ್ರಪಂಚಸೃಷ್ಟಿಕ್ರಮವು. ಮೊದಲು ಚತುರ್ಮುಖನು ಪ್ರಜಾವೃದ್ಧಿಗಾಗಿ ಶತರೂಪೆ ಮತ್ತು ಮನುವೆಂಬ ಸ್ತ್ರೀಪುರುಷರನ್ನು ಸೃಷ್ಟಿಸಿದುದು. ೪೪೯

೧೩. ಭೂಮಿಯು ಸಮುದ್ರಮಧ್ಯದಲ್ಲಿ ಮುಳುಗಿದುದನ್ನು ನೋಡಿ, ಸ್ವಾಯಂಭುವಮನುವು ತನ್ನ ವಾಸಕ್ಕಾಗಿ ಸ್ಥಳವನ್ನು ಕೇಳಿದುದು. ಇದಕ್ಕಾಗಿ ಬ್ರಹ್ಮನು ಚಿಂತಿಸುತ್ತಿರುವಾಗ, ವಿಷ್ಣುವು ವರಾಹರೂಪಿಯಾಗಿ ಬಂದು ಭೂಮಿಯನ್ನು ಮೇಲಕ್ಕೆತ್ತಿದುದು. ೪೬೦

೧೪. ದಿತಿದೇವಿಯಲ್ಲಿ ಗರ್ಭೋತ್ಪತ್ತಿ ಮುಂತಾದ ವೃತ್ತಾಂತಗಳು. ೪೭೨

೧೫. ದಿತಿಗರ್ಭವು ಬೆಳೆಯುತ್ತ ಬಂದಹಾಗೆಲ್ಲಾ, ಅದರ ತೇಜಸ್ಸಿನಿಂದ ಲೋಕವೆಲ್ಲವೂ ಅಂಧಕಾರಮಯವಾದುದು. ಬ್ರಹ್ಮನು ದೇವತೆಗಳಿಗೆ ಅದರ ಕಾರಣವನ್ನು ತಿಳಿಸಿದುದು. ಜಯವಿಜಯರ ಶಾಪ ಮುಂತಾದುವು. ೪೮೧

೧೬. ಭಗವಂತನು ಸನಕಾದಿಗಳನ್ನು ಸಮಾಧಾನಪಡಿಸಿದುದು. ೪೯೩

೧೭. ಹಿರಣ್ಯಾಕ್ಷ ಹಿರಣ್ಯಕಶಿಪುಗಳ ಜನನವು. ೫೦೨

೧೮. ಹಿರಣ್ಯಾಕ್ಷನು ವರುಣನಮೂತಿನೆಮೇಲೆ ಶ್ರೀಮಹಾವಿಷ್ಣುವನ್ನು ಹುಡುಕುತ್ತ ಹೊರಟುದು. ವರಾಹಹಿರಣ್ಯಾಕ್ಷಯುದ್ಧವು. ೫೦೭

೧೯. ವರಾಹಮೂರ್ತಿಯು ಹಿರಣ್ಯಾಕ್ಷನನ್ನು ಕೊಂದುದು. ೫೧೨

೨೦ ದೇವಸೃಷ್ಟಿಕ್ರಮವು. ೫೧೪

೨೧. ಕರ್ದಮನ ತಪಸ್ಸು. ಭಗವಂತನು ಅವನಲ್ಲಿ ಪ್ರಸನ್ನನಾಗಿ ಅವನಿಗೆ ವಿವಾಹನೂರ್ಗಪನ್ನು ತೋರಿಸಿದುದು. ೫೨೬

೨೨. ಸ್ವಾಯಂಭುವಮನುವು ತನ್ನ ಮಗಳಾದ ದೇವಹೂತಿಯನ್ನು ಕರ್ದಮನಿಗೆ ಕೊಟ್ಟು ವಿವಾಹಮಾಡಿದುದು. ಮನುರಾಜ್ಯವೈಭವವು. ೫೩೬

೨೩. ಕರ್ದಮನು ತನ್ನ ಯೋಗಬಲದಿಂದ ವಿಮಾನವನ್ನು ಕಲ್ಪಿಸಿ ಕೊಂಡು, ಭಾರ್ಯಾಸಮೇತನಾಗಿ ಸುಖದಿಂದ ವಿಹರಿಸು ತಿದ್ದುದು. ೫೪೨

೨೪. ಕಪಿಲಾವತಾರದ ಕಥೆ. ೫೫೦

೨೫. ಕಪಿಲಸಿಗೂ ದೇವಹೂತಿಗೂ ನಡೆದ ಸಂಪಾದನೆಗಳು. ೫೫೮

೨೬. ಕಪಿಲನು ದೇವಹೂತಿಗೆ ಪ್ರಕೃತಿಪುರುಷಸ್ವರೂಪವನ್ನು ತಿಳಿ ಸಿದುದು ೫೬೭

೨೭. ಪ್ರಕೃತಿಪುರುಷಸ್ವರೂಪಜ್ಞಾನದಿಂದ ಮೋಕ್ಷಪ್ರಾಪ್ತಿಯೆಂಬು ದನ್ನು ನಿರೂಪಿಸಿದುದು. ೫೮೪

೨೮. ಭಕ್ತಿಸಾಧನಾಕ್ರಮವನ್ನೂ, ಅದರ ಅಂಗಗಳನ್ನೂ ವಿವರಿ ಸಿದುದು. ೫೯೨

೨೯. ಭಕ್ತಿಯೋಗದ ವಿಭಾಗಗಳನ್ನೂ, ಕಾಲಸ್ವರೂಪವನ್ನೂ ತಿಳಿಸಿ ದುದು. ೬೦೨

೩೦. ಕಪಿಲನು ದೇವಹೂತಿಗೆ ವೈರಾಗ್ಯಕಾರಣಗಳಾದ ಸಂಸಾರದುಃ ಖಗಳನ್ನು ವಿವರಿಸಿದುದು. ೬೧೦

೩೧. ಗರ್ಭಜನ್ಮಾದಿದುಃಖಗಳು. ೬೧೭

೩೨. ಪುಣ್ಯಕರ್ಮಗಳನ್ನಾಚರಿಸಿದವರಿಗೂ, ಪರಬ್ರಹ್ಮೋಪಾಸನೆಯನ್ನು ಮಾಡಿದವರಿಗೂ ಪ್ರಾಪ್ತವಾಗುವ ಸದ್ಗತಿಗಳನ್ನು ವಿವರಿಸಿ ದುದು. ೬೩೦

೩೩. ದೇವಹೂತಿಯು ಕಪಿಲನನ್ನು ಸ್ತೋತ್ರಮಾಡಿ, ಯೋಗಮಾರ್ಗ ವನ್ನು ಹಿಡಿದು ಮುಕ್ತಿಯನ್ನು ಹೊಂದಿದುದು. ಕಪಿಲ ಮುನಿಯು ಅಂತರ್ಧಾನಹೊಂದಿದುದು. ೬೩೮

ತೃತೀಯಸ್ಕಂಧ ದೊಳಗಣ ಚಿತ್ರಪಟಗಳು.

ಕ್ಷೀರಸಮುದ್ರಶಾಯಿಯಾದ ಮಹಾವಿಷ್ಣುವನ್ನು ಬ್ರಹ್ಮನು ಸ್ತೋತ್ರಮಾಡಿದುದು. ೪೦೪

ವರಾಹಮೂರ್ತಿಯು ಭೂಮಿಯನ್ನು ಸಮುದ್ರದಿಂದ ಮೇಲಕ್ಕೆ ತಿ ದುದು. ೪೬೬

ಶ್ರೀವೈಕುಂಠವು. ೪೮೩

ಜಯವಿಜಯರೆಂಬ ದ್ವಾರಪಾಲಕರು ವೈಕುಂಠದ್ವಾರದಲ್ಲಿ ಸನ ಕಾದಿಮುನಿಕುಮಾರರನ್ನು ತಡೆದುದು. ೪೮೪

ವರಾಹಮೂರ್ತಿಯು ಹಿರಣ್ಯಾಕ್ಷನನ್ನು ಕೊಂದುದು. ೫೧೬



ಶ್ರೀಕೃಷ್ಣಾಯನಮಃ.

ಶ್ರೀಮದ್ಭಾಗವತವು

ತೃತೀಯಸ್ಕಂಧವು.

{ವಿದುರನು ಉದ್ಧವನನ್ನು ಕಂಡು ಕೃಷ್ಣವೃತ್ತಾಂತವನ್ನು ಕೇಳಿದುದು}

ತಿರುಗಿ ಶುಕಮುನಿಯು ಪರೀಕ್ಷಿದ್ರಾಜನನ್ನು ಕುರಿತು ಹೇಳುವನು. ‘‘ಎಲೈ ರಾಜೇಂದ್ರನೆ ಕೇಳು! ನಿನ್ನ ಮುತ್ತಾತಂದಿರಾದ ಪಾಂಡವರಿಗೆ ಮಂತ್ರಿಯಾಗಿಯೂ, ಲೋಕಾಧಿಪತಿಯಾದ ಯಮದೇವನ ಅಂಶದಿಂದ ಹುಟ್ಟಿದವನಾಗಿಯೂ ಇದ್ದ ವಿದುರನು, ತನ್ನ ಸಮಸ್ತಸೌಭಾಗ್ಯದಿಂದ ಕೂಡಿದ ಮನೆಯನ್ನು ಬಿಟ್ಟು,ವನವನ್ನು ಪ್ರವೇಶಿಸಿದಮೇಲೆ. ಒಂದಾನೊಂದು ಸ್ಥಳದಲ್ಲಿ ಮೈತ್ರೇಯಮಹರ್ಷಿಯನ್ನು ಸಂಧಿಸಿ, ಆ ಮಹಾತ್ಮನ ಪಾದಪದ್ಮಗಳಿಗೆ ನಮಸ್ಕರಿಸಿ, ನೀನು ಈಗ ನನ್ನನ್ನು ಪ್ರಶ್ನೆಮಾಡಿದ ವಿಷಯಗಳನ್ನೇ ಪ್ರಶ್ನೆಮಾಡಿರುವನು. ಆದಕ್ಕೆ ಮೈತ್ರೇಯಮಹರ್ಷಿಯು ಹೇಳಿದ ಪ್ರತ್ಯುತ್ತರವನ್ನೇ ಈಗ ನಿನಗೂ ನಾನು ತಿಳಿಸುವೆನು”ಎಂದನು. ಇಷ್ಟರಲ್ಲಿ ಪರೀಕ್ಷಿದ್ರಾಜನು ಶುಕನನ್ನು ಕುರಿತು ‘‘ಎಲೈ ಮಹಾತ್ಮನೆ ! ವಿದುರನು ಮೈತ್ರೇಯಮಹಾಮುನಿಯೆನ್ನು ಸಂಧಿಸಿದುದೆಲ್ಲೆ? ಅವರಿಬ್ಬರಿಗೂ ಸಂವಾದವು ನಡೆದ ಕಾಲವಾವುದು?ಯಾವಾಗಲೂ ಶ್ರೀಕೃಷ್ಣನಲ್ಲಿಯೇ ನಟ್ಟಮನಸ್ಸುಳ್ಳವಿದುರನು,ಮೈತ್ರೇಯನನ್ನು ಕೇಳಿದ ಪ್ರಶ್ನೆಗಳೆಲ್ಲವೂ ಭಗವಂತನ ಸಜ್ಜರಿತ್ರಗಳಿಂದ ಕೂಡಿರುವುದರಲ್ಲಿ ಸಂದೇಹವಿಲ್ಲ! ಆದರಲ್ಲಿರತಕ್ಕ ವಿಷಯಗಳೂ ಸರ್ವೋತ್ತಮವಾದ ಪುರುಷಾರ್ಥವನ್ನು ಕೈಗೂಡಿಸುವುವಲ್ಲದೆ, ಅಲ್ಪಪ್ರಯೋಜನಗಳಲ್ಲಿ ಪರ್ಯವಸಾನಹೊಂದತಕ್ಕುವಲ್ಲ. ಆದುದರಿಂದ ನಾನೂ ಆ ವಿಷಯ

ಗಳನ್ನು ಅತ್ಯವಶ್ಯವಾಗಿ ಕೇಳಿ ತಿಳಿಯಬೇಕೆಂದಿರುವೆನು. ನನ್ನಲ್ಲಿ ಅನುಗ್ರಹ ವಿಟ್ಟು ಅವೆಲ್ಲವನ್ನೂ ತಿಳಿಸಬೇಕು. ಆ ವಿದುರನೋ ಮಹಾತ್ಮನು! ಮೈತ್ರೇಯಮಹರ್ಷಿಯೊಕೂಡ ಪರಾವರತತ್ವಗಳನ್ನು ಯಥಾಸ್ಥಿತವಾಗಿ ತಿಳಿದವನು ಎಣೆಯಿಲ್ಲದ ಗುಣಾತಿಶಯದಿಂದ ಕೂಡಿದವನು. ಅವರಿಬ್ಬರ ಸಂವಾದಗಳೆಲ್ಲವೂ ಸಚ್ಚರಿತ್ರಗಳಿಂದಲೇ ತುಂಬಿರಬೇಕು. ಆದುದರಿಂದ ಆ ವಿಷಯಗಳನ್ನು ಕೃಪೆಯಿಟ್ಟು ತಿಳಿಸು" ಎಂದನು. ಪರೀಕ್ಷಿದ್ರಾಜನು ಕೇಳಿದ ಈ ಪ್ರಶ್ನೆಗಳಿಗಾಗಿ, ಶುಕಮುನಿಯು ಬಹಳ ಸಂತೋಷಗೊಂಡು, ಆವಿಷಯವನ್ನೆಲ್ಲ ವಿಸ್ತಾರವಾಗಿ ತಿಳಿಸತೊಡಗಿದನು. "ಎಲೈ ರಾಜೇಂದ್ರನೆ! ವಿದುರನು ಹಸ್ತಿನಾಪುರವನ್ನು ಬಿಟ್ಟು ವನಪ್ರವೇಶನಾಡುವುದಕ್ಕೆ ಕಾರಣವೇ ಸೆಂಬುದನ್ನು ಮೊದಲು ತಿಳಿಸುವೆನು ಕೇಳು! ಕೌರವರಾಜನಾದ ಧೃತರಾಷ್ಟ್ರನು, ಸ್ವಲ್ಪಮಾತ್ರವೂ ಧರ್ಮದಲ್ಲಿ ದೃಷ್ಟಿಯಿಲ್ಲದವನಾಗಿ, ದುಷ್ಟರಾದ ತನ್ನ ಮಕ್ಕಳನ್ನು ಶಿಕ್ಷಿಸಲಾರದೆ, ಅವರ ದಾರಿಯನ್ನೇ ಅನುಸರಿಸಿ ಹೋಗುತಿದ್ದನು. ಇತ್ತಲಾಗಿ ಪಾಂಡವರು ತಮ್ಮ ತಂದೆಯಾದ ಪಾಂಡು ಮಹಾರಾಜನ ಮರಣದಿಂದ ನೊಂದು,ಬೇರೆ ದಿಕ್ಕಿಲ್ಲದೆ ತನ್ನನ್ನೇ ಮರೆಹೊಕ್ಕು ಬಂದರೂ, ಧೃತರಾಷ್ಟ್ರನು ಅವರಲ್ಲಿ ಸ್ವಲ್ಪವಾದರೂ ಕನಿಕರವನ್ನು ತೋರಿಸದೆ ಹೋದನು. ಕ್ರೂರಸ್ವಭಾವವುಳ್ಳ ತನ್ನ ಮಗನಾದ ದುರ್ಯೋಧನನ ದುರ್ಬೋಧನೆಯಿಂದ,ಅವರಿಗೆ ತನ್ನಲ್ಲಿ ಆಶ್ರಯವನ್ನು ಕೊಡದಿದ್ದುದುಮಾತ್ರವಲ್ಲ ! ಆ ಪಂಚಪಾಂಡವರನ್ನು ಅರಗಿನ ಮನೆಯಲ್ಲಿ ಸೇರಿಸಿ ಸುಡುವುದಕ್ಕೂ ಅವಕಾಶವನ್ನು ಕೊಟ್ಟನು. ಇಷ್ಟುಮಾತ್ರವೇ ಅಲ್ಲದೆ, ದುರಾತ್ಮನಾದ ದುಶ್ಶಾಸನನೆಂಬ ತನ್ನ ಮಗನು, ಪರಮಪತಿವ್ರತೆಯಾದ ದ್ರೌಪದಿಯ ತಲೆತುರುಬನ್ನು ಹಿಡಿದು, ಸಭಾಮಧ್ಯಕ್ಕೆಳೆದುತಂದು, ಅವಳ ಉಟ್ಟ ಬಟ್ಟೆಯನ್ನೆಳೆಯುವುದಕ್ಕೆ ಹೋದಾಗಲೂ ಸುಮ್ಮನಿದ್ದನು. ಆ ವಿಧವಾದ ಮಾನಭಂಗವು ತನಗೆ ಸಂಭವಿಸಿದುದಕ್ಕಾಗಿ, ದ್ರೌಪದಿಯು ಆ ಸಭಾಮಧ್ಯದಲ್ಲಿ ಧಾರಧಾರೆಯಾಗಿ ಕಣ್ಣೀರನ್ನು ಬಿಟ್ಟು ಗೋಳಿಡುವುದನ್ನು ಕೇಳಿಯೂ, ಕುರುಡನಾದ ಆ ಧೃತರಾಷ್ಟ್ರನು, ತನ್ನ ಮಕ್ಕಳನ್ನು ಆ ಅಕೃತ್ಯದಿಂದ ತಡೆಯದೆ ಹೋದನು. ಆದರಿಂದಾಚೆಗೆ ಜೂಜಿನಲ್ಲಿ ಪರಾಜಿತನಾದ ಧರ್ಮರಾಜನು,ತನ್ನ ಸತ್ಯಕ್ಕೆ ಕಟ್ಟುಬಿದ್ದು,ತನ್ನ ಭಾರ್ಯೆಯಾದ ದ್ರೌಪದಿಯನ್ನೂ,

ಸಹೋದರರಾದ ಭೀಮಾದಿಗಳನ್ನೂ ಕರೆದುಕೊಂಡು, ಕಾಡಿನಲ್ಲಿ ಹನ್ನೆರಡು ವರುಷಗಳನ್ನು ಕಳೆದು,ಒಂದು ವರುಷದ ಅಜ್ಞಾತವಾಸವನ್ನೂ ತೀರಿಸಿ,ಹಿಂತಿರುಗಿ ಬಂದಮೇಲೆ, ತಿರುಗಿ ತಾನಾಗಿ ಧೃತರಾಷ್ಟ್ರನ ಕಾಲನ್ನು ಹಿಡಿದು ,,ಈಗಲಾದರೂ ನಮ್ಮ ತಂದೆಯ ರಾಜ್ಯಭಾಗವನ್ನು ನಮಗೆ ಕೊಡಿಸಬೇಕು" ಎಂದು ದೈನ್ಯದಿಂದ ಯಾಚಿಸಿದನು. ಬುದ್ಧಿಹೀನನಾದ ಧೃತರಾಷ್ಟ್ರನು,ಅದಕ್ಕೂ ಸಮ್ಮತಿಸದೆ ಹೋದನು- ಕೊನೆಗೆ ಪಾಂಡವರು ಬೇರೆ ದಾರಿಯಿಲ್ಲದೆ, ತಮಗೆ ಅಪತ್ಬಂಧುವಾದ ಶ್ರೀಕೃಷ್ಣನನ್ನು ದುರ್ಯ್ಯೋಧನನ ಸಭೆಗೆ ರಾಯಭಾರಿಯೆನ್ನಾಗಿ ಮಾಡಿ ಕಳುಹಿಸಿದರು. ಆಶ್ರಿತವತ್ಸಲನಾದ ಶ್ರೀಕೃಷ್ಣನು, ಪಾಂಡವರ ಮಾತನ್ನು ಮೀರಲಾರದೆ, ಹಸ್ತಿನಾಪುರಕ್ಕೆ ಬಂದು. ಸಭಾಮಧ್ಯದಲ್ಲಿ ದುರ್ಯ್ಯೋಧನನನ್ನು ಕುರಿತು, ಕಿವಿಗಿಂಪಾದ ನ್ಯಾಯ ಮಧುರವಾಕ್ಯಗಳಿಂದ ಎಷ್ಟೋವಿಧದಲ್ಲಿ ಹಿತವಾದುದನ್ನು ಹೇಳಿದನು. ಶ್ರೀಕೃಷ್ಣನ ಹಿತೋಕ್ತಿಗಳನ್ನು ಕೇಳಿ ಅಲ್ಲಿದ್ದ ಭೀಷ್ಮಾದಿಗಳೆಲ್ಲರೂ ಮಿಕಮಿಕಿ ನೋಡಿ ಸಂತೋಷಗೊಂಡು, ಮಾತುಮಾತಿಗೂ ಅದನ್ನನುಮೋದಿಸುತಿದ್ದರು. ದುಷ್ಟನಾದ ಧೃತರಾಷ್ಟ್ರನುಮಾತ್ರ ಸಂತೋಷಿಸಲಿಲ್ಲ. ಅವನು ಧೃತರಾಷ್ಟ್ರನು ಈ ವಿಷಯದಲ್ಲಿ ಮುಂದಾಲೋಚನೆಯನ್ನು ಮಾಡುವುದಕ್ಕಾಗಿ, ತನಗೆ ಮುಖ್ಯಮಂತ್ರಿಯಾಗಿಯೂ,ಹಿತೈಷಿಯಾಗಿಯೂ ಇದ್ದ ವಿದುರನನ್ನು ಕರೆಸಲು, ವಿದುರನು ಧೃತರಾಷ್ಟ್ರನ ಅರಮನೆಗೆ ಹೋದನು. ಆಗ ಧೃತರಾಷ್ಟ್ರನು, ವಿದುರನನ್ನು ಸತ್ಕರಿಸಿ ಕುಳ್ಳಿರಿಸಿಕೊಂಡು, ಅತನಿಗೆ ಹಿಂದೆ ನಡೆದ ಸಂಗತಿಗಳೆಲ್ಲವನ್ನೂ ತಿಳಿಸಿ, ಮುಂದಿನ ಕಾರ್ಯಾಲೋಚನೆಯೇನೆಂದು ಪ್ರಶ್ನೆಮಾಡಲು,ವಿದುರನು ಅಂಥನಾದ, ಆ ಧೃತರಾಷ್ಟ್ರನಿಗೆ ಹಿತೋಪದೇಶವನ್ನು ಮಾಡತೊಡಗಿದನು. ,,ಎಲೈ ಮಹಾರಾಜನೆ! ನೀನು ನಿನ್ನ ಸಿರುವುದನ್ನು ನೋಡಿ ನಿನ್ನ ಮಕ್ಕಳಾದ ದುರ್ಯ್ಯೋಧನಾದಿಗಳು, ಪಾಂಡವರವಿಷಯದಲ್ಲಿ ನಡೆಸಿದ ಅಪರಾಧಗಳನ್ನು ಅಷ್ಟಿಷ್ಟೆಂದು ಹೇಳಿ ತೀರದು! ಅವೆಲ್ಲವೂ ನಿನಗೆ ತಿಳಿಯದ ವಿಷಯಗಳಲ್ಲವಷ್ಟೆ? ನಿನ್ನ ಮಕ್ಕಳು ಮಾಡಿದ ಒಂದೊಂದುಕೃತ್ಯವೂ, ಪಾಂಡವರಿಗೆ ಪ್ರಾಣಾಪಾಯಕರವಾದುದೇಹೊರತು ಬೇರೆಯಲ್ಲ! ಇಷ್ಟಾದರೂ ಧರ್ಮರಾಜನು ಬಹಳ ಶಾಂತ

ಸ್ವಭಾವನಾದುದರಿಂದ, ಸ್ವಲ್ಪಮಾತ್ರವೂ ಕೋಪವನ್ನು ತೋರಿಸದೆ.ಅವೆ ಲ್ಲವನ್ನೂ ಸಹಿಸಿಕೊಂಡು, ನಿನ್ನಲ್ಲಿಗೆ ಬಂದು,ತನ್ನ ತಂದೆಯ ದಾಯಭಾಗವ ನ್ನು ಕೊಡಬೇಕೆಂದು ದೈನ್ಯದಿಂದ ಯಾಚಿಸಿದನು. ಆಗಲೂ ನಿನಗೆ ಕರುಣೆ ಹುಟ್ಟಬೇಡವೆ ? ಹೀಗೆ ಪಾಂಡವರಲ್ಲಿ ನೀನು ವಿರೋಧವನ್ನು ಬೆಳೆಸುವುದು ಸರ್ವಥಾಯುಕ್ತವಲ್ಲ! ಇನ್ನಾದರೂ ನೀನು ಅವರಿಗೆ ಸೇರಬೇ ಕಾದ ರಾಜ್ಯವನ್ನು ಹಂಚಿಕೊಡದಿದ್ದಪಕ್ಷದಲ್ಲಿ,ನಿನ್ನ ವಂಶವು ನಿರ್ಮೂಲವಾ ಗದಿರದು! ನಿನ್ನ ಮಕ್ಕಳ ಹೆಸರನ್ನು ಕೇಳಿದಮಾತ್ರದಲ್ಲಿಯೇ ಭೀಮಸೇನನು ಕಾಲಿಂದ ಮೆಟ್ಟಿದ ಕಾಳಸರ್ಪದಂತೆ ಅತ್ಯಾಕ್ರೋಶದಿಂದ ರೇಗಿಬೀಳುವನು. ಆ ಭೀಮನ ಕೈಯಿಂದ ನಿನ್ನ ಮಕ್ಕಳಿಗೆ ಸಾವು ಸಿದ್ಧವು! ರಾಜೇಂದ್ರಾ! ಈ ವಿಷಯವನ್ನು ನಾನು ಮೊದಲಿಂದಲೇ ನಿನಗೆ ಸಾರಿಸಾರಿ ಹೇಳುತ್ತಿರುವೆನು! ನಿನ್ನ ಮಕ್ಕಳು ಎಷ್ಟೇ ಬಲವಂತರಾಗಿದ್ದರೂ, ದೈವಬಲವಿಲ್ಲದಮೇಲೆ ಹುಲ್ಲಿ ಗಿಂತಲೂ ಕಡೆಯೆಂಬುದನ್ನು ನೀನು ತಿಳಿಯದವನಲ್ಲ. ಅಂತಹ ದೈವಬಲವು ಈಗ ನಿನಗಾಗಲಿ, ನಿನ್ನ ಮಕ್ಕಳಿಗಾಗಲಿ ಸ್ವಲ್ಪಮಾತ್ರವೂ ಇಲ್ಲ. ಪಾಂಡ ವರಿಗಾದರೋ ಆ ದೈವಬಲವು ಪೂರ್ಣವಾಗಿರುವುದು. ರಾಜೇಂದ್ರಾ! ಆ ಧರ್ಮರಾಜನು ಕೈಲಾಗದ ಅಶಕ್ತನಾದುದರಿಂದ ಹೀಗೆ ಸಾಧುತ್ವವನ್ನು ತೋರಿಸುವನೆಂದೆಣಿಸಬೇಡ! ಯುದ್ಧದಲ್ಲಿ ಯಾವ ಶತ್ರುಗಳಿಗೂ ಭಯ ಪಟ್ಟು ಓಡದೆ ಸ್ಥಿರವಾಗಿ ನಿಲ್ಲತಕ್ಕವನಾದುದರಿಂದಲ್ಲವೇ ಅವನಿಗೆ ಯುಧಿ ಷ್ಠಿರನೆಂದು ಹೆಸರು ! ಮತ್ತು ಅವನಿಗೆ ಬೆಂಬಲವಾಗಿರುವ ನಾಲ್ವರು ಸಹೋದರರಲ್ಲಿ ಭೀಮಸೇನನ ಪರಾಕ್ರಮವನ್ನು ಕಾಣೆಯಾ ? ಯಾವನು ನಿನ್ನ ಮಕ್ಕಳ ಹೆಸರನ್ನು ಕೇಳಿದಮಾತ್ರಕ್ಕೆ ಕೋಪದಿಂದ ಕಾಲಸರ್ಪ ದಂತೆ ಬುಸುಗುಟ್ಟುತ್ತಿರುವನೋ, ಅಂತಹ ಭೀಮಸೇನನು, ತನ್ನಣ್ಣನ ಮನೋನುವರ್ತಿಯಾಗಿ ಅವನಿಗೆ ಬೆಂಬಲವಾಗಿ ನಿಂತಿರುವನಲ್ಲವೆ ? ಇವೆ ಲ್ಲವೂ ನಿನಗೆ ತಿಳಿಯದ ವಿಷಯಗಳಲ್ಲವಷ್ಟೆ?ಇದೂ ಹಾಗಿರಲಿ! ಆ ಪಾಂಡವ ರಿಗೆ ದೈವಬಲವುಂಟೆಂಬುದನ್ನು ನಾನು ಹೇಗೆಬಲ್ಲೆನೆಂದು ಕೇಳುವೆಯಾ ? ಈ ವಿಷಯವು ಎಲ್ಲರಿಗೂ ಪ್ರತ್ಯಕ್ಷಸಿದ್ಧವು ! ಜ್ಞಾನ, ಶಕ್ತಿ, ಬಲಾದಿಗ ಳಾದ ಷಡ್ಗುಣಗಳಿಂದ ಪೂರ್ಣನಾಗಿಯೂ, ಭೋಗಮೋಕ್ಷಪ್ರದನಾಗಿ

ಯೂ ಇರುವ ಭಗವಂತನಾದ ಶ್ರೀಕೃಷ್ಣನೇ ''ಮಮ ಪ್ರಾಣಾಹಿ ಪಾಂಡವಾಃ'' ಎಂಬುದಾಗಿ, ತನಗೆ ಪಾಂಡವರೇ ಪ್ರಾಣಸಮಾನರೆಂದು ಪರಮ ಪ್ರೇಮದಿಂದ ನೋಡುತ್ತಿರುವನು.ಇಂತಹ ಪರಮದೈವವೇ ಪಾಂಡವರನ್ನು ಕೈಹಿಡಿದಿರುವಾಗ,ಅವರಿಗೆ ದೈವಬಲವುಂಟೆಂಬುದಕ್ಕೆ ಬೇರೆ ಪ್ರಮಾಣವೇಕೆ? ರಾಜೇಂದ್ರಾ! ಆ ಕೃಷ್ಣನನ್ನು ಯಾರೆಂದು ಬಲ್ಲೆ? ಬ್ರಾಹ್ಮಣರೆಲ್ಲರೂ ಆತನನ್ನೇ ತಮಗೆ ಪರದೈವವೆಂದು ಭಾವಿಸಿ ಪೂಜಿಸುತ್ತಿರುವರು. ಅವರೆಲ್ಲರಿಗೂ ಆತನೇ ಸರ್ವಶ್ರೇಯಸ್ಸನ್ನೂ ಉಂಟುಮಾಡತಕ್ಕವನು. ಅಂತಹ ಶ್ರೀಕೃಷ್ಣನು, ಎಲ್ಲಿ ತನ್ನ ವಾತ್ಸಲ್ಯವನ್ನು ತೋರಿಸುತ್ತಿರವನೋ, ಅಲ್ಲಿ ಜಯವೆಂಬುದು ಸಿದ್ಧವು. ''ಎಲ್ಲಿಯೋ ಬಹುದೂರದಲ್ಲಿ ಏಕಾಕಿಯಾಗಿರುವ ಆ ಭಗವಂತನು ಇಲ್ಲಿ ನಮ್ಮನ್ನೇನು ಮಾಡಬಲ್ಲನು? ಎಂದೆಣಿಸಬೇಡ! ಅವನು ತನ್ನ ಪಟ್ಟಣದಲ್ಲಿಯೇ ಇರುವನು. ಸಾತ್ಯಕಿ, ಪ್ರದ್ಯುಮ್ನ, ಅನಿರುದ್ಧರೇ ಮೊದಲಾದ ಅನೇಕಯಾದವಶ್ರೇಷ್ಠರು ಅವನ ಆಜ್ಞಾಧೀನರಾಗಿ ನಡೆಯುತ್ತಿರುವರು. ಮತ್ತು ಆ ಶ್ರೀಕೃಷ್ಣನು ಮದಾಂಧರಾದ ಕ್ಷತ್ರಿಯರನ್ನು ನಿಗ್ರಹಿಸಿ, ಅವರ ರಾಜ್ಯವನ್ನು ಕೈಕೊಂಡು, ಧರ್ಮಶೀಲರಾದ ರಾಜರ ಕೈಗೆ ಒಪ್ಪಿಸಿರುವನು. ಅಂತಹ ರಾಜರೆಲ್ಲರೂ ಅವನಿಗೆ ದಾಸಾನುದಾಸರಾಗಿ ನಡೆಯುತ್ತಿರುವರು. ಇಂತಹ ಶ್ರೀಕೃಷ್ಣ ಪರಮಾತ್ಮನೇ ಪಾಂಡವರಿಗೆ ಬೆಂಬಲವಾಗಿರುವಾಗ, ಅವರನ್ನು ಜಯಿಸುವುದು ಮತ್ತೊಬ್ಬರಿಗೆ ಸಾಧ್ಯವೆ? ಎಲೈ ರಾಜೇಂದ್ರನೆ! ಆ ಪಾಂಡವರ ವಿಷಯವ್ಯಹಾಗಿರಲಿ!ನಿನ್ನ ಮಕ್ಕಳ ಶೀಲಸ್ವಭಾವಗಳನ್ನೂ ತಿಳಿಸುವೆನುಕೇಳು! ನೀನು ಯಾವನನ್ನು ನಿನ್ನ ಮೋಹದ ಮಗನೆಂದೂ, ಜ್ಯೇಷ್ಠಪುತ್ರನೆಂದೂ, ಪ್ರೇಮದಿಂದ ಪೋಷಿಸುತ್ತ ಬಂದೆಯೋ, ಆ ದುರ್ಯೋಧನನೆಂಬವನು ಸಕಲವಿಧವಾದ ದೋಷಗಳಿಗೂ ನಿವಾಸಸ್ಥಾನನಾಗಿರುವನು. ನಿನ್ನ ಜನ್ಮಾಂತರದ ಪಾಪರಾಶಿಯೇ ಈ ಆಕೃತಿಯನ್ನು ಹೊಂದಿ, ನಿನ್ನ ಕುಲವನ್ನು ನಿರ್ಮೂಲಮಾಡುವುದಕ್ಕಾಗಿ ನಿನ್ನ ಮನೆಯಲ್ಲಿ ಹೊಕ್ಕಿರುವುದೇಹೊರತು ಬೇರೆಯಲ್ಲ. ರಾಜೇಂದ್ರಾ! ನಾನು ಹೇಳುವ ಮಾತನ್ನು ಅನನ್ಯವೆಂದೆಣಿಸಬೇಡ!ನಿನ್ನ ಮಗನಲ್ಲಿ ಅಂತಹ ದೋಷವೇನೆಂದು ಕೇಳುವೆಯಾ? ಮೊದಲು,

ಭಗವಂತನನ್ನು ದ್ವೇಷಿಸುತ್ತಿರುವುದೇ ಅವನ ಮುಖ್ಯಸ್ವಭಾವವಾಗಿರುವುದು. ಅವನು ಆ ಶ್ರೀಕೃಷ್ಣನ ವಿಷಯದಲ್ಲಿ ಕೇವಲವಿಮುಖನಾಗಿರುವನು. ಈ ಕಾರಣದಿಂದಲೇ ಅವನ ಸಕಲೈಶ್ವರ್ಯವೂ ಕೈಬಿಟ್ಟು ಹೋಗುವುದಕ್ಕೆ ಕಾಲವು ಸವಿೂಪಿಸಿರುವುದು. ಎಲೈ ರಾಜನೆ ! ಈಗಲೂ ನೀನು ನಿನ್ನ ಕುಲವನ್ನು ರಕ್ಷಿಸಿಕೊಳ್ಳಬೇಕೆಂಬ ಆಸೆಯುಳ್ಳವನಾಗಿದ್ದರೆ,ಮುಂದೆಯೂ ನಿನ್ನಕುಲಕ್ಕೆ ಕ್ಷೇಮವನ್ನು ಕೋರುವವನಾಗಿದ್ದರೆ, ನಿನ್ನಮಗನಾದ ದುರ್ಯೋಧನನನ್ನು ಈ ಕ್ಷಣವೇ ತೊರೆದುಬಿಡು!ವಂಶದ ಕ್ಷೇಮಕ್ಕಾಗಿ ಮಗನನ್ನು ತೊರೆದರೂ ಅದರಿಂದ ದೋಷವಿರದು. ಈ ವಿಷಯದಲ್ಲಿಮಾತ್ರ ನೀನು ಕಾಲನಿರೀಕ್ಷಣೆಯನ್ನೂ ಮಾಡಬೇಡ ! ಮೊದಲು ಈ ಕಾರ್ಯವನ್ನು ಮಾಡಿ, ನಿನ್ನ ವಂಶವನ್ನುಳಿಸಿಕೊಳ್ಳುವುದಕ್ಕೆ ದಾರಿಯನ್ನು ನೋಡು ! ಈ ಕ್ಷಣವೇ ಈದುರ್ಯೋಧನನನ್ನು ಮನೆಯಿಂದ ಹೊರಡಿಸಿಬಿಡು" ಎಂದನು. ಹೀಗೆ ವಿದುರನು ಧೃತರಾಷ್ಟ್ರನಿಗೆ ಹಿತವನ್ನು ಹೇಳುತಿದ್ದಾಗ, ದುರ್ಯೋಧನನೂ ಅದನ್ನು ಆಮೂಲಾಗ್ರವಾಗಿ ಕೇಳುತಿದ್ದನು. ದುರ್ಯೋಧನನಿಗೆ ಮೇಲೆಮೇಲೆ ಕೋಪವು ಉಕ್ಕಿಬರುತಿತ್ತು ! ಕೋಪದಿಂದ ಅವನ ತುಟಿಗಳು ನಡುಗುತಿದ್ದುವು. ಪರಮಸಾಧುವಾಗಿಯೂ,ಸಮಸ್ತಜನರಿಂದಲೂ ಆದರಿಸಲ್ಪಟ್ಟ ಗುಣವುಳ್ಳವನಾಗಿಯೂ ಇರುವ ವಿದುರನನ್ನು ಅವನು,ಕರ್ಣ, ದುಶ್ಶಾಸನ, ಶಕುನಿಗಳೊಡಗೂಡಿ, ಕ್ರೂರವಾಕ್ಯಗಳಿಂದ ತಿರಸ್ಕರಿಸುವುದಕ್ಕೆ ತೊಡಗಿದನು. ''ಎಲೈ ಪರೀಕ್ಷಿದ್ರಾಜನೆ! ಮಹಾತ್ಮನಾದ ವಿದುರನ ವಿಷಯದಲ್ಲಿ ದುರ್ಯೋಧನನು ನುಡಿದ ಅವಾಚ್ಯವಾಕ್ಯಗಳನ್ನೂ ತಿಳಿಸುವೆನು ಕೇಳು. ನೀಚಬುದ್ಧಿಯುಳ್ಳ ಆ ದುರ್ಯೋಧನನು ಸವಿೂಪದಲ್ಲಿದ್ದ ವಿದುರನನ್ನು ನೋಡಿ, ''ಛೀ ! ಕುಟಿಲಬುದ್ಧಿಯುಳ್ಳ ಈ ದಾಸೀಪುತ್ರನನ್ನು ಇಲ್ಲಿಗೆ ಕರೆದವರಾರು ? ನಮ್ಮ ಮನೆಯ ಕೂಳನ್ನು ತಿಂದು ಕೊಬ್ಬಿದ ಈ ನೀಚನು, ನಮ್ಮಲ್ಲಿಯೇ ವಿರೋಧವನ್ನು ತೋರಿಸುತ್ತ, ಶತ್ರುಗಳಿಗೆ ಕ್ಷೇಮವನ್ನು ಕೋರುತ್ತಿರುವನು.ಉಂಡ ಮನೆಗೆ ಎರಡನ್ನು ಬಗೆಯುವ ಈ ಶೂದ್ರಜಾತಿಯವನನ್ನೇ ಮೊದಲು ನಮ್ಮ ಮನೆಯಿಂದ ಹೊರಕ್ಕೆ ಕಳುಹಿಸಿರಿ! ಶ್ಮಶಾನವನ್ನು ಹೇಗೋಹಾಗೆ ಈತನನ್ನು ಕಣ್ಣೆತ್ತಿನೋಡುವುದೂ ಯೋಗ್ಯವಲ್ಲ ! ನಮ್ಮ ಕೈಕೂಳನ್ನುತಿಂದು ನಮ್ಮ

ನ್ನೇ ನಿಂದಿಸುತ್ತಿರುವ ಈ ಕೃತಘ್ನನು, ಈಗ ನಮಗೆ ಥರ್ಮೋಪದೇಶವನ್ನೂ ಮಾಡುವುದಕ್ಕೆ ಬಂದನೆ? ಇನ್ನು ಈ ಪಾಪಿಷ್ಠನನ್ನು ಮನೆಯಲ್ಲಿರಿಸ ಬಾರದು" ಎಂದನು. ಹೀಗೆ ದುರ್ಯೋಧನನು, ಕೇಳುವವರ ಕಿವಿಗೆ ಶೂಲವನ್ನು ನಾಟಿದಂತೆ ಕ್ರೂರವಾಕ್ಯಗಳನ್ನು ನುಡಿಯುತ್ತಿರಲು, ವಿದುರನು ಮರ್ಮಭೇದಕಗಳಾದ ಆ ಮಾತುಗಳಿಂದ ಮನಸ್ಸಿನಲ್ಲಿ ಬಹಳವಾಗಿ ನೊಂದಿದ್ದರೂ,ಬಹಳ ತಾಳ್ಮೆಯುಳ್ಳವನಾದುದರಿಂದ,ಸ್ವಲ್ಪಮಾತ್ರವೂ ಕೋಪವನ್ನು ತೋರಿಸದೆ, ಮುಖದಲ್ಲಿ ಮುಗುಳ್ನಗೆಯನ್ನೇ ತೋರಿಸುತ್ತ, ತನ್ನಲ್ಲಿ ತಾನು,"ಆಹಾ! ಭಗವಂತನ ಮಾಯೆಯ ಪ್ರಭಾವವೇ ಪ್ರಭಾವವು!" ಎಂದು ಶ್ರೀಕೃಷ್ಣನ ಮಾಯೆಯನ್ನು ಕೊಂಡಾಡುತ್ತ, ಅದೇಮುಖವಾಗಿ ಆ ಮನೆಯನ್ನು ಬಿಟ್ಟು ಹೊರಟು, "ಇನ್ನು ಇಲ್ಲಿರುವುದು ನಮಗೆ ಯುಕ್ತವಲ್ಲ! ಈ ಧನುಸ್ಸಿನಿಂದಲೂ ನಮಗೆ ಆಗಬೇಕಾದ ಪ್ರಯೋಜನವಿಲ್ಲ! ಪುಣ್ಯತೀರ್ಥಯಾತ್ರೆಗಾಗಿ ಹೊರಡುವೆನು" ಎಂದು ಮನಸ್ಸಿನಲ್ಲಿ ನಿಶ್ಚಯಿಸಿ, ತಾನು ಕೈಯಲ್ಲಿ ಹಿಡಿದಿದ್ದ ಧನುಸ್ಸನ್ನು ಆ ಮನೆಯ ಬಾಗಿಲಲ್ಲಿಯೇ ಇರಿಸಿ, ಕೌರವರ ಗುಂಪಿನಲ್ಲಿ ನಿಲ್ಲಲಾರದೆ ಹೊರಟುಬಿಟ್ಟನು. ಹೀಗೆ ವಿದುರನು ಹಸ್ತಿನಾವತಿಯನ್ನು ಬಿಟ್ಟು ಹೊರಟಕೂಡಲೆ, ಕೌರವರ ಭಾಗ್ಯವೇ ಆ ಪಟ್ಟಣವನ್ನು ಬಿಟ್ಟುಹೊರಟಂತಾಯಿತು. ಕೌರವರಿಗೆ ಪೂರ್ವಾರ್ಜಿತಪುಣ್ಯಲಭ್ಯವಾಗಿದ್ದ ವಿದುರನ ಸಹವಾಸವೂ ಕೈಬಿಟ್ಟುಹೋಯಿತು!ಹೀಗೆವಿದುರನು ಪಟ್ಟಣವನ್ನು ಬಿಟ್ಟು! ಹೊರಟಕೂಡಲೆ.ಅಲ್ಲಲ್ಲಿ ಪುಣ್ಯಕ್ಷೇತ್ರಗಳನ್ನೂ, ಪುಣ್ಯತೀರ್ಥಗಳನ್ನೂ ಸುತ್ತುವುದಕ್ಕೆ ತೊಡಗಿದನು. ಗಂಗಾಜನಕನಾದ ಶ್ರೀಭಗವಂತನು, ಬಗೆಬಗೆಯ ಅರ್ಚಾವತಾರ ದಿವ್ಯಮಂಗಳವಿಗ್ರಹಗಳನ್ನು ಕೈಕೊಂಡು ಯಾವಯಾವ ಸ್ಥಾನಗಳನ್ನು ತನ್ನ ಸಾನ್ನಿಧ್ಯದಿಂದ ಪವಿತ್ರಗಳನ್ನಾಗಿ ಮಾಡಿದ್ದನೋ, ಶ್ರೀರಂಗ, ವೆಂಕಟಾಚಲ, ಹಸ್ತಿಗಿರಿ, ಯಾದವಗಿರಿ, ಮೊದಲಾದ ಅಂತಹ ದಿವ್ಯಕ್ಷೇತ್ರಗಳೆಲ್ಲವನ್ನೂ ಕ್ರಮವಾಗಿ ಸೇವಿಸುತ್ತ ಬಂದನು. ಭಗವಂತನಲ್ಲಿ ನಿಶ್ಚಲವಾದ ಭಕ್ತಿಯುಳ್ಳ ಆ ವಿದುರನು ಅಲ್ಲಲ್ಲಿ ಪರಿಶುದ್ಧವಾದ ಉದ್ಯಾನಗಳಿಂದಲೂ, ಪರ್ವತಗಳಿಂದಲೂ, ಪೊದೆಗಳಿಂದಲೂ, ನಿರ್ಮಲಜಲದಿಂದಲೂ, ಅಂದವಾದ ಪಟ್ಟಣಗಳಿಂದಲೂ,

ಪುಣ್ಯನದಿಗಳಿಂದಲೂ, ಪುಣ್ಯಸರಸ್ಸುಗಳಿಂದಲೂ, ಅರ್ಚಾರೂಪವಾದ ವಿಷ್ಣುಮೂರ್ತಿಗಳಿಂದಲೂ, ಶೋಭಿತಗಳಾದ ದಿವ್ಯಸ್ಥಳಗಳೆಲ್ಲವನ್ನೂ ಏಕಾಕಿಯಾಗಿ ಸುತ್ತತ್ತ ಬಂದನು. ಹೀಗೆ ವಿದುರನು ಭೂಸಂಚಾರಮಾಡುವಾಗ ವರ್ಣಾಶ್ರಮನಿಮಿತ್ತ ದೋಷಗಳೊಂದೂ ಇಲ್ಲದ ಶುದ್ಧಾನ್ನವನ್ನೇಭುಜಿಸುವನು!ಯಾವಾಗಲೂ ಸ್ನಾನಾದಿಕಾರ್ಯಗಳನ್ನು ಯಥಾವಿಧಿಯಾಗಿ ನಡೆಸುವನು!ಬರೀನೆಲದಮೇಲೆ ಮಲಗುವನು! ಅಭ್ಯಂಗನವೇ ಮೊದಲಾದ ದೇಹಸಂಸ್ಕಾರಗಳೆಲ್ಲವನ್ನು ಬಿಟ್ಟನು.ತನ್ನ ದೇಹಸಂಬಂಧವುಳ್ಳವರೊಬ್ಬರಿಗೂ ಕಣ್ಣಿಗೆ ಬೀಳದಂತೆ, ಅವಧೂತಾಶ್ರಮದಲ್ಲಿರುವವರು ಧರಿಸತಕ್ಕ ಜಡೆ, ನಾರುಮಡಿ, ಮುಂತಾದ ವೇಷಗಳನ್ನು ಧರಿಸಿ,ಶ್ರೀಮಹಾವಿಷ್ಣು ಪ್ರೀತ್ಯರ್ಥವಾದ ವ್ರತಗಳೆಲ್ಲವನ್ನೂ ತಪ್ಪದೆ ನಡೆಸುತ್ತಿದ್ದನು.ಹೀಗೆ ಭಾರತವರ್ಷವೆಲ್ಲವನ್ನೂ ಪ್ರದಕ್ಷಿಣಮಾಡಿ ಸುತ್ತಿಬಂದನು. ಕೊನೆಗೆ ಆ ವಿದುರನು ಪ್ರಭಾಸತೀರ್ಥಕ್ಕೆ ಬಂದು ಮುಟ್ಟುವಷ್ಟರಲ್ಲಿ, ಇತ್ತಲಾಗಿ ಧರ್ಮರಾಜನು ಶ್ರೀಕೃಷ್ಣಾರ್ಜುನರ ಸಹಾಯದಿಂದ ತನ್ನ ಶತ್ರುಗಳಾದ ಕೌರವರೆಲ್ಲರನ್ನೂ ಕೊಂದು, ಸಮಸ್ತ ಭೂಮಂಡಲವನ್ನೂ, ತನ್ನ ಏಕಛತ್ರಾಧಿಪತ್ಯಕ್ಕೆ ಈಡುಮಾಡಿಕೊಂಡು, ರಾಜ್ಯವನ್ನಾಳುತಿದ್ದನು. ಯುಧಿಷ್ಠಿರನು ಹೀಗೆ ಸಾರ್ವಭೌಮಪದವಿಯಿಂದ ಅತ್ಯಂತವೈಭವದೊಡನೆ ತಾನೇತಾನಾಗಿ ರಾಜ್ಯವನ್ನಾಳುತ್ತ, ಅಜಾತಶತ್ರುವೆಂಬ ಖ್ಯಾತಿಯನ್ನು ಪಡೆದನು. ಇಷ್ಟರಲ್ಲಿ ಇತ್ತಲಾಗಿ ವಿದುರನು ಪ್ರಭಾಸತೀರ್ಥಕ್ಕೆ ಬಂದು, ಆ ತೀರ್ಥದ ತೀರದಲ್ಲಿ ಸಂಚರಿಸುತಿದ್ದಾಗ, ಬಿಡಿರುಮೆಳೆಯೆಲ್ಲಿರುವ ಬಿದಿರುಗಳು. ಒಂದಕ್ಕೊಂದು ತೇಯುವುದರಿಂದುಂಟಾಗುವ ಬೆಂಕಿಯಿಂದ, ಮೊತ್ತಕ್ಕೆ ತದಾಶ್ರಯವಾದ ವನವೆಲ್ಲವೂ ದಗ್ಧವಾಗುವಂತೆ, ತನ್ನ ಬಂಧುಗಳಾದ ಕೌರವರೆಲ್ಲರೂ ಪರಸ್ಪರದ್ವೇಷದಿಂದ ಹೊಡೆದಾಡಿ ಸತ್ತರೆಂಬ ಸುದ್ದಿಯು ಆತನ ಕಿವಿಗೆ ಬಿದ್ದಿತು. ಈ ಬಂಧುಮರಣವನ್ನು ಕೇಳಿ ವಿದುರನು ಮನಸ್ಸಿನಲ್ಲಿ ಅನುತಾಪಗೊಂಡವನಾಗಿ, ಬೇರೆ ಮಾತಾಡದೆ, ಪಶ್ಚಿಮಾಭಿಮುಖವಾಗಿ ಹೊರಟು, ಸರಸ್ವತೀನದಿಯ ತೀರಕ್ಕೆ ಬಂದು ಸೇರಿದನು. ಅಲ್ಲಿ ತ್ರಿತತೀರ್ಥವೆಂದೂ, ಉಶನಸ್ತೀರ್ಥವೆಂದೂ, ಮನುತೀರ್ಥವೆಂದೂ, ಪೃಥುತೀ

ರ್ಥನೆಂದೂ, ಅಗ್ನಿ, ಅಸಿತ, ವಾಯು, ಸುದಾಸ, ಗೋತೀರ್ಥ, ಗುಹ ತೀರ್ಥ, ಯಮತೀರ್ಥಗಳೆಂದೂ ಪ್ರಸಿದ್ಧಗಳಾದ ತೀರ್ಥಗಳೆಲ್ಲವನ್ನೂ, ಸುತ್ತಿ,ಅಲ್ಲಲ್ಲಿ ಸ್ನಾನಮಾಡುತ್ತ ಬಂದನು. ಮತ್ತು ಆಯಾತೀರ್ಥಗಳಲ್ಲಿ ಅನೇಕಮಹರ್ಷಿಗಳಿಂದಲೂ, ದೇವತೆಗಳಿಂದಲೂ ಪ್ರತಿಷ್ಠಿತಗಳಾಗಿ, ದರ್ಶನ ಮಾತ್ರದಿಂದಲೇ ಶ್ರೀಕೃಷ್ಣನ ಸ್ಮರಣೆಯನ್ನು ಹುಟ್ಟಿಸತಕ್ಕವುಗಳಾಗಿ, ಶ್ರೀ ಮಹಾವಿಷ್ಣುವಿನ ಆಯುಧಗಳಾದ ಶಂಖಚಕ್ರಾದಿಚಿಹ್ನೆಗಳಿಂದಲಂ ಕೃತಗಳಾಗಿಯೂ ಇದ್ದ ಅನೇಕದೇವಾಲಯಗಳನ್ನೂ, ಅಲ್ಲಲ್ಲಿನ ವಿಷ್ಣು ಮೂರ್ತಿಗಳನ್ನೂ ದರ್ಶನಮಾಡುತ್ತ ಬಂದನು. ಹೀಗೆ ಪುಣ್ಯತೀರ್ಥಗಳನ್ನೂ, ಪುಣ್ಯಕ್ಷೇತ್ರಗಳನ್ನೂ, ದೇವಾಲಯಗಳನ್ನೂ ಕ್ರಮವಾಗಿ ಸೇವಿಸುತ್ತ, ಸರಸ್ವತೀನದಿಯಿಂದಾಚೆಗೆ ಭಾಗ್ಯಸಮೃದ್ಧಗಳಾದ ಸೌರಾಷ್ಟ್ರ, ಸೌವೀರದೇಶಗಳೆರಡನ್ನೂ ದಾಟಿ, ಮತ್ಸ್ಯಕುರುಜಾಂಗಲದೇಶಗಳನ್ನೂ, ಅತಿಕ್ರಮಿಸಿ, ಯಮುನಾತೀರಕ್ಕೆ ಬಂದು ಮುಟ್ಟಿದನು. ವಿದುರನು ಯಮುನಾತೀರಕ್ಕೆ ಬಂದು ಸೇರಿದ ಸಮಯಕ್ಕೆ ಸರಿಯಾಗಿ, ಯದುಕುಲಕ್ಕೆ ಮಂತ್ರಿಯಾಗಿಯೂ, ಭಾಗವತೋತ್ತಮನಾಗಿಯೂ, ಶಾಂತಸ್ವಭಾವನಾಗಿಯೂ, ಬೃಹಸ್ಪತಿಯಿಂದಲೇ ಸಾಕ್ಷಾತ್ತಾಗಿ ನೀತಿಶಾಸ್ತ್ರಗಳನ್ನೋದಿ ತಿಳಿದವನಾಗಿಯೂ ಇದ್ದ ಪ್ರಖ್ಯಾತನಾದ ಉದ್ಧವನೂ, ದೈವಿಕವಾಗಿ ಅಲ್ಲಿಗೆ ಬಂದು ಸೇರಿದನು. ವಿದುರನು ಅವನನ್ನು ಕಂಡೊಡನೆ ಅತ್ಯಂತಸಂತೋಷಭರಿತನಾಗಿ, ಪರಮಪ್ರೇಮದಿಂದ ಮುಂದೆ ಹೋಗಿ, ಗಾಢಾಲಿಂಗನಮಾಡಿಕೊಂಡು, ತನಗೆ ಪ್ರಿಯಬಂಧುವಾದ ಶ್ರೀ ಕೃಷ್ಣನ ಮಕ್ಕಳು, ಮೊಮ್ಮಕ್ಕಳು ಮುಂತಾಗಿ ಆಯಾ ಕುಟುಂಬದ ಕ್ಷೇಮಲಾಭವೆಲ್ಲವನ್ನೂ ವಿಚಾರಿಸುತ್ತ ''ಎಲೈ ಮಂತ್ರಿಶ್ರೇಷ್ಠನೆ! ತನ್ನ ನಾಭಿಕಮಲದಲ್ಲಿ ಹುಟ್ಟಿದ ಚತುರ್ಮುಖ ಬ್ರಹ್ಮನ ಪ್ರಾರ್ಥನೆಯಮೇಲೆ, ಈ ಭೂಲೋಕದಲ್ಲಿ ಲೀಲಾಮಾನುಷವಿಗ್ರಹದಿಂದವತರಿಸಿ, ಸಮಸ್ತಜಗತ್ತಿಗೂ ಕ್ಷೇಮವನ್ನುಂಟುಮಾಡುತ್ತಿರುವ ಪುರಾಣ ಪುರುಷರಾದ ರಾಮಕೃಷ್ಣರಿಬ್ಬರೂ ವಸುದೇವಗೃಹದಲ್ಲಿ ಸುಖದಿಂದಿರುವರಷ್ಟೆ? ಕುರುವಂಶದಲ್ಲಿ ಹುಟ್ಟಿದ ನಮ್ಮೆಲ್ಲರಿಗೂ ಪ್ರಾಣಮಿತ್ರನಾಗಿಯೂ, ನಮಗೆ ಭಾವನಾಗಿಯೂ, ಪೂಜ್ಯನಾಗಿಯೂ ಇರುವ ವಸುದೇವನಿಗೆ ಕ್ಷೇ

ಮವಷ್ಟೆ? ಆ ವಸುದೇವನು ತನ್ನ ತಂಗಿಯರಿಗೂ, ಅವರನ್ನು ಕೈಹಿಡಿದ ಪತಿಗಳಿಗೂ ಬೇಕುಬೇಕಾದ ಪ್ರಿಯವಸ್ತುಗಳನ್ನು ಕೊಟ್ಟು ತೃಪ್ತಿಪಡಿಸಿ, ಹೆತ್ತ ತಂದೆಗಿಂತಲೂ ಹೆಚ್ಚಾಗಿ ಅವರನ್ನು ಪ್ರೇಮದಿಂದ ಪೋಷಿಸಿದವನು. ಇಂತಹ ಮಹೌದಾರ್ಯದಿಂದ ಪ್ರಖ್ಯಾತನಾದ ವಸುದೇವನು ಕುಶಲಿಯೆಷ್ಟೆ? ರುಕ್ಮಿಣಿಯು ಅನೇಕವಿಧದಿಂದ ಬ್ರಾಹ್ಮಣರನ್ನಾರಾಧಿಸಿ, ಅವರ ಆತೀರ್ವಾದ ಬಲದಿಂದ ಪ್ರದ್ಯುಮ್ನನೆಂಬ ಯಾವ ಪುತ್ರನನ್ನು ಪಡೆದಿರುವಳೋ, ಆ ಪ್ರದ್ಯುಮ್ನನೇ ಪೂರ್ವಜನ್ಮದಲ್ಲಿ ಮನ್ಮಥನಾಗಿದ್ದವನು. ಕೃಷ್ಣಪುತ್ರನಾಗಿಯೂ ಯಾದವಸೇನಾಪತಿಯಾಗಿಯೂ ಇರುವ ಆ ಪ್ರದ್ಯುಮ್ನನಿಗೆ ಕ್ಷೇಮವಷ್ಟೆ? ಪುಂಡರೀಕಾಕ್ಷನಾದ ಶ್ರೀಕೃಷ್ಣನು ಕಂಸನನ್ನು ಕೊಂದಮೇಲೆ, ಆತನ ಸಿಂಹಾಸನದಲ್ಲಿ ತಾನೇ ಕುಳ್ಳಿರಬೇಕಾಗಿದ್ದರೂ, ಆದರಲ್ಲಿ ಸ್ವಲ್ಪಮಾತ್ರವೂ ಆಸೆಯಿಟ್ಟಿಡದೆ, ಉಗ್ರಸೇನನಿಗೆ ರಾಜ್ಯವನ್ನು ಕೊಟ್ಟು ರಾಜ್ಯಾಭಿಷೇಕವನ್ನೂ ಮಾಡಿದನಲ್ಲವೆ? ಹೀಗೆ ಕೃಷ್ಣನ ಪರಮಪ್ರೀತಿಗೆ ಪಾತ್ರನಾಗಿ, ಯಾದವರು, ವೃಷ್ಣಿಗಳು, ಭೋಜರು, ದಾಶಾರ್ಹರು, ಇವರೆಲ್ಲರಿಗೂ ಮುಖ್ಯಾಧಿಪತಿಯಾಗಿ, ಅವರನ್ನು ಅವರವರ ಧರ್ಮಗಳಲ್ಲಿ ಪ್ರವರ್ತಿಸುವಂತೆ ನಿಯಮಿಸುತ್ತಿರುವ ಮಹಾತ್ಮನಾದ ಆ ಉಗ್ರಸೇನನಿಗೆ ಕ್ಷೇಮವಷ್ಟೆ? ಜಾಂಬವತೀದೇವಿಯು ಅನೇಕವ್ರತಗಳನ್ನಾಚರಿಸಿ, ಪೂರ್ವದಲ್ಲಿ ಪಾರ್ವತೀಪುತ್ರನಾದ ಕುಮಾರಸ್ವಾಮಿಯನ್ನೇ ತನ್ನ ಗರ್ಭದಲ್ಲಿ ಧರಿಸಿ, ಸಾಂಬನೆಂಬ ಪುತ್ರನನ್ನು ಪಡೆದಳು. ಹೀಗೆ ಷಣ್ಮುಖನ ಅಂಶಾವತಾರವಾಗಿಯೂ, ರಥಿಕಾಗ್ರಣಿಯಾಗಿಯೂ, ಶ್ರೀಕೃಷ್ಣನಿಗೆ ಸಮಾನಗುಣವುಳ್ಳ ಸತ್ಪುತ್ರನಾಗಿಯೂ ಇರುವ ಸಾಂಬನಿಗೆ ಕ್ಷೇಮವಷ್ಟೆ? ಶ್ರೀಕೃಷ್ಣನಿಗೆ ಪ್ರಿಯಸಹೋದರನಾಗಿ, ಯಾವಾಗಲೂ ಶ್ರೀಕೃಷ್ಣನ ಶುಶ್ರೂಷೆಯಲ್ಲಿಯೇ ನಿರತನಾಗಿರುವ ಸಾತ್ಯಕಿಗೆ ಕ್ಷೇಮವಷ್ಟೆ? ಅತನು ಅರ್ಜುನನಿಂದ ಧನುರ್ವಿದ್ಯಾರಹಸ್ಯಗಳೆಲ್ಲವನ್ನೂ ತಿಳಿದವನು. ಮತ್ತು ಸರ್ವಕಾಲಗಳಲ್ಲಿಯೂ ಭಗವಂತನಾದ ಶ್ರೀಕೃಷ್ಣನ ಸೇವೆಯಲ್ಲಿಯೇ ನಿರತನಾಗಿ, ಅವನ ಶುಶ್ರೂಷೆಯನ್ನು ಮಾಡುತ್ತ, ಅವನ ಪೂರ್ಣದಯೆಗೆ ಪಾತ್ರನಾಗಿರುವನು. ಇದರಿಂದ ಅತನು ಮಹಾಯೋಗಿಗಳಿಗೂ ದುರ್ಲಭವಾದ ಉತ್ತಮಗತಿಯನ್ನು ಸುಖವಾಗಿ ಪಡೆಯತಕ್ಕವನಾ

ಗಿರುವನು. ಅಂತಹ ಸಾತ್ಯಕಿಯು ಕುಶಲಿಯಷ್ಟೆ ? ! ಭಕ್ತಾಗ್ರೇಸರನಾಗಿಯೂ, ವಿವೇಕಶೀಲನಾಗಿಯೂ, ಪಾಪರಹಿತನಾಗಿಯೂ ಇರುವ ಅಕ್ರೂರನಿಗೆ ಕ್ಷೇಮವಷ್ಟೆ" ಎಲೈ ಮಂತ್ರಿವರ್ಯನೆ! ಆ ಅಕ್ರೂರನಿಗೆ ಭಗವಂತನಾದ ಶ್ರೀಕೃಷ್ಣನಲ್ಲಿರುವ ಭಕ್ತಿವಿಶೇಷವನ್ನು ನಾನೇನೆಂದು ಹೇಳಲಿ! ಅವನು ಶ್ರೀಕೃಷ್ಣನನ್ನೇ ತನಗೆ ಪರಮಗತಿಯೆಂದು ಭಾವಿಸಿ, ಅವನ ಪಾದಪದ್ಮಗಳನ್ನು ನಂಬಿದವನು. ಒಮ್ಮೆ ಈ ಅಕ್ರೂರನು ತಾನು ಹೋಗುತಿದ್ದ ದಾರಿಯಲ್ಲಿ ಶ್ರೀಕೃಷ್ಣನ ಹೆಜ್ಜೆಯ ಗುರುತುಗಳನ್ನು ಕಂಡನು. ಅವುಗಳನ್ನು ಕಂಡೊಡನೆ ಮಿತಿಮೀರಿದ ಸಂತೋಷದಿಂದ ಮೈಮರೆತು, ಮುಂದೆ ಆ ದಾರಿಯಲ್ಲಿ ತಾನು ಕಾಲಿಡುವುದಕ್ಕೆ ಧೈರ್ಯವಲ್ಲದೆ, ಆ ನೆಲದ ಧೂಳಿನಲ್ಲಿ ಮಲಗಿಹೊರಳಾಡನು. ಅಂತಹ ಪರಮಭಕ್ತನು ಕುಶಲಿಯಷ್ಟೆ ? ದೇವಕನ ಮಗಳಾಗಿಯೂ, ಪತಿವ್ರತೆಯರಿಗೆ ಶಿರೋಮಣಿಪ್ರಾಯಳಾಗಿಯೂ, ಇರುವ ದೇವಕೀದೇವಿಗೆ ಕ್ಷೇಮವಷ್ಟೆ? ಶ್ರುತಿಗಳು ಯಾಗಾರ್ಥಗಳನ್ನೊಳಕೊಂಡಂತೆ, ಭಗವಂತನನ್ನು ತನ್ನ ಗರ್ಭದಲ್ಲಿ ಧರಿಸಿದ ಆ ದೇವಕಿಯು ದೇವಮಾತೆಯಾದ ಅದಿತಿಯಂತೆ ಸುಖದಿಂದಿರುವಳಷ್ಟೆ ? ಉದ್ಧವಾ ! ಅನಿರುದ್ಧನನ್ನು ಸಾಕ್ಷಾದ್ಭಗವಂತನೆಂದೇ ಹೇಳಬಹುದು ! ಅತನು ಮಹಾನುಭಾವನು. ನಿಮ್ಮಂತಹ ಭಕ್ತರ ಕೋರಿಕೆಗಳೆಲ್ಲವನ್ನೂ ಈಡೇರಿಸತಕ್ಕವನು. ಈ ಅನಿರುದ್ಧನನ್ನು ಪುರಾತನಮಹರ್ಷಿಗಳು ಕೇವಲ ಶಾಸ್ತ್ರಪ್ರಮಾಣಗಳಿಂದಲೇ ವೇದ್ಯನೆಂದೂ, ಭಗವಂತನ ನಾಲ್ಕನೆಯ ಅಂಶವೆಂದೂ, ಯೋಗಶುದ್ಧವಾದ ಮನಸ್ಸಿನ ಪರಿಪಾಕದಿಂದಲ್ಲದೆ ಲೌಕಿಕಪ್ರಮಾಣಗಳಿಂದ ತಿಳಿಯಲಸಾಧ್ಯನೆಂದೂ ನಿರ್ಣಯಿಸಿರುವರು. ಅಂತಹ ಅನಿರುದ್ಧನು ಕುಶಲಿಯಷ್ಟೆ ? ಯಾವಾಗಲೂ ಕೃಷ್ಣನನ್ನೇ ದೈವವೆಂದೂ, ಅಧಿಪತಿಯೆಂದೂ ಭಾವಿಸಿ, ಅವನೊಬ್ಬನನ್ನೇ ಭಕ್ತಿಯಿಂದ ನಂಬಿರುವ, ಹೃದೀಕ, ಗದ, ಮುಂತಾದ ಯಾದವಪ್ರಧಾನರೆಲ್ಲರಿಗೂ ಕ್ಷೇಮವಷ್ಟೆ ? ಎಲೈ ಮಹಾತ್ಮನೆ ! ಧರ್ಮರಾಜನು ಧರ್ಮದಿಂದ ರಾಜ್ಯವನ್ನಾಳುತ್ತಿರುವನಷ್ಟೆ? ಯಾವನು ತನಗೆ ಎರಡುಭುಜಗಳಂತಿರುವ ಕೃಷ್ಣಾರ್ಜುನರ ಸಹಾಯದಿಂದ, ಸಮಸ್ತರಾಜ್ಯವನ್ನೂ ತನಗಧೀನವನ್ನಾಗಿ ಮಾಡಿಕೊಂಡು,ಸಂತೋಷದಿಂದ ಪ್ರಜೆಗಳನ್ನು ಪಾಲಿಸುತ್ತಿರುವನೋ, ಆಧರ್ಮರಾಜನು ನಿಶ್ಚಿಂತ

ನಾಗಿರುವನೆ? ವೇದೋಕ್ತವಿಧಿಯಿಂದ ವರ್ಣಾಶ್ರಮಧರ್ಮಗಳನ್ನು ಸರಿಯಾಗಿ ರಕ್ಷಿಸುತ್ತಬರುವನೆ ? ದುರ್ಯೋಧನನು ಆಗಾಗ ಅರ್ಜುನನ ಅಸಾಧಾರಣ ಸಾಮರ್ಥ್ಯವನ್ನು ನೋಡಿ, ಪಾಂಡವರಿಗೆ ಜಯವೂ, ಧರ್ಮರಾಜನಿಗೆ ಸಾಮ್ರಾಜ್ಯಪದವಿಯೂ ಎಂದಿಗೂ ತಪ್ಪಿದುದಲ್ಲವೆಂದು ತನ್ನ ಮನಸ್ಸಿನಲ್ಲಿ ದೃಢವಾಗಿ ತಿಳಿದು, ಅದಕ್ಕಾಗಿ ಅನವರತವೂ ತನ್ನ ಮನಸ್ಸಿನಲ್ಲಿ ಚಿಂತಿಸಿ ಕೊರಗುತಿದ್ದನು. ಕೊನೆಗೆ ಅವನ ಮನಸ್ಸಿನಲ್ಲಿದ್ದಂತೆಯೇ ನಡೆದು ಹೋಯಿತು ? ಆದರೇನು ! ಹಿಂದೆ ಆಗಾಗ ತನಗೆ ಅನೇಕವಿಧದಲ್ಲಿ ಅಪರಾಧವನ್ನು ಮಾಡಿದ ಆ ದುರ್ಯೋಧನಾದಿಗಳ ಹೆಸರನ್ನು ಕೇಳಿದಮಾತ್ರಕ್ಕೆ, ಈಗಲೂ ಭೀಮನು ಕ್ರೂರಸರ್ಪದಂತೆ ಕೋಪಾವೇಶದಿಂದ ಬುಸುಗುಟ್ಟುತ್ತಿರುವನು. ಹಿಂದಿನ ಯುದ್ಧಕಾಲದಲ್ಲಿ ರಣರಂಗದ ನಡುವೆ ತನ್ನ ಗದಾದಂಡವನ್ನು ವಿಚಿತ್ರಗತಿಯಿಂದ ತಿರುಗಿಸುತ್ತ, ತನ್ನ ಪಾದಘಾತದಿಂದಲೇ ಸಮಸ್ತಭೂಮಿಯೂ ನಡುಗುವಂತೆ ಹೆಜ್ಜೆಗಳನ್ನಿಡುತ್ತ, ತನ್ನ ಭುಜಬಲದಿಂದ ಕುರುಕುಲವೆಲ್ಲವನ್ನೂ ಧ್ವಂಸಮಾಡಿದ ಆ ಭೀಮಸೇನನು, ಈಗಲಾದರೂ ತನ್ನ ಕೋಪವನ್ನು ಮರೆತು ಶಾಂತಚಿತ್ತನಾಗಿ ಸುಖದಿಂದಿರುವನೆ? ರಥಿಕಾಗ್ರೇಸರರಲ್ಲಿ ಪ್ರಮುಖನಾಗಿಯೂ, ಕಿರಾತರೂಪಿಯಾದ ಶಿವನನ್ನು ತನ್ನ ಬಾಣಸಮೂಹಗಳಿಂದ ತೃಪ್ತಿಪಡಿಸಿ ಅವನ ಅನುಗ್ರಹದಿಂದ ಪಾಶುಪತಾಸ್ತ್ರವನ್ನು ಪಡೆದು ಬಂದವನಾಗಿಯೂ, ಲೋಕವಿಖ್ಯಾತನಾಗಿಯೂ ಇರುವ ಅರ್ಜುನನು, ತನ್ನ ಶತ್ರುಗಳೆಲ್ಲರನ್ನೂ ಜಯಿಸಿ ಶಾಂತಮನಸ್ಕನಾಗಿ ಸುಖದಿಂದಿರುವನೆ ? ಕಣ್ಣೆವೆಗಳು ಕಣ್ಣುಗಳಿಗೆ ರಕ್ಷಕವಾಗಿರುವಂತೆ, ಧರ್ಮರಾಜಭೀಮಾರ್ಜುನರು ಮೂವರೂ ಯಾರನ್ನು ನಿರಪಾಯವಾಗಿ ರಕ್ಷಿಸುತ್ತಿರುವರೋ, ಕುಂತೀದೇವಿಯು ಯಾರನ್ನು ತನ್ನ ಮುದ್ದುಮಕ್ಕಳನ್ನಾಗಿ ಭಾವಿಸಿ ಪೋಷಿಸುತ್ತಿರುವಳೋ, ಮಹಾತ್ಮರಾದ ಆ ನಕುಲಸಹದೇವರಿಬ್ಬರೂ ಆಗಾಗ ಶತ್ರುಗಳನ್ನು ಜಯಿಸಿ, ಗರುಡನು ಸ್ವರ್ಗದಿಂದ ಅಮೃತಕಲಶವನ್ನು ತಂದಂತೆ ಶತ್ರುಧನವನ್ನು ತಂದು ಧರ್ಮರಾಜನಿಗೆ ಒಪ್ಪಿಸುತ್ತ ಕ್ಷೇಮದಿಂದಿರುವರಷ್ಟೆ? ಅತಿರಥರಲ್ಲಿ ಶ್ರೇಷ್ಠನಾಗಿಯೂ, ಇತರರ ಸಹಾಯವನ್ನಪೇಕ್ಷಿಸದೆ ತನ್ನ ಧನುಸ್ಸಿನಿಂದಲೇ ನಾಲ್ಕುದಿಕ್ಕುಗಳನ್ನೂ ಜಯಿಸಿ, ಎಣೆಯಿಲ್ಲದ ಭಾಗ್ಯವನ್ನೂ

ಯೆಶಸ್ಸನ್ನೂ ಸಂಪಾದಿಸಿದವನಾಗಿಯೂ ಇದ್ದ ಪಾಂಡುಮಹಾರಾಜನು ಲೋಕಾಂತರವನ್ನೈದಿದಾಗ, ಆತನಿಗೆ ಪ್ರಾಣವಲ್ಲಭೆಯಾಗಿಯೂ, ಪರಮ ಪತಿವ್ರತೆಯಾಗಿಯೂ ಇರುವ ಕುಂತೀದೇವಿಯು, ಮೊದಲು ಸಹಗಮನವನ್ನು ಮಾಡುವುದಕ್ಕಾಗಿ ನಿಶ್ಚಯಿಸಿದ್ದು, ಕೊನೆಗೆ ತನ್ನ ಮಕ್ಕಳು ದಿಕ್ಕಿಲ್ಲದೆ ಅಲೆಯಬೇಕಾಗುವುದೆಂಬ ಭಯಕ್ಕಾಗಿ, ಆ ಪ್ರಯತ್ನವನ್ನು ಬಿಟ್ಟು, ಆ ಮಕ್ಕಳ ಕ್ಷೇಮಕ್ಕಾಗಿಯೇ ಆದಿಯಿಂದಲೂ ಕಷ್ಟಪಡುತಿದ್ದಳು. ಆ ಕುಂತೀದೇವಿಯು ಈಗ ನಿಶ್ಚಿಂತಳಾಗಿ ಸಂತೋಷವಿಂದಿರುವಳಷ್ಟೆ? ಆಹಾ! ಉಚ್ಛ್ವಾ! ವಿವೇಕಶೂನ್ಯನಾಗಿ ಅಧೋಗತಿಗೆ ಬಿಳುತ್ತಿರುವ ಆ ಕುರುಡನಾದ ಧೃತರಾಷ್ಟ್ರನ ವಿಷಯವಾಗಿ, ನಾನು ಬಹಳವಾಗಿ ಚಿಂತಿಸಿ ಪರಿತಪಿಸುತ್ತಿರುವೆನು. ಆತನು ತನ್ನ ಪ್ರಿಯಸಹೋದರನಾದ ಪಾಂಡುರಾಜನು ಸತ್ತಮೇಲೆ, ಆವನ ಮಕ್ಕಳಿಗೆ ದ್ರೋಹವನ್ನು ಮಾಡಿ, ಭ್ರಾತೃದ್ರೋಹಿಯೆನಿಸಿಕೊಂಡನು. ಅವನು ಪಾಂಡುಪುತ್ರರವಿಷಯದಲ್ಲಿ ತನ್ನ ಮಕ್ಕಳಿಗಿಂತಲೂ ಹೆಚ್ಚಾದ ಪ್ರೇಮವನ್ನು ತೋರಿಸಬೇಕಾದುದು ಯುಕ್ತವಾಗಿದ್ದರೂ, ಅವರ ರಾಜ್ಯವನ್ನೂ ಕೊಡಿಸದೆ, ಅವರೆಲ್ಲರಿಗೂ ದ್ರೋಹವನ್ನೇ ಮಾಡಿದನು. ನಾನು ಆತನಿಗೆ ಬಂಧುವಾಗಿಯೂ, ಮಿತ್ರನಾಗಿಯೂ ಇದ್ದುದರಿಂದ, ಅವನ ಕ್ಷೇಮವನ್ನು ಕೋರಿ, ಹಿತೋಪದೇಶವನ್ನು ಮಾಡಬೇಕೆಂದು ಪ್ರಯತ್ನಿಸಿದಮಾತ್ರಕ್ಕೆ, ಆತನು ನನ್ನಲ್ಲಿಯೇ ಕೋಪಗೊಂಡು, ತನ್ನ ಮಕ್ಕಳ ದುರ್ಯೋಧನನಿಗೊಳಗಾಗಿ, ನನ್ನನ್ನೂ ಮನೆಯಿಂದ ಹೊರಡಿಸಿಬಿಟ್ಟನು. ಆದರೇನು ? ನಾನು ಅದ್ರುಸ್ಸಹವಾಸವನ್ನು ಬಿಟ್ಟು ಬರುವುದಕ್ಕೆ ಆದೊಂದು ಒಳ್ಳೆಯ ನೆಪವಾಯಿತು! ಮನುಷ್ಯರೂಪದಿಂದ ತನ್ನ ಮಹಾಮಹಿಮೆಯನ್ನು ಮರೆಸಿಟ್ಟುಕೊಂಡು, ಜಗತ್ತನ್ನು ಮೋಹಗೊಳಿಸತಕ್ಕವನಾಗಿಯೂ, ಸಕಲಜಗನ್ನಿಯಾಮಕನಾಗಿಯೂ ಇರುವ ಶ್ರೀಕೃಷ್ಣನ ಅನುಗ್ರಹದಿಂದ, ಆತನಿಗೆ ವಿಭೂತಿರೂಪವಾದ ಸಮಸ್ತಜಗತ್ತನ್ನೂ ನೋಡುತ್ತ, ಮನಸ್ಸಿನ ಕುತೂಹಲವನ್ನು ನೀಗಿಸಿಕೊಂಡೆನು. ನಾನು ಇಂತವನೆಂಬುದನ್ನು ಬೇರೊಬ್ಬರಿಗೆ ತಿಳಿಸದಹಾಗೆ ಪ್ರಚ್ಛನ್ನವೇಷಧಾರಿಯಾಗಿ ಭೂಮಂಡಲವೆಲ್ಲವನ್ನೂ ತಿರುಗುತ್ತಿರುವೆನು. ಉಚ್ಛ್ವಾ! ಈಗ ನನ್ನ ಮನಸ್ಸು ಬೇರೊಂದನ್ನೂ ಗಮನಿಸದೆ, ಆ ಶ್ರೀಕೃಷ್ಣ

ನೊಬ್ಬನಲ್ಲಿಯೇ ಕ್ರೀಡಿಸುತ್ತಿರುವುದು. ಈ ಸಂಗತಿಯು ಹಾಗಿರಲಿ ! ಶ್ರೀಕೃಷ್ಣನು ಸರ್ವಜಗನ್ನಿಯಾಮಕನೆಂದೂ, ಆಶ್ರಿತರನ್ನು ಪ್ಪರಿಪಾಲಕನೆಂದೂ ಹೇಳಿದೆನಷ್ಟೆ ? ''ಹಾಗಿದ್ದರೆ ತನ್ನ ಸ್ವಶಕ್ತಿಯಿಂದಲೇ ಕೌರವರನ್ನು ನಿಗ್ರಹಿಸಿ ಪಾಂಡವರನ್ನು ರಕ್ಷಿಸದೆ ಹೋದುದೇಕೆ ? '' ಎಂದು ನೀನು ಶಂಕಿಸಬಹುದು. ಅದಕ್ಕೆ ಸಮಾಧಾನವನ್ನು ಹೇಳುವೆನು ಕೇಳು. ಈಗ ಲೋಕದಲ್ಲಿ ಅನೇಕರಾಜರು ಕುಲಮದದಿಂದಲೂ, ಧನಮದದಿಂದಲೂ, ವಿದ್ಯಾಮದದಿಂದಲೂ ಕೊಬ್ಬಿ ಮೈತಿಳಿಯದೆ ದಾರಿತಪ್ಪಿ ದುರ್ಮಾರ್ಗದಲ್ಲಿ ನಡೆಯುತ್ತಿರುವರು. ಇಂತಹ ಮದಾಂಧರಾದ ರಾಜರು, ತಮ್ಮ ಸೈನ್ಯಗಳ ಭಾರದಿಂದ ಭೂಮಿಯನ್ನು ನಡುಗಿಸಿ, ಆಗಾಗ ಅದಕ್ಕೆ ಬಹಳಬಾಧೆಯನ್ನುಂಟುಮಾಡುತ್ತಿರುವರು. ತನ್ನ ಭಕ್ತರಾದ ಪಾಂಡವರನ್ನು ಪ್ಪರಿಪಾಲಿಸುವ ನೆವದಲ್ಲಿ ಇಂತಹ ರಾಜರೆಲ್ಲರನ್ನೂ ನಿಗ್ರಹಿಸಬೇಕೆಂಬುದಕ್ಕಾಗಿಯೇ ಶ್ರೀಕೃಷ್ಣನು, ತಾನು ಸರ್ವಶಕ್ತನಾಗಿದ್ದರೂ. ಅಪರಾಧಿಗಳಾದ ದುರ್ಯೋಧನಾದಿಗಳನ್ನು ಆಗಲೇ ನಿಗ್ರಹಿಸದೆ, ಇದುವರೆಗೂ ಅವರ ವಿಷಯದಲ್ಲಿ ಉದಾಸೀನನಾಗಿಯೇ ವರ್ತಿಸುತಿದ್ದನು. ಆಗಲೇ ಕೃಷ್ಣನು ಕೌರವರನ್ನು ನಿಗ್ರಹಿಸಿ ಬಿಟ್ಟಿದ್ದರೆ, ಇತರಕ್ಷತ್ರಿಯರನ್ನು ಕೊಲ್ಲುವುದಕ್ಕೆ ಅವಕಾಶವಿಲ್ಲದೆ ಹೋಗುತಿತ್ತು. ಮದಾಂಧರಾಗಿ ಲೋಕಕಂಟಕರಾಗಿದ್ದ ಕ್ಷತ್ರಿಯರೆಲ್ಲರನ್ನೂ ಭಾರತಯುದ್ಧವೆಂಬ ನೆವದಿಂದ ಒಂದುಕಡೆಯಲ್ಲಿ ಸೇರಿಸಿ, ಒಬ್ಬರಿಂದೊಬ್ಬರನ್ನು ಕೊಲ್ಲಿಸಬೇಕೆಂಬ ಉದ್ದೇಶದಿಂದಲೇ, ಇದುವರೆಗೆ ಕೃಷ್ಣನು ಪಾಂಡವರ ಕಷ್ಟವನ್ನೂ, ಕೌರವರ ದುಷ್ಕೃತ್ಯಗಳನ್ನೂ ತನ್ನ ಕಣ್ಣಾರೆ ನೋಡಿಯೂ ಸಹಿಸುತ್ತಬಂದನು. ಇಷ್ಟೇಹೊರತು ತನ್ನ ಕೈಲಾಗದುದಕ್ಕಾಗಿ ಸುಮ್ಮನಿದ್ದವನಲ್ಲ! ಕೌರವರನ್ನು ಮಾತ್ರವೇ ಕೊಲ್ಲಬೇಕೆಂದಿದ್ದರೆ, ತಾನು ಪಾಂಡವದೂತನಾಗಿ ಹೋಗಿದ್ದದಿನದಲ್ಲಿಯೇ ಆ ಕಾರ್ಯವನ್ನು ನೆರೆವೇರಿಸಿಬಿಡುತಿದ್ದನು. ''ಆದರೆ ಸಮಸ್ತಜಗತ್ತನ್ನೂ ತನ್ನ ಸಂಕಲ್ಪಮಾತ್ರದಿಂದಲೇ ನಿಯಮಿಸಬಲ್ಲವನು, ಮನುಷ್ಯರೂಪದಿಂದ ನಟಿಸಿ ಕಾರ್ಯಗಳನ್ನು ಸಾಧಿಸಬೇಕಾದ ಅವಶ್ಯಕತೆಯೆನು" ಎನ್ನುವೆಯಾ? ಆತನಿಗೆ ನಮ್ಮಂತೆ ಕರ್ಮಸಂಬಂಧವಾದ ಉತ್ಪತ್ತಿವಿನಾಶಗಳೊಂದೂ ಇಲ್ಲವೆಂಬುದೇನೋ ನಿಜವೆ. ಅವನು

ತನ್ನ ಸಂಕಲ್ಪಮಾತ್ರದಿಂದಲೇ ಜನಿಸುವನು. ಅವನು ಮನುಷ್ಯರೂಪವನ್ನು ನಟಿಸುವುದೂಕೂಡ, ದುಷ್ಟಸಿಗ್ರಹಶಿಷ್ಟಪರಿಪಾಲನಗಳಿಗಾಗಿಯೇ ಹೊರ ತುಬೇರೆಯಲ್ಲ.ಅವನು ಈ ಮನುಷ್ಯರೂಪದಿಂದ ನಡೆಸತಕ್ಕಕಾರ್ಯಗಳೆಲ್ಲವೂ, ಈ ಲೋಕದ ಪ್ರಾಣಿಗಳಿಗೆ ಹೀಗೆಯೇ ನಡೆಯಬೇಕೆಂದು ದಾರಿಯೆನ್ನು ತೋರಿಸತಕ್ಕವುಗಳಾಗಿರುವುವು. ಈ ವಿಧವಾದ ಲೋಕಸಂಗ್ರಹಕ್ಕಾಗಿಯೇ ಅವನು ಜನ್ಮಗಳನ್ನೆತ್ತುವನು. ‘‘ ಈಶ್ವರನು ಕರ್ಮಾಧೀನನಲ್ಲವಿದ್ದಮೇಲೆ ಅವನಿಗೆ ಈ ವಿಧವಾದ ಕರ್ಮಾಚರಣಗಳೇಕೆ ?” ಎಂದು ಕೇಳುವೆಯಾ ? ‘‘ ಲೋಕದ ಜನಗಳೂ ತನ್ನ ಹಾಗೆಯೇ ಸತ್ಕರ್ಮಪರರಾಗಿ ನಡೆದುಕೊಂಡು ಉತ್ತೀರ್ಣರಾಗಲಿ” ಎಂಬ ಕನಿಕರವನ್ನಿಟ್ಟು, ತನ್ನಿಂದ ಸೃಷ್ಟವಾದ ಚರಾಚರಾತ್ಮಕಪ್ರಪಂಚವನ್ನು ಪಥರಿಸುವುದಕ್ಕಾಗಿಯೇ, ತಾನೂ ಉಯಾಕರ್ಮಗಳನ್ನಾಚರಿಸಿ ತೋರಿಸುತ್ತಿರುವನು. ಇಷ್ಟೇಹೊರತು ಶ್ರೀಕೃಷ್ಣನಿಗೆ ಕರ್ಮಾಧೀನವಾದ ಜನ್ಮಾದಿಗಳೊಂದೂ ಇರುವುದಿಲ್ಲ. ಆದುದರಿಂದ ಭಗವಂತನು ದುಷ್ಟನಿಗ್ರಹಕ್ಕಾಗಿ ಜನ್ಮವನ್ನೆತ್ತಿ, ಜನಗಳಿಗೆ ದಾರಿತೋರಿಸುವುದಕ್ಕಾಗಿ ಕರ್ಮಗಳನ್ನೂ ಆಚರಿಸುತ್ತಿರುವನು ಎಲೈ ಮಿತ್ರನೆ ! ಹೀಗೆ ಭಗವಂತನು,ತನ್ನನ್ನು ಮರೆಹೊಕ್ಕು ತನ್ನ ಆಜ್ಞಾಧೀನರಾದ ಇಂದ್ರಾದಿಲೋಕಪಾಲಕರ ಕೋರಿಕೆಯನ್ನೆಡೇರಿಸುವುದಕ್ಕಾಗಿ, ಯದುವಂಶದಲ್ಲಿ ಶ್ರೀಕೃಷ್ಣಾವತಾರವನ್ನೆತ್ತಿರುವನಷ್ಟೆ ? ‘‘ಆ ಕೃಷ್ಣನ ಯೋಗಕ್ಷೇಮಗಳೆಲ್ಲವನ್ನೂ ನೀನು ವಿಸ್ತರವಾಗಿ ನನಗೆ ತಿಳಿಸಬೇಕು” ಎಂದು ವಿದುರನು ಉದ್ಧವನನ್ನು ಪ್ರಶ್ನಿಸಿದನು. ಇಲ್ಲಿಗೆ ಮೊದಲನೆಯ ಅಧ್ಯಾಯವು.

ಉದ್ಧವನು ಶ್ರೀಕೃಷ್ಣನ ಅಗಲಿಕೆಯಿಂದ ದುಃಖಿಸುತ್ತ, ವಿದುರನಿಗೆ ಆ ಕೃಷ್ಣನ ವೃತ್ತಾಂತಗಳನ್ನು ತಿಳಿಸಿದುದು.

‘‘ಎಲೈ ಪರೀಕ್ಷಿದ್ರಾಜನೆ ಕೇಳು ! ಉದ್ಧವನಾದರೋ ವಿಷ್ಣುಭಕ್ತರಲ್ಲಿ ಶಿರೋರತ್ನಪ್ರಾಯನು! ಅವನು ಐದುವರ್ಷದ ಬಾಲನಾಗಿದ್ದಂದಿನಿಂದಲೇ ಶ್ರೀಕೃಷ್ಣನವಿಷಯದಲ್ಲಿ ಪರಮಭಕ್ತಿಯುಳ್ಳವನಾಗಿ, ಆಟಪಾಟಗ

ಳಲ್ಲಿಯೂ ಆ ಕೃಷ್ಣನನ್ನೇ ಪೂಜಿಸುತ್ತಿದ್ದವನು. ಒಮ್ಮೆ ಉದ್ಧವನು ಹೀಗೆ ಕೃಷ್ಣನ ಪೂಜೆಯಿಂದ ವಿನೋದಿಸುತ್ತಿರುವಾಗ, ಅವನ ತಾಯಿಯು ಬಂದು, ಬೆಳಗಿನ ಊಟಕ್ಕಾಗಿ ಅವನನ್ನು ಕರೆಯುತ್ತ "ಕುಮಾರಾ! ಏಳು! ಹೊತ್ತಾಯಿತು! ನೀನು ಬಹಳ ಹಸಿದಿರುವೆ! ಬೇಗ ಬಾ!" ಎಂದು ಬಹಳ ವಾಗಿ ನಿರ್ಬಂಧಿಸಿದಳು. ಎಷ್ಟೆಷ್ಟು ಪ್ರಾರ್ಥಿಸಿದರೂ ಉದ್ಧವನು ಅವಳ ವಾಕ್ಯವನ್ನು ಲಕ್ಷ್ಯಕ್ಕೆ ತಾರದೆ, ಕೃಷ್ಣಪೂಜೆಯಲ್ಲಿಯೇ ನಿರತನಾಗಿದ್ದುಬಿಟ್ಟನು. ಹೀಗೆ ಬಾಲ್ಯದಿಂದಲೂ ಹಸಿವುಬಾಯಾರಿಕೆಗಳನ್ನೂ ಲಕ್ಷ್ಯಮಾಡದೆ ಕೃಷ್ಣನನ್ನು ಧ್ಯಾನಿಸುತಿದ್ದ ಆ ಉದ್ಧವನಿಗೆ, ಈಗ ವಿದುರನು ಕೃಷ್ಣನ ವೃತ್ತಾಂತವನ್ನು ಕುರಿತು ತನ್ನನ್ನು ಪ್ರಶ್ನೆಮಾಡಿದಕೂಡಲೆ, ಆ ಕೃಷ್ಣನ ಸ್ಮರಣೆಯು ಬಂದಿತು.ಅವನ ವಿಯೋಗದುಃಖವನ್ನು ಸಹಿಸಲಾರದೆ ಮುಹೂರ್ತಮಾತ್ರದವರೆಗೆ ಮೈಮರೆತು ಪರವಶನಾಗಿದ್ದನು. ಕ್ಷಣಕಾಲದವರೆಗೆ ಯಾವ ಉತ್ತರವನ್ನೂ ಹೇಳಲಿಲ್ಲ. ಆಮೇಲೆ ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಂಡು, ಶ್ರೀಕೃಷ್ಣನ ಪಾದಾರವಿಂದಗಳನ್ನು ಧ್ಯಾನಿಸುತ್ತ, ಅದರಿಂದುಂಟಾದ ಮಿತಿಮೀರಿದ ಸಂತೋಷದಿಂದುಬ್ಬುತಿದ್ದನು. ಆತನ ಕಣ್ಣುಗಳಲ್ಲಿ ಆನಂದಬಾಷ್ಪವೂ ಸುರಿಯಲಾರಂಭಿಸಿತು. ಅವನ ಮೈಯೆಲ್ಲವೂ ಪುಳಕಿತವಾಯಿತು. ಹೀಗೆ ಸಂತೋಷಪರವಶನಾಗಿದ್ದ ಉದ್ಧವನು, ವಿದುರನಿಗೆ ಆ ಶ್ರೀಕೃಷ್ಣನ ನಿರ್ಯಾಣವನ್ನು ಹೇಗೆ ತಿಳಿಸುವುದೆಂಬ ದುಃಖದಿಂದ, ಕಣ್ಣುಗಳನ್ನು ಮುಚ್ಚಿಕೊಂಡು, ಕ್ಷಣಕಾಲದವರೆಗೆ ಮೌನದಿಂದಿದ್ದುದನ್ನು ಕಂಡು, ವಿದುರನು "ಆಹಾ! ಈತನಲ್ಲವೇ ಕೃತಾರ್ಥನು!" ಎಂದು ಆತನ ಭಕ್ತಿವಿಶೇಷವನ್ನು ಕೊಂಡಾಡುತ್ತ ಆಶ್ಚರ್ಯಪರವಶನಾಗಿದ್ದನು. ಉದ್ಧವನು ತನ್ನ ಕಣ್ಣುಗಳಲ್ಲಿ ತುಳುಕುತಿದ್ದ ದುಃಖಬಾಷ್ಪವನ್ನು ತೊಡೆದುಕೊಂಡು, ಮೃದುವಾಕ್ಯದಿಂದ ವಿದುರನನ್ನು ಕುರಿತು ಹೀಗೆಂದು ಹೇಳತೊಡಗಿದನು. "ಓ ವಿದುರಾ ನೀನು ನಮ್ಮ ಕ್ಷೇಮಲಾಭವನ್ನು ಕೇಳುತ್ತಿರುವೆಯಲ್ಲಾ! ಅದಕ್ಕೆ ನಾನೇನು ಉತ್ತರವನ್ನುಕೊಡಲಿ! ಶ್ರೀಕೃಷ್ಣನೆಂಬ ಸೂರ್ಯನು ಅಸ್ತಮಿಸಿಬಿಟ್ಟನು. ಕಾಲವೆಂಬ ಮಹಾಸರ್ಪವು ನಮ್ಮಮನೆಗಳಲ್ಲಿ ಪ್ರವೇಶಿಸಿ,ನಮ್ಮಂತಹಸಮಸ್ತಪ್ರಾಣಿಗಳ ಪ್ರಾಣವಾಯುವನ್ನೂ ಅಪಹರಿಸಿತು! ನಮ್ಮ ಗೃಹಾಂಗಣ

ಗಳೆಲ್ಲವೂ ಕಾಂತಿಹೀನವಾದುವು. ಇನ್ನು ನಮ್ಮಕ್ಷೇಮವನ್ನೇನೆಂದು ಹೇಳಲಿ! ಆಕಟಾ! ಈಗ ಈ ಸಮಸ್ತಭೂಮಂಡಲವೂ ನಿರ್ಭಾಗ್ಯವಾಯಿತು ' ಆದರಲ್ಲಿಯೂ ನಮ್ಮ ಯಾದವರನ್ನು ಪರಮನಿರ್ಭಾಗ್ಯರೆಂಬೇ ಹೇಳಬಹುದು. ಯಾದವರೆಲ್ಲರೂ ಇದುವರೆಗೆ ಆ ಕೃಷ್ಣನೊಡನೆ ಬಹಳ ಸಲಿಗೆಯಿಂದಿದ್ದು, ಅವನನ್ನೂ ತಮ್ಮಂತೆಯೇ ಸಾಮಾನ್ಯಮನುಷ್ಯನೆಂದು ಭಾವಿಸುತಿದ್ದರೇ ಹೊರತು, ಅತನ ನಿಜಸ್ಥಿತಿಯನ್ನು ಯಾರೂ ತಿಳಿಯಲಾರದೆ ಹೋದರು. ಆಹಾ! ಆ ಯಾದವರ ಅಜ್ಞಾನವನ್ನೇನೆಂದು ಹೇಳಲಿ! ಬಾಲ್ಯದಿಂದಲೂ ಆ ಕೃಷ್ಣನೊಡನೆ ಆಟಪಾಟಗಳಲ್ಲಿ ಸಂಗಡ ಕಲೆತಿದ್ದರೂ, ಅವನ ಅಸಾಧಾರಣ ಮಹಿಮೆಯನ್ನು ತಿಳಿಯದಿದ್ದಮೇಲೆ, ಅವರೆಲ್ಲರೂ ಅಜ್ಞಾನಾಂಧಕಾರದಲ್ಲಿ ಮುಳುಗಿದವರೆಂಬುದಕ್ಕೆ ಸಂದೇಹವೇನಿದೆ? ಮೀನುಗಳು ಸಮುದ್ರದಲ್ಲಿರುತ್ತಿರುವ ಹಡಗುಗಳನ್ನು ಆಗಾಗ ನೋಡುತಿದ್ದರೂ, ಅವುಗಳನ್ನೂ ತಮಗೆ ಸಮಾನಗಳಾದ ಜಲಜಂತುಗಳನ್ನಾಗಿಯೇ ತಿಳಿಯುವುದೇಹೊರತು, ಜನರನ್ನು ಅಸಾಯಸಿಲ್ಲದೆ ಮಹಾಸಮುದ್ರಮಧ್ಯದಿಂದುದ್ಧರಿಸತಕ್ಕ ಸಾಧನವನ್ನಾಗಿ ತಿಳಿಯಲಾರವಷ್ಟೆ?ಹಾಗೆಯೇ ಮೋಹಸಮುದ್ರದಲ್ಲಿಮುಳುಗಿರುವ ಯಾದವರೂಕೂಡ, ಶ್ರೀಕೃಷ್ಣನು ಸಂಸಾರಸಾಗರದಿಂದುದ್ಧರಿಸತಕ್ಕ ಪರಮಾತ್ಮಸ್ವರೂಪನೆಂಬುದನ್ನು ತಿಳಿಯಲಾರದೆ ಹೋದರು. ವಿಧುರಾ' ಆ ಯಾದವರಾದರೂ ಸಾಮಾನ್ಯರಲ್ಲ!ಪರಹೃದಯವನ್ನು ತಿಳಿಯುವುದರಲ್ಲಿ ಬಹಳ ನಿಪುಣರು!ಮಹಾಬುದ್ಧಿವಂತರು! ಹೀಗಿದ್ದರೂ ಸರ್ವಕಾಲಗಳಲ್ಲಿಯೂ ತಮ್ಮ ಸಂಗಡಲೇ ಇದ್ದ ಕೃಷ್ಣನ ನಿಜವನ್ನು ತಿಳಿಯಲಾರದೆ ಹೋದಮೇಲೆ ಅವರ ದೌರ್ಭಾಗ್ಯಕ್ಕಿಂತಲೂ ದೌರ್ಭಾಗ್ಯವುಂಟೆ ? ಆ ಯಾದವರುಮಾತ್ರವೇ ಅಲ್ಲ! ಭಗವಂತನ ಮಾಯೆಯಿಂದ ಮೋಹಿತರಾಗಿಯೂ, ಅಜೇತನಗಳಾದ ಶಬ್ದಾದಿವಿಷಯಗಳನ್ನೇ ತಮಗೆ ಭೋಗ್ಯವಸ್ತುಗಳನ್ನಾಗಿ ತಿಳಿದವರಾಗಿಯೂ ಇರುವ ಶಿಶುಪಾಲನೇ ಮೊದಲಾದ ಇನ್ನೂ ಅನೇಕರೂಕೂಡ ,ಆ ಕೃಷ್ಣನ ನಿಜವನ್ನರಿಯಲಾರದೆ,ಅವನನ್ನೂ ತಮ್ಮಂತೆ ಒಬ್ಬ ಜೀವನನ್ನಾಗಿಯೇ ತಿಳಿದು ಮರುಳಾಗಿದ್ದರು. ಆದರೆ ''ಅವನ ನಿಜಸ್ಥಿತಿಯನ್ನು ತಿಳಿದವರೊಬ್ಬರೂ ಇಲ್ಲವೆ?" ಎಂದು ನೀನು ಕೇಳಬಹುದು. ಹಾಗೆ ತಿಳಿಯಬೇಡ! ಪರಮಾತ್ಮ

ನಾದ ಆ ಶ್ರೀಕೃಷ್ಣನಲ್ಲಿಯೇ ನಟ್ಟಮನಸ್ಸುಳ್ಳ ಕೆಲವುಮಹಾತ್ಮರ ಬುದ್ಧಿಯುಮಾತ್ರ, ಆ ಭಗವನ್ಮಾಯೆಯಿಂದ ಮರುಳಾಗದೆ,ಶುದ್ಧವಾಗಿರುವುದು. ಅವರಿಗೆ ಕೃಷ್ಣನು ಮನುಷ್ಯಮಾತ್ರನೆಂಬ ಭ್ರಾಂತಿಯೂ ಹುಟ್ಟಲಾರದು ! ವಿದುರಾ ! ಈ ವಿಚಾರವಿರಲಿ ! ಕೃಷ್ಣನ ವೃತ್ತಾಂತವೇನೆಂದು ಕೇಳಿದೆಯಲ್ಲವೆ? ಅದನ್ನು ವಿವರಿಸುವೆನು ಕೇಳು. ಮಹಾತ್ಮನಾದ ಆ ಕೃಷ್ಣನು ತಪಸ್ಸಿದ್ಧರಾದ ಯೋಗಿಗಳಿಗೆಮಾತ್ರವೇ ಗೋಚರಿಸತಕ್ಕ ಲೋಕವೋಪಕವಾದ ತನ್ನ ರೂಪವನ್ನು ನಮ್ಮೆಲ್ಲರಿಗೂ ತೋರಿಸುತಿದ್ದು, ಆ ಸ್ವರೂಪದೊಡನೆಯೇ ಅಂತರ್ಧಾನವನ್ನೂ ಹೊಂದಿಬಿಟ್ಟನು! ಆಹಾ ! ಏನಾಶ್ಚರ್ಯವಿದು! ಆ ಮಹಾತ್ಮನ ರೂಪವು ಕಣ್ಮರೆಯಾದರೂ, ಇನ್ನೂ ನನ್ನ ಮನಸ್ಸನ್ನು ಬಿಟ್ಟು ಕದಲದಂತಿರುವುದು ! ಮನುಷ್ಯಲೀಲೆಗೆ ಯೋಗ್ಯವಾಗಿಯೂ, ತನ್ನ ಯೋಗಬಲವನ್ನು ಲೋಕಕ್ಕೆ ಪ್ರಕಟಿಸುತ್ತಿದ್ದುದಾಗಿಯೂ, ಅತ್ಯದ್ಭುತವಾಗಿಯೂ, ಸೌಂದರ್ಯಸಮೃದ್ಧಿಯಿಂದೊಪ್ಪುತಿದ್ದುದಾಗಿಯೂ, ಕೌಸ್ತುಭಾದ್ಯಾಭರಣಳಿಗೂ ಆಭರಣಪಂತೆ ಅಂದವನ್ನು ಕೊಡತಕ್ಕ ಅವಯವಗಳಿಂದ ಕೂಡಿದುದಾಗಿಯೂ ಇದ್ದ ಆ ದಿವ್ಯಾಕೃತಿಯೆ, ಈಗ ಕಣ್ಮರೆಯಾಯಿತಲ್ಲಾ ! ಇನ್ನು ನಮಗೆ ಆ ದಿವ್ಯರೂಪವನ್ನು ನೋಡುವ ಭಾಗ್ಯವೆಲ್ಲಿ ? ಯುಧಿಷ್ಠಿರನು ರಾಜಸೂಯಯಾಗವನ್ನು ನಡೆಸಿದಾಗ, ಆ ಸಭಾಮಧ್ಯದಲ್ಲಿ ನೆರೆದ ಮೂರು ಲೋಕದ ಜನರೂ, ತನಗೆ ನೇತ್ರಾನಂದಕರವಾದ ಆ ಶ್ರೀಕೃಷ್ಣನ ದಿವ್ಯರೂಪವನ್ನುನೋಡಿ ತಮಗೆ ತಾವು ‘‘ಆಹಾ ! ಮನುಷ್ಯಸೃಷ್ಟಿಯಲ್ಲಿ ಬ್ರಹ್ಮನು ತೋರಿಸತಕ್ಕ ಚಾತುರ್ಯವೆಲ್ಲವೂ ಈ ಮೂರ್ತಿಯೊಂದರಲ್ಲಿಯೇ ಅಡಗಿರುವುದು !” ಎಂದು ಪರಮಾಶ್ಚರ್ಯಭರಿತರಾಗಿದ್ದರಲ್ಲವೆ! ಅಂತಹ ರೂಪವು ಈಗ ನಾಮಮಾತ್ರಶೇಷವಾಯಿತು ! ಯಾವ ಶ್ರೀಕೃಷ್ಣನ ಅನುರಾಗಸೂಚಕಗಳಾದ ಮಂದಹಾಸಗಳಿಂದಲೂ, ವಿಲಾಸಗಳಿಂದಲೂ, ಕ್ರೀಡೆಗಳಿಂದಲೂ, ಅಭಿಪ್ರಾಯಗರ್ಭಗಳಾದ ನೋಟಗಳಿಂದಲೂ, ಗೌರವಿಸಲ್ಪಡುತಿದ್ದ ಗೋಪಸ್ತ್ರೀಯರೆಲ್ಲರೂ, ಆತನ ಸೌಂದರ್ಯಾದಿಗಳಲ್ಲಿಯೇ ನಟ್ಟಮನಸುಳ್ಳವರಾಗಿ, ಮನೆಮಂದಿಮಕ್ಕಳನ್ನೂ ಮರೆತು, ಕೃತ್ಯಾಕೃತ್ಯವಿವೇಕಶೂನ್ಯರಾಗಿ ಹಂಬಲಿಸುತಿದ್ದರೋ, ಅಂತಹ ಶ್ರೀಕೃಷ್ಣನು ತನ್ನ

ದಿನ್ಯಾಕೃತಿಯೊಡನೆ ಕಣ್ಮರೆಯಾಗಿಬಿಟ್ಟನು ! ಅಂತಹ ಜಗನ್ಮೋಹನಮೂರ್ತಿಯನ್ನು ಇನ್ನು ನಾವು ಬೇರೆಲ್ಲಿಯೂ, ಯಾವಕಾಲದಲ್ಲಿಯೂ ನೋಡಲಾರೆವು ! ಭಗವಂತನು ಜೀವಗಳಿಗೆ ದೇವಮನುಷ್ಯಾದಿಶರೀರಭೇದಗಳನ್ನು ಕೊಟ್ಟು, ತಾನೂ ಆ ಜೀವನಲ್ಲಿ ಅಂತರಾತ್ಮನಾಗಿ ವರ್ತಿಸತಕ್ಕವನಾದುದರಿಂದ, ಗುಣತ್ರಯಾತ್ಮಕವಾದ ಈ ಸಮಸ್ತಪ್ರಪಂಚವೂ ಆ ಭಗವಂತನ ಶರೀರಗಳಲ್ಲದೆ ಬೇರೆಯಲ್ಲ ! ಆದರೆ ಅವುಗಳಲ್ಲಿ ಸತ್ವಗುಣಪ್ರಧಾನರೆನಿಸಿ ಶಾಂತರಾದ ಸಜ್ಜನರು, ರಜೋಗುಣ ತಮೋಗುಣ ಪ್ರಧಾನರಾದ ದುರಾತ್ಮರಿಂದ ಪೀಡಿತರಾಗಿ ದುಃಖಪಡುವುದನ್ನು ನೋಡಿ, ಆ ಭಗವಂತನು ದುಷ್ಪ್ರಾರ್ಜಿತ್ತನಾಗಿ, ತಾನು ಪರಾವರೇಶ್ವರನೆನಿಸಿ ಜನ್ಮಕರ್ಮಾದಿರಹಿತನಾಗಿದ್ದರೂ, ದಾರುವಿನಲ್ಲಿ ಅಗ್ನಿಯು ಜನಿಸುವಂತೆ, ದೇವಮಾನವಾದಿಶರೀರಗಳಲ್ಲಿ ಋತ್ವನ್ನನಾಗುವುದುಂಟು. ಅವನಿಗೆ ಈ ಶರೀರಗಳು ತನ್ನ ಸಂಕಲ್ಪಮಾತ್ರದಿಂದುಂಟಾಗುವುವೇಹೊರತು ಕರ್ಮಾಧೀನಗಳಲ್ಲ. ಭಗವಂತನು ದುಷ್ಟರಾದ ತೀಶುಪಾಲಾದಿಗಳನ್ನಡಗಿಸಿ, ಭೂಭಾರವನ್ನು ಪರಿಹರಿಸಿ, ಲೋಕಕ್ಷೇಮವನ್ನುಂಟುಮಾಡಬೇಕೆಂಬ ಕೋರಿಕೆಯಿಂದ, ವಸುದೇವನ ಮನೆಯಲ್ಲಿ, ತನಗೆ ಮೊದಲು ಜನಿಸಿದ ಬಲರಾಮನೆಂಬ ನಿಜಾಂಶದೊಡನೆ ಕೃಷ್ಣರೂಪದಿಂದವತರಿಸಿದ್ದನು. ಕರ್ಮನಿಮಿತ್ತವಾದ ಜನನಮರಣಾದಿಗಳೊಂದೂ ಇಲ್ಲದವನಾದರೂ ಆ ಭಗವಂತನು, ವಸುದೇವನು ಸೆರೆಯಲ್ಲಿ ಸಿಕ್ಕಿಬಿದ್ದಿದ್ದಾಗ, ಸಾಮಾನ್ಯಜೀವರಾಶಿಯಂತೆ ಅವನಿಗೆ ಪುತ್ರನಾಗಿ ಜನಿಸಿದನು. ದುರಾತ್ಮನಾದ ಕಂಸನಿಗೆ ತಾನು ಭಯಪಟ್ಟವನಂತೆ ನಂದಗೋಕುಲದಲ್ಲಿಯೇ ವಾಸಿಸುತಿದ್ದನು. ಅದರಿಂದಾಜಿಗೆ ಮಥುರಾಪುರಿಯಲ್ಲಿ ಕೊಂಚಕಾಲವಿದ್ದು, ಅಲ್ಲಿ ದುಷ್ಟರಾದ ಕಾಲಯವನಾದಿಗಳ ಹಿಂಸೆಯೆನ್ನು ತಡೆಯಲಾರದವನಂತೆ ಆ ಪಟ್ಟಣವನ್ನು ಬಿಟ್ಟು ತಪ್ಪಿಸಿಕೊಂಡೂ ಹೋದನು. ಎಣೆಯಿಲ್ಲದ ವೀರ್ಯವುಳ್ಳವನಾಗಿಯೂ, ಅಪ್ರಾಕೃತಶರೀರವುಳ್ಳವನಾಗಿಯೂ ಇರುವ ಆ ಕೃಷ್ಣನು ನಡೆಸಿದ ಈ ಆಶ್ಚರ್ಯಕಾರ್ಯಗಳೆಲ್ಲವನ್ನೂ ನೆನೆಸಿಕೊಂಡರೆ, ನನ್ನ ಮನಸ್ಸು ಮರುಳಾಗುವುದು. ಇವೆಲ್ಲವೂ ಆ ಭಗವಂತನು ತನ್ನ ಮಹಿಮೆಯನ್ನು ಮರೆಸಿಡುವುದಕ್ಕಾಗಿ ಮಾಡಿದ ಕಾರ್ಯಗಳೇಹೊರತು ಬೇರೆಯಲ್ಲ ! ಇದಲ್ಲದೆ ಆ ಕೃಷ್ಣನು ಕಂಸನನ್ನು

ಕೊಂಡು ಬಂದಮೇಲೆಯೂಕೂಡ, ದೇವಕೀವಸುದೇವರ ಪಾದಗಳಲ್ಲಿ ಬಿದ್ದು, ''ಅಮ್ಮಾ! ಜನಕಾ! ನಾನೂ ಕಂಸನ ಭಯಕ್ಕಾಗಿಯೇ ಬಹುಕಾಲದ ವರೆಗೆ ನಿಮ್ಮನ್ನಗಲಿ ಬೇರೆ ಕಡೆಯೆಲ್ಲಿರಬೇಕಾಯಿತು. ಅಷ್ಟು ದೀರ್ಘಕಾಲದ ವರೆಗೆ ನಿಮ್ಮ ಪಾದಶುಶ್ರೂಷೆಯನ್ನು ಮಾಡುವುದಕ್ಕೂ ಇಲ್ಲದೆಹೋಯಿತು, ಹೀಗೆ ಮಹಾಪರಾಧಿಯಾದ ನನ್ನ ವಿಷಯದಲ್ಲಿಯೂ, ಬಲರಾಮನವಿಷಯದಲ್ಲಿಯೂ ಕೋಪಗೊಳ್ಳದೆ, ನಮ್ಮ ತಪ್ಪನ್ನು ಮನ್ನಿಸಬೇಕು.'' ಎಂದು ಎಷ್ಟೊಂದಿನಯದಿಂದ ಪ್ರಾರ್ಥಿಸುತಿದ್ದನಲ್ಲವೆ? ಈಚರಿತ್ರವೊಂದೊಂದೂ ನನ್ನ ಮನಸ್ಸನ್ನು ಕಲಗಿಸುತ್ತಿರುವುದು. ಆದರೆ ''ಕೃಷ್ಣನು ತಾನೇ ಸರ್ವನಿಯಾಮಕನಾಗಿರುವಾಗ, ಹೀಗೆ ಇತರರಲ್ಲಿ ದೈನ್ಯವನ್ನು ತೋರಿಸಬೇಕಾದುದೇಕೆ'' ಎಂದು ಕೇಳುವೆಯಾ? ಈ ಚರ್ಯೆಗಳೆಲ್ಲವೂ ಲೋಕದ ಜನಗಳಿಗೆ ಮೋಹವನ್ನುಂಟುಮಾಡುವುದಕ್ಕಲ್ಲದೆ ಬೇರೆಯಲ್ಲ. ಅವನು ಮನುಷ್ಯಲೀಲೆಯಿಂದಲೇ ನಡುನಡುವೆ ತನ್ನ ಮಹಾಮಹಿಮೆಯನ್ನೂ, ಐಶ್ವರ್ಯವನ್ನೂ ತೋರಿಸುತಿದ್ದನು. ಆತನು ಸರ್ವೇಶ್ವರನಲ್ಲದಿದ್ದಪಕ್ಷದಲ್ಲಿ ಈ ಅದ್ಭುತಕಾರ್ಯಗಳು ಮತ್ತೊಬ್ಬರಿಗೆ ಹೇಗೆತಾನೇ ಸಾಧ್ಯವಾಗುವುದು? ಅಂತಹ ಶ್ರೀಕೃಷ್ಣನ ಪಾದಾರವಿಂದಗಳನ್ನು ನಂಬಿ, ಆತನ ಪಾದಧೂಳಿಯೆನ್ನಾಘ್ರಾಣಿಸಿ, ಒಂದಾವರ್ತಿ ಆದರ ರುಚಿಯನ್ನು ನೋಡಿದ ಯಾವ ಮನುಷ್ಯನು ತಾನೇ ಅವನನ್ನು ಮರೆತುಬಿಡಬಲ್ಲನು! ಮತ್ತು ಆ ಶ್ರೀಕೃಷ್ಣಮೂರ್ತಿಯ ಹುಬ್ಬಿನಾಟಗಳನ್ನನುಸರಿಸಿಯೇ ಮೃತ್ಯುದೇವತೆಯು ಲೋಕದಲ್ಲಿರುವ ದುರ್ಮಾರ್ಗರೆಲ್ಲರನ್ನೂ ಸಂಹರಿಸಿ ಭೂಭಾರವನ್ನಪಹರಿಸುತ್ತಿರುವುದು. ಇವೆಲ್ಲವೂ ಆ ಈಶ್ವರನ ಕಾರ್ಯವಲ್ಲದೆ ಬೇರೆಯಲ್ಲ. ಅವನ ಸಂಕಲ್ಪಮಾತ್ರದಿಂದಲೇ ಪ್ರಪಂಚವ್ಯಾಪಾರವೆಲ್ಲವೂ ನಡೆಯುತ್ತಿರುವುದು ಧರ್ಮರಾಜನು ರಾಜಸೂಯಯಾಗವನ್ನು ನಡೆಸಿದಾಗ, ಶಿಶುಪಾಲನು ಆಡಬಾರದ ಮಾತುಗಳನ್ನಾಡಿ ಶ್ರೀ ಕೃಷ್ಣನನ್ನು ನಿಂದಿಸಿ, ಕೊನೆಗೆ ಆ ಶ್ರೀಕೃಷ್ಣನಿಂದಲೇ ಸಂಹೃತನಾಗಿ, ಯೋಗೀಶ್ವರರಿಗೂ ದುರ್ಲಭವಾದ ಮೋಕ್ಷಸಿದ್ಧಿಯನ್ನು ಹೊಂದಿ, ಆ ಭಗವಂತನ ಪಾದಾರವಿಂದಗಳಲ್ಲಿಯೇ ಹೋಗಿ ಸೇರಿದನು. ಈ ಚರಿತ್ರೆಗಳೆಲ್ಲವನ್ನೂ ನೀನೂ ಕಣ್ಣಾರೆ ನೋಡಿದವನಷ್ಟೆ? ಹೀಗೆ ಶ್ರೀಕೃಷ್ಣನು ತನ್ನ ಶತ್ರುಗಳಲ್ಲಿ

ಯೂ ವಾತ್ಸಲ್ಯವನ್ನು ತೋರಿಸಿ, ಸರ್ವೋತ್ತಮವಾದ ಮೋಕ್ಷಫಲವನ್ನು ಕೊಟ್ಟಿರುವಾಗ, ತನ್ನ ಮಿತ್ರರನ್ನೂ, ಆಶ್ರಿತರನ್ನೂ ಉದ್ಧರಿಸುವನೆಂಬುದ ರಲ್ಲಿ ಸಂದೇಹವೇನುಂಟು? ಹೀಗೆ ಸರ್ವಸಮವಾದ ಪ್ರೇಮವನ್ನು ತೋರಿಸು ತ್ತಿರುವ ಆ ಶ್ರೀಕೃಷ್ಣನ ವಿಯೋಗವನ್ನು ಯಾರು ತಾನೇ ಸಹಿಸಬಲ್ಲರು? ಇದಲ್ಲದೆ ಕುರುಕ್ಷೇತ್ರದ ಯುದ್ಧದಲ್ಲಿಯೂಕೂಡ, ಎಷ್ಟೋಮಂದಿ ರಾಜರು, ಲೋಕಮೋಹನಮೂರ್ತಿಯಾದ ಆ ಕೃಷ್ಣನ ರೂಪವನ್ನು ಕಣ್ಣಿಮಿಕ್ಕದೆ ಸೋಡುವ್ರದರಿಂದಲೂ,ಅರ್ಜುನನ ಬಾಣದಿಂದಲೂ ಪವಿತ್ರತೆಯನ್ನು ಹೊಂದಿ, ಉ ತ್ತಮಪದವನ್ನು ಹೊಂದಿದರಲ್ಲವೆ? ಆಮಹಾನುಭಾವನ ಎಣೆಯಿಲ್ಲದಮಹಿಮೆಯ ನ್ನು ಹೇಳಬೇಕಾದುದೇನು? ಅತನೇ ಸಮಸ್ತಸೃಷ್ಟಿಗಳಿಗೂ ಕಾರಣಭೂತನು! ಸತ್ವರಜಸ್ತಮಸ್ಸುಗಳೆಂಬ ಮೂರುಗುಣಗಳಿಗೂ ಅಧಿಪತಿಯು! ಇತರಾಪೇ ಕ್ಷೆಯಿಲ್ಲದೆ,ತನಗೆ ತಾನೇ ಬಂದೊದಗುತ್ತಿರುವ,ಐಶ್ವರ್ಯ,ವೀರ್ಯ,ಯಶಸ್ಸುಮುಂ ತಾದುವುಗಳ ಸಮೃದ್ಧಿಯಿಂದ ಪೂರ್ಣಕಾಮನೆನಿಸಿದವನು! ಲೋಕಪಾಲಕ ರೆಲ್ಲರೂ ಬಗೆಬಗೆಯ ಪೂಜಾಸಾಮಗ್ರಿಗಳೊಡನೆ ಬಂದು, ಅತನ ಪಾದಾರವಿಂ ದಗಳನ್ನು ಸೇವಿಸುತ್ತಿರುವರು. ಓ ವಿದುರಾ! ಶ್ರೀಕೃಷ್ಣನು ಇಷ್ಟೊಂದು ಮಹಾಮಹಿಮೆಯುಳ್ಳವನಾಗಿದ್ದರೂ, ಯಾದವಕುಲದ ಚಕ್ರವರ್ತಿಪಟ್ಟ ದಲ್ಲಿ ಉಗ್ರಸೇನನನ್ನು ಕುಳ್ಳಿರಿಸಿ, ತಾನು ಸಾಮಾನ್ಯಭೃತ್ಯನಂತೆ ಅವನ ಸೇವೆಯನ್ನು ಮಾಡುತ್ತ ಅವನ ಆಜ್ಞಾಧೀನನಾಗಿ "ಮಹಾಪ್ರಭೂ! ಲಾಲಿ ಸಬೇಕು"ಇತ್ಯಾದಿ ವಿನಯಪೂರ್ವಕಗಳಾದ ವಿಜ್ಞಾಪನಾವಾಕ್ಯಗಳಿಂದಲೂ, ದಾಸ್ಯಕಾರ್ಯಗಳಿಂದಲೂ ಅವನನ್ನೊಲಿಸುತಿದ್ದನಲ್ಲವೆ? ಇನ್ನೆಲ್ಲವೂ ನನಗೆ ಅತ್ಯಾಶ್ಚರ್ಯವನ್ನು ಉಂಟುಮಾಡುತ್ತಿರುವುವು. ಆಕೃಷ್ಣನು ಇನ್ನೂ ಶಿಶು ವಾಗಿದ್ದಕಾಲದಲ್ಲಿಯೇ, ಪೂತನೆಯೆಂಬ ರಾಕ್ಷಸಿಯು, ಕಂಸನ ಪ್ರೇರಣೆ ಯಿಂದ ತನ್ನ ಸ್ತನಾಗ್ರಗಳಿಗೆ ಕಾಲಕೂಟದಂತೆ ಘೋರವಾದ ವಿಷವನ್ನು ಸವರಿಕೊಂಡು, ಆ ಶಿಶುವಿಗೆ ಮೊಲೆಯೂಡಿಸುವುದಕ್ಕಾಗಿ ಬಂದಳು. ಅಲ್ಲಿದ್ದ ಗೋಪಸ್ತ್ರೀಯರೆಲ್ಲರೂ ಬೇಡಬೇಡವೆಂದು ಎಷ್ಟೋವಿಧದಿಂದ ತಡೆಯುತಿ ದ್ದರೂ ಕೇಳದೆ, ಅವಳು ಕೃಷ್ಣನನ್ನು ಕೊಲ್ಲಬೇಕೆಂಬ ದುರುದ್ದೇಶದಿಂದ ಆ ಶಿಶುವನ್ನೆತ್ತಿಕೊಂಡು ಸ್ತನ್ಯವನ್ನು ಕೊಡುತಿದ್ದಳು. ಆಗ ಕೃಷ್ಣನು ಅವಳ ಸ್ತ

ನವನ್ನು ಕುಡಿಯುವ ನೆವದಿಂದಲೇ ಆ ರಾಕ್ಷಸಿಯ ಜೀವವನ್ನೂ ಹೀರಿಬಿಟ್ಟನಲ್ಲವೆ? ಆ ಶ್ರೀಕೃಷ್ಣನು ಸಾಕ್ಷಾದ್ಭಗವಂತನ ಪೂರ್ಣಾಂಶವಲ್ಲದಿದ್ದರೆ ಪಕ್ಷಪಡಲ್ಲಿ ಈ ಕಾರ್ಯವು ಹೇಗೆ ತಾನೇ ಸಾಧ್ಯವಾಗುತಿತ್ತು? ಅದೂ ಹೋಗಲಿ? ಶಿಶುಹತ್ಯೆಯನ್ನು ಮಾಡುವುದಕ್ಕಾಗಿ ಬಂದ ಈ ಪೂತನೆಯು ಪರಮದುಷ್ಟೆಯೆಂಬುದರಲ್ಲಿ ಸಂದೇಹವಿಲ್ಲವಷ್ಟೆ? ಇಷ್ಟು ದುರಾತ್ಮಳಾಗಿದ್ದರೂಕೂಡ, ಆ ಪೂತನೆಯು ಕೃಷ್ಣಾನುಗ್ರಹದಿಂದಲೇ ಯಶೋದಾದೇವಿಗೆ ಸಲ್ಲತಕ್ಕ ಪರಮಪದವನ್ನೇ ಹೊಂದಿದಳು. ಹೀಗೆ ತನಗೆ ಅಪರಾಧವನ್ನು ಮಾಡಿದ ಶತ್ರುಗಳಿಗೂಕೂಡ ಮೋಕ್ಷಸುಖವನ್ನು ಕೊಡತಕ್ಕ ಶ್ರೀಕೃಷ್ಣನನ್ನು ಬಿಟ್ಟು, ಬೇರೆದೇವತೆಗಳನ್ನು ಮರೆಹುಗುವುದಕ್ಕೆ ಯಾವನು ತಾನೇ ಅಸೆಪಡುವನು? ಆದರೆ ಭಕ್ತಿಯೊಂದು"ಹೊರತು ಮುಕ್ತಿಗೆ ಬೇರೆ ಮಾರ್ಗವಿಲ್ಲವೆಂದು, ಶ್ರುತಿ, ಸ್ಮೃತಿಗಳೆಲ್ಲವೂ ಉದ್ಘೋಷಿಸುತ್ತಿರುವಾಗ, ಭಕ್ತಿಹೀನರಾಗಿ ಭಗವಂತನಲ್ಲಿ ವೈರವನ್ನು ಬೆಳೆಸಿದ ದುರಾತ್ಮರೂಕೂಡ ಮೋಕ್ಷವನ್ನು ಹೊಂದಿದರೆಂಬುದು ಅಸಂಗತವಲ್ಲವೆ" ಎಂದು ನೀನು ಆಕ್ಷೇಪಿಸಬಹುದು. ವಿದುರಾ! ಅದಕ್ಕೂ ಸಮಾಧಾನವನ್ನು ಹೇಳುವೆನು, ಕೇಳು. ಭಗವಂತನಾದ ಶ್ರೀಕೃಷ್ಣನಲ್ಲಿ ದ್ವೇಷವನ್ನು ಬೆಳೆಸಿ, ಯುದ್ಧವನ್ನೂ ಮಾಡಿ, ಆ ಶ್ರೀಕೃಷ್ಣನ ಕೈಯಿಂದಲೇ ಹತರಾಗಿ, ಪ್ರಾಣಗಳನ್ನು ಬಿಡುವಾಗ, ಗರುಡಾರೂಢನಾಗಿಯೂ, ಚಕ್ರಪಾಣಿಯಾಗಿಯೂ ಇರುವ ಆ ಭಗವಂತನನ್ನು ಕಂಡವರು ಯಾರುಯಾರುಂಟೋ, ಅವರೆಲ್ಲರೂ ದೇವಸ್ವಭಾವದಿಂದ ಹುಟ್ಟಿದ ಭಗವದ್ಭಕ್ತರೆಂದೇ ನನಗೆ ತೋರುವುದು. ವಿದುರಾ! ಭಗವಂತನು ಬ್ರಹ್ಮಾದಿಗಳ ಪ್ರಾರ್ಥನೆಯನ್ನಂಗೀಕರಿಸಿ ಕೃಷ್ಣರೂಪದಿಂದವತರಿಸಿದುದುಮೊದಲು, ಅವನು ನಡೆಸಿದ ದಿವ್ಯಚೇಷ್ಟಿತಗಳೆಲ್ಲವನ್ನೂ ಸಂಗ್ರಹಿಸಿ ತಿಳಿಸುವೆನು ಕೇಳು ಜ್ಞಾನಶಕ್ತಿ ಬಲೈಶ್ವರ್ಯಾದಿ ಷಡ್ಗುಣಪರಿಪೂರ್ಣನಾದ ಭಗವಂತನು, ಬ್ರಹ್ಮದೇವನ ಪ್ರಾರ್ಥನೆಯಮೇಲೆ ಈ ಲೋಕಕ್ಕೆ ಕ್ಷೇಮವನ್ನುಂಟುಮಾಡಬೇಕೆಂಬ ಉದ್ದೇಶದಿಂದಲೇ, ಕಂಸನ ಸೆರೆಮನೆಯಲ್ಲಿ ವಸುದೇವದೇವಕಿಯರಿಗೆ ಪುತ್ರನಾಗಿ ಅವತರಿಸಿದನು. ಕಂಸನ ಭಯದಿಂದ ನಡುಗುತ್ತಿದ್ದ ವಸುದೇವನ ಮನಸ್ಸಮಾಧಾನಕ್ಕಾಗಿ, ನಂದಗೋಕುಲಕ್ಕೆ ಹೋಗಿ, ಅಲ್ಲಿ ಹನ್ನೊಂದು ಸಂವತ್ಸರಗಳವರೆ

ಗೆ ತನ್ನ ಶಕ್ತಿಯೊಂದನ್ನೂ ಹೊರಕ್ಕೆ ತೋರಿಸದೆ, ತನ್ನಣ್ಣನಾದ ಬಲರಾ
ಮನೊಡಗೂಡಿ,ಗೊಲ್ಲರೊಡನೆ ಸೇರಿ ತಾನೂ ಹಸುಗಳನ್ನು ಕಾಯತಿದ್ದನು.
ಕಿವಿಗಿಂಪಾದ ಸ್ವರದಿಂದ ಕೂಗುತ್ತಿರುವ ನಾನಾಜಾತಿಯ ಪಕ್ಷಿಗಳಿಂದ
ತುಂಬಿದ ಯಮುನಾತೀರದ ಕಾಡುಗಳಲ್ಲಿ ವಿನೋದದಿಂದ ವಿಹರಿಸುತ್ತಿದ್ದ
ನು. ಸರ್ವಾಂತರ್ಯಾಮಿಯಾದ ಆ ಭಗವಂತನು ಅಲ್ಲಿನ ಕಾಡುಜನರೆಲ್ಲರನ್ನೂ
ಮೋಹಗೊಳಿಸುವಂತೆ, ಬಗೆಬಗೆಯ ಬಾಲಚೇಷ್ಟೆಯನ್ನೂ ನಟಿಸುತಿದ್ದನು.
ಒಳಗೊಳಗೆ ಮಂದಹಾಸಪೂರ್ವಕವಾಗಿ ನಗುತ್ತಲೇ, ಮೇಲೆಮಾತ್ರ
ಅಳುವಹಾಗೆ ಕಾಣಿಸುವನು ! ಸಿಂಹದೃಷ್ಟಿಯಂತೆ ಗಂಭೀರವಾದ ನೋಟ
ದಿಂದ ಯಮುನಾತೀರದ ಉಪವನಗಳಲ್ಲಿ ಕ್ರೀಡಿಸುತ್ತಿದ್ದನು. ಈ ಸಮ
ಯದಲ್ಲಿ ಮಾಯಾವಿಗಳಾಗಿಯೂ, ಆಗಾಗ ಇಷ್ಟಬಂದಂತೆ ರೂಪ
ವನ್ನು ತೋರಿಸತಕ್ಕ ಕಾಮರೂಪಿಗಳಾಗಿಯೂ ಇದ್ದ, ಶಕಟ, ಧೇನುಕರೇ
ಮೊದಲಾದ ಕೆಲವು ರಾಕ್ಷಸರು, ಕಂಸನಿಂದ ಪ್ರೇರಿತರಾಗಿ, ತನ್ನನ್ನು
ಕೊಲ್ಲುವುದಕ್ಕೆ ಬಂದಾಗ, ಅವರೊಡನೆ ತಾನೂ ಆಟವಾಡುವಹಾಗೆಯೇ
ಸೇರಿ, ಲೀಲಾಮಾತ್ರದಿಂದಲೇ ಅವರನ್ನು ಕೊಂದು ಕೆಡಹಿದನು. ಮತ್ತೊ
ಮ್ಮೆ ಕೆಲವು ಹಸುಗಳು ಕಾಳಿಯವೆಂಬ ಮಡುವಿನಲ್ಲಿ ವಿಷಜಲವನ್ನು ಪಾನ
ಮಾಡಿ ಸಾಯುವ ಸ್ಥಿತಿಯಲ್ಲಿದ್ದುದನ್ನು ನೋಡಿ, ಕೃಷ್ಣನು, ಆದರ ಕಾರ
ಣವನ್ನು ತಿಳಿದು, ಆ ಮಡುವಿನಲ್ಲಿ ಧುಮಿಕಿ, ಅಲ್ಲಿದ್ದ ಕಾಳಿಯನೆಂಬ ಸರ್ಪ
ರಾಜನನ್ನು ತನ್ನ ಕಾಲಿಂದ ಮೆಟ್ಟಿ ನಿಗ್ರಹಿಸಿ, ಮೂರ್ಛೆಬಿದ್ದ ಪಶುಗಳಿಗೆ
ಪ್ರಾಣದಾನವನ್ನು ಮಾಡಿದುದಲ್ಲದೆ, ಆ ಮಡುವಿನ ಜಲವನ್ನು ವಿಷರಹಿತವ
ನ್ನಾಗಿ ಮಾಡಿ,ಗೋಪಾಲರನ್ನೂ ರಕ್ಷಿಸಿದನು. ಮತ್ತೊಮ್ಮೆ ನಂದಗೋಕು
ಲದಲ್ಲಿದ್ದ ಗೊಲ್ಲರೆಲ್ಲರೂ ಮಳೆಯನ್ನಪೇಕ್ಷಿಸಿ ದೇವೇಂದ್ರನ ಪ್ರೀತಿಗಾಗಿ
ಒಂದು ಯಾಗವನ್ನು ಮಾಡಬೇಕೆಂದು ಪ್ರಯತ್ನಿಸುತ್ತಿರಲು, ಅದನ್ನು ನೋ
ಡಿ ಶ್ರೀಕೃಷ್ಣನು,ಆ ಯಾಗಕ್ಕಾಗಿ ಗೊಲ್ಲರು ಸಂಗ್ರಹಿಸಿಟ್ಟಿದ್ದ ಸಮಸ್ತ ದ್ರ
ವ್ಯರಾಶಿಗಳನ್ನೂ ಸತ್ಪಾತ್ರದಲ್ಲಿ ಉಪಯೋಗಿಸಬೇಕೆಂಬ ಉದ್ದೇಶದಿಂದ,
ಗೋಪೂಜೆಯನ್ನಾರಂಭಿಸಿ,ಆ ನೆವದಲ್ಲಿ ಆ ನೇಕಬ್ರಾಹ್ಮಣರನ್ನೂ, ಗೋವುಗ
ಳನ್ನೂ, ಗೋಪಾಲರನ್ನೂ ತೃಪ್ತಿಪಡಿಸಿದನು. ಆಗ ದೇವೇಂದ್ರನು

ತನಗೆ ನಡೆಯುತಿದ್ದ ಪೂಜೆಯನ್ನು ತಪ್ಪಿಸಿದುದಕ್ಕಾಗಿ ಕೋಪಗೊಂಡು, ಗೋಪಾಲರಮೇಲೆ ಕಲ್ಮಳೆಯನ್ನು ಕರೆಯುವುದಕ್ಕೆ ತೊಡಗಿದನು. ಇದನ್ನು ನೋಡಿ ಶ್ರೀಕೃಷ್ಣನು, ಆ ಕ್ಷಣವೇ ಸಮೀಪದಲ್ಲಿದ್ದ ಒಂದು ಪರ್ವತವನ್ನು ತನ್ನ ಕಿರುಬೆರಳಿನಿಂದ ಕೊಡೆಯಹಾಗೆ ಮೇಲಕ್ಕೆತ್ತಿ ಹಿಡಿದು, ಸಮಸ್ತಗೋವ್ರಜಗಳನ್ನೂ, ಗೊಲ್ಲರನ್ನೂ, ಮಳೆಯ ಬಾಧೆಯಿಂದ ತಪ್ಪಿಸಿ ರಕ್ಷಿಸಿದನು. ಈ ನೆವದಿಂದಲೇ ಇಂದ್ರನ ಗರ್ವವನ್ನೂ ಅಡಗಿಸಿಬಿಟ್ಟನು. ಅದರಿಂದಾಚೆಗೆ ಶರತ್ಕಾಲದಲ್ಲಿ ಪೂರ್ಣಚಂದ್ರನ ಕಿರಣಗಳಿಂದ ಮನೋಹರವಾದ ಒಂದಾನೊಂದು ರಾತ್ರಿಯಲ್ಲಿ, ಅವ್ಯಕ್ತಮಧುರವಾದ ವೇಣುಗಾನವನ್ನಾರಂಭಿಸಿ, ಅದರಿಂದ ಗೋಪಸ್ತ್ರೀಯರೆಲ್ಲರನ್ನೂ ಮೋಹಗೊಳಿಸಿ, ಅವರೊಡನೆ ಆಟವಾಡುತಿದ್ದನು. ಶ್ರೀಕೃಷ್ಣನು ನಡೆಸಿದ ಈದಿವ್ಯಚೇಷ್ಟಿತಗಳೆಲ್ಲವನ್ನೂ ನಾನು ಹೇಗೆ ತಾನೇ ಮರೆಯಲಿ!" ಎಂದನು. ಇದು ಎರಡನೆಯ ಅಧ್ಯಾಯವು

———

{ ಶ್ರೀಕೃಷ್ಣನು ಮಥುರೆಯಲ್ಲಿ ನಡೆಸಿದ ಕಂಸವಧೆ ಮೇ ಮೊದಲಾದ ಚರಿತ್ರೆಗಳು. }

"ಓ, ವಿದುರಾ! ಕೃಷ್ಣನು ನಂದಗೋಕುಲದಲ್ಲಿ ನಡೆಸಿದ ಸಂಗತಿಗಳನ್ನು ಸಂಗ್ರಹವಾಗಿ ತಿಳಿಸಿದೆನಷ್ಟೆ? ಆದರಿಂದಾಚೆಗೆ ಮಥುರೆಯಲ್ಲಿಯೂ, ದ್ವಾರಕೆಯಲ್ಲಿಯೂ ಆತನು ನಡೆಸಿದ ದಿವ್ಯಚೇಷ್ಟೆಗಳನ್ನೂ ಸೂಕ್ಷ್ಮವಾಗಿ ತಿಳಿಸುವೆನು ಕೇಳು! ಹೀಗೆ ಕೃಷ್ಣನು ನಂದಗೋಕುಲದಲ್ಲಿ ಸ್ವಲ್ಪಕಾಲ ಇದ್ದಮೇಲೆ ವಿಹರಿಸುತಿದ್ದಾಗ, ಅತ್ತಲಾಗಿ ಮಥುರಾಪುರಿಯಲ್ಲಿ ತನ್ನ ತಾಯಿತಂದೆಗಳಾದ ದೇವಕೀವಸುದೇವರು, ದುರಾತ್ಮನಾದ ಕಂಸನ ಸೆರೆಯಲ್ಲಿ ಸಿಕ್ಕಿ, ಬಹಳವಾಗಿ ಕಷ್ಟಪಡುತ್ತಿರುವ ಸಂಗತಿಯು ಅವನ ನೆನಪಿಗೆ ಬಂದಿತು. ಅವರಿಗೆ ಸೆರೆಯನ್ನು ತಪ್ಪಿಸಿ ಕ್ಷೇಮವನ್ನುಂಟುಮಾಡಬೇಕೆಂಬ ಕೋರಿಕೆಯಿಂದ, ಬಲರಾಮನೊಡಗೂಡಿ ಆಗಲೇ ಗೋಕುಲವನ್ನು ಬಿಟ್ಟು ಮಥುರಾಪುರಿಗೆ ಬಂದು ಸೇರಿದನು. ಅಲ್ಲಿ ಬಂದಾನೊಂದು ನೆವದಿಂದ ಕಂಸನ ಆರಮನೆಗೆ ಪ್ರವೇಶಿಸಿ ಸಿಂಹಾಸನದಲ್ಲಿ ಕುಳಿತಿದ್ದ ಕಂಸನನ್ನು ಕೆಳಕ್ಕೆಳೆದು, ಅವನನ್ನು ನೆಲದಲ್ಲಿ ತಿಕ್ಕಿ ಕೊಂದುಬಿಟ್ಟನು. ಆದರಿಂದಾಚೆಗೆ ಕೃಷ್ಣನು ಬಲರಾಮಸಮೇತನಾಗಿ ಕಾತಿಗೆ ಹೋಗಿ, ಅಲ್ಲಿ ಸಾಂದೀಪನಿಯೆಂಬ ಗುರುವಿನಲ್ಲಿ ಷಡಂಗಗಳಿಂದಕೂಡಿದ ನಾಲ್ಕುವೇದಗಳನ್ನೂ ಅಭ್ಯಾಸಮಾಡುವಂತೆ ನಟಿಸುತ್ತ, ಲೀಲಾಮಾತ್ರದಿಂದಲೇ ಅವೆಲ್ಲವನ್ನೂ ಗ್ರಹಿಸಿದನು. ಇಷ್ಟರಲ್ಲಿಯೇ ತನ್ನ ಉಪಾಧ್ಯಾಯನಾದ ಆ ಸಾಂದೀಪನಿಯ ಪುತ್ರನನ್ನು, ಸಮುದ್ರಮಧ್ಯದಲ್ಲಿದ್ದ ಪಂಚಜನನೆಂಬ ಅಸುರನೊಬ್ಬನು ನುಂಗಿಬಿಡಲು, ಈ ಕೃಷ್ಣನು ಆ ಅಸುರನನ್ನು ಕೊಂದು, ಅವನ ಹೊಟ್ಟೆಯನ್ನು ಭೇದಿಸಿ, ಅಲ್ಲಿ ಮೃತನಾಗಿದ್ದ ಗುರುಕುಮಾರನನ್ನು ಬದುಕಿಸಿ ಕರೆತಂದು, ಆ ಪುತ್ರನನ್ನೇ ಗುರುದಕ್ಷಿಣೆಯಾಗಿ ಸಮರ್ಪಿಸಿದನು. ಆದರಿಂದಾಚೆಗೆ ಕೃಷ್ಣನು ರುಕ್ಮಿಣೀದೇವಿಯ ಪ್ರಾರ್ಥನೆಯಿಂದ ರಥವನ್ನೇರಿ ಹೊರಟು, ಅವಳ ವಿವಾಹಕ್ಕಾಗಿ ರುಕ್ಮಿಯಿಂದ ಕರೆಸಲ್ಪಟ್ಟಿದ್ದ ಗರ್ವಾಂಧರಾದ ರಾಜರೆಲ್ಲರನ್ನೂ ಲೀಲೆಯಿಂದಲೇ ತಿರಸ್ಕರಿಸಿ, ಗಾಂಧರ್ವವಿವಾಹದಿಂದ ಅವಳನ್ನು ಕೈಹಿಡಿದು ದ್ವಾರಕೆಗೆ ಕರೆತಂದನು. ಮತ್ತೊಮ್ಮೆ ನಗ್ನಜಿತ್ತಿಂಬವನು, ತನ್ನಲ್ಲಿ ಬಲದಿಂದ ಕೊಬ್ಬಿ ಭಯಂಕರಗಳಾಗಿದ್ದ ಏಳು ಮಹಾವೃಷ

ಭಗಳಿಗೆ (ಗೂಳಿಗಳಿಗೆ) ಮೂಗುದಾರವನ್ನು ಬೀರಿ ಅವುಗಳ ಕೊಬ್ಬನ್ನಡಗಿಸಿ ಸ್ವಾಧೀನಪಡಿಸಿಕೊಂಡವರಿಗೆ ತನ್ನ ಮಗಳನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದ್ದನು. ಇದನ್ನು ಕೇಳಿ ಕೃಷ್ಣನು, ಅವುಗಳನ್ನು ಲೀಲಾಮಾತ್ರದಿಂದ ಸ್ವಾಧೀನಪಡಿಸಿ ಆ ರಾಜಕುಮಾರಿಯನ್ನೂ ವರಿಸಿದನು.ಈ ಬಲಾತಿಶಯವನ್ನು ನೋಡಿ ಸಹಿಸಲಾರದೆ ತನ್ನನ್ನಿದಿರಿಸುವುದಕ್ಕಾಗಿ ಬಂದ ಅನೇಕ ದುಷ್ಟರಾಜರನ್ನೂ ನಿಮಿಷಮಾತ್ರದಲ್ಲಿ ಜಯಿಸಿದನು. ಮತ್ತು ಆ ಕೃಷ್ಣನು ತಾನೇ ಸರ್ವಸ್ವತಂತ್ರನಾಗಿ ಮತ್ತೊಬ್ಬರಿಗೆ ಅಧೀನನಲ್ಲದಿದ್ದರೂ, ಸ್ತ್ರೀಮೋಹ ಪರವಶಾದ ಅಲ್ಪಜನರಂತೆ, ಸತ್ಯಭಾಮೆಯ ಕೋರಿಕೆಯನ್ನು ಈಡೇರಿಸ ಬೇಕೆಂಬ ಪ್ರಯತ್ನದಿಂದ, ಸ್ವರ್ಗಲೋಕದಲ್ಲಿದ್ದ ಪಾರಿಜಾತವೃಕ್ಷವನ್ನೇ ಕಿತ್ತು ತಂದು ಆ ಸತ್ಯಭಾಮೆಯ ಮುಂಪೆ ಇರಿಸಿದನು. ಈ ಪಾರಿಜಾತವೃಕ್ಷಕ್ಕಾಗಿ ವಜ್ರಧಾರಿಯಾದ ದೇವೇಂದ್ರನೂಕೂಡ, ತನ್ನ ಅಂತಃಪುರಸ್ತ್ರೀಯರಿಂದ ಪ್ರೇರಿತನಾಗಿ, ಅನೇಕದೇವಸೈನ್ಯಗಳೊಡನೆ ಕೋಪದಿಂದ ಹೊರಟು, ಹಿಂದುಮುಂದುತಿಳಿಯದೆ ಕೃಷ್ಣನನ್ನಿದಿರಿಸಿ ಯುದ್ಧಕ್ಕೆಸಿಂತನು. ಹೀಗೆ ಸ್ತ್ರೀಯರಲ್ಲಿ ಮೋಹಪರವಶನಾಗಿ, ಅವರ ಕೈಯಾಟದ ಬೊಂಬೆಯಂತೆ ಆಡುತಿದ್ದ ದೇವೇಂದ್ರನು, ಸಮಸ್ತಲೋಕವೂ ಆ ಕೃಷ್ಣನಿಗೆ ಅಧೀನವೆಂಬುದನ್ನು ತಿಳಿಯದೆ, ಐಶ್ವರ್ಯಮದದಿಂದ, ಆ ಸ್ವರ್ಗದಲ್ಲಿರುವ ಸಮಸ್ತ ವಸ್ತುಗಳಮೇಲೆಯೂ ತನಗೆ ಮಾತ್ರವೇ ಅಧಿಕಾರವೆಂದೂ, ತಾನೇ ಸ್ವತಂತ್ರನೆಂದೂ ಭ್ರಮೆಗೊಂಡಿದ್ದನು. ತನಗೆ ಯಾವುದರ ಮೇಲೆಯೂ ಎಷ್ಟು ಮಾತ್ರವೂ ಅಧಿಕಾರವಿಲ್ಲವೆಂಬುದನ್ನೂ, ಯಾವವಿಧದಲ್ಲಿಯೂ ತಾನು ಸ್ವತಂತ್ರನಲ್ಲವೆಂಬುದನ್ನೂ, ಆ ಇಂದ್ರನು ಸ್ವಲ್ಪಮಾತ್ರವೂ ಯೋಚಿಸಲಿಲ್ಲ. ಸರ್ವೇಶ್ವರನ ಸ್ವತ್ತನ್ನು ತನ್ನದೆಂದು ಭಾವಿಸಿದ ಅಜ್ಞಾನಾಂಧನಾದ ಆ ಇಂದ್ರನು ಯುದ್ಧಕ್ಕೆ ನಿಂತೊಡನೆ, ಕೃಷ್ಣನು ನಿಮಿಷಮಾತ್ರದಲ್ಲಿ ಅವನನ್ನು ಸಮಸ್ತಪರಿವಾರಗಳೊಡನೆ ಸೋಲಿಸಿ, ಪಾರಿಜಾತವೃಕ್ಷವನ್ನು ತಂದುಬಿಟ್ಟನು.!ಇದಲ್ಲದೆ ಕೃಷ್ಣನು ತನ್ನ ಆಕೃತಿಯಿಂದಲೇ ಆಕಾಶವನ್ನಳೆಯುವಂತೆ ಅದ್ಭುತಾಕಾರದಿಂದಿದ್ದ ನರಕನೆಂಬ ಅಸುರನನ್ನು, ಯುದ್ಧರಂಗದಲ್ಲಿ ತನ್ನ ಚಕ್ರಾಯುಧದಿಂದ ಕ್ಷಣಮಾತ್ರದಲ್ಲಿ ಛೇದಿಸಿಬಿಟ್ಟ

ನು. ಇದನ್ನು ನೋಡಿ ಭೂದೇವಿಯು, ತನ್ನ ಪುತ್ರನಾದ ಆ ನರಕನ ಸಾವಿ
ಗಾಗಿ ದುಃಖಿಸುತ್ತ ಕೃಷ್ಣನನ್ನು ಪ್ರಾರ್ಥಿಸಲು, ಆ ನರಕಾಸುರನ
ಪುತ್ರನನ್ನೇ ಕರೆತಂದು, ಅವನ ತಂದೆಯ ರಾಜ್ಯದಲ್ಲಿ ಅಭಿಷೇಕವ
ನ್ನು ನಡೆಸಿದನು.ಮತ್ತು ಆ ನರಕಾಸುರನು ಹಿಂದೆ ತನ್ನ ದಿಗ್ವಿಜಯಕಾಲದ
ಲ್ಲಿ ನಾನಾರಾಜ್ಯಗಳಿಂದ ಸೆರೆಹಿಡಿದು ತಂದಿದ್ದ ರಾಜಕನ್ಯೆಯರೂ, ದೇವ
ಕನ್ಯೆಯರೂ ಆಲ್ಲಿ ಕಷ್ಟಪಡುವುದನ್ನು ನೋಡಿ, ಅವರೆಲ್ಲರನ್ನೂ ಸೆರೆ
ಯಿಂದ ಬಿಡಿಸಿದನು. ಆ ಸುಂದರೀಮಣಿಯೆರೆಲ್ಲರೂ ತಮಗೆ ಆಪದ್ಬಂಧು
ವಾಗಿ ಬಂದೊದಗಿದ ಶ್ರೀಕೃಷ್ಣನ ಲೋಕಮೋಹನಾಕಾರವನ್ನು ನೋಡಿ
ಮೋಹಗೊಂಡು, ಲಜ್ಜೆಯಿಂದಲೂ, ಅನುರಾಗದಿಂದಲೂ ಕೂಡಿದ ದೃಷ್ಟಿ
ಗಳಿಂದ ಆತನನ್ನು ತಮತಮಗೆ ಪತಿಯೆನ್ನಾಗಿ ಬಯಸಿದರು. ಆಗ
ಕೃಷ್ಣನು ಅವರೆಲ್ಲರ ಕೋರಿಕೆಯನ್ನೂ ಏಕಕಾಲದಲ್ಲಿಯೇ ಈಡೇರಿಸಬೇ
ಕೆಂಬ ಉದ್ದೇಶದಿಂದ,ತಾನೂ ಆ ಸ್ತ್ರೀಯರ ಸಂಖ್ಯೆಗೆ ತಕ್ಕಂತೆ ಅನೇಕರೂ
ಪಗಳನ್ನು ಧರಿಸಿ, ಎಲ್ಲರನ್ನೂ ತನ್ನ ಭಾರ್ಯೆಯರನ್ನಾಗಿ ಸ್ವೀಕರಿಸಿ, ಆದರಿಸಿದ
ನು. ಒಬ್ಬೊಬ್ಬರಿಗೂ ತನ್ನ ಸಂಕಲ್ಪದಿಂದಲೇ ಬೇರೆಬೇರೆ ಅರಮನೆಗಳನ್ನೂ
ನಿರ್ಮಿಸಿಕೊಟ್ಟನು. ಅವರೆಲ್ಲರಿಗೂ ಮನಸ್ಸಂತೋಷವಾಗುವಂತೆ ಆಗಾಗ
ತನ್ನ ಸಹವಾಸಸೌಖ್ಯವನ್ನೂ ತೋರಿಸುತಿದ್ದನು. ಆದರಿಂದಾಜೆಗೆ ಸ್ವಲ್ಪದಿ
ನಗಳಲ್ಲಿಯೇ ಪರಮಾತ್ಮರೂಪಿಯಾದ ಆ ಕೃಷ್ಣನು, ತನಗಧೀನವಾಗಿರುವ
ಪ್ರಕೃತಿತತ್ವದ ಬೆಳವಳಿಕೆಯು ಈ ವಿಧವೆಂಬುದನ್ನು ಅವರೆಲ್ಲರಿಗೂ ತೋರಿ
ಸಿ ಕೊಡಬೇಕೆಂಬ ಉದ್ದೇಶದಿಂದ, ಒಬ್ಬೊಬ್ಬ ಭಾರ್ಯೆಯಲ್ಲಿಯೂ ತನಗೆ ಸ
ಮಾನರಾದ ಪುತ್ರರನ್ನು ಪಡೆದನು. ಮತ್ತೊಮ್ಮೆ ಕಾಲಯವನ ಜರಾಸಂ
ಧರೇ ಮೊದಲಾದ ಕ್ಷತ್ರಿಯರು, ಅನೇಕಸೈನ್ಯಗಳೊಡನೆ ಬಂದು ಆಗಾಗ
ತನ್ನ ಪಟ್ಟಣವನ್ನು ಮುತ್ತುತ್ತಿರಲು, ಅವರಲ್ಲಿ ಕೆಲವರನ್ನು ತನ್ನ ಕೈಯಿಂ
ದ ತಾನೇ ಸಂಹರಿಸಿದನು. ಕೆಲಕೆಲವುಕಾಲಗಳಲ್ಲಿ ತನ್ನ ದಿವ್ಯತೇಜಸ್ಸನ್ನೇ
ಭೀಮಾರ್ಜುನಾದಿಗಳಲ್ಲಿ ಆರೋಪಿಸಿ, ಜರಾಸಂಧಾದಿಗಳನ್ನು ಅವರ
ಕೈಯಿಂದಲೂ ಸಂಹರಿಸಿದನು. ಶಂಬರ, ದ್ವಿವಿದ,ಮೊದಲಾದವರನ್ನು ಬಲ
ರಾಮನಿಂದ ಕೊಲ್ಲಿಸಿದನು.ದಂತವಕ್ತ್ರ,ಬಾಣ,ಪಲ್ವಲ,ಕೇತಿ ಮೊದಲಾದ

ಬೇರೆಕೆಲವರನ್ನು ತನ್ನ ಕೈಯಿಂದಲೇ ವಧಿಸಿದನು. ಆಮೇಲೆ ಈ ಮಹಾತ್ಮನು, ಭರತಕುಲದಲ್ಲಿ ಅಣ್ಣ ತಮ್ಮಂದಿರ ನುಕ್ಕಳಾದ ಕೌರವಪಾಂಡವರಿಬ್ಬರೂ ರಾಜ್ಯದಲ್ಲಿ ತಮ್ಮತಮ್ಮ ದಾಯಭಾಗಕ್ಕಾಗಿ ಹೋರಾಡುವುದಕ್ಕೆ ತೊಡಗಿದುವುದನ್ನೂ, ಆ ಉಭಯಪಕ್ಷಗಳಿಗೂ ಅನೇಕರಾಜರು ತಮ್ಮತಮ್ಮ ದೊಡ್ಡ ಸೈನ್ಯಗಳೊಡನೆ ಸಹಾಯಕ್ಕೆ ನಿಂತಿರುವುದನ್ನೂ ನೋಡಿ, ಆ ದುಷ್ಟ ರಾಜರನ್ನಡಗಿಸಿ ಭೂಭಾರವನ್ನು ತಗ್ಗಿಸುವುದಕ್ಕೆ ಇದೇತಕ್ಕ ಸಮಯವೆಂದು ತಿಳಿದು, ತಾನೂ ಪಾಂಡವರ ಪಕ್ಷವನ್ನು ಹಿಡಿದು, ಆ ಯುದ್ಧದಲ್ಲಿ ಒಬ್ಬರಿಂದೊಬ್ಬರನ್ನು ಕೊಲ್ಲಿಸಿದನು. ಕರ್ಣ, ದುಶ್ಶಾಸನ, ಶಕುನಿ, ವಿಕರ್ಣಾದಿಗಳೆಲ್ಲರೂ ಬೇರೆಬೇರೆ ಉಪಾಯಗಳಿಂದ ಸಂಹೃತರಾದರು. ಕರ್ಣಾದಿಗಳ ದುರ್ಬೋಧನೆಗೊಳಪಟ್ಟು ಬುದ್ಧಿಹೀನನಾಗಿ ಪ್ರವರ್ತಿಸಿದ ದುರ್ಯೋಧನನ ಐಶ್ವರ್ಯವೂ, ಆಯುಸ್ಸೂ ನಾಶಹೊಂದಿತು. ಕೊನೆಗೆ ಅವನೂ ತೊಡೆಮುರಿದು ರಣರಂಗದಲ್ಲಿ ಮಲಗಿಬಿಟ್ಟನು. ಈ ವಿಧವಾಗಿ ಹದಿನೆಂಟಕ್ಷೋಹಿಣೀಸೈನ್ಯಗಳೂ ಕುರುಕ್ಷೇತ್ರದಲ್ಲಿ ಬಿದ್ದು ಸತ್ತಿರುವುದನ್ನು ನೋಡಿಯೂ, ಈ ಭೂಭಾರ ಪರಿಹಾರದ ವಿಷಯದಲ್ಲಿ ಕೃಷ್ಣನ ಮನಸ್ಸಿಗೆ ತೃಪ್ತಿಯಿಲ್ಲದೆಹೋಯಿತು. ತಾನು ಇಷ್ಟುಸೈನ್ಯಗಳನ್ನು ಕೊಲ್ಲಿಸಿದರೂ, ದುರ್ಜಯವಾದ ಯಾದವಬಲವೊಂದುಮಾತ್ರ ಇನ್ನೂ ಉಳಿದಿದ್ದುದರಿಂದ, ಮದಾಂಧರಾದ ಆ ಯಾದವರನ್ನು ಕೊಲ್ಲಿಸಿದಹೊರತು ಭೂಭಾರವನ್ನು ಸಂಪೂರ್ಣವಾಗಿ ನೀಗಿಸಿದಂತಾಗುವುದಿಲ್ಲವೆಂದೆಣಿಸಿ, ಮುಂದೆ ಅದಕ್ಕೆ ತಕ್ಕ ಉಪಾಯವನ್ನೂ ತನ್ನ ಮನಸ್ಸಿನಲ್ಲಿ ಸಂಕಲ್ಪಿಸಿಬಿಟ್ಟನು. ಯಾದವರೆಲ್ಲರೂ ಮದ್ಯಪಾನದಿಂದ ಮೈಮರೆತಿರುವಾಗ, ಅವರಲ್ಲಿಯೇ ಒಬ್ಬರಿಂದೊಬ್ಬರನ್ನು ಕೊಲ್ಲಿಸುವುದಾಗಿ ನಿಶ್ಚಯಿಸಿಕೊಂಡನು. ಇತ್ತಲಾಗಿ ದುಷ್ಟಕ್ಷತ್ರಿಯರೆಲ್ಲರೂ ಅಡಗಿ ರಾಜ್ಯವು ನಿಷ್ಕಂಟಕವಾದಮೇಲೆ, ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಮಾಡಿ ಆ ತನಿಗೆ ಕ್ರಮವಾಗಿ ವರ್ಣಾಶ್ರಮಧರ್ಮಗಳನ್ನೂ, ರಾಜನೀತಿಗಳನ್ನೂ ಉಪದೇಶಿಸಿದನು. ಅದರಿಂದಾಜೆಗೆ ಅಶ್ವತ್ಥಾಮನ ಬಾಣದುರಿಯಿಂದ ಉತ್ತರೆಯ ಗರ್ಭದಲ್ಲಿದ್ದ ಪರೀಕ್ಷಿತ್ತೆಂಬ ಶಿಶುವು ಬೆಂದುಹೋಗುವ ಸ್ಥಿತಿಯಲ್ಲಿದ್ದುದನ್ನು ತಿಳಿದು, ತನ್ನ ಸುದರ್ಶನಚಕ್ರದ ಶಕ್ತಿಯಿಂದ, ಆ ಬ್ರಹ್ಮಶಿರೋ

ಸ್ತ್ರವನ್ನಡಗಿಸಿ, ಆ ಗರ್ಭತೇಜವನ್ನು ರಕ್ಷಿಸಿ,ಪೂರುವಂಶವನ್ನು ವ್ಯಾಪ್ತಮಾಡಿದನು. ಆದರಿಂದಾಚೆಗೆ ಧರ್ಮರಾಜನಿಂದ ಮೂರಾವರ್ತಿ ಅಶ್ವಮೇಧಯಾಗಗಳನ್ನು ಮಾಡಿಸಿದನು. ಹೀಗೆ ಧರ್ಮರಾಜನು ಕೃಷ್ಣನುಗ್ರಹದಿಂದ ಯಾಗಗಳನ್ನು ಪೂರೈಸಿದಮೇಲೆ, ಕೃಷ್ಣನ ಪಾದಾರವಿಂದಗಳನ್ನು ಸೇವಿಸುತ್ತ, ತನ್ನ ತಮ್ಮಂದಿರೊಡನೆ ಸುಖವಾಗಿ ರಾಜ್ಯವನ್ನು ಪಾಲಿಸುತಿದ್ದನು. ಸರ್ವಾತ್ಮಕನಾದ ಶ್ರೀಕೃಷ್ಣನೂಕೂಡ ಸಾಮಾನ್ಯಮನುಷ್ಯನಂತೆ ಶಾಸ್ತ್ರೋಕ್ತಸ್ವಾರ್ಥವಿಧರ್ಮಗಳಲ್ಲಿ ನಿರತನಾಗಿ, ಸಂಸಾರಸುಖವನ್ನನುಭವಿಸುತಿದ್ದನು, ಈ ಲೋಕದಲ್ಲಿ ಕೆಲವರನ್ನು ತನ್ನ ಕೃಪಾಕಟಾಕ್ಷದಿಂದಲೂ, ಬೇರೆ ಕೆಲವರನ್ನು ಅಮೃತಸಮಾನಗಳಾದ ತನ್ನ ವಾಕ್ಯಗಳಿಂದಲೂ,ಮತ್ತೆ ಕೆಲವರನ್ನು ತನ್ನ ಶುದ್ಧವಾದ ನಡತೆಯಿಂದಲೂ,ಇನ್ನು ಕೆಲವರನ್ನು ಲಕ್ಷ್ಮಿಗೆ ನಿತ್ಯನಿವಾಸವಾದ ತನ್ನ ಶರೀರದಿಂದಲೂ ಸಂತೋಷಪಡಿಸುತ್ತ,ಇವರೆಲ್ಲರಿಗಿಂತಲೂ ವಿಶೇಷವಾಗಿ ಯಾದವರನ್ನಾನಂದಪಡಿಸುತ್ತ, ರಾತ್ರಿಕಾಲಗಳಲ್ಲಿ ತನ್ನ ಭಾರ್ಯಾಮಣಿಗಳನ್ನು ಪಿನೋದಗೊಳಿಸುತ್ತ, ಅನೇಕಸಂವತ್ಸರಗಳನ್ನು ಕಳೆದು, ಕೊನೆಕೊನೆಗೆ ಈ ಪ್ರಪಂಚವ್ಯಾಪಾರಗಳಲ್ಲಿ ಅನಾದರವನ್ನು ತೋರಿಸುತ್ತಬಂದನು. ಏದುರಾ ! ಯೋಗಫಲಪ್ರದನಾದ ಭಗವಂತನಲ್ಲಿ ಭಕ್ತಿಯೆನ್ನಿಟ್ಟಮಾತ್ರದಿಂದಲೇ, ಅಂತವರಿಗೆ ಸಂಸಾರದಲ್ಲಿ ಜಿಹಾಸೆಹುಟ್ಟುತ್ತಿರುವಾಗ,ಸಂಸಾರತಾರಕನಾದ ಭಗವಂತನು ಅದರಲ್ಲಿ ಜಿಹಾಸೆಯನ್ನು ತೋರಿಸುವುದೇನು ಆಶ್ಚರ್ಯವೆ? ಈ ಸಂಗತಿಯು ಹಾಗಿರಲಿ! ಭಗವಂತನಾದ ಕೃಷ್ಣನು ತನ್ನ ಮನಸ್ಸಿನಲ್ಲಿ ಮೊದಲೇ ಸಂಕಲ್ಪಿಸಿದ್ದ ಈ ಯಾದವಕುಲನಾಶಕ್ಕೆ ಮೂಲವಾಗಿ ಒಂದಾನೊಂದು ಶಾಪವೂ ಬಂದೊದಗಿತು. ಆ ವೃತ್ತಾಂತವನ್ನೂ ತಿಳಿಸುವೆನು ಕೇಳು. ಒಮ್ಮೆ ದ್ವಾರಕೆಯಲ್ಲಿ ಯಾದವಕುಮಾರರೆಲ್ಲರೂ ಆಟವಾಡುತ್ತ, ದಾರಿಯಲ್ಲಿ ಹೋಗುತಿದ್ದ ಕೆಲವು ಮಹರ್ಷಿಗಳನ್ನು ಪರಿಹಾಸ್ಯಮಾಡಲು, ಮಹರ್ಷಿಗಳು ಅದನ್ನು ನೋಡಿ ಸಹಿಸಲಾರದೆ ಕೋಪಗೊಂಡು ''ನಿಮ್ಮವಂಶವೆಲ್ಲವೂ ಶೀಘ್ರದಲ್ಲಿಯೇ ನಿರ್ನಾಮವಾಗಲಿ.'' ಎಂದು ಶಪಿಸಿದರು. ಈ ಶಾಪವಾಕ್ಯವು ಹೊರಟ ಕೆಲವು ತಿಂಗಳೊಳಗಾಗಿಯೇ, ಯಾದವರೆಲ್ಲರೂ ಒಂದಾಗಿ ಸೇರಿ, ಅತ್ಯಾನಂದದಿಂ

ದ ಪ್ರಭಾಸತೀರ್ಥಕ್ಕೆ ಹೋಗಿ, 'ಅಲ್ಲಿ ಸ್ನಾನಮಾಡಿ ದೇವಪಿತೃತರ್ಪಣಗಳೆ ಲ್ಲವನ್ನೂ ನಡೆಸುತಿದ್ದರು. ಉತ್ತಮರಾದ ಬ್ರಾಹ್ಮಣರನ್ನು ಕರೆಸಿ ಯಥೇ ಷ್ಟವಾಗಿ ಕೆಲವರಿಗೆ ಸ್ವರ್ಣದಾನವನ್ನೂ, ಕೆಲವರಿಗೆ ಕನ್ಯಾದಾನವನ್ನೂ ಮಾಡಿ ಈ ವಿಧವಾದ ಷೋಡಶಮಹಾದಾನಗಳಿಂದಲೂ, ಅವರನ್ನು ತೃಪ್ತಿಪಡಿಸಿದರು. ಅಲ್ಲಿ ಬಂದಿದ್ದ ಬ್ರಾಹ್ಮಣರೆಲ್ಲರಿಗೂ ಷಡ್ರಸೋಪೇತ ಗಳಾದ ಭೋಜನಪದಾರ್ಥಗಳನ್ನಿಟ್ಟು, ತಾವು ನಡೆಸಿದ ದಾನಭೋಜನಾದಿಗಳೆಲ್ಲವ ನ್ನೂ ಭಗವತ್ಪ್ರೀತಿಗಾಗಿ ಧಾರೆಯೆನ್ನೆರೆದು, ಅಲ್ಲಿದ್ದ ವಿಪ್ರೋತ್ತಮರೆಲ್ಲರಿ ಗೂ ಸಾಷ್ಟಾಂಗಪ್ರಣಾಮವನ್ನು ಮಾಡಿದರು. ಇಲ್ಲಿಗೆ ಮೂರನೆಯ ಅ ಧ್ಯಾಯವು.

ವಿದುರನು ಬಂಧುಮರಣವನ್ನು ಕೇಳಿ ದುಃಖಿಸುತ್ತ ಆತ್ಮಜ್ಞಾನವನ್ನು ಪಡೆಯುವುದಕ್ಕಾಗಿ ಮೈತ್ರೇಯರ ಬಳಿಗೆ ಹೋಗುವಂತೆ ಉದ್ಧವನಿಂದ ಪ್ರೇರಿತನಾಗಿ, ಆಮಹರ್ಷಿಯಬಳಿಗೆ ಬಂದುದು.

"ವಿದುರಾ! ಕೇಳು. ಆಮೇಲೆ ಯಾದವರು ಆ ಬ್ರಾಹ್ಮಣರಿಂದ ಅನುಮತಿಯನ್ನು ಪಡೆದು, ತಮ್ಮ ಭೋಜನಾದಿಗಳನ್ನು ತೀರಿಸಿಕೊಂಡು ಕೊನೆಗೆ ಮದ್ಯಪಾನವನ್ನಾರಂಭಿಸಿದರು. ಮೇಲೆಮೇಲೆ ಮದ್ಯವನ್ನು ಕುಡಿದು, ಅದರ ಮದದಿಂದ ಮೈತಿಳಿಯದೆ ವಿವೇಕಶೂನ್ಯರಾಗಿ, ಒಬ್ಬರನ್ನೊಬ್ಬರು ಅವಾಚ್ಯವಾದ ಮಾತುಗಳಿಂದ ಬೈಯುವುದಕ್ಕೆ ತೊಡಗಿದರು. ಇದೇ ನೆವದಿಂದ ಅವರಿಗೆ ಮೇಲೆಮೇಲೆ ಕೋಪವು ಹೆಚ್ಚಿ, ಮೈತಿಳಿಯದೆ ಹೊಡೆದಾಡುವುದಕ್ಕೂ ಆರಂಭಿಸಿದರು. ಮದ್ಯಮದದಿಂದುಂಟಾದ ದೋಷದಿಂದ ಪ್ರಜ್ಞೆಯಿಲ್ಲದೆ, ಆ ಸರೋವರತೀರದಲ್ಲಿ ಸಿಕ್ಕಿದ ಹೊಡಿಕೆಗಳನ್ನೂ, ನೊದೆ ಹುಲ್ಲುಗಳನ್ನೂ ಕಿತ್ತುಕೊಂಡು, ಸೂರ್ಯಾಸ್ತಮಯಕಾಲಗಳಲ್ಲಿ ಪ್ರಾಣದ ಮೇಲೆಯೂ ದೃಷ್ಟಿಯಿಲ್ಲದೆ ಬಡಿದಾಡುತ್ತಿರಲು, ಬಿದಿರುಗಳ ಸಂಘರ್ಷಣದಿಂದುಂಟಾದ ಬೆಂಕಿಯು ವನವನ್ನು ಸುಡುವಂತೆ, ಆ ಹೊಡೆದಾಟದಿಂದ ಯಾದವರೆಲ್ಲರೂ ಮರಣವನ್ನು ಹೊಂದಿದರು. ಅನಂತರದಲ್ಲಿ ಶ್ರೀಕೃಷ್ಣನು, ಮೊದಲೇ ತಾನು ಸಂಕಲ್ಪಿಸಿದ್ದಪ್ರಕಾರದಲ್ಲಿ ಯಾದವರೆಲ್ಲರೂ ನಾಶ ಹೊಂದಿದುದನ್ನು ನೋಡಿ, ಬಂಧುಮರಣಕ್ಕಾಗಿ ಸರಸ್ವತೀನದಿಯಲ್ಲಿ ಸ್ನಾನ ಮಾಡಿ, ಆ ನದೀತೀರದಲ್ಲಿದ್ದ ಒಂದಾನೊಂದು ಅರಳಿಯ ಮರದ ನೆರಳಲ್ಲಿ ಪ್ರವೇಶಿಸಿದನು. ಮರೆಹೊಕ್ಕವರನ್ನು ಕಾಪಾಡುವುದರಲ್ಲಿ ಬದ್ಧದೀಕ್ಷನಾಗಿಯೂ, ಲೋಕಕ್ಷೇಮಕ್ಕಾಗಿ ತನ್ನ ಯಾದವಕುಲವನ್ನೇ ಸಂಹರಿಸಬೇಕೆಂದು ಸಂಕಲ್ಪಿಸಿದವನಾಗಿಯೂ ಇದ್ದ ಭಗವಂತನು, ಆಗ ಸಮೀಪದಲ್ಲಿದ್ದ ನನ್ನನ್ನು ನೋಡಿ," ಉದ್ಧವಾ! "ಈಗಲೇ ನೀನು ಬದರಿಕಾಶ್ರಮಕ್ಕೆ ಹೊರಟು ಹೋಗು," ಎಂದು ನಿಯಮಿಸಿದನು. ಆ ಶ್ರೀಕೃಷ್ಣನ ಉದ್ದೇಶವೇನೆಂಬುದನ್ನು ನಾನು ಜೆನ್ನಾಗಿ ತಿಳಿದವನಾಗಿದ್ದರೂಕೂಡ, ಸರ್ವವಿಧದಲ್ಲಿಯೂ ಪ್ರಭುವಾದ ಆ ಭಗವಂತನ ಪಾದಾರವಿಂದಗಳನ್ನು ಬಿ

ಟ್ಟು ಹೋಗಲಾರದೆ, ನಾನೂ ಅವನನ್ನೇ ಹಿಂಬಾಲಿಸಿ ಹೋಗುತಿದ್ದೆನು. ಹೀಗೆ ನಾನು ಅನವರತವೂ ಆತನ ಪಾದಗಳನ್ನು ಧ್ಯಾನಿಸುತ್ತ, ಆತನನ್ನೇ ಹಿಂಬಾಲಿಸುತ್ತ, ಸರ್ವಲೋಕಪ್ರಿಯನಾಗಿಯೂ, ತನಗೆ ತಾನೇ ಪ್ರಭುವಾಗಿಯೂ ಇರುವ ಆ ಕೃಷ್ಣನ ಚರ್ಯೆಗಳನ್ನು ನೋಡುತ್ತಬಂದೆನು. ನಾನು ನೋಡುತಿದ್ದಹಾಗೆಯೇ ಆಕೃಷ್ಣನು ಆ ಅಶ್ವತ್ಥವೃಕ್ಷದ ಕೆಳಗೆ ಬಂದು ನಿಂತನು. ನೀಲಮೇಘಶ್ಯಾಮಲವಾದ ದೇಹದಿಂದಲೂ, ಪ್ರಸನ್ನದೃಷ್ಟಿಗಳಿಂದಲೂ, ಪೀತಾಂಬರದಿಂದಲೂ, ಚತುರ್ಭುಜಗಳಿಂದಲೂ, ಶೋಭಿತನಾದ ಆ ಶ್ರೀಕೃಷ್ಣನು, ಕೋಮಲವಾದ ತನ್ನ ಬಲಗಾಲನ್ನು ಎಡದ ತೊಡೆಯ ಮೇಲೆ ಇರಿಸಿಕೊಂಡು, ಆ ಅಶ್ವತ್ಥವೃಕ್ಷದ ಮೂಲವನ್ನೊರಗಿ ತನ್ನಲ್ಲೆ ತಾನು ಏನನ್ನೋ ಆಲೋಚಿಸುತ್ತಿರುವನಂತೆ ಕುಳಿತನು. ಕರ್ಮಫಲಸಂಬಂಧವಿಲ್ಲದವನಾದುದರಿಂದ ಕರ್ಮಾಯತ್ತಗಳಾದ ಕೃಶತ್ವ, ಸ್ಥೂಲತ್ವ, ಆಧಿ, ವ್ಯಾಧಿ ಮೊದಲಾದ ದೋಷಗಳೊಂದೂ ಇಲ್ಲದ ಆ ಕೃಷ್ಣನು, ಹೀಗೆ ಚಿಂತಾಪರನಾಗಿ ಕುಳಿತಿರುವ ಸಮಯದಲ್ಲಿಯೇ, ನಾನೂ ಮೆಲ್ಲಗೆ ಅವನನ್ನು ಸಮೀಪಿಸಿ, ಆ ಮಹಾತ್ಮನ ಸನ್ನಿಧಿಯಲ್ಲಿ ಕುಳಿತಿದ್ದೆನು. ಈ ಸಮಯಕ್ಕೆ ಸರಿಯಾಗಿ ವ್ಯಾಸಮಹರ್ಷಿಗೆ ಪ್ರಿಯಮಿತ್ರನಾಗಿಯೂ, ಭಾಗವತೋತ್ತಮನಾಗಿಯೂ, ಕೃತಕೃತ್ಯನಾಗಿಯೂ ಇರುವ ಮೈತ್ರೇಯನುಹಾಮುನಿಯು, ಲೋಕಸಂಚಾರವನ್ನು ಮಾಡುತ್ತ, ಆಕಸ್ಮಾತ್ತಾಗಿ ಆ ಸ್ಥಳಕ್ಕೆ ಬಂದು ಸೇರಿದನು. ಆ ಮಹರ್ಷಿಯು ಅಲ್ಲಿಗೆ ಬಂದು, ಶ್ರೀಕೃಷ್ಣನನ್ನು ನೋಡಿದೊಡನೆ ಭಗವದ್ದರ್ಶನದಿಂದುಂಟಾದ ಪರಮಸಂತೋಷದಿಂದಲೂ,ಭಕ್ತಿಯಿಂದಲೂ, ಪರವಶನಾಗಿ, ತಲೆಯನ್ನು ಬಗ್ಗಿಸಿ, ಆ ಭಗವಂತನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ,ಆ ಶ್ರೀಕೃಷ್ಣನು ನುಡಿಯುವ ಮಾತುಗಳನ್ನು ಕೇಳುತ್ತಾ ನಿಂತಿದ್ದನು. ಆಗ ಶ್ರೀಕೃಷ್ಣನು ಪ್ರೇಮಪೂರ್ವಕವಾದ ದೃಷ್ಟಿಯಿಂದ ನನ್ನನ್ನು ನೋಡಿ ‘‘ಓ! ಉದ್ಧವಾ! ನಿನ್ನ ಮನಸ್ಸಿನ ಕೋರಿಕೆಯನ್ನು ನಾನು ಬಲ್ಲೆನು! ಪೂರ್ವಜನ್ಮದಲ್ಲಿ ವಸುವಾಗಿದ್ದ ನೀನು, ಆಗ ಇತರವಸುಗಳೊಡನೆಯೂ, ಲೋಕಕರ್ತರಾದ ಪ್ರಜಾಧಿಪತಿಗಳೊಡನೆಯೂ ಸೇರಿ,ಸತ್ರಯಾಗವೆಂಬ ಒಂದಾನೊಂದು ಯಾಗವನ್ನಾರಂಭಿಸಿದೆ.ಆಗನನ್ನಲ್ಲಿ ವಿಶೇಷಭಕ್ತಿಯುಳ್ಳವನಾದ

ನೀನು, ನನ್ನ ನಿವಾಸಸ್ಥಾನವಾದ ಉತ್ತಮಪದವನ್ನು ಹೊಂದಬೇಕೆಂಬ ಪ್ರಯತ್ನದಿಂದ ನನ್ನನ್ನಾರಾಧಿಸಿದೆ! ನನ್ನನ್ನು ಪಡೆಯಬೇಕೆಂಬ ಆ ಕೋರಿಕೆಯು ಬೇರೊಬ್ಬರಿಗೆ ದುರ್ಲಭವಾಗಿದ್ದರೂ, ನಿನ್ನಲ್ಲಿ ನನಗುಂಟಾಗಿರುವ ಪ್ರೇಮವಿಶೇಷದಿಂದ, ನಾನು ಅವಶ್ಯವಾಗಿ ನಿನಗೆ ಅದನ್ನು ಅನುಗ್ರಹಿಸುವೆನು. ಉದ್ಧವಾ! ನೀನು ನನ್ನ ಅನುಗ್ರಹಕ್ಕೆ ಪೂರ್ಣಪಾತ್ರನಾಗಿರುವುದರಿಂದ, ಇನ್ನುಮೇಲೆ ನಿನಗೆ ಪುನರ್ಜನ್ಮವಿಲ್ಲ! ಇದೇ ನಿನಗೆ ಕೊನೆಯ ಜನ್ಮವು! ಇದಲ್ಲದೆ ನಾನು ಈಗ ಮನುಷ್ಯಲೋಕನ್ನು ಬಿಟ್ಟು ನನ್ನ ನಿಜಲೋಕಕ್ಕೆ ಹೋಗುವುದಕ್ಕಾಗಿ, ಈ ಏಕಾಂತಸ್ಥಳಕ್ಕೆ ಬಂದು ಸೇರಿರುವೆನು. ಈಗಲೂ ನೀನು ನನ್ನನ್ನು ಹಿಂಬಾಲಿಸಿ ಬಂದು, ಈ ಸ್ಥಿತಿಯಲ್ಲಿ ನನ್ನ ದರ್ಶನವನ್ನು ಪಡೆದುದು ನಿನ್ನ ಭಾಗ್ಯವಲ್ಲದೆ ಬೇರೆಯಲ್ಲ. ನೀನು ಉತ್ಕೃಷ್ಟವಾದ ಭಕ್ತಿಯಿಂದ ನನ್ನನ್ನು ಸೇವಿಸಿದುದಕ್ಕಾಗಿ ನಿನ್ನ ಕರ್ಮಜಾಲವೆಲ್ಲವೂ ಇಂದಿಗೆ ನಶಿಸಿತು. ಇದಲ್ಲದೆ ಸೃಷ್ಟ್ಯಾರಂಭದಲ್ಲಿ ಜಗತ್ಸೃಷ್ಟಿಬ್ರಹ್ಮನು ನನ್ನ ನಾಭಿಕಮಲದಲ್ಲಿ ಕುಳಿತಿದ್ದಾಗ, ನಾನು ಆತನಿಗೆ ಜನನಮರಣಗಳನ್ನು ತಪ್ಪಿಸತಕ್ಕುದಾಗಿಯೂ, ಪರಮಾನಂದರೂಪವಾದ ಮೋಕ್ಷಸುಖವನ್ನು ಕೊಡುತಕ್ಕುದಾಗಿಯೂ ಇರುವ ನನ್ನ ತತ್ವವನ್ನು ಪದೇಶಿಸಿದೆನು. ಅದನ್ನೇ ಪಂಡಿತರು ಭಾಗವತವೆಂದು ಕರೆಯುವರು. ಆ ಭಾಗವತತತ್ವವನ್ನೇ ಈಗ ನಿನಗೂ ಉಪದೇಶಿಸಬೇಕೆಂದಿರುವೆನು" ಎಂದನು. ವಿದುರಾ! ಭಗವಂತನು ಅಮೃತಸಮಾನಗಳಾದ ಈ ಪ್ರಿಯವಾಕ್ಯಗಳನ್ನು ನುಡಿದೊಡನೆ, ನನ್ನ ದೇಹವೆಲ್ಲವೂ ರೋಮಾಂಚಿತವಾಯಿತು! ಅದುವರೆಗಿದ್ದ ದುಃಖವೆಲ್ಲವೂ ನೀಗಿತು! ಆ ಪರಮಪುರುಷನ ಅನುಗ್ರಹಕ್ಕೆ ಪಾತ್ರನಾದೆನೆಂಬ ಸಂತೋಷದಿಂದ ಪರವಶನಾಗಿದ್ದೆನು. ಆ ಮೇಲೆ ಬದ್ಧಾಂಜಲಿಯಾಗಿ ಆ ಭಗವಂತನ ಮುಂದೆ ನಿಂದು, ಹೀಗೆಂದು ಪ್ರಾರ್ಥಿಸಿದೆನು. "ಎಲೈ ದೇವದೇವನೆ! ನಿನ್ನ ಪಾದಾರವಿಂದಗಳನ್ನು ಸೇವಿಸಿದವರಿಗೆ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕುಪುರುಷಾರ್ಥಗಳಲ್ಲಿ ಯಾವುದುತಾನೇ ದುರ್ಲಭವು! ಓ! ಮಹಾಪ್ರಭೂ! ಹಾಗಿದ್ದರೂ ನಾನು ಆ ಪುರುಷಾರ್ಥಗಳಲ್ಲಿ ಯಾವುದನ್ನೂ ಸ್ವಲ್ಪಮಾತ್ರವೂ ಕೋರುವವನಲ್ಲ. ನಿನ್ನ ಪಾದಸೇವೆಯೊಂದರಲ್ಲಿಯೇ ಕುತೂಹಲವುಳ್ಳ ನನಗೆ ಬೇರೊಂದೂ

ರುಚಿಸುವುದಿಲ್ಲ ಓ ಮಹಾತ್ಮಾ ! ನಿನ್ನ ವಿಚಿತ್ರಚರ್ಯೆಗಳನ್ನು ನಾನೇನೆಂದು ಹೇಳಲಿ ! ಜನ್ಮರಹಿತನಾದ ನೀನು ಮನುಷ್ಯನಹಾಗೆ ಹುಟ್ಟುವುದೂ, ಕರ್ಮ ಸಂಬಂಧವಿಲ್ಲದ ನೀನು ಹಲವು ಕರ್ಮಗಳನ್ನಾಚರಿಸುವುದೂ, ಕಾಲಸ್ವರೂಪನಾದ ನೀನು ಮರಣಕ್ಕೆ ಹೆದರಿದವನಂತೆ ದ್ವಾರಕಾಪುರದಲ್ಲಿ ಅಡಗಿದ್ದುದೂ, ಭಯರಹಿತನಾದ ನೀನು ಕಾಲಯವನಾದಿಗಳಿಗೆ ಭಯಪಟ್ಟು ಓಡಿ ಹೋದುದೂ, ಆತ್ಮಾರಾಮನೆನಿಸಿಕೊಂಡು ತನ್ನಲ್ಲಿ ತಾನೇ ಆನಂದಿಸತಕ್ಕ ನೀನು, ಅನೇಕಸ್ತ್ರೀಯರೊಡಗೂಡಿ ಗೃಹಸ್ಥಾಶ್ರಮವನ್ನವಲಂಬಿಸಿ, ಸಂಸಾರಸೌಖ್ಯವನ್ನನುಭವಿಸುವುದೂ, ಇವೆಲ್ಲವೂ ಮಹಾಜ್ಞಾನಿಗಳ ಬುದ್ಧಿಯನ್ನಾದರೂ ಮರುಳುಗೊಳಿಸದೆ ಬಿಡಲಾರದು. ಕೃಷ್ಣ ! ಅದು ಹಾಗಿರಲಿ! ಇವೆಲ್ಲಕ್ಕಿಂತಲೂ ಆಶ್ಚರ್ಯವೇನೆಂದರೆ; ನೀನು ಯಾವುದಾದರೂ ಕಾರ್ಯಾಲೋಚನೆಯನ್ನು ಮಾಡುವಾಗ, ಮೊದಲು ನನ್ನನ್ನು ಕರೆಸಿ ನನ್ನೊಡನೆ ಮಂತ್ರಾಲೋಚನೆಯನ್ನು ನಡೆಸುತಿದ್ದವನಲ್ಲವೆ? ಎಂತಹ ವಿಷಯದಲ್ಲಿಯೂ ಮುಚ್ಚು ಮರೆಯಿಲ್ಲದುದಾಗಿಯೂ, ಕೊನೆಮೊದಲಿಲ್ಲದುದಾಗಿಯೂ ಇರುವ ಆತ್ಮಜ್ಞಾನವನ್ನೇ ಸ್ವರೂಪವಾಗಿ ಉಳ್ಳ ನೀನು, ಕಾರ್ಯನಿಶ್ಚಯದ ವಿಷಯದಲ್ಲಿ ನನ್ನನ್ನು ಕೇಳಿ ತಿಳಿಯಬೇಕಾದ ಅವಶ್ಯಕತೆಯೇನುಂಟು? ನೀನು ಸರ್ವಜ್ಞನಾಗಿದ್ದರೂ ಏನೂ ತಿಳಿಯದ ಮೂಢನಂತೆ ಆಗಾಗ ಕಾರ್ಯನಿಶ್ಚಯದ ವಿಷಯದಲ್ಲಿ ನನ್ನನ್ನು ಪ್ರಶ್ನೆಮಾಡುತಿದ್ದ ಆ ಮಾತುಗಳು, ನನ್ನ ಮನಸ್ಸನ್ನು ಭ್ರಮೆಗೊಳಿಸುತ್ತಿರುವುದು. ಓ ! ಮಹಾತ್ಮನೆ ! ನೀನು ಪೂರ್ವದಲ್ಲಿ ಬ್ರಹ್ಮನಿಗೆ ಯಾವ ಜ್ಞಾನವನ್ನುಪದೇಶಿಸಿದೆಯೋ, ಅದನ್ನು ಗ್ರಹಿಸುವುದಕ್ಕೆ ನಾನು ಅರ್ಹನಾಗಿದ್ದರೆ, ನನ್ನಲ್ಲಿ ಅನುಗ್ರಹವಿಟ್ಟು ಅವಶ್ಯವಾಗಿ ತಿಳಿಸಬೇಕು ! ಆ ಜ್ಞಾನವೇ ನನ್ನನ್ನು ಸಂಸಾರಸಾಗರದಿಂದ ದಾಟಿಸಿ ಮುಕ್ತಿಯನ್ನು ಹೊಂದಿಸಬೇಕಾಗಿರುವುದು !" ಎಂದು ಆ ಭಗವಂತನ ಮುಂದೆ ಅಂಜಲಿಹಸ್ತನಾಗಿ ನಿಂತು ಪ್ರಾರ್ಥಿಸಿದೆನು. ಹೀಗೆ ಭಕ್ತಿಯಿಂದ ಪ್ರಾರ್ಥಿಸುತ್ತಿರುವ ನನ್ನಲ್ಲಿ ಶ್ರೀಕೃಷ್ಣನು ಪೂರ್ಣಾನುಗ್ರಹವನ್ನಿಟ್ಟು, ಎಲ್ಲರಿಗೂ ಅತ್ಯವಶ್ಯವಾಗಿ ತಿಳಿಯಬೇಕಾದ ಆ ದಿವ್ಯಜ್ಞಾನವನ್ನೇ ಉಪದೇಶಿಸಿದನು. ಆ ಭಗವಂತನಿಂದ ನಾನು ತತ್ವಜ್ಞಾನವನ್ನು ಪಡೆದಮೇಲೆ, ಸರ್ವಲೋಕಪಾವನಗ

ಳಾದ ಆತನ ಪಾದಪದ್ಮಗಳಿಗೆ ನಮಸ್ಕರಿಸಿ, ಅವನಿಂದ ಅನುಜ್ಞೆಯನ್ನು ಪಡೆದು,ಬಾರಿಬಾರಿಗೂ ಅವನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಆತನ ವಿಯೋಗ ದುಃಖದಿಂದ ಕೊರಗುತ್ತ ಇತ್ತಲಾಗಿ ಹೊರಟುಬಂದೆನು. ಮೊದಲೇ ಭಗವಂತನು ನನ್ನನ್ನು ಕುರಿತು ಬದರಿಕಾಶ್ರಮಕ್ಕೆ ಹೋಗೆಂದು ಹೇಳಿದ್ದನಲ್ಲವೆ? ಅದರಂತೆಯೇ ಆ ಸ್ಥಾನವನ್ನು ಪ್ರೇತಿಸಿ ಹೊರಟುಬಂದೆನು. ಈಗಲೂ ಆಸ್ಥಳವನ್ನೇ ಉದ್ದೇತಿಸಿ ಹೋಗುತ್ತಿರುವೆನು. ವಿದುರಾ! ಈಗ ನನ್ನ ಮನಸ್ಸು ಒಂದು ಕಡೆಯಲ್ಲಿ ಆ ಭಗವಂತನನ್ನು ನೋಡಿ ಬಂದ ಮಹಾನಂದದಿಂದು ಕ್ಕುತ್ತಿರುವುದು! ಮತ್ತೊಂದುಕಡೆಯಲ್ಲಿ ಆ ಭಗವಂತನನ್ನಗಲಿ ಬಂದ ಸಂಕಟದಿಂದ ತತ್ತಳಿಸುತ್ತಿರುವುದು. ಏನಾದರೇನು? ಇನ್ನು ನಾನು ಆ ಭಗವದಾಜ್ಞೆಯಂತೆ ಬದರಿಕಾಶ್ರಮಕ್ಕೆ ಹೋಗುವೆನು. ಆ ಬದರೀವನದಲ್ಲಿಯೇ ಮೊದಲು ನರನಾರಾಯಣರಿಬ್ಬರೂ ತೀವ್ರತಪಸ್ಸನ್ನು ಮಾಡಿ, ಆ ಸ್ಥಳವನ್ನು ತಮ್ಮ ಸಾನ್ನಿಧ್ಯದಿಂದ ಪವಿತ್ರವನ್ನಾಗಿ ಮಾಡಿರುವರು.ಅಂತಹ ತೀರ್ಥವನ್ನು ಸೇರಿದಪಕ್ಷದಲ್ಲಿ ನನ್ನ ಮನಸ್ಸು ತಪ್ಪದೆ ಪರಿಶುದ್ಧಿಯನ್ನು ಹೊಂದುವುದು"ಎಂದನು. ಉದ್ಧವನು ಹೇಳಿದ ಈ ವಾಕ್ಯಗಳಲ್ಲಿ ಸೂಚಿತವಾದ ತನ್ನ ಬಂಧುಮಿತ್ರಮರಣವನ್ನು ಕೇಳಿ, ವಿದುರನ ಮನಸ್ಸಿಗೆ ಬಹಳವಾಗಿ ವ್ಯಥೆಯೆಂಟಾಯಿತು. ಬಂಧುಮರಣದಿಂದುಂಟಾದ ದುಃಖವು ಮನುಷ್ಯರಿಗೆ ಸಹಿಸಲಸಾಧ್ಯವಾಗಿದ್ದರೂಕೂಡ,ಆತ್ಮತತ್ವವನ್ನು ಬಲ್ಲವನಾದ ಆವಿದುರನು ಆ ದುಃಖವನ್ನು ಪ್ರಯತ್ನಪೂರ್ವಕವಾಗಿ ಅಡಗಿಸಿಕೊಂಡು, ಬದರಿಕಾಶ್ರಮಕ್ಕೆ ಪ್ರಯಾಣಸನ್ನದ್ಧನಾಗಿ ನಿಂತಿರುವ ಭಾಗವತೋತ್ತಮನಾದ ಆ ಉದ್ಧವನನ್ನು ನೋಡಿ, ತನ್ನನ್ನು ಶ್ರೀಕೃಷ್ಣಾನುಗ್ರಹಕ್ಕೆ ಪಾತ್ರನನ್ನಾಗಿ ಮಾಡಬೇಕಾಗಿದ್ದರೆ, ಅದಕ್ಕೆ ಆತನೇ ಮುಖ್ಯೋಪಾಯನೆಂದು ನಿಶ್ಚಯಿಸಿ ಹೀಗೆಂದು ಪ್ರಾರ್ಥಿಸುವನು. ‘‘ಓ! ಮಹಾತ್ಮಾ! ಭಗವಂತನಾದ ಶ್ರೀಕೃಷ್ಣನು ನಿನಗೆ ಯಾವ ತತ್ವಜ್ಞಾನವನ್ನು ಪದೇತಿಸಿದನೋ, ಆ ಜ್ಞಾನವನ್ನು ನನಗೂ ನೀನು ಉಪದೇತಿಸಬಹುದೆಂದೆಣಿಸುವೆನು ! ಆದುದರಿಂದ ದಯವಿಟ್ಟು ನೀನು ನನಗೆ ಆ ಜ್ಞಾನವನ್ನು ಪದೇತಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಬೇಕು. ಲೋಕದಲ್ಲಿ ನಿನ್ನಂತಹ ವಿಷ್ಣುಭಕ್ತರು ಯಾವಾಗ

ಲೂ ತಮ್ಮ ಆಶ್ರಿತರ ಕೋರಿಕೆಯನ್ನು ಈಡೇರಿಸುವ ವಿಷಯದಲ್ಲಿ ಹಿಂಜರಿಯತಕ್ಕವರಲ್ಲ. ಆದುದರಿಂದ ನಿನ್ನ ಪಾದಾಶ್ರಿತನಾದ ನನ್ನನ್ನು ಜ್ಞಾನೋಪದೇಶದಿಂದ ಉದ್ಧರಿಸಿ ರಕ್ಷಿಸಬೇಕು." ಎಂದನು. ಹೀಗೆ ವಿನಯದಿಂದ ಪ್ರಾರ್ಥಿಸುತ್ತಿರುವ ವಿದುರನನ್ನು ನೋಡಿ ಉದ್ಧವನು "ವಿದುರಾ! ನಿನಗೆ ಆ ತತ್ವಜ್ಞಾನವನ್ನು ಉಪದೇಶಿಸತಕ್ಕವನು ನಾನಲ್ಲ. ನೀನು ತತ್ಕ್ಷೇತ್ರ ದೇಶವನ್ನು ಪಡೆಯಬೇಕಾಗಿದ್ದ ಪಕ್ಷದಲ್ಲಿ, ಭಗವಂತನಾಗಿಯೂ ತತ್ವದರ್ತಿಯಾಗಿಯೂ ಇರುವ ಮೈತ್ರೇಯಮಹಾಮುನಿಯನ್ನು ಪ್ರಾರ್ಥಿಸು! ಇದಲ್ಲದೆ ಭಗವಂತನಾದ ಕೃಷ್ಣನು ಮನುಷ್ಯಲೋಕವನ್ನು ಬಿಟ್ಟು ನಿಜಲೋಕಕ್ಕೆ ಹೊರಡುವಸಮಯದಲ್ಲಿ ಆ ಮೈತ್ರೇಯನನ್ನು ನೋಡಿ "ನಿನ್ನ ಹಾಗೆಯೇ ತೀರ್ಥಸಂಚಾರವನ್ನು ಮಾಡುತ್ತ ನಿನ್ನ ಬಳಿಗೆ ಬಂದು, ನಿನ್ನನ್ನು ಪ್ರಶ್ನೆಮಾಡತಕ್ಕವರಿಗೆ ನೀನು ಈ ಜ್ಞಾನವನ್ನು ಉಪದೇಶಿಸಬೇಕು." ಎಂದು ಆಜ್ಞಾಪಿಸಿರುವನು. ಆದುದರಿಂದ ವಿದುರಾ! ನೀನು ಈಗ ಆ ಮೈತ್ರೇಯನ ಬಳಿಗೆ ಹೋಗಿ, ಅವನಿಂದ ತತ್ವಜ್ಞಾನವನ್ನು ಪಡೆಯುವನಾಗು!" ಎಂದನು. ಹೀಗೆಂದು ಉದ್ಧವನು, ಯಮುನಾತೀರದಲ್ಲಿ ವಿದುರನೊಡನೆ ಸೇರಿ ವಿಶ್ವಾತ್ಮಕನಾದ ಭಗವಂತನ ಗುಣಾನುಭವಗಳನ್ನು ಮಾಡುತ್ತ, ಆ ಭಗವತ್ಕಥೆಯಂಬ ಸುಧಾರಸದಲ್ಲಿ ಮುಳುಗಿದವನಾಗಿ, ಸಮಸ್ತತಾಪಗಳನ್ನೂ ನೀಗಿ ಆದಾತ್ರಿಯೆಲ್ಲವನ್ನೂ ಒಂದು ಕ್ಷಣದಂತೆ ಕಳೆದನು. ಬೆಳಗಾಗುವಷ್ಟರಲ್ಲಿಯೇ ಎಚ್ಚರಗೊಂಡು ಯಮುನಾನದಿಯಲ್ಲಿ ಸ್ನಾನಮಾಡಿ, ಅಲ್ಲಿಂದ ಬದರಿಕಾಶ್ರಮವನ್ನು ಕುರಿತು ಹೊರಟುಬಿಟ್ಟನು.

ಶುಕಮಹರ್ಷಿಯು ಪರಿಕ್ಷಿದ್ರಾಜನಿಗೆ ಈ ವೃತ್ತಾಂತವನ್ನು ಹೇಳಿದೊಡನೆ, ಪರೀಕ್ಷಿದ್ರಾಜನು ಅವರನ್ನು ಕುರಿತು "ಓ ಮುನೀಂದ್ರಾ! ಬ್ರಾಹ್ಮಣಶಾಪದಿಂದ ವೃಷ್ಣಿಭೋಜರೇ ಮೊದಲಾದ ಯಾದವಕುಲದವರೆಲ್ಲರೂ ನಾಶಹೊಂದಿದರಷ್ಟೆ? ಶ್ರೀಕೃಷ್ಣನೂ ಈ ಲೋಕವನ್ನು ಬಿಟ್ಟುನಿಜನಿವಾಸಕ್ಕೆ ತೆರಳಿದನಷ್ಟೆ? ಹೀಗೆ ಯಾದವಕುಲವೆಲ್ಲವೂ ನಿಶ್ಶೇಷವಾಗಿ ಅಳಿಸಿಹೋಗುತ್ತಿರುವಾಗ, ಉದ್ಧವನೊಬ್ಬನುಮಾತ್ರ ಉಳಿದುದು ಹೇಗೆ? ಅವನಿಗೆಮಾತ್ರ ಬ್ರಾಹ್ಮಣಶಾಪವಿಲ್ಲವೇನು? ಅತಿರಥ ಮಹಾರಥಾದಿವೀರರೆಲ್ಲರ

ನ್ನೂ ಅಪಾಯದಿಂದ ತಪ್ಪಿಸತಕ್ಕ ತನ್ನ ಮಹಾಮಹಿಮೆಯಿಂದ ಯದುವೀರಾಗ್ರೇಸರನೆನಿಸಿ, ಲೋಕನಾಥನೆನಿಸಿಕೊಂಡ ಶ್ರೀಕೃಷ್ಣನೂಕೂಡ, ಬ್ರಾಹ್ಮಣಶಾಪವನ್ನು ಸುಳ್ಳಾಗಿಸಬಾರದೆಂಬುದಕ್ಕಾಗಿಯೇ, ತಾನು ಧರಿಸಿಡ್ಡ ಮನುಷ್ಯಾಕೃತಿಯನ್ನು ಮರೆಸಿಕೊಂಡನಲ್ಲವೆ? ಅಡೇ ಯಾದವಕುಲದಲ್ಲಿ ಹುಟ್ಟಿದ ಉದ್ಧವನುಮಾತ್ರ ಬದುಕಿರುವುದು ನನಗೆ ಅತ್ಯಾಶ್ಚರ್ಯವನ್ನುಂಟುಮಾಡುತ್ತಿರುವುದು. ಇದರ ಕಾರಣವೇನೆಂಬುದನ್ನು ತಿಳಿಸಬೇಕು." ಎಂದನು. ಅದಕ್ಕಾ ಶುಕನು ''ಎಲೈ ರಾಜೇಂದ್ರನೆ! ನೀನು ಕೇಳುವುದು ಯುಕ್ತವಾಗಿಯೇ ಇರುವುದು. ಅದರ ರಹಸ್ಯವನ್ನೂ ತಿಳಿಸುವೆನು ಕೇಳು! ಆ ಬ್ರಾಹ್ಮಣಶಾಪವೆಂಬುದು ಭಗವತ್ಸಂಕಲ್ಪರೂಪವೇಹೊರತು ಬೇರೆಯೆಲ್ಲ! ಸತ್ಯಸಂಕಲ್ಪನಾದ ಶ್ರೀಕೃಷ್ಣನು ಯಾದವಕುಲವನ್ನು ನಾಶಹೊಂದಿಸಿ, ತನ್ನ ಮನುಷ್ಯಶರೀರವನ್ನೂ ಮರೆಸಿಕೊಳ್ಳಬೇಕೆಂದು ತನ್ನಲ್ಲಿ ತಾನು ಸಂಕಲ್ಪಿಸಿದ್ದನಷ್ಟೆ? ಆ ಸಂಕಲ್ಪವು ಹುಟ್ಟಿದೊಡನೆ ಅವನಿಗೆ ಮನಸ್ಸಿನಲ್ಲಿ ಬೇರೊಂದಾಲೋಚನೆಯು ಹುಟ್ಟಿತು ಅದೇನೆಂದರೆ ''ಆಹಾ! ನಾನು ಈ ಲೋಕವನ್ನು ಬಿಟ್ಟುಹೋದಮೇಲೆ, ನನ್ನ ವಿಷಯವಾದ ತತ್ವಜ್ಞಾನವೂಕೂಡ ನಾಶಹೊಂದದಿರಲಾರದು. ಆದುದರಿಂದ ಅಂತಹ ಆತ್ಮಪರಮಾತ್ಮತತ್ವಜ್ಞಾನವನ್ನು, ಭಕ್ತಾಗ್ರಣಿಯಾದ ಈ ಉದ್ಧವನಿಗಾದರೂ ಉಪದೇಶಿಸಿದ್ದೂಪಕ್ಷದಲ್ಲಿ, ಆತನೊಬ್ಬನ ಆಶ್ರಯದಿಂದಾದರೂ ಆ ತತ್ವಜ್ಞಾನವು ಈ ಲೋಕದಲ್ಲಿ ನಿಲ್ಲಬಹುದು. ಈ ಉದ್ಧವನು ಜ್ಞಾನಿಗಳಲ್ಲಿ ಪ್ರಧಾನನಾದುದರಿಂದ, ಅದನ್ನು ಸ್ಥಿರವಾಗಿ ಧಾರಣಮಾಡುವುದಕ್ಕೂ ಈತನೇ ಅರ್ಹನು! ಇದಲ್ಲದೆ ಈತನು ಜಿತೇಂದ್ರಿಯನಾಗಿಯೂ ಇರುವನು. ಇವನನ್ನು ನನಗೆ ಸಮಾನನೆಂದೇ ಹೇಳಬಹುದೇಹೊರತು ಲೇಶಮಾತ್ರವೂ ನನಗಿಂತಲೂ ಕಡಿಮೆಯಾದವನಲ್ಲ ಸತ್ವಾದಿಗುಣಕಾರ್ಯಗಳಾದ ಶಬ್ದಾದಿವಿಷಯಗಳಿಗೂ ಇವನು ಈಡಾಗತಕ್ಕವನಲ್ಲ. ಆದುದರಿಂದ ನನ್ನ ನಿಜಸ್ವರೂಪವನ್ನು ತಿಳಿಸತಕ್ಕ ತತ್ವಜ್ಞಾನವನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೂ, ಅದರಂತೆಯೇ ಇತರರಿಗೆ ಬೋಧಿಸುವುದಕ್ಕೂ ಈತನೊಬ್ಬನೇ ಸಮರ್ಥನು. ಆದುದರಿಂದ ಇವನ ಮೂಲಕವಾಗಿಯೇ ಸುಜ್ಞಾನವನ್ನು ಲೋಕದಲ್ಲಿ ನೆಲೆಗೊಳಿಸಬೇಕು" ಎಂಬ

ಸಂಕಲ್ಪದಿಂದಲೇ ಶ್ರೀಕೃಷ್ಣನು ಉದ್ಧವನನ್ನು ಈ ಮರಣದಿಂದ ತಪ್ಪಿಸಿರುವನು. ಹಾಗಿಲ್ಲದಪಕ್ಷದಲ್ಲಿ ಉದ್ಧವನೂ ಯಾದವರೊಡನೆ ಮರಣವನ್ನು ಹೊಂದಬೇಕಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಎಲೆ ಪರೀಕ್ಷಿದ್ರಾಜನೆ! ಮುಂದಿನ ವೃತ್ತಾಂತವನ್ನು ಕೇಳು. ಉದ್ಧವನು ಲೋಕನಾಥನಾದ ಭಗವಂತನ ಅನುಜ್ಞೆಯನ್ನು ಪಡೆದು, ಬದರಿಕಾಶ್ರಮಕ್ಕೆ ಹೋಗಿ ಸೇರಿದಮೇಲೆ, ಅಲ್ಲಿ ಜ್ಞಾನಯೋಗದಿಂದ ಭಗವಂತನನ್ನು ಎಡೆಬಿಡದೆ ಆರಾಧಿಸುತಿದ್ದನು. ಇತ್ತಲಾಗಿ ವಿದುರನೂಕೂಡ, ಲೀಲಾರ್ಥವಾಗಿ ಮನುಷ್ಯರೂಪವನ್ನು ಧರಿಸಿದ್ದ ಪರಮಾತ್ಮರೂಪಿಯಾದ ಶ್ರೀಕೃಷ್ಣನ ಅದ್ಭುತಚರಿತ್ರೆಗಳನ್ನೂ, ಆತನು ತನ್ನ ಮನುಷ್ಯದೇಹವನ್ನು ಬಿಟ್ಟು ನಿಜಲೋಕಕ್ಕೆ ಹೋದುದನ್ನೂ ಉದ್ಧವನಿಂದ ಕೇಳಿ, ಆ ಶ್ರೀಕೃಷ್ಣನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ಭಕ್ತಿಯಲ್ಲಿ ಮೈಮರೆತಿದ್ದನು. ಎಲೈ ರಾಜೇಂದ್ರನೆ! ಶ್ರೀಕೃಷ್ಣನು ತಾನು ಧರಿಸಿದ್ದ ಮನುಷ್ಯಶರೀರವನ್ನು ಬಿಟ್ಟ ರೀತಿಯು, ಯೋಗಿಗಳಿಗೆ ಯೋಗಾಭ್ಯಾಸದಲ್ಲಿ ಮತ್ತಷ್ಟು ಧೈರ್ಯವನ್ನು ಹೆಚ್ಚಿಸತಕ್ಕುದಾಗಿಯೂ, ದೇಹವನ್ನೇ ಆತ್ಮವೆಂದೆಣಿಸಿ ಆ ದೇಹಸಂಬಂಧವಾದ ಸುಖದುಃಖಗಳಿಗೆ ಕಟ್ಟುಬಿದ್ದ ಮನಸ್ಸುಳ್ಳ ಪಶುಸಮಾನರಾದ ಅವಿವೇಕಿಗಳಿಗೆ, ದುಷ್ಕರಕಾರ್ಯವಾಗಿಯೂ ಇದ್ದಿತು. ಈ ವಿಧವಾಗಿ ಶ್ರೀಕೃಷ್ಣನು ಯೋಗಿಗಳಿಗೆ ಧೈರ್ಯವನ್ನು ಹೆಚ್ಚಿಸತಕ್ಕುದಾಗಿಯೂ, ಅಧೀರಮನಸ್ಸುಳ್ಳ ಅವಿವೇಕಿಗಳಿಗೆ ಭಯಕಾರಣವಾಗಿಯೂ ಇರುವಂತೆ ನಡೆಸಿದ ಈ ದೇಹತ್ಯಾಗದ ರೀತಿಯನ್ನು, ವಿದುರನು ಉದ್ಧವನಿಂದ ಕೇಳಿದೊಡನೆ, ಭಕ್ತೋತ್ತಮನಾದ ಆ ಉದ್ಧವನು ತನ್ನನ್ನಗಲಿ ಹೋದುದಕ್ಕಾಗಿ ಸ್ವಲ್ಪಹೊತ್ತು ದುಃಖಿಸಿ ರೋದಿಸುತ್ತ, ಕೊನೆಗೆ ಮನಸ್ಸಿನಲ್ಲಿ ಶಾಂತಿಯನ್ನು ಹೊಂದಿ, ಆ ಉದ್ಧವನು ತನಗೆ ನಿಯಮಿಸಿದಂತೆ ಮೈತ್ರೇಯನ ದರ್ಶನಾರ್ಥವಾಗಿ ಆ ಯಮುನಾನದೀತೀರದಿಂದ ಹೊರಟನು. ಕೆಲವು ದಿನಗಳೊಳಗಾಗಿಯೇ ಗಂಗಾನದಿಯನ್ನು ಸೇರಿ, ಅಲ್ಲಿಂದ ಹರಿದ್ವಾರಕ್ಕೆ ಬಂದು, ಅಲ್ಲಿ ಪರಮಭಾಗವತೋತ್ತಮನಾದ ಮೈತ್ರೇಯನನ್ನೂ ಸಂಧಿಸಿದನು. ಇಲ್ಲಿಗೆ ನಾಲ್ಕನೆಯ ಅಧ್ಯಾಯವು.

ವಿದುರನ ಪ್ರಾರ್ಥನೆಯಿಂದ ಮೈತ್ರೇಯನು ಆತನಿಗೆ ಮಹತ್ತು ಮೊದಲಾದ ತತ್ವಗಳ ಸೃಷ್ಟಿಕ್ರಮವನ್ನೂ, ಆ ತತ್ವಗಳು ಭಗವಂತನನ್ನು ಸ್ತುತಿಸಿದ ರೀತಿಯನ್ನೂ ವಿವರಿಸಿದುದು.

"ಎಲೈ ಪರೀಕ್ಷಿದ್ರಾಜನೆ ಕೇಳು! ಕೌರವಶ್ರೇಷ್ಠನಾದ ವಿದುರನು ಗಂಗಾದ್ವಾರಕ್ಕೆ (ಹರಿದ್ವಾರಕ್ಕೆ)ಬಂದು, ಆತ್ಮಜ್ಞಾನಿಯಾಗಿಯೂ, ಮಹಾತ್ಮನಾಗಿಯೂ ಇರುವ ಮೈತ್ರೇಯನು ಅಲ್ಲಿ ಧ್ಯಾನನಿಷ್ಠನಾಗಿ ಕುಳಿತಿರುವುದನ್ನು ಕಂಡೊಡನೆ, ಆತನಿಗೆ ನಮಸ್ಕರಿಸಿ, ಜ್ಞಾನನಿಧಿಯಾದ ಆ ಮಹರ್ಷಿಯ ಗುಣಸೌಶೀಲ್ಯಾದಿಗಳನ್ನು ನೋಡಿ ಪರಮಸಂತೋಷಗೊಂಡವನಾಗಿ, ಅವನನ್ನು ಪ್ರಾರ್ಥಿಸುವನು. "ಓ ಮಹಾತ್ಮನೆ! ಲೋಕದಲ್ಲಿ ಸಮಸ್ತಜನರೂ ತಮ್ಮತಮ್ಮ ಸುಖವನ್ನಪೇಕ್ಷಿಸಿಯೇ ಕೃಷಿ, ವಾಣಿಜ್ಯ ಮೊದಲಾದ ಲೌಕಿಕವ್ಯಾಪಾರಗಳನ್ನೂ, ಶ್ರುತಿಸ್ಮೃತಿಗಳಲ್ಲಿ ವಿಹಿತಗಳಾದ ದಾನಾಧಿವೈದಿಕಕರ್ಮಗಳನ್ನೂ ನಡೆಸುವರು. ಈ ವಿಧವಾದ ಕರ್ಮಗಳಿಂದ ಅವರು ಅತ್ಯುತ್ತಮವಾದ ಸುಖವನ್ನಾಗಲಿ,ಸಂಪೂರ್ಣವಾದ ದುಃಖನಿವೃತ್ತಿಯನ್ನಾಗಲಿ ಪಡೆಯಲಾರರು. "ಇದರಿಂದ ಅವರಿಗೆ ಬರುವ ಫಲವೇನು?" ಎಂದು ಯೋಚಿಸಿದರೆ, ಆ ಕರ್ಮಗಳಿಂದ ಅವರು ಅಡಿಗಡಿಗೆ ದುಃಖವನ್ನೇ ಹೊಂದುತ್ತಿರುವರು.ಆದುದರಿಂದ ಉತ್ತಮಸುಖವನ್ನು ಪಡೆಯುವುದಕ್ಕೂ, ದುಃಖವೆಂಬುದನ್ನು ಮೂಲಸಹಿತವಾಗಿ ನೀಗಿಸುವುದಕ್ಕೂ ನಡೆಸಬೇಕಾದ ಸಾಧನವಾವುದೋ, ಅದನ್ನು ನೀನು ಚೆನ್ನಾಗಿ ಬಲ್ಲೆಯಾದುದರಿಂದ,ಸರ್ವಜ್ಞನಾದ ನೀನು ನನಗೂ ತಿಳಿಸಬೇಕು. "ಆದರೆ ಜೀತೇಂದ್ರಿಯನಾಗಿ ಭಗವಂತನಲ್ಲಿಯೇ ನಟ್ಟನುನಸ್ಸುಳ್ಳ ನಾನು, ಆ ಭಗವಂತನ ಧ್ಯಾನದಿಂದುಂಟಾದ ಆನಂದಾನುಭವವನ್ನು ಬಿಟ್ಟು, ನಿನ್ನ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಹೇಳುವುದರಿಂದ ನನಗೆ ಬಂದ ಲಾಭವೇನು?" ಎಂದು ಕೇಳುವೆಯಾ ? ಜನ್ಮಾಂತರಕರ್ಮದೋಷದಿಂದ ಅಧರ್ಮಪರರಾಗಿಯೂ, ಭಗವದ್ಭಕ್ತಿಯೆಲ್ಲಿ ವಿಮುಖರಾಗಿಯೂ, ಯಾವಾಗಲೂ ದುಃಖಸಮುದ್ರದಲ್ಲಿಯೇ ಮುಳುಗಿದವರಾಗಿಯೂ ಇರುವ ಸಂಸಾರಿಗಳನ್ನು ಅನುಗ್ರಹಿಸುವುದಕ್ಕಾಗಿಯೇ ತಮ್ಮಂತಹ ಮಹಾತ್ಮರು ಈ ಲೋಕದಲ್ಲಿ ಜನಿಸುತ್ತಿರುವರು. ಕರ್ಮಸಂಬಂಧಗಳಾದ

ಶರೀರಗಳನ್ನು ಧರಿಸಿ, ಸಹಿಸಬಾರದ ಎಷ್ಟೋ ದುಃಖಗಳನ್ನನುಭವಿಸುತ್ತ, ಎಷ್ಟುಕಾಲವಾದರೂ ಜನನಮರಣಗಳಲ್ಲಿಯೇ ಬಿದ್ದು,ಮುಕ್ತಿಯನ್ನು ಕಾಣದೆ,ಪಶುಪ್ರಾಯರಾಗಿರುವವರನ್ನು ಉದ್ಧರಿಸುವುದಕ್ಕಾಗಿಯೇ ತಮ್ಮಂಥವರು ಲೋಕಸಂಚಾರವನ್ನೂ ಮಾಡುತ್ತಿರುವರು! ಎಲೈ ಸಾಧುತಿರೋಮಣಿಯೆ! ಭಗವಂತನನ್ನು ಯಾವವಿಧದಿಂದ ಆರಾಧಿಸಿದರೆ ಸಂತೋಷಿಸುವನು? ಯಾವವಿಧದಿಂದ ಪೂಜಿಸಿದರೆ ಭಗವಂತನು ಭಕ್ತಿಯಿಂದ ನಿರ್ಮಲವಾದ ಹೃದಯದಲ್ಲಿ ವಾಸನುಮಾಡುವನು? ಯಾವ ಕಾರ್ಯವನ್ನು ನಡೆಸಿದರೆ ಭಗವಂತನು ತತ್ವಜ್ಞಾನವನ್ನು ಕೊಡುವನು? ಅಂತಹ ಉಪಾಯವೇನಾದರೂ ಇದ್ದರೆ ನನ್ನಲ್ಲಿ ದಯವಿಟ್ಟು ತಿಳಿಸಬೇಕು. ಲೋಕನಾಥನಾದ ಭಗವಂತನು ತಾನು ಕರ್ಮಾಧೀನನಾಗದೆ, ಬ್ರಹ್ಮಾದಿರೂಪಗಳಿಂದ ಈ ಪ್ರಪಂಚವನ್ನು ಸೃಷ್ಟಿಸಿ ಪುದು ಹೇಗೆ? ಹೇಗೆ ರಕ್ಷಿಸುತ್ತಿರುವನು? ಕೊನೆಗೆ ಈ ಜಗತ್ತೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡು, ಈ ಜಗದ್ವ್ಯಾಪಾರಗಳೆಲ್ಲವನ್ನೂ ಬಿಟ್ಟು, ನಿಜಲೋಕವಾದ ವೈಕುಂಠದಲ್ಲಿ ಹೇಗೆ ಶಯನಿಸಿದನು ? ಯೋಗೀಶ್ವರನಾದ ಭಗವಂತನು ತಾನೊಬ್ಬನಾಗಿಯೇ ಇದ್ದು,ಸಮಸ್ತಜಗತ್ತಿಗೂ ತಾನೇ ಆಧಾರನಾಗಿದ್ದರೂ, ಅನೇಕರೂಪಗಳನ್ನು ಧರಿಸಿದುದು ಹೇಗೆ? ಗೋಬ್ರಾಹ್ಮಣಾದಿಗಳನ್ನು ರಕ್ಷಿಸುವುದಕ್ಕಾಗಿ ಮತ್ಸ್ಯಕೂರ್ಮಾದ್ಯವತಾರಗಳನ್ನೆತ್ತಿ ಪನೋದಿಸುತ್ತಿರುವಾಗ, ಯಾವಯಾವ ವಿಧದಿಂದ ತನ್ನ ಉದ್ದೇಶಗಳನ್ನು ನೆರವೇರಿಸಿರುವನು. ಓ ಮುನೀಂದ್ರಾ ! ಪುಣ್ಯಕೀರ್ತಿಯಾದ ಆ ಭಗವಂತನ ಚರಿತ್ರಗಳನ್ನು ಎಷ್ಟೆಷ್ಟು ಕೇಳುತ್ತಿದ್ದರೂ ನನ್ನ ಮನಸ್ಸು ತೃಪ್ತಿಹೊಂದದು. ಆದುದರಿಂದ ನನ್ನಲ್ಲಿ ದಯವಿಟ್ಟು ಆ ಚರಿತ್ರಗಳೆಲ್ಲವನ್ನೂ ನೀನು ಚೆನ್ನಾಗಿ ವಿವರಿಸಿ ತಿಳಿಸಬೇಕು. ಲೋಕನಾಯಕನಾದ ಆ ಭಗವಂತನು, ಮಹತ್ತು ಮೊದಲಾದ ತತ್ವಗಳಿಂದ,ಲೋಕಪಾಲಕರೊಡಗೂಡಿದ ಈ ಸಮಸ್ತಲೋಕಗಳನ್ನೂ,ಅದರ ಹೊರಗಿನ ಆವರಣಗಳನ್ನೂ ಕಲ್ಪಿಸಿದುದು ಹೇಗೆ? ಆಯಾ ಲೋಕಗಳಲ್ಲಿರುವ ಜೀವಕೋಟಿಗಳಿಗೆ ಪರಸ್ಪರಭೇದಗಳೇನು? ಲೋಕಕರ್ತನಾಗಿಯೂ, ತನಗೆ ಬೇರೊಂದು · ಕಾರಣವಿಲ್ಲದವನಾಗಿಯೂ ಇರುವ ಭಗವಂತನು, ಜ್ಞಾನೇಂದ್ರಿಯಗಳನ್ನೂ, ಕರ್ಮೇಂದ್ರಿಯಗಳನ್ನೂ ದೇವಮನು

ಷ್ಯಾಧಿರೂಪಗಳನ್ನೂ, ಅವಕ್ಕೆ ಬೇರೆಬೇರೆ ನಾಮಗಳನ್ನೂ ಹೇಗೆ ಬೇರ್ಪಡಿಸಿಟ್ಟನು? ಇವೆಲ್ಲವನ್ನೂ ನನಗೆ ವಿವರವಾಗಿ ತಿಳಿಸಬೇಕು ಆದರೆ " ಅನೇಕರಲ್ಲಿ ಅನೇಕಧರ್ಮಗಳನ್ನು ಕೇಳಿ ತಿಳಿದಿರುವ ನಿನಗೆ ನನ್ನ ಬಾಯಿಂದ ಕೇಳಬೇಕಾದ ಅವಶ್ಯಕತೆಯೇನು?" ಎಂದು ನನ್ನನ್ನು ನೀನು ಕೇಳಬಹುದು. ಎಲ್ಲೆ ಮಹರ್ಷಿಯೇ! ಅದಕ್ಕೂ ತಕ್ಕ ಕಾರಣವನ್ನು ವಿಜ್ಞಾಪಿಸಿಕೊಳ್ಳುವೆನು.ಬ್ರಾಹ್ಮಣ,ಕ್ಷತ್ರಿಯ, ವೈಶ್ಯರೆಂಬ ಮೂರುಜಾತಿಯವರಿಗೂ, ಅವರಿಗಿಂತಲೂ ಹೀನವಾದ ಸ್ತ್ರೀಶೂದ್ರಾದಿಗಳಿಗೂ ಯಾವಯಾವ ಕರ್ಮಗಳು ವಿಧಿಸಲ್ಪಟ್ಟಿವೆಯೋ, ಅವೆಲ್ಲವನ್ನೂ ನಾನು ಇದಕ್ಕೆಮೊದಲು ವ್ಯಾಸಮಹರ್ಷಿಯಿಂದ ರಚಿತವಾದ ಭಾರತದಿಂದಲೇ ತಿಳಿದುಕೊಂಡೆನು. ವಿಷ್ಣುಕಥಾಮೃತವಿಲ್ಲದೆಯೂ, ಅಲ್ಪ ಸುಖಸಂಪಾದಕವಾಗಿಯೂಇರುವ ಆಕರ್ಮವಿಚಾರಗಳನ್ನು ಕೇಳಿಕೇಳಿ ನನ್ನ ಮನಸ್ಸು ಬೇಸರಿಸಿತು. ಮತ್ತು ಅವುಗಳನ್ನು ಕೇಳುವುದರಲ್ಲಿ ನನ್ನ ಮನಸ್ಸು ಪೂರ್ಣವಾಗಿ ತೃಪ್ತಿಹೊಂದಿರುವುದರಿಂದ, ತಿರುಗಿ ಅವುಗಳನ್ನೇ ಕೇಳಬೇಕಾದ ಅವಶ್ಯಕತೆಯಿಲ್ಲ. ಭಗವತ್ಕಥಾನ್ಯುತವನ್ನು ಕೇಳುವುದರಲ್ಲಿ ಮಾತ್ರ ನನ್ನ ಮನಸ್ಸಿಗೆ ಇನ್ನೂ ತೃಪ್ತಿಯುಂಟಾಗಲಿಲ್ಲ. ಇದಲ್ಲದೆವಿಷ್ಣುಕಥೆಗಳನ್ನು ಆಗಾಗ ಕೇಳುತಿದ್ದರೆ, ಭಗವಂತನು, ಅಂತವರ ಕರ್ಣದ್ವಾರದಿಂದ ಪ್ರವೇಶಿಸಿ,ಅವರ ಹೃದಯಕಮಲದಲ್ಲಿ ಸ್ಥಿರವಾಗಿ ನಿಂತು, ಸಂಸಾರಕಾರಣಗಳಾದ ದುರಭಿಲಾಷೆಗಳನ್ನು ನೀಗಿಸುವನೆಂದೂ ಕೇಳಿರುವೆನು. ಮಹಾತ್ಮರಾದ ನಿಮ್ಮಂತವರು ನಡೆಸುವ ಹರಿಕಥಾರೂಪವಾದ ಯಾಗಗಳಲ್ಲಿ, ಪಂಡಿತರಿಂದ ವಿಷ್ಣುಕಥೆಗಳನ್ನು ಕೇಳಿದವರಿಗೆ ಈ ವಿಧವಾದ ಲಾಭವುಂಟಾಗುತ್ತಿರುವಾಗ, ಯಾವ ಮನುಷ್ಯನುತಾನೇ ಅದನ್ನು ಕೇಳದಿರುವನು? ಎಷ್ಟುಕೇಳಿದರೆ ತಾನೇ ಅದರಲ್ಲಿ ತೃಪ್ತಿಯುಂಟಾಗುವುದು ! ಆದರೆ " ಹರಿಕಥಾಶ್ರವಣದಿಂದಲೇ ತಾಪತ್ರಯರೂಪವಾದ ಸಂಸಾರವು ನೀಗಿ, ಉತ್ತಮ ಸುಖವುಂಟಾಗುವಪಕ್ಷದಲ್ಲಿ,ಪೂಜ್ಯನಾದ ವ್ಯಾಸಮುನಿಯು ತನ್ನಿಂದ ರಚಿತವಾದ ಭಾರತದಲ್ಲಿ ಭಗವಂತನ ಚರಿತ್ರೆಗಳನ್ನು ಬಿಟ್ಟು, ಕೇವಲವ್ರತಗಳನ್ನು ಮಾತ್ರವೇ ಹೇಳಿದುದೇಕೆ ? ಇದನ್ನು ಪರ್ಯಾಲೋಚಿಸಿ ನೋಡಿದರೆ, ವ್ರತಗಳಿಂದಲೂ ಅದೇ ವಿಧವಾದ ಫಲವು ಲಭಿಸಬಹುದೆಂದೇ ಊಹಿಸ

ಬೇಕಲ್ಲವೆ" ಎಂದು ನೀನು ಕೇಳಬಹುದು! ಮುನೀಂದ್ರಾ! ಆದಕ್ಕೂ ಸಮಾಧಾನವನ್ನು ಹೇಳುವೆನು ಕೇಳು. ಭಗವದವತಾರರೂಪನಾಗಿಯೂ, ನಿನ್ನ ಮಿತ್ರನಾಗಿಯೂ ಇರುವ ವ್ಯಾಸಮಹಾಮುನಿಯು, ಭಗವಂತನ ಗುಣಗಳನ್ನು ವರ್ಣಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಭಾರತವನ್ನು ರಚಿಸಿರುವನು. ಆದರೆ ವರ್ಣಾಶ್ರಮಧರ್ಮಗಳಿಂದಲೂ, ಗ್ರಾಮ್ಯಕಥೆಗಳ ಅನುವಾದಗಳಿಂದಲೂ ಆ ಗ್ರಂಥವನ್ನು ವಿಶೇಷವಾಗಿ ತುಂಬಿರುವುದೇನೋ ನಿಜವು! ಅವುಗಳನ್ನು ವಿಶೇಷವಾಗಿ ನಿರೂಪಿಸಿದಮಾತ್ರಕ್ಕೆ ಆಷ್ಟರಲ್ಲಿಯೇ ವ್ಯಾಸಮಹರ್ಷಿಗೆ ತೃಪ್ತಿಯೆಂದು ತಿಳಿಯಕೂಡದು ಇವೆಲ್ಲವೂ ಮುಕ್ತಿಸಾಧನಗಳಲ್ಲವೆಂಬುದನ್ನು ಆತನು ನಿಸ್ಸಂಶಯವಾಗಿ ತಿಳಿದಿದ್ದರೂ, ಸಾಮಾನ್ಯಜನರಿಗೆ ಆ ಮಾರ್ಗದಿಂದಲೇ ಭಕ್ತಿಯನ್ನು ಹುಟ್ಟಿಸಬೇಕೆಂಬುದೇ ಆತನ ಉದ್ದೇಶವು. ಸಾಮಾನ್ಯಜನರ ಮನಸ್ಸು ವೇದಾಂತಾರ್ಥಗಳನ್ನು ಗ್ರಹಿಸಲಾರದು. ಆದುದರಿಂದ ಅಂತವರಿಗೆ ಈ ವಿಹಿತವಾದ ವ್ರತಗಳನ್ನು ಬೋಧಿಸಿ, ಅವುಗಳಲ್ಲಿ ಶ್ರದ್ಧೆಯುಂಟಾಗುವಂತೆ ಮಾಡಿದರೆ, ಅವರ ಬುದ್ಧಿಯು ಕರ್ಮಾಚರಣೆಯಲ್ಲಿ ಪ್ರವರ್ತಿಸುವುದು. ಹೀಗೆ ಕರ್ಮಗಳನ್ನಾಚರಿಸುತ್ತ ಬರುವುದರಿಂದ, ಕ್ರಮಕ್ರಮವಾಗಿ ಮನಸ್ಸು ನಿರ್ಮಲವಾಗುವುದು. ಮನಸ್ಸು ಶುದ್ಧವಾದಮೇಲೆ, ಅವರಿಗೆ ಬೇರೆ ವಿಷಯಗಳಲ್ಲಿ ವಿರಕ್ತಿಯೂ ಹುಟ್ಟುತ್ತ ಬರುವುದು ! ಜ್ಞಾನಪ್ರಧಾನವಾದ ವೇದಾಂತಾರ್ಥಗಳನ್ನು ಗ್ರಹಿಸುವುದಕ್ಕೂ ಶಕ್ತಿಯುಂಟಾಗುವುದು. ಈ ಅಭಿಪ್ರಾಯದಿಂದಲೇ ವ್ಯಾಸಮಹರ್ಷಿಯು, ಭಾರತದಲ್ಲಿ ವಿಶೇಷವಾಗಿ ಕರ್ಮಗಳಿಗೆ ಪ್ರಾಧಾನ್ಯವನ್ನು ಕೊಟ್ಟು ವರ್ಣಿಸಿರುವನು.ಮೇಲೆ ಹೇಳಿದಂತೆ ಕರ್ಮಾಚರಣೆಯಿಂದ ಶುದ್ಧಮನಸ್ಸುಳ್ಳವರಿಗೆ, ಹರಿಕಥಾಶ್ರವಣದಲ್ಲಿ ಮನಸ್ಸುಹುಟ್ಟಿ,ಕ್ರಮಕ್ರಮವಾಗಿ ಸಂಸಾರದಲ್ಲಿಯೂ ವಿರಕ್ತಿಯುಂಟಾಗಿ, ಭಗವಂತನ ಪಾದಾರವಿಂದಗಳನ್ನೇ ಸರ್ವದಾ ಧ್ಯಾನಿಸುತ್ತ ಉತ್ತಮಸುಖವನ್ನು ಹೊಂದುವರು. ಹರಿಚರಿತ್ರವೆಂಬುದು ತನಗೆತಾನೇ ಮನುಷ್ಯನಿಗೆ ಭಗವಂತನಲ್ಲಿ ಭಕ್ತಿಯನ್ನೂ,ಶಬ್ದಾದಿವಿಷಯಗಳಲ್ಲಿ ವಿರಕ್ತಿಯನ್ನೂ ಹುಟ್ಟಿಸಿ, ಸಂಸಾರತಾಪತ್ರಯವನ್ನು ನೀಗಿಸುವುದು. ಯಾರು ತಮ್ಮ ಪಾಪಶೇಷದಿಂದ ಇಂತಹ ಮಹಿಮೆಯುಳ್ಳಹರಿ

ಕಥಾಶ್ರವಣದಲ್ಲಿ ಶ್ರದ್ಧೆಯನ್ನು ತೋರಿಸದಿರುವರೋ, ಮನಸ್ಸು, ವಾಕ್ಕು, ಕಾಯಗಳೆಂಬ ತ್ರಿಕರಣಗಳನ್ನೂ ಯಾರು ದುರುಪಯೋಗಪಡಿಸುತ್ತಿರುವರೋ, ಅಂತವರ ಆಯುಷ್ಯವೆಲ್ಲವನ್ನೂ ಸೂರ್ಯನು, ತನ್ನ ಉದಯಾಸ್ತಮಯಗಳಿಂದ ವ್ಯರ್ಥವಾಗಿಯೇ ಹಾಳುಮಾಡುತ್ತಿರುವನಲ್ಲದೆ ಬೇರೆಯೆಲ್ಲ. ಅಂತವರ ದುಸ್ಥಿತಿಗಾಗಿ ಎಷ್ಟೆಷ್ಟು ದುಃಖಿಸಿದರೂ ಸಾಲದು! ಅವಿವೇಕಿಗಳಾದ ಅಂತವರ ದೌರ್ಭಾಗ್ಯವನ್ನು ಕುರಿತು ನಾನು ಬಹಳವಾಗಿ ಪರಿತಪಿಸುವೆನು ಮನಸ್ಸು, ವಾಕ್ಕು, ಕಾಯಗಳೆಂಬ ತ್ರಿಕರಣಗಳನ್ನೂ ಭಗವಂತನ ವಿಷಯವಾಗಿ ಅರ್ಪಿಸಿದಾಗಲೇ ಅವುಸಫಲಗಳಾಗುವುವು. ಇಲ್ಲದಪಕ್ಷದಲ್ಲಿ ಅವೆಲ್ಲವೂ ವ್ಯರ್ಥವೆನಿಸುವುವು. ಕಳೆದುಹೋಗತಕ್ಕ ಆಯುಸ್ಸು, ಭಗವದ್ಭಕ್ತರಿಗಾಗಲಿ, ಅತನಲ್ಲಿ ವಿಮುಖರಾದ ವಿವೇಕಹೀನರಿಗಾಗಲಿ, ಇಬ್ಬರಿಗೂ ಒಂದೇ ವಿಧವಾಗಿದ್ದರೂ, ತಮ್ಮ ತ್ರಿಕರಣಗಳನ್ನೂ ಆ ಶ್ರೀಹರಿಯಲ್ಲಿ ಅರ್ಪಿಸಿದವರ ಆಯುಸ್ಸು ಮಾತ್ರವೇ ಸಾರ್ಥಕವಾಗಿ ಕಳೆಯುತ್ತಿರುವುದು. ಇತರರ ಆಯುಸ್ಸು ವ್ಯರ್ಥವಾಗಿ ಕ್ಷಯಿಸುತ್ತಿರುವುದು ಅದುದರಿಂದ ಎಲೈ ಮೈತ್ರೇಯ ಮುನೀಂದ್ರನೆ! ಹೀಗೆ ತಮ್ಮ ಆಯುಸ್ಸನ್ನು ವ್ಯರ್ಥವಾಗಿ ಕಳೆಯುತ್ತಿರುವ ವಿವೇಕಶೂನ್ಯರಿಗಾಗಿ ನಾನು ಬಹಳ ಕನಿಕರಪಡುತ್ತಿರುವೆನು. ಓ ಮಹಾತ್ಮಾ! ಭ್ರಮರಗಳು ಪುಷ್ಪಗಳಿಂದ ಮಕರಂದವನ್ನು ಸಂಗ್ರಹಿಸುವಂತೆ, ಸರ್ವಸ್ತ ದುಃಖನಿವಾರಕವಾಗಿಯೂ, ಸುಖದಾಯಕವಾಗಿಯೂ ಇರುವವಿಷ್ಣು ಚರಿತ್ರೆಗಳನ್ನು ನೀನು ಅಲ್ಲಲ್ಲಿಂದ ಸಂಗ್ರಹಿಸಿ ನನಗೆ ತಿಳಿಸಬೇಕು. ಲೋಕವನ್ನು ಸೃಷ್ಟಿಸುವುದು, ರಕ್ಷಿಸುವುದು, ನಾಶಮಾಡುವುದು, ಈ ಮೂರುಬಗೆಯ ಕಾರ್ಯಗಳನ್ನು ನಡೆಸುವುದಕ್ಕಾಗಿ, ಬ್ರಹ್ಮವಿಷ್ಣುರುದ್ರರೆಂಬ ಮೂರು ರೂಪಗಳನ್ನು ಹೊಂದುವ ಪರಮಪುರುಷನು, ಈ ಲೋಕದಲ್ಲಿ ಬೇರೆಬೇರೆ ಅವತಾರಗಳನ್ನೆತ್ತಿ ಅತಿಮಾನುಷಕೃತ್ಯಗಳನ್ನು ನಡೆಸಿರುವನಷ್ಟೆ? ಅವೆಲ್ಲವನ್ನೂ ನನಗೆ ವಿವರಿಸಿ ನನ್ನ ಮನಸ್ಸನ್ನು ಸಂತೋಷಪಡಿಸಬೇಕು. ಆ ಅವತಾರಗಳಲ್ಲಿಯೂ ಮುಖ್ಯವಾಗಿ ಶ್ರೀಕೃಷ್ಣಾವತಾರದ ಚರಿತ್ರವನ್ನು ಸವಿಸ್ತರವಾಗಿ ತಿಳಿಸಬೇಕು" ಎಂದನು. ಈ ಪ್ರಕಾರವಾಗಿ ವಿದುರನಿಂದ ಪ್ರಶ್ನೆ ಮಾಡಲ್ಪಟ್ಟ ಪೂಜ್ಯನಾದ ಮೈತ್ರೇಯಮಹಾಮುನಿಯು, ಮನಸ್ಸಿನಲ್ಲಿ ಬಹ

ಳಸಂತೋಷಿಸಿ, ಆ ವಿದುರನನ್ನು ಮನ್ನಿಸುತ್ತ, ಲೋಕಕ್ಷೇಮಾರ್ಥವಾಗಿಆ ವಿಷಯಗಳನ್ನು ತಿಳಿಸಲಾರಂಭಿಸಿದನು. ‘‘ಓ! ವಿದುರಾ ! ಎಲೈ ಸಾಧುತಿರೋಮಣೇ! ಲೋಕಾನುಗ್ರಹಾರ್ಥವಾಗಿ ನೀನು ಕೇಳಿದ ಈ ಪ್ರಶ್ನೆಯು ಸರ್ವೋತ್ತಮವಾದುದು. ನೀನು ಭಗವತ್ಕಥಾಶ್ರವಣದಲ್ಲಿ ಇಷ್ಟೊಂದು ಶ್ರದ್ಧೆಯಿಟ್ಟು ಕೇಳುವುದರಿಂದ, ನನ್ನ ಮನಸ್ಸಿಗೂ ಅತ್ಯಾನಂದವುಂಟಾಗಿರುವುದು. ಇದೂ ಅಲ್ಲದೆ, ವ್ಯಾಸಮಹರ್ಷಿಯ ವೀರ್ಯದಿಂದ ಜನಿಸಿ, ಭಕ್ತೋತ್ತಮನೆನಿಸಿಕೊಂಡ ನೀನು, ಭಗವತ್ಕಥೆಯನ್ನು ಕೇಳಬೇಕೆಂದು ಹೇಳುವುದೇನೂ ಅತಿಶಯವಲ್ಲ. ಓ! ವತ್ಸ ವಿದುರಾ! ಈ ವಿಧವಾದ ಭಗವತ್ಕಥಾಪ್ರಶ್ನೆಗಳಿಂದ ಉತ್ತಮವಾದ ಯಶಸ್ಸಿಗೆ ಭಾಗಿಯಾಗಿ, ಬೇರೊಂದರಲ್ಲಿ ಮನಸ್ಸಿಡದೆ, ಶ್ರೀಕೃಷ್ಣನೊಬ್ಬನಲ್ಲಿಯೇ ಆಸಕ್ತನಾದ ನಿನ್ನನ್ನು ಸಾಮಾನ್ಯಮನುಷ್ಯನೆಂದುಹೇಳಬಹುದೆ? ವ್ಯಾಸಮಹರ್ಷಿಗೆ ಅತನ ಸಹೋದರನ (ವಿಚಿತ್ರವೀರ್ಯನ) ಪತ್ನಿಯಾದ ಶೂದ್ರಸ್ತ್ರೀಯಲ್ಲಿ ಮಾಂಡವ್ಯನ ಶಾಪದಿಂದ ನೀನು ಜನಿಸಿದವನು. ಹಾಗಿದ್ದರೂ ತತ್ವವನ್ನು ವಿಚಾರಿಸಿದರೆ ನೀನು ಸಾಕ್ಷಾದ್ಧರ್ಮದೇವನಲ್ಲದೆ ಬೇರೆಯಲ್ಲ ! ಮತ್ತು ನೀನು ಜ್ಞಾನಿಗಳಲ್ಲಿ ಮೇಲೆನಿಸಿದವನು! ಶ್ರೀಕೃಷ್ಣನ ಪರಮಾನುಗ್ರಹಕ್ಕೆ ಪಾತ್ರನಾದವನು ! ವಿಷ್ಣುಭಕ್ತರಲ್ಲಿ ಮೇಲೆನಿಸಿಕೊಂಡವನು. ಎಲೈ ಪುಣ್ಯಾತ್ಮನೆ ! ಹಿಂದೆ ನಡೆದ ಹಿಂದಾನೊಂದು ವಿಚಿತ್ರವೃತ್ತಾಂತವನ್ನು ತಿಳಿಸುವೆನು ಕೇಳು. ಶ್ರೀಕೃಷ್ಣನು ಈ ಲೋಕವನ್ನು ಬಿಟ್ಟು ನಿಜಲೋಕಕ್ಕೆ ಹೋಗುವಕಾಲಕ್ಕೆ ಸರಿಯಾಗಿ, ಪೈಲವಿಕವಾಗಿ ನಾನು ಅತನ ಸನ್ನಿಧಿಗೆ ಹೋದೆನು. ಆಗ ಆ ಭಗವಂತನು ನನ್ನನ್ನು ಸಮೀಪಕ್ಕೆ ಕರೆದು, ನನಗೆ ಜ್ಞಾನೋಪದೇಶವನ್ನು ಮಾಡಿ, ಆ ತತ್ವಜ್ಞಾನವನ್ನೇ ನಿನಗೂ ಉಪದೇಶಿಸಬೇಕೆಂದು ತಾನಾಗಿಯೇ ಆಜ್ಞೆಮಾಡಿರುವನು. ಇದನ್ನು ಯೋಚಿಸಿನೋಡಿದರೆ ಭಗವಂತನಿಗೆ ನಿನ್ನಲ್ಲಿರುವ ದಯಾರಸವನ್ನು ಇಷ್ಟೆಂದು ಹೇಳಿ ತೀರುವುದೆ? ಆದುದರಿಂದ ಆ ಭಗವದಾಜ್ಞಾನುಸಾರವಾಗಿಯೇ ನಿನಗೆ ಜ್ಞಾನೋಪದೇಶವನ್ನು ಮಾಡುವೆನು ಕೇಳು. ಆಭಗವಂತನು ತನ್ನ ಯೋಗಮಾಯೆಯ ಬಲದಿಂದನಡೆಸುತ್ತಿರುವ ಸೃಷ್ಟಿಸ್ಥಿತಿಲಯಗಳನ್ನೂ, ಅತನ ಮಹತ್ತ್ವವನ್ನೂ ನಿನಗೆ ನಾನು ವಿವರವಾಗಿ ತಿಳಿಸುವೆ

ನು. ಸಾವಧಾನಮನಸ್ಕನಾಗಿ ನೀನು ಕೇಳುತ್ತಿರಬೇಕು. ವಿದುರಾ! ಪೂರ್ವದಲ್ಲಿ ಚೇತನಾಚೇತನರೂಪವಾದ ಈ ಸಮಸ್ತಪ್ರಪಂಚವೂ, ಆ ಭಗವಂತನೊಬ್ಬನಿಗೇ ಶರೀರಭೂತವಾಗಿದ್ದಿತು. ಆ ಚಿದಚಿತ್ತುಗಳೆರಡಕ್ಕೂ ಸ್ಥೂಲಾವಸ್ಥೆಯೆಂದೂ, ಸೂಕ್ಷ್ಮಾವಸ್ಥೆಯೆಂದೂ ಎರಡವಸ್ಥೆಗಳುಂಟು. ಈ ಚಿದಚಿತ್ತುಗಳೆರಡೂ ನಾಮರೂಪವಿಭಾಗಗಳಿಂದ ಬೇರ್ಪಡಿಸಿ ತಿಳಿಯುವುದಕ್ಕಾಗದ ಸ್ಥಿತಿಯಲ್ಲಿರುವುದು ಸೂಕ್ಷ್ಮಾವಸ್ಥೆಯೆಂದೂ, ಅವುಗಳೇ ನಾಮರೂಪಭೇದಗಳಿಂದ ಕೂಡಿದ ಸ್ಥಿತಿಗೆ ಮಾರ್ಪಡುವುದು ಸ್ಥೂಲಾವಸ್ಥೆಯೆಂದೂ ಹೇಳಲ್ಪಡುವುದು. ಆದುದರಿಂದ ಮೊದಲಿದ್ದ ಸೂಕ್ಷ್ಮಾವಸ್ಥೆಯೇ ಕಾರಣಾವಸ್ಥೆಯೆಂದೂ, ಈ ಸ್ಥೂಲಾವಸ್ಥೆಯೇ ಕಾರ್ಯಾವಸ್ಥೆಯೆಂದೂ ಸ್ಪಷ್ಟವಾಗುವುದು. ಭಗವಂತನಿಗೆ ಶರೀರಭೂತವಾಗಿದ್ದ ಚಿದಚಿತ್ತುಗಳೆರಡೂ ಕಾರ್ಯಾವಸ್ಥೆಯನ್ನು ಹೊಂದಿದಾಗಲೇ, ಬೇರೆಬೇರೆ ಹೆಸರಿನಿಂದಲೂ, ರೂಪದಿಂದಲೂ ಪ್ರತ್ಯೇಕಿಸಿ ತಿಳಿಯುವುದಕ್ಕೆ ಯೋಗ್ಯವಾದ ಈ ಪ್ರತ್ಯಕ್ಷಪ್ರಪಂಚವೆನಿಸುವುದು. ನಮ್ಮ ಕಣ್ಣಿಗೆ ಗೋಚರಿಸುತ್ತಿರುವ ಈ ಪ್ರಪಂಚವೆಲ್ಲವೂ, ಸೃಷ್ಟಿಗೆ ಮೊದಲು ಸಮಸ್ತಜೀವರಾಶಿಗಳಿಗೂ ಅಂತರ್ಯಾಮಿಯಾಗಿ ಅವುಗಳನ್ನು ಧರಿಸತಕ್ಕವನಾಗಿಯೂ, ಅವುಗಳಿಗೆ ನಿಯಾಮಕನಾಗಿಯೂ ನಾಮರೂಪವಿಭಾಗಗಳಿಲ್ಲದ ಆ ಸೂಕ್ಷ್ಮಚಿದಚಿತ್ತುಗಳನ್ನು ತನಗೆ ಶರೀರರೂಪದಿಂದ ಧರಿಸಿದ್ದವನಾಗಿಯೂ ಇರುವ ಆ ಭಗವಂತನ ಸ್ವರೂಪವೇಹೊರತು ಬೇರೆಯೆಲ್ಲ ಆ ಭಗವಂತನೇ ತನಗೆ ಜಗತ್ಸೃಷ್ಟಿಯನ್ನು ಮಾಡಬೇಕೆಂಬ ಸಂಕಲ್ಪವು ಹುಟ್ಟಿದಾಗ, ದೇವತೆಗಳೆಂದೂ, ಮನುಷ್ಯರೆಂದೂ, ಬೇರೆಬೇರೆ ನಾಮರೂಪಭೇದಗಳುಳ್ಳ ಪ್ರಪಂಚವಾಗಿ ಮಾರ್ಪಡುವನು. ಆತನಿಗೆ ಈ ಪ್ರಪಂಚವನ್ನು ಉಪಸಂಹಾರಮಾಡಬೇಕೆಂಬ ಸಂಕಲ್ಪವು ಮನಸ್ಸಿನಲ್ಲಿ ಹುಟ್ಟಿದಾಗ, ಆ ನಾನಾಬಗೆಯ ಸ್ಥೂಲರೂಪಗಳನ್ನು ಉಡುಗಿಸಿ, ಸೂಕ್ಷ್ಮಾವಸ್ಥೆಯನ್ನು ಹೊಂದಿದ ಅದೇ ಚಿದಚಿತ್ತುಗಳನ್ನು ತನಗೆ ಶರೀರರೂಪದಿಂದ ಹೊಂದಿ,ಮೊದಲಿನಂತೆ ನಿಲ್ಲುವನು. ಆತನು ಜೀವನಂತೆ ಕರ್ಮಾಧೀನನಾಗಿ ಹೆಚ್ಚುಕಡಿಮೆಯಾಗುವ ಜ್ಞಾನವುಳ್ಳವನಲ್ಲ. ಆದರಿಂದಲೇ ಆತನು ಜ್ಞಾನಸ್ವರೂಪನೆನಿಸಿ, ಪ್ರಳಯದಶೆಯಲ್ಲಿಯೂ ಸಮಸ್ತಪದಾರ್ಥಗಳನ್ನೂ

ಸ್ಪಷ್ಟವಾಗಿ ನೋಡಬಲ್ಲನು. ಆತನು ಸೃಷ್ಟಿಗೆ ಮೊದಲು ಸೂಕ್ಷ್ಮಾವಸ್ಥೆಯನ್ನು ಹೊಂದಿದ್ದ ಚಿದಚಿತ್ತುಗಳನ್ನು ತನಗೆ ಶರೀರವನ್ನಾಗಿ ಹೊಂದಿದ್ದು, ತನ್ನನ್ನು ಬಿಟ್ಟು ಬೇರೆ ಕಾರ್ಯವಸ್ತುವೊಂದನ್ನೂ ಕಾಣಿಸದೆ, ವ್ಯವಹಾರಯೋಗ್ಯವಾದ ನಾಮರೂಪಗಳೊಂದೂ ಇಲ್ಲದವನಂತೆಯೇ ತನ್ನನ್ನು ತಿಳಿದಿದ್ದನು. ಆದರೆ ಆಗಲೂ ಅವನು ಸೂಕ್ಷ್ಮಾವಸ್ಥೆಯುಳ್ಳ ಆ ಚಿದಚಿದ್ವಸ್ತುಗಳನ್ನು ಸ್ಪಷ್ಟವಾಗಿ ತಿಳಿಯಬಲ್ಲವನಾಗಿದ್ದುದರಿಂದ, ತನಗೆ ಶರೀರಭೂತವಾಗಿದ್ದ ಆ ಸೂಕ್ಷ್ಮಚಿದಚಿತ್ತುಗಳ ವಿಷಯವಾದ ಜ್ಞಾನವಿಶೇಷವುಳ್ಳವನೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಪ್ರಳಯಕಾಲದಲ್ಲಿ ತಾನೊಬ್ಬನೇ ಸರ್ವಜ್ಞತ್ವಾದಿಸಕಲಗುಣವಿಶಿಷ್ಟನಾಗಿ, ದೇವತೆಗಳು, ಮನುಷ್ಯರು, ಮೃಗಗಳು ಎಂಬ ನಾಮರೂಪಭೇದಗಳೊಂದೂ ಇಲ್ಲದವನಾಗಿದ್ದನು ಸರ್ವಜ್ಞನಾದ ಆ ಪರಮಾತ್ಮನಿಗೆ ಶಕ್ತಿರೂಪವಾಗಿ, ಅವನನ್ನು ಬಿಟ್ಟಗಲದೆ, ಅವನೊಡನೆ ಸೇರಿ ಏಕಾಕಾರದಿಂದಿದ್ದ ಮಾಯೆಯೆಂಬುದೇ ಈಪ್ರಕೃತಿಯು. ಅದೇ ಚೇತನಾಚೇತನಸ್ವರೂಪವಾಗಿರುವುದು. ಹೀಗೆ ಚೇತನವೆಂದೂ, ಅಚೇತನವೆಂದೂ ಎರಡುವಿಭಾಗವುಳ್ಳ ಪ್ರಕೃತಿರೂಪವಾದ ಈಶ್ವರನ ಶಕ್ತಿಗಳಲ್ಲಿ, ಚೇತನಶಕ್ತಿಯನ್ನು ಸತ್ತೆಂದೂ, ಅಚೇತನಶಕ್ತಿಯನ್ನು ಅಸತ್ತೆಂದೂ ಹೇಳುವರು. ಈ ಎರಡುಬಗೆಯ ಪ್ರಕೃತಿಯಿಂದಲೇ ಪರಮಪುರುಷನು, ಇದೋ! ಈಗ ನಮಗೆ ಗೋಚರಿಸುತ್ತಿರುವ ಚೇತನಾಚೇತನಸ್ವರೂಪವಾದ ಜಗತ್ತೆಲ್ಲವನ್ನೂ ಸೃಷ್ಟಿಸಿರುವನು. ಈಶ್ವರನು, ಈ ಪ್ರಪಂಚದಲ್ಲಿ ತಾನೂ ಅಂತರ್ಗತನಾಗಿದ್ದರೂ, ಅವುಗಳಿಗೆ ಸಂಭವಿಸುವ ವಿಕಾರಗಳಿಗಾಗಲಿ, ದೋಷಗಳಿಗಾಗಲಿ ತಾನು ಈಡಾಗದಂತಿರುವನು. ಹೀಗೆ ನಾಮರೂಪವಿಭಾಗಗಳಿಂದ ಕಾಣುವುದೇ ಜಗತ್ತಿಗೆ ಕಾರ್ಯಾವಸ್ಥೆಯೆನಿಸುವುದು. ಈ ವಿಧವಾದ ವಿಕಾರವೊಂದೂ ತೋರದೆ, ಆ ಪರಮಪುರುಷನಲ್ಲಿಯೇ ಮರೆಸಿಕೊಂಡು ಸೂಕ್ಷ್ಮದಶೆಯಲ್ಲಿರುವುದೇ ಕಾರಣಾವಸ್ಥೆಯೆನಿಸುವುದು. ಆದುದರಿಂದಲೇ ಈ ಕಾರ್ಯಕಾರಣಾವಸ್ಥೆಗಳೆರಡೂ ಕ್ರಮವಾಗಿ ಸ್ಥೂಲದಶೆಯೆಂದೂ, ಸೂಕ್ಷ್ಮದಶೆಯೆಂದೂ ಹೇಳಲ್ಪಡುವುದು. ಚೇತನಾಚೇತನಸ್ವರೂಪವಾದ ಮಾಯೆಯೆಂಬ ಈ ಪ್ರಕೃತಿಯು, ಮೊದಲು

ಸರ್ವಾಂತರ್ಯಾಮಿಯಾದ ಆಪರಮಾತ್ಮನಿಗೆ ಶರೀರರೂಪವಾಗಿ ಸೂಕ್ಷ್ಮಾವಸ್ಥೆ
ಯಲ್ಲಿಯೇ ಇದ್ದಿತು. ಯಾವುದೊಂದುವಸ್ತುವು ಹುಟ್ಟಬೇಕಾಗಿದ್ದರೂ, ಅದ
ಕ್ಕೆ ನಿಮಿತ್ತಕಾರಣವೆಂದೂ, ಉಪಾದಾನಕಾರಣವೆಂದೂ, ಸಹಕಾರಿಕಾರಣ
ವೆಂದೂ ಮೂರುಬಗೆಯ ಕಾರಣಗಳುಂಟು. ಒಂದು ಗಡಿಗೆಯನ್ನು ನಿರ್ಮಿಸ
ಬೇಕಾದರೆ, ಅದಕ್ಕೆ ಕುಂಬಾರನು ನಿಮಿತ್ತಕಾರಣವೆನಿಸುವನು. ಮಣ್ಣು
ಉಪಾದಾನಕಾರಣವು. ಕುಂಬಾರಚಕ್ರ, ದೊಣ್ಣೆ, ಮುಂತಾದುವು ಅದಕ್ಕೆ
ಸಹಕಾರಿಕಾರಣಗಳೆನಿಸುವುವು. ಪ್ರಪಂಚಸೃಷ್ಟಿಗೂ ಹೀಗೆಯೇ ಮೂರು
ಕಾರಣಗಳು ಬೇಕಲ್ಲವೆ? ಆದರೆ ಸೃಷ್ಟಿಗೆಮೊದಲು ಸೂಕ್ಷ್ಮಚಿದಚಿತ್ತುಗ
ಳನ್ನು ತನಗೆ ಶರೀರವಾಗಿ ಹೊಂದಿದ್ದ ಪರಮಾತ್ಮನೊಬ್ಬನುಹೊರತು ಬೇ
ರೊಂದೂ ಇಲ್ಲದಿದ್ದುದರಿಂದ, ಈ ಪ್ರಪಂಚಸೃಷ್ಟಿಯಲ್ಲಿ ಮೂರುಬಗೆಯ
ಕಾರಣಗಳೂ ಈಶ್ವರನೊಬ್ಬನೇ ಆಗಿರುವನು. ಒಬ್ಬನಿಗೇ ಈ ತ್ರಿವಿಧಕಾರಣ
ತ್ವವು ಹೇಗೆಂಬುದನ್ನು ಹೇಳುವೆನು ಕೇಳು! ಭಗವಂತನು ಸೂಕ್ಷ್ಮದಶೆಯಲ್ಲಿ
ಚೇತನಾಚೇತನಗಳನ್ನು ಶರೀರವಾಗಿ ಹೊಂದಿದ್ದ ತನ್ನಶರೀರವನ್ನೇ ಉಪಾ
ದಾನಕಾರಣವನ್ನಾಗಿ ಇಟ್ಟುಕೊಳ್ಳುವನು.ತಾನೇ ನಿಮಿತ್ತಕಾರಣವಾಗಿದ್ದು,
ತನ್ನ ಸಂಕಲ್ಪವನ್ನೇ ಸಹಕಾರಿಕಾರಣವನ್ನಾಗಿ ಮಾಡುವನು. ಪರಮಪು
ರುಷನು ತಾನು ಯಾವ ಬಗೆಯವಿಕಾರವೂ ಇಲ್ಲದವನಾಗಿಯೇಇದ್ದು, ಕಾಲಕ್ಕೆ
ತಕ್ಕಹಾಗೆ ವಿಕಾರಹೊಂದತಕ್ಕುದಾಗಿಯೂ,ಆಗಾಗ ಹೆಚ್ಚಿ ತಗ್ಗುತ್ತಿರುವಸತ್ವ
ರಜಸ್ತಮೋಗುಣಗಳಿಂದ ಕೂಡಿದುದಾಗಿಯೂ ಇದ್ದ ಮಾಯೆಯೆಂಬ ಪ್ರಕೃ
ತಿಯಲ್ಲಿ,ತನಗೆ ಶರೀರವಾದ ಜೀವನನ್ನು ಒಳಹುಗಿಸಿ,ಆ ಪ್ರಕೃತಿಗೆ ಸೃಷ್ಟಿಸಾಮ
ರ್ಥ್ಯವನ್ನುಂಟುಮಾಡಿದನು. ಈ ವಿಧವಾಗಿ ಪರಮಪುರುಷನು ಜೀವವಿಶಿಷ್ಟ
ವಾದ ಪ್ರಕೃತಿಗೆ ಸೃಷ್ಟಿಸಾಮರ್ಥ್ಯವನ್ನುಂಟುಮಾಡಿದಮೇಲೆಯೇ, ಆ
ಪ್ರಕೃತಿಯು, ಮಹತ್ತು ಮೊದಲಾದ ತತ್ವಗಳಾಗಿ ಪರಿಣಮಿಸಬೇಕೇಹೊರ
ತು, ಅದಕ್ಕೆ ತನಗೆ ತಾನೇ ಸೃಷ್ಟಿಸಾಮರ್ಥ್ಯವಿಲ್ಲವು. ಆದುದರಿಂದ ಪರಮ
ಪುರುಷನು, ಮೊದಲು ಜೀವದಮೂಲಕವಾಗಿ ಪ್ರಕೃತಿಗೆ ಸೃಷ್ಟಿಸಾಮರ್ಥ್ಯ
ವನ್ನುಂಟುಮಾಡಿದನು. ಈ ಸೃಷ್ಟಿಸಾಮರ್ಥ್ಯವನ್ನು ಹೊಂದಿ ಕಾಲದಿಂದ
ವಿಕಾರಹೊಂದುತಕ್ಕುದಾಗಿ, ತನಗೆ ಶರೀರವಾಗಿಯೂ ಇದ್ದ ಆಸೂಕ್ಷ್ಮಪ್ರ

ಕೃತಿಯಲ್ಲಿ ಭಗವಂತನು ಜೀವಶರೀರಕನಾಗಿ ತಾನೇ ಪ್ರವೇಶಿಸಿ, ತಮಃ ಪ್ರಧಾನವಾಗಿ ಅವ್ಯಕ್ತವೆನಿಸಿದ ಆ ಸೂಕ್ಷ್ಮಪ್ರಕೃತಿಯನ್ನು ಸೃಷ್ಟಿಕಾರ್ಯಕ್ಕೆ ಪ್ರೇರಿಸುತ್ತ, ಅದರೊಡನೆ ಸೇರಿದ ತಾನೇ ಮಹತ್ತತ್ವರೂಪವಾಗಿ ಕಾಣಿಸಿಕೊಂಡನು. ಎಂದರೆ, ಪ್ರಕೃತಿಪುರುಷರನ್ನು ಶರೀರವಾಗಿ ಉಳ್ಳ ಭಗವಂತನೇ ಸೂಕ್ಷ್ಮಪ್ರಕೃತಿಯಿಂದ ಮಹತ್ತತ್ವವನ್ನು ಎಬ್ಬಿಸಿಕೊಂಡಿ, ತಾನೂ ಅದರಲ್ಲಿ ಪ್ರವೇಶಿಸಿ, ಅದನ್ನು ತನಗೆ ಶರೀರವನ್ನಾಗಿ ಹೊಂದಿ ನಿಂತನು. ಹೀಗೆ ಜೀವಾಂಶದಿಂದಲೂ,ಸತ್ತ್ವಾದಿಗುಣಗಳಿಂದಲೂ ಕೂಡಿ,ಕಾಲವಶವಾಗಿ,ಭಗವಂತನ ಸಂಕಲ್ಪಕ್ಕೆ ಒಳಪಟ್ಟು, ಭಗವಂತನನ್ನು ಅಂತರಾತ್ಮನನ್ನಾಗಿ ಹೊಂದಿದ ಆ ಮಹತ್ತತ್ತ್ವವೇ ಪ್ರಪಂಚಸೃಷ್ಟಿಗೆ ತಕ್ಕಂತೆ ರೂಪಾಂತರವನ್ನು ಹೊಂದಿತು. ಹೀಗೆ ರೂಪಾಂತರವನ್ನು ಹೊಂದಿದ ಮಹತ್ತತ್ತ್ವದಿಂದ,ಶರೀರೇಂದ್ರಿಯಗಳಿಗೆ ಕರ್ತೃರೂಪವಾಗಿ, ಭೂತೇಂದ್ರಿಯಾದಿರೂಪಗಳಿಂದ ಪರಿಣಮಿಸುವ ಸ್ವಭಾವವುಳ್ಳ ಅಹಂಕಾರವೆಂಬ ತತ್ತ್ವವು ಹುಟ್ಟಿತು. ಈ ಅಹಂಕಾರವು ಸಾತ್ತ್ವಿಕವೆಂದೂ, ರಾಜಸವೆಂದೂ, ತಾಮಸವೆಂದೂ ಮೂರುವಿಧವಾಯಿತು.(ಇವುಗಳಲ್ಲಿ ಸಾತ್ತ್ವಿಕಾಹಂಕಾರವು ವೈಕಾರಿಕವೆಂದೂ,ರಾಜಸಾಹಂಕಾರವು ತೈಜಸವೆಂದೂ, ತಾಮಸಾಹಂಕಾರವು ಭೂತಾದಿಯೆಂದೂ ಕರೆಯಲ್ಪಡುವುದು.) ಮೇಲೆ ಹೇಳಿದ ಸಾತ್ತ್ವಿಕಾಹಂಕಾರವೇ ವಿಕಾರವನ್ನು ಹೊಂದುತ್ತ ಬಂದು, ಆದರಿಂದ ಮನಸ್ಸೆಂಬ ತತ್ತ್ವವು! ಹುಟ್ಟಿತು. ಮತ್ತು ಅಕ್ಕು ಮೊದಲಾದ ದೇವತೆಗಳಿಂದ ಅಧಿಷ್ಠಿತವಾಗಿ, ಅವರಿಂದ ಅಭಿನಯಿಸಲ್ಪಡುವ ಜ್ಞಾನೇಂದ್ರಿಯಕರ್ಮೇಂದ್ರಿಯಗಳೆಲ್ಲವೂ, ಈ ಸಾತ್ತ್ವಿಕಾಹಂಕಾರದಿಂದಲೇ ಹುಟ್ಟಿರುವುವು. ಆ ಇಂದ್ರಿಯಗಳಿಂದಲೇ ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ವಿಷಯಗಳೆಲ್ಲವೂ ತೋರುವುವು. ಹೀಗೆ ಶಬ್ದಾದಿವಿಷಯಗಳನ್ನು ತೋರ್ಪಡಿಸತಕ್ಕ ಇಂದ್ರಿಯಗಳೆಲ್ಲವೂ, ವೈಕಾರಿಕವೆಂಬ ಹೆಸರುಳ್ಳ ಸಾತ್ತ್ವಿಕಾಹಂಕಾರದಿಂದಲೇ ಹುಟ್ಟಿರುವುದರಿಂದ, ಅವುಗಳೂ ವೈಕಾರಿಕಗಳೆಂದು ಕರೆಯಲ್ಪಡುವುವು. ಈ ಇಂದ್ರಿಯಗಳು ಜ್ಞಾನೇಂದ್ರಿಯಗಳೆಂದೂ, ಕರ್ಮೇಂದ್ರಿಯಗಳೆಂದೂ ಎರಡು ಬಗೆಯಾಗಿರುವುವು. ಈ ಇಂದ್ರಿಯಗಳೆಲ್ಲವೂ ರಾಜಸಾಹಂಕಾರದಿಂದ ಸಹಕರಿಸಲ್ಪಟ್ಟ ಸಾತ್ತ್ವಿಕಾಹಂಕಾರದಿಂದ ಹುಟ್ಟಿದವುಗಳಾದುದ

ರಿಂದ ತೈಜಸಗಳೆಂದು ಕರೆಯಲ್ಪಡುವುವು. ರಾಜಸಾಹಂಕಾರವೆಂಬುದು,ಸಾ ತ್ವಿಕತಾಮಸಾಹಂಕಾರಗಳೆರಡಕ್ಕೂ ಸಹಾಯಮಾಡತಕ್ಕ ಸ್ವಭಾವವುಳ್ಳದೇ ಹೊರತು, ಅದು ಸ್ವತಂತ್ರವಾಗಿ ಯಾವಕಾರ್ಯವನ್ನೂ ನಡೆಸತಕ್ಕುದಲ್ಲ. ತಾ ಮಸಾಹಂಕಾರವೆಂಬುದು, ಪೃಥಿವಿ, ಅಪ್ಪು, ತೇಜಸ್ಸು, ಆಕಾಶ, ವಾಯು ವೆಂಬ ಐದುಭೂತಗಳಿಗೂ, ಗಂಧವೇ ಮೊದಲಾದ ಐದು ಭೂತಸೂಕ್ಷ್ಮಗ ಳಿಗೂ ಕಾರಣವಾಗಿರುವುದು. ಆದುದರಿಂದ ಭೂತಾದಿಯೆನಿಸಿಕೊಳ್ಳುವ ಆ ತಾಮಸಾಹಂಕಾರದಿಂದ,ಮೊದಲು ಆತ್ಮಸ್ವರೂಪವನ್ನು ತಿಳಿಸತಕ್ಕ ಶಬ್ದವೂ, ಅದರಿಂದ ಆಕಾಶವೂ ಹುಟ್ಟಿತು. ಕಾಲದಿಂದ ಪ್ರೇರಿತವಾಗಿ, ಸತ್ವಾದಿಗುಣ ದಿಂದ ಕೂಡಿ, ಜೀವಾಂಶಯುಕ್ತವಾಗಿರುವ ಆಆಕಾಶವು,ವಿಕಾರಹೊಂದುತ್ತ ಬಂದು,ಅದರಿಂದ ಸ್ಪರ್ಶತನ್ಮಾತ್ರವು ಹುಟ್ಟಿತು. ಈ ಸ್ಪರ್ಶತನ್ಮಾತ್ರದಿಂದ ವಾಯುವೆಂಬ ಭೂತವು ಹುಟ್ಟಿತು. ಈ ವಾಯುವು ವಿಕಾರವನ್ನು ಹೊಂದು ತ್ತ, ಆಕಾಶಗುಣವಾದ ಶಬ್ದದಿಂದಲೂ ಸೇರಿ, ಪ್ರಾಣ, ತೇಜಸ್ಸು, ಸಹಸ್ಸು, ಎಂಬ ಮೂರುಬಗೆಯ ಸಾಮರ್ಥ್ಯದಿಂದ ಹೆಚ್ಚು ಬಲವುಳ್ಳದಾಗಿ, ರೂಪತನ್ಮಾತ್ರವನ್ನು ಹುಟ್ಟಿಸಿತು. ಆ ರೂಪತನ್ಮಾತ್ರವೇ ಲೋಕಕ್ಕೆ ಪ್ರ ಕಾಶವನ್ನು ಕೊಡುವ ತೇಜಸ್ಸನ್ನು ಹುಟ್ಟಿಸಿತು. ಆ ತೇಜಸ್ಸೆಂಬುದು ಹಿಂದೆ ಹೇಳಿದ ಆಕಾಶವಾಯುಗಳ ಗುಣಗಳಾದ ಶಬ್ದಸ್ಪರ್ಶಗಳೊಡ ನೆಯೂ, ತನ್ನ ಗುಣವಾದ ರೂಪದೊಡನೆಯೂ ಸೇರಿ, ಭಗವಂತನ ಸಂಕಲ್ಪದಿಂದ ಪ್ರೇರಿತವಾಗಿ, ಕಾಲ, ಗುಣ, ಜೀವಾಂಶಗಳೊಡಗೂಡಿ, ರಸ ವೆಂಬ ತನ್ಮಾತ್ರವನ್ನು ಹುಟ್ಟಿಸಿತು. ಆದರಿಂದ ಜಲವೆಂಬ ಭೂತವು ಹುಟ್ಟಿ ತು ಹಾಗೆಯೇ ಶಬ್ದ, ಸ್ಪರ್ಶ, ರಸ, ಗುಣಗಳಿಂದ ಕೂಡಿದ ಜಲವು, ಭಗವಂ ತನ ಸಂಕಲ್ಪಕ್ಕೆ ವಿಷಯವಾಗಿ, ಕಾಲಗುಣಾದಿಗಳ ಸಂಬಂಧದಿಂದ ವಿಕಾರವ ನ್ನು ಹೊಂದುತ್ತ, ಗಂಧತನ್ಮಾತ್ರವನ್ನು ಹುಟ್ಟಿಸಿತು. ಗಂಧತನ್ಮಾತ್ರದಿಂದ ಭೂಮಿಯು ಹುಟ್ಟಿತು. ಓ ಪಿದುರಾ! ಹೀಗೆ ಹುಟ್ಟಿದ ಆಕಾಶಾದಿಭೂತಗ ಳಲ್ಲಿ, ಶಬ್ದವೊದಲಾದ ಗುಣಗಳು ಏಕೋತ್ತರವೃದ್ಧಿಯಾಗಿಯೇ ಸೇರಿರುವು ವೆಂದು ತಿಳಿ! ಏಕೆಂದರೆ, ಮೇಲೆಮೇಲೆ ಹುಟ್ಟಿದ ಭೂತಗಳೆಲ್ಲವೂ ತನಗೆ ಕಾರಣಭೂತಗಳಾದ ಹಿಂದಿನ ಭೂತದ ಗುಣಗಳೊಡನೆ ಕಲೆತೇ ಇರಬೇಕಾ

ದುದರಿಂದ, ಮುಂದೆ ಮುಂದೆ ಹುಟ್ಟತಕ್ಕ ಭೂತಗಳಲ್ಲಿ ಗುಣಗಳು ಹೆಚ್ಚು ತ್ತ ಬರುವುವು. (ಎಂದರೆ, ಮೊದಲನೆಯ ಭೂತವಾದ ಆಕಾಶದಲ್ಲಿ ಶಬ್ದವೆಂಬು ದೊಂದೇ ಗುಣವು. ಎರಡನೆಯ ಭೂತವಾದ ವಾಯುವಿನಲ್ಲಿ ಶಬ್ದಸ್ಪರ್ಶಗಳೆ ರಡೂ ಸೇರಿರುವುವು. ಆದರಿಂದ ಹುಟ್ಟುವ ತೇಜಸ್ಸೆಂಬ ಮೂರನೆಯ ಭೂತ ದಲ್ಲಿ,ಹಿಂದಿನ ಎರಡು ಭೂತಗುಣಗಳೊಡನೆ ರೂಪವೆಂಬ ಮೂರನೆಯ ಗುಣ ವೊಂದೂ ಸೇರುವುದು. ಹಾಗೆಯೇ ನಾಲ್ಕನೆಯ ಭೂತವಾದ ಜಲದಲ್ಲಿ,ಹಿಂ ದಿನ ಮೂರು ಭೂತಗುಣಗಳೊಡನೆ ರಸವೆಂಬ ಬೇರೊಂದು ಗುಣವೂ, ಐದ ನೆಯ ಭೂತವಾದ ಭೂಮಿಯಲ್ಲಿ, ಹಿಂದಿನ ನಾಲ್ಕುಗುಣಗಳೊಡನೆ ಗಂಧವೆಂ ಬ ಮತ್ತೊಂದು ಹೊಸಗುಣವೂ ಸೇರುವುದರಿಂದ, ಈ ಪಂಚಭೂತಗಳಿಗೂ ಉತ್ಪತ್ತಿಕ್ರಮವನ್ನನುಸರಿಸಿ ಒಂದೊಂದು ಗುಣವು ಹೆಚ್ಚುತ್ತ ಬರುವುದು). ಎಲೈ ಮಹಾತ್ಮನೆ! ಹೀಗೆ ಕಾಲ ಪ್ರಕೃತಿ ಜೀವಾಂಶಗಳಿಂದ ಕೂಡಿ, ವಿಷ್ಣು ವಿಗೆ ಶರೀರಭೂತಗಳೆನಿಸಿಕೊಂಡ, ಈ ಮಹತ್ತು ಮೊದಲಾದ ತತ್ವಗ ಳೆಲ್ಲವೂ, ತಮ್ಮೊಳಗೆ ಪರಸ್ಪರಸಂಬಂಧವಿಲ್ಲದೆ ಬೇರೆಬೇರೆಯಾಗಿದ್ದಾಗ, ಮುಂದೆ ನಡೆಯಬೇಕಾದ ಬ್ರಹ್ಮಾಂಡಸೃಷ್ಟಿಗೆ ಅಶಕ್ತಗಳಾಗಿದ್ದುದರಿಂದ, ತದಭಿಮಾನಿದೇವತೆಗಳೆಲ್ಲರೂ, ಪರಮಾತ್ಮನ ಮುಂದೆ ಕೈಜೋಡಿಸಿ ಹೀಗೆಂ ದು ಸ್ತೋತ್ರಯಾಡಲಾರಂಭಿಸಿದರು. ‘‘ಎಲೈ ಭಗವಂತನೆ!ನಿನ್ನ ಪಾದಪದ್ಮ ಗಳಿಗೆ ನಮಸ್ಕರಿಸುವೆವು. ಎಲೈ ದೇವನೆ! ನಿನ್ನ ಪಾದಪದ್ಮಗಳು ಮರೆಹೊಕ್ಕ ವರಿಗೆ ಸಮಸ್ತತಾಪಗಳನ್ನೂ ನೀಗಿಸಿ ರಕ್ಷಿಸತಕ್ಕ ಛತ್ರಗಳಂತಿರುವುವು. ನಿನ್ನ ಪಾದಾಶ್ರಯದಿಂದಲ್ಲವೇ ಯೋಗೀಶ್ವರರೆಲ್ಲರೂ ಭಯಂಕರವಾದ ಸಂಸಾರದುಃಖವನ್ನು ತೊಲಗಿಸಿಕೊಳ್ಳುವರು. ನಿನ್ನ ಪಾದಸೇವೆಯನ್ನು ಮಾಡದೆ, ತಾಪತ್ರಯದಿಂದ ಪೀಡಿತಗಳಾದ ಜೀವಗಳಿಗೆ ಎಷ್ಟುಮಾತ್ರ ವೂ ಸುಖವಿಲ್ಲ! ಅಂತವರಿಗೆ ತಾಪತ್ರಯನಿವೃತ್ತಿಗಾದರೂ ಅವಕಾಶವೆಲ್ಲಿ ? ನಿನ್ನ ಪಾದಾಶ್ರಯದಿಂದಲೇ ನಾವೆಲ್ಲರೂ ಮುಕ್ತಿಯನ್ನು ಹೊಂದಬೇಕು. ಓ ಈಶ್ವರಾ ! ಈ ನಿನ್ನ ಪಾದಗಳಲ್ಲವೇ ನದಿಗಳೊಳಗೆಲ್ಲಾ ಉತ್ತಮವೆನಿ ಸಿದ ಗಂಗಾನದಿಗೂ ಉತ್ಪತ್ತಿಸ್ಥಾನವಾಗಿರುವುದು. ನಿನ್ನ ಪಾದಾನುಗ್ರಹ ದಿಂದ ಹುಟ್ಟಿದ ಆ ಗಂಗಾನದಿಯೇ ಸಮಸ್ತಪಾಪನಿವಾರಕವೆನಿಸಿಕೊಂ

ಡಿರುವಾಗ, ಆ ಪುಣ್ಯನದಿಗೂ ಉತ್ಪತ್ತಿಸ್ಥಾನವಾದ ನಿನ್ನ ಪಾದಾರವಿಂದಗಳು ಪಾಪನಿವಾರಕವೆಂಬ ವಿಷಯವನ್ನು ಕೇಳಬೇಕೆ? ಓ ಮಹಾತ್ಮನೆ! ಹಕ್ಕಿಗಳು ಗೂಡಿನಲ್ಲಿ ಹುಟ್ಟಿ, ರೆಕ್ಕೆಗಳು ಬಂದಮೇಲೆ ಅಲ್ಲಿಂದ ಹೊರಕ್ಕೆ ಹೊರಟು, ನಾನಾಕಡೆಗಳಲ್ಲಿ ಸುತ್ತಿಬಂದು, ತಿರುಗಿ ತಮ್ಮ ಗೂಡುಗಳಲ್ಲಿಯೇ ಪ್ರವೇತಿಸುವಂತೆ, ನಿನ್ನ ಮುಖಕಮಲದಿಂದ ಹುಟ್ಟಿದ ವೇದಗಳು, ಸಮಸ್ತಲೋಕವನ್ನೂ ವ್ಯಾಪಿಸಿ, ತಿರುಗಿ ನಿನ್ನಲ್ಲಿಯೇ ಪರ್ಯವಸಾನಹೊಂದುತ್ತಿರುವುವು. ನಿನ್ನ ಮುಖಾರವಿಂದದಿಂದ ಹೊರಟ ಆವೇದಗಳನ್ನೇ ಆವಲಂಬನೆಯಾಗಿ ಹಿಡಿದ ಯತೀಶ್ವರರೆಲ್ಲರೂ, ಶುದ್ಧವಾದ ಮನಸ್ಸಿನಿಂದ ಯಾವ ನಿನ್ನ ಪಾದಗಳನ್ನು ಧ್ಯಾನಿಸುತ್ತಿರುವರೋ, ಅಂತಹ ನಿನ್ನ ಮಹಾಮಹಿಮೆಯನ್ನು ವರ್ಣಿಸುವುದಕ್ಕೆ ಯಾರಿಗೆತಾನೇ ಸಾಧ್ಯವು?ಓ ದೇವದೇವಾ! ಇದೋ!ನಿನ್ನ ಪಾದಗಳಲ್ಲಿ ಮರಹೊಕ್ಕಿರುವೆವು. ನಮ್ಮನ್ನು ರಕ್ಷಿಸು! ಆಸ್ತಿಕ್ಯಬುದ್ಧಿಯಿಂದಲೂ, ವೇದಗಳಲ್ಲಿ ವಿಧಿಸಲ್ಪಟ್ಟ ಕರ್ಮಯೋಗದಿಂದ ಸಹಕೃತವಾದ ಭಕ್ತಿಯೋಗದಿಂದಲೂ, ವೈರಾಗ್ಯಬಲದಿಂದ ಕೂಡಿದ ಜ್ಞಾನಯೋಗದಿಂದಲೂ ಪರಿಪಕ್ವವಾದ ಮನಸ್ಸುಳ್ಳ ಪಂಡಿತರು, ಯಾವ ನಿನ್ನ ಪಾದಪದ್ಮದಲ್ಲಿ ತಮ್ಮ ಮನಸ್ಸನ್ನು ನೆಲೆಗೊಳಿಸಿ, ಅನವರತವೂ ಧ್ಯಾನಿಸುತ್ತಿರುವರೋ, ಆ ನಿನ್ನ ಪಾದಗಳನ್ನು ನಂಬಿದ ನಮ್ಮನ್ನು ಅನುಗ್ರಹಿಸಬೇಕು. ಓ ಜಗನ್ನಾಯಕಾ! ಈ ನಿನ್ನ ಪಾದಕಮಲಗಳು ತನ್ನನ್ನು ನಂಬಿದ ಭಕ್ತರಿಗೆ ಸಂಸಾರಭಯನಿವಾರಕವಾಗಿಯೂ, ವಿರಕ್ತಿಕಾರಣವಾಗಿಯೂ ಇರುವ ಜ್ಞಾನಯೋಗವನ್ನು ತಾನಾಗಿಯೇ ಹುಟ್ಟಿಸುವುವು. ಅಂತಹ ನಿನ್ನ ಪಾದಗಳನ್ನು ನಂಬಿದ ನಮ್ಮೆಲ್ಲರನ್ನೂ ರಕ್ಷಿಸಬೇಕು! ಹೇ ದೇವಾ! ಲೋಕದ ಸೃಷ್ಟಿ, ಸ್ಥಿತಿ, ಲಯಗಳೆಂಬ ಕಾರ್ಯಗಳನ್ನು ನಡೆಸುವುದಕ್ಕಾಗಿ, ಬ್ರಹ್ಮರುದ್ರಾದಿ ಶರೀರಗಳಲ್ಲಿ ಪ್ರವೇಶಮಾಡಿ, ಆಯಾ ಕಾರ್ಯಗಳಿಗೆ ತಕ್ಕಂತೆ ಅನೇಕಾವತಾರಗಳನ್ನೂ ಧರಿಸಿರುವ ನಿನ್ನ ಪಾದಗಳನ್ನು ನಂಬಿ ಮರೆಹೊಕ್ಕಿರುವ ನಮ್ಮನ್ನು ಕಾಪಾಡಬೇಕು. ಮತ್ತು ಓ ದೇವಾ! ಸಂಸಾರಕೂಪದಲ್ಲಿ ಬಿದ್ದು, ಮನೆಮಂದಿಮಕ್ಕಳೆಂಬ ಬಲೆಯಲ್ಲಿ ಸಿಕ್ಕಿ, "ನಾನು, ನನ್ನದು" ಎಂಬ ಅಹಂಕಾರ ಮಮಕಾರಗಳಿಂದ ಬೀಗಿ ಬೆರೆಯುತ್ತಿರುವ ಮನುಷ್ಯನ ಹೃ

ದಯದಲ್ಲಿ, ನಿನ್ನು ಅಂತರ್ಯಾಮಿಯಾಗಿರುವಾಗಲೂ, ಅವರಿಗೆ ನಿನ್ನ ಪಾದಾರವಿಂದಗಳು ಬಹುದೂರವಾಗಿರುವುವು. ಅಂತವರು ಎಷ್ಟೆಷ್ಟು ಪ್ರಯತ್ನಪಟ್ಟರೂ ಅದನ್ನು ಕಾಣಲಾರರು. ಇಂತಹ ಆಶ್ಚರ್ಯಮಹಿಮೆಯುಳ್ಳ ನಿನ್ನಲ್ಲಿ ನಾವೆಲ್ಲರೂ ಶರಣುಹೊಂದುವೆವು. ಎಲೈ ಪುಣ್ಯಶ್ಲೋಕನೆ! ಇಂದ್ರಿಯವ್ಯಾಪಾರಗಳಿಗೆ ಪರವಶವಾದ ಮನಸ್ಸುಳ್ಳ ಮೂಢಜನರುಮಾತ್ರ, ನಿನ್ನ ಪಾದಪದ್ಮಗಳನ್ನು ಕಾಣಲಾರರೇಹೊರತು, ಅವುಗಳಲ್ಲಿ ಆತ್ಮಸಮರ್ಪಣವನ್ನು ಮಾಡಿ, ಅದರಿಂದ ಶಮದಮಾದಿಗುಣಗಳನ್ನು ಪಡೆದ ಕೆಲವು ಮಹಾತ್ಮರು ಅವುಗಳನ್ನು ಕಾಣುವರೆಂಬುದರಲ್ಲಿ ಸಂದೇಹವಿಲ್ಲ. (ನಿನ್ನ ಪಾದದಲ್ಲಿ ಆತ್ಮಸಮರ್ಪಣವನ್ನು ಮಾಡಿ, ಅದರಿಂದ ಶಮದಮಾದಿಗುಣಗಳನ್ನು ಪಡೆದ ಮಹಾತ್ಮರು, ಇಂದ್ರಿಯವಶರಾಗಿ ನಿನ್ನಲ್ಲಿ ವಿಮುಖರಾದ ಮೂಢಾತ್ಮರನ್ನು ಕಣ್ಣೆತ್ತಿಯೂ ನೋಡಲಾರರು.) ಎಲೈ ಸರ್ವೇಶ್ವರನೆ! ನಿನ್ನ ಕಥಾಮೃತವನ್ನು ಎಡೆಬಿಡದೆ ಪಾನಮಾಡುತ್ತ, ಅದರಿಂದುಂಟಾದ ಸೌಖ್ಯದಿಂದ ತಮ್ಮ ಸಮಸ್ತತಾಪವನ್ನೂ ನೀಗಿದ ಕೆಲವು ಪುಣ್ಯಾತ್ಮರು, ಪರಮಪೂಜ್ಯವಾಗಿಯೂ, ಕಾಲದೋಷಗಳಿಗೆ ಈಡಾಗದೆಯೂ ಇರುವ ವೈಕುಂಠಲೋಕವನ್ನು ಅನಾಯಾಸವಾಗಿಯೇ ಸೇರುವರು! ಧೀರರಾದ ಮತ್ತೆ ಕೆಲವರು, ವಿಷಯಾಭಿಲಾಷೆಯಲ್ಲಿ ಮನಸ್ಸನ್ನು ಹೋಗಗೊಳಿಸದೆ, ಯೋಗಬಲದಿಂದ ಇಂದ್ರಿಯಗಳನ್ನು ತಡೆದು, ಆ ಮನಸ್ಸನ್ನು ನಿನ್ನಲ್ಲಿಯೇ ದೃಢವಾಗಿ ನೆಲೆಗೊಳಿಸಿ, ಆ ಯೋಗದ ಮಹಿಮೆಯಿಂದ ದುಸ್ತರವಾದ ಮಾಯೆಯನ್ನೂ ದಾಟಿ, ನಿನ್ನ ಪಾದವನ್ನು ಸೇರುವುದುಂಟು. ಆದರೇನು! ಇಂತವರಿಗೂ ಕಷ್ಟವೆಂಬುದು ತಪ್ಪಿದುದಲ್ಲ. ಈ ವಿಧವಾಗಿ ಅಷ್ಟಾಂಗಯೋಗಮಾರ್ಗದಿಂದ ಭಕ್ತಿಯೋಗದಲ್ಲಿಳಿಯುವವರಿಗೆ, ಯಮ, ನಿಯಮ ಮೊದಲಾದ ಒಂದೊಂದು ಯೋಗಾಂಗವನ್ನು ಸಾಧಿಸಿಕೊಂಡು ಬರುವುದರಲ್ಲಿಯೂ ಬಹಳ ಕಷ್ಟವಿರುವುದಲ್ಲದೆ, ಅವುಗಳಲ್ಲಿ ಯಾವುದಾದರೂ ಒಂದು ತಪ್ಪಿಹೋದರೂ, ಅವರು ಸಿದ್ಧಿಯನ್ನು ಪಡೆಯಲಾರರು.ಹೀಗೆ ಪ್ರಯತ್ನಪಟ್ಟು ಭಕ್ತಿಯೋಗವನ್ನು ಸಾಧಿಸುವುದೂ ಬಹಳ ಶ್ರಮಕಾರಣವು. ನಿನ್ನ ಕಥಾಶ್ರವಣಪೂರ್ವಕವಾಗಿ ನಿನ್ನಲ್ಲಿ ಭಕ್ತಿಯನ್ನು ಸಂಪಾದಿಸಿದವರಿಗಾದರೋ, ಈ ವಿಧವಾದ ದುಃ

ಖವೊಂದೂ ಇರುವುದಿಲ್ಲ. ಯೋಗಾಭ್ಯಾಸದ ಪ್ರಯಾಸವೂ ಇರುವುದಿಲ್ಲ. ನಿನ್ನ ಕಥಾಮೃತವನ್ನು ಪಾನಮಾಡಿ, ಅದರಿಂದ ಭಕ್ತಿಯನ್ನು ಪಡೆದವರಿಗೆ, ವಿವೇಕಾದಿಸದ್ಗುಣಗಳೆಲ್ಲವೂ ತಾನಾಗಿಯೇ ಬಂದೊದಗುವುವು. ಓ ಪರ ಮಾತ್ಮಾ! ಪ್ರಕೃತದಲ್ಲಿ ನೀನು ಲೋಕಸೃಷ್ಟಿಗಾಗಿಯೇ ಸತ್ವಾದಿ ತ್ರಿಗುಣಗಳಿಂದ ನಮ್ಮನ್ನು ಮೊದಲು ಸೃಷ್ಟಿಸಿರುವೆಯಷ್ಟೆ? ಆದರೆ ನಮ್ಮ ಲ್ಲಿ ಒಬ್ಬರಿಗೊಬ್ಬರಿಗೆ ಪರಸ್ಪರಸಮಾಗಮವಿಲ್ಲದೆ, ನಾವೆಲ್ಲರೂ ಮುಂದಿನ ಬ್ರಹ್ಮಾಂಡರಚನೆಯ ವಿಷಯದಲ್ಲಿ ಅಶಕ್ತರಾಗಿರುವೆವು. ನಮ್ಮ ಉತ್ಪತ್ತಿಕಾ ರಣನಾದ ನಿನಗೆ, ಬ್ರಹ್ಮಾಂಡನಿರ್ಮಾಣದ ವಿಷಯದಲ್ಲಿ ನಾವು ಪ್ರತ್ಯುಪ ಕಾರವನ್ನು ಅತ್ಯವಶ್ಯವಾಗಿ ಮಾಡಬೇಕಾಗಿದ್ದರೂ, ಆ ವಿಷಯದಲ್ಲಿ ನಮಗೆ ಶಕ್ತಿಯಿಲ್ಲದಿರುವುದು. ಓ! ದೇವದೇವಾ! ನಿನ್ನ ಕ್ರೀಡಾಸಾಮಾಗ್ರಿಗಳಂತಿರು ವ ನಾವು ಆಯಾಕಾಲಗಳಲ್ಲಿ ನಿನ್ನನ್ನು ಯಥೋಚಿತವಾಗಿ ಆರಾಧಿಸುವುದ ಕ್ಕಾಗಲಿ, ನಾವಾಗಿ ಶಬ್ದಾದಿಭೋಗ್ಯವಸ್ತುಗಳನ್ನನುಭವಿಸುವುದಕ್ಕಾಗಲಿ, ಮುಂದೆ ಸೃಷ್ಟಿಸಲ್ಪಡುವ ದೇವಾದಿಲೋಕಗಳು, ಇಂದ್ರಿಯಗಳಿಗೆ ವಿಷಯಗಳಾದ ಪದಾರ್ಥಗಳನ್ನು ನಿನಗೆ ತಂದೊಪ್ಪಿಸುವುದಕ್ಕಾಗಲಿ ಹೇಗೆ ಸಾಧ್ಯವೋ ನಾವು ಕಾಣೆವು! ಪರಸ್ಪರಸಂಬಂಧವಿಲ್ಲದೆ ಬೇರೆಬೇರೆಯಾಗಿ ರುವ ನಾವು ಯಾವ ಕಾರ್ಯಕ್ಕೂ ಶಕ್ತಿಯಿಲ್ಲದವರಾಗಿರುವೆವು. ಹೇ ಪ್ರಭೂ! ನೀನಾದರೋ ಕಾರಣಪುರುಷನು! ವಿಕಾರರಹಿತನಾದವನು! ನಾವೆಲ್ಲರೂ ನಿನ್ನ ಕಾರ್ಯರೂಪವಾಗಿರುವೆವು. ನೀನು ನಮ್ಮೆಲ್ಲರಲ್ಲಿಯೂ ಅಂತರ್ಯಾಮಿಯಾಗಿ ನೆಲೆ ಗೊಂಡವನು! ಹಾಗಿದ್ದರೂ ಆಯಾವಸ್ತುಗಳಲ್ಲಿರುವ ದೋಷಕ್ಕೆ ಭಾಗಿ ಯಾಗುವವನಲ್ಲ. ಹೀಗೆ ಆದಿಪುರುಷನಾದ ನೀನು, ಶಬ್ದಾದಿಗುಣಗಳನ್ನು ಗ್ರ ಹಿಸತಕ್ಕ ಜ್ಞಾನಕರ್ಮೇಂದ್ರಿಯಗಳಿಗೆ ಕಾರಣವಾದ ಮಾಯೆಯಲ್ಲಿ, ಸೃಷ್ಟಿ ಸಾಮರ್ಥ್ಯವುಳ್ಳ ನಿನ್ನ ವೀರ್ಯವನ್ನಿರಿಸಿರುವೆಯಾದುದರಿಂದಲೇ, ನಾವೆಲ್ಲರೂ ಜನಿಸಿರುವೆವು. ಈಗಲೂ ನಾವೆಲ್ಲರೂ ನಿನಗೆ ಶರೀರಭೂತರಾಗಿರುವೆವು. ಆದು ದರಿಂದ ಓ ಸರ್ವೇಶ್ವರಾ! ನಮ್ಮಲ್ಲಿ ಕೃಪೆಯಿಟ್ಟು, ಮುಂದೆ ನಡೆಯಬೇಕಾದ ಜಗತ್ಸೃಷ್ಟಿಯಲ್ಲಿ ಶಕ್ತಿಯಿಲ್ಲದ ನಮಗೆ ಆ ಶಕ್ತಿಯನ್ನು ಕೊಟ್ಟು, ವಿಜ್ಞಾನ

ವನ್ನೂ ಕರುಣಿಸಿ ರಕ್ಷಿಸಬೇಕು. ನೀನು ಹಾಗೆ ಮಾಡಿದಪಕ್ಷದಲ್ಲಿಯೇ, ನಾವು ಯಾವ ಕಾರ್ಯಕ್ಕಾಗಿ ನಿನ್ನಿಂದ ಸೃಷ್ಟಿಸಲ್ಪಟ್ಟೆವೋ, ಆ ಕಾರ್ಯವನ್ನು ನೆರವೇರಿಸಬಲ್ಲೆವು" ಎಂದರು. *ಇಲ್ಲಿಗೆ ಐದನೆಯ ಅಧ್ಯಾಯವು.

---

* ಇಲ್ಲಿ ಮುಖ್ಯವಾಗಿ ತಿಳಿಯಬೇಕಾದ ಅಂಶವೇನೆಂದರೆ:—"ಪುರುಷೇಣಾತ್ಮ ವೀರ್ಯೇಣ ವೀರ್ಯಮಾಧತ್ತ ವೀರ್ಯವ್ಂ" "ರೇತಸ್ತ್ವಜಾಯಾಂ ಕವಿಮಾದಧೇ ಯಃ" ಇತ್ಯಾದಿವಾಕ್ಯಗಳಿಂದ ಪರಮಾತ್ಮರೂಪನಾದ ಸಮಷ್ಟಿಪುರುಷನಿಂದ ಸೃಷ್ಟಿಸಲ್ಪಟ್ಟ ಮಾಯೆಯೇ ಮಹದಾದಿತತ್ತ್ವಗಳಿಗೆ ಆರಂಭವೆಂದು ವ್ಯಕ್ತವಾಗುವುದು. ಮಹತ್ತು ಮೊದಲಾಗಿ ಪೃಥಿವಿಯವರೆಗಿರುವ ತತ್ವಗಳೆಲ್ಲವೂ ಅಚೇತನಗಳ ಅವಸ್ಥಾವಿಶೇಷಗಳೆನಿಸುವುವು. ಮಾಯೆಯೆಂಬುದು ಅಖಂಡವಾಗಿಯೇ ಮಹತ್ತೆಂಬ ತತ್ತ್ವವಾಗುವುದು. ಮಹತ್ತೆಂಬುದು ಅಖಂಡವಾಗಿ ಅಹಂಕಾರತತ್ತ್ವರೂಪಕ್ಕೆ ಮಾರ್ಪಡುವುದು. ಹೀಗೆಯೇ ಮುಂದಿನತತ್ವಗಳೂ ಪ್ರದೇಶಭೇದದಿಂದ ಮುಂದುಮುಂದಿನ ತತ್ವಗಳಾಗಿ ಬದಲಾಯಿಸುವುವು ಆದರೆ ಮಹದಾದಿಗಳು ಮೇಲೆಮೇಲೆ ಕಾರ್ಯರೂಪವಾಗಿ ಪರಿಣಮಿಸುವಾಗ, ಅವುಗಳ ಏಕದೇಶಗಳಲ್ಲಿಯೇ ಆಯಾಮುಂದಿನ ವಿಕಾರಗಳು ಹುಟ್ಟುವುವೇಹೊರತು,ಹಿಂದಿನ ತತ್ವವೆಲ್ಲವೂ ಪೂರ್ಣವಾಗಿ ಬೇರೆರೂಪಕ್ಕೆ ತಿರುಗುವುದಿಲ್ಲ. ಹೀಗಿಲ್ಲದೆ ಮಹದಾದಿಗಳೆಲ್ಲವೂ ಸಾಕಲ್ಯವಾಗಿಯೇ ಎಂದರೆ ಮೊತ್ತಕ್ಕೆ, ಉತ್ತರೋತ್ತರಕಾರ್ಯರೂಪಕ್ಕೆ ಮಾರ್ಪಡುವುವೆಂದು ಹೇಳಿದಪಕ್ಷದಲ್ಲಿ, ಹಿಂದಿನ ತತ್ವಗಳು ಪ್ರತ್ಯೇಕವಾಗಿ ಉಳಿಯುವುದಕ್ಕೇ ಅವಕಾಶವಿಲ್ಲದಂತಾಗುವುದು ಹೀಗಾದಪಕ್ಷದಲ್ಲಿ "ಪೃಥಿವ್ಯಪ್ಸು ಪ್ರಲೀಯತೇ"ಎಂಬುದು ಮೊದಲು,"ಮಹಾನವ್ಯಕ್ತೇ ಲೀಯತೇ" ಎಂಬ ವಾಕ್ಯದವರೆಗೆ ಹೇಳಿರುವ ಪ್ರಳಯಕ್ರಮಕ್ಕೆ ವಿರೋಧವು ಬರುವುದು.ಏಕೆಂದರೆ,ಒಂದು ವಸ್ತುವಿನಲ್ಲಿ ಏಕದೇಶದಿಂದ ಹುಟ್ಟಿ ಅವಸ್ಥಾಂತರವನ್ನು ಹೊಂದಿದ ಮತ್ತೊಂದು ದ್ರವ್ಯವು,ತನ್ನ ಅವಸ್ಥಾಭೇದವನ್ನುಬಿಟ್ಟು,, ಹಿಂದಿನ ದ್ರವ್ಯದಲ್ಲಿ ಲಯಿಸಿ, ಪೂರ್ವಾವಸ್ಥೆಯನ್ನು ಹೊಂದುವುದೇ ಲಯವೆನಿಸುವುದು.ಮೊಹಲಿದ್ದ ವಸ್ತುವಿಗೆ ಏಕದೇಶವಿಕಾರವನ್ನು ಹೇಳದೆ ಪೂರ್ಣವಾಗಿ ಬದಲಾಯಿಸುವುದೆಂದು ಹೇಳಿದಪಕ್ಷದಲ್ಲಿ, ಹಿಂದಿನವಸ್ತುವೇ ಇಲ್ಲದೆ ಹೋಗುವುದರಿಂದ, ಮೇಲೆ ಹೇಳಿದೆ ಲಯಲಕ್ಷಣವು ಸರಿಬಿಳದು. ಇದರಿಂದ ಪಂಚೀಕರಣಕ್ರಮಕ್ಕೂ ವಿರೋಧವುಂಟಾಗುವುದು. ಹೀಗೆ ಮಹತ್ತು ಮೊದಲಾಗಿ ಪೃಥಿವಿಯವರೆಗೆ ವಿಕಾರಹೊಂದುವ ಪ್ರಕೃತಿಯ ಒಂದೊಂದು ಅವಸ್ಥಾಭೇದದಲ್ಲಿಯೂ, ಪರಮಾತ್ಮಸ್ವರೂಪನಾದ ಸಮಷ್ಟಿಪುರುಷನ ಪ್ರವೇಶವಿರುವುದರಿಂದ, ಅದಕ್ಕೆ ಪರಮಾತ್ಮಶರೀ

ಪರಮಾತ್ಮನಿಂದ ಮಹದಾದಿತತ್ವಗಳಿಗೆ ಸೃಷ್ಟಿ ಸಾಮರ್ಥ್ಯವುಂಟಾಗಿ, ಅಂಡಸೃಷ್ಟಿಯಾದುದು. ಆ ಅಂಡದಿಂದ ಚತುರ್ಮುಖೋತ್ಪತ್ತಿ ಮುಂತಾದುವುಗಳು.

ಹೀಗೆ ಮಹತ್ತು ಮೊದಲಾದ ತತ್ವಗಳೆಲ್ಲವೂ ಬೇರೆಬೇರೆಯಾಗಿ, ಮುಂದೆ ನಡೆಯಬೇಕಾದ ಸೃಷ್ಟಿಕಾರ್ಯಕ್ಕೆ ಶಕ್ತಿಯಿಲ್ಲದೆ, ಮೊರೆಯಿಡುವುದನ್ನು ಕೇಳಿ ಭಗವಂತನು, ತನಗೆ ಶರೀರಭೂತಗಳಾದ ಆ ತತ್ವಗಳಿಗೆ ಸೃಷ್ಟಿಸಾಮರ್ಥ್ಯವನ್ನುಂಟುಮಾಡುವುದಕ್ಕಾಗಿ, ಕಾಲವೆಂದು ಕರೆಯಲ್ಪಡುವ ತನ್ನ ಶಕ್ತಿಯೊಡಗೂಡಿ, ಮಹತ್ತು, ಅಹಂಕಾರ, ಪಂಚಭೂತಗಳು, ಪಂಚತನ್ಮಾತ್ರಗಳು, ಮನಸ್ಸಿನೊಡಗೂಡಿದ ಜ್ಞಾನಕರ್ಮೇಂದ್ರಿಯಗಳು, ಈ ವಿಧವಾಗಿ ಬೇರ್ಪಟ್ಟಿರುವ ಇಪ್ಪತ್ತುಮೂರು ತತ್ವಸಮೂಹಗಳನ್ನೂ ಏಕಕಾಲದಲ್ಲಿ ಪ್ರವೇಶಿಸಿದನು. ಹೀಗೆ ಭಗವಂತನು, ಒಂದೊಂದು ತತ್ವದಲ್ಲಿಯೂ ಸೇರಿ ಬೇರೆಬೇರೆಯಾಗಿದ್ದ ಆ ತತ್ವಸಮೂಹಗಳೆಲ್ಲವನ್ನೂ ಪ್ರೇರಣಾರೂಪವಾದ ತನ್ನ ವ್ಯಾಪಾರದಿಂದ,ಒಂದಾಗಿ ಸೇರಿಸಿ,ಆಯಾ ತತ್ವಗಳು ನಡೆಸಬೇಕಾದ ವ್ಯಾಪಾರಗಳನ್ನೂ ತಿಳಿಸಿದನು. ಆದರಮೇಲೆ ಆ ತತ್ವಗಳೆಲ್ಲವೂ ಭಗವತ್ಸಂಕಲ್ಪದಿಂದ ತಮ್ಮತಮ್ಮ ವ್ಯಾಪಾರಗಳಲ್ಲಿ ತಿಳಿವಳಿಕೆಯನ್ನು ಹೊಂದಿ, ಆ ಭಗವಂತನ ಆಜ್ಞೆಯಿಂದ ತಮ್ಮತಮ್ಮ ಅಂಶಗಳ ಮೂಲಕವಾಗಿ ಚತುರ್ಮುಖನನ್ನು ಸೃಷ್ಟಿಸಿದುವು.ಆ ಚತುರ್ಮುಖನ ಉತ್ಪತ್ತಿಕ್ರಮವನ್ನೂ ಹೇಳುವೆನು ಕೇಳು. ಭಗವಂತನು ತನ್ನ ಸಂಕಲ್ಪರೂಪವಾದ ಜ್ಞಾನದಿಂದ ಪ್ರ

ರತ್ವವು ಸಿದ್ಧವಾಗುವುದು. ಆದರೆ ಅವ್ಯಕ್ತವೆನಿಸುವ ಪ್ರಕೃತಿಯೆಂದೇ ಭಗವಂತನಿಗೆ ಶರೀರವೆಂದು ಹೇಳಿದರೆ ಸಾಕಲ್ಲವೆ? ಹಾಗಿರುವಾಗ "ಯಸ್ಯಾವ್ಯಕ್ತಂ ಶರೀರಂ" ಎಂದು ಹೇಳಿದಮೇಲೆ, ತಿರುಗಿ "ಯಸ್ಯ ಪೃಥಿವೀ ಶರೀರಂ" "ಯಸ್ಯಾಪಶ್ಶರೀರಂ" ಇತ್ಯಾದಿವಾಕ್ಯಗಳಿಂದ, ಪೃಥಿವಿ ಮೊದಲಾದುವನ್ನು ಬೇರೆಬೇರೆ ನಿದರ್ಶಿಸಿ ಹೇಳಿದುದೇಕೆ? ಇದರಿಂದ ಪೃಥಿವ್ಯಾದಿಗಳು ಪ್ರಕೃತಿಗಿಂತ ಭಿನ್ನವಾದುವೆಂದು ತೋರಿಸಿದಂತಾಗುವುದಲ್ಲವೆ?"ಎಂದರೆ,ಆ ಪ್ರಕೃತಿಗೆ ಸಂಭವಿಸುವ ಮಹತ್ತತ್ವ,ಅಹಂಕಾರತತ್ವ,ಪೃಥಿವೀತತ್ವ ಮೊದಲಾದ ಅವಸ್ಥಾಭೇದಗಳಲ್ಲಿಯೂ,ಪರಮಾತ್ಮನಿಗೆ ಅವುಗಳಲ್ಲಿ ಅನುಪ್ರವೇಶವುಂಟೆಂಬುದನ್ನು ತೋರಿಸುವುದಕ್ಕಾಗಿಯೇಹೊರತು ಬೇರೆಯಲ್ಲವೆಂದು ಗ್ರಾಹ್ಯವು.

ವೇತಿಸಿಕೊಡನೆ, ಸ್ಥಾವರಜಂಗಮಗಳೆಲ್ಲವನ್ನೂ ಕಾರ್ಯರೂಪವಾಗಿ ತಮ್ಮಲ್ಲಿ ಹೊಂದಿದ್ದ ಆ ಇಪ್ಪತ್ತು ಮೂರುತತ್ವಗಳೂ ಪರಸ್ಪರವಾಗಿ ಸೇರಿ, ಚತುರ್ಮುಖರೂಪಿಯಾದ ಪರಮಪುರುಷನಿಗೆ ಗರ್ಭದಂತಿದ್ದ ಬ್ರಹ್ಮಾಂಡ ಸ್ವರೂಪವನ್ನು ಹೊಂದಿದುವು. ದೇವತೆಗಳೇ ಮೊದಲಾದ ಸಮಸ್ತಜೀವಾಂಶಗಳಿಂದ ಕೂಡಿದ ಆ ಸಮಷ್ಟಿಪುರುಷನು, ಆ ಅಂಡವು ಪರಿಪಕ್ವವಾಗುವವರೆಗೆ ಎಂದರೆ, ಒಂದು ಸಹಸ್ರವರುಷಗಳವರೆಗೆ ಆವರಣಜಲಮಧ್ಯದಲ್ಲಿ, ಸುವರ್ಣಮಯವಾದ ಆ ಅಂಡದಲ್ಲಿಯೇ ಅಡಗಿಕೊಂಡಿದ್ದನು. ಮಹತ್ತು ಮೊದಲಾದ ತತ್ವಗಳ ಸಂತಾನರೂಪವಾಗಿ, ಭಗವಂತನ ಸಂಕಲ್ಪಶಕ್ತಿಯನ್ನೂ ಹೊಂದಿದ್ದ ಆ ಸಮಷ್ಟಿಪುರುಷನು, ತಾನೇ ತನ್ನನ್ನು ಮೊದಲು ಭೋಕ್ತೃವೆಂದೂ, ವಿಷಯವೆಂದೂ, ಕರಣವೆಂದೂ ಮೂರು ವಿಧವಾಗಿ ವಿಭಾಗಿಸಿಕೊಂಡನು. ಆ ಮೂರರಲ್ಲಿ ಒಂದಾದ ಕರಣವನ್ನು ಐದುಜ್ಞಾನೇಂದ್ರಿಯಗಳಿಂದೂ, ಐದುಕರ್ಮೇಂದ್ರಿಯಗಳಿಂದೂ, ಮನಸ್ಸಿಂದೂ ಹನ್ನೊಂದು ವಿಧವಾಗಿ ವಿಭಾಗಿಸಿದನು. ವಿದುರಾ! ಆ ಸಮಷ್ಟಿಪುರುಷನಿಗೆ ಈ ವಿಧವಾಗಿ ವಿಭಾಗಿಸತಕ್ಕ ಶಕ್ತಿಯುಂಟಾದುದು ಹೇಗೆಂದು ಕೇಳುವೆಯಾ? ಈ ಚತುರ್ಮುಖಬ್ರಹ್ಮನು, ವ್ಯಷ್ಟಿಪದಾರ್ಥಗಳೆಲ್ಲಕ್ಕೂ ಕಾರಣಭೂತನಾದ ಪರಮಾತ್ಮಾಂಶದಿಂದಲೇ ಹುಟ್ಟಿದವನು. ಇದರಿಂದ ಇವನನ್ನು ಪರಮಾತ್ಮನ ಆವೇಶಾವತಾರವೆಂದು ಹೇಳಬೇಕು. ಭಗವಂತನ ಅಂಶಾವತಾರವಾದ ಈ ಸಮಷ್ಟಿಪುರುಷನಿಂದಲೇ, ಈ ಪ್ರಪಂಚವೆಲ್ಲವೂ ಹುಟ್ಟಿರುವುದು. ಚತುರ್ಮುಖಶರೀರಿಯಾದ ಈ ಭಗವಂತನೇ, ಮೊದಲು ಈಗ ನಮಗೆ ಬೇರೆಬೇರೆಯಾಗಿ ಕಾಣುವ ಎಲ್ಲಾ ಸೃಷ್ಟಿಪದಾರ್ಥಗಳನ್ನೂ ಏಕಾಕಾರವಾಗಿ ತನ್ನಲ್ಲಿ ಅಡಗಿಸಿಕೊಂಡು, ಒಂದೇ ಪುರುಷಾಕೃತಿಯಲ್ಲಿದ್ದುದರಿಂದ ಇವನನ್ನು ಸಮಷ್ಟಿಪುರುಷನೆನ್ನುವರು. ಇವನೂ ಪರಮಾತ್ಮನ ಅಂಶದಿಂದಲೇ ಕೂಡಿದವನು ಆದರೆ ಹೀಗೆ ಪರಮಾತ್ಮನನ್ನು ತನ್ನಲ್ಲಿ ಒಳಕೊಂಡು, ಅವನಿಗೆ ಶರೀರದಂತಿರುವುದು ಸಮಸ್ತಜೀವಗಳಿಗೂ ಸಾಧಾರಣವಾಗಿದ್ದರೂ, ಈ ಚತುರ್ಮುಖಸ್ವರೂಪವೆಂಬುದು ಅವುಗಳಲ್ಲಿ ಮೊದಲನೆಯದಾಗಿ, ಬೇರೆಬೇರೆಯಾಗಿ ವ್ಯಷ್ಟಿಜೀವಗಳನ್ನು ಹೊರಡಿಸುವುದಕ್ಕೂ

ಮೂಲಕಾರಣವಾಗಿರುವುದು. ಅದುದರಿಂದ ಇದೇ ಭಗವಂತನ ಅವತಾರ ಗಳಲ್ಲಿ ಮೊದಲನೆಯದು. ಭಗವಂತನು ಈ ಶರೀರದೊಳಗೆ ಪ್ರವೇಶಿಸಿರು ವುದರಿಂದ, ಇದು ಅನುಪ್ರವೇಶಾವತಾರವೆನಿಸುವುದು.ಶರೀರಾಂತರ್ಗತಗಳಾ ಗಿ ಭೋಕ್ತೃವೆಂದೆನಿಸಲ್ಪಡುವ ಸಮಸ್ತ ಜೀವಗಳೂ ಈ ಪುರುಷನಲ್ಲಿಯೇ ಒಟ್ಟುಗೂಡಿರುವುವು. ಆಕಾಶಾದಿಭೂತಗಳಲ್ಲಿರುವ ಶಬ್ದಾದಿವಿಷಯಗಳೂ ಇವನಲ್ಲಿಯೇ ಒಂದಾಗಿ ಕಲೆತಿರುವುವು. ಸಮಷ್ಟಿದಶೆಯಲ್ಲಿರುವ ಇಂದ್ರಿಯ ಗಳೂ ಇವನಲ್ಲಿಯೇ ಇರುವುವು. ಆದುದರಿಂದ ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು, ಮನಸ್ಸು, ಈ ಏಕಾದಶೇಂದ್ರಿಯಗಳಿಗೂ ಅವ ನು ನಿವಾಸಸ್ಥಾನವಾಗಿ ಸಮಷ್ಟಿ ಪುರುಷನೆನಿಸಿದನು. ವಿದುರಾ! ಇತ್ತಲಾಗಿ ಲೋಕನಿಯಾಮಕನಾದ ಭಗವಂತನು, ಮಹದಾದಿತತ್ತ್ವಗಳ ಪ್ರಾರ್ಥನೆ ಯನ್ನು ಸ್ಮರಿಸಿಕೊಂಡು, ಆ ಸಮಷ್ಟಿಪುರುಷನಲ್ಲಿ ಒಂದಾಗಿ ಸೇರಿರುವ ಇಂ ದ್ರಿಯಾದಿಗಳನ್ನು ವ್ಯಷ್ಟಿರೂಪದಿಂದ ಬೇರೆಬೇರೆಯಾಗಿ ಪ್ರತ್ಯೇಕಿಸಬೇಕೆಂ ದೆಣಿಸಿ, ತನ್ನ ದಿವ್ಯಜ್ಞಾನದಿಂದ "ಈ ಸಮಷ್ಟಿಪುರುಷನಾದ ಬ್ರಹ್ಮನಿಗೆ ವ್ಯಷ್ಟಿರೂಪದಿಂದ ಬೇರೆಬೇರೆಯಾಗಿ ಶರೀರೇಂದ್ರಿಯಾದಿಗಳನ್ನು ಸೃಷ್ಟಿಸ ತಕ್ಕ ಸಾಮರ್ಥ್ಯವುಂಟಾಗಲಿ!" ಎಂದು ಸಂಕಲ್ಪಿಸಿದನು. ಭಗವಂತನು ಆ ಪುರುಷನಲ್ಲಿ ತನ್ನ ನಿಜಾಂಶದಿಂದ ಒಳಹೊಕ್ಕು, ಈ ವಿಧವಾಗಿ ಮನಸ್ಸಿನಲ್ಲಿ ಸಂಕಲ್ಪಿಸಿದೊಡನೆ,ಆಬ್ರಹ್ಮಶರೀರದಲ್ಲಿ ವ್ಯಷ್ಟೀಂದ್ರಿಯಗಳ ಉತ್ಪತ್ತಿಗಾಗಿ ಕೆಲವು ಸ್ಥಾನಗಳೇರ್ಪಟ್ಟುವು. ಅವುಗಳನ್ನು ವಿವರಿಸುವೆನು ಕೇಳು! ಭಗವ ದಂಶದಿಂದ ಕೂಡಿದ ಸಮಷ್ಟಿಪುರುಷನಾದ ಆ ಚತುರ್ಮುಖನಿಂದ,ವ್ಯಷ್ಟಿ ಜೀವಕ್ಕೆ ಮುಖರೂಪವಾದ ಒಂದಾನೊಂದು ಸ್ಥಾನವು ಏರ್ಪಟ್ಟಿತು. ಒಡ ನೆಯೇ ಆ ಸ್ಥಾನದಲ್ಲಿ ತನಗಾಶ್ರಯವಾದ ವಾಕ್ಕೆಂಬ ಇಂದ್ರಿಯದೊಡನೆ ಅಗ್ನಿದೇವನು ಪ್ರವೇಶಿಸಿದನು ಈ ವಾಗಿಂದ್ರಿಯದಿಂದಲೇ ವ್ಯಷ್ಟಿಜೀವನು ಸಮಸ್ತಶಬ್ದಜಾಲಗಳನ್ನೂ ಉಚ್ಚರಿಸುತ್ತಿರುವನು. ಅದರಿಂದಾಚೆಗೆ ಆ ಚ ತುರ್ಮುಖನಿಂದ ತಾಲು ಸ್ಥಾನವು (ದವಡೆ) ಬೇರ್ಪಟ್ಟು, ಅದರಲ್ಲಿ ಲೋಕ ಪಾಲನಾದ ವರುಣನು,ತನಗೆ ಅಂಶಭೂತವಾದ ಜಿಹ್ವೇಂದ್ರಿಯದೊಡನೆ ಪ್ರ ವೇಶಿಸಿದನು. ಆ ಇಂದ್ರಿಯದಿಂದಲೇ ವ್ಯಷ್ಟಿಜೀವನು, ಉಪ್ಪು, ಹುಳಿ, ಮೊ

ದಲಾದ ರಸಗಳನ್ನು ತಿಳಿಯುವನು. ಆಮೇಲೆ ಭಗವದಂಶದಿಂದ ಕೂಡಿದ ಆಸಮಷ್ಟಿ ಪುರುಷನಿಂದ ಮೂಗಿನ ರಂಧ್ರಗಳೆಂಬ ಸ್ಥಾನವು ಬೇರ್ಪಟ್ಟು, ಅದರಲ್ಲಿ ಆಶ್ವಿನೀದೇವತೆಗಳಿಬ್ಬರೂ,ತಮಗಾಶ್ರಯವಾದ ಘ್ರಾಣೇಂದ್ರಿಯ ಗಳೊಡನೆ ಪ್ರವೇಶಿಸಿದರು. ಆ ಇಂದ್ರಿಯದಿಂದಲೇ ವ್ಯಷ್ಟಿಜೀವನು ಸುಗಂಧದುರ್ಗಂಧಗಳನ್ನು ಗ್ರಹಿಸುವನು. ಆದರಿಂದಾಚೆಗೆ ಆ ಸಮಷ್ಟಿಪುರುಷನಿಂದ ಕಣ್ಣುಗಳೆಂಬ ಸ್ಥಾನವು ಬೇರ್ಪಟ್ಟು, ಅದರಲ್ಲಿ ಆದಿತ್ಯದೇವನು ತನಗೆ ಸ್ಥಾನವಾದ ನೇತ್ರೇಂದ್ರಿಯದೊಡನೆ ಪ್ರವೇಶಿಸಿದನು. ಆ ನೇತ್ರೇಂದ್ರಿಯದಿಂದಲೇ ವ್ಯಷ್ಟಿಜೀವನಿಗೆ ರೂಪಜ್ಞಾನವುಂಟಾಗುವುದು. ಆದರಿಂದಾಚೆಗೆ ಆ ಬ್ರಹ್ಮನಿಂದ ಚರ್ಮಸ್ಥಾನವು ಏರ್ಪಟ್ಟು! ಆದರಲ್ಲಿ ವಾಯುದೇವನು ತನಗಧಿಷ್ಠಾನವಾದ ತ್ವಗಿಂದ್ರಿಯದೊಡನೆ ಪ್ರವೇಶಿಸಿದನು. ಆ ತ್ವಗಿಂದ್ರಿಯದಿಂದಲೇ ವ್ಯಷ್ಟಿಜೀವನು ಪದಾರ್ಥಗಳಲ್ಲಿರುವ ಪೃಥುತ್ವ ಕಠಿಣತ್ವಗಳನ್ನು ಗ್ರಹಿಸುವನು. ಹಾಗೆಯೇ ಆ ಚತುರ್ಮುಖನಿಂದ ವಿಭಕ್ತವಾದ ಕರ್ಣಸ್ಥಾನಗಳನ್ನು ದಿಗ್ದೇವತೆಗಳು ತಮಗೆ ಆಂಶಭೂತಗಳಾದ ಕರ್ಣೇಂದ್ರಿಯದೊಡನೆ ಪ್ರವೇಶಿಸಿದರು. ಆ ಇಂದ್ರಿಯದಿಂದಲೇ ಜೀವನು ಶಬ್ದಗಳನ್ನು ಕೇಳುವನು. ಆಮೇಲೆ ಆ ಚತುರ್ಮುಖನಿಂದ ವಿಭಕ್ತವಾದ ಚರ್ಮಸ್ಥಾನವನ್ನು ಸಸ್ಯಾಧಿದೇವತೆಗಳು, ನಿಜಾಂಶಭೂತಗಳಾದ ರೋಮಗಳೊಡನೆ ಪ್ರವೇಶಿಸಿದರು. ಆ ರೋಮಗಳಿಂದಲೇ ಜೀವನು ನವೆಯನ್ನು ತಿಳಿಯುವನು. ಇದರಿಂದ ಒಂದೇ ತ್ವಗಿಂದ್ರಿಯದಲ್ಲಿ ಸ್ಥಾನಬೇಧಗಳಿಂದ ನವೆಯೂ, ಸ್ಪರ್ಶಜ್ಞಾನವೂ ಉಂಟಾಗುತ್ತಿರುವುದು. ಆಮೇಲೆ ಆ ಚತುರ್ಮುಖನಿಂದ ಉಪಸ್ಥೇಂದ್ರಿಯವೆಂಬ ಸ್ಥಾನವು ಹುಟ್ಟಿ, ಆದರಲ್ಲಿ ಪ್ರಜಾಧಿಪತಿಯು,ನಿಜಾಂಶಭೂತವಾದ ರೇತಸ್ಸೆಂಬ(ವೀರ್ಯವೆಂಬ)ಇಂದ್ರಿಯದೊಡನೆ ಪ್ರವೇಶಿಸಿದನು. ಇದರಿಂದಲೇ ಜೀವನು ರತಿಸುಖವನ್ನು ಕಾಣುತ್ತಿರುವನು. ಆಮೇಲೆ ಸಮಷ್ಟಿಪುರುಷನಿಂದ ಬೇರ್ಪಟ್ಟ ಗುದ ಸ್ಥಾನವನ್ನು, ಮಿತ್ರದೇವನು ನಿಜಾಂಶಭೂತವಾದ ಪಾಯುವೆಂಬ ಇಂದ್ರಿಯದೊಡನೆ ಪ್ರವೇಶಿಸಿದನು. ಈ ಇಂದ್ರಿಯದಿಂದಲೇ ವ್ಯಷ್ಟಿಜೀವನು ಮಲವಿಸರ್ಜನೆಯೆನ್ನು ಮಾಡುತ್ತಿರುವನು. ಆದರಿಂದಾಚೆಗೆ ಚತುರ್ಮುಖ

ಖನಿಂದ ಹಸ್ತಸ್ಥಾನಗಳು ಏರ್ಪಟ್ಟುವು, ಅದರಲ್ಲಿ ಇಂದ್ರದೇವನು, ನೀಡುವುದು, ಎಳೆಯುವುದು, ಬಗ್ಗಿಸುವುದು, ಇವೇ ಮುಂತಾದ ಕಾರ್ಯಗಳಿಗೆ ಸಾಧನವಾದ ಹಸ್ತೇಂದ್ರಿಯದೊಡನೆ ಪ್ರವೇಶಿಸಿದನು. ಈ ಇಂದ್ರಿಯದಿಂದಲೇ ವ್ಯಷ್ಟಿಜೀವನು ತನ್ನ ಜೀವನವನ್ನು ಸಂಪಾದಿಸಿಕೊಳ್ಳುವನು. ಆ ಮೇಲೆ ಸಮಷ್ಟಿ ಪುರುಷನಿಂದ ಉತ್ಪನ್ನವಾದ ಪಾದಸ್ಥಾನಗಳನ್ನು, ವಿಷ್ಣುವು ಗಮನಸಾಧನವಾದ ಪಾದೇಂದ್ರಿಯಗಳೊಡನೆ ಪ್ರವೇಶಿಸಿದನು. ಇದರಿಂದಲೇ ಜೀವನು ಗಮನಾದಿಕಾರ್ಯಗಳನ್ನು ನಡೆಸುತ್ತಿರುವನು. ಆಮೇಲೆ ಚತುರ್ಮುಖನಿಂದ ವಿಭಕ್ತವಾದ ಹೃದಯಸ್ಥಾನವನ್ನು ಚಂದ್ರನು ತನ ಗಧಿಷ್ಠಾನವಾದ ಅಂತಃಕರಣದೊಡನೆ ಪ್ರವೇಶಿಸಿದನು. ಇದರಿಂದಲೇ ವ್ಯಷ್ಟಿಜೀವನಿಗೆ ಸಂಕಲ್ಪವಿಕಲ್ಪರೂಪಗಳಾದ ಕ್ರಿಯೆಗಳುಂಟಾಗುವುವು. ಮತ್ತು ಈ ಅಂತಃಕರಣವೆಂಬುದೊಂದೇ ಬೇರೆಬೇರೆ ವ್ಯಾಪಾರಭೇದದಿಂದ,ಮನಸ್ಸೆಂದೂ, ಬುದ್ಧಿಯೆಂದೂ,ಚಿತ್ತವೆಂದೂ,ಅಹಂಕಾರವೆಂದೂ, ನಾಲ್ಕುವಿಧಗಳಾಗುವು. ಅವುಗಳಲ್ಲಿ ಮನಸ್ಸಿಗೆ ಚಂದ್ರನೂ, ಬುದ್ಧಿಗೆ ಬೃಹಸ್ಪತಿಯೂ, ಅಹಂಕಾರಕ್ಕೆ ರುದ್ರನೂ, ಚಿತ್ತಕ್ಕೆ ಪ್ರಜಾಪತಿಯೂ, ಅಧಿದೇವತೆಗಳೆನಿಸಿರುವರು. ಮತ್ತು ಆ ಚತುರ್ಮುಖನಿಂದ ಬೇರ್ಪಟ್ಟ ಬುದ್ಧಿಸ್ಥಾನವನ್ನು, ಬ್ರಹ್ಮದೇವನು ನಿಶ್ಚಯರೂಪನಾದ ಜ್ಞಾನವನ್ನುಂಟುಮಾಡತಕ್ಕ ಸಾಮರ್ಥ್ಯದೊಡನೆ ಪ್ರವೇಶಿಸಿದನು. ಈ ಬೋಧನಾಂಶದಿಂದಲೇ ಜೀವನು, ತಾನು ತಿಳಿದುಕೊಳ್ಳಬೇಕಾದ ಸಮಸ್ತವನ್ನೂ ತಿಳಿದುಕೊಳ್ಳುವನು. ಇದರಂತೆಯೇ ಚತುರ್ಮುಖನಿಂದ ಬೇರ್ಪಟ್ಟ ಅಹಂಕಾರಸ್ಥಾನವನ್ನು, ರುದ್ರನು ದೇಹಾಭಿಮಾನವೆಂಬ ನಿಜಾಂಶದೊಡನೆ ಪ್ರವೇಶಿಸಿದನು. ಈ ಅಭಿಮಾನದಿಂದಲೇ ಜೀವನು ತನ್ನ ಕರ್ತವ್ಯವನ್ನು ನಡೆಸುತ್ತಿರುವನು. ಹಾಗೆಯೇ ಚತುರ್ಮುಖನಿಂದ ಭಿನ್ನವಾದ ಅಂತಃಕರಣವೆಂಬ ಸ್ಥಾನವನ್ನು, ಪ್ರಜಾಧಿಪತಿಯೆಂಬ ದೇವತೆಯು, ಯುಕ್ತಾರ್ಥವಿವೇಚನಾರೂಪವಾದ ಮನಸ್ಸಿನೊಡನೆ ಪ್ರವೇಶಿಸಿದನು. ಈ ಅಂಶದಿಂದಲೇ ಜೀವನು ಆಲೋಚಿಸಬೇಕಾದ ಅರ್ಥಜಾಲಗಳನ್ನೂ, ಅದರ ವಿಷಯವಾದ ಜ್ಞಾನವನ್ನೂ ಹೊಂದುವನು. ಮತ್ತು ವಿರಾಡ್ರೂಪಿಯಾದ ಆ ಸಮಷ್ಟಿಪುರುಷನ ತಿರಸ್ಸಿನಿಂದ ಸ್ವರ್ಗಲೋಕವೂ, ನಾ

ಭಿಯಿಂದ ಆಕಾಶವೂ, ಪಾದದಿಂದ ಭೂಲೋಕವೂ ಹುಟ್ಟಿದುವು ಈ ಮೂರುಲೋಕಗಳಲ್ಲಿ ಸ್ವರ್ಗಲೋಕವನ್ನು ಸತ್ವಗುಣಪ್ರಧಾನರಾದ ದೇವತೆಗಳು ಆಕ್ರಮಿಸಿ ನಿಂತರು. ರಜೋಗುಣಪ್ರಧಾನರಾದ ಮನುಷ್ಯಾದಿಗಳು, ರಾಜಸಕರ್ಮಗಳಿಗೆ ತಕ್ಕ ಫಲಗಳನ್ನನುಭವಿಸುವುದಕ್ಕೆ ಅನುಕೂಲಗಳಾದ ಭೂಲೋಕವನ್ನಾಶ್ರಯಿಸಿದರು. ತಮೋಗುಣಸ್ವಭಾವವುಳ್ಳವುಗಳಾಗಿಯೂ ರುದ್ರನಿಗೆ ಪಾರ್ಷದಗಣಗಳಾಗಿಯೂ ಇರುವ ಭೂತಪ್ರೇತಪಿಶಾಚಾದಿಗಳು ಆಕಾಶವನ್ನಾಶ್ರಯಿಸಿದುವು. ಆ ಸಮಷ್ಟಿಪುರುಷನ ಮುಖದಿಂದ ವೇದಗಳೂ, ಬ್ರಾಹ್ಮಣರೂ ಜನಿಸಿದರು. ಶರೀರದಲ್ಲಿ ಉತ್ತಮಭಾಗವಾದ ಮುಖದಿಂದ ಹುಟ್ಟಿದುದರಿಂದಲೇ, ಬ್ರಾಹ್ಮಣಜಾತಿಗೆ ಲೋಕದಲ್ಲಿ ಮೇಲ್ಮೆಯೂ, ಪ್ರಾಧಾನ್ಯವೂ, ಗುರುತ್ವವೂ ಏರ್ಪಟ್ಟಿರುವುದು. ಅದರಿಂದಾಚೆಗೆ ಬೇರೆ ಕೆಲವರು ಆ ವಿರಾಟ್ಪುರುಷನ ತೋಳುಗಳಿಂದ ಹುಟ್ಟಿದರು. ಅವರು ಆ ಭಗವಂತನ ಪರಾಕ್ರಮದ ಅಂಶದಿಂದ ಹುಟ್ಟಿದವರಾಗಿ, ಇತರವರ್ಣದವರನ್ನು ಚೋರಾದ್ಯುಪದ್ರವಗಳಿಂದ ರಕ್ಷಿಸತಕ್ಕವರಾದರು. ಹೀಗೆ ಇವರು ಇತರರನ್ನು ಅಪಾಯೆಗಳಿಂದ (ಗಾಯೆಗಳಿಂದ) ರಕ್ಷಿಸತಕ್ಕವರಾದುದರಿಂದಲೇ, ಅವರಿಗೆ ಕ್ಷತ್ರಜಾತಿಯವರೆಂದು ಹೆಸರಾಯಿತು. ಆಮೇಲೆ ಆ ವಿರಾಟ್ಪುರುಷನ ತೊಡೆಗಳಿಂದ ಬೇರೆ ಕೆಲವರು ಹುಟ್ಟಿದರು. ಅವರಿಗೆ ವೈಶ್ಯರೆಂದು ಹೆಸರು. ಅವರು ಲೋಕದಲ್ಲಿರುವ ಇತರವರ್ಣದವರೆಲ್ಲರಿಗೂ, ಕೃಷಿವಾಣಿಜ್ಯ, ವ್ಯವಹಾರಾದಿಗಳಿಂದ ಜೀವನೋಪಾಧಿಯನ್ನು ಸಂಪಾದಿಸುತ್ತಿರುವರು. ಆಮೇಲೆ ಭಗವಂತನ ಪಾದದಿಂದ ಮತ್ತೆ ಕೆಲವರು ಹುಟ್ಟಿದರು. ಇವರೇ ಶೂದ್ರರು. ಇವರು ತಮ್ಮ ಜಾತಿಯವರಿಗೆ ಉಚಿತವಾದ ಬ್ರಾಹ್ಮಣಾದಿಮೂರುವರ್ಣದವರ ಶುಶ್ರೂಷೆಯೆಲ್ಲಿಯೇ ನಿರತರಾಗಿ, ಅದರಿಂದಲೇ ಭಗವದನುಗ್ರಹಕ್ಕೆ ಪಾತ್ರರಾಗುವರು. ಈ ನಾಲ್ಕುವರ್ಣದವರೂ, ತಮತಮಗೆ ವಿಹಿತಗಳಾದ ಧರ್ಮಗಳನ್ನವಲಂಬಿಸಿ, ಶ್ರದ್ಧೆಯಿಂದ ತಮ್ಮ ಚಿತ್ತವನ್ನು ಪರಿಶುದ್ಧಿಹೊಂದಿಸುವುದಕ್ಕಾಗಿ, ಯಾವ ಭಗವಂತನಿಂದ, ತಾವು ಯಾವ ವೃತ್ತಿಗಾಗಿ ಸೃಷ್ಟಿಸಲ್ಪಟ್ಟರೋ, ಆ ವೃತ್ತಿಯಿಂದಲೇ ಆ ಶ್ರೀಹರಿಯನ್ನು ಸರ್ವಕಾಲದಲ್ಲಿಯೂ ಆರಾಧಿಸುತ್ತಿರುವರು.

ಓ ವಿದುರಾ! ಕಾಲ ಕರ್ಮ, ಸ್ವಭಾವರೂಪಗಳಾದ ಶಕ್ತಿಯಿಂದ ಕೂಡಿರುವ ಭಗವಂತನ ಈ ಮಾಯಾವಿಜೃಂಭಣದ ಮಹಿಮೆಯನ್ನು ವರ್ಣಿಸುವುದಕ್ಕೆ ಯಾರು ತಾನೇ ಸಮರ್ಥರು? ಆದರೆ "ಯಾರಿಗೂ ಸಾಧ್ಯವಿಲ್ಲದುದನ್ನು ನೀನು ಹೇಗೆ ವರ್ಣಿಸಬಲ್ಲೆ" ಯೆಂದು ನೀನು ನನ್ನನ್ನು ಕೇಳಬಹುದು. ನನಗೂ ಆ ಶ್ರೀಹರಿಯ ಮಹಿಮೆಯನ್ನು ವರ್ಣಿಸಲು ಸಾಧ್ಯವಲ್ಲ. ನಾನೂ ಅದನ್ನು ಸಂಪೂರ್ಣವಾಗಿ ವರ್ಣಿಸಲಾರೆನು. ಹಾಗಿದ್ದರೂ ನಾನು ನನ್ನ ಗುರುಮುಖವಾಗಿ ಎಷ್ಟು ಮಟ್ಟಿಗೆ ಕೇಳಿರುವೆನೋ, ಅಷ್ಟನ್ನು ಮಾತ್ರ ನಿನಗೆ ಹೇಳುತ್ತಿರುವೆನು. ಕೊನೆಗೆ ಅಷ್ಟುಮಾತ್ರವನ್ನು ತಿಳಿಸುವುದಕ್ಕೂ ನನಗೆ ಶಕ್ತಿಯಿರಲಾರದು. ಅವುಗಳಲ್ಲಿಯೂ ನನ್ನ ಬುದ್ಧಿಗೆ ತೋರಿದಷ್ಟನ್ನು ಮಾತ್ರ ಹೇಳಬಲ್ಲೆನು. ಭಗವಂತನ ಮಹಿಮೆಯಲ್ಲಿ ಅಲ್ಪಸ್ವಲ್ಪಮಾತ್ರವನ್ನು ವರ್ಣಿಸುವುದರಿಂದ ಫಲವೇನೆಂದು ಕೇಳುವೆಯಾ? ಅದರಿಂದಲೇ ಎಷ್ಟೋ ಲಾಭವುಂಟು. ಆ ಪರಮಾತ್ಮನನ್ನು ಬಿಟ್ಟು ಇತರರ ಗುಣಗಳನ್ನು ಕೊಂಡಾಡುವುದರಿಂದ ದೋಷಯುಕ್ತವಾದ ವಾಕ್ಯಗಳನ್ನು ಪವಿತ್ರವಾಗಿ ಮಾಡುವುದೇ ಹರಿನಾಮಸ್ಮರಣೆಗೆ ಒಂದು ಮೊದಲನೆಯ ಫಲವು. ಆ ಭಗವನ್ಮಹಿಮೆಯನ್ನು ತಿಳಿದಮಟ್ಟಿಗೆ ವರ್ಣಿಸುವುದರಿಂದಲೇ ಅವರವರು ತಮ್ಮ ಇಷ್ಟಸಿದ್ಧಿಯನ್ನೂ ಪಡೆಯಬಹುದು. ವಿದುರಾ! ಆ ಭಗವಂತನ ಮಹಿಮೆಯನ್ನು ಪೂರ್ಣವಾಗಿ ವರ್ಣಿಸಿದಹೊರತು ಫಲವಿಲ್ಲವೆಂದು ಮಾತ್ರ ತಿಳಿಯಬೇಡ! ಮುಖ್ಯವಾಗಿ ಮನುಷ್ಯನು ವಚನಶಕ್ತಿಯನ್ನು ಹೊಂದಿರುವುದಕ್ಕೆ, ಪುಣ್ಯಶ್ಲೋಕನಾದ ಭಗವಂತನ ಗುಣಕೀರ್ತನವೇ ಒಂದು ಮುಖ್ಯಫಲವು. ಹಾಗೆಯೇ ವಿದ್ವಾಂಸರಾದ ಮಹಾತ್ಮರು ವಿಷ್ಣುಕಥೆಗಳನ್ನು ವರ್ಣಿಸುತ್ತಿರುವಾಗ, ಆ ಕಥಾಮೃತವನ್ನು ಕಿವಿಗೊಟ್ಟು ಕೇಳಿ ತೃಪ್ತಿಪಡುವುದೇ ಕರ್ಣೇಂದ್ರಿಯಗಳಿಗೆ ಫಲವು. ಓ ವಿದುರಾ! ಆ ಭಗವಂತನ ಮಹಿಮೆಯನ್ನು ತಿಳಿಯಲು ನಾವುಮಾತ್ರವೇ ಅಸಮರ್ಥರೆಂದೆಣಿಸಬೇಡ. ಆ ಮಹಾವಿಷ್ಣುವಿನ ನಾಭಿಕಮಲದಲ್ಲಿಯೇ ಹುಟ್ಟಿ, ಆತನ ಸಾನ್ನಿಧ್ಯದಲ್ಲಿಯೇ ಇದ್ದು, ಅವನ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ, ಸಮಸ್ತ ಪ್ರಪಂಚವನ್ನೂ ಸೃಷ್ಟಿಸತಕ್ಕ ಶಕ್ತಿಯುಳ್ಳ ಬ್ರಹ್ಮನೂಕೂಡ, ಅನೇಕಸಂವತ್ಸರಗಳವರೆಗೆ

ಯೋಗಬಲದಿಂದ ಪರಿಪಕ್ವವಾದ ತನ್ನ ಬುದ್ಧಿಯಿಂದಲೂ ಆತನ ಮಹಿಮೆಯನ್ನು ಪೂರ್ಣವಾಗಿ ತಿಳಿಯಲಾರದೆ ಹೋದನು. ಇನ್ನು ನಮ್ಮಂತವರ ಪಾಡೇನು? ಆಹಾ! ಇದೂ ಹಾಗಿರಲಿ! ಮತ್ತೊಂದಾಶ್ಚರ್ಯವನ್ನು ಕೇಳು! ಆ ಭಗವಂತನ ಆಶ್ಚರ್ಯಶಕ್ತಿಯೆಂಬುದು ಆಶ್ಚರ್ಯಶಕ್ತಿಯುಳ್ಳವರನ್ನೂ, ಮರುಳುಮಾಡುತ್ತಿರುವುದು. ಆ ಪರಮಾತ್ಮನೇ ವೇದಸ್ವರೂಪನಾಗಿ ಬಂದು, ತಾನೇ ತನ್ನನ್ನು ಹೀಗೆಂದು ನಿಶ್ಚಯಿಸಲಾರದೆ ಹಿಂತಿರುಗುವುದಾಗಿ ಹೇಳಿರುವನು. ಇನ್ನು ಬ್ರಹ್ಮಾದಿದೇವತೆಗಳ ವಿಷಯವನ್ನು ಹೇಳತಕ್ಕುದೇನು? ಓ ವಿದುರಾ! ಮುಖ್ಯವಾಗಿ ಒಂದೇ ಮಾತಿನಲ್ಲಿ ಹೇಳುವನು ಕೇಳು? ಮಹತ್ತು ಮೊದಲಾದ ತತ್ವಗಳಾಗಲಿ, ದಿಕ್ಪತಿಗಳಾಗಲಿ, ಚತುರ್ಮುಖನಾಗಲಿ, ವೇದಗಳಾಗಲಿ, ಯೋಗಶುದ್ಧವಾದ ಮನಸ್ಸಾಗಲಿ, ಪರೋಕ್ಷಜ್ಞಾನವುಳ್ಳ ನಮ್ಮಂತಹ ಋಷಿಗಳಾಗಲಿ, ಯಾವನ ಮಹಿಮೆಯನ್ನು ತಿಳಿಯುವುದಕ್ಕಾಗಿ ಪ್ರಯತ್ನಿಸಿ,! ಆ ಉದ್ದೇಶವನ್ನು ಕೊನೆಮುಟ್ಟಿಸಲಾರದೆ ಹಿಂತಿರುಗುತ್ತಿರುವೆವೋ, ಅಂತಹ ಭಗವಂತನಿಗೆ ಇದೋ ನಮಸ್ಕಾರವು." ಇಲ್ಲಿಗೆ ಆರನೆಯ ಅಧ್ಯಾಯವು.

ವಿದುರನು ಮೈತ್ರೇಯನನ್ನು ನಾನಾವಿಧವಾಗಿ ಪ್ರಶ್ನೆ ಮಾಡಿದುದು.

ಹೀಗೆ ಹೇಳುತ್ತಿರುವ ಮೈತ್ರೇಯನ ಮಾತನ್ನು ಕೇಳಿ ವ್ಯಾಸಪುತ್ರನಾಗಿಯೂ, ತತ್ವದರ್ಶಿಯಾಗಿಯೂ ಇದ್ದ ವಿದುರನು, ತನ್ನ ಪ್ರಶ್ನೆಗಳಿಂದ ಆ ಮೈತ್ರೇಯನಿಗೆ ಮತ್ತಷ್ಟು ಪ್ರೋತ್ಸಾಹವುಂಟಾಗುವಂತೆ ತಿರುಗಿ ಪ್ರಶ್ನೆ ಮಾಡುವನು ೦೦ಓ ಮಹರ್ಷೀ! ಜ್ಞಾನಾದಿಷಡ್ಗುಣಪರಿಪೂರ್ಣನಾಗಿಯೂ, ಜ್ಞಾನೈಕಸ್ವರೂಪನಾಗಿಯೂ, ಆದುದರಿಂದಲೇ ಯಾವಾಗಲೂ, ಯಾವುದೊಂದು ವಿಕಾರವೂ ಇಲ್ಲದವನಾಗಿಯೂ, ಸತ್ವರಜಸ್ತಮಸ್ಸುಗಳೆಂಬ ಪ್ರಕೃತಿಗುಣಗಳಲ್ಲಿ ಯಾವುದೊಂದರ ಸಂಬಂಧವೂ ಇಲ್ಲದವನಾಗಿರುವ ಆ ಭಗವಂತನಿಗೆ, ಈ ಗುಣಗಳ ಸಂಬಂಧದಿಂದುಂಟಾಗತಕ್ಕ ದುಃಖ ಮೋಹಾದಿಗಳೂ, ಮನುಷ್ಯಾದಿರೂಪವಿಕಾರಗಳೂ, ಲೀಲಾರ್ಥವಾಗಿಯಾದರೂ ಏಕೆ ಸಂಭವಿಸಬೇಕು? ಹೀಗೆ ಸಂಭವಿಸಿದಮೇಲೆ ಅದರಿಂದುಂಟಾದ ದೋಷಗಳು ಅವನಿಗೆ ಅಂಟದಿರುವುದು ಹೇಗೆ? ಮೇಲೆ ಹೇಳಿದಂತೆ ಭಗವಂತನಿಗೆ ಪರಿಣಾಮರೂಪವಾದ ಕ್ರಿಯೆಗಳಾಗಲಿ, ಗುಣಸಂಬಂಧವಾಗಲಿ ಇಲ್ಲದಮೇಲೆ, ಅವನು ಲೋಕಕ್ಕೆ ಕಾರಣನಾಗಿಯೂ, ಕರ್ತನಾಗಿಯೂ ನಿಲ್ಲುವುದು ಹೇಗೆ? ಮತ್ತು ಪೂರ್ಣಕಾಮನಾದ ಭಗವಂತನಿಗೆ ಈಜಗತ್ಸೃಷ್ಟಿ ಮೊದಲಾದ ಕಾರ್ಯಗಳಲ್ಲಿ ಆಸೆಯೇಕೆ? ಮಕ್ಕಳಿಗೆ ಆಟಪಾಟಗಳಲ್ಲಿ ಆಸೆ ಹುಟ್ಟುವಂತೆ ಅವನಿಗೂ ಇದು ಲೀಲಾಮಾತ್ರವೆಂದು ಕೆಲವರು ಹೇಳಬಹುದು. ಈ ದೃಷ್ಟಾಂತವೂ ಸಮಂಜಸವಾಗಿರುವಂತೆ ತೋರುವುದಿಲ್ಲ. ಏಕೆಂದರೆ, ಆಟಕ್ಕೆ ಬೇಕಾದ ಸಾಮಗ್ರಿಗಳಾಗಲಿ, ತನ* ಸಮವಾಗಿ ಆಟವಾಡತಕ್ಕ ಇತರ ಬಾಲಕರಾಗಲಿ, ಒದಗಿದಾಗಲೇ ಬಾಲಕರಿಗೆ, ಆ ಆಟದಲ್ಲಿ ಆಸೆಯೂ, ಅದಕ್ಕೆ ಬೇಕಾದ ಪ್ರಯತ್ನವೂ ಸಂಭವಿಸುವುದು. ಭಗವಂತನಾದರೋ ಆತ್ಮಾರಾಮನಾಗಿ ತನ್ನಲ್ಲಿ ತಾನೇ ಆನಂದವನ್ನನುಭವಿಸತಕ್ಕವನು. ಆವಾಪ್ತಸಮಸ್ತಕಾಮನಾದುದರಿಂದ ಅವನಿಗೆ ಯಾವುದೊಂದುದ್ದೇಶವೂ ಹುಟ್ಟುವ ಸಂಭವವಿಲ್ಲ. ಒಂದುವೇಳೆ ಕ್ರೀಡಾರ್ಥವಾಗಿ ಆ ಅಭಿಲಾಷೆಯು ಹುಟ್ಟಿದರೂ, ತನಗಿಂತಲೂ ಬೇರೆಯಾದ, ಕ್ರೀಡಾಸಾಮಗ್ರಿಗಳಾಗಲಿ

ಆ ಕ್ರೀಡೆಯಲ್ಲಿ ಪ್ರವೃತ್ತಿಯನ್ನುಂಟುಮಾಡಿಸತಕ್ಕ ಬೇರೊಬ್ಬ ಪುರುಷನಾಗಲಿ ಇದ್ದಹೊರತು ಆಕಾರ್ಯವೂ ಸಾಧ್ಯವಲ್ಲ. ಹಾಗಿಲ್ಲದೆ ಪೂರ್ಣಕಾಮನಾಗಿ, ಮೊದಲು ತಾನೊಬ್ಬನೇ ಆಗಿದ್ದ ಪರಮಾತ್ಮನಿಗೆ, ಈ ಕೋರಿಕೆಯು ಹುಟ್ಟಿತೆಂಬುದೂ ಅಸಂಗತವಲ್ಲವೆ? ಮತ್ತು "ಪ್ರಕೃತಿಪುರುಷರೊಡಗೂಡಿದ ಆ ಭಗವಂತನಿಗೇ ಜಗತ್ಕರ್ತೃತ್ವಾದಿಗಳನ್ನೂ ಅಂಗೀಕರಿಸಿ, ಈಶ್ವರನು ಹೀಗೆ ಉಪಾದಾನಕಾರಣವಾಗಿದ್ದರೂ, ಅವನಿಗೆ ಪರಿಣಾಮ, ಕ್ಲೇಶ, ಮುಂತಾದ ದೋಷಗಳು ಸಂಭವಿಸಲಾರದು. ಏಕೆಂದರೆ, ಪ್ರಕೃತಿಪುರುಷರನ್ನು ಶರೀರವಾಗಿ ಹೊಂದಿರುವ ಭಗವಂತನೇ ಜಗತ್ಕಾರಣನೆಂದು ಹೇಳುವುದರಿಂದ, ಕ್ಲೇಶ, ವಿಕಾರ, ಮುಂತಾದುವುಗಳೆಲ್ಲವೂ ಆ ಪ್ರಕೃತಿಪುರುಷರಿಗೆ ಸಂಬಂಧಿಸುವುವೇಹೊರತು ಈಶ್ವರನಿಗೆ ಸಂಬಂಧಿಸಲಾರದು" ಎಂದು ಹೇಳಿದೆ, ಇದರಿಂದ "ಗುಣತ್ರಯಾತ್ಮಕವಾಗಿ, ತನಗೆ ಅಧೀನವಾದ ಪ್ರಕೃತಿಯಿಂದಲೇ ಭಗವಂತನು, ಲೋಕಗಳನ್ನು ಸೃಷ್ಟಿಸಿ, ಅವುಗಳನ್ನು ಕಾಪಾಡುತಿದ್ದು, ಕೊನೆಗೆ ಅವುಗಳನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುತ್ತ, ಈ ವಿಧವಾಗಿ ಸೃಷ್ಟಿಸ್ಥಿತಿ ಸಂಹಾರಗಳೆಂಬ ಮೂರುಕಾರ್ಯಗಳನ್ನೂ ನಡೆಸುತ್ತಿರುವನು. ತನಗೆ ಶರೀರವಾಗಿದ್ದ ಮಾಯೆಯನ್ನೇ ಮಹತ್ತು ಮೊದಲಾದ ತತ್ವಗಳಂತೆ ಮಾರ್ಪಡಿಸಿ, ತಾನೂ ಒಂದೊಂದರಲ್ಲಿ ಒಂದೊಂದು ಗುಣವನ್ನು ಮುಖ್ಯವಾಗಿ ತೋರಿಸುತ್ತ, ಬ್ರಹ್ಮ, ವಿಷ್ಣು, ರುದ್ರರೆಂಬ ಮೂರು ಶರೀರಗಳನ್ನು ಧರಿಸಿ ಸೃಷ್ಟ್ಯಾದಿ ಕಾರ್ಯಗಳನ್ನು ನಡೆಸುವನು. ಇದರಿಂದ ಆ ಪರಮಾತ್ಮನಿಗೆ ದೋಷಸಂಬಂಧವೇ ಇರಲಾರದು" ಎಂದು ಸಮಾಧಾನವನ್ನು ಹೇಳಬಹುದು. ಈ ಸಮಾಧಾನವೂ ತೃಪ್ತಿಕರವಾಗಿ ತೋರುವುದಿಲ್ಲ. ಏಕೆಂದರೆ, ಪರಮಾತ್ಮನಾದವನು ದೇಶಗುಣದಿಂದಲಾಗಲಿ, ಕಾಲಗುಣದಿಂದಲಾಗಲಿ, ಅವಸ್ಥಾವಿಶೇಷದಿಂದಲಾಗಲಿ, ತನಗೆ ತಾನೇ ಆಗಲಿ, ಮತ್ತೊಬ್ಬರ ದೆಸೆಯಿಂದಲಾಗಲಿ, ಯಾವ ಕಾರಣದಿಂದಲೂ ವ್ಯತ್ಯಾಸಹೊಂದದ ವಿಜ್ಞಾನವೇ ಸ್ವರೂಪವಾಗಿ ಉಳ್ಳವನು. ಅವನು ಸರ್ವಾಂತರ್ಯಾಮಿಯಾದುದರಿಂದ ಅವನಿಗೆ ದೇಶನಿಯಮವಿಲ್ಲ. ದೀಪಜ್ವಾಲೆಯಂತೆ ತಾನಿದ್ದಸ್ಥಳವನ್ನು ಮಾತ್ರ ಬೆಳಗುವನೆಂಬ ದೇಶನಿಯಮವಿಲ್ಲದೆ ಎಲ್ಲೆಲ್ಲಿಯೂ ಬೆಳಗುವನು. ಮಿಂಚಿನಂತೆ

ಒಂದೊಂದು ಕಾಲದಲ್ಲಿಮಾತ್ರ ಕಾಣಿಸಿಕೊಂಡು ಕಣ್ಮರೆಯಾಗುವನೆಂಬ ಕಾಲನಿಯಮವಿಲ್ಲದೆ ಯಾವಾಗಲೂ ಬೆಳಗುತ್ತಿರುವನು. ಮತ್ತು ಈಶ್ವರನು ವಿಕಾರಶೂನ್ಯನಾದುದರಿಂದ ಅವನಿಗೆ ಯಾವವಿಧದ ಅವಸ್ಥಾಬೇಧದಿಂದ ಲಾಗಲಿ ಜ್ಞಾನಲೋಪವುಂಟಾಗುವ ಪ್ರಸಕ್ತಿಯಿಲ್ಲ. ಸ್ಮೃತಿರೂಪವಾದ ಜ್ಞಾನವು ಕೆಲವು ಸಂದರ್ಭಗಳಲ್ಲಿ ಮಾರ್ಪಡುವುದುಂಟು. ಈಶ್ವರನ ಜ್ಞಾನವು ಅಂತದಲ್ಲ! ಒಬ್ಬ ಮನುಷ್ಯನು ಸ್ವಪ್ನವನ್ನು ಕಂಡರೆ, ಅದು ಅವನೊಬ್ಬನ ಅನುಭವಕ್ಕೆಮಾತ್ರವೇ ಬರುವುದೇ ಹೊರತು, ಬೇರೊಬ್ಬರಿಗೆ ತಿಳಿಯಲಾರದು. ಆ ಸ್ವಪ್ನವೂಕೂಡ ಆಯಾಕಾಲದಲ್ಲಿಯೇ ತೋರಿ ತನಗೆತಾನೇ ಅಗೋಚರವಾಗುವುದು. ಈಶ್ವರನ ಜ್ಞಾನನಾದರೋ,ಹಾಗೆ ತನಗೆ ತಾನೇ ಸ್ವಲ್ಪಕಾಲವಿದ್ದು ಹೋಗತಕ್ಕುದಲ್ಲ! ಶಾಶ್ವತವಾಗಿರುವುದು. ಈಶ್ವರನು ಕರ್ಮಾಧೀನನಲ್ಲ. ಜೀವಾತ್ಮರು ಕರ್ಮಾಧೀನರಾದುದರಿಂದ, ಅವರ ಜ್ಞಾನವು ಅವರವರ ಪುಣ್ಯಪಾಪರೂಪಗಳಾದ ಕರ್ಮಗಳ ತಾರತಮ್ಯವನ್ನನುಸರಿಸಿ ಹೆಚ್ಚುಕಡಿಮೆಯಾಗುವುದು. ಈಶ್ವರನ ಜ್ಞಾನಕ್ಕಾದರೋ ಈ ವಿಧವಾದ ತಾರತಮ್ಯವಿಲ್ಲದೆ ಯಾವಾಗಲೂ ಒಂದೇ ವಿಕಾಸದಲ್ಲಿರುವುದು. ಹೀಗೆ ಯಾವಕಾಲದಲ್ಲಿಯಾಗಲಿ, ಯಾವಸ್ಥಲದಲ್ಲಿಯಾಗಲಿ, ಯಾವ ಅವಸ್ಥೆಯಲ್ಲಿಯಾಗಲಿ, ಯಾವಕಾರಣದಿಂದಾಗಲಿ ವ್ಯತ್ಯಾಸವನ್ನು ಹೊಂದದ ಪರಮಾತ್ಮನಿಗೆ, ಮಾಯೆಯೆಂಬ ಪ್ರಕೃತಿಯೊಡನೆ ಸಂಬಂಧವುಹೇಗೆ? ಮೇಲೆ ಹೇಳಿದ ದೇಶಕಾಲಾದಿಗಳಲ್ಲಿ ಯಾವುದೊಂದರಿಂದಲಾದರೂ ಆ ಈಶ್ವರನ ಜ್ಞಾನಕ್ಕೆ ವಿಕಾರವುಂಟಾಗುವಪಕ್ಷದಲ್ಲಿ, ಆತನಿಗೆ ಪ್ರಕೃತಿಸಂಬಂಧವನ್ನೂ ಅಂಗೀಕರಿಸಬಹುದು. ಅದೊಂದೂ ಇಲ್ಲದ ಪರಮಾತ್ಮನಿಗೆ ಪ್ರಕೃತಿಸಂಬಂಧವೆಂಬುದು ಹೇಗೆ? ಈ ಭಗವಂತನು ಜೀವಾತ್ಮಗಳಲ್ಲಿ ಅಂತರಾತ್ಮನಾಗಿ, ಸಮಸ್ತಶರೀರಗಳಲ್ಲಿಯೂ ಸೇರಿರುವನಲ್ಲವೆ? ಹೀಗಿದ್ದರೂ ಸತ್ತ್ವಾದಿಗುಣಕಾರ್ಯಗಳಾದ ಗರ್ಭ, ಜನ್ಮ, ಜರಾ,ಮರಣಾದಿಗಳೂ, ಪರಿಣಾಮಾದಿಗಳೂ ಆಯಾಜೀವಗಳಿಗೆ, ಮತ್ತು ದೇವಾದಿಶರೀರಗಳಿಗೆಮಾತ್ರ ಸಂಬಂಧಿಸುವುವೆಂದೂ, ಅಂತರಾತ್ಮನಾದ ಭಗವಂತನಿಗೆ ಸಂಬಂಧಿಸಲಾರವೆಂದೂ ಹೇಳುವುದು ಸಮಂಜಸವಾಗಿಲ್ಲ. ಏಕೆಂದರೆ, ಜಾಗರ (ಎಚ್ಚರಗೊಂಡಿರುವುದು)

ಸ್ವಪ್ನ, ಸುಷುಪ್ತಿ, ಮೂರ್ಛೆ, ಪ್ರಾಣೋತ್ಕ್ರಮಣ, ಇವೇ ಮೊದಲಾದ ಬೇರೆಬೇರೆ ಅವಸ್ಥೆಗಳಲ್ಲಿ, ಜೀವನಿಗೆ ಆಯಾಸಂದರ್ಭಾನುಸಾರವಾಗಿ ಬರತಕ್ಕ ದೋಷಗಳೆಲ್ಲವೂ, ಅವನಲ್ಲಿ ಅಂತರಾತ್ಮನಾದ ಪರಬ್ರಹ್ಮನಿಗೂ ಸಂಬಂಧಿಸದಿರದು. ಪರಮಾತ್ಮನು ಕರ್ಮಕ್ಕೆ ಅಧೀನನಲ್ಲದಮಾತ್ರಕ್ಕೆ, ಆ ದೋಷಗಳು ಸಂಭವಿಸಲಾರವೆಂದು ಕೇಳುವುದಕ್ಕಿಲ್ಲ. ಪರಮಾತ್ಮನಿಗೆ ಕರ್ಮಸಂಬಂಧವಿಲ್ಲದಿದ್ದಮಾತ್ರಕ್ಕೇನು? ಕರ್ಮವೆಂಬುದು ಜೀವನಿಗೆ ದೇಹಸಂಬಂಧವನ್ನುಂಟುಮಾಡಿಯೇ, ಅದರಮೂಲಕವಾಗಿ ದುಃಖಮೋಹಾದಿದೋಷಗಳನ್ನೂ ಸೇರಿಸುವುದು. ಈಶ್ವರನಿಗೆ ಕರ್ಮಸಂಬಂಧವಿಲ್ಲದಿದ್ದರೂ, ಅವನು ದೇವಮನುಷ್ಯಾದಿಶರೀರಗಳಲ್ಲಿ ಜೀವನಮೂಲಕವಾಗಿ ಒಳಹೊಕ್ಕಿರಬೇಕಲ್ಲವೆ? ಆ ಜೀವನಮೂಲಕವಾಗಿಯೇ ಇವನಿಗೂ ದೇಹಸಂಬಂಧವುಂಟೆಂಬುದು ಸಿದ್ಧವಷ್ಟೆ? ಆದುದರಿಂದ ಜೀವನಿಗೆ ಉಂಟಾಗತಕ್ಕ ಗರ್ಭ,ಜನ್ಮ,ಜರಾಮರಣಾದಿದೋಷಗಳೆಲ್ಲವೂ ಈಶ್ವರನಿಗೂ ಉಂಟೆಂದೇ ಹೇಳಬೇಕಾಗುವುದು. ಕರ್ಮವೆಂಬುದು ಜೀವನಿಗೆ ದೇಹಸಂಬಂಧದಮೂಲಕವಾಗಿಯೇ ದೋಷಗಳನ್ನುಂಟುಮಾಡುವಾಗ, ಆ ಜೀವನಲ್ಲಿ ಪರಮಾತ್ಮನೂ ಸೇರಿದ್ದಮೇಲೆ, ಆಪರಮಾತ್ಮನಿಗೆಮಾತ್ರ ಆ ದೋಷಗಳಿಲ್ಲವೆಂಬುದು ಹೇಗೆ? ಇದಲ್ಲದೆ ಕರ್ಮವೇ ಸುಖದುಃಖಗಳಿಗೆ ಕಾರಣವಾಗಿದ್ದಪಕ್ಷದಲ್ಲಿ, ದೇಹಸಂಬಂಧಕ್ಕೆ ಪ್ರಯೋಜನವೇ ಇಲ್ಲದೆ ಹೋಗುವುದು. ಆದುದರಿಂದ ದೇಹಸಂಬಂಧವೇ ಸುಖದುಃಖಗಳಿಗೆ ಕಾರಣವೆಂದೂ ಹೇಳಬೇಕಾಗಿದೆ. ಆ ದೇಹಸಂಬಂಧವು ಈಶ್ವರನಿಗೂ ಉಂಟೆಂದು ಒಪ್ಪಿಕೊಳ್ಳಬೇಕಾದರೆ, ಅಶುದ್ಧವಾದ ಬಗೆಬಗೆಯ ದೇಹಗಳಲ್ಲಿ ಸೇರುವುದೊಂದೇ ಸಮಸ್ತದೋಷಗಳಿಗೂ ನೆಲೆಯೆನಿಸಿದಂತಾಗುವುದು ಆಯಾದೇಹಗಳನ್ನು ನಿಯಮಿಸುವುದಕ್ಕಾಗಿಯೇ ಪರಮಾತ್ಮನು ತಾನೇ ಇಷ್ಟಪಟ್ಟು ಅವುಗಳಲ್ಲಿ ಪ್ರವೇಶಿಸುವುದಾದರೂ, ಆಗಲೂ ಅವನಿಗೆ ಆದರ ದೋಷವು ಬಿಟ್ಟುಹೋಗಲ್ಲ. ಒಬ್ಬಮನುಷ್ಯನು ಕೀವುಗಳಿಂದಲೂ, ರಕ್ತಗಳಿಂದಲೂ ತುಂಬಿ ಬಹಳದುರ್ಗಂಧಯುಕ್ತವಾದ ಒಂದು ಹಳ್ಳದಲ್ಲಿ ಇಷ್ಟಪಟ್ಟು ಹೋಗಿಬಿದ್ದರೂ, ಅವನಿಗೆ ಅದನ್ನೇ ಪುರುಷಾರ್ಥವೆಂದು ಹೇಳುವುದಕ್ಕಿಲ್ಲ. ಆದುದರಿಂದ ಜಗತ್ಕಾರಣನಾದ ಪರಮ

ಪುರುಷನು, ಸರ್ವಜ್ಞತ್ವವೇ ಮೊದಲಾದ ಸಮಸ್ತಗುಣಗಳಿಗೂ ತಾನೂ ನೆಲೆಯಾಗಿದ್ದರೂ, ತನಗೆ ಕರ್ಮಸಂಬಂಧವಿಲ್ಲದಿದ್ದರೂ, ಅವನು ಎಲ್ಲಾ ಪ್ರಾಣಿಶರೀರಗಳಲ್ಲಿಯೂ ಒಳಹೊಕ್ಕಿರುವುದಾಗಿ ಅವನಿಗೆ ಶರೀರಸಂಬಂಧವನ್ನು ಒಪ್ಪಿಕೊಳ್ಳುವುದರಿಂದ, ಅದರಿಂದುಂಟಾಗತಕ್ಕ ದೋಷಗಳೆಲ್ಲಕ್ಕೂ ಅವನನ್ನೂ ಗುರಿಮಾಡಿದಂತೆಯೇ ಆಗುವುದು. ಶರೀರದಲ್ಲಿ ಪ್ರವೇಶಿಸಿದಮೇಲೆ ಅದರ ದೋಷಗಳು ಸಂಭವಿಸದಿರವು. ಓ ಸರ್ವಜ್ಞನಾದ ಮೈತ್ರೇಯನೆ! ಈ ವಿಧವಾದ ಅಜ್ಞಾನದಿಂದ, ನನ್ನ ಮನಸ್ಸು ನಿಜವನ್ನು ತಿಳಿಯದೆ ತತ್ತಳಿಸುತ್ತಿರುವುದು. ಈ ನನ್ನ ಅಜ್ಞಾನವನ್ನು ನೀಗಿಸಿ, ನನ್ನ ಸಂಶಯವನ್ನು ಹೋಗಲಾಡಿಸಿ, ತತ್ತ್ವೋಪದೇಶದಿಂದ ನನ್ನನ್ನುದ್ಧರಿಸಬೇಕು" ಎಂದನು.

ಹೀಗೆ ನಿಜವನ್ನು ತಿಳಿಯಬೇಕೆಂಬ ಉದ್ದೇಶದಿಂದ, ವಿದುರನು ವಿನಯಪೂರ್ವಕವಾಗಿ ಪ್ರಾರ್ಥಿಸುವುದನ್ನು ಕೇಳಿ, ಭಗವದ್ಭಕ್ತತಿರೋಮಣಿಯಾಗಿಯೂ, ತತ್ವಜ್ಞನಾಗಿಯೂ ಇರುವ ಮೈತ್ರೇಯಮಹಾಮುನಿಯು, ಮನಸ್ಸಿನಲ್ಲಿ ಸಂತೋಷಗೊಂಡು, ಮುಗುಳ್ನಗೆಯಿಂದ ಕೂಡಿದವನಾಗಿ, ಆ ವಿದುರನಿಗೆ ಸಂಪೂರ್ಣವಾಗಿ ಸಂದೇಹನಿವೃತ್ತಿಯಾಗುವಂತೆ ಸಮಾಧಾನಗಳನ್ನು ಹೇಳತೊಡಗಿದನು. "ಓ ! ವಿದುರಾ ! ಕೇಳು ! ಚೇತನಾಚೇತನಗಳನ್ನು ನಿಯಮಿಸುವುದಕ್ಕಾಗಿ ಈಶ್ವರನು ಅವುಗಳಲ್ಲಿ ತನ್ನ ಸ್ವೇಚ್ಛೆಯಿಂದ ಅಂತರ್ಯಾಮಿಯಾಗಿ ನೆಲೆಗೊಂಡಿದ್ದರೂ, ಅವುಗಳ ಸಂಬಂಧದಿಂದುಂಟಾಗುವ ದುಃಖ, ವಿಕಾರ, ಮುಂತಾದ ದೋಷಗಳು ಸಂಭವಿಸಲಾರವು. ಆದರೆ ನೀನು ಚಿದಚಿತ್ತುಗಳ ಸಂಬಂಧದಿಂದ ಅವುಗಳಿಗೆ ಸಂಭವಿಸುವ ದೋಷಗಳು ಭಗವಂತನಿಗೂ ಸಂಬಂಧಿಸಿಯೇ ತೀರಬೇಕೆಂದು ಹೇಳಿದೆಯಷ್ಟೆ ? ಇದು ಯುಕ್ತವಲ್ಲ. ಏಕೆಂದರೆ, ಜೀವನಾದರೂ ಸಹಜವಾದ ಸ್ಥಿತಿಯಲ್ಲಿ ದೋಷಸ್ವರೂಪನಲ್ಲ. ಪುಣ್ಯಪಾಪರೂಪಗಳಾದ ಕರ್ಮಗಳಲ್ಲಿ ಸಿಕ್ಕಿಬಿದ್ದ ಜೀವಾತ್ಮರಿಗೆ, ಅವರವರ ಕರ್ಮಸ್ವಭಾವಗಳಿಗೆ ತಕ್ಕಂತೆ, ಪರಮಪುರುಷನ ಸಂಕಲ್ಪವನ್ನನುಸರಿಸಿ, ಒಂದೇ ವಸ್ತುವು ಕಾಲಭೇದದಿಂದಲೂ, ಜೀವಭೇದದಿಂದಲೂ, ಸುಖದುಃಖಗಳೆರಡಕ್ಕೂ ಕಾರಣವಾಗಬಹುದು. ಹಾಗಿಲ್ಲದೆ ಆ ವಸ್ತುವಿನ ಸ್ವಭಾವವೇ ಆ ಬಗೆಯಾಗಿದ್ದಪಕ್ಷದಲ್ಲಿ, ಎಲ್ಲಾ ವಸ್ತುಗಳೂ,

ಎಲ್ಲಾ ಕಾಲಗಳಲ್ಲಿಯೂ, ಎಲ್ಲರಿಗೂ, ಕೇವಲಸುಖವನ್ನಾಗಲಿ, ಕೇವಲ ದುಃಖವನ್ನಾಗಲಿ ಉಂಟುಮಾಡಬೇಕಾಗುವುದು. ಲೋಕಾನುಭವದಲ್ಲಿ ಹೀಗೆ ಕಾಣುವುದಿಲ್ಲ. ಒಂದೇವಸ್ತುವು ಒಬ್ಬನಿಗೆ ಒಂದುಸಮಯದಲ್ಲಿ ಸುಖವನ್ನುಂಟುಮಾಡುತಿದ್ದರೂ, ಅದೇ ವಸ್ತುವು ಅದೇ ಪುರುಷನಿಗೆ ಮತ್ತೊಂದುಸಮಯದಲ್ಲಿ ದುಃಖಹೇತುವಾಗುವುದು. ಇದಕ್ಕೆ ಕಾರಣವೇನೆಂದರೆ, ಆ ವಸ್ತುವನ್ನನುಭವಿಸತಕ್ಕ ಜೀವನ ಪುಣ್ಯಪಾಪರೂಪವಾದ ಕರ್ಮವೇಹೊರತು, ಆ ವಸ್ತುವಿನ ಸ್ವಭಾವವಲ್ಲ. ಹಾಗೆ ವಸ್ತುವಿನ ಸ್ವಭಾವವೇ ಆ ಸುಖದುಃಖಗಳಿಗೆ ಕಾರಣವಾಗಿದ್ದಪಕ್ಷದಲ್ಲಿ, ಆವಸ್ತುವು ಅವನಿಗೆ ಯಾವಾಗಲೂ ಸುಖವನ್ನಾಗಲಿ, ಯಾವಾಗಲೂ ಕೇವಲದುಃಖವನ್ನಾಗಲಿ, ಉಂಟುಮಾಡಬೇಕೇಹೊರತು, ಒಂದುಸಮಯದಲ್ಲಿ ಸುಖವನ್ನೂ, ಮತ್ತೊಂದುಸಮಯದಲ್ಲಿ ದುಃಖವನ್ನೂ ಉಂಟುಮಾಡಲಾರದು. ಅಥವಾ ಒಂದೇವಸ್ತುವಿನಲ್ಲಿ ಈ ಎರಡುಧರ್ಮಗಳೂ ಇರುವುವೆಂದೂ ಹೇಳುವುದಕ್ಕಿಲ್ಲ. ಯಾವ ವಸ್ತುವಿಗೆ ಯಾವುದು ನಿಯತವಾದ ಧರ್ಮವೋ, ಅದಕ್ಕೆ ಅದನ್ನೇ ಸ್ವಭಾವವೆಂದು ಹೇಳುವುದು ಲೋಕಧರ್ಮವಾದುದರಿಂದ, ಒಂದೇ ವಸ್ತುವಿನಲ್ಲಿ ಪರಸ್ಪರವಿರುದ್ಧಧರ್ಮಗಳನ್ನು ಸ್ವಭಾವವೆಂದು ಹೇಳುವುದಕ್ಕಿಲ್ಲ. ಸುಖವನ್ನುಂಟುಮಾಡುವುದಾಗಲಿ ದುಃಖವನ್ನುಂಟುಮಾಡುವುದಾಗಲಿ, ಒಂದೇಕಾಲದಲ್ಲಿ, ಒಂದೇ ವಸ್ತುವಿಗೆ ಸಂಭವಿಸಲಾರದು. ಆದುದರಿಂದ ಅವೆರಡನ್ನೂ ಅವುಗಳ ಸ್ವಭಾವವೆಂದು ಹೇಳುವುದು ಯುಕ್ತವಲ್ಲ. ಯಾವ ವಸ್ತುವೂ ಸುಖವನ್ನಾಗಲಿ, ದುಃಖವನ್ನಾಗಲಿ ಉಂಟುಮಾಡತಕ್ಕ ಗುಣವುಳ್ಳದಲ್ಲ. ಈ ಸುಖದುಃಖಗಳೆಲ್ಲವೂ, ಜೀವಾತ್ಮನ ಪುಣ್ಯಪಾಪರೂಪಕರ್ಮಗಳನ್ನೇ ಅನುಸರಿಸಿಬರುವುವು. ಜೀವನು ಕರ್ಮವಶನಾದುದರಿದ, ಆಯಾ ಕರ್ಮಗಳಿಗೆ ತಕ್ಕಂತೆ ಆಯಾವಸ್ತುಗಳ ಸಂಬಂಧವು ಗುಣದೋಷಗಳನ್ನು ತೋರಿಸುವುವು. ಪರಬ್ರಹ್ಮನಿಗಾದರೋ ಈ ಕರ್ಮದೋಷಗಳೊಂದೂ ಸಂಬಂಧಿಸಲಾರವು. ಅವನು ಸಮಸ್ತಕಲ್ಯಾಣಗುಣಗಳಿಗೂ ಆಶ್ರಯನಾಗಿರುವನು. ಸರ್ವವಿಷಯದಲ್ಲಿಯೂ ಸ್ವತಂತ್ರನು. ಸ್ವಾಭಾವಿಕಗಳಾಗಿಯೂ, ಮಹಾದ್ಭುತಗಳಾಗಿಯೂ ಇರುವ ಅನೇಕ

ಆಶ್ಚರ್ಯಶಕ್ತಿಗಳುಳ್ಳವನು. ಆದುದರಿಂದ ಆ ಈಶ್ವರನಿಗೆ ದೋಷಾಶ್ರಯಗಳಾದ ಈ ಜೀವನಾಜೀವನಗಳ ಸಂಬಂಧವೆಲ್ಲವೂ, ಅವುಗಳನ್ನು ವಿಚಿತ್ರರೀತಿಯಿಂದ ನಿಯಮಿಸತಕ್ಕ ಲೀಲೆಗೋಸ್ಕರವಾಗಿಯೇ ಹೊರತು ಬೇರೆಯಲ್ಲ. ಜೀವನಿಗೆ ಪ್ರಕೃತಿಸಂಬಂಧದಿಂದ ಅನೇಕದೋಷಗಳುಂಟಾಗುವುದೇನೋ ನಿಜವು! ಈಶ್ವರನಾದರೋ ಕರ್ಮಗಳಿಗೆ ಒಳಪಟ್ಟವನಲ್ಲವಾದುದರಿಂದ, ಅವನಿಗೆ ಈ ಪ್ರಕೃತಿಸಂಬಂಧವೆಂಬುದು ಸ್ವೇಚ್ಛೆಯಿಂದಲೇ ಅಂಗೀಕರಿಸಲ್ಪಟ್ಟಿರುವುದು. ಆದುದರಿಂದ ಅದಕ್ಕೆ ಸಂಬಂಧಪಟ್ಟ ದೋಷಗಳೊಂದೂ ಅವನನ್ನು ಮುಟ್ಟಲಾರವು. ಏಕುರಾ! "ಕರ್ಮವೆಂಬುದೇನು?" ಎಂದುಕೇಳುವೆಯಾ? ಹೇಳುವೆನು ಕೇಳು. ಈಶ್ವರನು ಜೀವನರ ಪುಣ್ಯಪಾಪಗಳನ್ನು ಲೆಕ್ಕವಿಟ್ಟು "ಇವನು ಈ ಕಾರ್ಯವನ್ನು ನಡೆಸಿದುದಕ್ಕಾಗಿ ಇವನಿಗೆ ಈ ಫಲವುಂಟಾಗಬೇಕು" ಎಂದು ಪ್ರತಿಯವರವರ ಕಾರ್ಯಗಳಿಗೆ ತಕ್ಕ ಫಲವನ್ನು ಕೊಡುವುದಾಗಿ ಸಂಕಲ್ಪಿಸಿರುವನು. ಆದುದರಿಂದ ಈ ಕರ್ಮವೆಂಬುದೂ ಭಗವಂತನ ಸಂಕಲ್ಪವೇ ಹೊರತು ಬೇರೆಯಲ್ಲ. ಹೀಗೆ ಆ ಭಗವಂತನ ನಿಗ್ರಹಾನುಗ್ರಹರೂಪವಾದ ಕರ್ಮಸಂಬಂಧವನ್ನು, ಆಭಗವಂತನಿಗೇ ಉಂಟೆಂದು ಹೇಳುವುದಕ್ಕೆ ಸ್ವಲ್ಪಮಾತ್ರವೂ ಅವಕಾಶವಿಲ್ಲ. ಹೀಗೆ ಭಗವಂತನು ಕರ್ಮಕ್ಕೆ ವಶನಲ್ಲದುದರಿಂದ, ಕರ್ಮಸಂಬಂಧವನ್ನನುಸರಿಸಿಯೇ ಸುಖದುಃಖಗಳನ್ನುಂಟುಮಾಡತಕ್ಕ ಪ್ರಕೃತಿಯಲ್ಲಿ ತಾನು ಸೇರಿದ್ದರೂ, ಅದರ ದೋಷಕ್ಕೆ ತಾನು ಭಾಗಿಯಾಗುವವನಲ್ಲ. ಈವಿಧವಾಗಿ ಕರ್ಮಸಂಬಂಧವಿಲ್ಲದವನಾಗಿಯೂ, ಮತ್ತೊಬ್ಬರಿಗೆ ಅಧೀನನಲ್ಲದೆ ಸ್ವತಂತ್ರನಾಗಿಯೂ ಇರುವ ಈಶ್ವರನಿಗೆ, ಸತ್ವಾದಿಗುಣಗಳಿಂದುಂಟಾಗುವ ವಿಕಾರಗಳಾಗಲಿ, ಪ್ರಕೃತಿಸಂಬಂಧವಾಗಲಿ ವಿರೋಧಿಸಲಾರವು. ಈಶ್ವರನಿಗೆ ಶರೀರಸಂಬಂಧವಿದ್ದರೂ, ಅವುಗಳ ದೋಷವು ಅಂಟದಿರುವುದಕ್ಕೆ ಅವನ ಆಶ್ಚರ್ಯಶಕ್ತಿಯೇ ಕಾರಣವು. ಇದರಂತೆ ಭಗವಂತನು ಜೀವಾತ್ಮಗಳಲ್ಲಿ ಒಳಹೊಕ್ಕು ನಿಂತಿದ್ದರೂ, ಪ್ರಕೃತಿಸಂಬಂಧದಿಂದ ಜನನಮರಣಕ್ಲೇಶಗಳನ್ನು ಹೊಂದುತ್ತಿರುವ ಆ ಜೀವಗಳಿಗೆ ಸಂಬಂಧಿಸಿದ ದೋಷಗಳನ್ನು ತಾನು ಅಂಟಿಸಿಕೊಳ್ಳದಿರುವುದಕ್ಕೂ ಅವನ ಆಶ್ಚರ್ಯಶಕ್ತಿಯೇ ಕಾರಣವು. ಆದುದರಿಂ

ದ ಅವನಲ್ಲಿ ಪ್ರಕೃತಿದೋಷವಾಗಲಿ, ಜೀವದೋಷವಾಗಲಿ, ಸಂಬಂಧಿಸಲಾ ರವೆಂಬುದರಲ್ಲಿ ವಿರೋಧವೇನೂ ಇಲ್ಲವು. ವೇದಗಳೂಕೂಡ ಆ ಪರಮಪು ರುಷನು ಅಶ್ಚರ್ಯಶಕ್ತಿಯುಳ್ಳವನೆಂದೇ ಉದ್ಘೋಷಿಸುತ್ತಿರುವುದು ಆ ಭಗ ವಂತನನ್ನು ನಾವು ಕಣ್ಣಿಂದ ನೋಡಲಾರವು. ಶ್ರುತಿವಾಕ್ಯಗಳಿಂದಲೇ ಅವನ ಸ್ವರೂಪವನ್ನೂ ತಿಳಿಯಬೇಕು. ಪ್ರಕೃತಿಪುರುಷರಲ್ಲಿ ಒಳಹೊ ಕ್ಕಿದ್ದರೂ ಭಗವಂತನಿಗೆ ಅವುಗಳ ದೋಷವನ್ನು ಅಂಟಿಸಿಕೊಳ್ಳದ ಆಶ್ಚ ರ್ಯಶಕ್ತಿಯುಂಟೆಂದು ವೇದಗಳೇ ಹೇಳುತ್ತಿರುವುವಷ್ಟೆ? ಇಂದ್ರಿಯಗಳಿಗೆ ಗೋಚರವಲ್ಲದ ವಸ್ತುವಿನಲ್ಲಿ, ನಾನು ನಮ್ಮ ಯುಕ್ತಿಯಿಂದ ಕಲ್ಪಿ ಸುವ ಗುಣದೋಷಗಳೊಂದೂ ಸಮಂಜಸವಾಗಲಾರವು. ಶಬ್ದಪ್ರಮಾಣ ದಿಂದ ನಾವು ಗ್ರಹಿಸಿದುದನ್ನೇ ಒಪ್ಪಿಕೊಳ್ಳಬೇಕು. ಈ ವಿಷಯಗಳೆಲ್ಲವೂ ಶ್ರುತಿಪ್ರಮಾಣದಿಂದಲೇ ನಮಗೆ ತಿಳಿಯಬೇಕಾದುದರಿಂದ, ಆದರ ಮೇಲೆ ಸಂದೇಹಿಸುವುದಕ್ಕೇ ಅವಕಾಶವಿಲ್ಲ. ಇದೇ ಸಮಾಧಾನದಿಂದ "ವಿಕಾರಶೂನ್ಯನಾಗಿಯೂ, ಗುಣರಹಿತನಾಗಿಯೂ ಇರುವ ಭಗವಂತನಿಗೆ ಜಗತ್ಸೃಷ್ಟಿ ಮೊದಲಾದ ಕಾರ್ಯಗಳಲ್ಲಿ ಪ್ರವೃತ್ತಿಯು ಹೇಗೆ?" ಎಂಬ ಆ ಕ್ಷೇಪಣೆಯೂ ನಿವೃತ್ತವಾಗುವುದು. ಆದರೆ " ಜಗತ್ತಿಗೆ ಈಶ್ವರನೇ ಉಪಾ ದಾನಕಾರಣವಾಗಿದ್ದಪಕ್ಷದಲ್ಲಿ, ಲೋಕದಲ್ಲಿರುವ ಸಮಸ್ತವಸ್ತುಗಳೂ ಅ ವನೇ ಆಗಿರಬೇಕಲ್ಲವೆ? ಆಗ ಆ ದೋಷಗಳೆಲ್ಲವೂ, ಅವನಿಗೆ ಸಂಬಂಧಿಸದಿರು ವುದು ಹೇಗೆ?" ಎಂದು ನೀನು ಶಂಕಿಸಿದೆಯಷ್ಟೆ? ಪ್ರಕೃತಿಪುರುಷರನ್ನು ಶರೀ ರವಾಗಿ ಹೊಂದಿದ ಪರಮಪುರುಷನೇ ಜಗತ್ತಿಗೆ ಉಪಾದಾನಕಾರಣವಾದು ದರಿಂದ,ಆ ಶರೀರಗತವಾದ ದೋಷವೆಲ್ಲವೂ ಪ್ರಕೃತಿಪುರುಷರಿಗೆ ಸಂಬಂಧಿ ಸುವುದೇಹೊರತು ಪರಮಪುರುಷನನ್ನು ಸೇರಲಾರದು. ಹೇಗೆಂದು ಕೇಳುವೆ ಯಾ? ನಾನಾವರ್ಣದ ನೂಲುಗಳಿಂದ ನೇಯಲ್ಪಟ್ಟ ವಸ್ತ್ರದಲ್ಲಿ, ಕಪ್ಪು,ಬಿ ಳುಪು ಮೊದಲಾದ ಬಣ್ಣಗಳೆಲ್ಲವೂ ಆಯಾನೂಲುಗಳಲ್ಲಿಯೇ ಸೇರಿಕೊಂಡಿ ರುವುವು.ಆಯಾನೂಲುಗಳನ್ನು ಕಿತ್ತು ತೆಗೆದಾದ, ಆಯಾಬಣ್ಣವೂ ಅದ ರೊಡನೆಸೇರಿ ಬರಬೇಕಲ್ಲದೆ ಬಣ್ಣವುಮಾತ್ರ ಉಳಿಯಲಾರದು.ಆದರಂತೆಯೇ ಪ್ರಕೃತಿಪುರುಷರಲ್ಲಿರುವ ದೋಷಗಳೂ ಈಶ್ವರನಿಗೆ ಸಂಬಂಧಿಸಲಾರವು. ಬಾ

ಲ್ಯ, ಯೌವನ, ಮುಂತಾಗಿ ಶರೀರಕ್ಕೆ ಸಂಭವಿಸುವ ಅವಸ್ಥಾಬೇಧಗಳೆಲ್ಲವೂ ಜೀವಾತ್ಮಕ್ಕೆ ಹೇಗೆ ಸಂಬಂಧಿಸುವುದಿಲ್ಲವೋ, ಹಾಗೆಯೇ ಚೇತನಾಚೇತನ ದೋಷಗಳೂ ಈಶ್ವರನಿಗೆ ಸೇರಲಾರವು. ಭಗವಂತನು ತನ್ನ ಇಷ್ಟಾನುಸಾರವಾಗಿಯೇ ಸಮಸ್ತಕ್ಷೇತ್ರಗಳಲ್ಲಿಯೂ ಆಂತರ್ಯಾಮಿಯಾಗಿರುವನು. ಆದರೂ ಆ ಕ್ಷೇತ್ರದೋಷಗಳು ಅವನಿಗೆ ಸಂಬಂಧಿಸಲಾರವು ಆದರೆ ‘‘ಕೇವಲ ಕರ್ಮ್ಮ ಲಕ್ಕೆಡೆಯಾದ ಮನುಷ್ಯದೇಹದಲ್ಲಿ ಪ್ರವೇಶಿಸಿರುವುದೇ ಈಶ್ವರನಿಗೆ ಒಂದು ದೋಷವಲ್ಲವೆ? ಒಬ್ಬ ಮನುಷ್ಯನು ತಾನಾಗಿಯೇ ಇಷ್ಟಪಟ್ಟು ವಿನೋದಾರ್ಥವಾಗಿ ಹೋಗಿ ಒಂದು ಕರ್ಮ್ಮಲದ ಗುಂಡಿಯಲ್ಲಿ ಹೊರಳಿ ಬಂಪರೂ, ಅವನಿಗೆ ಅದರ ದೋಷಗಳು ತಪ್ಪಲಾರವಷ್ಟೆ? ಅದರಂತೆ ಭಗವಂತನು ಸ್ವೇಚ್ಛೆಯಿಂದ ಜೀವಾಂತರ್ಗತನಾಗಿ ಮನುಷ್ಯದೇಹದಲ್ಲಿ ಪ್ರವೇಶಿಸಿದಮಾತ್ರಕ್ಕೆ ಅವನಿಗೆ ದೋಷವು ತಪ್ಪಿದುದೇನು? ಇದರಂತೆಯೇ ಜೀವನಿಗೂ ದೇಹಾದಿಸಂಬಂಧವಿದ್ದರೂ ಅದರಿಂದುಂಟಾದ ದೋಷಗಳು ಸಂಬಂಧಿಸಲಾರವೆಂದೇಕೆ ಗ್ರಹಿಸಬಾರದು?” ಎಂದು ನೀನು ಕೇಳುವೆಯಾ ? ಭಗವಂತನಲ್ಲಿರುವ ಗುಣಗಳೆಲ್ಲವೂ ಜೀವನಿಗಿರಲಾರವು. ಆ ಸರ್ವೇಶ್ವರನ ಆಶ್ಚರ್ಯಶಕ್ತಿಯೇ ಬೇರೆ ! ಜೀವಾತ್ಮನೂ ಭಗವಂತನಂತೆ ಅಪಹತಪಾಪ್ಮತ್ವವೇ (ಪಾಪಸಂಬಂಧವಿಲ್ಲದಿರುವುದು) ಮೊದಲಾದ ಕೆಲವು ಗುಣಗಳುಳ್ಳವನಾಗಿದ್ದರೂ, ಆ ಜೀವಸ್ವರೂಪವು ಅಜ್ಞಾನಾದಿಗಳಿಂದ ಮೋಹಿತವಾಗುತ್ತಿರುವುದು. ಆದುದರಿಂದಲೇ ಜೀವನು ಸ್ವಸ್ವರೂಪವನ್ನು ಸರಿಯಾಗಿ ತಿಳಿಯಲಾರದೆ, ದೇಹವೇ ತಾನೆಂದು ತಿಳಿದುಕೊಳ್ಳುತ್ತಿರುವನು. ಕರ್ಮ್ಮಾಧೀನನಾದ ಈ ಜೀವನಿಗೆ ಶುದ್ಧವಾದ ಆತ್ಮಸ್ವರೂಪಜ್ಞಾನವೊಂದೇ ಪುರುಷಾರ್ಥವೆನಿಸಿಕೊಳ್ಳುವುದೇ ಹೊರತು, ಮೇಲೆ ಕಾಣುವ ದೇವಮನುಷ್ಯತ್ವಾದಿರೂಪಗಳ ಭಾವನೆಯಾಗಲಿ ಈ ಶರೀರಗಳಲ್ಲಿ ಶಿರಸ್ಸು, ಮೊದಲಾದ ಯಾವುದಾದರೂ ಅವಯವಗಳಿಗೆ ಭಂಗವುಂಟಾದಾಗ, ತನ್ನ ‘‘ತಲೆಯು ಮುರಿಯಿತು” ‘‘ತನ್ನ ಕಾಲು ಛೇದಿಸಿತು” ಎಂಬ ದುಃಖವಾಗಲಿ, ಉಂಟಾಗುವುದೆಲ್ಲವೂ ಅದೇಹವನ್ನೇ ತಾನೆಂದು ಭಾವಿಸಿರುವುದೇ ಕಾರಣವಲ್ಲದೆ ಬೇರೆಯೆಲ್ಲ! ವಿದುರಾ ! ಜೀವನಿಗೆ ಈ ಭ್ರಾಂತಿಯುಂಡಾಗುವುದೂ ಆ ಭಗವಂತನ ಆಶ್ಚರ್ಯಶಕ್ತಿಯೆಂದೇ ತಿಳಿ !

ಇದಕ್ಕೊಂದು ದೃಷ್ಟಾಂತವನ್ನು ಹೇಳುವೆನು ಕೇಳು. ಆಕಾಶದಲ್ಲಿರುವ ಚಂದ್ರನನ್ನು ಆಗಾಗ ನಾವು ಸರೋವರಗಳಲ್ಲಿ ಕಾಣುತ್ತಿರುವೆವು. ಆದರೆ ಆ ಜಲದಲ್ಲಿ ಚಂದ್ರಬಿಂಬವು ಪ್ರತಿಫಲಿಸಿರುವುದೇಹೊರತು ವಾಸ್ತವಕ್ಕೆ ಆಲ್ಲಿ ಚಂದ್ರನಿಲ್ಲ. ಹಾಗಿದ್ದರೂ ಚಂದ್ರಬಿಂಬವು ನೀರಿನಲ್ಲಿ ಪ್ರತಿಫಲಿಸಿರುವಾಗ,ಆ ನೀರಿನ ಅಲೆದಾಟದಿಂದ,ಆ ಪ್ರತಿಬಿಂಬವು ಆಡುತ್ತಿರುವುದನ್ನು ನೋಡಿದರೆ, ಈ ಅಲೆದಾಟವು ನಿಜವಾದ ಚಂದ್ರನಲ್ಲಿಯೇ ಇರುವಂತೆ ನಮಗೆ ತೋರುವುದು. ಹೀಗೆ ಚಂದ್ರನಲ್ಲಿಲ್ಲದ ನಡುಕವು ¦ಜಲಸಂಬಂಧದಿಂದ ಆ ಚಂದ್ರನಲ್ಲಿಯೇ ಇರುವಂತೆ ಹೇಗೆ ಕಾಣುವುದೋ,ಅದೇ ರೀತಿಯಲ್ಲಿ, ಮೇಲಿನ ಶರೀರಕ್ಕೆ ಸಂಭವಿಸುವ ತಿರಶ್ಚೀದನಾದಿವಿಕಾರಗಳಲ್ಲಿ ಆತ್ಮನಿಗೆ ಸಂಬಂಧವಿಲ್ಲದಿದ್ದರೂ, ಈ ದೇಹಸಂಬಂಧದಿಂದ ಆ ಆತ್ಮಕ್ಕಿದ್ದಂತೆಯೇ ತೋರುವುದು. ಇಷ್ಟೇಹೊರತು ವಾಸ್ತವದಲ್ಲಿ ಆತ್ಮನಿಗೆ ಅಂತಹ ದೋಷವೇ ಇಲ್ಲವು. ಶರೀರದೋಷವನ್ನು ಜೀವನಲ್ಲಿರುವಂತೆ ಭ್ರಾಂತಿಪಡುವ ಹಾಗೆಯೇ, ಪ್ರಕೃತಿಪುರುಷರಿಬ್ಬರನ್ನೂ ಶರೀರವಾಗಿ ಉಳ್ಳ ಭಗವಂತನಿಗೆ, ಅವುಗಳ ಧರ್ಮವು ಸಂಭವಿಸಬಹುದೆಂದು ತಿಳಿಯುವುದೂಭ್ರಾಂತಿಮೂಲಕವಾದುದೇಹೊರತು ಬೇರೆಯಲ್ಲ. ಭಗವಂತನು ಜೀವಾಂತರ್ಯಾಮಿಯಾಗಿದ್ದರೂ, ಆದರ ದೋಷಗಳನ್ನು ಅಂಟಿಸಿಕೊಳ್ಳದ ಅಶ್ಚರ್ಯಶಕ್ತಿಯನ್ನು ಹೊಂದಿರುವುದುಮಾತ್ರವಲ್ಲ! ಆ ಜೀವಗತವಾದ ದೋಷವನ್ನು ನೀಗಿಸುವುದಕ್ಕೂ ಸಮರ್ಥನಾಗಿರುವನು. ಆದರ ರೀತಿಯನ್ನೂ ತಿಳಿಸುವೆನು ಕೇಳು. ಹೇಯಗುಣವುಳ್ಳ ಜೀವನು, ಕರ್ಮಯೋಗದಿಂದ ಸಹಕರಿಸಲ್ಪಟ್ಟ ಭಕ್ತಿಯಿಂದ, ಆ ವಾಸುದೇವನ ಕೃಪೆಯನ್ನು ಸಂಪಾದಿಸಿ,ಅದರ ಬಲದಿಂದ ತನ್ನ ಹೇಯಗುಣಗಳನ್ನು ನೀಗಿ ಶುದ್ಧನಾಗುವನು. ಮುಖ್ಯವಾಗಿ ಒಂದು ಸೂಕ್ಷ್ಮಾಂಶವನ್ನು ಹೇಳುವನು ಕೇಳು! ಜೀವಾತ್ಮಪರಮಾತ್ಮರಿಬ್ಬರಿಗೂ ಪ್ರಕೃತಿಸಂಬಂಧವುಂಟೆಂಬುದೇನೋ ನಿಜವು! ಆದರೆ,ಅದರಲ್ಲಿ ಕೆಲವು ವಿಶೇಷಗಳುಂಟು ಆ ಪ್ರಕೃತಿಯು ಜೀವಾತ್ಮನನ್ನು ತನಗಧೀನವಾಗಿ ಮಾಡಿಕೊಂಡು ಅವನಿಗೆ ಅಶ್ರೇಯಸ್ಸನ್ನುಂಟುಮಾಡಬಲ್ಲುದು. ಪರಮಾತ್ಮನ ವಿಷಯದಲ್ಲಿ ಯಾದರೋ, ಅದು ಅವನಿಗೇ ಅಧೀನವಾಗಿ, ಅವನ ಲೀಲಾಸಾಮಗ್ರಿಯಂತೆ

ಆತನ ನಿಯಮಕ್ಕೊಳಪಟ್ಟಿರುವುದು. ಆ ಪ್ರಕೃತಿಪುರಷರನ್ನು ನಿಯಮಿಸುವುದಕ್ಕಾಗಿಯೇ ಪರಮಾತ್ಮನು ಅವುಗಳಲ್ಲಿ ಪ್ರವೇಶಿಸಿರುವನು. ಹೀಗೆ ಭಗವಂತನು ತನ್ನ ಸ್ವೇಚ್ಛೆಯಿಂದ ಸ್ವೀಕರಿಸಿದಅವಿದ್ಯೆಯಾಗಲಿ,ಅದರಿಂದುಂಟಾಗುವ ದೇಹಾತ್ಮಭ್ರಮಾದಿದೋಷಗಳಾಗಲಿ,ಅವನಿಗೆ ಸಂಬಂಧಿಸಲಾರವು. ಜೀವನಿಗೆ ಪ್ರಕೃತಿಸಂಬಂಧದಿಂದ ಆತ್ಮಸ್ವರೂಪವು ತೋರದಿರುವಾಗ, ಮೇಲಿನ ದೇಹವೊಂದುಮಾತ್ರವೇ ಅವನಿಗೆ ಕಾಣುವುದು. ಆದನ್ನೇ ಆತ್ಮವೆಂಬು ಭ್ರಮಿಸುತ್ತಿರುವನು. ಅವನಿಗೆ ಆತ್ಮಸ್ವರೂಪವು ತೋರಿದೊಡನೆ,ಆ ಭ್ರಮವೂ ಬಿಟ್ಟುಹೋಗುವುದು. ವಾಸ್ತವದಲ್ಲಿ ಆತ್ಮವು ದೇಹಕ್ಕಿಂತಲೂ ವಿಲಕ್ಷಣವೆಂಬುದು ಇದರಿಂದ ಹೇಗೆ ಸಿದ್ಧವಾಗುವುದೋ, ಹಾಗೆಯೇ ಆ ಜೀವಾತ್ಮನೂ ಪರಮಾತ್ಮನಿಗೆ ಶರೀರಭೂತವಾಗಿರುವುದರಿಂದ, ಜೀವನಿಗೆ ಸಂಬಂಧಿಸುವ ದೋಷಗಳೊಂದೂ ಪರಮಾತ್ಮನಿಗೆ ಸಂಬಂಧಿಸಲಾರವು. ಪರಮಾತ್ಮನು ಪ್ರಕೃತಿಪುರುಷರಲ್ಲಿ ಒಳಹೊಕ್ಕಮಾತ್ರಕ್ಕೆ ಅವುಗಳ ದೋಷಕ್ಕೂ ಅವನು ಭಾಗಿಯಾಗುವನೆಂದೆಣಿಸುವುದು ಕೇವಲಭ್ರಮವು. ಯಾವ ಭಗವಂತನಲ್ಲಿ ಭಕ್ತಿಯೋಗವನ್ನು ಹಿಡಿದಮಾತ್ರಕ್ಕೆ,ಜೀವಾತ್ಮನಿಗೂ ದೋಷನಿವೃತ್ತಿಯಾಗುವುದೋ, ಅಂತಹ ಪರಮಾತ್ಮನಿಗೆ ದೋಷಗಳು ತಗುಲಲಾರವೆಂಬುದನ್ನು ಹೇಳಬೇಕೆ?ಈ ಜೀವಾತ್ಮನು ತನ್ನ ಇಂದ್ರಿಯಗಳನ್ನು ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದು, ಪ್ರಕೃತಿಪುರುಷರಿಗಿಂತ ವಿಲಕ್ಷಣನಾಗಿಯೂ, ಆಶ್ರಿತರಿಗೆ ಸಂಸಾರಬಂಧವನ್ನು ಬಿಡಿಸತಕ್ಕವನಾಗಿಯೂ ಇರುವ ಆ ಪರಮಾತ್ಮನನ್ನು ಸಾಕ್ಷಾತ್ಕರಿಸುತಿದ್ದಾಗಲೆಲ್ಲಾ,ಅವನಿಗೆ ನಿದ್ರಿಸುವವನ ಕ್ಲೇಶಗಳಂತೆ ಹೇಯಗುಣಗಳ್ಲವೂ ನತಿಸುವುವು. ಆದರೆ ನಿದ್ರಿಸಿದವನಿಗೆ ಆ ನಿದ್ರೆಯಕಾಲದಲ್ಲಿ ಕಷ್ಟಗಳು ತೋರದಿದ್ದರೂ,ಎಚ್ಚರವಿದ್ದಾಗ ಆ ಕಷ್ಟವು ಬಂದೊದಗುವುದಲ್ಲವೆ?"ಎಂದರೆ, ಇದು ಆ ವಿಧವಾದ ದುಃಖನಿವೃತ್ತಿಯೆಲ್ಲ. ಭಗವಂತನನ್ನು ಸಾಕ್ಷಾತ್ಕರಿಸುವಷ್ಟು ಭಕ್ತಿಯನ್ನು ಹಿಡಿದು, ಅವನ ದರ್ಶನವನ್ನು ಪಡೆದವನಿಗೆ, ಯಾವಕಾಲದಲ್ಲಿಯೂ, ಯಾವ ಅವಸ್ಥೆಯಲ್ಲಿಯೂ ಕಷ್ಟವೆಂಬುದೇ ಇರದು. ಓ ಮಹಾತ್ಮನಾದ ವಿದುರನೆ! ಭಗವಂತನ ಗುಣಗಳನ್ನು ಕೀರ್ತಿಸಿದರೂ, ಅವನ ಸತ್ಕಥೆಯನ್ನು ಕಿವಿಯಿಂದ ಕೇಳಿದ

ರೂ, ಸಮಸ್ತ ಕಷ್ಟಗಳೂ ನಶಿಸುವೆಂಬುದರಲ್ಲಿ ಏನೇನೂ ಸಂದೇಹವಿಲ್ಲ. ಅತನ ಕಥಾಶ್ರವಣ ಕೀರ್ತನಗಳಿಂದಲೇ ಸಮಸ್ತದುಃಖಗಳೂ ನಶಿಸುವಾಗ ಅನವರತವೂ ಆ ಭಗವಂತನ ಪಾದರೇಣುವನ್ನು ಭಕ್ತಿಯಿಂದ ಸೇವಿಸುತ್ತಿರುವ ಭಕ್ತರ ಕಷ್ಟಗಳು ನಶಿಸುವುವೆಂಬುದರಲ್ಲಿ ಸಂದೇಹವುಂಟೆ?" ಎಂದನು.

ಮೈತ್ರೇಯನು ಹೇಳಿದ ಈ ಮಾತನ್ನು ಕೇಳಿ ವಿದುರನು ಪರಮಸಂತುಷ್ಟಚಿತ್ತನಾಗಿ, ತಿರುಗಿ ಅವನನ್ನು ಕುರಿತು ಪ್ರಾರ್ಥಿಸುವನು. " ಓ ಮಹಾತ್ಮ!ಮೈತ್ರೇಯಾ! ಭಗವಂತನು ಹೇಗೆ ಜಗತ್ಕಾರಣನಾಗುವನೆಂಬ ಸಂದೇಹವು ಇದುವರೆಗೂ ನನ್ನ ಮನಸ್ಸನ್ನು ಕಳವಳಗೊಳಿಸುತಿತ್ತು. ನನ್ನ ಮನಸ್ಸಿನಲ್ಲಿ ಜೆನ್ಮಾಗಿ ಬೇರೂರಿ ಬೆಳೆದಿದ್ದ ಆ ಸಂದೇಹವೆಂಬ ವೃಕ್ಷವು, ನಿನ್ನ ಬೋಧನಾವಾಕ್ಯವೆಂಬ ಕತ್ತಿಯಿಂದ ಮೂಲಸಹಿತವಾಗಿ ಛೇದಿಸಲ್ಪಟ್ಟಿತು. ನಿನ್ನ ದಯೆಯಿಂದ ನನ್ನ ಮನಸ್ಸು ನಿಷ್ಕಲ್ಮಷವಾಯಿತು. ಮೊದಲಿಗಿಂತಲೂ ಈಗ ನನ್ನ ಮನಸ್ಸು ಭಗವತ್ಕಥಾಶ್ರವಣದಲ್ಲಿಯೂ,ಆತನ ಪಾದಸೇವೆಯಲ್ಲಿಯೂ ಮತ್ತಷ್ಟು ಆತುರಗೊಳ್ಳುತ್ತಿರುವುದು. ಓ ಮೈತ್ರೇಯಾ ! ನಿನ್ನ ಸಮಾಧಾನವೊಂದೊಂದೂ ಬಹಳ ತೃಪ್ತಿಕರವಾಗಿದೆ. ಜೀವಪ್ರಕೃತಿಗಳೆರಡೂ ಪರಮಾತ್ಮನಿಗೆ ಶರೀರಭೂತವಾಗಿರುವುದೆಂದು ನೀನು ನಿರೂಪಿಸಿದುದರಿಂದ, ಭಗವಂತನಿಗೆ ಚಿದಚಿತ್ತುಗಳೆರಡರಲ್ಲೆಯೂ ವ್ಯಾಪ್ತಿಯುಂಟೆಂಬುದು ಸಿದ್ಧವಾಗುವುದು. ಶರೀರಕ್ಕುಂಟಾಗುವ ಛೇದನಾದಿವಿಕಾರಗಳು ಆತ್ಮನಿಗೆ ಸಂಬಂಧಿಸುವುದಿಲ್ಲವೆಂದೂ, ಅದರಂತೆಯೇ ಚೇತನಾಚೇತನಗಳನ್ನು ಶರೀರವಾಗಿ ಹೊಂದಿ ಅವುಗಳಲ್ಲಿ ಅಡಗಿರುವ ಭಗವಂತನಿಗೂ, ಆ ಚೇತನಾಚೇತನಗಳ ದೋಷಗಳು ಅಂಟಲಾರವೆಂದೂ ಹೇಳಿ, ಅದಕ್ಕೆ ಜಲಚಂದ್ರನನ್ನು ದೃಷ್ಟಾಂತವಾಗಿ ಹೇಳಿದುದರಿಂದ, ಭಗವಂತನಿಗೆ ದೋಷಸಂಬಂಧವಿಲ್ಲವೆಂದೂ ನಿರ್ಧರಿಸಲ್ಪಟ್ಟಿತು ಆದರೆ ,, ಈ ಜಗತ್ತೆಲ್ಲವೂ ಪರಮಾತ್ಮಸ್ವರೂಪವಾಗಿ ತೋರದೆ,ಬೇರೆರೂಪದಿಂದಿರುವಾಗ, ಇದರೊಳಗೆ ಆತನು ಸೇರಿರುವನೆಂಬುದು ಹೇಗೆ "? ಎಂಬ ಒಂದು ಸಂದೇಹವುಂಟಾಗಿತ್ತು. ನೋಡಿದರೆ ಆ ಸಂದೇಹಕ್ಕೂ ಅವಕಾಶವಿಲ್ಲ. ಈ ಜಗ

ತ್ತನ್ನು ಅವನ ಸಂಬಂಧವಿಲ್ಲದುದೆಂದು ತಿಳಿಯುವುದೂ ಕೇವಲಭ್ರಮವಾಗಿಯೇ ತೋರುವುದು. ದೇವಮನುಷ್ಯಾದಿಶರೀರಗಳಲ್ಲಿ ಜೀವನು ಒಳಹೊಕ್ಕಿರುವ ಸಂಗತಿಯು ನಮ್ಮ ಕಣ್ಣಿಗೆ ಗೋಚರಿಸದಿದ್ದಮಾತ್ರಕ್ಕೆ, ಆ ಶರೀರಗಳಲ್ಲಿ ಜೀವನೇ ಇಲ್ಲವೆಂದು ಹೇಳುವುದು ಹೇಗೆ ಸಾಧ್ಯವಲ್ಲವೋ, ಹಾಗೆಯೇ ಚೇತನಾಚೇತನಗಳಲ್ಲಿ ಈಶ್ವರನು ಅಂತರ್ಗತನಾಗಿರುವುದೂ, ನಮ್ಮ ನೇತ್ರಗಳಿಗೆ ಗೋಚರಿಸದಿದ್ದಮಾತ್ರಕ್ಕೆ, ಅದರಲ್ಲಿ ಪರಮಾತ್ಮನಿಲ್ಲವೆಂದು ನಿರ್ಧರಿಸುವುದಕ್ಕಿಲ್ಲ! ಜಗತ್ತೆಲ್ಲವೂ ಪರಮಾತ್ಮಸ್ವರೂಪವಲ್ಲದೆ ಸ್ವತಂತ್ರವಾಗಿರುವುದೆಂದು ನೆನೆಸುವುದು ಭ್ರಾಂತಿಯೇಹೊರತು ವಾಸ್ತವಜ್ಞಾನವಲ್ಲ. ಲೋಕದಲ್ಲಿ ಯಾವನು ಕೇವಲಮೂಢಬುದ್ಧಿಯುಳ್ಳವನಾಗಿರುವನೋ ಮತ್ತು ಯಾವನು ಬುದ್ಧಿಗಿಂತಲೂ ವಿಲಕ್ಷಣನಾದ ಪರಮಾತ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವನೋ ಆವರಿಬ್ಬರೇ ಸುಖಿಗಳು. ಇದು ಹೊರತು ಯಾವನು ಕೇವಲಮೂಢನೂ ಅಲ್ಲದೆ, ಅಥವಾ ವಿಶೇಷಜ್ಞಾನಿಯೂ ಅಲ್ಲದೆ, ತಿಳಿದೂ ತಿಳಿಯದವನಾಗಿ, ಸಂದೇಹಾಸ್ಪದವಾದ ಮನಸ್ಸುಳ್ಳವನಾಗಿರುವನೋ ಅಂತಹ ಮನುಷ್ಯನು ಬಹಳ ಕ್ಲೇಶಗಳಿಗೆ ಗುರಿಯಾಗುವನು. ಏನೂ ತಿಳಿಯದ ಮೂಢನು ತನ್ನ ಅಜ್ಞತೆಯಿಂದಲೇ ಸುಖಿಯಾಗಿರಬಹುದು! ಸಂದಿಗ್ಧಮನಸ್ಸುಳ್ಳವನಿಗೆ ಎಂದೆಂದಿಗೂ ನೆಮ್ಮದಿಯಿಲ್ಲ. ಓ! ನುನೀಂದ್ರಾ! ಆತ್ಮದಂತೆ ತೋರುವ ಈ ದೇಹದಲ್ಲಿ, ಆತ್ಮವೆಂಬ ಭ್ರಾಂತಿಯನ್ನು ಬಿಟ್ಟು, ನಿಶ್ಚಯಜ್ಞಾನವನ್ನು ಹೊಂದಿದ ನಿಮ್ಮ ಪಾದಸೇವೆಯಿಂದ, ನಾನೂ ಆ ಭ್ರಾಂತಿಯಗ್ನು ನೀಗಿಸಿಕೊಂಡೆನು. ಮಹಾತ್ಮರಾದ ನಿಮ್ಮಂತವರ ಪಾದಸೇವಾಪ್ರಭಾವವನ್ನು ನಾನೇನೆಂದು ಹೇಳಲಿ! ನಿಮ್ಮಂತಹ ಸಾಧುಗಳ ದರ್ಶನಮಾತ್ರದಿಂದಲೇ ಪತಿತನಾದ ಮನುಷ್ಯನಿಗೂ ಮನಸ್ಸು ಶುದ್ಧವಾಗಿ, ಪರಮಾತ್ಮನ ಪಾದದಲ್ಲಿ ಭಕ್ತಿಯು ಜನಿಸುವುದು. ಅವನ ತಾಪತ್ರಯವೂ ಬಿಟ್ಟು ಹೋಗುವುದು. ಯಾವ ಸ್ಥಳದಲ್ಲಿ ಶ್ರೀಮನ್ನಾರಾಯಣನು ಬ್ರಹ್ಮರುದ್ರಾದಿಗಳಿಂದ ಕೀರ್ತಿಸಲ್ಪಡುತ್ತ ನೆಲೆಗೊಂಡಿರುವನೋ, ಅಂತಹ ಪರಮವೈಕುಂಠಕ್ಕೆ, ಜ್ಞಾನಹೀನರಾದ ಮಾನವರನ್ನು ಕೂಡ ತಂದುಸೇರಿಸತಕ್ಕ ನಿಮ್ಮಂತಹಸಜ್ಜನರಸೇವೆಯು

ಸುಲಭವಾಗಿ ಸಿಕ್ಕುವುದಲ್ಲ. ಸಾಧುಸೇವೆಯಿಂದ ಎಂತಹ ಪತಿತನಿಗಾದರೂ ಭಗವದ್ಭಕ್ತಿಯು ಜನಿಸದೆ ಬಿಡದು. ಎಲೈ ಋಷಿಶ್ರೇಷ್ಠನೆ ! ಭಗವಂತನು ವ್ಯಷ್ಟಿಸೃಷ್ಟಿಯೆನ್ನುಂಟುಮಾಡುವುದಕ್ಕೆ ಮೊದಲು, ಇಂದ್ರಿಯಾದಿಗಳಿಂದ ಕೂಡಿದ ಮಹತ್ತು ಮೊದಲಾದ ತತ್ವಗಳನ್ನೂ, ಅವುಗಳಿಂದ ಬ್ರಹ್ಮಾಂಡವನ್ನೂ, ಅದರಲ್ಲಿ ಸಮಷ್ಟಿಪುರುಷನೆನಿಸಿದ ಬ್ರಹ್ಮನನ್ನೂ ಉಂಟುಮಾಡಿ, ಆ ಬ್ರಹ್ಮನಲ್ಲಿ ತಾನೂ ಪ್ರವೇಶಿಸಿದನೆಂದು ಹೇಳಿದೆ ! ಸರ್ವಜಗತ್ಕಾರಣನಾದ ಆ ವಿರಾಟ್ಪುರುಷನು, ಸಹಸ್ರಪಾದಗಳಿಂದಲೂ, ಸಹಸ್ರನೇತ್ರಗಳಿಂದಲೂ, ಸಾವಿರತೋಳುಗಳಿಂದಲೂ, ಸಾವಿರತೊಡೆಗಳಿಂದಲೂ, ಕೂಡಿದ್ದನೆಂದೂ, ಅವನಲ್ಲಿಯೇ ಸಮಸ್ತಪ್ರಪಂಚವೂ ಜನಿಸಿದುವೆಂದೂ, ತಿಳಿಸಿದೆ ? ಮತ್ತು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂಬಿವೈದೂ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯಗಳೆಂಬ ಇವೈದೂ ಸೇರಿ, ಹತ್ತು ಬಗೆಯಾಗಿಯೂ, ಸತ್ತ್ವಾದಿಮೂರುಗುಣಗಳಿಂದ ಕೂಡಿದುದಾಗಿಯೂ ಇರುವ ಪ್ರಾಣವೂ, ಶಬ್ದಾದಿವಿಷಯಗಳೂ, ಜ್ಞಾನಕರ್ಮೇಂದ್ರಿಯಗಳೂ ವೈರಾಜಪುರುಷನೆನಿಸಿದ ಯಾವ ಪರಮಾತ್ಮನಲ್ಲಿ ಒಟ್ಟುಗೂಡಿರುವುವೋ, ಯಾವನಿಂದ ಬ್ರಾಹ್ಮಣಾದಿಚತುರ್ವರ್ಣಗಳೂ ಹುಟ್ಟಿದುವೋ, ಆ ವಿರಾಟ್ಪುರುಷನ ವಿಭೂತಿಗಳನ್ನೆಲ್ಲಾ ನನಗೆ ವಿವರಿಸಿ ತಿಳಿಸಬೇಕು. ಬ್ರಹ್ಮಾಂಡದಲ್ಲಿ ಪುತ್ರಪೌತ್ರಾದಿಗಳೊಡನೆಯೂ, ಇತರಬಂಧುಗಳೊಡನೆಯೂ ಕೂಡಿದ ಬಗೆಬಗೆಯ ದೇಹಗಳುಳ್ಳ ಪ್ರಜೆಗಳೆಲ್ಲರೂ ವಾಸಿಸುತ್ತಿರುವರಷ್ಟೆ ? ಆ ಪ್ರಜೆಗಳಿಂದ ಬ್ರಹ್ಮಾಂಡವು ಯಾವರೀತಿಯಲ್ಲಿ ವ್ಯಾಪಿಸಲ್ಪಟ್ಟಿರುವುದು ? ಅವೆಲ್ಲವನ್ನೂ ವಿವರಿಸಬೇಕು. ಆ ಪ್ರಜೆಗಳಲ್ಲಿರುವ ಭೇದವೇನು ? ಮರೀಚಿ ಮೊದಲಾದ ಪ್ರಜಾಧಿಪತಿಗಳನ್ನು ಸೃಷ್ಟಿಸಿದುದು ಹೇಗೆ ? ಸಮಷ್ಟಿಪುರುಷನಾದ ಆ ಬ್ರಹ್ಮದೇವನು, ನವಬ್ರಹ್ಮರನ್ನು ಸೃಷ್ಟಿಸಿದಮೇಲೆ, ಅವರ ಪುತ್ರಪೌತ್ರಾದಿಸಂತಾನದಿಂದ ಈ ಪ್ರಪಂಚವು ತುಂಬಿದುದು ಹೇಗೆ ? ಐದಂಬತ್ತುವಿಧಗಳಾದ ಸೃಷ್ಟಿಭೇದಗಳಾವುವು ? ಚತುರ್ಮುಖಸೃಷ್ಟಿಗೆ ಮೇಲೆ ನಡೆದ ಸೃಷ್ಟಿಯ ವ್ಯಾಪ್ತಿಯನ್ನೂ, ಸ್ವಾಯಂಭುವನೇ

ಮೊದಲಾದ ಚತುರ್ದಶಮನುಗಳನ್ನೂ, ಆಯಾಮನ್ವಂತರಗಳಲ್ಲಿ ಯಾರು ಯಾರು ಅಧಿಪತಿಗಳೆಂಬುದನ್ನೂ, ಆ ಯಾ ಮನುಗಳ, ಮತ್ತು ಮನ್ವಂತರಾಧಿಪತಿಗಳ ವಂಶಕ್ರಮವನ್ನೂ, ಆ ವಂಶಕ್ಕೆ ಸಂಬಂಧಪಟ್ಟ ಚರಿತ್ರೆಗಳನ್ನೂ ವಿವರಿಸಬೇಕು. ಮತ್ತು ಎಲೈ ಮಹಾತ್ಮನೆ!, ಈ ಭೂಮಿಗೆ ಮೇಲೆಯೂ, ಕೆಳಗೂ ಇರುವ ಲೋಕಗಳಾವುವು? ಇವುಗಳ ಸ್ಥಿತಿಯೆಂತದು? ಅವುಗಳ ಪ್ರಮಾಣವೇನು? ಈ ಭೂಲೋಕದ ಪರಿಮಾಣವೆಷ್ಟು? ಮತ್ತು ಪಶುಪಕ್ಷಿಗಳು, ದೇವಮನುಷ್ಯಾದಿಗಳು, ಜರಾಯುಜಗಳು, ಸ್ವೇದಜಗಳು, ಅಂಡಜಗಳು, ಉದ್ಭಿಜ್ಜಗಳು ಇವೇ ಮೊದಲಾದ ಪ್ರಾಣಿಗಳ ಸೃಷ್ಟಿಭೇದವು ಹೇಗೆ? ಮತ್ತು ರಜಸ್ತಮೋಗುಣಪ್ರಧಾನರಾಗಿ, ಭಗವಂತನ ಆವೇಶಾವತಾರವೆಂದು ಹೇಳಲ್ಪಡುವ ಬ್ರಹ್ಮರುದ್ರಾದಿಗಳಿಂದ, ಈ ಲೋಕವ್ಯಾಪಾರಗಳನ್ನು ನಡೆಸುತ್ತ,ಸೃಷ್ಟಿ,ಸ್ಥಿತಿ, ಲಯಗಳು ಮೂರಕ್ಕೂ ತಾನೊಬ್ಬನೇ ಆಧಾರವಾಗಿರುವ, ಆ ವಿಷ್ಣುಮೂರ್ತಿಯೆ ಉದಾರಚರಿತ್ರೆಗಳೆಲ್ಲವನ್ನೂ ವರ್ಣಿಸಿ ತಿಳಿಸಬೇಕು. ವರ್ಣಾಶ್ರಮವಿಭಾಗಗಳನ್ನೂ, ಅವುಗಳ ಚಿಹ್ನೆಗಳನ್ನೂ, ಅವರವರು ನಡೆಸಬೇಕಾದ ಆಚಾರಗಳನ್ನೂ, ಸ್ವಭಾವಗಳನ್ನೂ ತಿಳಿಸಬೇಕು. ಮತ್ತು ಮಹರ್ಷಿಗಳ ಚರಿತ್ರವನ್ನೂ, ಅವರ ಉತ್ಪತ್ತಿಯನ್ನೂ, ವೇದಗಳ ವಿಭಾಗವನ್ನೂ ವಿವರಿಸಬೇಕು. ಮತ್ತು ಯಾಗಕ್ರಮಗಳನ್ನೂ, ಫಲಾಪೇಕ್ಷೆಯಿಲ್ಲದೆ ನಡೆಸುವ ಕರ್ಮಯೋಗಗಳನ್ನೂ, ಅವುಗಳ ಮಹಿಮೆಯನ್ನೂ, ಪ್ರವೃತ್ತಿಧರ್ಮಗಳನ್ನು ನಿರೋಧಿಸಿ ಆ ಭಗವಂತನನ್ನೇ ಉಪಾಯವಾಗಿ ಹೊಂದುವ ಪ್ರಪತ್ತಿಮಾರ್ಗವನ್ನೂ,ಪ್ರವೃತ್ತಿಧರ್ಮವನ್ನು ನಿಷೇಧಿಸುವ ಸಾಂಖ್ಯಯೋಗಮಾರ್ಗವನ್ನೂ ವಿಸ್ತರಿಸಿ ತಿಳಿಸಬೇಕು. ಮತ್ತು ಜ್ಞಾನಯೋಗವೆಂತದು?ಸಾಕ್ಷಾದ್ಭಗವಂತನಿಂದಲೇ ವಿಧಿಸಲ್ಪಟ್ಟ ಪಾಂಚರಾತ್ರದ ಸಾರವೇನು? ವೇದಬಾಹ್ಯರಾದ ಪಾಷಂಡಿಗಳ ಮಾರ್ಗವನ್ನೂ, ಜೀವಗಳಿಗೆ ಸತ್ವಾದಿಗುಣಗಳ ಹೆಚ್ಚಿಗೆಯಿಂದಾಗುವ ಗತಿಗಳನ್ನೂ, ಫಲಗಳನ್ನೂ ವರ್ಣಿಸಬೇಕು. ಪರಸ್ಪರವಿರೋಧವಿಲ್ಲದೆ ಧರ್ಮಾರ್ಥ, ಕಾಮ, ಮೋಕ್ಷಗಳನ್ನು ಸಾಧಿಸತಕ್ಕ ಉಪಾಯವೇನು? ರಾಜನೀತಿಗಳಾವುವು? ದಂಡನೀತಿಕ್ರಮವೆಂತದು? ವೇದೋಕ್ತಗಳಾದ ಸಂ

ಧ್ಯಾವಂದನಾದಿನಿತ್ಯಕರ್ಮಗಳ ವಿಧಾನವೆಂತದು ? ಶ್ರಾದ್ಧಾದಿಕರ್ಮಗಳ ವಿಧಾನವು ಹೇಗೆ ? ಸೂರ್ಯಾದಿಗ್ರಹಗಳು, ಅಶ್ವಿನಿ ಮೊದಲಾದ ತಾರಾಗಳು, ಇತರನಕ್ಷತ್ರಗಳು, ಇವುಗಳ ಗತಿಗಳೆಂತವು ? ಅವುಗಳ ಕಾಲನಿಯಮವೇನು ? ತಪಸ್ಸು, ದಾನ ಮೊದಲಾದುವುಗಳನ್ನು ನಡೆಸುವುದರಿಂದುಂಟಾಗುವ ಫಲಗಳಾವುವು ? ಶ್ರೌತಸ್ಮಾರ್ತಕರ್ಮಗಳ ವ್ಯತ್ಯಾಸವೇನು? ದೇಶಾಂತರದಲ್ಲಿರುವವನು ಅನುಸರಿಸಬೇಕಾದ ಅವಶ್ಯಧರ್ಮವಾವುದು ? ಆಪತ್ಕಾಲದಲ್ಲಿ ಮನುಷ್ಯನು ಅನುಸರಿಸಬೇಕಾದ ಧರ್ಮಗಳಾವುವು ? ಧರ್ಮಪ್ರವರ್ತಕನಾದ ಭಗವಂತನು ಎಂತಹ ಧರ್ಮದಿಂದ ಸಂತೋಷಿಸುವನು ? ಎಂತವರನ್ನು ಆ ಭಗವಂತನು ಅನುಗ್ರಹಿಸುವನು ? ಆ ಶ್ರಿತವತ್ಸಲರಾದ ಗುರುಗಳು, ತಮ್ಮನ್ನು ಸೇವಿಸುವ ಶಿಷ್ಯರಲ್ಲಿ ಪುತ್ರಪ್ರೇಮವನ್ನಿಟ್ಟು,ಅವರು ಕೇಳದೆಬಿಟ್ಟ ಧರ್ಮರಹಸ್ಯಗಳೆಲ್ಲವನ್ನೂ ತಾವಾಗಿಯೇ ತಿಳಿಸುವರೆಂದು ಕೇಳಿರುವೆನು. ಆದುದರಿಂದ ನೀನೂ ನನ್ನಲ್ಲಿ ಅದೇವಿಧವಾದ ಪ್ರೇಮವನ್ನಿಟ್ಟು,,ಈಗ ನಾನು ನಿನ್ನನ್ನು ಪ್ರಶ್ನೆಮಾಡದೆ ಬಿಟ್ಟಿರುವ ರಹಸ್ಯಾರ್ಥಗಳೇನಾದರೂ ಇದ್ದರೂ,ಅವುಗಳನ್ನೂ ಕೃಪೆಯಿಟ್ಟು ತಿಳಿಸಬೇಕು. ಮತ್ತು ಓ ಮಹಾತ್ಮಾ ! ಪೃಥಿವಿ ಮೊದಲಾದ ತತ್ವಗಳಿಗುಂಟಾಗುವ ಪ್ರಳಯವು ಎಷ್ಟುವಿಧವಾದುದು? ಆ ಪ್ರಳಯಕಾಲದಲ್ಲಿಯೂ ಭಗವಂತನನ್ನು ಉಪಾಸಿಸುವ ಮಹಾತ್ಮರಾರು ? ಪೃಥಿವಿ ಮೊದಲಾದ, ತತ್ತ್ವಗಳೆಲ್ಲವೂ ಪ್ರಳಯಕಾಲದಲ್ಲಿ ಒಂದಾಗಿ ಸೇರಿ, ಆ ಪರಮಾತ್ಮನಲ್ಲಿಯೇ ಅಡಗಿಕೊಳ್ಳುವುವೇ, ಅಥವಾ ಮೇಲೆಮೇಲೆ ಹುಟ್ಟಿದ್ದ ತತ್ವಗಳು ತಮ್ಮ ತಮ್ಮ ಹಿಂದಿನ ತತ್ವಗಳಲ್ಲಿ ಸೇರುವುವೆ ? ಅಥವಾ ಈ ಎರಡು ಕ್ರಮಗಳೂ ನಡೆಯುವುವೆ? ಜೀವಾತ್ಮಪರಮಾತ್ಮರ ಅಸಾಧಾರಣಸ್ವರೂಪವೆಂತದು ? ಅವುಗಳನ್ನು ತಿಳಿಸತಕ್ಕ ಶಾಸ್ತ್ರಜನ್ಯವಾದ ಜ್ಞಾನವೆಂತದು ? ಗುರುಶಿಷ್ಯರಿಗೆ ಪ್ರಯೋಜನಕರವಾಗಿ, ಶಾಸ್ತ್ರಸಿದ್ಧವೆನಿಸಿದ ಅಂತಹ ಜ್ಞಾನವನ್ನೂ, ಆ ಜ್ಞಾನವನ್ನು ಸಂಪಾದಿಸುವುದಕ್ಕೆ ಪಂಡಿತರು ನಿರ್ಣಯಿಸಿರುವ ಸಾಧನಗಳನ್ನೂ ತಿಳಿಸಬೇಕು. ಮನುಷ್ಯನಿಗೆ ಗುರೂಪದೇಶವಿಲ್ಲದೆ ಶಾಸ್ತ್ರಜ್ಞಾನವೂ, ಅದರಿಂದುಂಟಾಗುವ ಭಕ್ತಿವೈರಾಗ್ಯಗಳೂ ಹೇಗೆ ಲಭಿಸುವುವು ? ಓ

ಮೈತ್ರೇಯಾ ? ಈ ಧರ್ಮಗಳನ್ನೂ, ಭಗವಂತನ ವ್ಯಾಪಾರಗಳನ್ನೂ; ಆತನ ಲೀಲೆಗಳನ್ನೂ, ಆಮೂಲಾಗ್ರವಾಗಿ ತಿಳಿಯಬೇಕೆಂದಿರುವ ಈ ನನ್ನ ಪ್ರಶ್ನೆಗಳೆಲ್ಲಕ್ಕೂ ತಕ್ಕ ಸಮಾಧಾನವನ್ನು ಹೇಳಿ ನನ್ನನ್ನುದ್ಧರಿಸಬೇಕು. ಓ ಮಹಾತ್ಮಾ! ಈಗ ನಾನೊಬ್ಬ ಕುರುಡನಂತೆ ಏನೂ ತಿಳಿಯದೆ ಕಳವಳಿಸುತ್ತಿರುವೆನು. ನಿನ್ನ ಉಪದೇಶದಿಂದ ನನ್ನ ಅಜ್ಞಾನಾಂಧತೆಯನ್ನು ನೀಗಿಸಿ, ಮಾಯೆಯಿಂದ ನಷ್ಟವಾದ ನನ್ನ ಕಣ್ಣನ್ನು ತೆರೆಯಿಸಬೇಕು. ಜೀವಾತ್ಮನಿಗೆ ಸಂಸಾರನಿವೃತ್ತಿಯನ್ನುಂಟುಮಾಡಿ ಭಗವಂತನ ಸಾನ್ನಿಧ್ಯವನ್ನು ಸೇರಿಸುವ ವಿಷಯದಲ್ಲಿ, ವೇದಾಧ್ಯಯನವೇ ಮೊದಲಾದುವುಗಳಾಗಲಿ, ಯಾಗಗಳಾಗಲಿ, ವ್ರತಗಳಾಗಲಿ, ತಪಸ್ಸಾಗಲಿ, ಇವೊಂದೂ, ನಿಮ್ಮಂತವರು ಮಾಡ ತಕ್ಕ ಅಭಯಪ್ರದಾನಕ್ಕೆ ಕಲಾಮಾತ್ರವೂ ಸಾಟಿಯಾಗಲಾರದು. ಆದುದರಿಂದ ನೀನು ಅವಿಧವಾದ ಅಭಯಪ್ರದಾನವನ್ನು ಮಾಡಿ, ಜ್ಞಾನೋಪದೇಶದಿಂದ ನನ್ನನ್ನುದ್ಧರಿಸಬೇಕು" ಎಂದನು. ಹೀಗೆ ವಿದುರನು ಭಗವತ್ಕಥೆಯನ್ನು ಕುರಿತು ಪ್ರಶ್ನೆಮಾಡಿದುದಕ್ಕಾಗಿ, ಮೈತ್ರೇಯನು ಬಹಳ ಸಂತೋಷಗೊಂಡು ಉತ್ಸಾಹದಿಂದ ಹೇಳತೊಡಗಿದನು. ಇಲ್ಲಿಗೆ ಏಳನೆಯ ಅಧ್ಯಾಯವು.

{ಮೈತ್ರೇಯಮಹರ್ಷಿಯು ವಿದುರನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿದುದು.}

"ಎಲೈ ಮಹಾತ್ಮನಾದ ವಿದುರನೆ! ಆಹಾ! ನಿನ್ನಿಂದಲೇ ನಿಮ್ಮ ಪೂರುವಂಶವೆಂಬುದು ಸಮಸ್ತಸತ್ಪುರುಷರಿಗೂ ಸ್ತೋತ್ರಾರ್ಹವಾಯಿತು! ಏಕೆಂದರೆ, ಸರ್ವವಿಧದಿಂದಲೂ ಭಗವಂತನನ್ನೇ ಮುಖ್ಯವಾಗಿ ನಂಬಿ, ಸಾಕ್ಷಾದ್ಯಮದೇವನ ಅಂಶಭೂತನಾದ ನೀನು, ಅವಂಶದಲ್ಲಿ ಹುಟ್ಟಿದುದರಿಂದಲ್ಲವೇ ಅದಕ್ಕೆ ಇಷ್ಟೊಂದತಿಶಯವುಂಟಾಯಿತು! ಓ! ವಿದುರಾ! ನಿನ್ನಂತಹ ಮಹಾಭಕ್ತನು ಲೋಕದಲ್ಲಿ ಬೇರೊಬ್ಬನೂ ಇರಲಾರನು. ಆ ಪರಮಪುರುಷನ ಕೀರ್ತಿಯನ್ನು ಮೇಲೆಮೇಲೆ ಹೊಸದಾಗುವಂತೆ ಮಾಡುತ್ತಿರುವ ನಿನ್ನ ಪ್ರಶ್ನೆಗಳಿಗಾಗಿ ನಾನು ಬಹಳಸಂತೋಷಪಟ್ಟೆನು! ಲೋಕದಲ್ಲಿ ಮನುಷ್ಯರು ಅಲ್ಪ

ವಾದ ಸಂಸಾರಸುಖವನ್ನನುಭವಿಸಬೇಕೆಂದು ಯತ್ನಿಸಿ, ಸಂಸಾರಕೂಪದಲ್ಲಿ ಬಿದ್ದು, ಮಹತ್ತಾದ ದುಃಖವನ್ನೇ ಸಂಪಾದಿಸಿಕೊಳ್ಳುತ್ತಿರುವರು. ಅಂತಹ ದುಃಖವನ್ನು ತೊಲಗಿಸುವುದಕ್ಕೆ ಭಾಗವತಕ್ಕಿಂತಲೂ ಉತ್ತಮವಾದ ಬೇರೆ ಸಾಧನವಿಲ್ಲ. ಆ ಭಾಗವತವೆಂಬುದು ಭಗವಂತನ ಗುಣಕೀರ್ತನೆಗಳಿಗೆಲ್ಲಾ ಮುಖ್ಯಸ್ಥಾನವಾಗಿರುವುದು. ಆದರಲ್ಲಿ ಸಮಸ್ತವೇದಾರ್ಥಗಳೂ ತುಂಬಿರುವುವು. ಆ ಭಾಗವತದಲ್ಲಿರುವ ವಿಷಯವನ್ನೇ ನಿನಗೆ ತಿಳಿಸುವೆನು ಕೇಳು ಪೂರ್ವದಲ್ಲಿ ಸಂಕರ್ಷಣಭಗವಂತನು ತಾನಾಗಿಯೇ ಸನಕಾದಿಮಹರ್ಷಿಗಳಿಗೆ ಆ ಸದ್ಗ್ರಂಥವನ್ನುಪದೇಶಿಸಿರುವನು. ಈ ಕಾರಣದಿಂದ ಅದಕ್ಕೆ ಸಾಂಕರ್ಷಣಭಾಗವತವೆಂದು ಹೆಸರುಂಟಾಗಿರುವುದು. ಸನತ್ಕುಮಾರನೇ ಮೊದಲಾದ ನಾಲ್ವರು ಋಷಿಕುಮಾರರು, ಚೇತನಾಚೇತನರೂಪವಾದ ಈ ಪ್ರಪಂಚಕ್ಕಿಂತಲೂ ವಿಲಕ್ಷಣನಾದ ಪರಮಾತ್ಮನ ನಿಜತತ್ವವನ್ನು ತಿಳಿಯಬೇಕೆಂದುದ್ದೇಶಿಸಿ, ಪಾತಾಳದಲ್ಲಿ ಜ್ಞಾನಾದಿಷಡ್ಗುಣಪರಿಪೂರ್ಣನಾಗಿಯೂ, ರಜಸ್ತಮೋಗುಣಗಳ ಸಂಬಂಧವಿಲ್ಲದೆ ಕೇವಲಶುದ್ಧಸತ್ವನುಯವಾದ ದಿವ್ಯಮಂಗಳಮೂರ್ತಿಯುಳ್ಳವನಾಗಿಯೂ ಇದ್ದ ಆದಿದೇವನಾದ ಸಂಕರ್ಷಣಮೂರ್ತಿಯನ್ನು ಸಮೀಪಿಸಿ, ಸುಖಾಸೀನನಾಗಿ ಕುಳಿತಿದ್ದ ಅವನನ್ನು ಪ್ರಶ್ನೆಮಾಡತೊಡಗಿದರು. ಆಗ ಸಂಕರ್ಷಣನು ತನಗೆ ಕಾರಣನಾಗಿ ವಾಸುದೇವನೆಂದು ಕರೆಯಲ್ಪಡುವ ಭಗವಂತನ ನಿಜಸ್ವರೂಪವನ್ನು ವಿಶೇಷವಾಗಿ ಗೌರವಿಸಿ ಪೂಜಿಸುತ್ತ, ಅಂತರಾತ್ಮಧ್ಯಾನದಿಂದ

---

* ಭಾಗವತವು ಎರಡುಶಾಖೆಯಾಗಿ ಹೊರಟಿರುವುದೆಂದು ಸಂಪ್ರದಾಯಪ್ರವರ್ತಕರು ನಿರ್ಣಯಿಸಿರುವರು. ಅವುಗಳಲ್ಲಿ ಭಗವಂತನಿಂದ ಬ್ರಹ್ಮನಿಗೂ, ಅವನಿಂದ ನಾರದನಿಗೂ, ನಾರದನಿಂದ ವ್ಯಾಸನಿಗೂ, ವ್ಯಾಸನಿಂದ ಶುಕಮುನಿಗೂ, ಉಪದಿಷ್ಟವಾಗಿ ಬಂದುದೊಂದು. ಇದು ಹತ್ತುಸಾವಿರಗ್ರಂಥವುಳ್ಳದು. ಸಂಕರ್ಷಣನಿಂದ ಸನಕಾದಿಗಳಿಗೂ, ಸನಕಾದಿಗಳಿಂದ ಸಾಂಖ್ಯಾಯನನಿಗೂ, ಆತನಿಂದ ಪರಾಶರನಿಗೂ, ಪರಾಶರನಿಂದ ಮೈತ್ರೇಯನಿಗೂ, ಮೈತ್ರೇಯನಿಂದ ವಿದುರನಿಗೂ ಉಪದಿಷ್ಟವಾಗಿ ಬಂದುದೆರಡನೆಯದು. ಇದು ಎರಡುಸ್ಕಂಧವುಳ್ಳದು. ಇವೆರಡನ್ನೂ ಸಂಗ್ರಹಿಸಿ ವ್ಯಾಸಮುನಿಯು ದ್ವಾದಶಸ್ಕಂಧಾತ್ಮಕವಾದ ಈ ಪುರಾಣವನ್ನು ರಚಿಸಿರುವುದಾಗಿ ಗ್ರಾಹ್ಯವು.

ತಾವರೆಮೊಗ್ಗಿನಂತೆ ಮುಚ್ಚಿದ ಕಣ್ಣುಗಳುಳ್ಳವನಾಗಿದ್ದರೂ, ಸೇವಾರ್ಥವಾಗಿ ಬರತಕ್ಕ ಜ್ಞಾನಿಗಳನ್ನನುಗ್ರಹಿಸುವುದಕ್ಕಾಗಿ ಆಗಾಗ ಆ ಕಣ್ಣುಗಳನ್ನು ಸ್ವಲ್ಪ ತೆರೆಯುತ್ತಿರುವನು. ಸರ್ಪರಾಜನೆನಿಸಿಕೊಂಡ ಆ ಸಂಕರ್ಷಣನ ಕುಮಾರಿಯೆರಾದ ನಾಗಕನ್ಯೆಯೆರೆಲ್ಲರೂ ಆಗಾಗ ಬಂದು, ತಮತಮಗೆ ಪತಿಗಳನ್ನಪೇಕ್ಷಿಸಿ, ಅವನ ಪಾದಾಶ್ರಯವಾದ ಪದ್ಮಪೀಠವನ್ನು ಬಗೆಬಗೆಯೆ ಪೂಜಾದ್ರವ್ಯಗಳಿಂದ ಅರ್ಚಿಸುತ್ತಿರುವರು. ಅವನ ಸಹಸ್ರಫಣೆಗಳೂ, ಮೇಲೆ ಧರಿಸಿರುವ ಸಹಸ್ರಕಿರೀಟಗಳ ರತ್ನಕಾಂತಿಯಿಂದ ಮತ್ತಷ್ಟುಬಣ್ಣನೇರಿ, ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವುವು. ಸನಕಾದಿಮಹರ್ಷಿಗಳೆಲ್ಲರೂ ಇಂತಹ ಸಂಕರ್ಷಣಮೂರ್ತಿಯನ್ನು ನೋಡಿ, ಗಂಗಾಜಲದಿಂದ ತೊಯ್ದ ತಮ್ಮ ಜಟಾಭಾರಗಳೊಡನೆ ಮುಂದೆ ಬಂದು, ಅವನ ಪಾದಾಶ್ರಯವಾದ ಪದ್ಮಪೀಠಕ್ಕೆ ತಲೆಯನ್ನು ಸೋಕಿಸಿ ನಮಸ್ಕರಿಸಿದರು. ಭಗವಂತನ ಆಶ್ಚರ್ಯಚರಿತ್ರೆಗಳೆಲ್ಲವನ್ನೂ ಚೆನ್ನಾಗಿ ಬಲ್ಲವರಾದ ಆ ಮಹರ್ಷಿಗಳು, ಅವನಲ್ಲಿ ಹುಟ್ಟಿದ ಭಕ್ತ್ಯತಿಶಯದಿಂದ ಮೈಮರೆತು, ತಡವರಿಸುವ ನುಡಿಯುಳ್ಳವರಾಗಿ, ಆತನ ಗುಣಕೀರ್ತನವನ್ನು ಮಾಡುತ್ತ,ತಮಗೆ ಭಗವತ್ತತ್ತ್ವವನ್ನು ಪದೇಶಿಸಬೇಕೆಂದು ಪ್ರಾರ್ಥಿಸಿದರು. ಪ್ರಪತ್ತಿಮಾರ್ಗದಲ್ಲಿ ಅತ್ಯಾದರವುಳ್ಳ ಆ ಋಷಿಗಳನ್ನು ನೋಡಿ, ಜ್ಞಾನಾಧಿಕನಾದ ಸಂಕರ್ಷಣನು, ಅವರ ಕೋರಿಕೆಯಂತೆ ತತ್ತ್ವವನ್ನು ಪದೇಶಿಸಿದನು. ಹೀಗೆ ಸಂಕರ್ಷಣನಿಂದ ಉಪದೇಶ ಹೊಂದಿದ ಸನತ್ಕುಮಾರನು, ಅದೇ ತತ್ತ್ವವನ್ನು ತನ್ನಲ್ಲಿಗೆ ಬಂದು ಪ್ರಾರ್ಥಿಸಿದ ಸಾಂಖ್ಯಾಯನನಿಗೆ ಉಪದೇಶಿಸಿದನು. ನಿವೃತ್ತಿಧರ್ಮನಿಷ್ಠರಾದ ಪರಮಸಂಹರಲ್ಲಿ ಮೇಲೆನಿಸಿಕೊಂಡ ಆ ಸಾಂಖ್ಯಾಯನನೂಕೂಡ, ಭಗವಂತನ ದಿವ್ಯವಿಭೂತಿಗಳನ್ನು ಹೇಳುವುದರಲ್ಲಿ ವಿಶೇಷಕುತೂಹಲವುಳ್ಳವನಾಗಿ, ತಮ್ಮಲ್ಲಿ ಶಿಷ್ಯವೃತ್ತಿಯನ್ನವಲಂಬಿಸಿದ ನಮ್ಮ ಗುರುವಾದ ಪರಾಶರ ಮಹರ್ಷಿಗೂ, ಆಮೇಲೆ ಬೃಹಸ್ಪತಿಗೂ ಅದೇ ತತ್ತ್ವವನ್ನು ಪದೇಶಿಸಿದನು. ಹಿಂದೊಮ್ಮೆ ಪರಾಶರಮುನಿಯು, ತನ್ನ ತಂದೆಯನ್ನು ರಾಕ್ಷಸನೊಬ್ಬನು ಭಕ್ಷಿಸಿದುದಕ್ಕಾಗಿ ರಾಕ್ಷಸಯಾಗವನ್ನಾರಂಭಿಸಿದ್ದನು. ಆಗ ತನ್ನ ಸಂತಾನವನ್ನುಳಿಸಿದುದಕ್ಕಾಗಿ ಪುಲಸ್ತ್ಯಮುನಿಯು ಆವನಲ್ಲಿ ಪ್ರಸನ್ನನಾಗಿ, ಅವನಿಗೆ ಪುರಾಣಪ

ತನದಲ್ಲಿಯೂ,ತತ್ವಜ್ಞಾನದಲ್ಲಿಯೂ ವಿಶೇಷಸಾಮರ್ಥ್ಯವನ್ನು ಅನುಗ್ರಹಿಸಿದ್ದನು. ಈ ವರಬಲದಿಂದ ಜ್ಞಾನಾಧಿಕನಾದ ಪರಾಶರನು, ನನ್ನಲ್ಲಿ ದಯಾಳುವಾಗಿ, ಅದೇ ಭಾಗವತವನ್ನು ನನಗೂ ಉಪದೇಶಿಸಿರುವನು. ನಾನು ಆ ಮಹರ್ಷಿಯಿಂದ ಉಪದೇಶಹೊಂದಿದಂತೆಯೇ ನಿನಗೂ ಉಪದೇಶಿಸುವೆನು ಕೇಳು ! ಎಲೆ ವತ್ಸ ವಿದುರಾ! ನೀನು ಭಗವತ್ಕಥೆಗಳನ್ನು ಕೇಳುವುದರಲ್ಲಿ ಬಹಳಶ್ರದ್ಧೆಯುಳ್ಳವನು ! ಶಿಷ್ಯಧರ್ಮವನ್ನೂ ಚೆನ್ನಾಗಿ ಅನುಸರಿಸತಕ್ಕವನು. ಆದುದರಿಂದ ಈ ತತ್ತ್ವೋಪದೇಶವನ್ನು ನನ್ನಿಂದ ಪಡೆಯುವುದಕ್ಕೆ ನೀನೇ ತಕ್ಕ ಪಾತ್ರವು ! ಸಾವಧಾನನಾಗಿ ಕೇಳು.

ಯಾವಾಗ ಭಗವಂತನು ಈ ಲೋಕಸಂಬಂಧವಾದ ವ್ಯಾಪಾರವೆಲ್ಲವನ್ನೂ ಬಿಟ್ಟು, ಆತ್ಮಾನುಭವದಿಂದುಂಟಾದ ಆನಂದದಿಂದ ಪೂರ್ಣನಾಗಿ, ಯೋಗನಿದ್ರೆಯೆನ್ನವಲಂಬಿಸಿ, ತಾನೊಬ್ಬನೇ ಶೇಷಶಯ್ಯೆಯಲ್ಲಿ ಕಣ್ಣುಗಳನ್ನು ಮುಚ್ಚಿ ಮಲಗಿದ್ದನೋ, ಆಗ ಚೇತನಾಚೇತನರೂಪವಾದ ಈ ಪ್ರಪಂಚವೆಲ್ಲವೂ ಜಲಾವರಣದಿಂದ ಮುಚ್ಚಲ್ಪಟ್ಟಿದ್ದಿತು. (ಎಂದರೆ ಭಗವಂತನು ಆವರಣಜಲದವರೆಗೆಮಾತ್ರ ಸೃಷ್ಟಿಸಿ ಜಗತ್ಕಾರಣವಾದ ಸಮಸ್ತ ಭೂತಸಮೂಹಗಳೊಡನೆ ಆ ಜಲದಮೇಲೆಯೇ ಶಯನಿಸಿದ್ದನು.) ಈ ವಿಧವಾಗಿ ತನ್ನ ಶರೀರದಲ್ಲಿ ಅಡಗಿದ ಭೂತಸೂಕ್ಷ್ಮಗಳೊಡನೆ ಭಗವಂತನು, ತನಗಾಶ್ರಯವಾದ ಜಲದಲ್ಲಿ ಮಲಗಿದ್ದಾಗ, ದಾರುವಿನಲ್ಲಿ ಅಡಗಿರುವ ಅಗ್ನಿಯಂತೆ, ತನ್ನ ವೀರ್ಯವನ್ನು ಅಡಗಿಸಿಕೊಂಡು, ಕಾಲರೂಪವಾದ ತನ್ನ ಶಕ್ತಿಯೆನ್ನುಮಾತ್ರ ಪ್ರೇರಿಸುತ್ತ ಸುಮ್ಮನಿದ್ದನು. ಇದೇರೀತಿಯಲ್ಲಿ ಅನೇಕ ಚತುರ್ಯುಗಗಳವರೆಗೆ ಲೋಕಸೃಷ್ಟಿವ್ಯಾಪಾರವೇ ಇಲ್ಲದೆ, ಆ ಆವರಣ ಜಲದಲ್ಲಿಯೇ ಮಲಗಿದ್ದ ಆಭಗವಂತನು, ಒಮ್ಮೆ ತನ್ನ ಸಂಕಲ್ಪರೂಪವಾದ ಕಾಲಶಕ್ತಿಯಿಂದ ಎಚ್ಚರಗೊಳಿಸಲ್ಪಟ್ಟವನಾಗಿ, ಸೃಷ್ಟಿಕಾರಣಗಳಾದ ಭೂತಸೂಕ್ಷ್ಮಗಳೆಲ್ಲವೂ ತನಗೆ ಶರೀರವಾದ ಪ್ರಕೃತಿಯಲ್ಲಿ ಲಯಗೊಂಡಿರುವುದನ್ನು ನೋಡಿದನು. ಹೀಗೆ ತನ್ನ ದೇಹದಲ್ಲಿ ಸೇರಿದ್ದ ಭೂತಸೂಕ್ಷ್ಮಸಮೂಹವನ್ನು ನೋಡಿದೊಡನೆ, ಆತನಿಗೆ ಅವುಗಳನ್ನು ಸೃಷ್ಟಿಕಾರ್ಯಕ್ಕೆ ಉಪಯೋಗಿಸಬೇಕೆಂಬ ಸಂಕಲ್ಪವು ಹುಟ್ಟಿತು. ಭಗ

ವಂತನ ಸಂಕಲ್ಪರೂಪವಾದ ಈ ಜ್ಞಾನದಿಂದ ಪ್ರೇರಿಸಲ್ಪಟ್ಟಕೂಡಲೆ, ಅವನ ದೇಹದಲ್ಲಿ ಸೇರಿದ್ದ ಭೂತಸೂಕ್ಷ್ಮಗಳಲ್ಲಿ, ಕಾಲವಶದಿಂದ ರಜೋಗುಣವೆಂಬುದು ತಲೆಯೆತ್ತಿತು. ಈ ರಜೋಗುಣವು ಹೆಚ್ಚಿದಮೇಲೆ, ಆ ಭೂತಸೂಕ್ಷ್ಮಗಳಲ್ಲಿ ಜಗತ್ಸೃಷ್ಟಿಕಾರ್ಯಕ್ಕೂ ಆರಂಭವಾಯಿತು. ಒಡನೆಯೇ ಆ ಭಗವಂತನ ನಾಭಿಪ್ರದೇಶದಿಂದ ಆ ಭೂತಸೂಕ್ಷ್ಮಗಳೆಲ್ಲವೂ ಒಂದು ತಾವರೆಹೂವಿನ ಆಕಾರದಿಂದ ಹೊರಡಲಾರಂಭಿಸಿತು. ಈ ಕಮಲವೂಕೂಡ, ಕಾಲಶಕ್ತಿಯಿಂದ ಪ್ರೇರಿತವಾದಹಾಗೆಲ್ಲಾ ಬೆಳೆಯುತ್ತ ಬಂದು, ವಿಶಾಲವಾದ ಆ ಆವರಣಜಲವೆಲ್ಲವನ್ನೂ ಸೂರ್ಯನಂತೆ ತನ್ನ ಕಾಂತಿಯಿಂದ ಬೆಳಗುತ್ತ, ಮೇಲೆಮೇಲೆ ವಿಸ್ತರಿಸಿತು.' ಜೀವಾತ್ಮನ ಅನುಭವಕ್ಕೆ ಬೇಕಾದ ಸಮಸ್ತವಸ್ತುಗಳನ್ನೂ ತೋರ್ಪಡಿಸತಕ್ಕ ಪ್ರಪಂಚರೂಪವಾದ ಆ ನಾಭಿಕಮಲವು ಮೇಲೆದ್ದು ಬಂದೊಡನೆ, ಭಗವಂತನು ಅದರಲ್ಲಿ ತಾನೂ ಅಂತರ್ಯಾಮಿಯಾಗಿ ಪ್ರವೇಶಿಸಿದನು. ಅದರಿಂದಾಜೆಗೆ ಆ ಬ್ರಹ್ಮಾಂಡರೂಪನಾದ ನಾಭಿಕಮಲದಿಂದ, ವೇದಸ್ವರೂಪನಾಗಿಯೂ, ಸೃಷ್ಟಿಕರ್ತನಾಗಿಯೂ ಇರುವ ಚತುರ್ಮುಖನು ತನಗೆ ತಾನೇ ಉದ್ಭವಿಸಿದನು. ಇದಕ್ಕಾಗಿಯೇ ಅವನನ್ನು ಸ್ವಯಂಭುವೆಂದು ಹೇಳುವರು. ಕಮಲದಿಂದ ಹುಟ್ಟಿದ ಈ ಬ್ರಹ್ಮದೇವನು, ಬ್ರಹ್ಮಾಂಡರೂಪನಾದ ಆ ಕಮಲದ ಕರ್ಣಿಕೆಯಮೇಲೆಕುಳಿತು ನೋಡಿದಾಗ, ಸುತ್ತಲೂ ಕೇವಲಜಲವೊಂದನ್ನುಹೊರತು ಬೇರೆ ಯಾವ ಲೋಕವನ್ನೂ ಕಾಣಲಿಲ್ಲ. ಸುತ್ತಲೂ ತಿರುಗಿತಿರುಗಿ ಆಕಾಶದಕಡೆಗೂ ಕಣ್ಣಿಟ್ಟು ನೋಡುತಿದ್ದನು. ಆ ಕರ್ಣಿಕೆಯಮೇಲೆಯೇ ತಿರುಗಿತಿರುಗಿ ನಾಲ್ಕು ದಿಕ್ಕುಗಳನ್ನೂ ನೋಡುತ್ತಿದ್ದಾಗ, ಆ ನಾಲ್ಕು ಕಡೆಗಳನ್ನೂ ಏಕಕಾಲದಲ್ಲಿ ನೋಡುವುದಕ್ಕೆ ಅನುಕೂಲಿಸುವಂತೆ, ಅವನಿಗೆ ನಾಲ್ಕು ಮುಖಗಳುಂಟಾದುವು. ಪ್ರಳಯಕಾಲದ ಬಿರುಗಾಳಿಯ ಬಡಿತದಿಂದ ಉಲ್ಲೋಲಕಲ್ಲೋಲವಾಗಿ ಉಬ್ಬಿ ಬರುತ್ತಿರುವ ಆ ಸಮುದ್ರಮಧ್ಯದಲ್ಲಿ, ಅಕಸ್ಮಾತ್ತಾಗಿ ಹೊರಟ ಆ ಕಮಲವನ್ನು ನೋಡಿ ಬ್ರಹ್ಮನು, ನಿಜಸ್ಥಿತಿಯನ್ನು ತಿಳಿಯದೆ ದಿಗ್ಭ್ರಮೆ ಹಿಡಿದಂತಾಗಿ, ತನ್ನಲ್ಲಿ ತಾನು, "ಆಹಾ ! ಇದೇನಿದು ? ನಾನು ಯಾರು ?

ಈ ಮಹಾಸಮುದ್ರಮಧ್ಯದಲ್ಲಿ ಪ್ರತ್ಯೇಕವಾಗಿ ಇದೊಂದು ಕಮಲವು ಎಲ್ಲಿಂದ ಹುಟ್ಟಿತು ? ಇದು ಹುಟ್ಟುವುದಕ್ಕೆ ಕಾರಣವೇನು ? ಈ ತಾವರೆ ಬಳ್ಳಿಯು ಯಾವ ಆಶ್ರಯದಿಂದ ಹೊರಟಿರುವುದೋ, ಅಂತಹ ಯಾವುದೋ ಬೇರೊಂದು ವಸ್ತುವು ಈ ಮಹಾಸಮುದ್ರದಕೆಳಗೆ ಇದ್ದೇ ಇರಬೇಕು ! ಯಾವ ವಸ್ತುವೂ ನಿರಾಧಾರವಾಗಿ ನಿಲ್ಲಲಾರದು ! ಕೇವಲ ಜಲಮಯವಾದ ಈ ಪ್ರದೇಶದಲ್ಲಿ ಇದೊಂದು ಕಮಲವುಮಾತ್ರ ಕಾಣುವುದರಿಂದ, ಇದಕ್ಕೆ ಬೇರೆ ಯಾವುದೋ ಒಂದು ಆಧಾರವಸ್ತುವೂ ಇದ್ದೇ ಇರಬೇಕು." ಎಂದು ನಿಶ್ಚಯಿಸಿಕೊಂಡನು. ಈ ನಿಶ್ಚಯದಿಂದ ಬ್ರಹ್ಮನು, ಅದರ ನಿಜವನ್ನು ಕಂಡುಹಿಡಿಯಬೇಕೆಂದುದ್ದೇಶಿಸಿ, ಆ ತಾವರೆಯ ದಂಟಿನ ದ್ವಾರದಮಾರ್ಗವಾಗಿ ನೀರಿನಲ್ಲಿ ಪ್ರವೇಶಿಸಿದನು. ಆದೇ ದ್ವಾರದಿಂದ ಬಹಳದೂರದವರೆಗೆ ಹೋಗಿ, ಎಲ್ಲೆಲ್ಲಿ ಹುಡುಕುತ್ತ ಬಂದರೂ, ಆ ಕಮಲಕ್ಕೆ ಆಶ್ರಯವಾದ ವಸ್ತುವಾವುದೆಂದು ಕಾಣಲಾರದೆ ಹೋದನು. ಗಾಢಾಂಧಕಾರದಂತೆ ಕೊನೆಮೊದಲಿಲ್ಲದೆ ವ್ಯಾಪಿಸಿರುವ ಆ ಮಹಾಜಲದಲ್ಲಿ, ತನಗೆ ಕಾರಣವಸ್ತುವಾವುದೆಂದು ಗೊತ್ತಾಗಲಿಲ್ಲ. ಹೀಗೆ ಹುಡುಕುವುದರಲ್ಲಿಯೇ ನೂರಾರು ಸಂವತ್ಸರಗಳ ಕಾಲವೂ ಕಳೆದು ಹೋಯಿತು. ಓ ವಿದುರಾ ! ಕಾಲಚಕ್ರವನ್ನು ಏನೆಂದು ಬಲ್ಲೆ ? ಆ ಭಗವಂತನ ಸುದರ್ಶನಚಕ್ರವೇ ಕಾಲವೆಂದು ತಿಳಿ! ಕಾಲವೆಂಬುದು ಪ್ರಾಣಿಗಳಿಗೆ ಹೀಗೆ ಭೀತಿ ಯನ್ನುಂಟುಮಾಡುತ್ತಲೇ ಅವರ ಆಯುಸ್ಸನ್ನೂ ಕಳೆಯುತ್ತಿರುವುದು. ಇಂತಹ ಕಾಲದಲ್ಲಿ ಚತುರ್ಮುಖನಿಗೆ ನಿಷ್ಪ್ರಯೋಜನವಾಗಿ ನೂರುವರುಷಗಳು ಕಳೆದುಹೋದುವು. ಇಷ್ಟಾದರೂ ತನಗೆ ಕಾರಣವಾವುದೆಂದು ತಿಳಿಯದೆ, ಚತುರ್ಮುಖನು ಆಶಾಭಂಗವನ್ನು ಹೊಂದಿ, ಮುಂದೆ ಹುಡುಕುವುದಕ್ಕೂ ಬುದ್ಧಿತೋರದೆ ಹಿಂತಿರುಗಿದನು. ತಾನು ಮೊದಲಿದ್ದ ಸ್ಥಾನಕ್ಕೆ ಬಂದು ಅದೇ ಕರ್ಣಿಕೆಯ ಮೇಲೆ ಕುಳಿತನು. ಅಲ್ಲಿ ತನ್ನ ಶ್ವಾಸಗಳನ್ನು ತಡೆದು, ಇಂದ್ರಿಯಗಳೆಲ್ಲವನ್ನೂ ವಿಷಯಾಭಿಲಾಷೆಯಿಂದ ತಪ್ಪಿಸಿ, ಕೇವಲಸಮಾಧಿಯೋಗವನ್ನು ಹಿಡಿದನು. ಹೀಗೆ ನೂರುವರುಷಗಳವರೆಗೂ ಸಮಾಧಿಯನ್ನು ನಡೆಸಿದಮೇಲೆ ಆ

ವನ ಬುದ್ಧಿಯು ಪರಿಪಕ್ವವಾಯಿತು. ಅವನು ಇದಕ್ಕೆ ಮೊದಲು ನೀರಿನಲ್ಲಿ ಬಹುದೂರದವರೆಗೆ ಹುಡುಕಿ ಬಂದರೂ ಯಾವ ವಸ್ತುವನ್ನು ಕಾಣಲಾರದೆ ಹೋದನೋ, ಅಂತಹ ವಸ್ತುವಾದ ಪರಮಪುರುಷನು ತನ್ನ ಮನಸ್ಸಿನಲ್ಲಿಯೇ ಇದ್ದಂತೆ ಅವನಿಗೆ ಗೋಚರಿಸಿತು. ತಾವರೆದಂಟಿನ ನೂಲಿನಂತೆ ಶುಭ್ರವಾಗಿಯೂ, ಉದ್ಧವಾಗಿಯೂ ಇರುವ ಆದಿಶೇಷಶರೀರವೆಂಬ ಹಾಸಿಗೆಯ ಮೇಲೆ ಮಲಗಿದ್ದ ಒಂದು ದಿವ್ಯಾಕೃತಿಯು ಅವನ ಮನಸ್ಸಿಗೆ ಗೋಚರಿಸಿತು. ಮಹಾದ್ಭುತವಾದ ಆ ದಿವ್ಯಸ್ವರೂಪವನ್ನು ಕೇಳಬೇಕೆ? ಅನುಕಾಪುರುಷನ ತಲೆಯಮೇಲೆ, ಛತ್ರಾಕಾರವಾಗಿ ಹರಡಿದ್ದ ಅದಿಶೇಷನ ಫಣಾರತ್ನಕಾಂತಿಯು, ಆಗಿನ ಪ್ರಳಯಸಮುದ್ರದಲ್ಲಿದ್ದ ಅಂಧಕಾರವೆಲ್ಲವನ್ನೂ ನೀಗಿಸುವಂತೆ ಪ್ರಕಾಶಿಸುತಿತ್ತು. ಆ ಭಗವಂತನು ಧರಿಸಿದ್ದ ಪೀತಾಂಬರವು, ಪರ್ವತದಮೇಲೆ ಕುಳಿತಿದ್ದ ಸಂಧ್ಯಾಕಾಲದ ಮೇಘದಂತೆಯೂ, ಆತನ ತಲೆಯಲ್ಲಿ ಜ್ವಲಿಸುತಿದ್ದ ಸುವರ್ಣಕಿರೀಟವು ಸುವರ್ಣತಿಲಕದಂತೆಯೂ, ಆವನು ಧರಿಸಿದ ಮುಕ್ತಾಹಾರಗಳು ಗಿರಿನದಿಗಳಂತೆಯೂ, ತುಲಸೀಮಾಲಿಕೆಗಳು ದಿವ್ಯೌಷಧಿಗಳಂತೆಯೂ, ಆತನ ಭುಜಗಳು ಪರ್ವತದಮೇಲಿನ ಬಿದಿರುಮೆಳೆಗಳಂತೆಯೂ, ಆತನ ಪಾದಗಳು ವೃಕ್ಷಗಳೆಂತಯೂ ಪ್ರಕಾಶಿಸುತ್ತ, ಶೇಷಶಾಯಿಯಾಗಿದ್ದ ಆ ಭಗವಂತನ ಸ್ವರೂಪವು ಒಂದು ಮರಕತಪರ್ವತದಂತೆ ಶೋಭಿಸುತಿತ್ತು. ಮತ್ತು ಆ ಮಹಾತ್ಮನ ದಿವ್ಯದೇಹವು ಅತಿದೀರ್ಘವಾಗಿಯೂ, ವಿಸ್ತಾರವಾಗಿಯೂ, ತ್ರೈಲೋಕ್ಯವನ್ನೂ ತನ್ನಲ್ಲಿಯೇ ಅಡಗಿಸಿಕೊಳ್ಳುವಷ್ಟು ಮಹತ್ತಾಗಿಯೂ, ವಿಚಿತ್ರದಿವ್ಯಾಭರಣವಸ್ತ್ರಗಳಿಂದ ಶೋಭಿತವಾಗಿಯೂ ಇದ್ದಿತು. ಮತ್ತು ಆ ಪರಮಪುರುಷನ ಪಾದಪದ್ಮಗಳೆರಡೂ ತಮ್ಮತಮ್ಮ ಇಷ್ಟಾರ್ಥಪೂರ್ತಿಗಾಗಿ ವರ್ಣಾಶ್ರಮಧರ್ಮಗಳನ್ನನುಸರಿಸಿ ಭಜಿಸತಕ್ಕ ಭಕ್ತರಿಗೆ ಸರ್ವಾರ್ಥಪ್ರದವಾದ ಕಾಮಧೇನುವಂತಿದ್ದುವು. ಆ ಪಾದಪದ್ಮಗಳು ಚಂದ್ರನಂತೆ ಶೋಭಿಸುವ ನಖಗಳ ಕಾಂತಿಯಿಂದ ಅವನ ಕಾಲ್ಬೆರಳುಗಳಿಗೆ ಮತ್ತಷ್ಟು ಶೋಭಾವಿಶೇಷವನ್ನುಂಟುಮಾಡುತ್ತಿದ್ದುವು. ಅವನ ಮುಖದಲ್ಲಿ ಕಾಣುವ ಮಂದಹಾಸವೊಂದೇ ಸಮಸ್ತಲೋಕ

ದ ದುಃಖವನ್ನೂ ನೀಗಿಸುವಂತಿದ್ದಿತು. ಆ ಮುಖದ ಉಭಯಪಾ
ರ್ಶ್ವಗಳಲ್ಲಿಯೂ, ದಿವ್ಯಕುಂಡಲಗಳು ಝಗಝಗಿಸುತ್ತಿದ್ದುವು. ಮತ್ತು
ತುಟಿಯ ಕಾಂತಿಯಿಂದಲೂ, ಪರಮ ಸುಂದರವಾದ ನಾಸಿಕದಿಂ
ದಲೂ, ಅಂದವಾದ ಹುಬ್ಬುಗಳಿಂದಲೂ ಮನೋಹರವಾದ ಆತನ ಮು
ಖವು, ನಿಜಸೌಂದರ್ಯದಿಂದಲೇ ಭಕ್ತಜನರನ್ನು ಆದರಿಸುವಂತೆ ತೋ
ರುತಿತ್ತು. ಕದಂಬಪುಷ್ಪದ ಕೇಸರದಂತೆ ಹೊಂಬಣ್ಣವುಳ್ಳ ಪಟ್ಟೆಮಡಿ
ಯೂ, ಸುವರ್ಣದ ನಡುವಿನ ಪಟ್ಟಿಯೂ, ಅವನ ನಿತಂಬಬಿಂಬಕ್ಕೆ ಅಪೂ
ರ್ವವಾದ ಒಂದು ಶೋಭೆಯನ್ನು ಬೀರುತಿತ್ತು. ಆತನ ವಕ್ಷಸ್ಥಲವು ಅ
ಮೂಲ್ಯವಾದ ಭೂಷಣಗಳಿಂದಲೂ, ಶ್ರೀವತ್ಸವೆಂಬ ಮಚ್ಚೆಯಿಂದಲೂ
ಶೋಭಿಸುತಿತ್ತು ಮತ್ತು ಆತನ ಬಾಹುದಂಡಗಳು ನೀಡಿದ ಕೊಂಬೆಗಳಂ
ತೆಯೂ, ಅವುಗಳಲ್ಲಿದ್ದ ಭುಜಕೀರ್ತಿ,ತೋಳ್ಬಳೆ ಮುಂತಾದ ದಿವ್ಯಾಭರಣಗ
ಳು ವೃಕ್ಷದಲ್ಲಿರುವ ಫಲಪುಷ್ಪಾದಿಗಳಂತೆಯೂ, ಆತನು ಮಲಗಿದ್ದ ಸರ್ಪ
ದೇಹವು ಆ ಮರಕ್ಕೆ ಸುತ್ತಿದ ಹಾವುಗಳಂತೆಯೂ ಶೋಭಿಸುತ್ತಿರಲು, ತ
ನ್ನ ಮೂಲವನ್ನು ಕಾಣಿಸದೆ, ಸಮಸ್ತಲೋಕೋತ್ಪತ್ತಿಗೆ ಕಾರಣವಾಗಿ
ಬೆಳೆದಿರುವ ಒಂದು ಮಹಾವೃಕ್ಷವೋ ಎಂಬಂತೆ ಕಾಣುತಿದ್ದನು. ಮತ್ತು
ಅನೇಕಚರಾಚರವಸ್ತುಗಳಿಗೆ ನಿವಾಸಸ್ಥಾನವಾಗಿ, ಸರ್ಪಗಳಿಗೆ ಪ್ರಿಯ
ವಾಗಿ, ಸುತ್ತಲೂ ಜಲದಿಂದ ಆವೃತವಾಗಿ, ಸಹಸ್ರಶಿಖರಗಳಿಂದ ಶೋ
ಭಿತವಾಗಿ, ಕೌಸ್ತುಭವೆಂಬ ರತ್ನವನ್ನು ತನ್ನ ಗಣಿಯಲ್ಲಿ ಅಡಗಿಸಿಕೊಂ
ಡಿರುವ ಒಂದು ಮಹಾಪರ್ವತವೋ ಎಂಬಂತೆ ಕಾಣಿಸುತಿದ್ದನು. ಆ
ಭಗವಂತನ ಕಂಠಭಾಗವು, ಅವನ ಕೀರ್ತಿಯನ್ನು ಗಾನಮಾಡುತ್ತಿರುವ
ವೇದಗಳೆಂಬ ಭ್ರಮರಗಳಿಂದ ಶೋಭಿತವಾದ ವನಮಾಲಿಕೆಯಿಂದೊಪ್ಪು
ತ್ತಿರುವುದು. ಸೂರ್ಯಚಂದ್ರರಾಗಲಿ, ಅಗ್ನಿವಾಯುಗಳಾಗಲಿ, ಇವನ
ಸಾನ್ನಿಧ್ಯದಲ್ಲಿ ತಮ್ಮ ವ್ಯಾಪಾರಗಳನ್ನು ನಡೆಸಲಾರರು. ಮತ್ತು ಆ ಭಗವಂ
ತನ ತೇಜಸ್ಸು, ಲೋಕರಕ್ಷಣಾರ್ಥವಾಗಿ ತ್ರೈಲೋಕ್ಯವನ್ನೂ ಸುತ್ತುತ್ತಿ
ರುವ ಸುದರ್ಶನಾದ್ಯಾಯುಧಕಾಂತಿಯಿಂದ ಸಮೀಪಿಸಲಸಾಧ್ಯವಾಗಿದ್ದಿ
ತು. ಇಂತಹ ಭಗವಂತನ ಸ್ವರೂಪವು ಧ್ಯಾನಗೋಚರವಾದಕ್ಷಣದಲ್ಲಿ

ಯೇ, ಬ್ರಹ್ಮನಿಗೆ ಆ ಭಗವಂತನ ನಾಭಿಕಮಲದಲ್ಲಿಯೇ ತಾನು ಕುಳಿತಿರುವೆನೆಂಬುದೂ, ಆಗಿನ ವಾಯ್ವಾಕಾಶಸಮುದ್ರಗಳು ಪ್ರಳಯಸಂಬಂಧಿಗಳೆಂದೂ ಮನಸ್ಸಿಗೆ ತೋರಿತು. ಆಗಲೇ ಅವನಿಗೆ ಜಗತ್ಸೃಷ್ಟಿಯನ್ನು ಮಾಡುವ ಉದ್ದೇಶವೂ ಅಂಕುರಿಸಿತು. ಆದರೆ ಆಗ ಬ್ರಹ್ಮದೇವನು, ತನ್ನ ಮುಂದೆ ಕಾಣುತಿದ್ದ ಈ ಜಲಾದಿಗಳುಹೊರತು, ಸೃಷ್ಟಿಗೆ ಬೇಕಾದ ಬೇರೆ ಉಪಕರಣಗಳೊಂದನ್ನೂ ಕಾಣಲಿಲ್ಲ. ಆ ಚತುರ್ಮುಖನು ರಜೋಗುಣಪ್ರಧಾನವಾಗಿ ಜನಿಸಿದುದರಿಂದ, ಅವನಿಗೆ ಪ್ರಜೆಗಳನ್ನು ಸೃಷ್ಟಿಸಬೇಕೆಂಬ ಆಸೆಯು ಮೇಲೆಮೇಲೆ ಹೆಚ್ಚುತಿತ್ತು. ಆದರೆ ತನ್ನ ಮುಂದೆ ಆ ಭಗವಂತನ ನಾಭಿಕಮಲವೊಂದು, ತನ್ನ ಸ್ವರೂಪವೊಂದು, ವಾಯು, ಜಲ, ಆಕಾಶವೆಂಬಿವು ಮೂರು, ಈ ಐದನ್ನು ಹೊರತು ಬೇರೊಂದನ್ನೂ ಕಾಣದುದರಿಂದ, ಮುಂದೆ ಸೃಷ್ಟಿಪ್ರಕಾರವನ್ನು ತಿಳಿಯಲಾರದೆ, ಹೇಗಾದರೂ ಅದನ್ನು ನಿರ್ವಹಿಸಬೇಕೆಂಬ ಪ್ರಯತ್ನದಿಂದ, ಅದಕ್ಕಾಗಿ ಪರಮಪುರುಷನನ್ನು ಸ್ತೋತ್ರಮಾಡಲಾರಂಭಿಸಿದನು. ಇಲ್ಲಿಗೆ ಎಂಟನೆಯ ಅಧ್ಯಾಯವು.

ಬ್ರಹ್ಮನು ಸೃಷ್ಟಿಸಾಮರ್ಥ್ಯವನ್ನು ಪಡೆಯುವುದಕ್ಕಾಗಿ ಪರಮಪುರುಷನನ್ನು ಸ್ತುತಿಸಿದುದು.

ಬ್ರಹ್ಮಕೃತ ಪರಮಪುರುಷ ಸ್ತುತಿಃ

ಜ್ಞಾತೋಸಿ ಮೇ೬ದ್ಯ ಸುಚಿರಾನ್ನನು ದೇಹಭಾಜಾಂ
ನ ಜ್ಞಾಯತೇ ಭಗವತೋ ಗತಿ ರಿತ್ಯವದ್ಯಮ್ ।
ನಾನ್ಯತ್ತ್ವದಸ್ತಿ ಭಗವನ್ನಪಿ ತನ್ನ ಶುದ್ಧಂ
ಮಾಯಾಗುಣವ್ಯತಿಕರಾತ್ತ್ವಮುರುರ್ವಿಭಾಸಿ ॥

"ಓ! ಪರಮಪುರುಷಾ! ಬಹುದಿನಗಳಮೇಲೆ ಈಗ ನಾನು ನಿನ್ನ ಸ್ವರೂಪವನ್ನು ತಿಳಿದೆನು.ಲೋಕದಲ್ಲಿ ಕಾರ್ಯರೂಪದಿಂದಲೂ, ಕಾರಣರೂಪದಿಂದಲೂ ತೋರುವ ಸಮಸ್ತಚೇತನಾಚೇತನಗಳಿಗೂ ನೀನೇ ಅಂತರ್ಯಾಮಿಯಾಗಿದ್ದು ಅವುಗಳನ್ನು ಧರಿಸತಕ್ಕವನೆಂದೂ, ಅವುಗಳನ್ನು ಆಯಾಕಾರ್ಯದಲ್ಲಿ ನಿಯಮಿಸತಕ್ಕವನೆಂದೂ,ನುತ್ತು ನೀನು ನಿನ್ನ ಇಚ್ಛಾರೂಪವಾದ ಸಂಕಲ್ಪದಿಂದಲೇ ಪ್ರಾಕೃತದಿವ್ಯಶರೀರಗಳನ್ನು ಧರಿಸತಕ್ಕವನೆಂದೂ, ಸರ್ವಜ್ಞನೆಂದೂ, ಸರ್ವಶಕ್ತನೆಂದೂ, ಸತ್ಯಸಂಕಲ್ಪನೆಂದೂ, ಆಶ್ರಿತವತ್ಸಲನೆಂದೂ, ಸತ್ಯಜ್ಞಾನಾನಂದಸ್ವರೂಪನೆಂದೂ, ಈಗ ನಾನು ಸ್ಪಷ್ಟವಾಗಿ ತಿಳಿದೆನು. ಷಾಡ್ಗುಣ್ಯಪರಿಪೂರ್ಣನಾದ ನಿನ್ನ ಸ್ವರೂಪವನ್ನು ತಿಳಿಯದಿರುವುದೇ ಕರ್ಮಾಧೀನವಾದ ಶರೀರವುಳ್ಳ ಜೀವಾತ್ಮರಲ್ಲಿರುವ ಮುಖ್ಯದೋಷವು ಅದೇ ಅಜ್ಞಾನವು ! ನಿನ್ನ ನಿಜಸ್ವರೂಪವನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆಯೇ ಆಗುವುದು ಎಲ್ಲಾವಸ್ತುಗಳಲ್ಲಿಯೂ ನೀನೇ ಒಕಹೊಕ್ಕು, ಅವುಗಳಿಗೆ ಹೆಸರಿನಲ್ಲಿಯೂ,ರೂಪದಲ್ಲಿಯೂ ಪರಸ್ಪರಭೇದಗಳನ್ನುಂಟುಮಾಡುವೆಯೇ ಹೊರತು, ವಾಸ್ತವಕ್ಕೆ ಎಲ್ಲವೂ ನೀನೇ ಆಗಿರುವೆಯಾದುದರಿಂದ, ಲೋಕದಲ್ಲಿ ತಿಳಿಯಬೇಕಾದ ವಸ್ತುವು ನಿನ್ನನ್ನು ಬಿಟ್ಟು ಬೇರೊಂದಿಲ್ಲವು. ದೇವಮನುಷ್ಯಾದಿರೂಪಗಳೆಲ್ಲವೂ ಸ್ವತಂತ್ರವಾಗಿರುವಂತೆ ತೋರುತಿದ್ದರೂ, ಆ ತೋರಿಕೆಯು ಕೇವಲಭ್ರಾಂತಿಯು. ಏಕೆಂದರೆ, ಮಾಯೆಯೆಂಬ ಪ್ರಕೃತಿಯ ಗುಣಗಳಾದ ಸತ್ವರಜಸ್ತಮಸ್ಸುಗಳ ಹೆಚ್ಚು ಕಡಿಮೆಯಿಂದ

ನೀನೊಬ್ಬನೇ ಬೇರೆಬೇರೆ ಸ್ವರೂಪದಿಂದ ತೋರುತ್ತಿರುವೆ.ಕೊನೆಗೆ ಪ್ರಳಯ ಕಾಲದಲ್ಲಿ ಅವುಗಳನ್ನು ಶರೀರವಾಗಿ ಹೊಂದಿ, ನಿನ್ನೊಡನೆ ಏಕಾಕಾರವಾಗಿ ಸೇರಿಕೊಳ್ಳುವೆ! ತಿರುಗಿ ನಿನೇ ಅವುಗಳನ್ನು ವಿನೋದಾರ್ಥವಾಗಿ, ಮಹತ್ತು, ಅಹಂಕಾರ ಮುಂತಾದ ಕ್ರಮದಿಂದ ಮಹಾಭೂತದವರೆಗೆ ವಿಸ್ತರಿಸಿಡುವೆ! ಆದುದರಿಂದ, ಮೊದಲಿದ್ದ ಸೂಕ್ಷ್ಮದಶೆಯಲ್ಲಿಯಾಗಲಿ, ಈ ಸ್ಥೂಲದಶೆಯಲ್ಲಿಯಾಗಲಿ, ನಿನ್ನನ್ನು ಬಿಟ್ಟವಸ್ತುವೊಂದಾದರೂ ಇರುವುದಿಲ್ಲ. ಹೀಗೆ ನೀನು ಪ್ರಪಂಚರೂಪದಿಂದ ಮಾರ್ಪಟ್ಟು ನಿಲ್ಲುವಾಗಲೂ, ಆ ಸ್ವರೂಪಕ್ಕೆ ಸಂಭವಿಸತಕ್ಕ ಸಮಸ್ತವಿಕಾರಗಳೂ, ದೋಷಗಳೂ ನಿನಗೆ ಶರೀರವಾದ ಜೇತನಾಜೇತನಗಳಿಗೆಮಾತ್ರ ಸಂಭವಿಸುವೇಹೊರತು, ನಿನ್ನವರೆಗೆ ಮುಟ್ಟಲಾರದು. ಹುಟ್ಟು, ಮುಪ್ಪು, ಸಾವು, ಮುಂತಾದ ವಿಕಾರಗಳೆಲ್ಲವೂ ನಿನಗೆ ಶರೀರವಾದ ಚೇತನಗಳಿಗೆ ಸೇರುವುದು. ಅದರಂತೆಯೇ ಸ್ಥಾವರಗಳಿಗೆ ಉಂಟಾಗತಕ್ಕ ವಿಕಾರಗಳೆಲ್ಲವೂ ನಿನಗೆ ಶರೀರವಾದ ಅಚೇತನಗಳಿಗೆ ಸೇರುವುದು ಕೇವಲಜ್ಞಾನಾನಂದಸ್ವರೂಪನಾದ ನಿನಗೆ ಈ ವಿಕಾರವೊಂದೂ ಸಂಭವಿಸದು. ಆ ನಿನ್ನ ನಿಜಸ್ವರೂಪವನ್ನು ತಿಳಿಯುವುದೇ ಮೋಕ್ಷಕ್ಕೆ ಮುಖ್ಯಸಾಧನವು.

ರೂಪಂ ಯದೇತದವಬೋಧರಸೋದಯಸ್ಯ
ಶಶ್ವನ್ನಿವೃತ್ತತಮಸಸ್ಪದನುಗ್ರಹಾಯ ।
ಆಹ ಗೃಹೀತಮವತಾರಶತೈಕಬೀಜಂ
ಯನ್ನಾಭಿಪದ್ಮ ಭವನಾದಹಮಾವಿರಾಸಮ್ ॥

ನಿನ್ನ ಜ್ಞಾನಕ್ಕಾಗಲಿ, ನಿನ್ನ ಆನಂದಕ್ಕಾಗಲಿ, ಯಾವವಿಧವಾದ ಲೋಪವೂ, ಚ್ಯುತಿಯೂ, ಮಿತಿಯೂ ಇರುವುದಿಲ್ಲ. ಯಾವಕಾಲದಲ್ಲಿಯೂ ಅಜ್ಞಾನವೆಂಬುದು ನಿನ್ನನ್ನು ಸರ್ವಥಾ ಮಾತ್ರವೂ ಆವರಿಸಲಾರದು. ಆದುದರಿಂದ ನೀನು, ಬದ್ಧ, ಮುಕ್ತ, ನಿತ್ಯರೆಂಬ ಮಾರುಬಗೆಯ ಜೇತನರಿಗಿಂತಲೂ, ಅಜೇತನಗಳಿಗಿಂತಲೂ ವಿಲಕ್ಷಣಸ್ವರೂಪವುಳ್ಳವನು. (ನೀನು ಜ್ಞಾನಸ್ವರೂಪನಾದುದರಿಂದ, ಜಡವೆನಿಸಿಕೊಂಡ ಅಜೇತನಕ್ಕಿಂತಲೂ ಬೇರ್ಪಟ್ಟವನೆಂಬುದು ಸ್ಪಷ್ಟವು. ಜೀವಾತ್ಮಗಳೂ, ನಿನ್ನಂತೆಯೇ ಜ್ಞಾನ

ಸ್ವರೂಪವಾಗಿ, ಜಡಪ್ರಕೃತಿಗಳಿಗಿಂತಲೂ ವಿಲಕ್ಷಣನೆನಿಸಿಕೊಂಡಿದ್ದರೂ, ಅವರಲ್ಲಿ ಬದ್ಧಜೀವರ ಜ್ಞಾನಕ್ಕೆ ಪ್ರಕೃತಿಸಂಬಂಧದಿಂದ ಜ್ಞಾನಸಂಕೋಚವುಂಟು. (ತಗ್ಗುವುದುಂಟು) ನಿನ್ನ ಜ್ಞಾನಕ್ಕೆ ಅವಿಧವಾದ ಚ್ಯುತಿಯಿಲ್ಲದುದರಿಂದ, ಆ ಬದ್ಧಜೀವರಿಗಿಂತಲೂ ನೀನುವಿಲಕ್ಷಣನೆನಿಸಿರುವೆ.ಸಂಸಾರನಿವೃತ್ತಿಯನ್ನು ಹೊಂದಿದ ಮುಕ್ತಜೀವರಿಗೆ ಜ್ಞಾನಸಂಕೋಚರೂಪವಾದ ದೋಷವಿಲ್ಲದಿದ್ದರೂ, ಅವರೂ ಹಿಂದೆ ಕೆಲವುಕಾಲದವರೆಗೆ ಜ್ಞಾನಸಂಕೋಚವನ್ನು ಹೊಂದಿದ್ದವರಾದುದರಿಂದ,ನಿನ್ನ ಸ್ವರೂಪವು ಅಮುಕ್ತಜೀವರಿಗಿಂತಲೂ ವಿಲಕ್ಷಣವೆನಿಸಿರುವುದು. ಆದರೆ ಯಾವಾಗಲೂ ಸಂಸಾರಸಂಬಂಧವಾಗಲಿ, ಜ್ಞಾನಸಂಕೋಚವಾಗಲಿ ಇಲ್ಲದ ಅನಂತಗರುಡಾದಿನಿತ್ಯಸೂರಿಗಳೋ ಎಂದರೆ, ಅವರಿಗೆ ಆ ವಿಧವಾದ ಮಹಿಮೆಯು ನಿನ್ನ ಸಂಕಲ್ಪದಿಂದಲೇ ಪ್ರಾಪ್ತವಾಗಿರುವುದು. ಆದಕ್ಕೆ ನಿನ್ನ ಕೃಪೆಯೆಂಬ ಕಾರಣವೊಂದು ಏರ್ಪಟ್ಟಿರುವುದರಿಂದ, ಸೋಪಾಧಿಕವೆನಿಸಿಕೊಂಡಿರುವುದು. ನಿನ್ನ ಜ್ಞಾನಕ್ಕಾದರೋ ಎಂದೆಂದಿಗೂ ಹೆಚ್ಚುಕಡಿಮೆಯಿಲ್ಲ. ನಿನಗೆ ಮೇಲ್ಪಟ್ಟವರು ಮತ್ತೊಬ್ಬರಿಲ್ಲವಾದುದರಿಂದ,ನಿನ್ನ ಜ್ಞಾನವು ಬೇರೊಬ್ಬರ ಸಂಕಲ್ಪದಿಂದ ಹುಟ್ಟಿದುದಲ್ಲ.ಆದುದರಿಂದ ನೀನು ಆ ನಿತ್ಯಸೂರಿಗಳಿಗಿಂತಲೂ ವಿಲಕ್ಷಣನು) ಈಗ ನೀನು ಪ್ರಥಮದಲ್ಲಿ ಕೈಕೊಂಡ ಈ ರೂಪವೇ, ಮುಂದೆ ನಾನಾವತಾರಗಳಿಗೆ ಮೂಲಕಾರಣವಾಗಿರುವುದು. ದೇವಾ ! ಈಗ ನಿನ್ನ ನಾಭಿಕಮಲದಿಂದ ಉದ್ಭವಿಸಿದ ಈ ನನ್ನ ಸ್ವರೂಪವೂ, ನಿನ್ನ ಆವೇಶಾವತಾರವೇ ಹೊರತು ಬೇರೆಯಲ್ಲ. ನೀನೇ ನನ್ನಲ್ಲಿ ಒಳಹೊಕ್ಕು ಸೃಷ್ಟಿಕಾರ್ಯವನ್ನು ನಡೆಸತಕ್ಕವನಾಗಿರುವೆ. ಈ ನಿನ್ನ ನಾನಾವಿಧಜನ್ಮಗಳೆಲ್ಲವೂ ಭಕ್ತಾನುಗ್ರಹಕ್ಕಾಗಿಯೇ ಅಲ್ಲದೆ ಬೇರೆಯಲ್ಲ.

ನಾತಃಪರಂ ಪರಮ ಯದ್ಭವತಸ್ಸ್ವರೂಪ-
ಮಾನಂದಮಾತ್ರಮವಿಕಲ್ಪಮವಿದ್ಧವರ್ಚಃ।
ಪಶ್ಯಾಮಿ ವಿಶ್ವಸೃಜಮೇಕಮವಿಶ್ವಮಾತ್ಮನ್
ಭೂತೇಂದ್ರಿಯಾತ್ಮಕಮದಸ್ತ ಉಪಾಶ್ರಿತೋಸ್ಮಿ ॥ ೩೫॥

ದೇವದೇವನೆ! ಆನಂದಮಯವಾಗಿ, ಜಾತಿಗುಣಾದಿಭೇದಗಳಿಲ್ಲದೆ, ಯಾವವಿಷಯದಲ್ಲಿಯೂ ತಡೆಯಿಲ್ಲದ ಸಂಕಲ್ಪರೂಪವಾದ ಜ್ಞಾನದಿಂದಕೂಡಿ, ಪ್ರಪಂಚಕ್ಕಿಂತಲೂ ವಿಲಕ್ಷಣವಾಗಿ, ವಿಶ್ವಕಾರಣವಾಗಿ, ಆಪ್ತಾಕೃತವಾದ ಭೂತೇಂದ್ರಿಯಾತ್ಮಕವಾದ ರೂಪವನ್ನು ಹೊಂದಿದ ನಿನ್ನ ಸ್ವರೂಪಕ್ಕಿಂತಲೂ ವಿಲಕ್ಷಣವಾದ ಬೇರೊಂದನ್ನು ನಾನು ಕಾಣೆನು' ಎಲ್ಲೆ ಪರಮಾತ್ಮನೆ! ವಿಶ್ವಾತ್ಮಕವೆನಿಸಿದ ಅಂತಹ ನಿನ್ನ ಸ್ವರೂಪವನ್ನು ನಾನು ಮರೆಹುಗುವೆನು.

ಯದ್ವಾ ಇದಂ ಭುವನಮಬ್ಜಳ ಮಜ್ಜಳಾಯ
ಥ್ಯಾನೇಸ್ಮನೋ ದರ್ಶಿತಂ ತ್ವದುಪಾಸಕಾನಾಮ್ ।
ತಸ್ಮೈ ನವೋ ಭಗವತೇ೬ನುವಿಧೇನು ತುಭ್ಯಂ
ಯೋ೬ನಾದೃತೋ ನರಕಭಾಗ್ಭಿರಸತ್ಪ್ರಸಙ್ಗೈಃ ॥ ೪॥

ಎಲ್ಲೆ ಮಂಗಳಸ್ವರೂಪನೆ! ನನ್ನ ಹಾಗೆಯೇ ನಿನ್ನನ್ನು ದೃಢಮನಸ್ಸಿನಿಂದ ಉಪಾಸನೆಮಾಡತಕ್ಕ ಭಕ್ತರಿಗೆನಾತ್ರವೇ ಈವಿಧವಾಗಿ ಧ್ಯಾನಗೋಚರನಾಗುವೆಯೇಹೊರತು, ಅಸತ್ಕಥೆಗಳಲ್ಲಿ ಬಿದ್ದ ಪಾಪಿಗಳಾದ ಇತರಜೀವಿಗಳಿಗೆ ನಿನ್ನ ದರ್ಶನವು ಲಭಿಸದು. ಇಂತಹ ಸ್ವರೂಪಸ್ವಭಾವಗಳೊಡಗೂಡಿದ ಷಡ್ಗುಣಪರಿಪೂರ್ಣನಾದ ನಿನಗೆ ವಂದಿಸುವೆನು.

ಯೇತು ತ್ವದೀಯಚರಣಾಮ್ಬುಜಕೋಶಗನ್ಧಂ
ಜಿಘ್ರನ್ತಿ ಕರ್ಣವಿವರೈಶ್ಶ್ರುತಿವಾತನೀತಮ್ ।
ಭಕ್ತ್ಯಾ ಗೃಹೀತಚರಣಾಃ ಪರಯಾಚ ತೇಷಾಂ
ನಾಪೈಷಿ ನಾಥ ಹೃದಯಾಮ್ಬುರುಹಾತ್ಸ್ವಪುಂಸಾಮ್ ॥ ೫॥

ಮತ್ತು ವೇದಗಳೆಂಬ ವಾಯುವಿನಿಂದ ಲೋಕದಲ್ಲಿ ವಿಸ್ತರಿಸಲ್ಪಟ್ಟ ನಿನ್ನ ಪಾದಕಮಲದ ಗಂಧವನ್ನು ಯಾರು ಅನುಭವಿಸುವರೋ, ಅಂತಹ ಭಕ್ತರ ಹೃದಯವನ್ನು ಬಿಟ್ಟಗಲದೆ, ಅವರ ಭಕ್ತಿಗೆ ವಶನಾಗಿ, ಅವರಲ್ಲಿ ನಿತ್ಯಸಾನ್ನಿಧ್ಯವನ್ನು ಮಾಡುವ ನಿನಗೆ ನಮಸ್ಕಾರವು.

ತಾವದ್ಭಯಂ ದ್ರವಿಣಗೇಹ ಸುಹೃನ್ಮಿತ್ತಂ
ಶೋಕಸ್ಸ್ಪೃಹಾ ಪರಿಭವೋ ವಿಪುಲಶ್ಚ ಲೋಭಃ ।
ತಾವನ್ಮಮೇತ್ಯಸದವಗ್ರಹ ಆದಿಮೂಲಂ
ಯಾವನ್ನ ತೇ೦ಘ್ರಿಮಭಯಂ ಪ್ರವೃಣೀತ ಲೋಕಃ ॥ ೬॥

ಓ ದೇವದೇವಾ! ಲೋಕದ ಪ್ರಜೆಗಳೆಲ್ಲರೂ ಸಂಸಾರವೆಂಬ ಕೂಪ (ಬಾವಿ) ದಲ್ಲಿ ಬಿದ್ದು, ವಿವೇಕಶೂನ್ಯರಾಗಿ, ಈ ಪ್ರಪಂಚವೆಲ್ಲವೂ ಸ್ಥಿರವೆಂದು ತಿಳಿದುಕೊಂಡು, ಧನಗಳನ್ನೂ, ಗೃಹಗಳನ್ನೂ ಬಂಧುಮಿತ್ರವರ್ಗಗಳನ್ನೂ, ಹೆಂಡತಿಮಕ್ಕಳನ್ನೂ ಇದರಂತೆಯೇ ಇನ್ನೂ ಕೆಲವು ಸುಂದರವಸ್ತುಗಳನ್ನೂ ಬಹಳಮೋಹದಿಂದ ಬೆಳೆಸುವರು. ಇವುಗಳನ್ನು ಸಂಪಾದಿಸುವುದಕ್ಕಾಗಿ ಎಷ್ಟೋ ಕಷ್ಟಪಡುವರು. ಇವುಗಳಲ್ಲಿ ಯಾವುದಾದರೂ ಒಂದು ಕೈತಪ್ಪಿಹೋದಾಗ, ಬಹಳ ದುಃಖದಿಂದ ಕೊರಗುವರು. ತಿರುಗಿ ಅದೇ ವಸ್ತುವನ್ನು ಸಂಪಾದಿಸುವುದಕ್ಕೆ ಆತುರಪಡುವರು.ಪೇರಾಸೆಯೆಂಬ ಪಿಶಾಚಿಯ ಕೈಗೆ ಸಿಕ್ಕಿ ತತ್ತ್ವಳಿಸುವರು. ದೇಹಾತ್ಮಾಭಿಮಾನದಿಂದ ತೊಳಲುವರು. ಈ ಕಷ್ಟಗಳೆಲ್ಲವೂ ನಿನ್ನ ಪಾದಸೇವೆಯು ಲಭಿಸುವವರೆಗೆನೂತ್ರವೇ ಹೊರತು, ಅದು ಲಭಿಸಿದಮೇಲೆ ಯಾವ ಕಷ್ಟವೂ ಇರದು. ಅಲ್ಲಿಂದಾಚೆಗೆ ಸಮಸ್ತಭಯವೂ ನಿವೃತ್ತವಾಗುವುದು. ಕೊನೆಗೆ ಮೋಕ್ಷವೂ ಲಭಿಸುವುದು.

ದೈವೇನ ತೇ ಹತಧಿಯೋ ಭವತಃ ಪ್ರಸಂಗಾತ್
ಸರ್ವಾಶುಭೋಪಶಮನಾದ್ವಿಮುಖೇನ್ದ್ರಿಯಾ ಯೇ ।
ಕುರ್ವನ್ತಿ ಕಾಮಸುಖಲೇಶಲವಾಯ ದೀನಾ
ಲೋಭಾಭಿಭೂತಮನಸೋಽಕುಶಲಾನಿ ಶಶ್ವತ್ ॥

ಓ! ದೇವಾ! ನಿನ್ನ ಭಜನೆಯೇ ಸಕಲಪಾಪನಿವರ್ತಕವು ನಿನ್ನ ಸೇವೆಯೇ ಸಕಲಭಯನಿವಾರಕವು. ನಿನ್ನ ನಾಮಸ್ಮರಣವೇ ಮೋಕ್ಷದಾಯಕವು. ಹೀಗೆ ಸರ್ವವಿಧದಿಂದಲೂ ಫಲದಾಯಕವಾದ ನಿನ್ನ ದರ್ಶನಶ್ರವಣಾದಿಗಳಲ್ಲಿ ವಿಮುಖರಾದ ಕೆಲವು ಭಾಗ್ಯಹೀನರು, ವಿವೇಕವಿಲ್ಲದೆ ಕಾಮ್ಯಕರ್ಮಗಳಲ್ಲಿ ಬಿದ್ದು, ಇಂದ್ರಿಯಗಳಿಗೆ ವಶರಾಗಿ, ಅಶ್ರೇಯಸ್ಸುಗಳಿಗೆಲ್ಲಾ ಈಡಾಗುವರು.

ಕ್ಷುತ್ತೃಟ್ತ್ರಿಧಾತುಭಿರಿಮಾ ಮುಹುರರ್ದ್ಯಮಾನಾಃ
ಶೀತೋಷ್ಣವಾತವರ್ಷೈರಿತರೇತರಾಶ್ಚ ।

ಕಾಮಾಗ್ನಿನಾಽಚ್ಯುತ ರುಷಾ ಚ ಸುದುರ್ಭರೇಣ
ಸಂಪಶ್ಯತೋ ಮನ ಉರುಕ್ರಮ ಸೀದತೇ ಮೇ ॥ ೪॥

ವಾತಪಿತ್ತಶ್ಲೇಷ್ಮಗಳೆಂಬ ಧಾತುಗಳ ಮೂಲನಾಗಿ, ಹಸಿವು ಬಾಯಾರಿಕೆಗಳಿಗೆ ಸಿಕ್ಕಿತತ್ತಳಿಸುತ್ತ, ಶೀತೋಷ್ಣಬಾಧೆಗಳಿಂದಲೂ, ಮಳೆಗಾಳಿಗಳ ಕಷ್ಟದಿಂದಲೂ, ತೀವ್ರವಾದ ಕಾಮಾಗ್ನಿಯಿಂದಲೂ, ಇದ್ದಕ್ಕಿದ್ದ ಹಾಗೆ ತಲೆಯೆತ್ತುವ ಕ್ರೋಧದಿಂದಲೂ ಪೀಡಿಸಲ್ಪಡುತ್ತಿರುವ ಅಂತಹ ಬುದ್ಧಿಹೀನರನ್ನು ನೋಡಿ ನನ್ನ ಮನಸ್ಸು ಕನಿಕರಪಡುವುದು.

ಯಾವತ್ಪೃಥಕ್ತ್ವಮಿದಮಾತ್ಮನ ಇಂದ್ರಿಯಾರ್ಥಂ
ಮಾಯಾಬಲಂ ಭಗವತೋ ಜನ ಈಶ ಪಶ್ಯೇತ್ ।
ತಾವನ್ನ ಸಂಸೃತಿರಸೌ ಪ್ರತಿ ಸಂಕ್ರಮೇತ
ವ್ಯರ್ಥಾಪಿ ದುಃಖನಿವಹಂ ವಹತಿ ಕ್ರಿಯಾರ್ಥಾ ॥ ೫॥

ಓ ದೇವಾ ! ನಿನ್ನ ಮಾಯೆಯಿಂದ ಮೋಹಿತರಾದ ಜೀವಿಗಳು, ಆ ಮಾಯೆಯ ಬಲದಿಂದ, ಬಾಹ್ಯೇಂದ್ರಿಯಗಳಿಗೆ ತೋರುವ ದೇವಮನುಷ್ಯಾದಿಭೇದಗಳನ್ನೇ ನಿಜವೆಂದು ನಂಬುತ್ತಿರುವವರೆಗೂ, ದುಸ್ತರವಾದ ಸಂಸಾರಸಮುದ್ರವನ್ನು ದಾಟಲಾರರು. ನಿನ್ನ ನಿಜಸ್ವರೂಪವನ್ನು ತಿಳಿದು, ಆ ಭೇದಭ್ರಾಂತಿಯನ್ನು ಬಿಟ್ಟಮೇಲೆ, ಈ ಕಷ್ಟಗಳೆಲ್ಲವನ್ನೂ ನೀಗಿ ಸಂಸಾರಸಾಗರವನ್ನೂ ಅನಾಯಾಸವಾಗಿಯೇ ದಾಟಿಬರುವರು.

ಅಹ್ನಾಯಪೃತಾರ್ತಕರಣಾ ನಿಶಿ ನಿಶ್ಯಯಾನಾ
ನಾನಾಮನೋರಥಧಿಯಾ ಕ್ಷಣಭಗ್ನನಿದ್ರಾಃ ।
ದೈವಾಹತಾರ್ಥರಚನಾ ಋಷಯೋಽಪಿ ದೇವ
ಯುಷ್ಮತ್ಪ್ರಸಙ್ಗವಿಮುಖಾ ಇಹ ಸಂಸರನ್ತಿ ॥ ೧೦॥

ಓ ! ಮಹಾಪ್ರಭೂ ! ಯೋಗಸಮರ್ಥರಾದ ಮಹರ್ಷಿಗಳಾದರೂ, ನಿನ್ನ ಪಾದಸೇವಾಸ್ಮರಣಗಳಲ್ಲಿ ವಿಮುಖರಾಗಿ, ಬೇರೆ ವಿಷಯಗಳಲ್ಲಿಯೂ, ಫಲಾಪೇಕ್ಷೆಯುಳ್ಳ ಇತರಕರ್ಮಗಳಲ್ಲಿಯೂ ಆಸೆಯನ್ನಿಟ್ಟಪಕ್ಷದಲ್ಲಿ, ಅವರಿಗೂ ಶಾಶ್ವತಸುಖವೆಂಬುದು ಲಭಿಸದು. ಹಗಲೆಲ್ಲವೂ ವೃಥಾಪ್ರಯತ್ನದಿಂದ ತೊಳಲಿ, ರಾತ್ರಿಯಲ್ಲಿ ನಿದ್ರಾಸಕ್ತರಾಗಿ, ಕನಸಿನಲ್ಲಿ ಕಾಣಬಹು

ದಾದ ಬಹುವಿಧಸಂಪತ್ತುಗಳನ್ನು ನೋಡುವುದರಿಂದಲೇ ಆನಂದವನ್ನನು ಭವಿಸುತ್ತ, ನಡುನಡುವೆ ಸಂಭವಿಸುವ ಅನೇಕವಿಪತ್ತುಗಳಿಂದ ದುಃಖಿಸುವ ವರಂತೆ, ಅವರು ವಿಫಲಪ್ರಯತ್ನರಾಗಿ, ತಮ್ಮ ಕಾಲವನ್ನು ವ್ಯರ್ಥವಾ ಗಿಯೇ ಕಳೆಯುತ್ತಿರುವರು. ಅಂತವರು ಭಯಂಕರವಾದ ಸಂಸಾರಸಾಗರ ದಲ್ಲಿಯೂ ಸಿಕ್ಕಿ ನರಳುವರು.

ತ್ವಂ ಭಾವಯೋಗಪರಿಭಾವಿತಹೃತ್ಸರೋಜ
ಆಸ್ಸೇ ಶ್ರುತೇಕ್ಷಿತಪಥೋ ನನು ನಾಥ ಪುಂಸಾಮ್।
ಯದ್ಯದ್ಧಿಯಾ ತ ಉರುಗಾಯ ವಿಭಾವಯಂತಿ
ತತ್ತದ್ವಪುಃಪ್ರಣಯಸೇ ತದನುಗ್ರಹಾಯ ॥ ೧೧॥

ಓ ಈಶ್ವರಾ! ನಿನ್ನನ್ನು ಪಡೆಯುವುದಕ್ಕೆ ಶಾಸ್ತ್ರಜನ್ಯವಾದ ಜ್ಞಾನ ವೊಂದು, ಮತ್ತು ತಮ್ಮತಮ್ಮ ವಿವೇಕದಿಂದಲೇ ಹುಟ್ಟಿದ ಉಪಾಸನಾ ರೂಪವಾದ ಜ್ಞಾನವೊಂದು, ಇವೆರಡೂ ಮುಖ್ಯಮಾರ್ಗಗಳು. ನೀನೋ ನಿಷ್ಕಾಮರಾಗಿಯೂ, ಭಕ್ತಿಯೋಗದಿಂದ ಶುದ್ಧವಾದ ಮನಸ್ಸುಳ್ಳವರಾ ಗಿಯೂ ಇರುವ ಭಕ್ತರ ಹೃದಯಕಮಲದಲ್ಲಿ ನೆಲೆಗೊಂಡಿರತಕ್ಕವನು. ಇದಲ್ಲದೆ ಯೋಗೀಶ್ವರರು ಯೋಗಮಾರ್ಗವನ್ನು ಹಿಡಿದು, ತಮ್ಮ ಮನಸ್ಸಿ ನಲ್ಲಿ ನಿನ್ನ ರೂಪವನ್ನು ಯಾವವಿಧದಿಂದ ಭಾವಿಸುವರೋ, ಅದೇ ರೂಪ ದಿಂದಲೇ ನೀನು ಅವರಿಗೆ ಗೋಚರನಾಗಿ ಅನುಗ್ರಹಿಸುವೆ.

ನಾತಿಪ್ರಸೀದಸಿ ತಥೋಪಚಿತೋಪಹಾರೈ
ರಾರಾಧಿತಸ್ಸುರಗಣೈರ್ಯದಿ ಬದ್ಧಕಾಮೈಃ ।
ಯತ್ಸರ್ವಭೂತದಯಯಾ ತ್ವಸದಲಭ್ಯಯೈಕೋ
ನಾನಾಜನೇಷ್ವವಹಿತಸ್ಸುಹೃದಂತರಾತ್ಮಾ ॥ ೧೨॥

ಓ ದೇವಾ! ನೀನು ಸಮಸ್ತಭೂತಗಳಲ್ಲಿಯೂ ಅಂತರಾತ್ಮನಾಗಿ ದ್ದು, ಆಯಾಭೂತಗಳಿಗೆ ನಿಯಾಮಕನಾಗಿಯೂ, ಧಾರಕನಾಗಿಯೂ ಇರುವುದರಿಂದ ಸರ್ವಸುಹೃತ್ತೆನಿಸಿಕೊಳ್ಳುವೆ. ಇದರಿಂದ ಯಾವಭೂತಕ್ಕೆ ದ್ರೋಹವನ್ನೆಣಿಸಿದರೂ, ಅದು ತದಂತರ್ಯಾಮಿಯಾದ ನಿನ್ನಲ್ಲಿಯೇ ಬಂದು ಮುಗಿಯುವುದು. ತತ್ವಜ್ಞರಾದ ಸಜ್ಜನರಿಗೆನಾತ್ರವೇ ಈ ಅಭಿಪ್ರಾಯವು

ಹುಟ್ಟುವುದರಿಂದ, ಅವರು ಸರ್ವಭೂತದಯಾಪರರೆನಿಸುವರು. ದೇಹವನ್ನೇ ಆತ್ಮವೆಂದು ಭಾವಿಸತಕ್ಕವರಿಗೆ ಈ ವಿಧವಾದ ಭೂತದಯೆಯೂ ದುರ್ಲಭವು. ನಿಷ್ಕಾಮರಾಗಿ ಭೂತದಯಾಪರರಾಗಿ ವರ್ತಿಸತಕ್ಕವರಿಗೆ ನೀನು ಪ್ರಸನ್ನನಾಗುವಂತೆ, ಕಾಮವಶರಾದವರು ಅನೇಕೋಪಚಾರಗಳಿಂದ ನಿನ್ನನ್ನಾರಾಧಿಸಿದರೂ ಅವರಲ್ಲಿ ನೀನು ಪ್ರಸನ್ನನಾಗಲಾರೆ. ಇತರಫಲಾಪೇಕ್ಷೆಯಿಂದ ಮಾಡಿದ ಕರ್ಮವೊಂದೂ, ನಿನ್ನ ಅನುಗ್ರಹವನ್ನು ಸಂಪಾದಿಸುವುದಕ್ಕೆ ಕಾರಣವಾಗಲಾರವು.

ಪುಂಸಾಮತೋ ವಿವಿಧಕರ್ಮಭಿರಧ್ವರಾದ್ಯೈ
ರ್ದಾನೇನ ಚೋಗ್ರತಪಸಾ ವ್ರತಚರ್ಯಯಾ ಚ ।
ಆರಾಧನಂ ಭಗವತಸ್ತವ ಸತ್ಕ್ರಿಯಾರ್ಥೋ
ಧರ್ಮೋಽರ್ಪಿತಃ ಕರ್ಹಿಚಿನ್ಮ್ರಿಯತೇ ನ ಯತ್ರ ॥ ೧೩॥

ಆದುದರಿಂದ ಮನುಷ್ಯನು, ಯಾಗವೇ ಮೊದಲಾದ ಕರ್ಮಗಳನ್ನಾಗಲಿ, ದಾನಾದಿಸತ್ಕಾರ್ಯಗಳನ್ನಾಗಲಿ, ಚಾಂದ್ರಾಯಣಾದಿ ತಪಸ್ಸುಗಳನ್ನಾಗಲಿ, ವ್ರತಾನುಷ್ಠಾನವನ್ನಾಗಲಿ, ಯಾವುದನ್ನು ನಡೆಸಿದರೂ, ಅವೆಲ್ಲವನ್ನೂ ನಿನ್ನ ಆರಾಧನರೂಪವಾಗಿ ನಡೆಸಿದಾಗಮಾತ್ರವೇ ಅವು ಉತ್ತಮಫಲವನ್ನು ಕೈಗೂಡಿಸುವುವು. ನಿನಗೆ ಅರ್ಪಿತವಾಗಿ ಮಾಡಿದ ಆ ಕರ್ಮಫಲಕ್ಕೆ ಎಂದೆಂದಿಗೂ ಚ್ಯುತಿಯಿರದು. ಮುಖ್ಯವಾಗಿ ನೀನು ನಿನ್ನಲ್ಲಿರುವ ಆಶ್ರಿತವಾತ್ಸಲ್ಯದಿಂದ ಅನುಗ್ರಹಿಸತಕ್ಕವನೇ ಹೊರತು, ಇತರ ಕರ್ಮಗಳಿಂದ ಪ್ರಸನ್ನನಾಗತಕ್ಕವನಲ್ಲ.

ಶಶ್ವತ್ಸ್ವರೂಪಮಹಸೈವ ನಿಷಿದ್ಧಭೇದ
ಮೋಹಾದಿಬೋಧಧಿಷಣಾಯ ನಮಃಪರಸ್ಮೈ ।
ವಿಶ್ವೋದ್ಭವಸ್ಥಿತಿಲಯೇಷು ನಿಮಿತ್ತಲೀಲಾ
ರಾಸಾಯ ತೇ ಚ ಕೃಮಹೇ ನಮ ಈಶ್ವರಾಯ ॥ ೧೪॥

ಯಾವಾಗಲೂ ಆತ್ಮವೆಂಬುದು ಪ್ರಕೃತಿಗಿಂತಲೂ ವಿಲಕ್ಷಣವೆಂಬ ಈ ತತ್ವವನ್ನು ತಿಳಿದೊಡನೆ, ಮನುಷ್ಯನಿಗೆ, ದೇವಮನುಷ್ಯಾದಿಗಳಲ್ಲಿ ಭೇದಬುದ್ಧಿ, ದೇಹವೇ ಆತ್ಮವೆಂಬ ಭ್ರಾಂತಿ, ಜೀವಾತ್ಮಗಳೆಲ್ಲವೂ ಸ್ವ

ತಂತ್ರಗಳೆಂಬ ಅಜ್ಞಾನ, ಈ ಅಜ್ಞಾನದಿಂದುಂಟಾಗತಕ್ಕ ಶೋಕಮೋಹಾದಿಗಳು, ಇವೆಲ್ಲವೂ ನೀಗುವುವು. ಮನುಷ್ಯನು ತನ್ನ ಸ್ವರೂಪವೆಂತದೆಂಬುದನ್ನು ಯಥಾರ್ಥವಾಗಿ ತಿಳಿಯುವುದೊಂದು, ನಿನ್ನ ನಿಜವನ್ನು ತಿಳಿದು ನಿನ್ನನ್ನು ಪಾಸನೆಮಾಡುವುದೊಂದು, ಈ ಎರಡುವಿಧವಾದ ಜ್ಞಾನಗಳನ್ನು ಪಡೆದಾಗಲೇ ಅವನಿಗೆ ಶಾಶ್ವತಪುರುಷಾರ್ಥವಾದ ಮೋಕ್ಷವು ಲಭಿಸುವುದು. ಇವೆರಡೇ ನಿನ್ನನ್ನು ಪಡೆಯುವುದಕ್ಕೆ ಮುಖ್ಯೋಪಾಯಗಳು ಈ ಜ್ಞಾನಕ್ಕೆ ನೀನೊಬ್ಬನೇ ವಿಷಯನಾಗಿಯೂ, ಪ್ರಕೃತಿವಿಲಕ್ಷಣನಾಗಿಯೂ, ಪ್ರಪಂಚದ ಸೃಷ್ಟಿಸ್ಥಿತಿ ಲಯಗಳೆಂಬ ಲೀಲೆಗಳನ್ನು ನಡೆಸತಕ್ಕವನಾಗಿಯೂ, ಸರ್ವನಿಯಾಮಕನಾಗಿಯೂ ಇರುವ ನಿನಗೆ ನಮಸ್ಕಾರವು. ಓ ದೇವಾ! ನೀನು ಅವಾಪ್ತಸಮಸ್ತಕಾಮನಾಗಿರುವಾಗ ಲೀಲಾರ್ಥವಾಗಿಯಾದರೂ ಈ ಜಗದ್ವ್ಯಾಪಾರಗಳನ್ನು ನಡೆಸಬೇಕಾದ ಅವಶ್ಯವೇನು? ಸಂಸಾರಭಯದಿಂದ ತತ್ತಳಿಸುವ ಜೀವಗಳನ್ನು ಅನುಗ್ರಹಿಸಬೇಕೆಂಬ ಉದ್ದೇಶದಿಂದಲ್ಲವೇ ಈ ಜಗದ್ವ್ಯಾಪಾರಗಳನ್ನು ನಡೆಸುತ್ತಿರುವೆ! ಪೂರ್ಣಕಾಮರಾಗಿ ನಿಶ್ಚಿಂತರಾಗಿರುವಾಗಲೇ ಮನುಷ್ಯರಿಗೆ ಆಟದಲ್ಲಿ ಮನಸ್ಸು ಪ್ರವರ್ತಿಸುವುದು. ಮನಸ್ಸಿನಲ್ಲಿ ನೆಮ್ಮದಿಯಿಲ್ಲದವರಿಗೆ ವಿನೋದಗಳಲ್ಲಿ ಬುದ್ಧಿಯೂ ಹುಟ್ಟದು? ಆದುದರಿಂದ ಪೂರ್ಣಕಾಮನಾದ ನಿನಗೆ ಈ ಜಗದ್ವ್ಯಾಪಾರವೆಂಬ ಲೀಲೆಯಲ್ಲಿ ಮನಸ್ಸು ಹುಟ್ಟುವುದೂ ಯುಕ್ತವಾಗಿಯೇ ಇರುವುದು. ಇದರಮೇಲೆ ಮಣ್ಣಿನಲ್ಲಿ ಸುವರ್ಣವು ಸೇರಿರುವಂತೆ ಪ್ರಕೃತಿಯೊಡನೆ ಕಲೆತ ಜೀವಗಳನ್ನು ನಿನ್ನ ಅವತಾರಕಾರ್ಯಗಳ ನಾಮಕೀರ್ತನಾದಿಗಳಿಂದ ಉದ್ಧರಿಸಬೇಕೆಂಬುದಕ್ಕಾಗಿಯೇ ನೀನು ಈ ಲೋಕವ್ಯಾಪಾರವೆಂಬ ಲೀಲೆಯನ್ನು ಕೈಕೊಳ್ಳುತ್ತಿರುವೆ. ಓ ಭಗವಂತಾ! ಹೀಗೆ ಲೋಕಾನುಗ್ರಹಕ್ಕಾಗಿ ನೀನು ಆಗಾಗ ಕೈಕೊಳ್ಳುವ ಬಗೆಬಗೆಯ ಅವತಾರಗಳ ಗುಣಚರಿತ್ರೆಗಳೆಲ್ಲವನ್ನೂ, ಸೂಚಿಸಸತಕ್ಕ ನಿನ್ನ ನಾಮಾವಳಿಗಳನ್ನು ಕೀರ್ತಿಸುವುದೇ, ಜೇತನರಿಗೆ ಸರ್ವಾಭೀಷ್ಟಗಳನ್ನೂ ಕೈಗೂಡಿಸುವುದು.

ಯಸ್ಯಾವತಾರಗುಣಕರ್ಮವಿಡಂಬನಾನಿ
ನಾಮಾನಿ ಯೇऽಸುವಿಗಮೇ ವಿವಶಾ ಗೃಣನ್ತಿ।

ತೇಽನೇಕಜನ್ಮಶಮಲಂ ಸಹಸೈವ ಹಿತ್ವಾ
ಸಂಯಾನ್ತ್ಯಪಾವೃತಮೃತಂ ತಮಜಂ ಪ್ರಪದ್ಯೇ ॥ ೧೫॥

ಓ! ನಾಥಾ! ಲೋಕದಲ್ಲಿ ಯಾವ ಜ್ಞೇತನರು, ನಿನ್ನ ಅದ್ಭುತ ಚಾರಿತ್ರಗಳನ್ನೂ, ಗುಣಗಳನ್ನೂ, ಮಹಿಮೆಗಳನ್ನೂ ಎತ್ತಿತೋರಿಸತಕ್ಕ ಆ ನಾಮಾವಳಿಗಳನ್ನು ಹಿಡಿದು, "ಓ! ದೇವಕೀನಂದನಾ! ಓ ದಾಶರಥೀ! ಓ! ಸರ್ವಜ್ಞಾ! ಹೇ ಭಕ್ತವತ್ಸಲಾ! ಹೇ ಗೋವರ್ಧನೋದ್ಧಾರಾ! ಹೇ ಕಂಸಾರೀ!, ಹೇ ರಾವಣಾಂತಕಾ!" ಎಂಬೀ ಪದಗಳಿಂದ ಪ್ರಾಣೋತ್ಕ್ರಮಣಕಾಲದಲ್ಲಿ ಪರವಶರಾಗಿರುವಾಗಲಾದರೂ, ಒಮ್ಮೊಮ್ಮೆ ಪ್ರಯತ್ನಪೂರ್ವಕವಾಗಿ ಬಾಯಿಂದುಚ್ಚರಿಸುವರೋ, ಅಂತವರು ಅನೇಕಜನ್ಮಗಳಿಂದ ಸಂಚಿತಗಳಾದ ಕರ್ಮಸಂಬಂಧಗಳೆಲ್ಲವನ್ನೂ ಅಕ್ಷಣವೇ ತೊಲಗಿಸಿಕೊಂಡು, ನಿರಾವರಣವಾದ ನಿನ್ನ ಸಾನ್ನಿಧ್ಯವನ್ನು ಹೊಂದುವರು.ಹೀಗೆ ಮಹಾದ್ಭುತಗುಣ ನಾಮಗಳಿಂದಲೂ, ಚರಿತ್ರಗಳಿಂದಲೂ, ಕೂಡಿದವನಾಗಿ, ಕರ್ಮಸಂಬಂಧಗಳಾದ ಜನ್ಮಾದಿಗಳಿಲ್ಲದೆ, ಸರ್ವಸುಲಭನಾಗಿರುವ ನಿನ್ನನ್ನು ಶರಣುಹೊಂದುವೆನು.

ಯೋವಾ ಅಹಂ ಚ ಗಿರಿಶಶ್ಚ ವಿಭುಸ್ವಯಂಚ
ಸ್ಥಿತ್ಯುದ್ಭವಪ್ರಲಯಹೇತವ ಆತ್ಮಮೂಲಮ್ ।
ಮತ್ವಾ ತ್ರಿಪಾದ್ವೈವಿಧ ಏಕ ಉರುಪ್ರಕೋಹಃ
ತಸ್ಮೈ ನಮೋ ಭಗವತೇ ಭುವನದ್ರುಮಾಯ ॥ ೧೬॥

ಓ! ದೇವದೇವಾ! ನೀನೊಬ್ಬನೇ ಸರ್ವಾತ್ಮಕನಾಗಿದ್ದರೂ, ನಿನ್ನ ಅವತಾರಭೇದಗಳಿಂದ ಜಗತ್ತನ್ನು ರಕ್ಷಿಸುವುದಲ್ಲದೆ, ನನ್ನಲ್ಲಿಯೂ, ರುದ್ರನಲ್ಲಿಯೂ ಅಂತರ್ಯಾಮಿಯಾಗಿ, ನೀನೇ ಸೃಷ್ಟಿಸಂಹಾರಗಳನ್ನೂನಡೆಸುವೆ? ನಿನ್ನ ಸಂಕಲ್ಪವಿಲ್ಲದಮೇಲೆ ನಾನಾಗಲಿ, ರುದ್ರನಾಗಲಿ, ಚಿತ್ರದ ಬೊಂಬೆಗಳಂತೆ ನಿಲ್ಲಬೇಕೆಹೊರತು, ಯಾವಕಾರ್ಯವನ್ನೂ ನಡೆಸಲಾರವು. ಬೇರೊಂದರಿಂದ ಹುಟ್ಟದೆ, ತನಗೆ ತಾನೇ ಕಾರಣವಾಗಿ, ನಿತ್ಯಸಿದ್ಧವಾಗಿ, ತ್ರಿಪಾದ್ವಿಭೂತಿಯೆನಿಸಿಕೊಂಡ ವೈಕುಂಠಲೋಕದಿಂದ ಹೊರಟು, ತ್ರಿಮೂರ್ತಿಗಳೆಂಬ ಮೂರು ಕವಲೊಡೆದು, ದೇವಮನುಷ್ಯಾದಿಭೇದಗಳಿಂದಲೂ, ಇತರ

ಸ್ಥಾವರಜಂಗಮಾದಿರೂಪಗಳಿಂದಲೂ, ಶಾಖೋಪಶಾಖೆಯಾಗಿ ವೃದ್ಧಿ ಹೊಂದಿದ ಪ್ರಪಂಚವೃಕ್ಷರೂಪನಾದ ನಿನಗೆ ನಮಸ್ಕಾರವು.

ಲೋಕೋಽಯಿಕರ್ಮನಿರತಃ ಕುಶಲೇಽಪ್ರಮತ್ತ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯತ್ಸಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ ೧೫॥

ಓ! ಸ್ವಾಮೀ! ಯಾರು ವೇದವಾಕ್ಯಗಳಮೂಲಕವಾಗಿ ನಿನ್ನಿಂದಲೇ ಉಪದೇಶಿಸಲ್ಪಟ್ಟಂತಾಗಿಯೂ, ನಿನ್ನ ಆರಾಧನರೂಪವಾಗಿಯೂ ಆಯಾವರ್ಣಾಶ್ರಮಗಳಿಗೆ ಉಚಿತವಾಗಿಯೂ, ಶ್ರೇಯಸ್ಕರವಾಗಿಯೂ ಇರುವ ಕರ್ಮಗಳಲ್ಲಿ ಶ್ರದ್ಧೆಯನ್ನು ವಹಿಸಿ, ಅಪತ್ಕರ್ಮಗಳನ್ನು ಬಿಟ್ಟು ಅವುಗಳನ್ನು ನಡೆಸುವರೋ ನೀನು ಅಂತವರ ಸಂಸಾರತಾಪತ್ರಯಗಳನ್ನು ಕೂಡಲೇ ತೊಲಗಿಸಿ, ಅವರಲ್ಲಿ ವಿರಕ್ತಿಯನ್ನೂ ಹುಟ್ಟಿಸುವೆ. ಹೀಗೆ ಜ್ಞೇತನರಿಗೆ ಉತ್ತಮಪುರುಷಾರ್ಥವನ್ನು ಕೈಗೂಡಿಸಬಲ್ಲ ಅಮೋಘಸಂಕಲ್ಪನಾದ ನಿನಗೆ ನಮಸ್ಕಾರವು.

ಯಸ್ಮಾದ್ಬಿಭೇಮ್ಯಹಮಪಿ ದ್ವಿಪರಾರ್ಧಧಿಷ್ಣ್ಯ
ಮಧ್ಯಾಸಿತಶ್ಚಕಲಲೋಕನಮಸ್ಕೃತಂ ಯತ್ ।
ತೇಪೇ ತಪೋ ಬಹುಸವೋಽವರುರುತ್ಸಮಾನ
ಸ್ತಸ್ಮೈ ನಮೋ ಭಗವತೇಽಧಿಮಖಾಯ ತುಭ್ಯಮ್ ॥ ೧೬॥

ಓ ಪರಮಪುರುಷಾ! ನಾನು ಎಲ್ಲಕ್ಕಿಂತಲೂ ಚಿರಸ್ಥಾಯಿಯಾಗಿ, ಸಮಸ್ತ ಲೋಕಗಳಿಂದಲೂ ಸಂಮಾನಿತವಾದ ಸತ್ಯಲೋಕದಲ್ಲಿ ಎರಡುಪರಾರ್ಧಕಾಲದವರೆಗೆ ಇರುವವನಾದರೂ, ಆ ನನ್ನ ಲೋಕವೂಕೂಡ ಆ ಕಾಲಾವಧಿಯು ಕಳೆದೊಡನೆ ನಾಶಹೊಂದತಕ್ಕುದಾಗಿರುವುದು. ಆದುದರಿಂದ ಇಂತಹ ಉತ್ತಮಸ್ಥಾನದಲ್ಲಿರುವ ನಾನೂಕೂಡ ಕಾಲಸ್ವರೂಪನಾದ ನಿನಗಾಗಿ ಭಯಪಡುತ್ತಿರುವೆನು. ಈ ಭಯವನ್ನು ನೀಗಿ ನಿನ್ನನ್ನು ಹೊಂದುವುದಕ್ಕಾಗಿಯೇ ನಿನ್ನ ಆರಾಧನರೂಪಗಳಾದ ಅನೇಕತಪಸ್ಸುಗಳನ್ನೂ ನಡೆಸುತ್ತಿರುವೆನು. ನನ್ನ ಸ್ಥಿತಿಯೇ ಹೀಗಿರುವಾಗ, ಇನ್ನು ನನಗಿಂತಲೂ ಕೆಳಗಿನ ಇತರಲೋಕಗಳ ಪಾಡೇನು ? ಇಂತಹ ಸರ್ವನಿಯಾಮಕನಾದ ನಿನಗೆ ನಮಸ್ಕಾರವು.

ತಿರ್ಯಙ್ಮನುಷ್ಯವಿಬುಧಾದಿಷು ಜೀವಯೋನಿ
ಷ್ವಾತ್ಮೇಚ್ಛಯಾತ್ಮಕೃತಸೇತುಪರಿಪ್ಲವಾಯ ।
ರೇಮೇ ನಿರಸ್ತರತಿರಪ್ಯುಪಲಬ್ಧದೇಹ
ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ ೧೯॥

ಓ ಲೋಕರಕ್ಷಕಾ ! ನೀನು ಪೂರ್ಣಕಾಮನಾಗಿ, ಕರ್ಮರಹಿತನಾಗಿದ್ದರೂ, ಲೋಕಬಾಧೆಯನ್ನು ನಿವರ್ತಿಸಿ ಸಮಸ್ತಲೋಕಗಳನ್ನೂ ಆಯಾ ನೆಲೆಯಲ್ಲಿ ನಿಲ್ಲಿಸುವುದಕ್ಕಾಗಿಯೇ, ಸ್ವೇಚ್ಛೆಯಿಂದ ಅನೇಕರೂಪಗಳನ್ನು ಧರಿಸುವೆ! ಮನುಷ್ಯಯೋನಿಯಲ್ಲಿ ರಾಮಕೃಷ್ಣಾದ್ಯವತಾರಗಳಿಂದ ಜನಿಸುವೆ! ತಿರ್ಯಗ್ಯೋನಿಯಲ್ಲಿ ಮತ್ಸ್ಯಕೂರ್ಮಾದಿರೂಪಗಳಿಂದವತರಿಸುವೆ ! ಹೀಗೆ ಧರ್ಮಸಂಸ್ಥಾಪನೆಗಾಗಿ ಅನೇಕರೂಪಗಳನ್ನು ಧರಿಸತಕ್ಕ ನಿನಗೆ, ವಿಷಯಸುಖಗಳಲ್ಲಿ ಅಭಿಲಾಷೆಯಿಲ್ಲದಿದ್ದರೂ, ಆಯಾ ಅವತಾರಗಳಿಗೆ ತಕ್ಕ ಕರ್ಮಗಳಲ್ಲಿಯೂ ಪ್ರವರ್ತಿಸಿ, ಸುಖಾನುಭವವನ್ನೂ ನಟಿಸುತ್ತಿರುವೆ. ಅಂತಹ ಆಶ್ಚರ್ಯವ್ಯಾಪಾರವುಳ್ಳ ಪುರುಷೋತ್ತಮನಾದ ನಿನಗೆ ನಮಸ್ಕಾರವು.

ಯೋಽವಿದ್ಯಯಾನುಪಹತೋಽಪಿ ದಶಾರ್ಧವೃತ್ತ್ಯಾ
ನಿದ್ರಾಮುವಾಹ ಜಠರೀಕೃತಲೋಕಯಾತ್ರಃ ।
ಅನ್ತರ್ಜಲೇ ಹಿ ಕಪಿಪುಙ್ಗವಶಾನುಕೂಲಾಂ
ಭೀಮೋರ್ಮಿಮಾಲಿನಿ ಜನಸ್ಯ ಸುಖಂ ವಿವೃಣ್ವನ್ ॥ ೨೦॥

ಹೇ ನಾಥಾ ! ನೀನು ನಿದ್ರೆಗೆ ಕಾರಣಗಳಾದ ಐದುಬಗೆಯ ಅವಿದ್ಯೆಯಿಂದ ಸ್ಪರ್ಶಿಸಲ್ಪಡದಿದ್ದರೂ, ಲೋಕವ್ಯಾಪಾರಗಳೆಲ್ಲವನ್ನೂ ನಿನ್ನ ಗರ್ಭದಲ್ಲಿಯೇ ನಡೆಸಿಕೊಂಡು, ಭಯಂಕರಗಳಾದ ಅಲೆಗಳ ಪರಂಪರೆಯಿಂದ ಉಬ್ಬಿಬರುತ್ತಿರುವ ಈ ಮಹಾಸಮುದ್ರದಲ್ಲಿ, ಮೈಗೆ ಮೃದುವಾದ ಆದಿಶೇಷಶರೀರವೆಂಬ ಹಾಸಿಗೆಯಲ್ಲಿ ಮಲಗಿರುವೆಯಲ್ಲವೆ ? ಇದು ವಿವೇಕಹೀನರಾಗಿ ಮೋಹದಿಂದ ಮಲಗಿರುವ ಪ್ರಾಕೃತಜನಗಳಿಗೆ ನಿದ್ರಾಸಂಬಂಧಸ್ವರೂಪವು ಹೀಗೆಂಬುದನ್ನು ತೋರಿಸುವಂತಿರುವುದು.

ಯನ್ನಾಭಿಪದ್ಮ ಭವನಾದಹಮಾಸಮೇಕ್ಯ
ಲೋಕತ್ರಯೋಪಕರಣೋ ಯದನುಗ್ರಹೇಣ ।

ತಸ್ಮೈ ನಮಸ್ತ ಉದರಸ್ಯಭವಾಯ ಯೋಗ
ನಿದ್ರಾವಸಾನವಿಕಸನ್ನಲಿನೇಕ್ಷಣಾಯ ॥ ೨೦॥

ಇಂತಹ ಸುಖಶಯ್ಯೆಯಲ್ಲಿ ನೀನು ಮಲಗಿದ್ದಾಗ, ತ್ರೈಲೋಕ್ಯಕುಟುಂಬಿಯಾದ ನಾನು, ನಿನ್ನ ನಾಭಿಕಮಲದ್ವಾರದಿಂದ ಜನಿಸಿರುವೆನು. ಓ! ದೇವದೇವಾ! ಯಾವ ನಿನ್ನ ಅನುಗ್ರಹದಿಂದಲೇ ನಾನು ಈ ವಿಧವಾಗಿ ಉತ್ಪನ್ನನಾದೆನೋ, ಯಾವ ನೀನು ಸಮಸ್ತಕಾರ್ಯವರ್ಗಗಳನ್ನೂ (ತ್ರೈಲೋಕ್ಯವನ್ನೂ) ಗರ್ಭದಲ್ಲಿ ಧರಿಸಿ ಯೋಗನಿದ್ರೆಯಿಂದ ಮಲಗಿರುವೆಯೋ, ಮುಂದೆ ಈ ಯೋಗನಿದ್ರೆಯು ಮುಗಿದಮೇಲೆ ಅರಳಿದ ತಾವರೆಯಂತೆ ವಿಕಸಿತವಾದ ಕಣ್ಣುಗಳಿಂದ ಎಚ್ಚರಗೊಳ್ಳುವೆಯೋ, ಅಂತಹ ಆನಿರುದ್ಧರೂಪಿಯಾದ ನಿನಗೆ ನಮಸ್ಕಾರವು.

ಸೋಽಯಂ ಸಮಸ್ತಜಗತಾಂ ಸುಹೃದೇಕ ಆತ್ಮಾ
ಸತ್ವೇನ ಯನ್ಮೃಡಯತೇ ಭಗವಾನ್ ಭಗೇನ ।
ತೇನೈವ ಮೇ ದೃಶಮನುಸ್ಪೃಶತಾದ್ಯಥಾಹಂ
ಸ್ರಕ್ಷ್ಯಾಮಿ ಪೂರ್ವವದಿದಂ ಪ್ರಣತಪ್ರಿಯೋಽಸಾ॥ ೨೧॥

ಚೇತನಾಚೇತನಸ್ವರೂಪವಾದ ಸರ್ವಲೋಕಕ್ಕೂ ಅಂತರ್ಯಾಮಿಯಾಗಿ, ಆ ಸಮಸ್ತಲೋಕಕ್ಕೂ ಸುಹೃತ್ತಾಗಿ, ಇದೋ ಈಗ ನನ್ನ ಕಣ್ಣುಗಳ ಮುಂದೆ ಗೋಚರಿಸುತ್ತಿರುವ ನೀನು, ಯಾವ ಬಗೆಯ ಜ್ಞಾನದಿಂದಲೂ, ಐಶ್ವರ್ಯದಿಂದಲೂ, ಈ ಜಗತ್ತೆಲ್ಲವನ್ನೂ ಸುಖಪಡಿಸುವೆಯೋ, ಆದೇ ಜ್ಞಾನೈಶ್ವರ್ಯಗಳಿಂದ ನನಗೂ ಪ್ರಜ್ಞೆಯನ್ನು ಕರುಣಿಸಬೇಕು. ನಿನ್ನ ಅನುಗ್ರಹಬಲದಿಂದಲೇ ನಾನು ಈ ಪ್ರಪಂಚವೆಲ್ಲವನ್ನೂ ಪೂರ್ವಕಲ್ಪದಂತೆ ಸೃಷ್ಟಿಸಬೇಕಾಗಿರುವುದರಿಂದ, ನನಗೆ ಆ ಕಾರ್ಯಕ್ಕೆ ತಕ್ಕ ಬುದ್ಧಿಯನ್ನೂ ಕರುಣಿಸಬೇಕು. ಶರಣಾಗತವತ್ಸಲನೆನಿಸಿದ ನೀನು ಈಗ ನಿನ್ನನ್ನು ಮರೆಹೊಕ್ಕಿರುವ ನನ್ನಲ್ಲಿ ವಾತ್ಸಲ್ಯವನ್ನು ತೋರಿಸಬೇಕು.

ಏಷ ಪ್ರಸನ್ನವದನೋ ರಮಯಾಽಽತ್ಮಶಕ್ತ್ಯಾ
ಯದ್ಯತ್ಕರಿಷ್ಯತಿ ಗೃಹೀತಗುಣಾವತಾರಃ ।
ತಸ್ಮಿನ್ ಸ್ವವಿಕ್ರಮಮಿದಂ ಸೃಜತೋಽಪಿ ಚೇತೋ
ಯುಂಜೀತ ಕರ್ಮ ಶಮಲಂ ಚ ಯಥಾ ವಿಜಹ್ಯಾಮ್ ॥ ೨೩॥

ಓ ಪ್ರಭೂ ! ಪ್ರಸನ್ನಮುಖನಾದ ನೀನು, ನಿನ್ನ ಶಕ್ತಿಭೂತೆಯಾದ ಲಕ್ಷ್ಮೀದೇವಿಯೊಡಗೂಡಿ, ನಿನಗೆ ಸಹಜವಾದ ಜ್ಞಾನಶಕ್ತ್ಯಾದಿಗುಣಗಳನ್ನು ಬಿಡದಹಾಗೆಯೇ ಪ್ರಪಂಚದಲ್ಲಿ ಬೇರೆಬೇರೆ ಅವತಾರಗಳನ್ನು ಧರಿಸತಕ್ಕವನು. ಹೀಗೆ ನೀನು ದೇವತಿರ್ಯಙ್ಮನುಷ್ಯಾದಿಯೋನಿಗಳಲ್ಲಿ ಅವತರಿಸಿ, ಬೇರೆಬೇರೆ ಕಾರ್ಯಗಳನ್ನು ನಡೆಸುವಾಗಲೂ, ನನ್ನ ಮನಸ್ಸು ಆ ನಿನ್ನ ಚರಿತ್ರೆಗಳಲ್ಲಿಯೇ ಆಸಕ್ತವಾಗುವಂತೆ ಅನುಗ್ರಹಿಸಬೇಕು. ಮತ್ತು ಓ ದೇವಾ ! ನಿನ್ನ ಮಹಿಮೆಯ ಬಲದಿಂದಲೇ ನಾನು, ನಿನಗೆ ಲೀಲಾವಿಭೂತಿಯಾದ ಈ ಪ್ರಪಂಚವನ್ನು, ನಿನ್ನ ಆಜ್ಞಾಧೀನನಾಗಿ ಸೃಷ್ಟಿಸತಕ್ಕವನು. ಹಾಗಿದ್ದರೂ ಒಂದು ವೇಳೆ ನನ್ನ ಮನಸ್ಸು ದುರಭಿಮಾನದಿಂದ ನಿನ್ನ ಗುಣಸ್ಮರಣೆಯಲ್ಲಿ ವಿಮುಖವಾಗಬಹುದು ! ಹಾಗಿಲ್ಲದೆ ಯಾವಾಗಲೂ ನನ್ನ ಮನಸ್ಸು ನಿನ್ನಲ್ಲಿಯೇ ಆಸಕ್ತವಾಗಿರುವಂತೆ ಸದ್ಬುದ್ಧಿಯನ್ನು ಅನುಗ್ರಹಿಸಬೇಕು. ಮತ್ತು ಸಂಸಾರಹೇತುಗಳಾದ ಪುಣ್ಯಪಾಪಕರ್ಮಗಳಿಂದ ನಾನು ಮುಕ್ತನಾಗುವ ಮಾರ್ಗವನ್ನೂ ನೀನೇ ಆಲೋಚಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು.

ನಾಭಿಹ್ರದಾದಿಹ ಸತೋಽಮ್ಬುಸಿ ಯಸ್ಯ ಪುಂಸೋ
ವಿಜ್ಞಾನಶಕ್ತಿರಹಮಾಸಮನನ್ತಶಕ್ತೇಃ ।
ರೂಪಂ ವಿಚಿತ್ರಮಿದಮಸ್ಯ ವಿವೃಣ್ವತೋ ಮೇ
ಮಾರೀರಿಷೀಷ್ಟ ನಿಗಮಸ್ಯ ಗಿರಾಂ ವಿಸರ್ಗಃ ॥ ೨೪॥

ಎಲೈ ಪರಮಪುರುಷನೇ ! ಜಲಶಾಯಿಯಾದ ನಿನ್ನ ನಾಭಿಕಮಲದಲ್ಲಿ ಜ್ಞಾನಗುಣಕನಾಗಿ ಹುಟ್ಟಿ, ನಿನ್ನ ನಿಯಮದಿಂದ ಚಿದಚಿದಾತ್ಮಕಗಳಾದ ಲೋಕಗಳೆಲ್ಲವನ್ನೂ ಸೃಷ್ಟಿಸುತ್ತಿರಬೇಕಾದ ನನಗೆ, ಈ ಕಾರ್ಯಾತುರದಿಂದ ವೇದಪಠನದಲ್ಲಿ ಶಕ್ತಿಲೋಪವಾಗದಂತೆಯೂ ಅನುಗ್ರಹಿಸಬೇಕು.

ಸೋಽಸಾವದಭ್ರಕರುಣೋ ಭಗವಾನ್ವಿವೃದ್ಧ
ಪ್ರೇಮಸ್ಮಿತೇನ ನಯನಾಮ್ಬುರುಹಂ ವಿಜೃಮ್ಭನ್ ।
ಉತ್ಥಾಯ ವಿಶ್ವವಿಜಯಾಯ ಚ ನೋ ವಿಷಾದಂ
ಮೃಷ್ಟಾಭ್ಯ ಗಿರಾಽಪನಯತಾತ್ಪುರುಷಃ ಪುರಾಣಃ ॥ ೨೫॥

ನಿರತಿಶಯವಾತ್ಸಲ್ಯದಿಂದ ನನಗೆ ದರ್ಶನವನ್ನು ಕೊಟ್ಟ ಪುರಾಣಪುರುಷನಾದ ನೀನು, ಮುಂದೆಯೂ ಅದೇವಿಧವಾದ ಕೃಪೆಯಿಂದ ಕಟಾಕ್ಷಿಸಿ,

ಮಧುರವಾಕ್ಯದಿಂದ ನನ್ನ ಪ್ರಾರ್ಥನೆಯನ್ನೂ ಈಡೇರಿಸಿ, ನನ್ನ ದುಃಖವನ್ನು ನೀಗಿಸಬೇಕು" ಹೀಗೆಂದು ಚತುರ್ಮುಖನು ಶ್ರೀಮನ್ನಾರಾಯಣನಿಗೆ ನಮಸ್ಕರಿಸಿ, ಬದ್ಧಾಂಜಲಿಯಾಗಿ ನಿಂತಿದ್ದನು. ಹೀಗೆ ಬ್ರಹ್ಮನು ಕರ್ಮ ಜ್ಞಾನಭಕ್ತಿಯೋಗಗಳನ್ನು ಹಿಡಿದು, ತನಗೆ ಉತ್ಪತ್ತಿಕಾರಣನಾದ ಭಗವಂತನನ್ನು ಧ್ಯಾನಿಸಿ, ಬಳಲಿದವನಂತೆ ಸುಮ್ಮನಿರಲು, ಈ ಚತುರ್ಮುಖನ ಸ್ತುತಿವಾಕ್ಯಗಳನ್ನು ಕೇಳಿ ಭಗವಂತನು ಸಂತೋಷಗೊಂಡು, ಆ ಬ್ರಹ್ಮನ ಮನಸ್ಸಿನಲ್ಲಿರುವ ಕೋರಿಕೆಯನ್ನೂ, ಆತನು ಆಗಿನ ಕಲ್ಪಾಂತದ ಮಹಾ ಸಮುದ್ರವನ್ನು ನೋಡಿ ಹಿಂದುಮುಂದುತಿಳಿಯದೆ ತತ್ತ್ವಳಿಸುವುದನ್ನೂ ಕಂಡು, ಮುಂದೆ ನಡೆಯಬೇಕಾದ ಪ್ರಪಂಚಸೃಷ್ಟಿವಿಷಯದಲ್ಲಿ ಹೀಗೆಂದು ಪ್ರತ್ಯುತ್ತರವನ್ನು ಹೇಳುವನು.

"ಎಲೈ! ವತ್ಸ ಚತುರ್ಮುಖಾ! ನೀನು ಸೃಷ್ಟಿಕಾರ್ಯಕ್ಕಾಗಿ ಚಿಂತಿಸಬೇಕಾದುದಿಲ್ಲ! ನಿನ್ನ ವಿಷಾದವನ್ನು ಬಿಡು! ಮುಂದಿನ ಕಾರ್ಯದಲ್ಲಿ ಉತ್ಸಾಹಯುಕ್ತನಾಗಿರು! ನಿನಗೆ ಸೃಷ್ಟಿಕ್ರಮವನ್ನು ತಿಳಿಸುವುದಕ್ಕೆ ಬೇಕಾದ ಉಪಾಯಗಳನ್ನು ಇದಕ್ಕೆಮೊದಲೇ ನಾನು ಸಿದ್ಧಪಡಿಸಿರುವೆನು. ಆದರೆ" "ಇನ್ನೂ ನನಗೇಕೆ ಆ ಕಾರ್ಯದಲ್ಲಿ ತಿಳುವಳಿಕೆಯುಂಟಾಗಿಲ್ಲ" ವೆಂದು ಕೇಳುವೆಯಾ? ಅದಕ್ಕೊಂದುಪಾಯವುಂಟು. ನೀನು ತಿರುಗಿ ಮತ್ತೊಮ್ಮೆ ತಪೋರೂಪವಾದ ಕರ್ಮಯೋಗವನ್ನೂ, ವಿದ್ಯಾರೂಪವಾದ ಜ್ಞಾನಯೋಗವನ್ನೂ ಹಿಡಿದು, ನನ್ನಲ್ಲಿ ಭಕ್ತಿಯೋಗವನ್ನು ಅನುಷ್ಠಿಸುವನಾಗು! ಇವುಗಳನ್ನು ಅನುಷ್ಠಿಸುವೆಯಾದರೆ, ಇದಕ್ಕೆ ಮೊದಲೇ ನಿನ್ನಿಂದ ಕಲ್ಪಿತಗಳಾಗಿರುವ ಲೋಕಗಳೆಲ್ಲವೂ ನಿನ್ನ ಮನಸ್ಸಿಗೆ ಚೆನ್ನಾಗಿ ಗೋಚರಿಸುವುವು ಚರಾಚರಾತ್ಮಕಗಳಾದ ಪ್ರಪಂಚಗಳೆಲ್ಲವೂ ನಿನಗೆ ಗೋಚರಿಸಿದಮೇಲೆಯೂ, ನೀನು ನನ್ನಲ್ಲಿ ಅದೇವಿಧವಾದ ಭಕ್ತಿಶ್ರದ್ಧೆಯನ್ನು ಬಿಡದೆ ಭಾವಿಸುತಿದ್ದ ಪಕ್ಷದಲ್ಲಿ, ಆ ಸಮಸ್ತಚರಾಚರಗಳಲ್ಲಿಯೂ, ನಾನು ಅಂತರ್ಯಾಮಿಯಾಗಿರುವೆನೆಂಬುದೂ, ಆವೆಲ್ಲವೂ ನನ್ನಿಂದ ವ್ಯಾಪ್ತವಾಗಿ, ನನಗೆ ಶರೀರಭೂತವಾಗಿರುವುವೆಂದೂ ನಿನಗೆ ವ್ಯಕ್ತವಾಗುವುದು. ಹೀಗೆ ಸರ್ವಾತ್ಮಕವಾದ ಆ ಪರಬ್ರಹ್ಮಸ್ವರೂಪವು ನಿನಗೆ ಗೋಚರಿಸಿದೊಡನೆ, ನಿನ್ನ ಮನಸ್ಸಿನ ಮೋಹವೆಲ್ಲವೂ

ನೀಗುವುದು. ನಾನು ಸಮಸ್ತಭೂತಗಳಲ್ಲಿಯೂ ಸೇರಿದ್ದರೂ, ದಾರುವಿನ ಲ್ಲಿರುವ ಅಗ್ನಿಯಂತೆ, ಅವುಗಳ ಗುಣದೋಷಗಳಿಗೆ ಈಡಾಗದೆ, ನನ್ನ ವೀರ್ಯವ ನ್ನೂ ತೋರಿಸದೆ ಅಡಗಿರುವೆನು. ನಾನೇ ಅವುಗಳಿಗೆ ಧಾರಕನಾಗಿಯೂ, ನಿಯಾಮಕನಾಗಿಯೂ ಇರುವೆನು. ಈವಿಧದಲ್ಲಿ ಸರ್ವಾಂತರಾತ್ಮನಾದ ನನ್ನ ಸ್ವರೂಪವನ್ನು ತಿಳಿದಾಗಲೇ, ಜನರಿಗೆ ದುಃಖನಿವೃತ್ತಿಯುಂಟಾಗು ವುದು. ಪೃಥಿವಿ ಮೊದಲಾದ ಪಂಚಭೂತಗಳು, ಕಣ್ಣು, ಕಿವಿ, ಮೊದ ಲಾದ ಐದು ಜ್ಞಾನೇಂದ್ರಿಯಗಳು, ಕೈ, ಕಾಲು ಮೊದಲಾದ ಐದು ಕರ್ಮೇಂ ದ್ರಿಯಗಳು, ಅಂತಃಕರಣ, ಪೂರ್ವವಾಸನೆ, ಇವುಗಳೊಡನೆ ಜೀವನಿಗೆ ಸಂಬಂ ಧವಿದ್ದರೂ, ಆ ಜೀವಾತ್ಮನು ಅವುಗಳಿಗಿಂತಲೂ ವಿಲಕ್ಷಣನಾಗಿ, ಸತ್ಯಜ್ಞಾ ನಾನಂದಸ್ವರೂಪನಾದ ನನ್ನಿಂದ ಧರಿಸಲ್ಪಡುತ್ತಿರುವನೆಂಬ ತತ್ವವನ್ನು ಯಾವಾಗ ತಿಳಿಯುವರೋ, ಆಗಲೇ ಅವರು ಕರ್ಮಸಂಬಂಧವಿಲ್ಲದೆ, ತನಗೆ ತಾನೇ ಬೆಳಗುವ ಸ್ವಾರಾಜ್ಯವೆಂಬ ಉತ್ತಮಪದವಿಯನ್ನು ಹೊಂದುವರು. ಆದರೆ "ಸರ್ವಾತ್ಮಕನಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಇರುವ ಪರಮಾತ್ಮನನ್ನು ಉಪಾಸನೆಮಾಡುವುದೂ, ಆ ಪರಮಾತ್ಮನಿಗೆ ಶರೀರ ಭೂತವಾದ ಜೀವಾತ್ಮನನ್ನು ಉಪಾಸಿಸುವುದೂ,ಮೋಕ್ಷಸಾಧನವಾಗಿದ್ದಲ್ಲಿ, ಸೃಷ್ಟಿವ್ಯಾಪಾರದಲ್ಲಿಯೇ ಯಾವಾಗಲೂ ಇರಬೇಕಾದ ನನಗೆ, ಆ ಉಪಾ ಸನೆಯನ್ನು ನಡೆಸುವುದಕ್ಕೆ ಅವಕಾಶವೆಲ್ಲಿ?" ಎಂದು ನೀನು ಶಂಕಿಸಬಹುದು. ಹಾಗೆಣಿಸಬೇಡ! ಆಯಾಜೀವಗಳ ಕರ್ಮಾನುಸಾರವಾಗಿ, ವಿಚಿತ್ರವಾ ಗಿಯೂ, ದೇವತಿರ್ಯಙ್ಮನುಷ್ಯಾದಿರೂಪಗಳಾಗಿಯೂ ಇರುವ ಬಗೆಬಗೆಯ ಪ್ರಜೆಗಳನ್ನು ನೀನು ಸೃಷ್ಟಿಸುತಿದ್ದರೂ, ನಿನ್ನ ಮನಸ್ಸು ಮೋಹಾಕುಲ ವಾಗುವುದಿಲ್ಲ. ನೀನು ಆ ಕಾರ್ಯದಲ್ಲಿದ್ದರೂ, ನನ್ನ ಸ್ವರೂಪರೂಪಗುಣ ವಿಭೂತಿಗಳನ್ನು ಅನುಸಂಧಿಸುವುದರಲ್ಲಿಯೇ ನಿನ್ನ ಮನಸ್ಸು ಯಾವಾಗಲೂ ಆಸಕ್ತವಾಗಿರಲಿ! ಈವಿಧವಾಗಿ ನಾನು ನಿನಗೆ ಅನುಗ್ರಹಿಸಿರುವೆನು. ಓ ಬ್ರಹ್ಮಾ! ನೀನು ಈ ಸಮಸ್ತಪ್ರಪಂಚಕ್ಕಿಂತಲೂ ಮೊದಲು ನನ್ನಿಂದ ಸೃಜಿಸಲ್ಪಟ್ಟವನು. ನನ್ನ ಸ್ವರೂಪಾದಿಗಳನ್ನು ಯಥಾಸ್ಥಿತವಾಗಿ ತಿಳಿಸುವ ಸಮಸ್ತವೇದಗಳನ್ನೂ ಸಾಕ್ಷಾತ್ಕರಿಸಿದವನು. ಸಂಸಾರದಲ್ಲಿ ಬಂಧಿಸತಕ್ಕ

ಪಾಪಿಯಾದ ರಜೋಗುಣವೆಂಬುದು ನಿನ್ನನ್ನು ಮಾತ್ರ ಕಟ್ಟಿಡಲಾರದು. ಏಕೆಂದರೆ, ನನ್ನ ಅನುಗ್ರಹಬಲದಿಂದ ನಿನ್ನ ಮನಸ್ಸು ನನ್ನಲ್ಲಿಯೇ ನಿತ್ಯಾಸಕ್ತವಾಗುವುದರಿಂದ, ಸೃಷ್ಟಿಕಾರ್ಯದಲ್ಲಿದ್ದರೂ ನಿನ್ನ ಮನಸ್ಸು ಕೆಡದಂತೆ, ಬಲವತ್ತರವಾದ ಅನುಗ್ರಹವನ್ನು ನಿನ್ನಲ್ಲಿ ಕೋರಿಸಿರುವೆನು. ದೇಹವನ್ನೇ ಆತ್ಮವೆಂದು ಭ್ರಮಿಸಿ, ಅದರಲ್ಲಿ ಮೋಹವನ್ನಿಡತಕ್ಕ ಭಕ್ತಿಹೀನರು, ಎಷ್ಟೆಷ್ಟೇ ಪ್ರಯತ್ನಪಟ್ಟರೂ ನನ್ನ ಸ್ವರೂಪವು ಅವರಿಗೆ ಗೋಚರಿಸತಕ್ಕುದಲ್ಲ. ನೀನಾದರೋ ಈಗ ನನ್ನ ಸ್ವರೂಪಾದಿಗಳನ್ನು ಯಥಾಸ್ಥಿತವಾಗಿ ತಿಳಿದಿರುವೆ. ಆದರೆ ‘‘ನನ್ನ ಸ್ವರೂಪವು ನಿನಗೆ ಚೆನ್ನಾಗಿ ತಿಳಿಯಿತೆಂಬ ವಿಷಯದಲ್ಲಿ ನಿದರ್ಶನವೇನು?’’ ಎಂದು ನೀನು ಕೇಳಬಹುದು. ಇದಕ್ಕೆ ನಿನ್ನ ಮನಸ್ಸೇ ಸಾಕ್ಷಿಯು. ಈಗ ನೀನು ನನ್ನನ್ನು ಪ್ರಾಕೃತವಾದ ಪಂಚಭೂತಗಳಿಂದಲೂ, ಜ್ಞಾನೇಂದ್ರಿಯಕರ್ಮೇಂದ್ರಿಯಗಳಿಂದಲೂ, ಸತ್ವರಜಸ್ತಮೋಗುಣಗಳಿಂದಲೂ ಸಂಬಂಧವಿಲ್ಲದವನನ್ನಾಗಿ ನಿನ್ನ ಮನಸ್ಸಿನಲ್ಲಿಯೇ ನೀನು ತಿಳಿದಿರುವೆ. ಈ ನಿಶ್ಚಯಜ್ಞಾನವು ಮತ್ತೊಬ್ಬ ಮನುಷ್ಯನಿಗೆ ಹುಟ್ಟಲಾರದು. ಮತ್ತು ಓ ಚತುರ್ಮುಖಾ! ಇದಕ್ಕೆ ಮೊದಲು ನೀನು ಪದ್ಮನಾಳದಲ್ಲಿ ಪ್ರವೇಶಿಸಿ ನನ್ನನ್ನು ನೋಡಬೇಕೆಂದು ಎಷ್ಟೆಷ್ಟೋ ವಿಧದಿಂದ ಪ್ರಯತ್ನಿಸಿದೆ. ಯಾವ ರೂಪವನ್ನು ಕುರಿತು ನೀನು ಹುಡುಕುತಿದ್ದೆಯೋ, ಆ ರೂಪವು ನಿನ್ನ ಕಣ್ಣಿದಿರಿಗೆ ಬಂದು ನಿಂತಂತೆ ಈಗ ನಿನ್ನ ಮನಸ್ಸಿಗೆ ಗೋಚರಿಸಿತಷ್ಟೆ? ಈ ರೂಪವನ್ನು ನೋಡಲು ಮತ್ತೊಬ್ಬರು ಶಕ್ತರಲ್ಲ. ಓ ಬ್ರಹ್ಮಾ! ನೀನು ನಡೆಸಿದ ತಪಸ್ಸಿಗಾಗಿಯೂ, ಸ್ತೋತ್ರಕ್ಕಾಗಿಯೂ ನಾನು ಬಹಳ ಸಂತೋಷಪಟ್ಟೆನು! ನಿನ್ನಲ್ಲಿ ನನಗೆ ಪೂರ್ಣಾನುಗ್ರಹವುಂಟಾಯಿತು. ನನ್ನ ಗುಣಸ್ವರೂಪಾದಿಗಳನ್ನು ವಿವರಿಸುವಂತೆ ನೀನು ಸ್ತೋತ್ರಮಾಡಿದುದೂ, ನಿನಗೆ ತಪಸ್ಸಿನಲ್ಲಿ ನಿಷ್ಠೆಯುಂಟಾದುದೂ, ನನ್ನ ಅನುಗ್ರಹವೆಂದೇ ತಿಳಿ! ನೀನು ಲೋಕವನ್ನು ಸೃಷ್ಟಿಸಬೇಕೆಂಬ ಉದ್ದೇಶದಿಂದ ನನ್ನನ್ನು ಅನೇಕಕಲ್ಯಾಣಗುಣಗಣಪರಿಪೂರ್ಣನನ್ನಾಗಿಯೂ, ಹೇಯಗುಣರಹಿತನನ್ನಾಗಿಯೂ ಸ್ತೋತ್ರಮಾಡಿದುದಕ್ಕಾಗಿ ನಾನು ಬಹಳ ಸಂತೋಷಿಸಿದೆನು. ನಿನಗೆ ಮಂಗಳವಾಗಲಿ! ಓ,ಕಮಲಾಸನಾ! ನೀನು ಈಗ ಮಾಡಿದ ಸ್ತುತಿವಾಕ್ಯದಿಂ

ದಲೇ ನನ್ನನ್ನು ಪ್ರತಿದಿನವೂ ಭಜಿಸತಕ್ಕ ಮನುಷ್ಯರಿಗೆ ನಾನು ತಪ್ಪದೆ ಪ್ರಸನ್ನನಾಗುವೆನು. ಅವರ ಕೋರಿಕೆಗಳೆಲ್ಲವನ್ನೂ ಈಡೇರಿಸುವೆನು. ಅಂತವರಿಗೆ ಅನೇಕಯಾಗಗಳಿಂದಲೂ, ದಾನಧರ್ಮಗಳಿಂದಲೂ, ಯೋಗಾದಿಗಳಿಂದಲೂ ಲಭಿಸತಕ್ಕ ಫಲವನ್ನೂ ಅನುಗ್ರಹಿಸುವೆನು ಅದುದರಿಂದ ಎಲೈ ವಿಧಾತ್ರನೆ! ನೀನು ನನ್ನನ್ನು ಅನವರತವೂ ಸ್ಮರಿಸುತ್ತಿರಬೇಕು. ನಾನೇ ಜೀವಾತ್ಮಗಳೆಲ್ಲಕ್ಕೂ ಅಂತರಾತ್ಮನಾಗಿ, ಅವುಗಳನ್ನು ಧರಿಸತಕ್ಕವನು. ಪ್ರಿಯವಸ್ತುಗಳೆಲ್ಲಕ್ಕಿಂತಲೂ ನಾನು ಪ್ರಿಯತಮನು. ಈ ನನ್ನ ಸ್ವಲ್ಪಸಂಬಂಧಮಾತ್ರದಿಂದಲೇ ದೇಹವೇ ಮೊದಲಾದ ಇತರವಸ್ತುಗಳೆಲ್ಲವೂ ಪ್ರೀತಿವಿಷಯವಾಗುವುವು. ಆದುದರಿಂದ ನಿನಗಾಗಲಿ, ಇತರ ಜೀವನರಿಗಾಗಲಿ ನನ್ನಲ್ಲಿರಬೇಕಾದ ಭಕ್ತಿಯೇ ಮುಖ್ಯವು. ಲೋಕದಲ್ಲಿ ಜನ್ಮವನ್ನೆತ್ತಿದುದಕ್ಕೆ ಇದೇ ಫಲವು! ನನ್ನಿಂದುಪದೇಶಿಸಲ್ಪಟ್ಟ ಸರ್ವವೇದಸ್ವರೂಪವಾದ ಜ್ಞಾನದಿಂದ, ನೀನು ಈ ಜಗತ್ತನ್ನೂ, ಇದರೊಳಗಿನ ಪ್ರಜೆಗಳನ್ನೂ ಪೂರ್ವಕಲ್ಪದಲ್ಲಿದ್ದಂತೆಯೇ ಸೃಷ್ಟಿಸುವನಾಗು! ಹಿಂದಿನ ಕಲ್ಪಾಂತದಲ್ಲಿ ಯಾವ ಪ್ರಜೆಗಳನ್ನು ನಾನು ನನ್ನಲ್ಲಿಯೇ ಅಡಗಿಸಿಕೊಂಡಿರುವೆನೋ, ಆ ಪ್ರಜೆಗಳನ್ನು ಹಾಗೆಯೇ ಸೃಷ್ಟಿಸು!" ಎಂದನು. ಓ ವಿದುರಾ! ಪ್ರಕೃತಿಪುರುಷರಿಬ್ಬರಿಗೂ ನಿಯಾಮಕನಾಗಿ, ತನ್ನ ನಾಭಿಯಲ್ಲಿ ಜಗದ್ರೂಪವಾದ ಕಮಲವನ್ನು ಹೊರಡಿಸಿದ ಅನಿರುದ್ಧರೂಪಿಯಾದ ಅಭಿಗವಂತನು, ಈ ವಿಧವಾಗಿ ಚತುರ್ಮುಖನಿಗೆ ಮುಂದೆ ನಡೆಸಬೇಕಾದ ಸೃಷ್ಟಿಕ್ರಮವನ್ನು ತೋರಿಸಿ, ಆ ಬ್ರಹ್ಮನು ನೋಡುತ್ತಿದ್ದಹಾಗೆಯೇ ತನ್ನ ಸ್ವರೂಪವನ್ನು ಮರೆಸಿಕೊಂಡನು. ಇಲ್ಲಿಗೆ ಒಂಬತ್ತನೆಯ ಅಧ್ಯಾಯವು.

ಮೈತ್ರೇಯಮುನಿಯು ಪ್ರಾಕೃತ ವೈಕೃತಗಳೆಂಬ
ಸೃಷ್ಟಿ ಭೇದಗಳನ್ನು ವಿದುರನಿಗೆ ತಿಳಿಸಿದುದು

ತಿರುಗಿ ವಿದುರನು ಮೈತ್ರೇಯನನ್ನು ಕುರಿತು "ಎಲ್ಲೈ ಮಹಾತ್ಮನೆ! ಭಗವಂತನು ಬ್ರಹ್ಮದೇವನನ್ನು ಅನುಗ್ರಹಿಸಿ ಅಂತರ್ಜ್ಞಾನವನ್ನು ಹೊಂದಿದ ಮೇಲೆ, ಲೋಕಪಿತಾಮಹನಾಗಿಯೂ, ಜಿತೇಂದ್ರಿಯನಾಗಿಯೂ, ದೇವನು ಮನುಷ್ಯಾದಿಗಳಿಗೆ ಪ್ರಭುವಾಗಿಯೂ ಇರುವ ಆ ಚತುರ್ಮುಖನು, ತನ್ನ ದೇಹದಿಂದಲೂ, ಮನಸ್ಸಿನಿಂದಲೂ ಪ್ರಜೆಗಳನ್ನು ಎಷ್ಟುವಿಧವಾಗಿ ಸೃಷ್ಟಿಸಿದನು? ಎಲ್ಲೈ! ಪೂಜ್ಯನೆ! ಬ್ರಹ್ಮಜ್ಞಾನಿಗಳಲ್ಲಿ ಮೇಲೆನಿಸಿದ ನೀನು ಈ ಪ್ರಶ್ನಗಳೊಂದೊಂದಕ್ಕೂ ಉತ್ತರವನ್ನು ಹೇಳಿ ನನ್ನ ಸಂದೇಹಗಳನ್ನು ನೀಗಿಸಬೇಕು!" ಎಂದನು. ಹೀಗೆ! ವಿದುರನಿಂದ ಪ್ರಾರ್ಥಿತನಾದ ಮೈತ್ರೇಯನು, ಭಗವದ್ಭಕ್ತಿಸೂಚಕಗಳಾದ ಆತನ ಪ್ರಶ್ನೆಗಳಿಗಾಗಿ ಬಹಳ ಸಂತೋಷಗೊಂಡು, ತನ್ನ ನೆನಪಿನಲ್ಲಿದ್ದ ಆತನ ಒಂದೊಂದು ಪ್ರಶ್ನೆಕ್ಕೂ ಉತ್ತರವನ್ನು ಹೇಳತೊಡಗಿದನು. "ವಿದುರಾ! ಕೇಳು! ಉತ್ಪತ್ತಿವಿನಾಶರಹಿತನಾಗಿಯೂ, ಷಾಡ್ಗುಣ್ಯ ಪರಿಪೂರ್ಣನಾಗಿಯೂ ಇರುವ ಭಗವಂತನ ಆಜ್ಞೆಯಂತೆ, ಜತುರ್ಮುಖನು, ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸಿ, ನೂರು ದೇವವರ್ಷಗಳವರೆಗೆ ತಪಸ್ಸನ್ನು ನಡೆಸುತಿದ್ದನು. ಹೀಗೆ ನಡೆಸುತ್ತಬಂದ ಪರಮಾತ್ಮನ ಉಪಾಸನೆಯಿಂದಲೂ, ತಪೋರೂಪವಾದ ಕರ್ಮಯೋಗದಿಂದಲೂ, ಅವನಿಗೆ ಸೃಷ್ಟಿವಿಷಯವಾದ ತಿಳುವಳಿಕೆಯುಂಟಾಯಿತು. ಈ ಜ್ಞಾನಶಕ್ತಿಯುಂಟಾದಮೇಲೆ ಬ್ರಹ್ಮನು, ಸುತ್ತಲೂ ಕಣ್ಣಿಟ್ಟು ನೋಡುತ್ತ, ಆ ಪ್ರಳಯಕಾಲದಲ್ಲಿ ಮೇಲೆಮೇಲೆ ವೇಗಾತಿಶಯದಿಂದ ಗಾಳಿಯು ಬೀಸುತ್ತಿರುವುದನ್ನೂ, ಆ ಬಿರುಗಾಳಿಯ ವೇಗದಿಂದ, ತಾನು ಕುಳಿತಿದ್ದ ತಾವರೆ ಹೂವಿನೊಡನೆ, ಸುತ್ತಲೂ ಆವರಿಸಿ ಕೊಂಡಿದ್ದ ಪ್ರಳಯಜಲವು ಉಲ್ಲೋಲಕಲ್ಲೋಲವಾಗಿ ನಡುಗುತ್ತಿರುವುದನ್ನೂ ಕಂಡು, ಆ ನೀರು, ಗಾಳಿ, ಇವೆರಡನ್ನೂ ಪಾನಮಾಡಿ ಬಿಟ್ಟನು. ಮತ್ತು ತಾನು ಕುಳಿತಿದ್ದ ನಾಭಿಕಮಲವು ಆಕಾಶವನ್ನೆಲ್ಲಾ ಮುಚ್ಚುವಂತೆ ಮಹೋನ್ನತವಾಗಿ ಬೆಳೆದಿರುವುದನ್ನು ಕಂಡು, ತನ್ನಲ್ಲಿತಾನು "ಹಿಂದಿನ ಕಲ್ಪಾಂತದಲ್ಲಿ ಇದರೊಳಗೆ ಅಡಗಿರುವ

ಈ ಲೋಕಗಳೆಲ್ಲವನ್ನೂ ಈ ಕಮಲದಿಂದಲೇ ಸೃಷ್ಟಿಸಬೇಕಾಗಿರುವುದು"ಎಂ ದು ನಿಶ್ಚಯಿಸಿಕೊಂಡನು. ಹೀಗೆ ಬ್ರಹ್ಮನು ಮುಂದೆ ನಡೆಸಬೇಕಾದ ಸೃಷ್ಟಿ ಕಾರ್ಯಕ್ಕಾಗಿ ಭಗವಂತನಿಂದ ಪ್ರೇರಿಸಲ್ಪಟ್ಟು, ಆ ನಾಭಿಕಮಲದಮೇಲೆ ಕುಳಿತಿದ್ದಂತೆಯೇ, ಆ ಒಂದೇ ಕಮಲವನ್ನು ಅನೇಕವಿಧವಾಗಿ ವಿಭಾಗಿಸಿದುವು ದಕ್ಕೆ ತೊಡಗಿದನು. ಹದಿನಾಲ್ಕು ಲೋಕಗಳಾಗಿ ಹರಡಿಕೊಳ್ಳುವಷ್ಟು ವಿಶಾ ಲವಾದ ಆ ಕಮಲವನ್ನು, ಮೊದಲು, ಭೋಕ್ತೃವೆಂದೂ, ಭೋಗ್ಯವೆಂದೂ ಕರಣವೆಂದೂ, ಮೂರು ಮುಖ್ಯವಿಭಾಗದಿಂದ ಬೇಪ್ಪರ್ಡಿಸಿಬ್ಬನು. (ದೇವತೆ ಗಳು, ಮನುಷ್ಯರು, ಪಶು, ಪಕ್ಷಿ, ಮೃಗಾದಿಗಳಾದ ಜೀವರಾಶಿಗಳೆಲ್ಲವೂ ಭೋಕ್ತೃವರ್ಗವೆನಿಸಿದುವು. ಶಬ್ದ, ರೂಪ, ರಸ, ಗಂಧಾದಿವಿಷಯಗಳೆಲ್ಲವೂ ಭೋಗ್ಯವರ್ಗಗಳಲ್ಲಿ ಸೇರಿದುವು.ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂಬವು ಭೋಗೋಪಕರಣಗಳೆಂಬ ಮೂರನೆಯ ವರ್ಗಕ್ಕೆ ಸೇರಿದುವು.) ಹೀಗೆ ಭೋಕ್ತೃಗಳೆನಿಸಿಕೊಂಡ ಜೀವರಾಶಿಗಳು, ಭೋಗಾರ್ಹಗಳೆನಿಸಿಕೊಂಡ ಶಬ್ದಾದಿ ವಿಷಯಗಳು, ಅವುಗಳನ್ನು ಅನುಭವಿಸುವುದಕ್ಕೆ ಸಾಧನಗಳೆನಿಸಿಕೊಂಡ ಜ್ಞಾನಕರ್ಮೇಂದ್ರಿಯಗಳು, ಭೂಲೋಕಸ್ವರ್ಗಲೋಕಗಳೇ ಮೊದಲಾದ ಭೋಗಸ್ಥಾನಗಳು, ಎಂಬೀ ಪ್ರಪಂಚವೆಲ್ಲವೂ ಆ ನಾಭಿಕಮಲವೊಂದರಲ್ಲಿಯೇ ಅಡ ಗಿದ್ದುದರಿಂದ, ಲೋಕದ ಸ್ಥಿತಿಯೆಲ್ಲವೂ ಇಷ್ಟುಮಾತ್ರದಲ್ಲಿಯೇ ಸೇರಿ ದ್ದಿತು. ಇದರಿಂದ ಆ ನಾಭಿಕಮಲವೊಂದೇ ಪ್ರಪಂಚಸ್ವರೂಪವಾಗಿದ್ದಿತು. ವಿದುರಾ! ಆದರೆ"ಬ್ರಹ್ಮದೇವನೂ, ಅವನ ಸ್ಥಾನವೂ ಕಾರ್ಯವರ್ಗದಲ್ಲಿಯೇ ಸೇರಿರುವಾಗ, ಇತರಕಾರ್ಯವರ್ಗಗಳಂತೆ ಅವೆರಡೂ ಪ್ರತಿಕಲ್ಪದ ಸೃಷ್ಟಿಗೆ ಒಳಪಡದಿರುವುದೇಕೆ?" ಎಂದು ನೀನು ಶಂಕಿಸಬಹುದು. ಲೋಕದಲ್ಲಿ ಯಾವ ಫಲಾಪೇಕ್ಷೆಯೂ ಇಲ್ಲದೆ ನಡೆಸತಕ್ಕ ಧರ್ಮಗಳಿಗೆ ಬ್ರಹ್ಮಪಟ್ಟವೂ, ಬ್ರಹ್ಮಲೋಕಪ್ರಾಪ್ತಿಯೂ ಫಲವೆಂದು ವಿಧಿಸಲ್ಪಟ್ಟಿದೆ ಇತರ ಲೋಕಗ ಳೆಲ್ಲವೂ ಆಯಾ ಫಲಾಪೇಕ್ಷೆಯಿಂದ ಮಾಡತಕ್ಕ ಕಾಮ್ಯಕರ್ಮಗಳಿಗೆ ಫಲ ರೂಪವಾಗಿರುವುವು ಆದುದರಿಂದಲೇ ಅವುಗಳಿಗೆ ಒಂದೊಂದು ಕಲ್ಪದಲ್ಲಿ ಯೂ ಸೃಷ್ಟಿಪ್ರಳಯಗಳುಂಟು. ನಿಷ್ಕಾಮರಿಗೆ ಲಭಿಸಬಹುದಾದ ಬ್ರಹ್ಮ ಪಟ್ಟಕ್ಕೂ, ಬ್ರಹ್ಮಲೋಕಕ್ಕೂ, ಆ ವಿಧವಾಗಿ ಪ್ರತಿಕಲ್ಪದಲ್ಲಿಯೂ ಸೃಷ್ಟಿ

ಲಯಗಳಿಲ್ಲ. ಆ ಲೋಕವು,ಅದರ ಕೆಳಗಿನ ಬೇರೆ ಎಲ್ಲಾ ಲೋಕಗಳಿಗಿಂತಲೂ ಹೆಚ್ಚಾಗಿ ಎರಡು ಪರಾರ್ಧಕಾಲಗಳವರೆಗೆ ನಾಶವಿಲ್ಲದೆ ಸ್ಥಿರವಾಗಿರುವುದು. ಆ ಸತ್ಯಲೋಕಾದಿಯಾಗಿ ಮೇಲಿನ ಲೋಕಗಳೆಲ್ಲವೂ ಕಾಮ್ಯಕರ್ಮಗಳಿಂದ ಲಭಿಸತಕ್ಕವುಗಳಲ್ಲವಾದುದರಿಂದ, ಅವುಗಳಿಗೆ ಕಲ್ಪಕಲ್ಪಕ್ಕೂ ಸೃಷ್ಟಿಪ್ರಳಯಗಳಿಲ್ಲ. ಆದರೆ ‘‘ಫಲಾಪೇಕ್ಷೆಯಿಲ್ಲದೆ ಮಾಡಿದ ಕರ್ಮಗಳಿಗೆ ಮೋಕ್ಷವೊಂದೇ ಫಲವಲ್ಲವೆ?’’ ಎಂದು ಕೇಳುವೆಯಾ ! ಅದೇನೋ ವಾಸ್ತವವು ! ಹಾಗಿದ್ದರೂ ಫಲಾಪೇಕ್ಷೆಯಿಲ್ಲದೆ ಧರ್ಮಾನುಷ್ಠಾನವನ್ನು ನಡೆಸತಕ್ಕವರು, ಮೊದಲು ಬ್ರಹ್ಮಲೋಕವನ್ನು ಸೇರಿ, ಅಲ್ಲಿ ಕೆಲವುಕಾಲವಿದ್ದು, ಆಮೇಲೆ ಅಯಾ ಕಾಲದ ಬ್ರಹ್ಮನೊಡನೆ ಸೇರಿಯೇ ಮೋಕ್ಷವನ್ನು ಹೊಂದುವರು. ಆದುದರಿಂದ ಸೃಷ್ಟಿಪ್ರಳಯಗಳ ವಿಷಯದಲ್ಲಿ ಬ್ರಹ್ಮಲೋಕಕ್ಕೂ, ಇತರ ಲೋಕಗಳಿಗೂ ತಾರತಮ್ಯವುಂಟು” ಎಂದನು. ಇದನ್ನು ಕೇಳಿ ವಿದುರನು ತಿರುಗಿ ಮೈತ್ರೇಯನನ್ನು ಕುರಿತು ‘‘ಓ ಬ್ರಹ್ಮರ್ಷೀ! ಅದು ಹಾಗಿರಲಿ ! ಶ್ರೀಮಹಾವಿಷ್ಣುವಿಗೆ ಕಾಲವನ್ನೂ ಒಂದು ಶರೀರವನ್ನಾಗಿ ಹೇಳಿದೆಯಷ್ಟೆ? ಇದಲ್ಲದೆ ನೀನು ಹಿಂದೆ ಹೇಳಿದ ವಿಷಯಗಳಿಂದ ಆ ಕಾಲವೆಂಬ ವಸ್ತುವು ಪ್ರಳಯದಲ್ಲಿಯೂ ಇದ್ದುದಾಗಿ ಸೂಚಿತವಾಗುವುದು. ಇದರಿಂದ ಕಾಲವು ನಿತ್ಯವೆಂದು ಸಿದ್ಧವಾಗುವುದು ಆದರೆ ‘‘ಅದು ಸೃಷ್ಟಿಗೆ ಒಳಪಟ್ಟಿರುವುದೇ, ಇಲ್ಲವೇ” ಎಂಬ ಸಂದೇಹವು ನನ್ನನ್ನು ಬಾಧಿಸುತ್ತಿರುವುದು. ಅದು ನಿತ್ಯವಾಗಿದ್ದಪಕ್ಷದಲ್ಲಿ ಅದರ ಸೂಕ್ಷ್ಮರೂಪವೆಂತದು? ಅದರ ಸ್ಥೂಲರೂಪವು ಯಾವವಿಧವಾಗಿರುವುದು? ಆ ಕಾಲಸ್ವರೂಪವನ್ನು ನನಗೆ ಯಥಾಸ್ಥಿತವಾಗಿ ತಿಳಿಸಬೇಕು. ಎಂದನು. ಅದಕ್ಕಾಮೈತ್ರೇಯನು ‘‘ವತ್ಸ ವಿದುರಾ! ಕೇಳು ! ಕಾಲವೆಂಬುದು ಕಣ್ಣಿಗೆ ಕಾಣತಕ್ಕ ವಸ್ತುವಲ್ಲ. ಅದರ ಕಾರ್ಯದಿಂದಲೇ ಅದನ್ನು ಊಹಿಸಿ ತಿಳಿಯಬೇಕಾದುದರಿಂದ, ಮೊದಲು ಆ ಕಾಲದ ಪ್ರೇರಣೆಯಿಂದ ನಡೆಯುವ ಪ್ರಪಂಚವ್ಯಾಪಾರವನ್ನು ತಿಳಿಸುವೆನು ಕೇಳು ಅದಕ್ಕೆಮೇಲೆ ನೀನು ಕಾಲಸ್ವರೂಪವನ್ನು ತಿಳಿಯಬಹುದು. ಪರಮಪುರುಷನು, ಮೊದಲು ಸತ್ವಾದಿಗುಣಗಳ ಬದಲಾವಣೆಗೆ ಸ್ಥಾನವಾದ ಸೂಕ್ಷ್ಮಪ್ರಕೃತಿಯನ್ನೇ ಶರೀರವಾಗಿ ಹೊಂದಿದ್ದಾಗ, ಆ ಪ್ರಕೃತಿಯವಿಕಾರಗಳಾದ ಭೂಮಿ

ಮೊದಲಾದ ತತ್ವಗಳೊಂದೂ ಕಾಣದಂತಿದ್ದುವು.ಭಗವಂತನು ತನಗೆ ತಾನೇ ಕಾರಣನೇಹೊರತು,ಅವನಿಗೆ ಬೇರೊಂದುಕಾರಣವಸ್ತುವಿಲ್ಲ. ಇದಕ್ಕೆಪ್ರಮಾಣವೇನೆಂದು ಕೇಳುವೆಯಾ? ಅವನಿಗಿಂತಲೂ ಈಚೆಗೆ ಹುಟ್ಟಿದ ಭೂಮಿ ಮೊದಲಾದ ತತ್ವಗಳೆಲ್ಲವೂ,ಪ್ರಳಯಕಾಲದಲ್ಲಿ ತಮತಮಗೆ ಕಾರಣಗಳಾದ ಹಿಂದಿನ ವಸ್ತುಗಳಲ್ಲಿ ಮರೆಸಿಕೊಳ್ಳುತ್ತ ಬರುವುವು.ಇದೇ ಪ್ರಳಯಕ್ರಮವು. ಈಶ್ವರನಿಗೆ ಮೊದಲು ಬೇರೊಂದು ಕಾರಣವಸ್ತುವಿದ್ದಪಕ್ಷದಲ್ಲಿ, ಅವನಿಗೂ ಅದೇವಿಧವಾದ ಪ್ರಳಯವುಂಟಾಗಿ, ಅವನೂ ಮರೆಸಿಕೊಳ್ಳಬೇಕಲ್ಲವೆ ? ಹೀಗೆ ಯಾವ ಶ್ರುತಿಗಳೂ ಹೇಳುವುದಿಲ್ಲ. ಆದುದರಿಂದ ಈಶ್ವರನು ತನಗೆತಾನೇ ಕಾರಣನು. ಇಂತಹ ಪರಮಪುರುಷನು ಪ್ರಪಂಚವ್ಯಾಪಾರದಿಂದ ತಾನು ವಿಶ್ರಾಂತಿಸಬೇಕೆಂದುದ್ದೇಶಿದಾಗ,ಅದಕ್ಕೆಬೇಕಾದ ಕ್ರೀಡಾಸಾಮಗ್ರಿಗಳನ್ನು ಒದಗಿಸಿಕೊಳ್ಳುವುದಕ್ಕಾಗಿ, ತನಗೆ ಶರೀರವಾಗಿದ್ದ ಪ್ರಕೃತಿಯೊಡನೆ ತನ್ನನ್ನೇ ತಾನು ಉಪಾದಾನಕಾರಣ (ನಿರ್ಮಾಣಸಾಮಗ್ರಿ) ವಾಗಿಟ್ಟುಕೊಂಡು, ಪ್ರಪಂಚರೂಪವಾಗಿ ತನ್ನನ್ನೇ ಬದಲಾಯಿಸಿಕೊಳ್ಳುವನು. ಸರ್ವನಿಯಾಮಕನಾದ ಈಶ್ವರನು, ತನ್ನ ನಿಜಸ್ವರೂಪದಿಂದ ತಾನೇ ನಿಮಿತ್ತಕಾರಣನಾಗಿ (ಕರ್ತನಾಗಿ) ನಿಂತು, ಕಾಲ, ಪ್ರಕೃತಿ, ಪುರುಷರೆಂಬ ಈ ಮೂವರೊಡನೆ ಸೇರಿ, ತಾನೇ ಉಪಾದಾನಕಾರಣವಾಗಿಯೂ ಇದ್ದು, ಈ ಪ್ರಪಂಚವನ್ನು ಸೃಷ್ಟಿಸುವನು. ಆದುದರಿಂದ ಈ ಸಮಸ್ತಪ್ರಪಂಚವೂ ಈಶ್ವರನಲ್ಲದೆ ಬೇರೆಯಲ್ಲ.ಈ ಜಗತ್ತಿಗೆ ಅವನೇ ಕಾರಣವಸ್ತುವಾಗಿರುವನು. ಕಾರ್ಯರೂಪದಿಂದಲೂ ಅವನೇ ಕಾಣುವನು ಆದರೆ,"ಅಭಗವಂತನೊಬ್ಬನೇ ಕಾರ್ಯಕಾರಣಗಳೆರಡಾಗಿಯೂ ನಿಲ್ಲುವುದಕ್ಕೆ ಹೇಗೆ ಸಾಧ್ಯವು?" ಎಂದು ಕೇಳುವೆಯಾ? ಅದಕ್ಕೂ ಸಮಾಧಾನವನ್ನು ಹೇಳುವೆನು ಕೇಳು. ಚೇತನಾಚೇತನಗಳನ್ನು ಶರೀರವಾಗಿಉಳ್ಳ ಭಗವಂತನು, ತಾನೊಬ್ಬನೇ ಆಗಿದ್ದರೂ, ಒಂದವಸ್ಥೆಯಲ್ಲಿ ತಾನು ಕಾರಣವಾಗಿಯೂ, ಮತ್ತೊಂದವಸ್ಥೆಯಲ್ಲಿ ಕಾರ್ಯವಾಗಿಯೂ ಆಗಬಹುದು. ಮಣ್ಣೆಂಬ ಒಂದೇವಸ್ತುವು, ಒಂದುಸ್ಥಿತಿಯಲ್ಲಿ ಉಂಡೆಯಾಗಿದ್ದು ಮತ್ತೊಂದು ಸ್ಥಿತಿಯಲ್ಲಿ ಗಡಿಗೆಯಾಗಿ ಮಾರ್ಪಡುವುದನ್ನು ನಾವು ನೋಡುವೆವಲ್ಲವೆ?ಅದರಂತೆಯೇ ಚೇತನಾಚೇತನವಿಶಿಷ್ಟನಾದ ಭಗವಂತನಿಗೆ

ಸ್ಥೂಲಾವಸ್ಥೆಯೆಂದೂ, ಸೂಕ್ಷ್ಮಾವಸ್ಥೆಯೆಂದೂ, ಅವಸ್ಥಾಭೇದಗಳಿರುವು ದರಿಂದ,ಅದನ್ನನುಸರಿಸಿ,ಅವನುಸೂಕ್ಷ್ಮಪ್ರಕೃತಿಯೆಂದಕೂಡಿರುವಾಗ ಕಾರ ಣನಾಗಿಯೂ, ಸ್ಥೂಲಪ್ರಕೃತಿಯೊಡಗೂಡಿ ಕಾರ್ಯವಾಗಿಯೂ ನಿಲ್ಲುವನು. ಇದರಿಂದ ಭಗವಂತನಿಗೆ ಕಾರ್ಯಕಾರಣತ್ವಗಳೆರಡೂ ಉಪಪನ್ನವಾಗುವುವು ಈಶ್ವರನಿಗೆ ಸಾಕ್ಷಾತ್ತಾಗಿ ಸ್ಥೂಲಸೂಕ್ಷ್ಮಾವಸ್ಥೆಗಳೆಂಬ ಭೇದವಿಲ್ಲದಿದ್ದರೂ ಆ ಸ್ಥೂಲಸೂಕ್ಷ್ಮಪ್ರಕೃತಿಯನ್ನು ಶರೀರವಾಗಿ ಹೊಂದಿದಾಗ, ಅವನಿಗೂ, ಅದೇ ಅವಸ್ಥಾಭೇಧವನ್ನು ಗ್ರಹಿಸಬಹುದು. ವಿಷ್ಣುವಾ! ಈ ಪ್ರತ್ಯಕ್ಷಪ್ರಪಂ ಚರೂಪವಾಗಿ ಕಾಣುವುದೇ ಪ್ರಕೃತಿಯ ಸ್ಥೂಲಾವಸ್ಥೆಯೆನಿಸುವುದು.ಇದಕ್ಕೆ ನಾಮರೂಪಗಳಲ್ಲಿ ಭೇದಗಳುಂಟು. ಪ್ರಳಯಕಾಲದಲ್ಲಿ ಈ ನಾಮ ರೂಪಭೇದಗಳೆಂದೂ ಇಲ್ಲದೆ ಈಶ್ವರನಲ್ಲಿ ಮರೆಸಿಕೊಳ್ಳುವುದೇ ಪ್ರಕೃತಿ ಯ ಸೂಕ್ಷ್ಮಾವಸ್ಥೆಯು. ಈ ಕಾರಣದಿಂದಲೇ ಇದನ್ನು ಅವ್ಯಕ್ತವೆಂಬಹೆಸರಿ ನಿಂದಲೂ ಕರೆಯುವರು.ಇದೇ ಸೃಷ್ಟಿಗೆ ಮೊದಲಿರತಕ್ಕ ಅವಸ್ಥೆಯು. ಈ ಪ್ರಕೃತಿಯು ಸೂಕ್ಷ್ಮದಶೆಯಲ್ಲಿದ್ದರೂ, ಸ್ಥೂಲದಶೆಯಲ್ಲಿದ್ದರೂ ಭಗ ವಂತನಿಗೆ ಶರೀರವಾಗಿಯೇ ಇರುವುದು. ಇದು ಕಾರ್ಯದಶೆಯಲ್ಲಿ ಪ್ರಪಂ ಚರೂಪವಾಗಿ ಹರಡಿ ಕಣ್ಣಿಗೆ ಗೋಚರಿಸುತಿದ್ದು, ಪ್ರಳಯಕಾಲದಲ್ಲಿ ಅವ್ಯಕ್ತಾವಸ್ಥೆಯನ್ನು ಹೊಂದುವುದು. ಅದುದರಿಂದ ಪ್ರಕೃತಿಗೆ ಈ ಕಾ ರ್ಯಕಾರಣಾವಸ್ಥೆಗಳೆಂಬ ಭೇದವುಂಟಾಗುವುದಕ್ಕೆ ಕಾಲವೇ ಕಾರಣವು. ಸೃಷ್ಟಿ ಮೊದಲಾದ ಯಾವ ಕಾರ್ಯವೂ ಈ ಕಾಲವ್ಯವಸ್ಥೆಯನ್ನು ಬಿಟ್ಟು ನ ಡೆಯಲಾರದು.ಆದುದರಿಂದ ಆ ಕಾಲವೆಂಬುದೂ ಈಶ್ವರನಂತೆ ಮಹಾಮಹಿ ಮೆಯನ್ನು ಹೊಂದಿರುವುದರಿಂದಲೂ, ಆ ಈಶ್ವರನಿಗೆ ಶರೀರಭೂತವಾಗಿ,ಅವ ನ ನಿಯಮುಕ್ಕೊಳಪಟ್ಟಿರುವುದರಿಂದಲೂ, ಆ ಕಾಲವನ್ನೂ ಈಶ್ವರಸ್ವರೂ ಪವೆಂದೇ ಹೇಳುವೆವು. ಅಂತಹ ಕಾಲಕ್ಕೆ ಅವ್ಯಕ್ತವೆನಿಸಿದ ಪ್ರಕೃತಿಯೂ ಕೂಡ ಒಳಪಟ್ಟೇ ಇರುವುದು. ಮುಖ್ಯವಾಗಿ ಸೃಷ್ಟಿದಶೆಯಲ್ಲಿಯಾಗಲಿ, ಸಂ ಹಾರದಶೆಯಲ್ಲಿಯಾಗಲಿ,ಇವುಗಳ ನಡುವೆ ಕಾರ್ಯದಶೆಯಲ್ಲಿಯಾಗಲಿ,ಸೃಷ್ಟಿ ಗೆ ಮೊದಲು ಸೂಕ್ಷ್ಮಾವಸ್ಥೆಯಲ್ಲಿಯಾಗಲಿ,ಕಾಲವೆಂಬುದು ಪ್ರಕೃತಿಯನ್ನು ಎಡೆಬಿಡದೆ ಅನುಸರಿಸಿ ಬಂದು,ತನ್ನ ನಿಯಮಕ್ಕನುಸಾರವಾಗಿ ಆಯಾ ಅವಸ್ಥಾ

ಭೇದಗಳನ್ನುಂಟುಮಾಡುತ್ತಿರುವುದು. ಆದರೆ ''ಕಾಲದಿಂದುಂಟಾಗುವ ಈಬಗೆಯವಿಕಾರಗಳು,ಯಾವಾಗಲೂ ವಿಕಾರವನ್ನು ಹೊಂದುವಸ್ವಭಾವವುಳ್ಳಪ್ರಕೃತಿಗೆಮಾತ್ರ ಬಂದೊದಗಬೇಕೇಹೊರತು, ಆ ಸ್ವಭಾವವಿಲ್ಲದೆ ಒಂದೇಸ್ಥಿತಿಯಲ್ಲಿರತಕ್ಕ ಜೀವಾತ್ಮನಿಗಾಗಲಿ, ಪರಮಾತ್ಮನಿಗಾಗಲಿ ಸಂಭವಿಸಲಾರದಲ್ಲವೆ? ಹೀಗಿರುವಾಗ ಪ್ರಳಯದಶೆಯಲ್ಲಿ ಚಿದಚಿತ್ತುಗಳೊಡಗೂಡಿದ ಪರಬ್ರಹ್ಮಕ್ಕೂ ಈ ಕಾಲಪರಿಚ್ಛೇದವಿದ್ದಪಕ್ಷದಲ್ಲಿ ಅವನಿಗೆಮಾತ್ರ ನಿತ್ಯತ್ವವೆಲ್ಲಿ?" ಎಂದು ನೀನು ಶಂಕಿಸಬಹುದು. ಅದು ಹಾಗಲ್ಲ ! ಒಂದೊಂದು ಸೃಷ್ಟಿಪ್ರಳಯಗಳಲ್ಲಿಯೂ, ಸ್ಥೂಲಸೂಕ್ಷ್ಮದಶೆಯಲ್ಲಿರುವ ಚೇತನಾಚೇತನಗಳನ್ನು ಶರೀರವಾಗಿ ಹೊಂದಿದ ಈಶ್ವರನಿಗೆ ಕಾಲಪರಿಚ್ಛೇದವುಂಟೆಂಬುದೇನೋ ನಿಜವು. ಹಾಗಿದ್ದರೂ ಈ ಕಾಲನಿಯಮವು, ಈಶ್ವರನ ಬೇರೆಬೇರೆ ಅವಸ್ಥೆಗಳಿಗುಂಟೇಹೊರತು ಈಶ್ವರನಿಗಿಲ್ಲ! ಈಶ್ವರಸ್ವರೂಪವೇನೋ ನಿತ್ಯವಾದುದು.ಆ ಈಶ್ವರನಿಗೆ ಪ್ರಕೃತಿಯೆ ಮೂಲಕವಾಗಿಯೇ ಸ್ಥೂಲಸೂಕ್ಷ್ಮಾವಸ್ಥೆಗಳೆಂಬ ಭೇದಗಳೂ ಏರ್ಪಡುವುವು. ಸ್ವರೂಪದಿಂದಲ್ಲ. ಆದುದರಿಂದ ಪ್ರಕೃತಿಗೆ ಸಂಬಂಧಿಸಿರುವ ಸ್ಥೂಲಸೂಕ್ಷ್ಮಾವಸ್ಥೆಗಳೆರಡೂ, ಭಗವಂತನ ಸಂಕಲ್ಪರೂಪವಾದ ಕಾಲದಿಂದಲೇ ಉಂಟಾಗುವುವು. ಆ ಪ್ರಕೃತಿಸಂಬಂಧದಿಂದಲೇ ಜೀವಾತ್ಮಪರಮಾತ್ಮರಿಬ್ಬರಿಗೂ ಕಾಲಪರಿಚ್ಛೇದವುಂಟಾಗಬೇಕಲ್ಲದೆ ಸ್ವರೂಪದಿಂದಲ್ಲ. ಇದರಿಂದ ಆ ಪರಮಾತ್ಮನ ಮತ್ತು ಚೇತನರ ನಿತ್ಯತ್ವಕ್ಕೆ ಹಾನಿಯೇನೂ ಬಾರದು! ವಿದುರಾ! ಈ ಮೇಲೆ ಹೇಳಿದ ವಿಷಯಗಳಿಂದ ನಿನಗೆ ಸಮಸ್ತವಸ್ತುಗಳ ಸ್ಥಿತಿಗತಿಗಳಿಗೂ ಕಾರಣವಾದ ಕಾಲದ ಸ್ವರೂಪವನ್ನೂ, ಆ ಕಾಲಶಕ್ತಿಯಿಂದ ಪ್ರೇರಿಸಲ್ಪಡುವ ವಸ್ತುಗಳ ಸೃಷ್ಟಿಕಾರ್ಯವನ್ನೂ ತಿಳಿಸಿದಂತಾಯಿತು.ಇನ್ನು ಮುಂದೆ ಸೃಷ್ಟಿಯಲ್ಲಿಯೂಪ್ರಳಯದಲ್ಲಿಯೂ ಇರುವ ಭೇದಗಳನ್ನು ತಿಳಿಸುವೆನು ಕೇಳು! ಮೇಲೆ ಹೇಳಿದಂತೆ ಕಾಲಾಧೀನವಾಗಿ ನಡೆಯುವ ವಸ್ತುಗಳ ಸೃಷ್ಟಿಯು,ಪ್ರಾಕೃತವೆಂದೂ,'ವೈಕೃತವೆಂದೂ ಎರಡುಬಗೆಯ ಮುಖ್ಯಭೇದವುಳ್ಳದಾಗಿ, ಅದರಮೇಲೆ ಒಂಬತ್ತುಬಗೆಯ ಒಳವಿಭಾಗಗಳನ್ನು ಹೊಂದಿರುವುದು.ಇವುಗಳ ಪ್ರಳಯವೂಕೂಡ, ಕಾಲದ್ರವ್ಯಗುಣಗಳೆಂಬ ಮೂರುಕಾರಣಗಳಿಂದ ಮೂರುವಿಧವಾಗಿ

ಬೇರ್ಪಡುವುದು. ''ಇದಕ್ಕೆ ಈ ಕಾಲದಲ್ಲಿಯೇ ನಾಶ"ವೆಂದು ಕಾಲಪರಿಮಾಣದಿಂದ ಏರ್ಪಟ್ಟುದೊಂದು. ಇದನ್ನೇ ನಿತ್ಯಪ್ರಳಯವೆಂದು ಹೇಳುವರು. ಪ್ರಳಯಕಾಲಾಗ್ನಿ ಮೊದಲಾದುವುಗಳಿಂದಾಗುವ ನಾಶದಂತೆ, ಒಂದರಿಂದ ಮತ್ತೊಂದಕ್ಕೆ ಸಂಭವಿಸುವ ನಾಶವು ಪ್ರವ್ಯಪ್ರಳಯವೆನಿಸುವುದು. ಇದಕ್ಕೆ ನೈಮಿತ್ತಿಕವೆಂದೂ ಹೆಸರು. ಸತ್ತರಜಸ್ತಮೋಗುಣಗಳು ಹೆಚ್ಚು ಕಡಿಮೆಯಿಲ್ಲದೆ ಸಮಸ್ಥಿತಿಯಲ್ಲಿರುವಾಗ ಗುಣಪ್ರಳಯವೆನಿಸುವುದು. ಇದಕ್ಕೆ ಪ್ರಾಕೃತಪ್ರಳಯವೆಂದೂ ಹೆಸರು. ಇನ್ನು ನವವಿಧಸೃಷ್ಟಿಗಳನ್ನು ತಿಳಿಸುವೆನು ಕೇಳು. ಮೊದಲು ಪರಮಪುರುಷನಿಗೆ ಸೃಷ್ಟಿಸಬೇಕೆಂಬ ಸಂಕಲ್ಪವು ಹುಟ್ಟಿದೊಡನೆ, ಅವನು ತನಗೆ ಶರೀರವಾದ ಪ್ರಕೃತಿಪುರುಷರಿಬ್ಬರನ್ನೂ ಸೃಷ್ಟಿಕಾರ್ಯದಲ್ಲಿ ಪ್ರೇರಿಸುವನು. ಈ ಪ್ರೇರಣೆಯೆಂಬಾದಕೂಡಲೆ, ಆ ಪರಮಪುರುಷನಿಂದ ಮಹತ್ತೆಂಬ ತತ್ವವು ಹುಟ್ಟುವುದು ಇದಕ್ಕೆವೊದಲು ಪ್ರಕೃತಿಯಲ್ಲಿ ಸತ್ವರಜಸ್ತಮಸ್ಸುಗಳೆಂಬ ಮೂರುಗುಣಗಳೂ ಹೆಚ್ಚುಕಡಿಮೆಯಿಲ್ಲದೆ ಸಮಸ್ಥಿತಿಯಲ್ಲಿದ್ದು, ಭಗವಂತನಿಗೆ ಈ ಸೃಷ್ಟಿಸಂಕಲ್ಪವುಂಟಾದೊಡನೆ, ಆ ಹಿಂದಿನ ಸಮಸ್ಥಿತಿಯನ್ನು ಬಿಟ್ಟು, ವೈಷಮ್ಯವನ್ನು ಹೊಂದುವುವು. ಈ ಗುಣಗಳ ಹೆಚ್ಚುಕಡಿಮೆಯಿಂದುಂಟಾದ ಪ್ರಕೃತಿಯ ಬದಲಾವಣೆಯೇ ಮಹತ್ತತ್ವವೆನಿಸುವುದು. ಇದೇ ಸೃಷ್ಟಿಗಳಲ್ಲಿ ಮೊದಲನೆಯದು. ಆ ಮಹತ್ತತ್ವವು ಅಹಂಕಾರರೂಪಕ್ಕೆ ಮಾರ್ಪಡುವುದು. ಇದೇ ಸೃಷ್ಟಿಯಲ್ಲಿ ಎರಡನೆಯದು. ಈ ಅಹಂಕಾರದಿಂದ ಭೂಮಿ ಮೊದಲಾದ ಪಂಚಭೂತಗಳೂ, ಶಬ್ದ ಮೊದಲಾದ ಐದುತನ್ಮಾತ್ರಗಳೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ, ಮನಸ್ಸೂ ಹುಟ್ಟುವುವು. ಇವುಗಳಲ್ಲಿ ಪಂಚಭೂತಗಳ ಸೃಷ್ಟಿಯು ಭೂತಸೃಷ್ಟಿಯೆನಿಸುವುದು. ಇದೇ ಮೂರನೆಯ ಸೃಷ್ಟಿಯು. ಈ ಭೂತಸೃಷ್ಟಿಯಲ್ಲಿ ಮೊದಲು ಪಂಚತನ್ಮಾತ್ರಗಳು ಹುಟ್ಟಿ, ಆ ಮೇಲೆ ಅವುಗಳಿಂದ ಪಂಚಭೂತಗಳು ಹುಟ್ಟಿದುದರಿಂದ, ಇದರಲ್ಲಿ ತನ್ಮಾತ್ರಸೃಷ್ಟಿಯೆಂದೂ, ಪ್ರವ್ಯಸೃಷ್ಟಿಯೆಂದೂ ಎರಡು ಒಳಭೇದಗಳುಂಟು. ಪೃಥಿವಿ ಮೊದಲಾದ ಪಂಚಭೂತಗಳ ಸೂಕ್ಷ್ಮಾವಸ್ಥೆಯೇ ತನ್ಮಾತ್ರವು. ಈ ಎರಡು ತರಹ ಭೂತಸೃಷ್ಟಿಯಾದಮೇಲೆ, ನಾಲ್ಕನೆಯೆದು ಇಂದ್ರಿ

ಯ ಸೃಷ್ಟಿಯು. ಇಂದ್ರಿಯಸೃಷ್ಟಿಯಲ್ಲಿ ಐದುಜ್ಞಾನೇಂದ್ರಿಯಗಳೂ, ಐದುಕರ್ಮೇಂದ್ರಿಯಗಳೂ ಸೇರಿರುವುವು. ಐದನೆಯದು ಇಂದ್ರಿಯಾಭಿಮಾನಿದೇವತೆಗಳ ಸೃಷ್ಟಿಯು. ವೈಕಾರಿಕವೆಂದು ಕರೆಯಲ್ಪಡುವ ಯಾವ ಸಾತ್ವಿಕಾಹಂಕಾರದಿಂದ ಮನಸ್ಸೆಂಬ ತತ್ವವು ಹುಟ್ಟಿತೋ, ಆ ವೈಕಾರಿಕಾಹಂಕಾರದಿಂದಲೇ ಈ ಇಂದ್ರಿಯಾಭಿನ್ನಾಸಿದೇವತೆಗಳೂ ಹುಟ್ಟುವರು. ಆರನೆಯದು ಅಂಡಸೃಷ್ಟಿಯು. ಇವಾರೂ ಜತುರ್ಮುಖನ ಸಾಥನೆಯಿಂದುಂಟಾದುವಲ್ಲ. ಅವನಿಗೆ ಅಂತರಾತ್ಮನಾಗಿರುವ ಭಗವಂತನ ಸಂಕಲ್ಪದಿಂದಲೇ ಉಂಟಾದುದು. ಇದರಿಂದ ಮೇಲೆ ಹೇಳಿದ ಆರುಬಗೆಯ ಸೃಷ್ಟಿಗಳೂ ಪ್ರಾಕೃತಸೃಷ್ಟಿಗಳೆನಿಸುವುವು. ಇನ್ನು ವೈಕೃತಸೃಷ್ಟಿಗಳನ್ನು ಹೇಳುವೆನು ಕೇಳು ಇದರಲ್ಲಿ ಸ್ಥಾವರ, ತಿರ್ಯಕ್ಕು, ಮನುಷ್ಯಜಾತಿಯೆಂಬ ಮೂರು ವಿಭಾಗವುಂಟು. ವಿದುರಾ ! ಮನಸ್ಸಿನಿಂದಲೂ ಎಣಿಸಲಾಗದಷ್ಟು ನಾನಾರೂಪವಾಗಿಯೂ, ಮಹಾದ್ಭುತವಾಗಿಯೂ ಇರುವ ಈ ವಿಥವಾದ ಪ್ರಪಂಚವನ್ನು ಸೃಷ್ಟಿಸುವವಿಷಯದಲ್ಲಿ, ಜತುರ್ಮುಖನು ಎಷ್ಟು ಶ್ರಮಪಟ್ಟಿರಬಹುದೆಂದು ನೀನು ಆಶ್ಚರ್ಯಪಡಬಹುದು ಆಶ್ಚರ್ಯಕ್ಕೇನೂ ಕಾರಣವಿಲ್ಲ ಲೋಕರಕ್ಷಕನಾದ ಭಗವಂತನು, ರಜೋಗುಣಪ್ರಧಾನನಾದ ಜತುರ್ಮುಖನಲ್ಲಿ ತಾನು ಅಂತರ್ಯಾಮಿಯಾಗಿದ್ದೇ, ಹೀಗೆ ವಿಚಿತ್ರವಾಗಿಯೂ, ನಾನಾರೂಪವಾಗಿಯೂ ಇರುವ ಪ್ರಪಂಚವನ್ನು ಸೃಷ್ಟಿಸುವನು. ಈ ಕಾರ್ಯವೆಲ್ಲವೂ ಅವನಿಗೆ ಕೇವಲಲೀಲಾಮಾತ್ರವೇ ಹೊರತು ಬೇರೆಯಲ್ಲ. ಇದರ ಸೃಷ್ಟಿಕ್ರಮವನ್ನು ಕೇಳು. ಸ್ಥಾವರ ವರ್ಗಗಳ ಸೃಷ್ಟಿಯು ಏಳನೆಯದು. ಈ ಸ್ಥಾವರವರ್ಗಗಳು ವನಸ್ಪತಿಗಳೆಂದೂ, ಓಷಧಿಗಳೆಂದೂ, ತ್ವಕ್ಸಾರಗಳೆಂದೂ, ವೀರುಧಗಳೆಂದೂ, ದ್ರುಮಗಳೆಂದೂ, ಆರುವಿಥವಾಗಿ ಬೇರ್ಪಟ್ಟಿರುವುವು. ಇವುಗಳಲ್ಲಿ ಪ್ರಷ್ಪೋತ್ಪತ್ತಿಯಿಲ್ಲದಂತೆಯೇ ಹಣ್ಣು ಬಿಡುವ ಅರಳಿ, ಹಲಸು, ಮುಂತಾದುವು ವನಸ್ಪತಿಗಳು. ಪುಷ್ಪಿಸಿ ಫಲಬಿಡುವವರೆಗೂ ಬದುಕಿದ್ದು, ಫಲವು ಬಿಟ್ಟಮೇಲೆ ! ಸಾಯುವ ! ಥಾನ್ಯದ ಸಸಿಗಳು ಓಷಧಿಗಳೆನಿಸುವುವು. ಮತ್ತೊಂದು ಆಥಾರವನ್ನು ಹಿಡಿದು ಮೇಲೆಮೇಲೆ ಹಬ್ಬುವ ಅಥವಾ ನೆಲದಮೇಲೆ ಹರಡುವ

ಸ್ವಭಾವವುಳ್ಳ ಮಾಲತಿ, ಮಲ್ಲಿಗೆ, ಮೊದಲಾದುವು ಲತೆಗಳೆನಿಸುವುವು. ತ್ವಕ್ಕು (ತೊಗಟೆ) ಮಾತ್ರವೇ ಸಾರವಾಗಿ ಉಳ್ಳ ಬಾಳೆ, ಬಿದಿರು, ಮುಂತಾದುವು ತ್ವಕ್ಸಾರಗಳೆನಿಸುವುವು. ಗುಬುರುಗುಬುರಾಗಿ ಹರಡುವಸ್ವಭಾವವುಳ್ಳ ಬಳ್ಳಿಗಳು ವೀರುಧಗಳೆನಿಸುವುವು, ಪುಷ್ಪಿಸಿದಮೇಲೆ ಕ್ರಮವಾಗಿ ಫಲಿಸುತ್ತ, ಹಾಗೆಯೇ ಬಹುಕಾಲದವರೆಗೆ ಜೀವಿಸತಕ್ಕ ಮಾವು ಮೊದಲಾದ ಮರಗಳು ದ್ರುಮಗಳೆನಿಸುವುವು ಈ ಆರುಬಗೆಯ ಸ್ಥಾವರವರ್ಗಗಳೂ ಒಳಗೆಮಾತ್ರ ಜೀವವುಳ್ಳವುಗಳಾಗಿದ್ದರೂ, ಆ ಚೈತನ್ಯವನ್ನು ಹೊರಗೆ ಕಾಣಿಸಲಾರದೆ, ಗಮನಾದಿವ್ಯಾಪಾರಗಳಿಲ್ಲದೆ, ಇದ್ದಲ್ಲೆಯೇ ಇರುವುದರಿಂದ, ಇವುಗಳಿಗೆ ಸ್ಥಾವರವರ್ಗಗಳೆಂದು ಹೆಸರು ಇವುಗಳಿಗೆ ಅಂತರ್ಭಾಗದಲ್ಲಿ ಮಾತ್ರ ಶೀತೋಷ್ಣಾದಿ ಸ್ಪರ್ಶಜ್ಞಾನವುಂಟೇಹೊರತು, ಹೊರಗಿನ ವಿಶೇಷವೇನೂ ತಿಳಿಯಲಾರದು. ಎಂಟನೆಯದು ಪಶು ಮೊದಲಾದ ತಿರ್ಯಗ್ಜಂತುಗಳ ಸೃಷ್ಟಿ. ಈ ಸೃಷ್ಟಿಯಲ್ಲಿ ಇಪ್ಪತ್ತೆಂಟು ಒಳವಿಭಾಗಗಳುಂಟು. ಇನ್ನೆಲ್ಲಕ್ಕೂ ಸಾಮಾನ್ಯಲಕ್ಷಣವೇನೆಂದು ಕೇಳುವೆಯಾ? ಈ ತಿರ್ಯಕ್ಕುಗಳಿಗೆ ಹಿಂದಿನದು, ಈಗಿನದು, ಮುಂದಿನದು ಎಂಬ ಕಾಲಭೇದದ ತಿಳುವಳಿಕೆಗಳೇನೂ ಇರುವುದಿಲ್ಲ. ತಿನ್ನುವುದು, ಸಿಟ್ಟುಸುವುದು, ಭಯಪಡುವುದು, ಸಂಭೋಗಿಸುವುದು, ಈನಾಲ್ಕು ಕೆಲಸಗಳನ್ನು ಮಾತ್ರವೇ ಬಲ್ಲುವು. ಇದಲ್ಲದೆ ಘ್ರಾಣೇಂದ್ರಿಯದ ಬಲದಿಂದ ತಮಗೆ ಇಷ್ಟವಾದ ವಸ್ತುಗಳನ್ನು ತಿಳಿಯತಕ್ಕ ಸ್ವಭಾವವುಳ್ಳವು. ಈ ಮೇಲೆ ಹೇಳಿದವುಗಳೆಲ್ಲನ್ನೂ ತಿರ್ಯಗ್ಜಾತಿಗಿರತಕ್ಕ ಸಾಮಾನ್ಯಲಕ್ಷಣಗಳು ಇವುಗಳಲ್ಲಿರುವ ಇಪ್ಪತ್ತೆಂಟುವರ್ಗಗಳನ್ನು ಹೇಳುವೆನು ಕೇಳು. ಸೀಳಿದ ಗೊರಸಲುಳ್ಳ ಹಸು, ಆಡು, ಎಮ್ಮೆ, ಕರೀಜಿಂಕೆ, ಹಂದಿ, ಕಡವೆ, ಕರೀಚುಕ್ಕಿಗಳುಳ್ಳ ಬೆಟ್ಟದ ಜಿಂಕೆಗಳು, ಕುರಿ, ಒಂಟೆ, ಈ ಒಂಬತ್ತೂ ಒಂದು ಜಾತಿಗೆ ಸೇರುವುವು. ಒಂದೇ ಗೊರಸಲುಳ್ಳ ಕತ್ತೆ, ಕುದುರೆ, ಹೇಸರಗತ್ತೆ, ಗಾರಮೃಗ, ಶರಭ, ಚಮರೀಮೃಗ, ಇವಾರೂ ಬೇರೊಂದು ವರ್ಗಕ್ಕೆ ಸೇರುವುವು. ಐದುನಖ (ಉಗುರು) ಗಳುಳ್ಳ ಪ್ರಾಣಿಗಳು ಬೇರೆ ಕೆಲವುಂಟು. ನಾಯಿ, ನರಿ, ಕೆನ್ನಾಯಿ, (ತೋಳ) ಹುಲಿ, ಬೆಕ್ಕು, ಮೊಲ, ಮುಳ್ಳುಹಂದಿ, ಸಿಂಹ, ಕಪಿ, ಆನೆ, ಆಮೆ, ಉಡು,

ಈ ಹನ್ನೆರಡೂ ಪಂಚನಖವರ್ಗಕ್ಕೆ ಸೇರುವುವು. ಅದರಿಂದಾಚೆಗೆ ಮೊಸಳೆ, ಮೀನು ಮುಂತಾದ ಜಲಜಂತುಗಳೆಲ್ಲವೂ ಪ್ರತ್ಯೇಕವಾದ ಬೇರೊಂದು ವರ್ಗಕ್ಕೆ ಸೇರುವುವು. ಹೀಗೆ ತಿರ್ಯಗ್ಜಂತುಗಳ ಸೃಷ್ಟಿಯು ಇಪ್ಪತ್ತೆಂಟು ಬಗೆಯಾಗಿರುವುವು. ರೆಕ್ಕೆಯುಳ್ಳ ಪ್ರಾಣಿಗಳು ಎಂದರೆ, ರಣಹದ್ದು, ಹದ್ದು, ಕೊಕ್ಕರೆ, ಗಿಡುಗ, ಗರುಡ, ನವಿಲು, ಹಂಸ, ಸಾರಸ, ಚಕ್ರವಾಕ, ಕಾಗೆ, ಗೂಬೆ ಮೊದಲಾದ ಹಕ್ಕಿಗಳೆಲ್ಲವೂ ಇದರಲ್ಲಿ ಸೇರಿರುವುವು. ಒಂಬತ್ತನೆಯದು ಮನುಷ್ಯಸೃಷ್ಟಿ ! ಈ ಮನುಷ್ಯಜಾತಿಯು ಬಂದೇವರ್ಗವಾಗಿ ಎಣಿಸಲ್ಪಟ್ಟಿರುವುದು ಈ ಮನುಷ್ಯರು, ತಕ್ಕ ಪ್ರಯತ್ನಪರರಾಗಿಲ್ಲದಪಕ್ಷದಲ್ಲಿ ಪ್ರಾಯಕವಾಗಿ ಅಧೋಗತಿಗೆ ಇಳಿಯತಕ್ಕ ಸ್ವಭಾವವುಳ್ಳವರಾದುದರಿಂದಲೂ, ಇವರ ಆಹಾರಸಂಚಾರಗಳೆಲ್ಲವೂ ನೆಲದಮೇಲೆಯೇ ನಡೆಯಬೇಕಾದುದರಿಂದಲೂ, ಇವರಿಗೆ "ಅರ್ವಾಕ್‌ಸ್ರೋತ" ರೆಂದು ವ್ಯವಹಾರವು ಈ ಮನುಷ್ಯರು ಕೇವಲರಜೋಗುಣಪ್ರಧಾನರಾಗಿ, ಸುಖಾಪೇಕ್ಷೆಯುಳ್ಳವರಾದುದರಿಂದ ಇವರು ಕರ್ಮನಿರತರು. (ಎಂದರೆ ದುಃಖವನ್ನೀ ಸುಖವೆಂದೆಣಿಸಿ ಕೆಲಸನಾಡುವ ಸ್ವಭಾವವುಳ್ಳವರು) ಓ ವಿದುರಾ ! ಕೊನೆಗೆ ಹೇಳಿದ ಸ್ಥಾವರತಿರ್ಯಙ್ಮಾನುಷ್ಯಸೃಷ್ಟಿಗಳೆಂಬಿವು ಮೂರೂ ವೈಕೃತಸೃಷ್ಟಿಗಳೆನಿಸುವುವು. ಹಿಂನೆ ಪ್ರಾಕೃತಸೃಷ್ಟಿಯನ್ನು ಹೇಳುವಾಗ ಪ್ರಸ್ತಾವವಶದಿಂದ ದೇವಸೃಷ್ಟಿಯನ್ನು ಅದರಲ್ಲಿ ಸೇರಿಸಿದ್ದರೂ, ಆ ದೇವಸೃಷ್ಟಿಯೂ ವೈಕೃತದಲ್ಲಿಯೇ ಸೇರುವುದು ಮತ್ತು ಸನಕಾದಿಕುಮಾರರ ಸೃಷ್ಟಿಯು ದೇವಸೃಷ್ಟಿಯಲ್ಲಿ ಅಂತರ್ಗತವಾಗಿದ್ದರೂ ಅದರಲ್ಲಿ ಪ್ರಾಕೃತವೈಕೃತಗಳೆರಡೂ ಉಂಟು. ಹೇಗೆಂದರೆ, ಸನಕಾದಿಗಳು ಮೊದಲು ಬ್ರಹ್ಮನಿಂದ ಒಮ್ಮೆಯೇ ಸೃಷ್ಟಿಸಲ್ಪಟ್ಟವರು. ಅವರಿಗೆ ಪ್ರತಿಕಲ್ಪದಲ್ಲಿಯೂ ಸೃಷ್ಟಿಯಿಲ್ಲದುದರಿಂದ ಪ್ರಾಕೃತಸೃಷ್ಟಿಯಲ್ಲಿ ಸೇರುವರು. ಆ ಮುನಿಕುಮಾರರೊಳಗೆ ಒಬ್ಬನಾದ ನೀಲಲೋಹಿತನೆಂಬವನುಮಾತ್ರ, ಮೊದಲ ಆ ಸನಕಾದಿಗಳೊಡನೆ ಸೃಷ್ಟಿಸಲ್ಪಟ್ಟಿದ್ದರೂ, ಪ್ರತಿಕಲ್ಪದಲ್ಲಿಯೂ ಅವನಿಗೆ ಹೊಸಸೃಷ್ಟಿಯುಂಟು. ಆದುದರಿಂದ ಈ ಕುಮಾರಸೃಷ್ಟಿಯಲ್ಲಿ ಎರಡು ವಿಧವೂ ಉಂಟು. ಇನ್ನು ದೇವಸೃಷ್ಟಿಯಲ್ಲಿ ಏರ್ಪಟ್ಟಿರುವ ವಿಭಾಗಗ

ಳನ್ನು ಹೇಳುವೆನು ಕೇಳು. ಇದರಲ್ಲಿ ಎಂಟು ಭೇದಗಳುಂಟು. ದೇವತೆಗ ಳೂ, ಪಿತೃದೇವತೆಗಳೂ ಒಂದು ಬಗೆಯವರು. ಇವರು ವೈದಿಕಕರ್ಮಗ ಳಿಂದಲೇ ಆರಾಧಿಸಲ್ಪಡುವುದರಿಂದ ಮೊದಲನೆಯ ವರ್ಗಕ್ಕೆ ಸೇರಿರುವರು. ಅಸುರರು ಎರಡನೆಯ ಬಗೆಯವರು. ಗಂಧರ್ವರೂ, ಅಪ್ಸರಸ್ಸುಗಳೂ ಬೇ ರೊಂದುವರ್ಗಕ್ಕೆ ಸೇರಿದವರು. ಸಿದ್ಧರು ಮತ್ತೊಂದು ವರ್ಗದವರು. ಯಕ್ಷರಾಕ್ಷಸರಿಬ್ಬರೂ ಇನ್ನೊಂದು ವರ್ಗದವರು. ಚಾರಣರು. ಬೇರೆ ವರ್ಗ ದವರು ಭೂತಪ್ರೇತಪಿಶಾಚರೆಂಬೀಮೂವರೂ ಒಂದುವರ್ಗಕ್ಕೆ ಸೇರು ವರು. ಹೀಗೆ ದೇವಸೃಷ್ಟಿಯು ಎಂಟುಬಗೆಯಾಗಿರುವುವು. ವಿದುರಾ! ಈಶ್ವ ರನು ಚತುರ್ಮುಖನಿಗೆ ಅಂತರ್ಯಾಮಿಯಾಗಿದ್ದೂ, ತಾನೇ ಪ್ರತ್ಯೇಕವಾಗಿ ಯೂ ನಡೆಸಿದ ಬಗೆಬಗೆಯ ಸೃಷ್ಟಿಗಳನ್ನು ನಿನಗೆ ತಿಳಿಸಿದೆನಷ್ಟೆ? ಈ ಸಮಸ್ತವಸ್ತುಗಳನ್ನೂ ತನ್ನ ಆಳ್ವಿಕೆಗೊಳಪಡಿಸಿಕೊಂಡಿರುವ ಕಾಲಸ್ವರೂ ಪವನ್ನೂ ನಿನಗೆ ತಿಳಿಸಿದುದಾಯಿತು. ಇನ್ನು ಮುಂದೆ, ಮನುಗಳ, ಮತ್ತು ಮನ್ವಂತರಗಳ ವಿಷಯವನ್ನು ಹೇಳುವೆನು ಕೇಳು. ಸರ್ವೇಶ್ವರನು ಪ್ರತಿಕಲ್ಪದ ಪ್ರಾರಂಭದಲ್ಲಿ ಚತುರ್ಮುಖನಿಗೆ ಅಂತರ್ಯಾಮಿಯಾಗಿ ಅವನನ್ನು ಶರೀರ ವಾಗಿ ಹೊಂದಿ, ಆ ಮೂಲಕವಾಗಿ ರಜೋಗುಣವನ್ನು ಹೆಚ್ಚಿಸಿಕೊಂಡು,ಹೀಗೆ ತಾನೇ ತನ್ನಿಂದ ತನ್ನನ್ನು ಅನೇಕವಿಧವಾಗಿ ಸೃಷ್ಟಿಸಿಕೊಳ್ಳುವನು. ಮೇಲೆ ಹೇಳಿದ ಒಂಬತ್ತುಬಗೆಯ ಸೃಷ್ಟಿಗಳಲ್ಲಿ ಅಂಡಗಳ ಸೃಷ್ಟಿಯೆಂಬುದು ಆಕಾಶಾದಿತತ್ವಗಳ ಸೃಷ್ಟಿಯಂತೆ ಕ್ರಮಕ್ರಮವಾಗಿ ಒಂದರಿಂದೊಂದು ಹುಟ್ಟುವುವೆಂದು ತಿಳಿಯಬೇಡ! ಈ ಅಂಡಗಳು ಎಣಿಕೆಯಿಲ್ಲದಷ್ಟಿದ್ದರೂ, ಅವೆಲ್ಲವೂ ಒಂದೇಕಾಲದಲ್ಲಿ ಉತ್ಪನ್ನವಾಗುವುವು. ಆಕಾಶ ಮೊದಲಾದ ತತ್ವಗಳ ಸೃಷ್ಟಿಯಲ್ಲಿಮಾತ್ರ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ಹೀಗೆ ಉತ್ಪತ್ತಿಕ್ರಮವುಂಟು. ಅಂಡಸೃಷ್ಟಿಯಲ್ಲಿ ಮಾತ್ರ ಈ ಕ್ರಮವಿಲ್ಲದೆ,ಎಲ್ಲಾ ಅಂಡಗಳೂ ಏಕಕಾಲದಲ್ಲಿ ಉದ್ಭವಿಸುವುವು. ಅಷ್ಟೊಂದು ಅಂಡಗಳೂ ಏಕಕಾಲದಲ್ಲಿ ಹುಟ್ಟುವುದು ಹೇಗೆ ಸಾಧ್ಯವೆಂದು ನೀನು ಶಂಕಿಸಬಹುದು. ಇದಕ್ಕೂ ಈಶ್ವರನ ಆಶ್ಚರ್ಯಶಕ್ತಿಯೇ ಕಾರ ಣವು. ಪ್ರವಾಹಗಳಲ್ಲಿ ಸುಳಿ, ನೊರೆ, ಗುಳ್ಳೆ, ಮುಂತಾದುವು ಒಂದೇ ಸಮ

ಯದಲ್ಲಿ ಅನೇಕವಾಗಿ ಹುಟ್ಟಿ,, ಅಲ್ಲಲ್ಲಿಯೇ ಅಡಗುವಂತೆ, ಈ ಬ್ರಹ್ಮಾಂಡಗಳ ಉತ್ಪತ್ತಿಕ್ರಮವನ್ನೂ ತಿಳಿಯಬೇಕು. ವಿದುರಾ! ಇಂದ್ರಾದಿದೇವತೆಗಳು ಒಂ ದೊಂದು ಕಲ್ಪದಲ್ಲಿಯೂ ಬೇರೆಬೇರೆಯಾಗಿ ಏರ್ಪಡುವರೆ? ಅಥವಾ ಹಿಂದಿ ನ ಕಲ್ಪದಲ್ಲಿ ಆ ಪದವಿಯಲ್ಲಿದ್ದ ಜೀವಾತ್ಮರೇ ತಿರುಗಿ ಮುಂದಿನ ಕಲ್ಪದಲ್ಲಿ ಯೂ ಅದೇಸ್ಥಾನವನ್ನು ಹೊಂದುವರೆ?" ಎಂದು ನೀನು ಶಂಕಿಸಬಹುದು. ಆ ಸಂದೇಹವನ್ನೂ ನೀಗಿಸುವೆನು ಕೇಳು. ಒಂದುಕಲ್ಪದಲ್ಲಿ ಯಾವ ದೇವ ತೆಗಳಾಗಲಿ, ಅಸುರರಾಗಲಿ, ಇಂದ್ರಾದಿನಾಮದಿಂದಲೂ, ಸಾವಿರಕಣ್ಣು ಮೊದಲಾದ ಆಕಾರಗಳಿಂದಲೂ ಕೂಡಿದ್ದುದಾಗಿ ಕರೆಯಲ್ಪಡುವರೋ ಅವರೇ ಮುಂದಿನ ಕಲ್ಪದಲ್ಲಿಯೂ ಅದೇ ಅಧಿಕಾರವನ್ನು ವಹಿಸಿ, ಅದೇ ನಾಮರೂಪಗಳಿಂದ ಕೂಡಿರಬೇಕೆಂಬ ನಿಯಮವಿಲ್ಲ. ಆದರೆ ಆ ಇಂದ್ರಾ ದಿಪಟ್ಟಗಳುಮಾತ್ರ ಪ್ರತಿಕಲ್ಪದಲ್ಲಿಯೂ ಹಿಂದಿನಂತೆಯೇ ಏರ್ಪಡುವುವು. ಈ ಅಧಿಕಾರವಾಗಲಿ, ಹೆಸರಾಗಲಿ, ಆಕಾರವಾಗಲಿ ಮಾರ್ಪ್ಪಡುವುದಿಲ್ಲ. ಆ ದರೆ ಹಿಂದಿನ ಕಲ್ಪದಲ್ಲಿ ಯಾವ ಜೀವಾತ್ಮನು,ಯಾವ ನಾಮರೂಪಗಳಿಂದಿ ದ್ದನೋ, ಆ ಜೀವಾತ್ಮನೇ ಮುಂದಿನ ಕಲ್ಪದಲ್ಲಿ, ಅದೇ ನಾಮರೂಪಗಳೊ ಡನೆ ಹುಟ್ಟುಬೇಕೆಂಬ ನಿಯಮವಿಲ್ಲ. ಅವನ ನಾಮ, ರೂಪ, ಅಧಿಕಾರ,ಮಂ ತಾದುವು, ಅವರವರ ಕರ್ಮಾಧೀನವಾಗಿ ಬೇರ್ಪ್ಪಡುವುವು. ಇಲ್ಲಿಗೆ ಹತ್ತ ನೆಯ ಅಧ್ಯಾಯವು.

———

ಮೈತ್ರೇಯನು ವಿದುರನಿಗೆ ಕಾಲಸ್ವರೂಪವನ್ನೂ ಅದರ ಪರಿಮಾಣಭೇದಗಳನ್ನೂ ತಿಳಿಸಿದುದು.

ಓ ವಿದುರಾ! ಇನ್ನು ನಿನಗೆ ಕಾಲದ ಸ್ವರೂಪವನ್ನೂ ಅದರೊಳಗಿನ ಸ್ಥೂಲ ಸೂಕ್ಷ್ಮಗಳೆಂಬವಿಭಾಗಗಳನ್ನೂ, ಅದರ ಉತ್ಕರ್ಷಾಪಕರ್ಷಸ್ಥಿತಿಗಳನ್ನೂ ಹೇಳುವೆನು ಕೇಳು. ಆದರೆ ಈ ಕಾಲದ ಗತಿಪ್ರಮಾಣಗಳನ್ನು ತಿಳಿಸುವುದಕ್ಕೆ ಮೊದಲು, ಮತ್ತೊಂದು ವಿಷಯವನ್ನು ತಿಳಿಸಬೇಕಾಗಿರುವುದು ಏಕೆಂದರೆ, ಸೂರ್ಯಗತಿಯಿಂದಲೇ ಕಾಲದ ಅಳತೆಯನ್ನು ನಿರ್ಣಯಿಸಬೇಕಾಗಿರುವುದು.ಈಸೂರ್ಯಗತಿಯಮೇಲೆಯೇ ಕಾಲಗತಿಯೆಲ್ಲಿಯೂ, ಸ್ಥೂಲಸೂಕ್ಷ್ಮವಿಭಾಗಗಳು ನಿರ್ಣಯಿಸಲ್ಪಡುವುವು. ಸೂರ್ಯನು ಎಷ್ಟುಕಾಲದಲ್ಲಿ ಒಂದು ಪರಮಾಣುಪ್ರದೇಶವನ್ನು ದಾಟುವನೋ, ಅಷ್ಟುಕಾಲವು ಪರಮಾಣುಕಾಲವೆಂದು ಕರೆಯಲ್ಪಡುವುದು. ಆದೇ ಸೂರ್ಯನು ಎಷ್ಟುಕಾಲದಲ್ಲಿ ದ್ವಾದಶರಾಶಿಸ್ವರೂಪವಾದ ಈ ಲೋಕವನ್ನು ದಾಟಿ ಹೋಗುವನೋ,ಆ ಕಾಲವು ಎಂದರೆ, ಒಂದು ಸಂವತ್ಸರವು ಮಹಾಕಾಲವೆನಿಸುವುದು. ಅದುದರಿಂದ ಸೂರ್ಯಸಂಚಾರಕ್ಕೊಳಪಟ್ಟ ವಸ್ತುವಿನ ಸ್ವರೂಪದಲ್ಲಿ, ಸಣ್ಣ ದೊಡ್ಡವಿಭಾಗಗಳನ್ನು ಮೊದಲು ತಿಳಿದುಕೊಂಡರೆ, ಕಾಲದಲ್ಲಿ ಆದನ್ನನುಸರಿಸಿ ಬರುವ ಸಣ್ಣದೊಡ್ಡವಿಭಾಗಗಳನ್ನೂ, ಅದರ ಉತ್ಕರ್ಷಾಪಕರ್ಷಸ್ಥಿತಿಗಳನ್ನೂ ಸುಲಭವಾಗಿ ತಿಳಿಯಬಹುದು. ಆದುದರಿಂದ ಮೊದಲು ಕಾಲದಿಂದ ವಿಭಾಗಿಸಲ್ಪಡುವ ವಸ್ತುಗಳ ಸಣ್ಣದೊಡ್ಡವಿಭಾಗಗಳನ್ನು ತಿಳಿಸುವೆನು ಕೇಳು. ಲೋಕದಲ್ಲಿರುವ ಕಾರ್ಯವಸ್ತುಗಳೆಲ್ಲವೂ, ಅನೇಕಪರಮಾಣುಗಳ ಸಮುದಾಯದಿಂದಲೇ ಏರ್ಪಟ್ಟಿರುವುವು. ಒಂದೊಂದುಕಾರ್ಯವಸ್ತುವನ್ನೂ ಪರಮಾಣುವಿನವರೆಗೆ ಬೇರ್ಪಡಿಸಿಡಬಹುದು. ಯಾವುದಕ್ಕಿಂತಲೂ ಸಣ್ಣವಿಭಾಗವಿಲ್ಲವೋ ಅದನ್ನೇ ಪರಮಾಣುವೆನ್ನುವರು. ಆ ಪರಮಾಣುವನ್ನು ಬೇರೆಬೇರೆ ಅಂಶವಾಗಿ ವಿಭಾಗಿಸುವುದು ಸಾಧ್ಯವಿಲ್ಲ. ಕಾಲದಲ್ಲಿಯೂ ಇದೇವಿಧವಾದ ಪರಮಾಣುಸ್ವರೂಪವುಂಟು. ಲೋಕದಲ್ಲಿ ಜನರು ಈ ಸೂಕ್ಷ್ಮವಿಭಾಗವನ್ನು ತಿಳಿಯಲಾರದೆ, ಆ ಕಾಲದ ಅನೇಕಸೂಕ್ಷ್ಮಾಂಶಗಳನ್ನು ಒಂದೇಕಾಲವೆಂದು ಭ್ರಮಿಸುವರು. ಒಂದೊಂದು ಕಾ

ರ್ಯವಸ್ತುವಿಗೂ ಪರಮಾಣುಸ್ವರೂಪವೇ ಕೆಳಗಿನ ಎಲ್ಲೆಯಾಗಿರುವುದು. ಯಾವ ವಸ್ತುವು ಮೊದಲು ಯಾವ ಪರಮಾಣುವಿನ ಸಂಯೋಗದಿಂದ ಹುಟ್ಟಿರುವುದೋ, ಪ್ರಳಯದಲ್ಲಿ ಅದೇ ಪರಮಾಣುಸ್ಥಿತಿಗೆ ಮಾರ್ಪಡುವುವು. ಇವು ಯೋಗೀಶ್ವರರಿಗೆಮಾತ್ರವೇ ಕಾಣಬಹುದೇಹೊರತು ಸಾಧಾರಣಜನಕ್ಕೆ ಕಾರಣಲಾರವು. ಈ ಪರಮಾಣುಗಳ ಸಂಯೋಗದಿಂದಲೇ ಕಾರ್ಯರೂಪವನ್ನು ಹೊಂದಿ, ಬೇರೆ ವಿಕಾರವಿಲ್ಲದೆ ತನ್ನ ಸ್ವರೂಪದಿಂದಿರುವ ಪದಾರ್ಥದ ಸ್ಥಿತಿಯೇ ಪರಮಮಹತ್ತೆನಿಸುವುದು. ಇದೇ ಎಲ್ಲಕ್ಕಿಂತಲೂ ಉಚ್ಚಸ್ಥಿತಿಯೆನಿಸುವುದು. ಇದಕ್ಕಿಂತಲೂ ಮೇಲಾದ ಸ್ಥಿತಿಯೊಂದೂ ಇರದು. ಇದು ತನ್ನೊಳಗೆ ಸೇರಿರತಕ್ಕ ಅವಯವಭೇದಗಳನ್ನು ಹೊರಕ್ಕೆ ಕಾಣಿಸದೆ ಒಂದೇ ಸ್ವರೂಪದಿಂದ ತೋರುವುದು. ಇದರಿಂದ ಮುಖ್ಯವಾಗಿ ತಿಳಿಯಬೇಕಾದುದೇನೆಂದರೆ ಯಾವುದಕ್ಕಿಂತಲೂ ಸಣ್ಣ ವಿಭಾಗವಿಲ್ಲವೋ ಅದನ್ನು ಪರಮಾಣುವೆಂದೂ, ಯಾವುದಕ್ಕಿಂತಲೂ ಮೇಲಾದ ಆಕಾರವುಂಟಾಗದೋ ಅದನ್ನು ಪರಮಮಹತ್ತೆಂದೂ ತಿಳಿಯಬೇಕು. ಇದರಿಂದ ಈ ಪ್ರಪಂಚವೇ ಪರಮಮಹತ್ತೆನಿಸುವುದು. ಇದರಲ್ಲಿ ಸ್ವರ್ಗಾದಿಗಳಾದ ಹಲವು ವಿಭಾಗಗಳಿದ್ದರೂ, ಆ ಭೇದಗಳೊಂದನ್ನೂ ಗ್ರಹಿಸದೆ, ಅವೆಲ್ಲವನ್ನೂ ಸೇರಿಸಿ ಪ್ರಪಂಚವೆಂಬ ಒಂದೇವಸ್ತುವಾಗಿ ಗ್ರಹಿಸಿದಪಕ್ಷದಲ್ಲಿ, ಅದಕ್ಕಿಂತಲೂ ದೊಡ್ಡದಾದ ಮತ್ತೊಂದು ಆಕಾರವು ಕಾಣಿಸಲಾರದು. ಈ ಪ್ರಪಂಚವೆಂಬುದೂ ಪರಮಾತ್ಮನ ಕಾರ್ಯವಸ್ತುಗಳಲ್ಲಿ ಒಂದಾಗಿರುವುದು. ಇದೇ ಭುವನಕೋಶವೆಂದೂ ಕರೆಯಲ್ಪಡುವುದು. ಹೀಗೆವಸ್ತುಗಳಲ್ಲಿರುವ ಸ್ಥೂಲಸೂಕ್ಷ್ಮಪ್ರಮಾಣಗಳಂತೆಯೇ ಕಾಲದಲ್ಲಿಯೂ ವಿಭಾಗಗಳುಂಟು. ಭಗವಂತನ ಆಜ್ಞಾರೂಪವಾಗಿಯೂ, ಇಂದ್ರಿಯಗಳಿಗೆ ಅಗೋಚರವಾಗಿಯೂ, ಕಣ್ಣಿಗೆ ಗೋಚರಿಸುವ ವಸ್ತುಗಳ ಸ್ಥಿತಿಗತಿಗಳಿಗೆ ಕಾರಣವಾಗಿಯೂ ಇರುವ ಆ ಕಾಲದ ಅಳತೆಯೂಕೂಡ, ಪರಮಾಣುವಿನಿಂದ ಹಿಡಿದು, ಪರಮಮಹತ್ತಿನವರೆಗಿರುವ ವಸ್ತುಗಳ ಸಂಬಂಧದಿಂದಲೇ ಊಹಿಸಲ್ಪಡಬೇಕಾಗಿರುವುದು. ಕಾಲದಲ್ಲಿ ಯಾವ ಭಾಗವು ಎಲ್ಲಕ್ಕಿಂತಲೂ ಸೂಕ್ಷ್ಮವಾಗಿರುವುದೋ, ಯಾವುದಕ್ಕಿಂತಲೂ ಕೆಳಗಿನ ವಿಭಾಗವಿಲ್ಲವೋ

ಅದನ್ನು ಪರಮಾಣುಕಾಲವೆಂದು ಗ್ರಹಿಸಬೇಕು. ಯಾವ ಕಾಲವು ಎಲ್ಲಕ್ಕಿಂತಲೂ ಮೇಲಾಗಿ, ತನಗೆ ಮೇಲಿಲ್ಲದಿರುವುದೋ ಅದು ಮಹಾಕಾಲವೆನಿಸುವುದು ಇದನ್ನೇ ಸಂವತ್ಸರವೆಂದು ಹೇಳುವರು. ಆದರೆ ಸಂವತ್ಸರಕ್ಕಿಂತಲೂ ಮೇಲೆ, ಯುಗವೆಂದೂ, ಮನ್ವಂತರಗಳೆಂದೂ ಕರೆಯಲ್ಪಡುವ ದೊಡ್ಡ ವಿಭಾಗಗಳಿರುವಾಗ, ಈ ಸಂವತ್ಸರವನ್ನೇ ಕಾಲದಲ್ಲಿ ಮೇಲಾದ ವಿಭಾಗವೆಂದು ಹೇಳಿದುದೇಕೆ?" ಎಂದು ನೀನು ಶಂಕಿಸಬಹುದು. ಆ ಯುಗ ಮನ್ವಂತರಾದಿಗಳೆಲ್ಲವೂ, ಸಂವತ್ಸರಗಳ ಅವೃತ್ತಿಯಿಂದಲೇ ಉಂಟಾಗತಕ್ಕವುಗಳು. ಅದನ್ನು ಬೇರೆವಿಧದಿಂದ ನಿರ್ಣಯಿಸಲವಕಾಶವಿಲ್ಲ ಆದುದರಿಂದ ಕಾಲಪ್ರಮಾಣದಲ್ಲಿ, ಪರಮಾಣುಕಾಲವೆಂಬುದು ಎಲ್ಲಕ್ಕಿಂತಲೂ ಸಣ್ಣದೆಂದೂ, ಸಂವತ್ಸರವೆಂಬುದು ಎಲ್ಲಕ್ಕಿಂತಲೂ ದೊಡ್ಡದಾದ ಮಹಾಕಾಲವೆಂದೂ ತಿಳಿಯಬೇಕು ಹೀಗೆ ವಸ್ತುಗಳಲ್ಲಿಯೂ, ಕಾಲದಲ್ಲಿಯೂ, ಅತಿಸೂಕ್ಷ್ಮವಾಗಿಯೂ,ಅತಿಸ್ಥೂಲವಾಗಿಯೂ ಇರುವ ಭೇದಗಳನ್ನು ತಿಳಿಸಿದೆನಷ್ಟೆ ಇನ್ನು ಇವುಗಳನಡುವೆ! ಇರುವ ಬೇರೆಬೇರೆ ವಸ್ತುಪ್ರಮಾಣಭೇದಗಳನ್ನೂ, ಅವುಗಳಿಂದೂಹಿಸಬೇಕಾದ ಕಾಲದ ಅಳತೆಯನ್ನೂ ತಿಳಿಸುವೆನು ಕೇಳು. ಹಿಂದೆ ಹೇಳಿದಂತೆ ಎಲ್ಲಕ್ಕಿಂತಲೂ ಸೂಕ್ಷ್ಮವಾದ ಎರಡು ಪರಮಾಣುಗಳು ಸೇರಿ ಒಂದು ಅಣುವೆನಿಸುವುದು. ಅಂತಹ ಮೂರಣುಗಳು ಒಂದಾಗಿ ಸೇರಿದಾಗ ಒಂದು ತ್ರಸರೇಣುವೆನಿಸುವುದು. ತ್ರಸರೇಣುವೆಂದರೆ ಗವಾಕ್ಷರಂಧ್ರದಲ್ಲಿ ಸೂರ್ಯಕಿರಣಗಳು ಹೊರಟುಬರುವಾಗ, ಅದರಲ್ಲಿ ತೂರಿಬರುವಂತೆ ಕಾಣುವ ಸಣ್ಣ ಸಣ್ಣ ಪರಾಗಗಳೇ ತ್ರಸರೇಣುಗಳೆನಿಸುವುವು. ಸೂರ್ಯನು ಆ ತ್ರಸರೇಣುವಿರುವಷ್ಟು ಸ್ಥಳವನ್ನು ಎಷ್ಟು ಹೊತ್ತಿನೊಳಗಾಗಿ ದಾಟಿಹೋಗುವನೋ! ಅಷ್ಟುಕಾಲಕ್ಕೆ ತ್ರಸರೇಣುಕಾಲವೆಂದು ಹೆಸರು. ಇಂತಹ ಮೂರು ತ್ರಸರೇಣುಕಾಲಗಳು ಸೇರಿ ಒಂದು ತೃಟಿಯೆನಿಸುವುದು. ನೂರಾರು ತೃಟಿಗಳ ಕಾಲವು ಒಂದು ವೇಧೆಯೆನಿಸುವುದು. ಮೂರು ವೇಧೆಗಳ ಕಾಲವು ಬಂದು ಲವವೆಂದೂ, ಮೂರುಲವಗಳು ಒಂದುನಿಮೇಷವೆಂದೂ, ಮೂರುನಿಮೇಷಗಳು ಒಂದು ಕ್ಷಣವೆಂದೂ ಹೇಳಲ್ಪಡುವುದು. ಐದುಕ್ಷಣಗಳು ಒಂದು ಕಾಷ್ಠೆಯೆನಿಸುವುದು. ಹದಿನೈದುಕಾಷ್ಠೆಗಳ

ಒಂದು ಲಘುವೆನಿಸುವುದು. ಅಂತಹ ಹದಿನೈದುಲಘುಗಳು ಒಂದು ಗಳಿಗೆಯೆನಿಸುವುದು. ಎರಡುಗಳಿಗೆಗೆ ಒಂದು ಮಹೂರ್ತವೆಂದು ಹೆಸರು ಆರು ಅಥವಾ ಏಳು ಗಳಿಗೆಗಳು ಒಂದು ಪ್ರಹರವೆನಿಸುವುದು. ಇದಕ್ಕೆ ಯಾಮವೆಂದೂ ಹೆಸರುಂಟು. ವಿದುರಾ! ತಿಥಿಗಳಿಗೆ ವೃದ್ಧಿಯೆಂದೂ, ಕ್ಷಯವೆಂದೂ ಎರಡು ಅವಸ್ಥೆಗಳುಂಟು. ವೃದ್ಧಿಯಲ್ಲಿ ಏಳುಗಳಿಗೆಗಳು ಒಂದು ಯಾಮವೆನಿಸುವುದು. ಕ್ಷಯದಲ್ಲಿ ಆರುಗಳಿಗೆಗಳುಮಾತ್ರವೇ ಒಂದು ಯಾಮವೆನಿಸುವುದು (ಆದರೆ ಇದರಲ್ಲಿ ಮೂರು ಸಂಧ್ಯಾಕಾಲಗಳಿಗೆ ಸೇರಿದ ಎರಡು ಮೂಹೂರ್ತಗಳ ಕಾಲವನ್ನು ಬಿಟ್ಟು ಲೆಕ್ಕವಿಡಬೇಕು) ಈ ಕಾಲಪರಿಮಾಣವನ್ನು ಕಂಡುಕೊಳ್ಳುವುದಕ್ಕೆ ಒಂದು ಯಂತ್ರಸಾಧನವುಂಟು. ಹನ್ನೆರಡೂವರೆ ಪಲದಷ್ಟು ತೂಕವುಳ್ಳ ತಾಮ್ರದಿಂದ ಒಂದು ಪಡಿ ನೀರು ಹಿಡಿಯುವಂತೆ ಒಂದು ಪಾತ್ರವನ್ನು ಎರಕಹುಯ್ದು, ಆ ಪಾತ್ರದ ಕೆಳಭಾಗದಲ್ಲಿ ಐದು ಉದ್ದಿನಕಾಳಿನ ತೂಕವುಳ್ಳ ಬಂಗಾರದಿಂದ, ನಾಲ್ಕಂಗುಲದ ಉದ್ದಕ್ಕೆ ಮಾಡಿದ ಒಂದು ಸೂಜಿಯಿಂದ ಒಂದು ಸಣ್ಣರಂಧ್ರವನ್ನು ಮಾಡಿಡಬೇಕು. ಈ ಪಾತ್ರಕ್ಕೆ ಪ್ರಸ್ಥವೆಂದು ಹೆಸರು. ಈ ಪಾತ್ರವನ್ನು ಒಂದು ನೀರು ತುಂಬಿದ ಪಾತ್ರೆಯಲ್ಲಿಟ್ಟರೆ, ಎಷ್ಟು ಹೊತ್ತಿನೊಳಗಾಗಿ ಆ ಪಾತ್ರದ ಕೆಳಗಿನ ರಂಧ್ರದ್ವಾರದಿಂದ ನೀರು ತುಂಬುತ್ತ ಬಂದು, ಆ ಪಾತ್ರವು ಮುಳುಗಿಹೋಗುವುದೋ, ಅಷ್ಟುಕಾಲವು ಒಂದು ಗಳಿಗೆಯೆನಿಸುವುದು. ಇಂತಹ ಗಳಿಗೆಗಳು ಆರು, ಅಥವಾ ಏಳಾದರೆ, ಯಾಮ (ಜಾವ) ವೆನಿಸುವುದು. ಇಂತಹ ಎಂಟು ಯಾಮಗಳಾದರೆ ಮನುಷ್ಯರಿಗೆ ಹಗಲುರಾತ್ರಿಗಳೊಡಗೂಡಿದ ಒಂದು ದಿನವೆನಿಸುವುದು. ಹದಿನೈದುದಿನಗಳಿಗೆ ಒಂದು ಪಕ್ಷವು ಆ ಪಕ್ಷಗಳು ಶುಕ್ಲವೆಂದೂ, ಕೃಷ್ಣವೆಂದೂ ಎರಡುಬಗೆಯಾಗಿರುವುವು. ಈ ಶುಕ್ಲಕೃಷ್ಣಪಕ್ಷಗಳೆರಡೂ ಸೇರಿದರೆ, ಒಂದು ತಿಂಗಳೆನಿಸುವುದು. ಮನುಷ್ಯರ ಲೆಕ್ಕದಲ್ಲಿ ನಡೆಯುವ ಈ ಒಂದು ತಿಂಗಳು, ಪಿತೃದೇವತೆಗಳಿಗೆ ಒಂದು ಅಹೋರಾತ್ರ (ದಿನ) ವೆನಿಸುವುದು. ಮನುಷ್ಯರ ಲೆಕ್ಕದಲ್ಲಿ ಎರಡುತಿಂಗಳಕಾಲವು ಋತುವೆನಿಸುವುದು. ಮೂರು ಋತುಗಳು ಒಂದು ಅಯನವೆನಿಸುವುದು. ಈ ಅಯನಗಳು ದಕ್ಷಿಣಾಯನವೆಂದೂ, ಉತ್ತರಾಯಣವೆಂದೂ ಎರಡು ಬಗೆಯಾಗಿ

ಆರುತಿಂಗಳು ದಕ್ಷಿಣಾಯನಕ್ಕೂ, ಮತ್ತಾರುತಿಂಗಳು ಉತ್ತರಾಯಣಕ್ಕೂ ಸೇರುವುವು. ಈ ದಕ್ಷಿಣೋತ್ತರಾಯಣಗಳೆರಡೂ ಸೇರಿ ಮನುಷ್ಯರಿಗೆ ಒಂದುವರುಷವೆನಿಸುವುದು. ಮನುಷ್ಯರ ಲೆಕ್ಕದಂತೆ ಈ ಒಂದು ವರುಷದಕಾಲವು ದೇವತೆಗಳಿಗೆ ಒಂದು ಅಹೋರಾತ್ರವೆನಿಸುವುದು. ನೂರು ಸಂವತ್ಸರಗಳು ಮನುಷ್ಯರಿಗೆ ಪೂರ್ಣಾಯುಸ್ಸೆಂದು ನಿರ್ಣಯಿಸಲ್ಪಟ್ಟಿರುವುದು ಮೇಲೆ ಹೇಳಿದ ಮನುಷ್ಯರ ಕಾಲಸಿಯಮದಂತೆಯೇ ಪಿತೃದೇವತೆಗಳಿಗೂ, ಇತರದೇವತೆಗಳಿಗೂ, ಅವರವರ ದಿನಪ್ರಮಾಣವನ್ನನುಸರಿಸಿ, ಅವರ ಲೆಕ್ಕದಲ್ಲಿ ಹದಿನೈದು ಅಹೋರಾತ್ರಗಳಿಗೆ ಒಂದು ಪಕ್ಷವೆಂದೂ, ಅಂತಹ ಎರಡು ಪಕ್ಷಗಳಿಗೆ ಮಾಸವೆಂದೂ, ಆರುಮಾಸಗಳಿಗೆ ಒಂದು ಅಯನವೆಂದೂ, ಎರಡು ಅಯನಗಳಿಗೆ ಒಂದು ಸಂವತ್ಸರವೆಂದೂ, ಕಾಲಪ್ರಮಾಣವು ಏರ್ಪಟ್ಟಿರುವುದು ಆ ದೇವತೆಗಳಿಗೂ ಅವರವರ ಲೆಕ್ಕದಂತೆ ನೂರು ಸಂವತ್ಸರಗಳೇ ಪೂರ್ಣಾಯುಸ್ಸೆಂದು ನಿರ್ಣಯಿಸಲ್ಪಟ್ಟಿರುವುದು. ಸರ್ವವ್ಯಾಪಿಯಾಗಿ, ನಿರಂಕುಶವಾದ ಗತಿಯುಳ್ಳ ಸೂರ್ಯದೇವನು, ಕ್ಷಣಮಾತ್ರವೂ ಎನೆ ಮುಚ್ಚದೆ ಜಾಗರೂಕನಾಗಿ, ಬುಧಚಂದ್ರರೇ ಮೊದಲಾದ ಗ್ರಹಗಳಿಂದಲೂ, ಅಶ್ವಿನಿ ಮೊದಲಾದ ತಾರೆಗಳಿಂದಲೂ, ಇತರನಕ್ಷತ್ರಗಳಿಂದಲೂ, ಕೂಡಿದಕಾಲಚಕ್ರದ ಮಧ್ಯದಲ್ಲಿದ್ದು, ಪರಮಾಣು ಮೊದಲಾಗಿ ಸಂವತ್ಸರದವರೆಗಿರುವ ಆ ಕಾಲವಿಂದ, ದ್ವಾದಶರಾಶಿಸ್ವರೂಪವಾದ ಈ ಜಗತ್ತೆಲ್ಲವನ್ನೂ ಸುತ್ತುತ್ತಬರುವನು ಈ ಕಾಲಪ್ರಮಾಣವೆಂಬುದು ಸೂರ್ಯಗತಿಯನ್ನು ಹಿಡಿದು ನೋಡುವಾಗ ಸಂವತ್ಸರವೆಂದೂ, ಗುರುಗತಿಯನ್ನು ಹಿಡಿದುನೋಡುವಾಗ ಪರಿವತ್ಸರವೆಂದೂ, ಮೂವತ್ತುದಿನಗಳ (ತಿಂಗಳ) ಲೆಕ್ಕದಿಂದ ಸೂರ್ಯಗತಿಯನ್ನು ಬೇರೆವಿಧದಲ್ಲಿ ಎಣಿಸುವುದರಿಂದ ಇಲಾವತ್ಸರವೆಂದೂ, ಚಂದ್ರಗತಿಯಿಂದ ಇದ್ವತ್ಸರವೆಂದೂ, ನಕ್ಷತ್ರಗತಿಯಿಂದ ವತ್ಸರವೆಂದೂ ಕರೆಯಲ್ಪಡುವುದು. ಹೀಗೆ ಸೂಕ್ಷ್ಮವಾಗಿಯೂ, ಸ್ಥೂಲವಾಗಿಯೂ ಬೇರ್ಪಟ್ಟು, ಸಮಸ್ತವಸ್ತುಗಳನ್ನೂ ವಿಕಾರಹೊಂದಿಸತಕ್ಕ ಕಾಲಸ್ವರೂಪವೂ, ಅದರ ಗತಿಯೂ ನಿನಗೆ ತಿಳಿಯಿತಷ್ಟೆ! ಈವಿಧವಾದ ಕಾಲಕ್ಕೆ ಈಡಾಗದೆ ಜೀವಿಸಲಪೇಕ್ಷೆಯುಳ್ಳವರು, ಈ ಕಾಲಶರೀರಕನಾಗಿಯೂ, ಆ ಕಾಲಕ್ಕೆ

ಒಳಪಡದೆ ಅದನ್ನು ನಿಯಮಿಸತಕ್ಕವನಾಗಿಯೂ, ಆ ಕಾಲಗತಿಯನ್ನು ತೋರಿಸತಕ್ಕ ಸೂರ್ಯನಲ್ಲಿ ಅಂತರಾತ್ಮನಾಗಿಯೂ ಇರುವ ಆ ಪರಮಾತ್ಮನೊಬ್ಬನನ್ನೇ ಉಪಾಸಿಸಬೇಕು ಪರಮಪುರುಷನು, ಪ್ರಾಣಿಗಳಿಗೆ, ಹುಟ್ಟು, ಮುಪ್ಪು, ಸಾವು, ಮುಂತಾದುವನ್ನು ನಿಯಮಿಸುತ್ತ ಸಮಸ್ತವಸ್ತುಗಳ ಕರ್ಮಶಕ್ತಿಯನ್ನೂ, ಕಾಲವೆಂಬ ತನ್ನ ಶಕ್ತಿಯಿಂದಲೇ ಅನೇಕವಿಧವಾಗಿ ನಡೆಸುತ್ತಿರುವನು. ಮತ್ತು ಯಾಗಗಳಿಂದ ಸಾಧಿಸಲ್ಪಡತಕ್ಕುದಾಗಿಯೂ, ಸ್ವರ್ಗಾದಿಸುಖಗಳಿಗೆ ಎಡೆಯಾಗಿಯೂ ಇರುವ ಫಲವನ್ನು ಕೊಡುವನು. ಈ ರೀತಿಯಾಗಿ ಜೀವಾತ್ಮನಿಗೆ, ಆಗಾಗ ಕರ್ಮವಿಷಯವಾಗಿ ಉಂಟಾಗತಕ್ಕ ಮೋಹವನ್ನು ನಿವೃತ್ತಿಮಾಡುವುದಕ್ಕಾಗಿಯೇ ಭಗವಂತನು, ಸೂರ್ಯಮಂಡಲಮಧ್ಯವರ್ತಿಯಾಗಿ ಜೀವಿಗಳ ಆಯುಸ್ಸನ್ನಳೆಯುತ್ತ ಆಕಾಶದಲ್ಲಿ ಸುತ್ತುತ್ತಿರುವನು. ಆದುದರಿಂದ ಓ ವಿದುರಾ! ಸೂರ್ಯಶರೀರಕನಾಗಿಯೂ, ಹಿಂದೆ ಹೇಳಿದ ಐದುಬಗೆಯ ಸಂವತ್ಸರಸ್ವರೂಪನಾಗಿಯೂ ಇರುವ ಭಗವಂತನನ್ನು ನಾವೆಲ್ಲರೂ ಅನವರತವೂ ಉಪಾಸಿಸುತ್ತಿರಬೇಕು" ಎಂದನು. ಆಗ ವಿದುರನು ತಿರುಗಿ ಮೈತ್ರೇಯನನ್ನು ಕುರಿತು, "ಎಲ್ಲೈ ಋಷಿಶ್ರೇಷ್ಠನೆ! ಪಿತೃಗಳು, ದೇವತೆಗಳು, ಮನುಷ್ಯರು, ಮುಂತಾದ ಬೇರೆಬೇರೆ ವರ್ಗದವರಿಗೆ, ಅವರವರ ದಿನ ಸಂಖ್ಯೆಯನ್ನನುಸರಿಸಿ ನೂರುಸಂವತ್ಸರಗಳು ಪೂರ್ಣಾಯುಸ್ಸೆಂದು ಹೇಳಿದೆಯಷ್ಟೆ? ಈ ಮೂರುಲೋಕಗಳನ್ನು ಬಿಟ್ಟುಹೊರಗಿರುವ ಜ್ಞಾನಿಗಳ ಆಯುಃಪರಿಮಾಣವೆಷ್ಟು? ಎಲ್ಲೈ ಮಹಾತ್ಮನೆ! ನೀನು ಕಾಲಗತಿಯನ್ನು ಚೆನ್ನಾಗಿ ತಿಳಿದವನು. ನಿಮ್ಮಂತಹ ಜ್ಞಾನಿಗಳು, ತನುಗೆ ಯೋಗಬಲದಿಂದ ಸಿದ್ಧಿಸಿದ ಜ್ಞಾನದೃಷ್ಟಿಯಿಂದ, ಸಮಸ್ತಲೋಕದ ಸ್ಥಿತಿಗತಿಗಳನ್ನೂ ಕೈಕನ್ನಡಿಯಂತೆ ಚೆನ್ನಾಗಿ ತಿಳಿಯಬಲ್ಲವರು. ನಿಮ್ಮಂತಹ ಯೋಗೀಶ್ವರರ ಜ್ಞಾನಕ್ಕೆ ತಿಳಿಯದುದೊಂದೂ ಇರದು. ಆದುದರಿಂದ ನನ್ನ ಸಂದೇಹವನ್ನು ನಿವೃತ್ತಿಗೊಳಿಸಬೇಕು" ಎಂದನು. ಆದಕ್ಕಾಮೈತ್ರೇಯನು, "ಓ ವಿದುರಾ! ಕೇಳು! ಮೊದಲು ಯುಗಭೇದವನ್ನೂ, ಅವುಗಳ ಪರಿಮಾಣವನ್ನೂ ತಿಳಿಸಿ, ಅದರಮೇಲೆ ಈ ತ್ರೈಲೋಕ್ಯಕ್ಕಿಂತಲೂ ಹೊರಗಿರುವ ಚತುರ್ಮುಖಾದಿಗಳ ಆಯುಃಪರಿಮಾಣವನ್ನು ತಿಳಿಸುವೆನು. ಕೃತತ್ರೇತಾ ದ್ವಾಪರ ಕಲಿಗಳೆಂದು ಯುಗಗಳು

ನಾಲ್ಕುವಿಧವಾಗಿರುವುವು. ಇವುಗಳಲ್ಲಿ ಕೃತಯುಗಕ್ಕೆ ದೇವತೆಗಳ ಲೆಕ್ಕದಿಂದ ಹದಿನಾರುಸಾವಿರದ ಎಂಟುನೂರು ವರುಷಗಳಾಗುವುವು. ತ್ರೇತಾಯುಗಕ್ಕೆ ಅದೇಲೆಕ್ಕದಿಂದ ಹದಿನೈದುಸಾವಿರದ ಆರುನೂರುವರುಷಗಳೂ, ದ್ವಾಪರಯುಗಕ್ಕೆ ಹದಿನಾಲ್ಕುಸಾವಿರದ ನಾನೂರುವರುಷಗಳೂ, ಕಲಿಯುಗಕ್ಕೆ ಹದಿನೈನೂರುಸಾವಿರದ ಇನ್ನೂರುವರುಷಗಳೂ ಹಿಡಿಯುವುವು. ಒಂದೊಂದು ಯುಗದಲ್ಲಿಯೂ, ಸಂಧ್ಯೆಯೆಂದೂ, ಯುಗವೆಂದೂ, ಸಂಧ್ಯಾಂಶವೆಂದೂ ! ಮೂರುವಿಭಾಗಗಳುಂಟು. ಸಂಧ್ಯೆಯೆಂಬುದು ಯುಗದ ಮೊದಲನೆಯಭಾಗವು. ಸಂಧ್ಯಾಶವೆಂಬುದು ಯುಗದ ಅಂತ್ಯಭಾಗವು. ಒಂದೊಂದುಯುಗಕ್ಕೂ ಮೇಲೆಹೇಳಿದ ವರುಷಗಳ ಲೆಕ್ಕದಲ್ಲಿ, ಸಾವಿರದ ಸಂಖ್ಯೆಯನ್ನು ಬಿಟ್ಟು, ಉಳಿದ ನೂರರ ಸಂಖ್ಯೆಯಲ್ಲಿ ಅರ್ಧಭಾಗವು, ಆಯಾ ಯುಗಗಳ ಮೊದಲನೆಯ ಭಾಗವಾದ ಯುಗಸಂಧ್ಯೆಗೂ, ಉಳಿದ ಅರ್ಧಭಾಗವು ಆಪರಕೊನೆಯ ಭಾಗವಾದ ಸಂಧ್ಯಾಂಶಕ್ಕೂ ಸೇರುವುದು. (ಎಂದರೆ ಕೃತಯುಗದಲ್ಲಿರುವ ಹದಿನಾರುಸಾವಿರದ ಎಂಟು ನೂರುವರುಷಗಳಲ್ಲಿ, ಹದಿನಾರುಸಾವಿರವನ್ನು ಬಿಟ್ಟು, ಎಂಟುನೂರು ವರುಷಗಳನ್ನು ಎರಡಾಗಿ ವಿಭಾಗಿಸಿಕೊಂಡರೆ, ನಾನೂರು ವರುಷಗಳು ಕೃತಯುಗಸಂಧ್ಯೆಯೆಂದೂ, ಉಳಿದ ನಾನೂರು ವರುಷಗಳು ಕೃತಯುಗಸಂಧ್ಯಾಂಶವೆಂದೂ ಎಣಿಸಲ್ಪಡುವುದು. ಇದರಂತೆಯೇ ಬೇರೆ ಮೂರು ಯುಗಗಳಿಗೂ ಕಾಲವಿಭಾಗವುಂಟು ಈ ಯುಗಸಂಧ್ಯೆಗೂ, ಯುಗಸಂಧ್ಯಾಂಶಕ್ಕೂ ನಡುವೆ ಇರುವ ಕಾಲವೇ ಯುಗವೆಂದು ಯುಗಲಕ್ಷಣವನ್ನು ತಿಳಿದ ಹಿರಿಯರು ನಿರ್ಣಯಿಸಿರುವರು ಅಂತಹ ಯುಗಭಾಗದಲ್ಲಿಯೇ ನಿತ್ಯವೆಂದೂ, ನೈಮಿತ್ತಿಕವೆಂದೂ, ಕಾಮ್ಯವೆಂದೂ ಕರೆಯಲ್ಪಡುವ ಮೂರು ಬಗೆಯ ಧರ್ಮಗಳನ್ನೂ ನಡೆಸಬೇಕೆಂಬ ವಿಧಿಯುಂಟು. ವಿದುರಾ ? ಇನ್ನು ಯುಗಧರ್ಮವನ್ನು ಹೇಳುವೆನು ಕೇಳು. ಕೃತಯುಗದಲ್ಲಿ ಧರ್ಮವೆಂಬುದು ತನ್ನ ನಾಲ್ಕುಪಾದಗಳಿಂದ ನಿಂತು ಮನುಷ್ಯರನ್ನನುವರ್ತಿಸುತ್ತಿರುವುದು. ಉಳಿದ ಮೂರುಯುಗಗಳಲ್ಲಿ, ಅಧರ್ಮವು ತನ್ನ ಒಂದೊಂದು ಪಾದವನ್ನು ಚಾಚುತ್ತ ಬರುವುದರಿಂದ, ಧರ್ಮಕ್ಕೆ ಅವಕಾಶವು ಸಾಲದೆ, ಅದು ತನ್ನ ಒಂದೊಂದು ಪಾದವನ್ನು ಹಿಂದಕ್ಕೆಳೆದು ಕ್ಷೀಣಿಸುತ್ತ ಬರುವುದು.

(ಎಂದರೆ ಕೃತಯುಗದಲ್ಲಿ ಧರ್ಮವು ತನ್ನ ನಾಲ್ಕುಪಾದಗಳಿಂದ ನಿರಾತಂಕವಾಗಿ ವರ್ತಿಸುತ್ತಿದ್ದಾಗ, ತ್ರೇತಾಯುಗದಲ್ಲಿ ಅಧರ್ಮವೆಂಬುದು ಲೋಕದಲ್ಲಿ ತಲೆಯಿಕ್ಕಿ, ತನ್ನ ಒಂದು ಕಾಲನ್ನು ಚಾಚಿ, ನಡೆಯಲಾರಂಭಿಸಿದುದನ್ನು ನೋಡಿ, ಧರ್ಮವು ತನ್ನ ಒಂದು ಕಾಲನ್ನು ಮಡುಗಿಸಿಕೊಳ್ಳುವುದು ಹೀಗೆಯೇ ನಡೆಯುತ್ತ ಬರುವುದರಿಂದ, ಕಲಿಯುಗದಲ್ಲಿ ಧರ್ಮವು ಒಂದೇ ಕಾಲಿನಿಂದ ನಿಲ್ಲುವುದು ಅಧರ್ಮವು ತನ್ನ ಮೂರುಪಾದಗಳಿಂದ ವರ್ತಿಸುವುದು.) ವಿದುರಾ! ಇನ್ನು ತ್ರೈಲೋಕ್ಯಕ್ಕಿಂತಲೂ ಹೊರಗಿರುವವರ ಆಯುಃಪರಿಮಾಣ ಮುಂತಾದುವುಗಳನ್ನು ತಿಳಿಸುವೆನು ಕೇಳು. ಈ ಮೂರು ಲೋಕದಿಂದ ಹೊರಗೆ ಬ್ರಹ್ಮದೇವನನವರೆಗಿರುವವರೆಲ್ಲರಿಗೂ, ಮೇಲೆ ಹೇಳಿದ ಒಂದುಸಾವಿರಯುಗಗಳು ಒಂದು ಹಗಲೆನಿಸುವುದು. ಅಷ್ಟೇ ಯುಗಗಳು ಒಂದುರಾತ್ರಿಯೆನಿಸುವುದು. ಆ ರಾತ್ರಿಯಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ಯಾವ ಕಾರ್ಯವನ್ನೂ ನಡೆಸದೆ ಮಲಗಿರುವನು. ಹಗಲಾದ ಮೇಲೆ ಎಚ್ಚರಗೊಂಡು ತನ್ನ ಸೃಷ್ಟಿಕಾರ್ಯವನ್ನಾರಂಭಿಸುವನು. ಆದುದರಿಂದ ಎಂಟುಸಾವಿರ ಚತುರ್ಯುಗಗಳು ಬ್ರಹ್ಮನಿಗೆ ಒಂದು ದಿನವೆನಿಸುವುದು. ಆ ಬ್ರಹ್ಮನು ತನ್ನ ಒಂದು ಹಗಲಿನಲ್ಲಿ ನಡೆಸುವ ಸೃಷ್ಟಿಕಾರ್ಯದಲ್ಲಿಯೇ, ಹದಿನಾಲ್ಕುಮನುಗಳ ಅಧಿಕಾರಕ್ಕೊಳಪಟ್ಟ ಆಯಾ ಮನ್ವಂತರಗಳ ಕಾಲಪ್ರಮಾಣವೆಲ್ಲವೂ ಸೇರಿಹೋಗುವುದು (ಎಂದರೆ ಆ ಬ್ರಹ್ಮನ ಒಂದು ಹಗಲಿನಲ್ಲೇಯೇ ಹದಿನಾಲ್ಕು ಮನ್ವಂತರಗಳೂ ನಡೆದುಹೋಗುವುವು.) ಒಬ್ಬೊಬ್ಬ ಮನುವೂ ತನಗೆ ನಿರ್ಣಯಿಸಲ್ಪಟ್ಟಂತೆ ಸ್ವಲ್ಪಹೆಚ್ಚಾಗಿ ಎಪ್ಪತ್ತೊಂದುಯುಗಕಾಲದವರೆಗೆ ಈ ತ್ರೈಲೋಕ್ಯಾಧಿಪತ್ಯವನ್ನು ನಡೆಸುತ್ತಬರುವನು. ಒಬ್ಬ ಮನುವಿನ ಆಳ್ವಿಕೆಯಿಂದಾರಂಭಿಸಿ, ಮತ್ತೊಬ್ಬ ಮನುವಿನ ಆಳ್ವಿಕೆಯು ಆರಂಭಿಸುವವರೆಗೆ ನಡೆಯುವ ಈ ಮಧ್ಯಕಾಲಕ್ಕೆ ಆಯಾಮನ್ವಂತರವೆಂದು ಹೆಸರು. ಈ ಮನ್ವಂತರಗಳಲ್ಲಿ ಆಯಾ ಮನುಗಳೂ, ಮತ್ತು ಆ ಮನುವಂಶದಲ್ಲಿ ಕ್ರಮವಾಗಿ ಹುಟ್ಟುವ ರಾಜರೂ,ದೇವತೆಗಳೂ, ಮಹರ್ಷಿಗಳೂ,ಇವರೆಲ್ಲರೂ ಭಗವದಂಶದಿಂದಲೇ ಹುಟ್ಟಿರಾಜ್ಯವನ್ನು ಪಾಲಿಸುತ್ತಿರುವರು ಈವಿಧವಾದ ಸೃಷ್ಟಿಯು ಚತುರ್ಮುಖನ ಒಂದೊಂ

ದು ಹಗಲಿನಲ್ಲಿಯೂ ನಡೆಯುತ್ತಿರುವುದರಿಂದಲೇ ಇದಕ್ಕೆ ದೈನಂದಿನಸೃಷ್ಟಿ ಯೆಂದು ಹೆಸರು. ಇಬರಲ್ಲಿ ತ್ರೈಲೋಕ್ಯವೂ ಅಡಗಿರುವುದು. ಈ ದೈನಂ ದಿನಸೃಷ್ಟಿಯಲ್ಲಿಯೇ ಜೀವಾತ್ಮರು ತಮ್ಮತಮ್ಮ ಕರ್ಮಾನುಸಾರವಾಗಿ ತಿರ್ಯಕ್ಕುಗಳಾಗಿಯೂ,ಪಿತೃದೇವತೆಗಳಾಗಿಯೂ, ದೇವತೆಗಳಾಗಿಯೂ ಜನಿ ಸಿ, ಆ ಕರ್ಮಫಲವು ಮುಗಿದಮೇಲೆ ನಾಶಹೊಂದುವರು. ಈ ಮನ್ವಂತ ರಗಳಲ್ಲಿಯೇ ಭಗವಂತನು ಮನು ಮೊದಲಾದ ಅನೇಕರೂಪಗಳಿಂದವತರಿಸಿ, ಅದ್ಭುತಕಾರ್ಯಗಳನ್ನು ನಡೆಸುತ್ತ ಲೋಕವನ್ನು ಪರಿಪಾಲಿಸುತ್ತಿರುವನು. ಆ ಬ್ರಹ್ಮನ ಒಂದೊಂದು ಹಗಲಿನಲ್ಲಿಯೇ ಇಷ್ಟು ಕಾರ್ಯಗಳೂ ನಡೆದು ಹೋಗುವುದು. ಹೀಗೆ ಬ್ರಹ್ಮನು ಹಗಲೆಲ್ಲವೂ ಈ ಸೃಷ್ಟಿಕಾರ್ಯದಲ್ಲಿ ನಿರ ತನಾಗಿದ್ದು, ರಾತ್ರಿಯಲ್ಲಿ ತಮೋಗುಣದ ಹೆಚ್ಚಿಕೆಯಿಂದ ನಿಶ್ಚೇಷ್ಟನಾಗಿ ನಿದ್ರಿಸುವನು. ಬ್ರಹ್ಮನು ಹೀಗೆ ನಿದ್ರಿಸುವುದಕ್ಕೆ ತೊಡಗಿದೊಡನೆಯೇ ಸೂರ್ಯಚಂದ್ರಾದಿಗಳೊಡಗೂಡಿದ ತ್ರೈಲೋಕ್ಯವೂ ನಶಿಸುವುದು ಅಂಥ ಕಾರವೊಂದೇ ಸುತ್ತಲೂ ಮರೆಸಿಕೊಳ್ಳುವುದು. ಇದೇ ಪ್ರಳಯವು. ಪ್ರಳ ಯವೆಂಬ ಈ ಕಲ್ಪಾಂತದಲ್ಲಿ ಎಂದರೆ, ಬ್ರಹ್ಮನಿಗೆ ಸಂಜೆಯಾದೊಡನೆ, ಭಗ ವಂತನ ಶಕ್ತಿರೂಪವಾಗಿಯೂ, ಸಂಕರ್ಷಣನ ಮುಖದಿಂದ ಹೊರಟುದಾಗಿ ಯೂ ಇರುವ ಒಂದು ದೊಡ್ಡ ಬೆಂಕಿಯುರಿಯಿಂದ ಮೂರುಲೋಕವೂ ಪರ್ಣವಾಗುತ್ತ ಬರುವುವು. ಆಗ ಆ ಬೆಂಕಿಯುರಿಯ ತಾಪವನ್ನು ಸಹಿಸಲಾರ ದೆ, ಮಹರ್ಲೋಕನಿವಾಸಿಗಳಾದ ಭೃಗು ಮೊದಲಾದ ಋಷಿಗಳು ಆ ಸ್ಥಳ ವನ್ನು ಬಿಟ್ಟು ಜನೋಲೋಕಕ್ಕೆ ಹೋಗಿ ಸೇರುವರು. ಈ ಕಲ್ಪಾವಸಾನ ಕಾಲದಲ್ಲಿಯೇ ಪ್ರಳಯನೀರುತವೆಂದು ಕರೆಯಲ್ಪಡುವ ಒಂದು ದೊಡ್ಡ ಬಿರುಗಾಳಿಯೂ ಏಳುವುದು. ಆ ಗಾಳಿಯ ಬಡಿತದಿಂದ ಸಮುದ್ರಗಳೆ ಲ್ಲವೂ ಎಲ್ಲೆಯನ್ನು ಮೀರಿ ಉಲ್ಲೋಲಕಲ್ಲೋಲವಾಗಿ ಉಕ್ಕಿಬಂದು,ಪ್ರಪಂ ಚವೆಲ್ಲವನ್ನೂ ಮುಳುಗಿಸಿ ಏಕಾರ್ಣವವಾಗಿ ಮಾಡುವುದು. ಹೀಗೆ ಆ ಸಮು ದ್ರಜಲದಿಂದ ಸಮಸ್ತಲೋಕವೂ ಮುಳುಗಿದಮೇಲೆ, ಮೊದಲು ತಲೆ ದೋರಿದ್ದ ಸಂಕರ್ಷಣಮುಖಾಗ್ನಿಯ ವೇಗವೂ ಅಡಗಿ ಹೋಗುವುದು. ಆಗ ಆ ಪ್ರಳಯಸಮುದ್ರಮಧ್ಯದಲ್ಲಿ ಭಗವಂತನೊಬ್ಬನೇ ಆದಿಶೇಷಶರೀರವೆಂಬ

ಹಾಸಿಗೆಯಲ್ಲಿ ಮಲಗಿ, ತನ್ನನ್ನೇ ತಾನು ಅನುಭವಿಸುವುದರಿಂದುಂಟಾದ ಆ ನಂದದಿಂದ, ಯೋಗನಿದ್ರೆಯಲ್ಲಿ ಕಣ್ಣುಗಳನ್ನು ಮುಚ್ಚಿ ಮಲಗಿರುವನು. ಜನೋಲೋಕದಲ್ಲಿರುವ ಭೃಗು ಮೊದಲಾದ ಮಹರ್ಷಿಗಳೆಲ್ಲರೂ ಆಗಲೂ ಭಗವಂತನನ್ನು ಅನೇಕವಿಧದಿಂದ ಸ್ತೋತ್ರಮಾಡುತ್ತಿರುವರು ವಿದುರಾ ! ಪರಮಾಣುಕಾಲದಿಂದ ಹಿಡಿದು ಸಂತ್ಸರದವರೆಗಿನ ಈ ಕಾಲವಿಭಾಗದಿಂದ ಏರ್ಪಟ್ಟಿರುವ ಅಹೋರಾತ್ರಗಳನ್ನನುಸರಿಸಿ, ಬ್ರಹ್ಮನಿಗೆ ಇತರ ಪ್ರಾಣಿಗಳಿಗಿಂತಲೂ ಆಯುಸ್ಸು ಹೆಚ್ಚೆಂಬುದು ಏರ್ಪಟ್ಟಿತಷ್ಟೆ? ಆಬ್ರಹ್ಮನ ಆಯುಸ್ಸೂ ಕೂಡ ಕ್ರಮಕ್ರಮವಾಗಿ ಕ್ಷೀಣಿಸುತ್ತಲೇ ಹೋಗುವುದು. ಆದುದರಿಂದ ಬ್ರಹ್ಮನ ಸ್ಥಿತಿಯೂಕೂಡ ನಮ್ಮ ಸ್ಥಿತಿಯಂತೆಯೇಹೊರತು ನಿತ್ಯವಾದುದಲ್ಲ. ಈಬ್ರಹ್ಮನ ಆಯುಷ್ಕಾಲದಲ್ಲಿ ಅರ್ಧಭಾಗಕ್ಕೆ ಒಂದು ಪರಾರ್ಧವೆಂದು ಹೆಸರು. ಈಗಾಗಲೇ ಪ್ರಕೃತಸೃಷ್ಟಿಕರ್ತನಾದ ಬ್ರಹ್ಮನ ಆಯುಸ್ಸಿನಲ್ಲಿ ಅರ್ಧಭಾಗವು, ಎಂದರೆ, ಪೂರ್ವಪರಾರ್ಧವು ಕಳೆದುಹೋಯಿತು. ಎರಡನೆಯದು ನಡೆಯುತ್ತಿರುವುದು. ಈ ಕಳೆದುಹೋದ ಪೂರ್ವಪರಾರ್ಧದಲ್ಲಿ, ವೇದಮಯನಾದ (ಶಬ್ದಬ್ರಹ್ಮವೆಂದು ಕರೆಯಲ್ಪಡುವ) ಬ್ರಹ್ಮನು ಉದ್ಭವಿಸಿದಕಾಲಕ್ಕೆ ಬ್ರಹ್ಮಕಲ್ಪವೆಂದು ವ್ಯವಹಾರವು. ಸಮುದ್ರಮಧ್ಯದಲ್ಲಿ ಶೇಷಶಾಯಿಯಾಗಿ ಮಲಗಿದ್ದ ಅನಿರುದ್ಧನ ನಾಭಿಕಮಲವು ಹುಟ್ಟಿದ ಕಾಲಕ್ಕೆ ಪದ್ಮಕಲ್ಪವೆಂದು ಹೆಸರು. ಆದುದರಿಂದ ಪೂರ್ವಪರಾರ್ಧದಲ್ಲಿ ಬ್ರಹ್ಮಕಲ್ಪವೆಂದೂ, ಪದ್ಮಕಲ್ಪವೆಂದೂ ಹೇಳಲ್ಪಡುವ ಎರಡು ಭಾಗಗಳೂ ಈಗಾಗಲೇ ಗತಿಸಿ ಹೋದುವು ಈಗ ನಡೆಯುತ್ತಿರುವ ದ್ವಿತೀಯಪರಾರ್ಧದ ಆದಿಭಾಗದಲ್ಲಿಯೇ ಶ್ರೀಮಹಾವಿಷ್ಣುವು ವರಾಹಾವತಾರವನ್ನು ಧರಿಸಿದನು. ಇದಕ್ಕಾಗಿ ಈಗ ನಡೆಯುತ್ತಿರುವ ಕಾಲವನ್ನು ವರಾಹಕಲ್ಪವೆನ್ನುವರು. ಓ ವಿದುರಾ ! ಕಾಲಸ್ವರೂಪನಾಗಿಯೂ, ವಿಶ್ವಾತ್ಮಕನಾಗಿಯೂ ಇರುವ ಆ ಪರಮಾತ್ಮನೊಬ್ಬನ ವಿಷಯದಲ್ಲಿಮಾತ್ರ, ಪರಮಾಣು ಮೊದಲಾಗಿ ಪರಾರ್ಧದ ಕೊನೆಯವರೆಗೆ ನಡೆಯತಕ್ಕಕಾಲವೆಂಬುದು ಸ್ವಲ್ಪಮಾತ್ರವೂ ತನ್ನ ಶಕ್ತಿಯನ್ನು ತೋರಿಸಲಾರದೆ, ಆ ಈಶ್ವರನಿಗೇ ಅಧೀನವಾಗಿರುವುದು. ಚತುರ್ಮುಖನವರೆಗಿರುವವರೆಲ್ಲರೂ ಈ ಕಾಲ

ಕ್ಕೆ ವಶರಾಗಿರುವರು. ಆ ಚತುರ್ಮುಖನ ಪೂರ್ಣವಾದ ಆಯುಃಪ್ರಮಾಣ ವೆನಿಸಿಕೊಂಡ ಎರಡು ದ್ವಿಪರಾರ್ಧಕಾಲಗಳೂಕೂಡ, ಆ ಭಗವಂತನಿಗೆ ನಿಮಿಷಪ್ರಾಯವಾಗಿರುವುದು. ಆದುದರಿಂದ,ಭಗವಂತನು ಅದಿಮಧ್ಯಾಂತಗ ಳೊಂದೂ ಇಲ್ಲದವನು. ಮತ್ತು ನಾನು ರೂಪ ವಿಕಾರಗಳಿಲ್ಲದವನು.ಆದುದ ರಿಂದ ಕಾಲವೆಂಬುದು ಅವನ ವಿಷಯದಲ್ಲಿ ಯಾವ ವ್ಯತ್ಯಾಸವನ್ನೂ ಉಂಟು ಮಾಡಲಾರವು. ಭಗವಂತನು ತನಗೆ ಶರೀರಗಳಾದ ಪ್ರಕೃತಿಪುರುಷರನ್ನು ಪ್ರ ಪಂಚರೂಪಕ್ಕೆ ಮಾರ್ಪಡಿಸಿ, ತಾನೂ ಅದರೊಳಗೆ ಪ್ರವೇಶಿಸಿ, ಅನೇಕನಾ ಮರೂಪಗಳಿಂದ ಕಾಣಿಸಿಕೊಂಡರೂ, ಆ ಪ್ರಪಂಚದ ವ್ಯಾಪಾರವಿಹಾರಗಳ ನ್ನು ನಿರ್ವಹಿಸುವುದಕ್ಕಾಗಿಯೇ ಹಾಗಿರುವನೇಹೊರತು ಬೇರೆಯಲ್ಲ. ಸಾಕ್ಷಾ ತ್ತಾಗಿ ಅವನು ಈ ವಿಕಾರಗಳನ್ನು ಹೊಂದತಕ್ಕವನಲ್ಲ. ಆದರೆ ಹಿರ ಣ್ಯಗರ್ಭನೇ ಮೊದಲಾದ ಜೀವಾತ್ಮರಿಗೂ ಸಹಜವಾಗಿ ನಾಮರೂಪ ಗಳಿಲ್ಲದಿರುವಾಗ, ಅವರಿಗೆಮಾತ್ರ ಈ ಕಾಲದಿಂದುಂಟಾಗುವ ವ್ಯತ್ಯಾ ಸವೆಲ್ಲಿಯದು?" ಎಂದು ನೀನು ಕೇಳಬಹುದು. ಅವರ ವಿಷಯವೇ ಬೇರೆ ! ಆ ಪರಮಾತ್ಮನನ್ನು ಬಿಟ್ಟು ಉಳಿದ ಜೀವಗಳೆಲ್ಲವೂ, ಅನಾದಿಯಾದಕರ್ಮ ಸಂಬಂಧದಿಂದಲೇ ನಾಮರೂಪಗಳನ್ನು ಹೊಂದುವುವು. ಆದುದರಿಂದಕಾಲ ವು ಅವರನ್ನು ಬಂಧಿಸಬಲ್ಲುದು. ಈಶ್ವರನಾದರೋ ತನ್ನ ಸಂಕಲ್ಪದಿಂದ ಲೇ ಪ್ರಪಂಚವನ್ನು ಸೃಷ್ಟಿಸಿ, ಅದನ್ನು ಆಯಾ ವ್ಯಾಪಾರಂಗಳಲ್ಲಿ ನಿಯಮಿ ಸುವುದಕ್ಕಾಗಿ ತಾನೂ ಒಳಹೊಕ್ಕಿರುವನು. ಅವನು ಇದನ್ನು ತನ್ನ ಲೀಲಾ ರ್ಥವಾಗಿ ಹೀಗೆ ನಡೆಸುವನೇಹೊರತು, ಕರ್ಮಕ್ಕೆ ಕಟ್ಟುಬಿದ್ದುದರಿಂದ ದಲ್ಲ. ಆದುದರಿಂದ ಪರಮಾಣು ಮೊದಲಾಗಿ ಪರಾರ್ಧದವರೆಗೆ ವಿಭಾಗ ಹೊಂದಿರುವ ಕಾಲವೂಕೂಡ ಈಶ್ವರನ ವಿಷಯದಲ್ಲಿ ಏನನ್ನೂ ಮಾಡಲಾರ ದು. ಬ್ರಹ್ಮರುದ್ರಾದಿದೇವತೆಗಳೆಲ್ಲರನ್ನೂ ಇದು ವಶಪಡಿಸಿಕೊಂಡಿರುವುದು. ಕಾಲ ದೇಶದ್ರವ್ಯಗಳೆಂಬ ಮೂರುಬಗೆಯ ಪರಿಮಾಣಕ್ಕೂ ಒಳಪಡದೆ ತನಗೆ ತಾನೇ ಪ್ರಭುವಾದ ಆ ಭಗವಂತನನ್ನು ಕಾಲವೆಂಬುದು ಅಣುಮಾತ್ರವೂ ಕಟ್ಟಿಡಲಾರದು. ವಿದುರಾ ! ಆ ಪರಮಾತ್ಮನ ವೈಭವವನ್ನು ಸ್ವಲ್ಪವಾಗಿ ಸಂಗ್ರಹಿಸಿ ತಿಳಿಸುವೆನು ಕೇಳು. ಈ ಬ್ರಹ್ಮಾಂಡವೆಂಬುದು ಶಬ್ದವೇ ಮೊ

ದಲಾದ ಐದು ವಿಷಯಗಳು, ವಾಕ್ಕು ಮೊದಲಾದ ಐದು ವ್ಯಾಪಾರಗಳು, ಪ್ರಾಣವೇ ಮೊದಲಾದ ಐದು ವಾಯುಗಳು, ಮನಸ್ಸು, ಹೀಗೆ ಹದಿನಾರುಬಗೆಯ ವಿಕಾರಗಳಿಂದ ಕೂಡಿ, ಒಂದಕ್ಕೊಂದು ಮೇಲೆಮೇಲೆ ಹತ್ತರಷ್ಟು ಹೆಚ್ಚು ಪ್ರಮಾಣವುಳ್ಳ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಅಹಂಕಾರ, ಮಹತ್ತು ಪ್ರಕೃತಿಯೆಂಬ ಈ ಏಳು ಆವರಣಗಳಿಂದ ಆವರಿಸಲ್ಪಟ್ಟು, ಐವತ್ತುಕೋಟಿಯೋಜನವಿಸ್ತೀರ್ಣವಾಗಿರುವುದು. ಇಷ್ಟು ವಿಶಾಲವಾದ ಬ್ರಹ್ಮಾಂಡವೂ, ಇನ್ನೂ ಇದರಂತೆಯೇ ಇರುವ ಎಷ್ಟೋ ಅಂಡರಾಶಿಗಳೂ, ಮೂಲಪ್ರಕೃತಿಯೆಲ್ಲಿ ಒಂದು ಪರಮಾಣುಪ್ರಾಯವಾಗಿ ಕಾಣುತ್ತಿರುವುವು. ಜಗತ್ತಿಗೆ ಕಾರಣಗಳೆನಿಸಿದ ಮಹತ್ತು ಮೊದಲಾದ ಸಮಸ್ತಕಾರಣವಸ್ತುಗಳಿಗೂ ಕಾರಣವಾಗಿ, ಎಂದೆಂದಿಗೂ ನಾಶವಿಲ್ಲದೆ ಶಾಶ್ವತವೆನಿಸಿಕೊಂಡ ಈ ಮೂಲಪ್ರಕೃತಿಯೇ ಪರಾತ್ಪರನಾದ ಆ ಭಗವಂತನಿಗೆ ಶರೀರವೆಂದು ಶ್ರುತಿಗಳು ನಿರೂಪಿಸುತ್ತಿರುವುವು. ಹೀಗೆ ಮನಸ್ಸಿನಿಂದ ಯೋಚಿಸುವುದಕ್ಕೂ ಸಾಧ್ಯವಲ್ಲದ ಮಹಾಮಹಿಮೆಯುಳ್ಳ ಪರಮಾತ್ಮನ ವಿಷಯದಲ್ಲಿ ಕಾಲವು ಏನನ್ನು ತಾನೇ ಮಾಡಬಲ್ಲುದು? ಕಾಲವೆಂಬುದು ಆ ಈಶ್ವರನ ಆಜ್ಞೆಗೊಳಪಟ್ಟುದೇಹೊರತು, ಅವನು ಅದಕ್ಕೆ ಕಟ್ಟುಬಿದ್ದವನಲ್ಲ. ಮತ್ತು ಕಾಲವೆಂಬುದನ್ನು ಆ ಪರಮಾತ್ಮಸ್ವರೂಪವೆಂದೇ ತಿಳಿ!" ಎಂದನು. ಇಲ್ಲಿಗೆ ಹನ್ನೊಂದನೆಯ ಅಧ್ಯಾಯವು.

ಚತುರ್ಮುಖಬ್ರಹ್ಮನಿಂದ ನಡೆದ ಪ್ರಪಂಚಸೃಷ್ಟಿಕ್ರಮವು. ಮೊದಲು ಚತುರ್ಮುಖನು ಪ್ರಜಾವೃದ್ಧಿಗಾಗಿ ಶತರೂಪೆ ಮತ್ತು ಮನುವೆಂಬ ಸ್ತ್ರೀ ಪುರುಷರನ್ನು ಸೃಷ್ಟಿಸಿದುದು.

ವಿದುರಾ! ಪರಮಾತ್ಮನು ಕಾಲಸ್ವರೂಪದಿಂದ ಹೀಗೆ ತನ್ನ ಶಕ್ತಿಯನ್ನು ತೋರಿಸುತ್ತಿರುವನಲ್ಲವೆ? ಇನ್ನು ಬ್ರಹ್ಮನಿಂದ ನಡೆಯುವ ಪ್ರಪಂಚಸೃಷ್ಟಿಕ್ರಮವನ್ನು ವಿವರಿಸುವೆನು ಕೇಳು. ಆದಿಕರ್ತನಾದ ಬ್ರಹ್ಮದೇವನು ಮೊಟ್ಟಮೊದಲು, ಅಂಧತಾಮಿಸ್ರವೆಂದೂ, ತಾಮಿಸ್ರವೆಂದೂ, ಮಹಾಮೋಹವೆಂದೂ, ಮೋಹವೆಂದೂ, ತಮಸ್ಸೆಂದೂ ಕರೆಯಲ್ಪಡುವ ಐದುಬಗೆಯ

ಸ್ವಭಾವಗಳನ್ನು ಸೃಷ್ಟಿಸಿದನು. ಇವೆಲ್ಲವೂ ಅಜ್ಞಾನದ ಕಾರ್ಯಗಳು. ಇವುಗಳಲ್ಲಿ ಜೀವಸಿಗೆ ತನ್ನ ಸ್ವರೂಪವೇ ತಿಳಿಯದಂತೆ ಮರೆಸುವುದೇ ತಮಸ್ಸು. ದೇಹಾದಿಗಳಲ್ಲಿ "ನಾನು, ನನ್ನದು" ಎಂಬ ಭ್ರಾಂತಿಯೇ ಮೋಹವು. ವಿಷಯಸುಖಗಳಲ್ಲಿ ಆಸೆಯನ್ನು ಹುಟ್ಟಿಸುವುದು ಮಹಾಮೋಹವು. ಆ ವಿಷಯಸುಖಕ್ಕೆ ಏನಾದರೂ ತಡೆಯುಂಟಾದಾಗ ಹುಟ್ಟುವ ಕೋಪವೇ ತಾಮಿಸ್ರವೆನಿಸುವುದು. ಅಂತಹ ಸುಖಕ್ಕೇನಾದರೂ ಭಂಗವುಂಟಾದಾಗ ತನಗೇನೋ ನಷ್ಟವುಂಟಾದಂತೆ ಭ್ರಾಂತಿಪಡುವುದು ಅಂಧತಾಮಿಸ್ರವೆನಿಸುವುದು. ಬ್ರಹ್ಮನು, ಅಜ್ಞಾನಹೇತುಗಳಾದ ಈ ಅವಿದ್ಯಾಪಂಚಕವನ್ನೇ ಮೊದಲು ಸೃಷ್ಟಿಸಿದನು. ಹೀಗೆ ಸೃಷ್ಟಿಸಿದಮೇಲೆ ಚತುರ್ಮುಖನಿಗೆ, ಅಂತಹ ಪಾಪಸೃಷ್ಟಿಯನ್ನು ತಾನು ಮಾಡಿದುದಕ್ಕಾಗಿ ಮನಸ್ಸಿನಲ್ಲಿ ಪಶ್ಚಾತ್ತಾಪವು ಹುಟ್ಟಿತು. ಈ ಪಶ್ಚಾತ್ತಾಪದಿಂದ ಮನಸ್ಸಿನಲ್ಲಿ ಬಹಳವಾಗಿ ಕೊರಗುತ್ತ, ತಿರುಗಿ ಭಗವಂತನನ್ನು ಧ್ಯಾನಿಸುತ್ತಿದ್ದನು. ಈ ಭಗವದ್ಧ್ಯಾನದಿಂದ ಮನಸ್ಸು ಪವಿತ್ರವಾದಮೇಲೆ, ಜಿತೇಂದ್ರಿಯರಾಗಿಯೂ, ಪರಮಪವಿತ್ರರಾಗಿಯೂ ಇರುವ ಸನಕ, ಸನಂದನ, ಸನಾತನ, ಸನತ್ಸುಜಾತರೆಂಬ ನಾಲ್ವರು ಮುನಿಕುಮಾರರನ್ನು ಸೃಷ್ಟಿಸಿದನು. ತನಿಂದ ಸೃಷ್ಟಿಸಲ್ಪಟ್ಟ ಈ ಕುಮಾರರನ್ನು ನೋಡಿ ಬ್ರಹ್ಮನು 'ಎಲ್ಲೆ ಮಕ್ಕಳಿರಾ! ಇನ್ನುಮೇಲೆ ನೀವು ನಿಮ್ಮ ನಿಮ್ಮ ಅಂಶದಿಂದ ಪ್ರಜೆಗಳನ್ನು ಸೃಷ್ಟಿಸಿ, ಪ್ರಪಂಚವನ್ನು ವೃದ್ಧಿಸೊಳಿಸಬೇಕು!" ಎಂದು ನಿಯಮಿಸಿದನು. ನಿಷ್ಕಾಮರಾಗಿಯೂ, ಕೇವಲಭಗವದ್ಭಕ್ತಿಪರಾಯಣರಾಗಿಯೂ ಇರುವ ಆ ಕುಮಾರರು, ಕೇವಲ ಮೋಕ್ಷವೊಂದರಲ್ಲಿಯೇ ಆಸೆಯುಳ್ಳವರಾಗಿದ್ದುದರಿಂದ, ಬ್ರಹ್ಮನ ಮಾತಿಗೆ ಕೋಪಗೊಂಡು, ಅವನನ್ನು ಹಾಸ್ಯಮಾಡುತ್ತ "ತಾತಾ! ಬಹಳ ಚೆನ್ನಾಯಿತು! ಕೇವಲಸಿಷ್ಟಾಮರಾದ ನಮಗೆ ಈ ಪಾಪಕಾರ್ಯವನ್ನು ನಿಯೆಮಿಸುವೆಯಾ" ಎಂದು ಹೇಳಿ ಅವನ ಆಜ್ಞೆಯನ್ನು ನಿರಾಕರಿಸಿಬಿಟ್ಟರು. ಆಗ ಚತುರ್ಮುಖನಿಗೆ ತನ್ನ ಮಕ್ಕಳೇ ತನ್ನನ್ನು ಅವಮಾನಪಡಿಸಿ ನಿರಾಕರಿಸಿದುದಕ್ಕಾಗಿ ಸಹಿಸಲಾರದ ಕೋಪವುಂಟಾಯಿತು. ದುಸ್ಸಹವಾದ ಆ ಕೋಪಾವೇಶವನ್ನು ಹೊರಕ್ಕೆ ಬಿಡದೆ ತನ್ನಲ್ಲಿಯೇ ಅಡಗಿಸಿಕೊಳ್ಳುವುದಕ್ಕೆ ಯತ್ನಿಸಿದನು. ಚತುರ್ಮುಖನು

ಆ ಕೋಪೋದ್ರೇಕವನ್ನು ಪ್ರಯತ್ನಪೂರ್ವಕವಾಗಿ ತಡೆದಿಟ್ಟುಕೊಳ್ಳುತಿದ್ದರೂ, ಅದು ಒಳಗೆ ನಿಲ್ಲಲಾರದೆ, ಅವನ ಹುಬ್ಬುಗಳ ನಡುವೆ, ಕಪ್ಪುಬಿಳುಪು ಬಣ್ಣದಿಂದ ಕೂಡಿದ ಒಂದು ಕುಮಾರಾಕೃತಿಯಾಗಿ ಹೊರಕ್ಕೆ ಹೊರಟಿತು. ವಿದುರಾ! ಇವನೇ ರುದ್ರದೇವನೆಂದು ತಿಳಿ! ಹೀಗೆ ಕುಮಾರಾಕೃತಿಯಿಂದ ಹುಟ್ಟಿದ ಆ ವ್ಯಕ್ತಿಯು, ತನಗೆ, ಹೆಸರು, ವಾಸಸ್ಥಳ, ಸಂಗಡಿಗರೊಬ್ಬರೂ ಇಲ್ಲದುದಕ್ಕಾಗಿ, ಬ್ರಹ್ಮನ ಮುಂದೆ ಅಳುವುದಕ್ಕೆ ತೊಡಗಲು, ಬ್ರಹ್ಮನು ಆ ಕುಮಾರನ ದುಃಖಕಾರಣವನ್ನು ತನ್ನ ಜ್ಞಾನದೃಷ್ಟಿಯಿಂದ ತಿಳಿದು, ಸಮಾಧಾನಪಡಿಸುವನು. "ಕುಮಾರಾ! ದುಃಖಿಸಬೇಡ! ನೀನು ಹುಟ್ಟಿದಾಗಲೇ ಹೀಗೆ ಭಯಪಟ್ಟು ಬಾಲಕನಂತೆ ರೋದಿಸುವುದಕ್ಕೆ ತೊಡಗಿದೆ! ಆದುದರಿಂದ, ನಿನಗೆ ರುದ್ರನೆಂಬ ಹೆಸರೇ ಲೋಕದಲ್ಲಿ ಪ್ರಸಿದ್ಧವಾಗಲಿ! ಜಂಭ್ರ, ಸೂರ್ಯ, ವಹ್ನಿ (ಅಗ್ನಿ) ವಾಯು, ಜಲ, ಆಕಾಶ, ಭೂಮಿ, ಪ್ರಾಣ, ತಪಸ್ಸು, ಹೃದಯ, ಇಂದ್ರಿಯಗಳೆಂಬ ಈ ಹನ್ನೊಂದು ಸ್ಥಾನಗಳೂ ನಿನಗೆ ವಾಸಯೋಗ್ಯಗಳಾಗಲಿ! ಈ ಸ್ಥಾನಗಳಲ್ಲಿ ನೀನು ನೆಲೆಗೊಂಡು, ಮನ್ಯು, ಮನು, ಮಹಾಕಾಲ, ಮಹಾನ್, ಶಿವ, ಋತಧ್ವಜ, ಉರುರೇತಸ್ಸು, ಭವ, ಕಾಲ, ವಾಮದೇವ, ಧೃತವ್ರತರೆಂಬ ಈ ಹನ್ನೊಂದುನಾಮಗಳಿಂದ ಪ್ರಸಿದ್ಧನಾಗು! ನಿನಗೆ, ಧೀ, ವೃತ್ತಿ, ಉಶನೆ, ಉಮೆ, ನಿಯುತ್ತು, ಸರ್ಪಿ, ಇಲೆ, ಅಂಬಿಕೆ, ಇರಾವತಿ, ಸುಧೆ, ದಕ್ಷೆ, ಎಂಬ ಹನ್ನೊಂದುಮಂದಿ ಪತ್ನಿಯರನ್ನು ಕೊಡುವೆನು. ವತ್ಸಾ! ನೀನು ಮೇಲೆಹೇಳಿದಂತೆ, ಹನ್ನೊಂದುಸ್ಥಳಗಳಲ್ಲಿ, ಹನ್ನೊಂದು ನಾಮಗಳಿಂದ, ಹನ್ನೊಂದುಮಂದಿ ಪತ್ನಿಯರೊಡಗೂಡಿ ವಿಹರಿಸುತ್ತ ಪ್ರಜೆಗಳನ್ನು ಹೆಚ್ಚಿಸುತ್ತಿರು! ಇದರಿಂದ ನೀನು ಪ್ರಜಾಧಿಪತಿಯೆಂದು ಕರೆಯಲ್ಪಡುವೆ!" ಎಂದನು. ಈ ಬ್ರಹ್ಮಾಜ್ಞೆಯಂತೆ ನೀಲಲೋಹಿತನು, ಪ್ರಜಾವೃದ್ಧಿಕಾರ್ಯದಲ್ಲಿ ನಿರತನಾಗಿ, ಬಲದಲ್ಲಿಯೂ, ಸ್ವಭಾವದಲ್ಲಿಯೂ, ಆಕಾರದಲ್ಲಿಯೂ, ತನ್ನನ್ನೇ ಹೋಲತಕ್ಕ ಪ್ರಜೆಗಳನ್ನು ಸೃಷ್ಟಿಸುತ್ತ ಬಂದನು. ಈ ಪ್ರಜೆಗಳೆಲ್ಲರೂ ಅವನಂತೆಯೇ ಕೇವಲರೌದ್ರ ಸ್ವಭಾವವುಳ್ಳವರಾಗಿ, ಮೇಲೆಮೇಲೆ ಸಂಖ್ಯೆಯಲ್ಲಿ ಹೆಚ್ಚುತ್ತ ಬಂದರು. ಇದರಿಂದ ಅವರೆಲ್ಲರೂ ರುದ್ರಗಣಗಳೆಂದೇ ಕರೆಯಲ್ಪಡುತಿದ್ದರು. ಪ್ರಪಂಚದ

ಲ್ಲಿ ಎಲ್ಲೆ ನೋಡಿದರೂ ಈ ರುದ್ರಗಣಗಳೇ ಗುಂಪುಗುಂಪಾಗಿ ಲೆಕ್ಕವಿಲ್ಲದ ಷ್ಟು ತುಂಬಿ ಹೋದುವು. ಇವು, ತಮ್ಮ ರೌದ್ರಸ್ವಭಾವದಿಂದ ಲೋಕವೆಲ್ಲ ವನ್ನೂ ನುಂಗುವುದಕ್ಕೆ ತೊಡಗಿದುವು. ಈ ಲೋಕೋಪದ್ರವವನ್ನು ಕಂ ಡು ಬ್ರಹ್ಮನು ಚಿಂತಾಕುಲನಾಗಿ, ಆ ನೀಲಲೋಹಿತನೆಂಬ ಕುಮಾರನನ್ನು ನೋಡಿ, ‘‘ಓ ಕುಮಾರಾ! ಇನ್ನು ನೀನು ಪ್ರಜಾವೃದ್ಧಿಕಾರ್ಯವನ್ನು ನಿಲ್ಲಿಸು! ನಿನ್ನಿಂದ ಸೃಷ್ಟಿಸಲ್ಪಟ್ಟ ಪ್ರಜೆಗಳೆಲ್ಲರೂ ಕೇವಲರೌದ್ರಸ್ವಭಾವವುಳ್ಳವರಾ ಗಿ, ತಮ್ಮ ನೋಟದಿಂದಲೇ ಸಮಸ್ತದಿಕ್ಕುಗಳನ್ನೂ ದಹಿಸುತ್ತಿರುವರು. ಇವ ರ ಕ್ರಿಯೆಯಿಂದ ಸಮಸ್ತಲೋಕವೂ ನಾನೂ ನಾಶಹೊಂದುವ ಸ್ಥಿ ತಿಯಲ್ಲಿರುವೆನು. ಇವರಿಂದ ಲೋಕಕ್ಕೆ ನಷ್ಟವೇಹೊರತು ನನ್ನ ಕೋರಿ ಕೆಯು ನೆರವೇರುವಹಾಗಿಲ್ಲ. ಆದುದರಿಂದ ಇನ್ನುಮೇಲೆ ನೀನು ಪ್ರಜಾ ವೃದ್ಧಿಕಾರ್ಯವನ್ನು ನಿಲ್ಲಿಸಿ, ಈ ಲೋಕಕ್ಕೂ, ನಿನಗೂ ಕ್ಷೇಮವುಂಟಾಗು ವಂತೆ ತಪಸ್ಸನ್ನು ಮಾಡುತ್ತಿರು! ನಿನಗೆ ಮಂಗಳವಾಗಲಿ! ಕುಮಾರಾ! ನೀನು ಅವಿಘ್ನವಾದ ತಪಸ್ಸನ್ನು ನಡೆಸುತ್ತ ಬಂದಪಕ್ಷದಲ್ಲಿ, ಆ ತಪೋಮಹಿ ಮೆಯಿಂದ ಈ ಪ್ರಪಂಚವನ್ನು ಪೂರ್ವದಂತೆಯೇ ಸೃಷ್ಟಿಸಬಹುದು. ಪರ ಮಾತ್ಮನನ್ನು ಪಡೆಯುವುದಕ್ಕೂ ಆ ತಪಸ್ಸೇ ಮುಖ್ಯಮಾರ್ಗವು. ಆ ಪರಮ ಪುರುಷನು ಪ್ರಾಕೃತವಾದ ಚರ್ಮೇಂದ್ರಿಯಗಳಿಗೆ ಗೋಚರಿಸತಕ್ಕವನಲ್ಲ, ಆ ಪರಮಾತ್ಮನೊಬ್ಬನೇ ಸನುಸ್ತ ಕಲ್ಯಾಣಗುಣಕರನಾಗಿ, ಸರ್ವಾಂತರ್ಯಾ ಮಿಯಾಗಿ ವರ್ತಿಸತಕ್ಕವನು. ತಪಸ್ಸಿನಿಂದಲ್ಲದೆ ಅವನನ್ನು ಸಾಕ್ಷಾತ್ಕರಿಸು ವುದಕ್ಕೆ ಬೇರೆ ದಾರಿಯಿಲ್ಲ. ಆ ಪರಮಪುರುಷನು ಹೃದಯವೆಂಬ ಅಂತರ್ದೃ ಷ್ಟಿಗೆಮಾತ್ರ ಗೋಚರಿಸತಕ್ಕವನೇ ಹೊರತು, ಚರ್ಮಮಯವಾದ ಬಾಹ್ಯ ದೃಷ್ಟಿಗೆ ಕಾಣಿಸಲಾರನು. ಆದುದರಿಂದ ನೀನು ತಪೋನಿರತನಾಗಿದ್ದು ಆ ಪರಮಾತ್ಮನನ್ನಾರಾಧಿಸಿ, ಅವನ ಕೃಪೆಗೆ ಪಾತ್ರನಾಗು!” ಎಂದನು, ಇದನ್ನು ಕೇಳಿ ನೀಲಲೋಹಿತನು, ತಂದೆಯಾದ ಚತುರ್ಮುಖನೊಡನೆ, ‘ಜನ ಕಾ! ಆಜ್ಞೆಯಂತೆಯೇ ನಡೆಯುವೆನು” ಎಂದು ಹೇಳಿ ಅವನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅವನ ಅನುಮತಿಯನ್ನು ಪಡೆದು, ತಪೋವನಕ್ಕೆ ಹೊರಟು ಹೋದನು. ಆಮೇಲೆ ಇತ್ತಲಾಗಿ ಬ್ರಹ್ಮನು, ಮುಂದೆ ನಡೆಸಬೇ

ಕಾದಸೃಷ್ಟಿಕಾರ್ಯವನ್ನು ಕುರಿತು ಆಲೋಚಿಸುತ್ತಿದ್ದನು. ಭಗವಂತನ ಪ್ರೇರಣೆಯಿಂದ, ಒಡನೆಯೇ ಆಜತುರ್ಮುಖನ ಅವಯವಗಳಲ್ಲಿ, ಮುಂದೆ ಪ್ರಜಾವೃದ್ಧಿಗೆ ಕಾರಣರಾಗಿಯೂ, ಬುದ್ಧಿವಂತರಾಗಿಯೂ, ಅವನಿಗೆ ಸಮಾನಗುಣವುಳ್ಳವರಾಗಿಯೂ ಇರುವ ಮರೀಚಿ, ಅತ್ರಿ, ಅಂಗಿರಸ್ಸು ಪುಲಸ್ತ್ಯ, ಪುಲಹ ಕ್ರತು,ಭೃಗು, ವಸಿಷ್ಠ ದಕ್ಷ, ನಾರದರೆಂಬ ಹತ್ತುಮಂದಿ ಕುಮಾರರು ಜನಿಸಿದರು. ಇವರಲ್ಲಿ ಬ್ರಹ್ಮನ ತೊಡೆ (ಸೋಗೆ) ಯಿಂದ ನಾರದನೂ, ಆತನ ಹೆಬ್ಬೆರಳಿನಿಂದ ದಕ್ಷನೂ, ಹೊಕ್ಕುಳಿನಿಂದ ಪುಲಹನೂ, ಕಿವಿಯಿಂದ ಪುಲಸ್ತ್ಯನೂ, ಚರ್ಮದಿಂದ ಭೃಗುವೂ, ಹಸ್ತದಿಂದ ಕ್ರತುವೂ, ಮುಖದಿಂದ ಅಂಗಿರಸ್ಸೂ, ಪ್ರಾಣಗಳಿಂದ ವಸಿಷ್ಠನೂ, ಹೃದಯದಿಂದ ಮರೀಚಿಯೂ, ಕಣ್ಣುಗಳಿಂದ ಅತ್ರಿಮುನಿಯೂ ಜನಿಸಿದರು, ಮತ್ತು ಆ ಪದ್ಮಗರ್ಭನ ಬಲಭಾಗದ ಸ್ತನದಿಂದ ಧರ್ಮವೆಂಬುದು ಹುಟ್ಟಿತು. ಈ ಧರ್ಮವೆಂಬುದಕ್ಕೆ ತ್ರೀಮನ್ನಾರಾಯಣನೇ ಅಧಿದೇವತೆಯಾಗಿ ಅದರಲ್ಲಿ ಸಾಕ್ಷಾತ್ತಾಗಿ ನೆಲೆಗೊಂಡನು ವಿದುರಾ! ಆದುದರಿಂದ ಈ ಧರ್ಮವು ಎಲ್ಲಿ ನಡೆಯುವುದೋ, ಅಲ್ಲಿ ಸಾಕ್ಷಾನ್ನಾರಾಯಣನ ಸಾನ್ನಿಧ್ಯವೆಂದು ತಿಳಿ! ಆ ಜತುರ್ಮುಖನ ಬೆನ್ನಿನಿಂದ ಅಧರ್ಮವು ಜನಿಸಿತು. ಇದಕ್ಕೆ ಲೋಕಭಯಂಕರನಾದ ಮೃತ್ಯುವೇ ಅಧಿದೇವತೆಯಾಗಿ ಅದರಲ್ಲಿ ನಿತ್ಯಸಾನ್ನಿಧ್ಯವನ್ನು ಮಾಡುತ್ತಿರುವನು. ಆದರಿಂದಾಚೆಗೆ ಆ ಜತುರ್ಮುಖನ ಹೃದಯದಿಂದ ಕಾಮವೂ, ಹುಬ್ಬುಗಳನಡುವೆ ಕ್ರೋಧವೂ, ಆವನ ಕೆಳತುಟಿಯಿಂದ ಲೋಭವೂ,ಬಾಯಿಂದ ವಾಗ್ದೇವತೆಯಾದ ಸರಸ್ವತಿಯೂ, ಆ ಬ್ರಹ್ಮನ ಗುಹ್ಯಸ್ಥಾನದಿಂದ ಸಮುದ್ರಗಳೂ, ಪಾಯುವೆಂಬ ಇಂದ್ರಿಯಸ್ಥಾನದಿಂದ ಪಾಪಾಧಿದೇವತೆಯಾದ ನಿಋತಿಯೂ, ಅವನ ಮೈನೆರಳಿನಿಂದ ಕರ್ದಮನೂ ಜನಿಸಿದರು. ಈ ಕರ್ದಮನೆಂಬವನೇ ಸ್ವಾಯಂಭುವಮನುವಿನ ಮಗಳಾದ ದೇವಹೂತಿಗೆ ಪತಿಯಾದನು. ಹೀಗೆ ಬ್ರಹ್ಮನ ದೇಹದಿಂದ ಕೆಲವರೂ, ಮನಸ್ಸಿನಿಂದ ಕೆಲವರೂ ಜನಿಸಿದರು. ವಿದುರಾ ! ಜತುರ್ಮುಖನ ಬಾಯಿಂದ ಸರಸ್ವತಿಯು ಹುಟ್ಟಿದುದಾಗಿ ಹೇಳಿದೆನಷ್ಟೆ ? ಆ ಸರಸ್ವತಿಯ ವಿಷಯವಾಗಿ ಒಂದು ಸಣ್ಣವೃತ್ತಾಂತವನ್ನು ತಿಳಿಸುವೆನು ಕೇಳು ! ಮೇಲೆ ಹೇಳಿದಂತೆ ಜತುರ್ಮುಖನು ತನ್ನ ಅಂ

ಗಾಂಗಗಳಿಂದ ಅನೇಕವ್ಯಕ್ತಿಗಳನ್ನು ಸೃಷ್ಟಿಸಿದಮೇಲೆ, ಅವರೊಬ್ಬೊಬ್ಬರನ್ನೂ ನೋಡುತ್ತಬಂದಾಗ, ಅವರಲ್ಲಿ ಸ್ತ್ರೀರೂಪವುಂಟಿಪ್ಪ ಸರಸ್ವತಿಯ ದೇಹಸೌಂದರ್ಯವು, ನೋಡುವವರ ಮನಸ್ಸನ್ನು ಮೋಹಗೊಳಿಸುವಂತಿತ್ತು. ಆವಳ ರೂಪವನ್ನು ನೋಡಿದೊಡನೆ ಚತುರ್ಮುಖನು, ತನ್ನ ಕುಮಾರಿಯಾದ ಆಕೆಯಲ್ಲಿಯೇ ಮೋಹಪರವಶನಾಗಿ, ಯುಕ್ತಾಯುಕ್ತಗಳನ್ನೂ ಯೋಚಿಸದೆ, ಅವಳನ್ನು ಕೈಹಿಡಿಯಬೇಕೆಂದು ಪ್ರಯತ್ನಿಸಿದುದಾಗಿ ಕೇಳಿರುವೆವು. ಹೀಗೆ ಕಾಮಾತುರನಾದ ಬ್ರಹ್ಮನು, ಸ್ವಲ್ಪವಾದರೂ ಕಾಮವಿಕಾರವಿಲ್ಲದ ತನ್ನ ಮಗಳಲ್ಲಿ ಅತಿಕ್ರಮಪ್ರವೇಶಮಾಡುತ್ತಿರುವುದನ್ನು ನೋಡಿ, ಅಲ್ಲಿಪ್ಪ ಮರೀಚಿಮೊದಲಾದ ಕುಮಾರರೆಲ್ಲರೂ, ವಿನಯಪೂರ್ವಕವಾಗಿ ತಂದೆಯನ್ನು ನೋಡಿ "ಜನಕಾ ! ಇದೇನಿದು ? ಮಹಾತ್ಮನಾದ ನೀನೇ ಹೀಗೆ ಅಕ್ರಮದಲ್ಲಿ ಪ್ರವರ್ತಿಸುವುದುಂಟೆ? ಈ ವಿಧವಾದ ಪಾಪಕಾರ್ಯವನ್ನು ಹಿಂದೆನಡೆಸಿದವರೂ ಇಲ್ಲ! ಮುಂದೆ ನಡೆಸತಕ್ಕವರೂ ಇರಲಾರದು! ಸಮಸ್ತಲೋಕಕ್ಕೂ ನ್ಯಾಯವನ್ನು ವಿಧಿಸತಕ್ಕ ನೀನೇ ಹೀಗೆ, ನಿನ್ನ ಕಾಮವನ್ನು ನಿಗ್ರಹಿಸಲಾರದೆ, ನಮಗಳಲ್ಲಿ ಮೋಹಗೊಳ್ಳುವೆಯಾ ! ಲೋಕದಲ್ಲಿ ಇದಕ್ಕಿಂತಲೂ ಇನ್ನು ಹೀನಕೃತ್ಯವೇನುಂಟು? ತೇಜಸ್ವಿಗಳಾಪನವರು, ಅದರಲ್ಲಿಯೂ ಮುಖ್ಯವಾಗಿ ನಿನ್ನಂತವರು, ತಮ್ಮ ನಡತೆಯನ್ನು ಕಾಪಾಡಿಕೊಳ್ಳುವವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಹಾಗಿಲ್ಲದಪಕ್ಷದಲ್ಲಿ ನಿನ್ನಿಂದ ಮುಂದೆ ಸೃಷ್ಟಿಸಲ್ಪಡುವ ಪ್ರಜೆಗಳೆಲ್ಲರೂ, ತಾವು ದಾರಿತಪ್ಪಿ ನಡೆಯುವುದಕ್ಕೆ ಲೋಕಪಿತಾಮಹನಾದ ನಿನ್ನನ್ನೇ ನಿದರ್ಶನವಾಗಿಟ್ಟುಕೊಂಡು, ಅದನ್ನೇ ತಮಗೆ ಶ್ರೇಯಸ್ಕರವೆಂದು ನಂಬಿ, ದುರ್ನೀತಿಗಳಲ್ಲಿ ಧೈರ್ಯದಿಂದ ಪ್ರವರ್ತಿಸುವರು. ಆದುದರಿಂದ ಜನಕಾ! ನೀನು ಈ ದುಷ್ಕಾರ್ಯವನ್ನು ಬಿಟ್ಟುಬಿಡು!" ಎಂದು ಅನೇಕವಿಧದಿಂದ ಪ್ರಾರ್ಥಿಸುತಿದ್ದು, ಕೊನೆಗೆ ತಮ್ಮ ಜನಕನಾದ ಚತುರ್ಮುಖನನ್ನು ಆ ಅಧರ್ಮಕಾರ್ಯದಿಂದ ತಪ್ಪಿಸಬೇಕಾದರೆ, ಅವನಿಗೂ ಜನಕನಾದ ಭಗವಂತನನ್ನೇ ಪ್ರಾರ್ಥಿಸಬೇಕೆಂದು ನಿಶ್ಚಯಿಸಿ, ಆ ಪರಮ ಪುರುಷನನ್ನು ಸ್ತುತಿಸುವರು. "ಓ ದೇವಾ ! ಮೊದಲು ನಾಮರೂಪ ವಿಭಾಗಗಳೊಂದೂ ಇಲ್ಲದೆ ನಿನ್ನಲ್ಲಿ ಸೂಕ್ಷ್ಮದಶೆಯಿಂದಿದ್ದ ಚೇತನಾಚೇತ

ನಾತ್ಮಕವಾದ ಜಗತ್ತನ್ನು, ನಿನ್ನ ಸಂಕಲ್ಪದಿಂದಲೇ ನೀನು ನಾಮರೂಪಭೇದಗಳಿಂದ ವಿಸ್ತರಿಸಿಡತಕ್ಕವನು. ಆದುದರಿಂದ ನೀನೇ ಸರ್ವಜಗತ್ಕಾರಣನು. ಧರ್ಮಪರಿಪಾಲಕನು. ಈ ನಮ್ಮ ಜನಕನನ್ನು ಅಧರ್ಮದಿಂದ ರಕ್ಷಿಸಬೇಕು. ಪ್ರೇವಾ ? ನಿನಗೆ ವಂದನವು" ಎಂದು ಪ್ರಾರ್ಥಿಸತೊಡಗಿದರು. ಇದನ್ನು ಕೇಳಿದಮೇಲೆ ಬ್ರಹ್ಮನಿಗೆ ಒಳಗೊಳಗೆ ನಾಚಿಕೆಯು ಹುಟ್ಟಿತು. ಒಡನೆಯೇ ಅವನು ತನ್ನ ಕಾಮುಕಸ್ವಭಾವವನ್ನು ತ್ಯಜಿಸಿಬಿಟ್ಟನು. ಹೀಗೆ ಬ್ರಹ್ಮದೇವನಿಂದ ನಿರಾಕರಿಸಲ್ಪಟ್ಟ ಭಯಂಕರವಾದ ಆ ಕಾಮುಕಸ್ವಭಾವವನ್ನು ದಿಕ್ಕುಗಳು ತಮ್ಮಲ್ಲಿ ಸೇರಿಸಿಟ್ಟುಕೊಂಡುವು ವಿದುರಾ ! ದಿಕ್ಕುಗಳ ಕೊನೆಯಲ್ಲಿ ಕಾಣುವ ಹಿಮಸಂಬಂಧವಾದ ಕತ್ತಲೆಯಾವುದುಂಟೋ, ಅದೇ ಕಾಮುಸ್ವರೂಪವೆಂದು ತಿಳಿ ! ಇದರ ವಿಚಾರವು ಹೀಗಿರಲಿ ! ಆನಂತರದಲ್ಲಿ ಜಗತ್ಸೃಷ್ಟಿಗೆ ಮುಂದೆ ನಡೆಯಬೇಕಾದ ಸೃಷ್ಟಿಕಾರ್ಯದಲ್ಲಿ ತಿರುಗಿ ಚಿಂತೆಯು ಹುಟ್ಟಿತು. ಈ ಚಿಂತೆಯಿಂದ ಆ ಬ್ರಹ್ಮನು ತನ್ನಲ್ಲಿ ತಾನು 'ಹಿಂದಿನ ಕಲ್ಪದಲ್ಲಿದ್ದಂತೆ ಪ್ರಜಾವೃದ್ಧಿಯನ್ನು ಮಾಡುವುದಕ್ಕೆ ಉಪಾಯವೇನು ?" ಎಂದು ಚಿಂತಿಸುತ್ತಿರುವಾಗ, ಒಮ್ಮೆ ಅವನ ನಾಲ್ಕುಮುಖಗಳಿಂದ ಋಕ್ಕು ಮೊದಲಾದ ನಾಲ್ಕು ವೇದಗಳೂ, ಹೋತೃ ಮೊದಲಾದ ನಾಲ್ವರು ಋತ್ವಿಕ್ಕುಗಳಿಗೆ ಸಂಬಂಧಪಟ್ಟ ಯಜ್ಞವಿವರಣಗಳೂ, ಆಯುರ್ವೇದ ಮೊದಲಾದ ಉಪವೇದಗಳೂ, ನ್ಯಾಯಗಳೂ, ತಪಸ್ಸು, ಸತ್ಯ, ದಯೆ, ಶೌಚವೆಂಬ ನಾಲ್ಕುಬಗೆಯ ಧರ್ಮವಿಭಾಗಗಳೂ, ನಾಲ್ಕುಬಗೆಯ ವರ್ಣಾಶ್ರಮಗಳೂ, ಅವುಗಳ ಧರ್ಮಗಳೂ ಹುಟ್ಟಿದವು" ಎಂದನು. ಇದನ್ನು ಕೇಳಿ ವಿದುರನು "ಎಲೈ ಮಹಾತ್ಮನೆ ! ಸೃಷ್ಟಿಕರ್ತನಾದ ಆ ಬ್ರಹ್ಮನು ಈ ವೇದಾದಿಗಳನ್ನು ಸೃಷ್ಟಿಸುವಾಗ,ಯಾವಯಾವ ಮುಖದಿಂದಯಾವಯಾವ ವೇದವನ್ನು ಸೃಷ್ಟಿಸಿದನು. ಆ ಕ್ರಮವೆಲ್ಲವನ್ನೂ ನನಗೆ ವಿವರಿಸಿ ತಿಳಿಸಬೇಕು" ಎಂದು ಪ್ರಾರ್ಥಿಸಿದನು. ಅದಕ್ಕಾ ಮೈತ್ರೇಯನು "ವಿದುರಾ ಕೇಳು! ಋಕ್ಕು, ಯಜುಸ್ಸು, ಸಾಮ, ಅಥರ್ವಣವೆಂಬ ನಾಲ್ಕು ವೇದಗಳನ್ನೂ ಬ್ರಹ್ಮನು ಕ್ರಮವಾಗಿ ತನ್ನ ಪೂರ್ವದಕ್ಷಿಣಪಶ್ಚಿಮೋತ್ತರಗಳೆಂಬ ನಾಲ್ಕು ಮುಖಗಳಿಂದ ಹೊರಕ್ಕೆಬಿಟ್ಟನು. ಆದರಂತೆಯೇ ಹೋತೃಗಳ ಕರ್ಮ

ರೂಪವಾದ ಶಸ್ತ್ರವೆಂಬ ಗೀತಮಂತ್ರಸ್ತೋತ್ರಗಳೂ, ಅಥ್ವರ್ಯುಕರ್ಮವಾದ ಸ್ತೋತ್ರಗಳೂ, ಉದ್ಗಾತೃಗಳಿಂದ ಹೇಳಲ್ಪಡುವ ಸಂಗೀತರೂಪವಾದ ಸ್ತುತಿಯೂ, ಬ್ರಾಹ್ಮಣಕರ್ಮವೆನಿಸಿದ ಪ್ರಾಯಶ್ಚಿತ್ತವೂ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಶಿಲ್ಪಶಾಸ್ತ್ರಗಳೆಂಬೀನಾಲ್ಕು ಉಪವೇದಗಳೂ, ಕ್ರಮವಾಗಿ ಆತನ ಪೂರ್ವಾದಿಮುಖಗಳಿಂದ ಹುಟ್ಟಿದುವು. ಪಂಚಮವೇದವೆನಿಸಿಕೊಳ್ಳುವ ಇತಿಹಾಸಪುರಾಣಗಳೆಲ್ಲವೂ ಆತನಎಲ್ಲಾ ಮುಖಗಳಿಂದಲೂ ಹೊರಟುವು. ಮತ್ತು ಷೋಡಶಿ, ಉಕ್ಥ್ಯವೆಂಬ ಎರಡು ಕರ್ಮಗಳು ಆ ಬ್ರಹ್ಮನ ಪೂರ್ವಮುಖದಿಂದಲೂ, ಚಯನ, ಅಗ್ನಿಷ್ಟೋಮವೆಂಬ ಕರ್ಮಗಳೆರಡೂ ದಕ್ಷಿಣಮುಖದಿಂದಲೂ,ಅಪ್ತೋರ್ಯಾಮ, ಅತಿರಾತ್ರಗಳೆಂಬ ಕರ್ಮಗಳೆರಡೂ ಪಶ್ಚಿಮಮುಖದಿಂದಲೂ, ಗೋಸವ,ವಾಜಪೇಯಗಳೆಂಬ ಕರ್ಮಗಳೆರಡೂ ಉತ್ತರಮುಖದಿಂದಲೂ ಹುಟ್ಟಿದುವು. ವಿದ್ಯೆ ದಾನ,ತಪಸ್ಸು, ಸತ್ಯವೆಂಬಿವು ನಾಲ್ಕೂ ಧರ್ಮಕ್ಕೆ ನಾಲ್ಕು ಪಾದಗಳೆನಿಸುವುವು. ಇವು ನಾಲ್ಕನ್ನೂ, ಬ್ರಹ್ಮಚರ್ಯವೇ ಮೊದಲಾದ ನಾಲ್ಕು ಆಶ್ರಮುಗಳನ್ನೂ,ಆ ನಾಲ್ಕು ಆಶ್ರಮುಗಳ ಧರ್ಮಗಳನ್ನೂ ಬ್ರಹ್ಮನು ಕ್ರಮವಾಗಿ ತನ್ನ ಪೂರ್ವಾದಿ ನಾಲ್ಕುಮುಖಗಳಿಂದ ಸೃಷ್ಟಿಸಿದನು. ವಿದುರಾ! ಬ್ರಹ್ಮಚರ್ಯವೇ ಮೊದಲಾದ ಆ ನಾಲ್ಕುಬಗೆಯ ಆಶ್ರಮಧರ್ಮವನ್ನೂ ತಿಳಿಸುವೆನು ಕೇಳು! ಸಾವಿತ್ರ, ಪ್ರಾಜಾಪತ್ಯ, ಬ್ರಾಹ್ಮ, ಬೃಹತ್ತು ಎಂಬಿವು ನಾಲ್ಕು ಬ್ರಹ್ಮಚರ್ಯಾಶ್ರಮದ ಧರ್ಮಗಳು. ಸಾವಿತ್ರವೆಂದರೆ ಸ್ತ್ರೀಸಂಪರ್ಕವಿಲ್ಲದಿರುವುದು. ಪ್ರಾಜಾಪತ್ಯವೆಂದರೆ ಉಪನಯನವಾದುದು ಮೊದಲು ಮೂರು ರಾತ್ರಿಗಳವರೆಗೆ ಗಾಯತ್ರಿಯನ್ನು ಅಥ್ಯಯನಮಾಡುತ್ತ, ನಡೆಸತಕ್ಕ ವ್ರತವು. ಬ್ರಾಹ್ಮವೆಂದರೆ ಒಂದು ಸಂವತ್ಸರದವರೆಗೆನೆಮಾಡುವ ವ್ರತಾನುಷ್ಠಾನವು. ಬೃಹತ್ತೆಂದರೆ ವೇದಗಳೆಲ್ಲವನ್ನೂ ಅಥ್ಯಯನಮಾಡಿಮುಗಿಸುವವರೆಗೆ ನಡೆಸತಕ್ಕ ಬ್ರಹ್ಮಚರ್ಯವು. ಇವು ನಾಲ್ಕೂ ಬ್ರಹ್ಮಚಾರಿಗಳ ಕರ್ಮಗಳು. ಇದರಂತೆಯೇ ಗೃಹಸ್ಥಾಶ್ರಮದಲ್ಲಿಯೂ, ವಾರ್ತೆ, ಸಂಚಯ, ಶಾಲೀನ, ಶಿಲ, ಉಂಛವೆಂಬ ಐದು ಧರ್ಮಗಳುಂಟು. ಇವುಗಳಲ್ಲಿ ವಾರ್ತೆಯೆಂದರೆ ತನುತಮಗೆ ನಿಷಿದ್ಧವಲ್ಲದ ಕೃಷಿವಾಣಿಜ್ಯಾದಿವೃತ್ತಿಗಳನ್ನನುಸರಿ

ಸುವುದು. ಸಂಚಯವೆಂದರೆ ಅಧ್ಯಾಪನ (ಓದಿಸುವುದು)! ಮೊದಲಾದ ಕಾರ್ಯಗಳಿಂದ ಸಂಪಾದಿಸಿದ ಧನವನ್ನು, ತನ್ನ ಆಯುಸ್ಸಿರುವವರೆಗೂ ಜೀವನಕ್ಕಾಗಿ ಸೇರಿಸಿಡುವುದು. ಶಾಲೀನವೆಂದರೆ ಯಾಚಿಸದಹಾಗೆಯೇ ಲಭಿಸುವ ದ್ರವ್ಯವನ್ನು ಪಡೆದು ಅದರಿಂದ ಜೀವಿಸುವುದು. ಶಿಲೋಂಛಗಳೆಂದರೆ ಹೊಲಗದ್ದೆಗಳಲ್ಲಿ ಚಲ್ಲಿ ಹೋದ ಧಾನ್ಯದ ಕಾಳನ್ನು ಆಯ್ದುತಂದು ಜೀವಿಸುವುದು. ಈ ನಾಲ್ಕೂ ಗೃಹಸ್ಥಾಶ್ರಮದ ಧರ್ಮಗಳು, ವಾನಪ್ರಸ್ಥಾಶ್ರಮದಲ್ಲಿ ವೈಖಾನಸರೆಂದೂ, ವಾಲಖಿಲ್ಯರೆಂದೂ, ಔದುಂಬರರೆಂದೂ, ಫೇನಪರೆಂದೂ ನಾಲ್ಕುಭೇದಗಳುಂಟು. ಇವರಲ್ಲಿ, ನೆಲವನ್ನು ತ್ತು ಪೈರಿಡದೆ ತಾನಾಗಿಯೇ ಲಭಿಸುವ ಧಾನ್ಯಗಳಿಂದ ಜೀವಿಸುವವರು ವೈಖಾನಸರೆನಿಸುವರು. ಹೊಸಹೊಸದಾಗಿ ಅನ್ನಾದಿಗಳು ಲಭಿಸಿದೊಡನ್ನೆ, ಹಿಂದಿದ್ದುದರಲ್ಲಿ ಆಸೆಯನ್ನಿಡದೆ, ಅದನ್ನು ಪರಿತ್ಯಜಿಸುವವರು ವಾಲಖಿಲ್ಯರೆನಿಸುವರು. ಬೆಳಿಗ್ಗೆ ನಿಶ್ರೇಯಿಂದೆದ್ದಕೂಡಲೆ,ಯಾವ ದಿಕ್ಕನ್ನು ನೋಡುವರೋ, ಆದೇದಿಕ್ಕಿನಿಂದ ಸಂಗ್ರಹಿಸಿತಂದ ಹಣ್ಣುಮುಂತಾದುವುಗಳಿಂದ ಜೀವಿಸುವವರು ಔದುಂಬರರೆನಿಸುವರು. ಕಾಡಿನಲ್ಲಿರುವ ಗಿಡಗಳಿಂದ ತಾನಾಗಿಯೇ ಪಕ್ವವಾಗಿ ಬಿದ್ದಫಲಗಳನ್ನು ತಿಂದು ಜೀವಿಸುವವರು ಫೇನಪರೆನಿಸುವರು. (ಕರುಗಳ ಕಡೆಬಾಯಿಯಲ್ಲಿರುವ ನೊರೆಗಳನ್ನು ತಿಂದು ಜೀವಿಸುವವರನ್ನು ಫೇನಪರೆಂದೂ ಕೆಲವರು ಹೇಳುವರು). ಹೀಗೆ ವಾನಪ್ರಸ್ಥಾಶ್ರಮದಲ್ಲಿ ನಾಲ್ಕುಬಗೆಯಂಟು ಸನ್ಯಾಸಾಶ್ರಮದಲ್ಲಿ ಕುಟೀಚಕರೆಂದೂ, ಬಹೂದಕರೆಂದೂ, ಹಂಸರೆಂದೂ, ನಿಷ್ಕ್ರಿಯರೆಂದೂ ನಾಲ್ಕು ಭೇದಗಳುಂಟು. ಇವರಲ್ಲಿ ತನ್ಮ ಆಶ್ರಮಕ್ಕೆ ವಿಹಿತವಾದ ಕರ್ಮವನ್ನೇ ಮುಖ್ಯನಾಗಿ ಅನುಸರಿಸತಕ್ಕವರಿಗೆ ಕುಟೀಚಕರೆಂಬ ಹೆಸರು. ಕರ್ಮವನ್ನು ಉಪಸರ್ಜನವಾಗಿಟ್ಟುಕೊಂಡು ಜ್ಞಾನವನ್ನೇ ಮುಖ್ಯವಾಗಿ ಅನುಸರಿಸತಕ್ಕವರು ಬಹೂದಕರು. ಕೇವಲಜ್ಞಾನಾಭ್ಯಾಸದಲ್ಲಿಯೇ ನಿಷ್ಠರಾದವರಿಗೆ ಹಂಸರೆಂದು ಹೆಸರು. ತತ್ವಜ್ಞಾನವು ಕೈಸೇರಿದುದರಿಂದ, ಪ್ರವೃತ್ತಿಧರ್ಮಗಳಲ್ಲಿ ಅಸಕ್ತಿಯನ್ನೇ ಬಿಟ್ಟವರು ನಿಷ್ಕ್ರಿಯರೆನಿಸುವರು ಇವರನ್ನೇ ಪರಮಹಂಸರೆಂದೂ ಹೇಳುವರು. ವಿದುರಾ! ಇವಿಷ್ಟೂ ಆಶ್ರಮಧರ್ಮಗಳು. ಆದರಿಂದಾಚೆಗೆ

ಬ್ರಹ್ಮನ ಪೂರ್ವಾದಿನಾಲ್ಕು ಮುಖಗಳಿಂದ ಕ್ರಮವಾಗಿ ಆನ್ವೀಕ್ಷಕಿ, ತ್ರಯಿ, ವಾರ್ತೆ, ದಂಡನೀತಿ ಎಂಬಿವು ನಾಲ್ಕೂ ಹುಟ್ಟಿದುವು. ಇವುಗಳಲ್ಲಿ ಆನ್ವೀಕ್ಷಕಿಯೆಂದರೆ ಪ್ರಕೃತಿ, ಜೀವ, ಪರಮಾತ್ಮರಿಗಿರುವ ಭೇದವನ್ನು ತಿಳಿಸತಕ್ಕ ಶಾಸ್ತ್ರವು. ಈ ಜ್ಞಾನವಿಲ್ಲದೆ ಮೋಕ್ಷವು ಲಭಿಸದು. (ಚಿತ್ತು, ಅಚಿತ್ತು, ಈಶ್ವರನೆಂಬಿವು ಮೂರೂ, ತತ್ವತ್ರಯವೆನಿಸುವುದು. ಜೀವನು ಜ್ಞಾನಸ್ವರೂಪನಾದುದರಿಂದ ಚಿತ್ತೆನಿಸುವನು. ಅಚೇತನವಾದ ಜಡವಸ್ತುಗಳೆಲ್ಲವೂ ಅಚಿತ್ತೆನಿಸುವುವು. ಈ ಚೇತನಾಚೇತನಗಳನ್ನೆಲ್ಲಾ ಶರೀರವಾಗಿಉಳ್ಳ ಭಗವಂತನೇ ಈಶ್ವರನು. ಈ ಮೂರು ತತ್ವಗಳ ನಿಜಸ್ವರೂಪವನ್ನೂ, ಅವುಗಳಲ್ಲಿ ಒಂದಕ್ಕೊಂದಕ್ಕೆ ಇರುವ ಭೇದವನ್ನೂ ಯಥಾಸ್ಥಿತವಾಗಿ ತಿಳಿದಹೊರತು ಮೋಕ್ಷವು ಲಭಿಸದು. ಇದನ್ನು ತಿಳಿಸತಕ್ಕ ಶಾಸ್ತ್ರವೇ ಆನ್ವೀಕ್ಷಕಿಯೆನಿಸುವುದು. ಇದೊಂದೇ ಮೋಕ್ಷಕ್ಕೆ ದಾರಿಯು) ಕರ್ಮಸ್ವರೂಪವನ್ನು ತಿಳಿಸತಕ್ಕ ವಿದ್ಯೆಯು ವೇದಗಳಲ್ಲದೆ ಬೇರೆಯಲ್ಲ. ಈ ವೇದಗಳಲ್ಲಿ ಋಕ್ಕು, ಯಜುಸ್ಸು, ಸಾಮ, ಅಥರ್ವಣವೆಂಬ ನಾಲ್ಕುವಿಭಾಗಗಳಿದ್ದರೂ, ಅಥರ್ವವೇದವನ್ನು ಬಿಟ್ಟು, ಮೂರು ವೇದಗಳನ್ನು ಮಾತ್ರ ಇಲ್ಲಿ ಹೇಳುವುದರಿಂದ ತ್ರಯಿಯೆನಿಸುವುದು. ಈ ಮೂರು ವೇದಗಳಲ್ಲಿ ವಿಧಿಸಲ್ಪಟ್ಟ ಕರ್ಮಗಳೆಲ್ಲವೂ ಸ್ವರ್ಗಾದಿಫಲಗಳಿಗೆ ದಾರಿಯಾಗಿರುವುದು. ವಾರ್ತೆಯೆಂದರೆ ಕೃಷಿ, ಗೋರಕ್ಷಣ, ವಾಣಿಜ್ಯ, ಕುಸೀದವೆಂದು ನಾಲ್ಕು ಬಗೆಯ ವ್ಯಾಪಾರಗಳು. ಇವುಗಳಲ್ಲಿ ಕುಸೀದವೆಂದರೆ ಬಡ್ಡಿಯಿಂದ ಜೀವಿಸುವುದು. ದಂಡನೀತಿಯೆಂದರೆ ಇತರರನ್ನು ದಂಡಿಸತಕ್ಕ ಮಾರ್ಗವನ್ನು ತಿಳಿಸುವ ಶಾಸ್ತ್ರವು ಈ ಮೇಲೆ ಹೇಳಿದ ಆನ್ವೀಕ್ಷಕಿ ಮೊದಲಾದ ಶಾಸ್ತ್ರಗಳಲ್ಲಿ, ಆನ್ವೀಕ್ಷಕಿ ಎಂಬುದು ಬ್ರಾಹ್ಮಣರಿಗೆ ಮುಖ್ಯವಾದುದು. ತ್ರಯಿಯೆಂಬುದು ಕ್ಷತ್ರಿಯರಿಗೆ ಸೇರಿದುದು. ಏಕೆಂದರೆ, ಪ್ರಾಯಕವಾಗಿ ಯಾಗಾದಿಕರ್ಮಗಳನ್ನು ನಡೆಸುವುದಕ್ಕೆ ರಾಜರೇ ಸಮರ್ಥರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರು ವರ್ಣದವರಿಗೂ ಯಾಗಾದಿಕರ್ಮದಲ್ಲಿ ಅಧಿಕಾರವಿದ್ದರೂ, ರಾಜರಿಗಿರುವಷ್ಟು ದ್ರವ್ಯಬಲವು ಇತರವರ್ಣದವರಿಗೆ ದುರ್ಲಭವಾದುದರಿಂದ, ಇದು ಮುಖ್ಯವಾಗಿ ರಾಜರಿಗೇ ವಿಧಿಸಲ್ಪಟ್ಟಿರುವುದು ಇಲ್ಲದಿದ್ದರೆ ಪ್ರಜೆಗಳ ಪಾಪ

ಕ್ಕೆ ರಾಜನೇ ಭಾಗಿಯಾದುದರಿಂದ, ಆ ಪಾಪನಿವೃತ್ತಿಗಾಗಿಯೂ, ಪ್ರಜಾಕ್ಷೇಮಕ್ಕಾಗಿಯೂ, ರಾಜರು ಆಗಾಗ ಯಾಗಗಳನ್ನು ನಡೆಸುತ್ತಿರಬೇಕಾದುದು ಅತ್ಯವಶ್ಯವು. ವಾರ್ತೆಯೆಂಬುದು ವೈಶ್ಯರಿಗೆ ಮುಖ್ಯವಾದುದು. ದಂಡನೀತಿಯು ಶೂದ್ರರಿಗೆ ಸೇರಿದುದು ಇತರರನ್ನು ದಂಡಿಸತಕ್ಕ ಕಾರ್ಯವು ರಾಜರಿಗೆ ಸೇರಿದುದಾಗಿದ್ದರೂ, ಪ್ರಾಯಕವಾಗಿ ಕೀಳುಜಾತಿಯವರೇ ದಂಡನೆಗೆ ಪಾತ್ರರಾಗುವುದರಿಂದ, ಈ ದಂಡನೀತಿಯು ಶೂದ್ರರಿಗೆ ಸೇರಿದುದೆಂದೇ ಹೇಳುವರು ಹೀಗೆಯೇ ಬ್ರಹ್ಮನ ಪೂರ್ವಾದಿ ನಾಲ್ಕುಮುಖಗಳಿಂದ ಓಂ, ಭೂಃ, ಭುವಃ, ಸುವಃ ಎಂಬ ನಾಲ್ಕು ವ್ಯಾಹೃತಿಮಂತ್ರಗಳು ಹುಟ್ಟಿದುವು. ಮತ್ತು ಆ ಬ್ರಹ್ಮನ ರೋಮಗಳಿಂದ ಉಷ್ಣಿಕ್ ಎಂಬ ಛಂದಸ್ಸೂ, ಚರ್ಮದಿಂದ ಗಾಯತ್ರೀಛಂದಸ್ಸೂ, ಮಾಂಸದಿಂದ ತ್ರಿಷ್ಟುಪ್ ಎಂಬ ಛಂದಸ್ಸೂ. ಸ್ನಾಯುಗಳಿಂದ ಅನುಷ್ಟುಪ್ ಎಂಬ ಛಂದಸ್ಸೂ ಅಸ್ಥಿಯಿಂದ ಜಗತಿಯೆಂಬ ಛಂದಸ್ಸೂ. ಮಜ್ಜೆಯಿಂದ ಪಙ್ಕ್ತಿಯೆಂಬ ಛಂದಸ್ಸೂ, ಪ್ರಾಣಗಳಿಂದ ಬೃಹತಿಯೆಂಬ ಛಂದಸ್ಸೂ ಹುಟ್ಟಿದುವು. ಮತ್ತು ಆತನ ಜೀವನದಿಂದ ಕಕಾರ ಮೊದಲಾಗಿ ಮಕಾರದವರೆಗಿನವ ಇಪ್ಪತ್ತೈದು ಸ್ಪರ್ಶಾಕ್ಷರಗಳು ಹುಟ್ಟಿದುವು. ದೇಹದಿಂದ ಅಕಾರಾದಿಸ್ವರಗಳೂ, ಆತನ ಇಂದ್ರಿಯಗಳಿಂದ ಶ,ಷ,ಸ,ಹ ಎಂಬ ಊಷ್ಮವರ್ಣಗಳೂ, ಆತನ ಬಲದಿಂದ ಯ, ರ, ಲ, ವ ಎಂಬ ಅಂತಸ್ಥವರ್ಣಗಳೂ ಹುಟ್ಟಿದುವು ಆತನ ಲೀಲೆಯಿಂದ ಸ, ರಿ, ಗ, ಮ, ಪ, ದ, ನಿ ಎಂಬ ಸಪ್ತಸ್ವರಗಳು ಜನಿಸಿದುವು. ವತ್ಸ ವಿದುರಾ! ಶಬ್ದವನ್ನೇ ಶರೀರವಾಗಿಯೂ, ವ್ಯಕ್ತಾವ್ಯಕ್ತಗಳಾದ ಇಪ್ಪತ್ತುನಾಲ್ಕು ತತ್ವಗಳನ್ನೇ ಸ್ವರೂಪವಾಗಿಯೂ ಉಳ್ಳ ಆ ಚತುರ್ಮುಖನಿಂದ ಶ್ರುತಿಸ್ಮೃತೀತಿಹಾಸಾದಿರೂಪಗಳಿಂದಲೂ, ಪ್ರಕೃತಿ, ಪ್ರತ್ಯಯ, ಪದವಾಕ್ಯಾದಿರೂಪಗಳಿಂದಲೂ, ಬಗೆಬಗೆಯ ಭಾಷಾರೂಪದಿಂದಲೂ ಹರಡಿಕೊಂಡಿರುವ ಶಬ್ದಬ್ರಹ್ಮವು ಈವಿಧವಾಗಿ ಉತ್ಪನ್ನವಾಯಿತು. ಮೊದಲು ಆ ಚತುರ್ಮುಖನ ಶರೀರದಿಂದ ನಾನಾಬಗೆಯ ದ್ರವ್ಯರೂಪವಾದ ಪ್ರಪಂಚವು ಹುಟ್ಟಿ, ಆಮೇಲೆ, ಈ ಶಬ್ದಪ್ರಪಂಚವು ಹುಟ್ಟಿತು. ಈ ಶಬ್ದಪ್ರಪಂಚವೆಂಬುದು, ಅಭಿಧೆ, ಲಕ್ಷಣೆ, ಮೊದಲಾದ ವೃತ್ತಿಭೇದಗಳಿಂದ ನಾನಾವಿ

ಥವಾಗಿ ವಿಸ್ತರಿಸಿರುವುದು. ಈ ಶಬ್ದಪ್ರಪಂಚವನ್ನು ಹುಟ್ಟಿಸಿದಮೇಲೆ, ಬ್ರಹ್ಮನು, ಅದಕ್ಕಿಂತಲೂ ಬೇರೆಯಾದ ಮತ್ತೊಂದು ದೇಹವನ್ನು ಸ್ವೀಕರಿಸಿ, ಮುಂದೆ ಪ್ರಜಾಸೃಷ್ಟಿಯನ್ನು ಹೆಚ್ಚಿಸಬೇಕೆಂದು ಮನಸ್ಸಿನಲ್ಲಿ ಉದ್ದೇತಿಸಿದನು. ಇದಕ್ಕಾಗಿ ಮೊದಲು ಸೃಷ್ಟಿಸಾಮರ್ಥ್ಯವುಳ್ಳ ಅನೇಕ ಋಷೀಶ್ವರಮೂಲಕಶಾಗಿಯೂ, ತಾನೇ ಸಾಕ್ಷಾತ್ತಾಗಿಯೂ, ನಡೆಸಿದ ಸೃಷ್ಟಿಯು, ವಿಶೇಷವಾಗಿ ವೃದ್ಧಿಹೊಂದದಿದ್ದುದನ್ನು ನೋಡಿ ತನ್ನಲ್ಲಿ ತಾನು "ಆಹಾ! ಇದೇನಿದು? ನಾನು ಯಾವಾಗಲೂ ಎಡೆಬಿಡದೆ ಎಷ್ಟೋ ಪ್ರಯತ್ನದಿಂದ ಸೃಷ್ಟಿವ್ಯಾಪಾರವನ್ನು ನಡೆಸುತಿದ್ದರೂ, ಪ್ರಜಾವೃದ್ಧಿಯಾಗದಿರುವುದಕ್ಕೆ ಕಾರಣವೇನು? ಇದೇನೋ ಆಶ್ಚರ್ಯವಾಗಿರುವುದು. ಈ ವಿಷಯದಲ್ಲಿ ದೈವವೇ ಪ್ರತಿಕೂಲವಾಗಿರಬೇಕೆಂದು ತೋರುವುದು. ಇದು ನಿಶ್ಚಯವು" ಎಂದು ಚಿಂತಾಕುಲನಾಗಿರುವಾಗಲೇ, ಅವನ ಶರೀರದಿಂದ ಪ್ರತ್ಯೇಕವಾದ ಬೇರೊಂದಾಕಾರವು ಹುಟ್ಟಿತು. (ಎಂದರೆ ಮೊದಲಿನ ಆಕೃತಿಯು ಇದ್ದಹಾಗೆಯೇ, ಮತ್ತೊಂದು ರೂಪವು ಹೊರಟು,) ಆ ಎರಡನೆಯ ರೂಪದಿಂದ ಸ್ತ್ರೀಪುರುಷರೂಪವಾದ ಒಂದು ಮಿಥುನವು ಏರ್ಪಟ್ಟಿತು. ಇವುಗಳಲ್ಲಿ ಪುರುಷಸ್ವರೂಪವೇ ಸ್ವಾಯಂಭುವನೆಂಬ ಮನುವಾದನು. ಸ್ತ್ರೀವ್ಯಕ್ತಿಯು ಅವನಿಗೆ ಪತ್ನಿಯಾದ ಶತರೂಪೆಯೆನಿಸಿದಳು. ಈ ದಂಪತಿಗಳಿಬ್ಬರೂ ಹುಟ್ಟಿದಮೇಲೆ, ಅವರು ಮಿಥುನಧರ್ಮದಿಂದ ಪ್ರಜಾವೃದ್ಧಿಯನ್ನುಂಟುಮಾಡಿದರು. ಮೊದಲು ಆ ದಂಪತಿಗಳಿಗೆ ಪ್ರಿಯವ್ರತನೆಂದೂ, ಉತ್ತಾನಪಾದನೆಂದೂ ಇಬ್ಬರು ಗಂಡುಮಕ್ಕಳೂ, ಆಕೂತಿ, ದೇವಹೂತಿ ಪ್ರಸೂತಿ, ಎಂಬ ಮೂವರು ಕನ್ಯೆಯರೂ ಹುಟ್ಟಿದರು. ಆಮೇಲೆ ಸ್ವಾಯಂಭುವಮನುವು, ತನ್ನ ಮೂವರು ಕನ್ಯೆಯರಲ್ಲಿ ಆಕೂತಿಯೆಂಬವಳನ್ನು ರುಚಿಕನಿಗೂ, ದೇವಹೂತಿಯನ್ನು ಕರ್ದಮನಿಗೂ, ಪ್ರಸೂತಿಯನ್ನು ದಕ್ಷನಿಗೂ ಕೊಟ್ಟು ವಿವಾಹಮಾಡಿದನು. ಇವರಿಂದ ಕ್ರಮಕ್ರಮವಾಗಿ ಸಂತಾನವು ಹೆಚ್ಚಿ, ಲೋಕವೆಲ್ಲವೂ ಪ್ರಜೆಗಳಿಂದ ತುಂಬಿಕೊಂಡಿತು. ಇಲ್ಲಿಗೆ ಹನ್ನೆರಡನೆಯ ಅಧ್ಯಾಯವು.

ಓಂ

ಭೂಮಿಯು ಸಮುದ್ರಮಧ್ಯದಲ್ಲಿ ಮುಳುಗಿದು ದನ್ನು ನೋಡಿ, ಸ್ವಾಯಂಭುವಮನುವು ತನ್ನ ವಾಸ ಕ್ಕಾಗಿ ಸ್ಥಳವನ್ನು ಕೇಳಿದುದು. ಇದಕ್ಕಾಗಿ ಬ್ರಹ್ಮನು ಚಿಂತಿಸುತ್ತಿರುವಾಗ, ವಿಷ್ಣುವು ವರಾಹರೂಪಿಯಾಗಿ ಬಂದು ಭೂಮಿಯನ್ನು ಮೇಲಕ್ಕೆತ್ತಿದುದು.

ಮೈತ್ರೇಯನು ಹೇಳಿದ ಪರಮಪವಿತ್ರವಾದ ಈ ವೃತ್ತಾಂತವನ್ನು ಕೇಳಿ ವಿದುರನು, ಭಗವಂತನ ಚರಿತ್ರೆಯನ್ನು ಕೇಳುವುದರಲ್ಲಿ ಮತ್ತಷ್ಟು ಕುತೂಹಲವುಳ್ಳವನಾಗಿ, ತಿರುಗಿ ಆ ಮಹರ್ಷಿಯನ್ನು ಪ್ರಶ್ನೆಮಾಡುವನು. "ಎಲೈ ಮಹಾತ್ಮನೆ! ಈಗ ನೀನು ಹೇಳಿದ ವೃತ್ತಾಂತದಿಂದ ಆ ಸ್ವಾಯಂಭುವಮನುವೇ ಚಕ್ರವರ್ತಿಗಳಲ್ಲಿ ಮೊದಲನೆಯವನೆಂದು ವ್ಯಕ್ತವಾಗುವುದು. ಸಾಕ್ಷಾದ್ಬ್ರಹ್ಮನ ಪ್ರಿಯಪುತ್ರನಾದ ಆತನು, ಶತರೂಪೆಯೆಂಬ ತನ್ನ ಪ್ರಿಯಪತ್ನಿಯನ್ನು ಪಡೆದಮೇಲೆ ನಡೆಸಿದ ಕಾರ್ಯವೇನು? ಆತನೋ ಆ ಮಹಾವಿಷ್ಣುವನ್ನೇ ದೃಢವಾಗಿ ನಂಬಿದವನು. ಅಂತಹ ಮಹಾನುಭಾವನ ಚರಿತ್ರೆಗಳನ್ನು ಕೇಳಿದಾಗಲೇ ಜನ್ಮವು ಸಫಲವಾಗುವುದು. ಲೋಕದಲ್ಲಿಬಹುಕಾಲದವರೆಗೆ ಶ್ರಮಪಟ್ಟು ವೇದಶಾಸ್ತ್ರಾಧ್ಯಯನಗಳನ್ನು ಮಾಡಿದವರಿಗೂಕೂಡ ಇಂತಹ ಮಹಾತ್ಮರ ಚರಿತ್ರವನ್ನು ಕೇಳುವುದೇ ಆ ಅಧ್ಯಯನಕ್ಕೆ ಫಲವೆಂದು ಕೇಳಿರುವೆನು. ಆ ಶ್ರೀಹರಿಯ ಪಾದಾರವಿಂದವು ಯಾರಿಂದ ಮನಸ್ಸಿನಲ್ಲಿ ನಿಯತವಾಗಿ ಉಪಾಸನೆಮಾಡಲ್ಪಡುವುದೋ, ಅಂತಹ ಭಗವದ್ಭಕ್ತರ ಗುಣಶ್ರವಣವನ್ನು ಮಾಡುವುದೇ ನಮ್ಮಂತವರೆಲ್ಲರಿಗೂ ಶ್ರೇಯಸ್ಕರವು" ಎಂದನು. ಹೀಗೆ ವಿನಯಾದಿಗುಣಸಂಪನ್ನನಾಗಿಯೂ, ಭಗವಂತನ ಪಾದಾರವಿಂದಗಳನ್ನು ತಲೆಯಲ್ಲಿ ಧರಿಸತಕ್ಕವನಾಗಿಯೂ ಇರುವ ವಿದುರನ ಪ್ರಶ್ನೆಯನ್ನು ಕೇಳಿ, ಮೈತ್ರೇಯಮುನಿಯು ಸಂತೋಷದಿಂದ, ಪುಳಕಿತವಾದ ಮೈಯುಳ್ಳವನಾಗಿ, ಆ ಭಗವತ್ಕಥೆಯನ್ನು ಹೇಳುವುದರಲ್ಲಿ ಮತ್ತಷ್ಟು ಉತ್ಸಾಹಗೊಂಡು ಹೇಳತೊಡಗಿದನು. "ವಿದುರಾ! ಸ್ವಾಯಂಭುವ ಮನುವು ಶತರೂಪೆಯೆಂಬ ತನ್ನ ಭಾರ್ಯೆಯೊಡನೆ ಜನಿಸಿದಕೂಡಲೆ, ವೇದಗರ್ಭನಾದ ಚತುರ್ಮುಖನ ಮುಂದೆ ಕೈಜೋಡಿಸಿ ನಿಂತು, "ಓ ಜನಕಾ! ನೀನು ಸಮಸ್ತಭೂತಗಳಿಗೂ ಜನಕನು ಆಯಾಭೂತಗಳಿಗೆ ಆಯಾ ವೃ


ತ್ತಿಗಳನ್ನು ಕಲ್ಪಿಸಿ ಪೋಷಿಸತಕ್ಕವನೂ ನೀನೇ! ಈಗ ನಮ್ಮಿಬ್ಬರನ್ನು ಸೃಷ್ಟಿಸಿರುವೆಯಲ್ಲನೆ? ಸಮಸ್ತಲೋಕಗಳಿಗೂ, ನೀನೇ ಅಭೀಷ್ಟಗಳನ್ನು ಕೊಡತಕ್ಕವನಾಗುವುದರಿಂದ, ಮತ್ತೊಬ್ಬರಿಂದ ನಿನಗೆ ಆಗಬೇಕಾದ ಕಾರ್ಯವೊಂದೂ ಇರುವುದಿಲ್ಲ. ಹೀಗಿರುವಾಗ ನಮ್ಮನ್ನು ನೀನು ಸೃಷ್ಟಿಸಿದ ಉದ್ದೇಶವೇನು? ನಾವು ನಿನ್ನ ಸ್ಮ ಯಾವವಿಧದಿಂದ ಸಂತೋಷಪಡಿಸಬೇಕಾಗಿವೆ? ಈಗ ನಾವು ನಡೆಸಬೇಕಾದ ಕಾರ್ಯವೇನೆಂಬುದನ್ನು ನೀನೇ ತಿಳಿಸಬೇಕು. ನಮ್ಮಿಂದ ಸಾಧ್ಯವಾದ ಕಾರ್ಯಗಳಲ್ಲಿ ಯಾವ ಕಾರ್ಯವನ್ನು ಮಾಡಿದರೆ, ನಮಗೆ ಈ ಲೋಕದಲ್ಲಿ ಕೀರ್ತಿಯೂ, ಪರಲೋಕದಲ್ಲಿ ಸದ್ಗತಿಯೂ, ಉಂಟಾಗುವುದೋ, ಆ ಕಾರ್ಯವನ್ನು ನಿಯಮಿಸು!" ಎಂದು ಪ್ರಾರ್ಥಿಸಿದನು. ಆದಕ್ಕಾಬ್ರಹ್ಮನು, "ವತ್ಸಾ! ಹೀಗೆ ನಿಷ್ಕಪಟವಾದ ಹೃದಯದಿಂದ ನೀನಾಗಿಯೇ ಸತ್ಕಾರ್ಯದಲ್ಲಿ ನಿಯೋಗಿಸಬೇಕೆಂದು ಕೇಳಿದುದಕ್ಕಾಗಿ ನಿನ್ನನು ಬಹಳ ಸಂತೋಷಪಟ್ಟೆನು. ನಿನಗೂ, ಈ ನಿನ್ನ ಪತ್ನಿಗೂ ಶುಭವಾಗಲಿ! ನೀವು ನನ್ನನ್ನು ಯಾವವಿಧದಿಂದ ಸಂತೋಷಪಡಿಸಬೇಕೆಂದು ಕೇಳಿದಿರಲ್ಲವೆ? ತಂದೆಯು ಹೇಳಿದ ಕಾರ್ಯವನ್ನು ತಿರಸ್ಕರಿಸದೆ, ತನ್ನಿಂದ ಸಾಧ್ಯವಾದಮಟ್ಟಿಗೆ ನಿರ್ವಂಚನೆಯಾಗಿ ನಡೆಸುತ್ತಿರುವುದೇ ಮಕ್ಕಳು ತಂದೆಗೆ ಮಾಡತಕ್ಕ ಉಪಕಾರವು. ಇದಕ್ಕಿಂತಲೂ ಮಕ್ಕಳು ತಂದೆಗೆ ಮಾಡಬೇಕಾದ ಸಹಾಯವು ಬೇರೊಂದಿಲ್ಲ. ಈಗ ನಿನಗೆ ನಾನು ನಿಯಮಿಸುವ ಕಾರ್ಯವೇನೆಂದು ಕೇಳುವೆಯಾ? ಇಲ್ಲಿಂದ ಮುಂದೆ ನೀನು, ಈ ನಿನ್ನ ಭಾರ್ಯೆಯಲ್ಲಿ ನಿನಗೆ ಸಮಾನಗುಣವುಳ್ಳ ಪುತ್ರರನ್ನು ಪಡೆದು, ಧರ್ಮಯುಕ್ತವಾಗಿ ಭೂಮಂಡಲವನ್ನು ಪರಿಪಾಲಿಸುತ್ತಿರು. ಆಗಾಗ ಯಾಗಗಳನ್ನು ನಡೆಸಿ ಯಜ್ಞಪುರುಷನಾದ ಭಗವಂತನನ್ನಾರಾಧಿಸು! ಇದೇ ನೀನು ನನಗೆ ಮಾಡಬೇಕಾದ ಶುಶ್ರೂಷೆಯೆಂದು ತಿಳಿ! ಇದರಿಂದಲೇ ಪರಮಾತ್ಮನು ಪ್ರೀತನಾಗುವನು! ಆ ಪರಮಾತ್ಮನು ಪ್ರೀತನಾದರೆ, ಸರ್ವಾಭೀಷ್ಟಗಳೂ ಲಭಿಸುವುವು. ಹಾಗಿಲ್ಲದಪಕ್ಷದಲ್ಲಿ ಶ್ರಮವೆಲ್ಲವೂ ನಿರರ್ಥಕಗಳಾಗುವುವು. ಯಜ್ಞಸ್ವರೂಪನಾಗಿಯೂ, ಕಾರಣರಹಿತನಾಗಿಯೂ ಇರುವ ಭಗವಂತನು ಯಾವವಿಷಯದಲ್ಲಿ ಪ್ರೀತನಾಗುವುದಿಲ್ಲವೋ, ಅವರ ಕಾರ್ಯಗಳೆಲ್ಲವೂ ವ್ಯರ್ಥವು.

ಅಂತವರು ಸರ್ವಾಂತರ್ಯಾಮಿಯಾದ ಭಗವಂತನನ್ನೇ ಉಪೇಕ್ಷಿಸಿದಂತವರಾಗುವರು. ಆದುದರಿಂದ ನೀನು ಆ ಭಗವಂತನ್ನು ಯಾಗಗಳಿಂದಲೂ, ನಿನ್ನ ಕುಲವೃತ್ತಿಯಾದ ಪ್ರಜಾಪಾಲನೆಯಿಂದಲೂ ಸಂತೋಷಪಡಿಸು! ಇದೊಂದೇ ನಿನಗೆ ನಾನು ಹೇಳಬೇಕಾದ ಕಾರ್ಯವು" ಎಂದನು. ಅದಕ್ಕಾ ಮನುವು, "ಜನಕ! ನೀನು ಹೇಳಿದಂತೆಯೇ ನಡೆಸುವೆನು. ಭಗವದಾರಾಧನರೂಪವಾದ ಯಜ್ಞಗಳನ್ನು ನಡೆಸುವುದಕ್ಕಲ್ಲ ಸಿದ್ಧನಾಗಿರುವೆನು. ಆದರೆ ನನಗೂ, ನನ್ನ ಮಕ್ಕಳಿಗೂ ವಾಸಯೋಗ್ಯವಾದ ಸ್ಥಳವೆಲ್ಲಿ? ಸಮಸ್ತ ಜಂತುಗಳಿಗೂ ವಾಸಯೋಗ್ಯವಾದ ಭೂಮಿಯೇ ಮಹಾಜಲದಲ್ಲಿ ಮುಳುಗಿ ಹೋಗಿರುವುದಲ್ಲವೆ? ಇದನ್ನು ಉದ್ಧರಿಸುವುದಕ್ಕೆ ತಕ್ಕ ಉಪಾಯವನ್ನು ಮೊದಲು ನೀನು ಯೋಚಿಸಬೇಕು" ಎಂದನು. ಆಗ ಬ್ರಹ್ಮನು ಸುತ್ತಲೂನೋಡಿ, ತಾನು ಮೊದಲು ಸೃಷ್ಟಿಸಿದ ಭೂಮಿಯು ಸಮುದ್ರ ಜಲದಲ್ಲಿ ಮುಳುಗಿಹೋಗಿರುವುದನ್ನು ಕಂಡು, ತನ್ನಲ್ಲಿತಾನು, "ಅಹಾ! ಈ ಭೂಮಿಯನ್ನೆತ್ತುವುದಕ್ಕೆ ಉಪಾಯವೇನು? ಮೊದಲು ನಾನು ಹುಟ್ಟಿದೊಡನೆ ಇದೇರೀತಿಯಲ್ಲಿ ಲೋಕವೆಲ್ಲವೂ ಕೇವಲಜಲಮಯವಾಗಿದ್ದಾಗ, ಆ ಪ್ರಳಯಜಲವನ್ನು ನಾನೇ ಕುಡಿದುಬಿಟ್ಟೆನು. ಆಮೇಲೆ ಭೂಮಿಯನ್ನೂ ಸ್ಥಾಪಿಸಿದೆನು. ಅದಕ್ಕೆನೇಲೆ ನಾನು ಕ್ರಮವಾಗಿ ದೇವತೆಗಳನ್ನೂ, ಅಸುರರನ್ನೂ, ಪಿತೃಗಳನ್ನೂ, ಮನುಷ್ಯರನ್ನೂ ಇತರಜೀವವರ್ಗಗಳನ್ನೂ ಸೃಷ್ಟಿಸುವಷ್ಟರಲ್ಲಿ ಈ ಭೂಮಿಯು ಜಲದಲ್ಲಿ ಮುಳುಗಿ, ರಸಾತಲದವರೆಗೆ ಕುಗ್ಗಿಹೋಯಿತು. ಇದಕ್ಕೆ ನಾನೇನು ಮಾಡಬಲ್ಲೆನು? ಈಶ್ವರನು ಸೃಷ್ಟಿಕಾರ್ಯಕ್ಕಾಗಿಮಾತ್ರ ನನ್ನನ್ನು ನಿಯಮಿಸಿರುವನು. ಅದಕ್ಕೆಮೇಲೆ ನಾನೊಂದನ್ನೂ ನಡೆಸಲಾರೆನು. ಮುಂದೇನು ಮಾಡಬೇಕೆಂದು ನನಗೇನೂ ತೋರಲಿಲ್ಲ. ನನ್ನನ್ನು ಸೃಷ್ಟಿಸಿದ ಪರಮಪುರುಷನೇ ಮುಂದೆ ನಾನು ಮಾಡಬೇಕಾದ ಕಾರ್ಯಕ್ಕೂ ಪ್ರೇರಕನಾಗಿ, ಅದನ್ನು ನೆರವೇರಿಸಬೇಕಲ್ಲದೆ ನನ್ನಿಂದೇನೂ ಸಾಧ್ಯವಲ್ಲ" ಎಂದು ಕಳವಳಿಸುತಿದ್ದನು. ಹೀಗೆ ಬ್ರಹ್ಮನು ಚಿಂತಿಸುತ್ತಿರುವಾಗಲೇ ಆತನ ಮೂಗಿನ ರಂಧ್ರಗಳಿಂದ ಅಂಗುಷ್ಠಪ್ರಮಾಣಕ್ಕಿರುವ ಒಂದು ಸಣ್ಣ ವರಾಹವು ಹೊರಕ್ಕೆ

ಬಂದಿತು. ವಿದುರಾ! ಇದನ್ನೂ ಆ ಬ್ರಹ್ಮನ ಸೃಷ್ಟಿಯೆಂದೇ ತಿಳಿಯಬೇಡ! ಪರಮಪುರುಷನೇ ತನ್ನ ಸಂಕಲ್ಪದಿಂದ ಈ ಆಕಾರವನ್ನು ತಾಳಿ ಬಂದನು. ಆಹಾ! ಅದರ ಆಶ್ಚರ್ಯಶಕ್ತಿಯನ್ನೇನೆಂದು ಹೇಳಲಿ! ಚತುರ್ಮುಖನು ಕಣ್ಣಿಟ್ಟು ನೋಡುತ್ತಿರುವಾಗಲೇ ಅಷ್ಟು ಸೂಕ್ಷ್ಮಾಕೃತಿಯಿಂದಿದ್ದ ಆಹಂ ದಿಯ ಮರಿಯು, ಅಂತರಕ್ಷದಲ್ಲಿಯೇ ಹಾರಾಡುತ್ತಿದ್ದು ಒಂದು ಕ್ಷಣಮಾತ್ರ ದಲ್ಲಿ ಆನೆಯ ಪ್ರಮಾಣಕ್ಕೆ ಬೆಳೆಯಿತು. ಈ ವರಾಹವು ಇಷ್ಟಕ್ಕಿದ್ದಂತಾಗಿ ಬ್ರಹ್ಮನ ನಾಸಿಕಾರಂಧ್ರದಿಂದ ಹೊರಟುದೂ, ಅದು ಹುಟ್ಟಿದಕೂಡಲೇ ಆಕಾಶಕ್ಕೆ ಹಾರಿದುದೂ, ಆಕಾಶಕ್ಕೆ ಹಾರಿದೊಡನೆ ಆನೆಯಹಾಗೆ ಬೆಳೆದು ದೂ, ನೋಡುವವರಿಗೆ ಅತ್ಯಾಶ್ಚರ್ಯಕರವಾಯಿತು. ಆಗ ಬ್ರಹ್ಮನು ಮರೀಚಿ ಮೊದಲಾದ ತನ್ನ ಪುತ್ರರೊಡನೆಯೂ, ಸನಕಾದಿಕುಮಾರರೊಡನೆಯೂ, ತನ್ನ ಮಗನಾದ ಸ್ವಾಯಂಭುವಮನುವಿನೊಡನೆಯೂ ಕೂಡಿ ವಿಸ್ಮಯಪ ಡುತ್ತ, ಮನಸ್ಸಿನಲ್ಲಿ ನಾನಾವಿಧವಾಗಿ ಚಿಂತಿಸತೊಡಗಿದನು "ಇದೇನಿ ದು! ಈ ವರಾಹವೆಲ್ಲಿಯದು? ಒಂದುವೇಳೆ ಪರಮವೈಕುಂಠದಲ್ಲಿ ಶುದ್ಧ ಸತ್ವಮಯಮೂರ್ತಿಯಾಗಿದ್ದ ಆ ಪರಬ್ರಹ್ಮವೇ ಹೀಗೆ ಈ ವರಾಹರೂಪ ವನ್ನು ತಾಳಿ ಬಂದಿರಬಹುದೆ? ನನ್ನ ಮೂಗಿನ ದ್ವಾರದಿಂದ ಈ ವರಾಹವು ಹೊರಟುಬಂದುದು, ನನಗೆ ಬಹಳ ಆಶ್ಚರ್ಯಕಾರಣವಾಗಿರುವುದು. ಆಹಾ! ಏನಾಶ್ಚರ್ಯವು! ಮೊದಲು ಈ ವರಾಹವು ಹೆಬ್ಬೆರಳಿನ ಗಿಣ್ಣಿನಷ್ಟು ಸೂ ಕ್ಷ್ಮರೂಪದಿಂದ ಕಾಣಿಸಿತು. ಉತ್ತರಕ್ಷಣದಲ್ಲಿಯೇ ದೊಡ್ಡ ಪರ್ವತದಬಂ ಡೆಯಂತೆ ಉಬ್ಬಿ ಬೆಳೆಯಿತು ಹೀಗೆ ವರಾಹಾಕೃತಿಯಿಂದಿದ್ದು, ಆದ್ಭುತವ್ಯಾ ಪಾರಗಳಿಂದ ನನ್ನ ಮನಸ್ಸನ್ನು ಕಳವಳಗೊಳಿಸುತ್ತಿರುವ ಈ ವಸ್ತುವು ಯೆಜ್ಞರೂಪಿಯಾದ ಆ ಭಗವಂತನೇ ಆಗಿರಬಹುದೆ? ನಿಜಸ್ಥಿತಿಯೇನೋ ತಿಳಿಯಲಿಲ್ಲವಲ್ಲಾ" ಎಂದು ದುಃಖಿಸುತ್ತ, ಇದೇ ವಿಷಯವನ್ನು ಕುರಿತು ತನ್ನ ಮಕ್ಕಳಾದ ಮರೀಚಿ ಮೊದಲಾದವರೊಡನೆಯೂ ತರ್ಕಿಸುತಿದ್ದನು. ಹೀಗೆ ಬ್ರಹ್ಮನು ಚಿಂತಿಸುತ್ತಿರುವಾಗಲೇ, ವರಾಹರೂಪವನ್ನು ತಾಳಿ ಪರ್ವತ ದಂತೆ ಅದ್ಭುತಾಕೃತಿಯಿಂದ ತೋರುತಿದ್ದ ಆ ಪರಮಪುರುಷನು, ನಾನಾದಿ ಕ್ಕುಗಳಲ್ಲಿಯೂ ಪ್ರತಿಧ್ವನಿ ಹೊರಡುವಂತೆ, ಒಂದು ಗಂಭೀರಗರ್ಜನವನ್ನು ಮಾ

ಡಿದನು. ಈ ಅದ್ಭುತವಾದ ಗರ್ಜನಧ್ವನಿಯನ್ನು ಕೇಳಿಬೊಡನೆ,ಬ್ರಹ್ಮನಿಗೂ, ಅವನ ಮಕ್ಕಳಾದ ಮರೀಚಿ ಮೊದಲಾದ ಬ್ರಾಹ್ಮಣೋತ್ತಮರಿಗೂ ಮನಸ್ಸಿನಲ್ಲಿ ಒಂದುವಿಧವಾದ ಸಂತೋಷವು ಹುಟ್ಟಿತೇಹೊರತು ಭಯವುಂಟಾಗಲಿಲ್ಲ. ಕಪಟವರಾಹರೂಪದಿಂದಿದ್ದ ಭಗವಂತನು, ಈ ಧ್ವನಿಮಾಡಿದುದನ್ನು ಕೇಳಿ ಜನಲೋಕ ತಪೋಲೋಕ ಸತ್ಯಲೋಕವೆಂಬ ಈ ಮೂರು ಲೋಕಗಳಲ್ಲಿರತಕ್ಕ ಮಹರ್ಷಿಗಳೆಲ್ಲರೂ, ಋಕ್ಕು, ಯಜಸ್ಸು, ಸಾಮವೆಂಬ ಮೂರು ವೇದಸೂತ್ರಗಳಿಂದ ಆ ಭಗವಂತನನ್ನು ಸ್ತೋತ್ರಮಾಡತೊಡಗಿದರು. ಯಜ್ಞಸ್ವರೂಪನಾದ ಆ ಭಗವಂತನು, ಮಹರ್ಷಿಗಳ ಬಾಯಿಂದ ಹೊರಟ ಈ ಸ್ತುತಿವಾಕ್ಯಗಳನ್ನು ಕೇಳಿ, ತಾನು ಅವರಲ್ಲಿ ಪ್ರಸನ್ನನಾದುದನ್ನು ಸೂಚಿಸುವಂತೆ, ಮೇಲೆಮೇಲೆ ಘುರ್ಘುರಧ್ವನಿಯನ್ನು ಮಾಡುತ್ತ, ಕೊನೆಗೆ ಅವರೆಲ್ಲರ ಕ್ಷೇಮಕ್ಕಾಗಿ ಮದದಾನೆಯಂತೆ ಗಂಭೀರವಾದ ನಡೆಯಿಂದ ಆ ಮಹಾಸಮುದ್ರದೊಳಗೆ ಪ್ರವೇತಿಸಿಬಿಟ್ಟನು. ಭೂಮ್ಯುದ್ಧರಣಾರ್ಥವಾಗಿ ಹೊರಟ ಆ ಮಾಯಾವರಾಹದ ಲೀಲೆಗಳನ್ನು ಕೇಳಬೇಕೆ ? ಬಾಲವನ್ನು ಮೇಲಕ್ಕೆ ತೂಗಿ, ಪಕ್ಷಿಯಂತೆ ಆಕಾಶದಲ್ಲಿಯೇ ಹಾರಾಡುತ್ತಿರುವುದು! ಆಗಾಗ ತನ್ನ ಕಠಿನವಾದ ಕೇಸರಗಳನ್ನು ವೇಗದಿಂದೊದರುತ್ತಿರುವುದು ! ತನ್ನ ತೀಕ್ಷ್ಣವಾದ ಗೊರಸಲುಗಳಿಂದ ಆಗಾಗ ಮೇಘಗಳನ್ನು ಅಪ್ಪಳಿಸುತ್ತಿರುವುದು! ಮತ್ತು ಅದಕ್ಕೆ ಕಠಿನರೋಮಗಳಿಂದ ತುಂಬಿದ ತೊಗಲು! ಬಾಯಿಯ ಉಭಯಪಾರ್ಶ್ವಗಳಲ್ಲಿಯೂ ಜಂಭ್ರನಂತೆ ಬಿಳುಪಾದ ಕೋರೆದಾಡೆಗಳು ! ಲೋಕವೆಲ್ಲವನ್ನೂ ಬೆಳಗುವಂತೆ ಜ್ವಲಿಸುವ ಕಣ್ಣಾಲೆಗಳು! ತಾನೇ ಯಜ್ಞಸ್ವರೂಪವಾಗಿದ್ದರೂ ಆ ಮಾಯಾವರಾಹವು, ಪಶುಸ್ವಭಾವಕ್ಕೆ ತಕ್ಕಂತೆ ತನ್ನ ಮೂಗಿನಿಂದ ಆಗಾಗ ನೆಲವನ್ನು ಮೂಸಿನೋಡುತ್ತ, ಭೂಮಿಯ ಮಾರ್ಗವನ್ನು ಹುಡುಕುತ್ತಿರುವುದು ! ಭಯಂಕರಗಳಾದ ಕೋರೆದಾಡೆಗಳಿಂದ ಕೂಡಿದ್ದರೂ, ತನ್ನಮುಂದೆ ನಿಂತಿದ್ದ ಮಹರ್ಷಿಗಳನ್ನು ಪ್ರಸನ್ನವಾದ ನೋಟದಿಂದ ಸಂತೋಷಗೊಳಿಸುತ್ತಿರುವುದು ! ಇಂತಹ ಮಹಾವರಾಹವು, ವಜ್ರಮಯವಾದ ಪರ್ವತದಂತೆ ಅತಿಕಠಿನವಾದ ತನ್ನ ದೇಹದಿಂದ,ಆ ಸಮುದ್ರಜಲವನ್ನು ಭೇದಿಸಿಕೊಂಡು ಒಳ

ಗೆ ಪ್ರವೇಶಿಸುವಾಗ, ಮಹಾಸಮುದ್ರವೂಕೂಡ, ಅದರ ವೇಗವನ್ನು ತಡೆಯಲಾರದೆ ಬಹಳವಾಗಿ ನೊಂದು, ಅಲೆಗಳೆಂಬ ತನ್ನ ಕೈಗಳನ್ನು ನೀಡಿ, "ಯಜ್ಞಮೂರ್ತಿಯಾದ ಹೇ ಪರಮಪುರುಷಾ! ನನ್ನನ್ನು ಹಿಂಸಿಸದೆ ಕೃಪೆಯಿಂದ ರಕ್ಷಿಸಬೇಕು" ಎಂದು ಮೊರೆಯಿಡುವಂತಿತ್ತು. ಸವಸಗಳೆಂಬ ಮೂರು ಯಜ್ಞಾಂಗಗಳನ್ನು ತನ್ನ ದೇಹದಲ್ಲಿಯೇ ತೋರಿಸುವಂತೆ, ಮೂರು ರೇಖೆಗಳಿಂದ ಕೂಡಿದ ಹಿರಳುಳ್ಳ, ಅಪ್ರಮೇಯಮಹಿಮನಾದ ಆ ಯಜ್ಞವರಾಹನು, ಕತ್ತಿಯಂತಿರುವ ತನ್ನ ಗೊರಸಲುಗಳಿಂದ ಜಲವನ್ನು ಭೇದಿಸಿಕೊಂಡು ಒಳಗೆ ಪ್ರವೇಶಿಸಿ, ರಸಾತಲದವರೆಗೆ ಹೋದನು ಮೊದಲು ತಾನು ಸಮುದ್ರಶಾಯಿಯಾಗಿ ಯೋಗನಿದ್ರೆಯಲ್ಲಿದ್ದಾಗ, ಸಮಸ್ತ ಜೀವರಾಶಿಗೂ ಆಶ್ರಯವಾದ ಯಾವ ಭೂಮಿಯನ್ನು ತನ್ನ ದೇಹದಲ್ಲಿ ಧರಿಸಿದ್ದನೋ, ಆ ಭೂಮಿಯು ಅಲ್ಲಿರುವುದನ್ನು ಕಂಡನು. ಒಡನೆಯೇ ಆ ಭೂಮಿಯನ್ನು ತನ್ನ ಕೋರೆದಾಡೆಯಿಂದ ಮೀಟಿ, ರಸಾತಲದಿಂದ ಮೇಲಕ್ಕೆದ್ದು ಬಂದು, ದಿವ್ಯತೇಜಸ್ಸಿನಿಂದ ಶೋಭಿಸುತಿದ್ದನು ಈ ಸಮಯದಲ್ಲಿ ಆದಿದೈತ್ಯನೆಸಿಸಿಕೊಂಡ ಹಿರಣ್ಯಾಕ್ಷನೆಂಬ ಕ್ರೂರರಾಕ್ಷಸನೊಬ್ಬನು, ಗದೆಯನ್ನು ಹಿಡಿದು ಭಯಂಕರವಾದ ಸಿಂಹನಾದವನ್ನು ಮಾಡುತ್ತ, ಈ ವರಾಹಮೂರ್ತಿಯನ್ನು ಇರಿಸುವುದಕ್ಕೆ ನಿಂತನು. ಆಗ ಆದಿವರಾಹನು, ಆ ರಾಕ್ಷಸನನ್ನು ನೋಡಿ, ಅತಿತೀವ್ರವಾದ ಕೋಪಾವೇಶವನ್ನು ಹೊಂದಿದವನಾಗಿ, ಸಿಂಹವು ಆನೆಯನ್ನು ಸೀಳುವಂತೆ ಲೀಲಾಮಾತ್ರದಿಂದಲೇ ಆ ರಾಕ್ಷಸನನ್ನು ಕೊಂದು ಕೆಡಹಿದನು.ಆಗ ಆ ರಾಕ್ಷಸನ ದೇಹರಕ್ತದಿಂದ ತೊಯ್ದ ಮೂತಿಯುಳ್ಳ ಆ ಆದಿವರಾಹನು,ಪರ್ವತದಮೇಲೆ ವಪ್ರಕ್ರೀಡೆಯನ್ನಾಡುವಾಗ, ಅಲ್ಲಿನ ಗೈರಿಕಾದಿಧಾತುಗಳ ಕೆಂಪುಬಣ್ಣದಿಂದ ಕೂಡಿದ ಕೊಂಬುಳ್ಳ ಮಹಾಗಜವೋ ಎಂಬಂತೆ ಕಾಣುತಿದ್ದನು. ಹೊಂಗೆಯ ಚಿಗುರಿನಂತೆ ಕಪ್ಪಾದದೇಹಕಾಂತಿಯುಳ್ಳ ಆ ಆದಿವರಾಹನು, ಗಜೇಂದ್ರಲೀಲೆಯಲ್ಲಿ ತನ್ನ ಕೊಂಬುಗಳಿಂದ ಭೂಮಿಯನ್ನು ಮೇಲಕ್ಕೆತ್ತಿತಂದುದನ್ನು ನೋಡಿ, ಬ್ರಹ್ಮಾದಿದೇವತೆಗಳೂ, ಮಹರ್ಷಿಗಳೂ ಅತ್ಯಾನಂದಭರಿತರಾಗಿ ಆ ವರಾಹಮೂರ್ತಿ



466. ವರಾಹಮೂರ್ತಿಯು ಭೂಮಿಯನ್ನು ಸಮುದ್ರದಿಂದ ಮೇಲಕ್ಕೆತ್ತಿದುದು.

ಯಮುಂದೆ ಕೈಜೋಡಿಸಿನಿಂತು, ವೇದವಾಕ್ಯಗಳಿಂದ ಹೀಗೆಂದು ಸ್ತೋತ್ರ ಮಾಡತೊಡಗಿದರು.

ಮಹರ್ಷಿಕೃತ ನಾರಾಯಣಮೂರ್ತಿಸ್ತುತಿ.

ಜಿತಂ ಜಿತಂ ತೇಽಜಿತ ಯಜ್ಞಭಾವನೆ
ತ್ರಯೀಂ ತನುಂ ಸ್ವಾಂ ಪರಿಧೂನ್ವತೇ ನಮಃ ।
ಯದ್ರೋಮಗರ್ತೇಷು ವಿಲಿಲ್ಯುರಧ್ವರಾ
ಸ್ತಸ್ಮೈ ನಮಃ ಕಾರಣಸೂಕರಾಯ ತೇ ॥ ೧॥

ಓ ದೇವಾ ! ಎಲೈ ಯಜ್ಞಾರಾಧ್ಯನೆ ! ಲೋಕದಲ್ಲಿ ಬೇರೊಬ್ಬರಿಂದ ಅಡಗಿಸಲಸಾಧ್ಯವಾದ ದಿವ್ಯತೇಜಸ್ಸುಳ್ಳ ನಿನಗೆ ಜಯವಾಗಲಿ ಜಯವಾಗಲಿ ! ವೇದಮಯವಾದ ನಿನ್ನ ದಿವ್ಯವಿಗ್ರಹವನ್ನು ಈಪಿಥವಾಗಿ ತೋರಿಸುತ್ತಿರುವ ನಿನಗೆ ನಮಸ್ಕಾರವು ! ಯಾವ ನಿನ್ನ ಒಂದೊಂದು ರೋಮಕೂಪದಲ್ಲಿಯೇ ಸಪ್ತಸಮುದ್ರಗಳೂ ಅಡಗಿರುವುವೋ, ಅಂತಹ ಜಗತ್ಕಾರಣನಾದ, ಆದಿವರಾಹಮೂರ್ತಿಯಾದ ನಿನಗೆ ನಮಸ್ಕಾರವು.

ರೂಪಂ ತವೈತನ್ನನು ದುಷ್ಕೃತಾತ್ಮನಾಂ
ದುರ್ದರ್ಶನಂ ದೇವ ಯದಧ್ವರಾತ್ಮಕಮ್ ।
ಛಂದಾಂಸಿ ಯಸ್ಯ ತ್ವಚಿ ಬರ್ಹಿರೋಮಸ್ವಾ
ಜ್ಯಂ ದೃಶಿ ತ್ವಂಘ್ರಿಷು ಚಾತುರ್ಹೋತ್ರಮ್ ॥ ೨॥

ದೇವಾ ! ಯಜ್ಞಮೂರ್ತಿಯಾದ ಈ ನಿನ್ನ ಸ್ವರೂಪವು ಯೋಗನಿಷ್ಠರಿಗಲ್ಲದೆ ಪಾಪಿಗಳಿಗೆ ಗೋಚರಿಸಲಾರದು ! ಗಾಯತ್ರಿ ಮೊದಲಾದ ಛಂದಸ್ಸುಗಳೆಲ್ಲವೂ ನಿನ್ನ ಚರ್ಮದಲ್ಲಿ, ಯಜ್ಞಸಾಧನಗಳಾದ ದರ್ಭೆಗಳು ನಿನ್ನ ರೋಮಗಳಲ್ಲಿ, ಹವಿಸ್ಸೆಂಬುದು ನಿನ್ನ ನೇತ್ರದಲ್ಲಿ, ಅಧ್ವರ್ಯು ಮೊದಲಾದ ಚತುರ್ವೇದಾಧಿಕಾರಿಗಳು ನಡೆಸತಕ್ಕ ಚಾತುರ್ಹೋತ್ರವೆಂಬ ಕರ್ಮವು ನಿನ್ನ ನಾಲ್ಕು ಪಾದಗಳಲ್ಲಿಯೂ ನೆಲೆಗೊಂಡಿರುವುದರಿಂದ, ನೀನೇ ಯಜ್ಞಸ್ವರೂಪನು.

ಸ್ರುಕ್ತುಂಡ ಆಸೀತ್ಸ್ರುವ ಈಶ ನಾಸಯೋ
ರಿಡೋದರೇ ಚಮಸಾಃ ಕರ್ಣರಂಧ್ರೇ ।

ಪ್ರಾಶಿತ್ರಮಾಸ್ಯೇ ಗ್ರಸನೇ ಗ್ರಹಾಸ್ತುತೇ
ಯಚ್ಚರ್ವಣಂತೇ ಭಗವನ್ನಗ್ನಿಹೋತ್ರಮ್ ॥ ೩॥

ಮತ್ತು ಹೇ ದೇವಾ! ಸ್ರುಕ್ಕು, ಸ್ರುವೆ, ಇಡೆ, ಚಮಸ, ಪ್ರಾಶಿತ್ರ, ಗ್ರಹಗಳೆಂಬ ಬೇರೆಬೇರೆ ಐದುಬಗೆಯ ಯಜ್ಞಪಾತ್ರಗಳೂ, ಕ್ರಮವಾಗಿ ನಿನ್ನ ಮುಖಾಗ್ರ, ಮೂಗು, ಗರ್ಭಕೋಶ, ಕಿವಿ, ಬಾಯಿ, ಕಂಠನಾಳವೆಂಬೀ ಐದು ಸ್ಥಾನಗಳಲ್ಲಿ ಸೇರಿರುವುವು. ಅಗ್ನಿಹೋತ್ರವೆಂಬ ಕರ್ಮವೇ ನಿನ್ನ ಭಕ್ಷಣವು.

ದೀಕ್ಷಾನು ಜನ್ಮೋಪಸದಶ್ಚಿರೋಧರ
ಸ್ತ್ವಂಪ್ರಾಯಣೀಯೋದಯನೀಯದಂಷ್ಟ್ರಃ ।
ಜಿಹ್ವಾಪ್ರವರ್ಗ್ಯಸ್ತವ ಶೀರ್ಷಕಂ ಕ್ರತೋ
ಸ್ಸಭ್ಯಾವಸಥ್ಯಂ ಚಿತಯೋಽಸವೋಹಿ ತೇ ॥ ೪॥

ಓ ಮಹಾತ್ಮಾ! ಯಜ್ಞಗಳಲ್ಲಿ ದೀಕ್ಷಾಸಂಸ್ಕಾರವೆಂಬ ಇಷ್ಟಿಯೇ ನಿನ್ನ ಆಗಾಗಿನ ಅವತಾರಭೇದಗಳು. ಉಪಸತ್ತುಗಳೆಂಬ ಮೂರು ಬಗೆಯ ಯಾಗಗಳೇ ನಿನ್ನ ಕಂಠವು. ಆರಂಭದಲ್ಲಿಯೂ, ಅವಸಾನದಲ್ಲಿಯೂ ನಡೆಸತಕ್ಕ ಪ್ರಾಯಣೀಯ ಉದಯನೀಯಗಳೆಂಬ ಯಜ್ಞಾಂಗಗಳೆರಡೂ ನಿನ್ನ ದಂಷ್ಟ್ರಗಳು. ಪ್ರವರ್ಗ್ಯವೆಂಬ ಕರ್ಮವು ನಿನ್ನ ನಾಲಗೆ! ಸಭ್ಯವೆಂಬ ಅಗ್ನಿಯೂ, ಔಪಾಸನಾಗ್ನಿಯೂ ನಿನ್ನ ಶಿರಸ್ಸು, ಚಿತಿಗಳೆಂಬ ಯಜ್ಞಾಗ್ನಿಗಳು ನಿನ್ನ ಪ್ರಾಣಗಳು. ಇಂತಹ ಯಜ್ಞಸ್ವರೂಪನಾದ ನಿನಗೆ ನನುಸ್ಕಾರವು.

ಸೋಮಸ್ತು ರೇತಸ್ಸವನಾನ್ಯವಸ್ಥಿತಿ
ಸ್ಸಂಸ್ಥಾವಿಭೇದಾಸ್ತವ ದೇಹಧಾತವಃ ।
ಸತ್ರಾಣಿ ಸರ್ವಾಣಿ ಶರೀರಸಂಧಿಸ್ತ್ವಂ
ಸರ್ವಮಯಜ್ಞಕ್ರತುರಿಷ್ಟಿ ಬನ್ಧನಮ್ ॥ ೫॥

ಹೇ ಸ್ವಾಮೀ! ಸೋಮವೆಂಬುದೇ ನಿನ್ನ ವೀರ್ಯವು. ಪ್ರಾತಸ್ಸವನವೇ ಮೊದಲಾದ ಯಾಗಗಳೇ ನಿನ್ನ ಬಾಲ್ಯಾದಿದಶೆಗಳು. ಅಗ್ನಿಷ್ಟೋಮ, ಉಕ್ಥ್ಯ, ಷೋಡಶಿ, ವಾಜಪೇಯ, ಅತಿರಾತ್ರ, ನಪ್ತೋರ್ಯಾಮಗಳೆಂಬ ಏಳುಬಗೆಯ ಸಂಸ್ಥಾಭೇದಗಳೂ, ನಿನ್ನ ಶರೀರದ ಸಪ್ತಧಾತುಗಳು. ಅನೇಕ

ಯಜಮಾನರುಳ್ಳ ಸತ್ರಯಾಗಗಳೆಲ್ಲವೂ ನಿನ್ನ ದೇಹದ ಕೀಲುಗಳು. ಯಜ್ಞಗಳೆಂದೂ, ಕ್ರತುಗಳೆಂದೂ, ಕರೆಯಲ್ಪಡುವ ಯಾಗಭೇದಗಳೆಲ್ಲವೂ ನೀನೇ! ಇಷ್ಟಿಯೆಂಬುದೇ ನಿನ್ನ ಮಧ್ಯಭಾಗವು. ಇಂತಹ ಯಜ್ಞರೂಪಿಯಾದ ನಿನಗೆ ನಮಸ್ಕಾರವು.

ನಮೋನಮಸ್ತೇऽಖಿಲಮಂತ್ರದೇವತಾ
ದ್ರವ್ಯಾಯ ಸರ್ವಕ್ರತವೇ ಕ್ರಿಯಾತ್ಮನೇ ।
ವೈರಾಗ್ಯಭಕ್ತ್ಯಾತ್ಮಜಯಾನುಭಾವಿತ
ಜ್ಞಾನಾಯ ವಿದ್ಯಾಗುರವೇ ನಮೋನಮಃ ॥ ೬॥

ಓ ದೇವಾ! ನೀನು ಸಮಸ್ತಮಂತ್ರವನ್ನೂ ಶರೀರವಾಗಿ ಉಳ್ಳವನು. ಯಜ್ಞದ್ರವ್ಯವೆಲ್ಲವೂ ನಿನ್ನ ರೂಪವೆನಿಸುವುದು. ನೀನೇ ಯಜ್ಞಸ್ವರೂಪನು. ನೀನೇ ಧರ್ಮಸ್ವರೂಪನು. ವೈರಾಗ್ಯದಿಂದಲೂ, ಭಕ್ತಿಯಿಂದಲೂ, ಇಂದ್ರಿಯಜಯದಿಂದಲೂ, ಉಂಟಾಗತಕ್ಕ ಜ್ಞಾನವೇ ನಿನ್ನ ಅನುಗ್ರಹಕ್ಕೆ ಮುಖ್ಯಕಾರಣವು. ಬೇರೆಬೇರೆ ಅವತಾರಗಳ ಮೂಲಕವಾಗಿ ನ್ಯಾಸವಿದ್ಯೆಯನ್ನು ಪ್ರಕಾಶಪಡಿಸಿದ ಮಹೋಪಕಾರಕನೂ ನೀನೇ! ಹೀಗೆ ವೇದಗಳ ಪೂರ್ವೋತ್ತರಭಾಗಗಳೆಲ್ಲಕ್ಕೂ ಪ್ರತಿಪಾದ್ಯನಾದ ನಿನಗೆ ನಮಸ್ಕಾರವು! ನಮಸ್ಕಾರವು!!

ದಂಷ್ಟ್ರಾಗ್ರಕೋಟ್ಯಾ ಭಗವಂಸ್ತ್ವಯಾಧೃತಾ
ವಿರಾಜತೇ ಭೂಧರ ಭೂಸ್ಸಭೂಧರಾ ।
ಯಥಾ ವನಾನ್ನಿಸ್ಸರತೋ ದತಾ ಧೃತಾ
ಮತಜ್ಗಜೇಂದ್ರಸ್ಯ ಸಪತ್ರಪದ್ಮಿನೀ ॥ ೭॥

ಎಲೈ ದೇವದೇವನೆ! ಈಗ ನೀನು ದಂಷ್ಟ್ರಾಗ್ರದಿಂದೆತ್ತಿತಂದಿರುವ ಪರ್ವತಸಹಿತವಾದ ಈ ಭೂಮಿಯು, ಕೊಳದಲ್ಲಿ ನೀರಾಟವನ್ನಾಡಿ ಮೇಲೆದ್ದು ಬಂದ ಮದದಾನೆಯು ಪದ್ಮಸಹಿತವಾದ ಒಂದು ಕಮಲಲತೆಯನ್ನು ತನ್ನ ಕೊಂಬುಗಳಿಂದ ಕಿತ್ತುತಂದಂತೆ ತೋರುತ್ತಿರುವುದು.

ತ್ರಯೀಮಯಂ ರೂಪಮಿದಂ ಚ ಸೌಕರಂ
ಭೂಮಂಡಲೇ ನಾಥ ದತಾ ಧೃತೇನ ತೇ ।

ಚಕಾಸ್ತಿ ಶೃಂಗೇಣ ಘನೇನ ಭೂಯಸಾ
ಕುಲಾಚಲೇನ್ದ್ರಸ್ಯ ಯಥೈವ ವಿಭ್ರಮಃ ॥ ೮॥

ದೇವಾ ! ವೇದಮಯವಾದ ಈ ನಿನ್ನ ವಾರಾಹಸ್ವರೂಪವು, ಪಂಷ್ಟ್ರಾಗ್ರದಲ್ಲಿ ಧರಿಸಿದ ಈ ಭೂಮಂಡಲದಿಂದ, ಮೇಘಸಮೂಹದಿಂದೊಪ್ಪುವ ತಿಖರವುಳ್ಳ ದೊಡ್ಡ ಕುಲಪರ್ವತವನ್ನು ಹೋಲುತ್ತಿರುವುದು

ಸಂಸ್ಥಾಪಯೈನಾಂ ಜಗತೀಂ ಸ ತಸ್ಥುಷಾಂ
ಲೋಕಾಯ ಪತ್ನೀಮಸಿ ಮಾತರಂ ಪಿತಾ ।
ವಿಧೇಮಹಾಸ್ಯೈ ನಮಸಾ ಸಹತ್ವಯಾ
ಯಸ್ಯಾಂ ಸ್ವತೇಜೋಽಗ್ನಿ ಮಿವಾರಣಾವಧಾಃ ॥ ೯॥

ಓ ಪರಮಪುರುಷಾ ! ಸಮಸ್ತಚರಾಚರಗಳ ನಿವಾಸಕ್ಕಾಗಿ ಈಗ ನೀನುದ್ಧರಿಸಿ ತಂದ ಈ ಭೂಮಿಯನ್ನು, ಸರಿಯಾದ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲಿಸು ! ಸರ್ವಲೋಕಜನಕನಾದ ನಿನಗೆ ಇನಳು ಪತ್ನಿಯಾದುದರಿಂದ, ಈ ಭೂದೇವಿಯೇ ನಮಗೆ ತಾಯಿಯು. ಯಜ್ಞಕರ್ತರು ಮಂಥ್ರದಿಂದ ಅರಣಿಯಲ್ಲಿ ಅಗ್ನಿಯನ್ನಿಡುವಂತೆ, ಈಕೆಯಲ್ಲಿ ನೀನು ನಿನ್ನ ತೇಜಸ್ಸನ್ನಿಟ್ಟಿರುವೆ. ಆದುದರಿಂದ ನಿನ್ನೊಡನೆ ಈಕೆಗೂ ನಾವು ನಮ್ಮ ವಂದನಗಳನ್ನರ್ಪಿಸುವೆವು.

ಕಶ್ಮಲ್ದಮೀತಾನ್ಯತನುಸ್ವ ಪ್ರಭೋ
ರಸಾಂ ಗತಾಯಾ ಭುವ ಉದ್ವಿಬರ್ಹಣಮ್ ।
ನ ವಿಸ್ಮಯೋಽಸಾ ತ್ವಯಿ ವಿಶ್ವವಿಸ್ಮಯೇ
ಸ್ವಮಾಯಯೇದಂ ಸಸೃಜೇತಿವಿಸ್ಮಯನಮ್ ॥ ೧೦॥

ಹೇ ಪ್ರಭೂ ! ರಸಾತಲದಲ್ಲಿ ಹುದುಗಿದ್ದ ಭೂಮಿಯನ್ನು ಮೇಲಕ್ಕೆತ್ತಿ ತಂದ ಈ ಆಶ್ಚರ್ಯವ್ಯಾಪಾರವು ನಿನಗೆ ಹೇಗೆ ಸಾಧ್ಯವಾಯಿತೆಂಬುದನ್ನು ಯಾರೂ ತಿಳಿಯಲಾರರು ! ಆದರೇನು ? ಮಹಾಶ್ಚರ್ಯಕರವಾದ ಪ್ರಪಂಚವನ್ನು ಚಿತ್ರವಿಚಿತ್ರವಾಗಿ ಸೃಷ್ಟಿಸತಕ್ಕ ಆಶ್ಚರ್ಯಶಕ್ತಿಯುಳ್ಳ ನಿನಗೆ ಇದೇನೂ ಅಷ್ಟೊಂದು ಅದ್ಭುತಕಾರ್ಯವಲ್ಲ.

ವಿಧೂನ್ವತಾ ವೇದಮಯಂ ನಿಜಂ ವಪು
ರ್ಜನಸ್ತಪಸ್ಸತ್ಯ ಸಿವಾಸಿನೋ ವಯಮ್ ।

ಸಟಾಶಿಖೋದ್ಧೂತಶಿವಾಮ್ಬುಬಿನ್ದ್ವಭಿ
ರ್ವಿಮೃಜ್ಯಮಾನಾ ಭೃಶಮೀಶ ಪಾಲಿತಾಃ ॥ ೧೦॥

ಹೇ ದೇವಾ! ವೇದಸ್ವರೂಪನಾದ ನೀನು, ಈ ವರಾಹರೂಪದೊಡನೆ ಸಮುದ್ರಮಧ್ಯದಿಂದ ಮೇಲೆದ್ದು ಬಂದು, ಕಂಠವನ್ನು ಕೊಡಹಿದಾಗ, ನಿನ್ನ ಸಟಾಗ್ರದಿಂದ (ಕತ್ತಿನ ಕೂದಲಿನಿಂದ) ಉದುರಿದ ಪರಮಪವಿತ್ರವಾದ ಜಲಬಿಂದುಗಳೇ, ಜನೋಲೋಕ, ತಪೋಲೋಕ, ಸತ್ಯಲೋಕನಿವಾಸಿಗಳಾದ ನಮ್ಮೆಲ್ಲರನ್ನೂ ಪಾವನಮಾಡಿದುವು.

ನಮೈ ಬತ ಭ್ರಷ್ಮಮತಿಸ್ತವೇಷತೇ
ಯಃ ಕರ್ಮಣಾಂ ಪಾರಮಪಾರಕರ್ಮಣಃ ।
ಯದ್ಯೋಗಮಾಯಾಗುಣಯೋಗಮೋಹಿತಂ
ವಿಶ್ವಂ ಸಮಸ್ತಂ ಭಗವನ್ ವಿಧೇಹಿ ತಂ ॥ ೧೧॥

ಎಲೈ ಭಗವಂತನೆ! ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಸುತ್ತಿರುವ ನಿನ್ನ ಅದ್ಭುತಕಾರ್ಯವನ್ನು ಯಾರು ತಾನೇ ಕಾಣಬಲ್ಲರು! ಈ ವಿಧವಾದ ನಿನ್ನ ಚರಿತ್ರೆಗಳ ಎಲ್ಲೆಯನ್ನು ಯಾವನು ತಿಳಿಯಬೇಕೆಂದಪೇಕ್ಷಿಸುವನೋ, ಅಂತವನನ್ನು ಕೇವಲಬುದ್ಧಿಹೀನನೆಂದೇ ಎಣಿಸಬೇಕಲ್ಲವೆ? ಓ ಸ್ವಾಮೀ! ಷಡ್ಗುಣಪರಿಪೂರ್ಣನಾಗಿ, ವಿಚಿತ್ರಸೃಷ್ಟಿಯನ್ನು ನಡೆಸುವ ನಿನ್ನ ಮಾಯೆಯ ಗುಣಗಳಾದ ಸತ್ವರಜಸ್ತಮಸ್ಸುಗಳ ಸಂಬಂಧದಿಂದ ಮೋಹಗೊಂಡಿರುವ ಲೋಕಕ್ಕೆ ನೀನು ಕ್ಷೇಮವನ್ನುಂಟುಮಾಡುವನಾಗು"ಎಂದರು.

ಹೀಗೆ ಮಹರ್ಷಿಗಳು ವೇದವಾಕ್ಯಗಳಿಗೆ ಸಮಾನವಾದ ವಾಕ್ಯಗಳಿಂದ ಸ್ತೋತ್ರಮಾಡಲು, ಲೋಕರಕ್ಷಕನಾದ ಭಗವಂತನು, ತನ್ನ ಕಾಲ್ಗೊರಸಿನ ರಂಧ್ರದಲ್ಲಿ ಸೇರಿದ್ದ ನೀರಿನಮೇಲೆಯೇ ಆ ಭೂಮಿಯನ್ನು ಸ್ಥಾಪಿಸಿಟ್ಟನು. ಹೀಗೆ ವರಾಹಮೂರ್ತಿಯು ಕೇವಲಲೀಲಾಮಾತ್ರದಿಂದಲೇ ರಸಾತಲದಲ್ಲಿ ಹುದುಗಿದ್ದ ಭೂಮಿಯನ್ನು ಮೇಲಕ್ಕೆತ್ತಿ ತಂದು, ಅದನ್ನು ತನ್ನ ಆಶ್ಚರ್ಯಶಕ್ತಿಯಿಂದ ಜಲದಮೇಲೆ ಸ್ಥಿರವಾಗಿ ನಿಲ್ಲಿಸಿ, ಅವರೆಲ್ಲರೂ ನೋಡುತ್ತಿದ್ದಹಾಗೆಯೇ ಅಂತರ್ಧಾನವನ್ನೂ ಹೊಂದಿದನು. ಓ ವಿದುರಾ! ಆದಿವರಾಹನು ಭೂಮಿಯನ್ನುದ್ಧರಿಸಿದ ಈ ಪವಿತ್ರವಾದ ಕಥೆ

ಯನ್ನು ಯಾರು ಕಿವಿಯಿಂದ ಕೇಳುವರೋ, ಯಾರು ಬಾಯಿಂದ ಹೇಳುವರೋ, ಅವರ ಹೃದಯದಲ್ಲಿ ಶ್ರೀಮನ್ನಾರಾಯಣನು ಯಾವಾಗಲೂ ಪ್ರಸನ್ನನಾಗಿ ನೆಲೆಗೊಂಡಿರುವನು. ಸರ್ವಾಭೀಷ್ಟಗಳನ್ನೂ ಕೊಡತಕ್ಕ ಪ್ರಭುವಾದ ಆ ಪರಮಪುರುಷನು ಪ್ರಸನ್ನನಾದಮೇಲೆ, ಯಾವುದುತಾನೇ ದುರ್ಲಭವು? ಈ ಭಗವದನುಗ್ರಹದಿಂದ ಬೇಕಾದ ಕೋರಿಕೆಗಳೆಲ್ಲವೂ ಈಡೇರುವಹಾಗಿದ್ದರೂ, ಅತ್ಯಲ್ಪಗಳಾದ ಇತರ ಪುರುಷಾರ್ಥಗಳಿಗಾಗಿ ಅದನ್ನು ಬಯಸುವುದರಿಂದ ಫಲವಿಲ್ಲ. ''ನಾವು ಯಾವ ಫಲವನ್ನೂ ಅಪೇಕ್ಷಿಸದಿದ್ದರೆ, ಭಗವದುಪಾಸನದಿಂದ ನಮಗಾಗುವ ಲಾಭವೇನು?" ಎಂದು ಕೇಳುವೆಯಾ? ಆ ಭಗವಂತನೇ ನಮ್ಮೆಲ್ಲರನ್ನೂ ಶರೀರವಾಗಿ ಹೊಂದಿ, ನಮ್ಮಲ್ಲಿ ಅಂತರಾತ್ಮನಾಗಿ, ಧಾರಕನಾಗಿಯೂ, ಪೋಷಕನಾಗಿಯೂ ಇರುವನು. ಮೃಢಜ್ಞಾನವನ್ನು ಹೊಂದಿ ಅವನನ್ನು ಯಾರು ಉಪಾಸನೆಮಾಡುವರೋ, ಅಂತವರ ಹೃದಯದಲ್ಲಿ.ಭಗವಂತನು ನಿತ್ಯವಾಸವನ್ನು ಮಾಡುತ್ತ, ಅವರಿಗೆ ಉತ್ತಮಗತಿಯಾದ ತನ್ನ ಸಾನ್ನಿಧ್ಯವನ್ನು ತಾನಾಗಿಯೇ ಅನುಗ್ರಹಿಸುವನು. ಇದೊಂದೇ ಮನುಷ್ಯನಿಗೆ ಉತ್ತಮಪುರುಷಾರ್ಥವು. ಇದನ್ನು ಬೇರೆ ಯಾವ ಉಪಾಯದಿಂದಲೂ ಪಡೆಯಲು ಸಾಧ್ಯವಲ್ಲ ಪುರುಷಾರ್ಥಗಳ ಸಾರಾಸಾರವನ್ನು ತಿಳಿದ ಯಾವ ಮನುಷ್ಯನು ತಾನೇ, ತನ್ನ ಕಿವಿಗಳೆಂಬ ಬೊಗಸೆಗಳಿಂದ ಸಂಸಾರತಾರಕವಾದ ಹರಿಕಥಾಮೃತವನ್ನು ಪಾನಮಾಡಿ, ಅದರ ರುಚಿಯನ್ನು ತಿಳಿದಮೇಲೆ, ತಿರುಗಿ ಅದನ್ನು ಪ್ರೀತಿಸದಿರುವನು? ವಿವೇಕಜ್ಞಾನವಿಲ್ಲದ ಕೇವಲಪಶುಗಳುಹೊರತು, ಮನುಷ್ಯನೆನಿಸಿಕೊಂಡವನೊಬ್ಬನೂ ಅದರಲ್ಲಿ ಅನಾದರವನ್ನು ತೋರಿಸಲಾರನು ಆಃ! ಇದಲ್ಲವೇ ಭಗವತ್ಕಥಾಮೃತದ ಅದ್ಭುತಮಹಿಮೆಯು!" ಎಂದನು. ಇಲ್ಲಿಗೆ ಹದಿಮೂರನೆಯ ಅಧ್ಯಾಯವು.

ದಿತಿದೇವಿಯಲ್ಲಿ ಗರ್ಭೋತ್ಪತ್ತಿಮುಂತಾದ ವೃತ್ತಾಂತಗಳು.

ಹೀಗೆ ಮೈತ್ರೇಯನಿಂದ ವರ್ಣಿಸಲ್ಪಟ್ಟ ಆದಿವರಾಹಮೂರ್ತಿಯಾದ ಪರಮಪುರುಷನ ಚರಿತ್ರವನ್ನು ಕೇಳಿಯೂಕೂಡ, ಭಗವತ್ಕಥಾಶ್ರವಣ

ದಲ್ಲಿ ಅತ್ಯಾಸೆಯುಳ್ಳ ವಿದುರನು, ಅಷ್ಟರಲ್ಲಿ ತೃಪ್ತಿಹೊಂದದೆ ಬದ್ಧಾಂಜಲಿಯಾಗಿ ನಿಂತು "ಓ ಮೈತ್ರೇಯಾ! ಭೂಮಿಯನ್ನುದ್ಧರಿಸುವಾಗ ವರಾಹಮೂರ್ತಿಯು, ಆದಿದೈತ್ಯನಾದ ಹಿರಣ್ಯಾಕ್ಷನನ್ನು ಕೊಂದನೆಂದು ಹೇಳಿದೆಯಲ್ಲವೆ? ಆ ವರಾಹಮೂರ್ತಿಯು ಭೂಮಿಯನ್ನುದ್ಧರಿಸುವಾಗ ಅವನಿಗೆ ಹಿರಣ್ಯಾಕ್ಷನೊಡನೆ ಯುದ್ಧವು ಹೇಗೆ ಸಂಭವಿಸಿತು. ಅದನ್ನು ವಿಸ್ತಾರವಾಗಿ ನನಗೆ ತಿಳಿಸಬೇಕು" ಎಂದನು. ಆದಕ್ಕಾ ಮೈತ್ರೇಯನು, "ಶಹಬಾಸ್ ವಿದುರಾ! ಮನುಷ್ಯರಿಗೆ ಮೃತ್ಯುಪಾಶವನ್ನು ತಪ್ಪಿಸತಕ್ಕ ಭಗವದವತಾರವನ್ನು ನೀನು ಕೇಳುವುದಕ್ಕಾಗಿ ನಾನು ಸಂತೋಷಪಟ್ಟೆನು. ಲೋಕದಲ್ಲಿ ಹರಿಕಥಾಶ್ರವಣವೆಂಬುದೇ ಸದ್ಗತಿಗೆ ಮುಖ್ಯಕಾರಣವು. ಈ ಭಗವಚ್ಚರಿತ್ರವನ್ನು ಕೇಳಿದುದರಿಂದಲ್ಲವೇ ಮೊದಲು, ಉತ್ತಾನಪಾದನ ಮಗನಾದ ಧ್ರುವನು, ಮೃತ್ಯುವಿನ ತಲೆಯನ್ನು ಮೆಟ್ಟಿ, ಭಗವಂತನ ಸಾನ್ನಿಧ್ಯವನ್ನು ಹೊಂದಿದನು. ಅದರಂತೆಯೇ ಆ ವಿಷ್ಣುವಿನ ಚರಿತ್ರವನ್ನು ಕುರಿತು ಪೂರ್ವದಲ್ಲಿ ಬ್ರಹ್ಮನು ದೇವತೆಗಳಿಗೆ ತಿಳಿಸಿದ ಒಂದಾನೊಂದು ಇತಿಹಾಸವನ್ನು ಹೇಳುವೆನು ಕೇಳು. ಪೂರ್ವದಲ್ಲಿ ದಕ್ಷನ ಮಗಳಾದ ದಿತಿಯೆಂಬವಳು ಕಶ್ಯಪ ಪ್ರಜಾಪತಿಯನ್ನು ಮದುವೆಯಾದಮೇಲೆ, ಒಂದಾನೊಂದುದಿನದಲ್ಲಿ ಕಾಮಾತುರದಿಂದಲೂ, ಸಂತಾನಾಭಿಲಾಷೆಯಿಂದಲೂ, ಸಂಧ್ಯಾಕಾಲದ ಸಮಯದಲ್ಲಿ, ತನ್ನ ಪತಿಯಾದ ಕಶ್ಯಪನ ಬಳಿಗೆ ಬಂದಳು. ಇವಳು ಕಶ್ಯಪನ ಬಳಿಗೆ ಬಂದಸಮಯದಲ್ಲಿ, ಕಶ್ಯಪನು, ಬಹಳ ಶ್ರದ್ಧೆಯಿಂದಲೂ, ನಿಯಮದಿಂದಲೂ, ಯಜ್ಞಾರಾಧ್ಯನಾದ ಪರಮಪುರುಷನನ್ನು ಪೂಜಿಸಿ, ಆತನನ್ನು ಹೃದಯದಲ್ಲಿ ಧ್ಯಾನಿಸುತ್ತ, ಅಗ್ನಿಶಾಲೆಯಲ್ಲಿ ನಿಷ್ಠೆಯಿಂದ ಕುಳಿತಿದ್ದನು. ಆಗ ದಿತಿಯು ಕಶ್ಯಪನನ್ನು ಸಮೀಪಿಸಿ "ಎಲೈ ಪ್ರಾಣಕಾಂತನೇ! ದುಷ್ಟನಾದ ಮನ್ಮಥನು ಧನುರ್ಬಾಣಗಳನ್ನು ಧರಿಸಿ, ಮದದಾನೆಯು ಬಾಳೆಯ ಕಂಬವನ್ನು ಮುರಿಯುವಂತೆ, ಅಬಲೆಯಾದ ನನ್ನನ್ನು ಬಾಧಿಸಿ, ನಿನ್ನೊಡನೆ ಸಂಭೋಗಕ್ಕಾಗಿ ಪ್ರೇರಿಸುತ್ತಿರುವನು. ಆ ಮನ್ಮಥಬಾಧೆಯನ್ನು ತಡೆಯಲಾರದೆ ನಿನ್ನ ಬಳಿಗೆ ಬಂದಿರುವೆನು. ನಾಥಾ! ನೀನು ಸಮಸ್ತವನ್ನೂ ಬಲ್ಲವನು. ಆದುದರಿಂದ ಸ್ತ್ರೀಯರಿಗೆ ಕಾಮಬಾಧೆಯೆಂಬುದು ಎಷ್ಟುದುಸ್ಸ

ಹ'ವೆಂಬುದನ್ನು ನಾನು ನಿನಗೆ ಹೇಳಬೇಕಾದುದಿಲ್ಲ. ಇದಲ್ಲದೆ ನನ್ನ ಸವತಿಯ ರಾದನಿನ್ನ ಇತರಪತ್ನಿಯರೆಲ್ಲರೂ ಗರ್ಭಿಣಿಯರಾಗಿರುವರು. ಅದನ್ನು ನೋಡ ನಾನು ಹೇಗೆತಾನೇ ಸಹಿಸಲಿ? ಶಾಂತಾ! ನಿನಗೆ ಮಂಗಳವಾಗಲಿ! ಧರ್ಮ ಜ್ಞನಾದ ನಿನಗೆ, ಈ ಸ್ಥಿತಿಯಲ್ಲಿ ನನ್ನನ್ನು ರಕ್ಷಿಸಬೇಕಾದುದೇ ಅನನ್ಯಕರ್ತವ್ಯ ವು ನನ್ನನುಗ್ರಹಿಸಬೇಕು ನಾಥಾ! ಲೋಕದಲ್ಲಿ ಪತಿಯಿಂದ ಆದರಿಸ ಲ್ಪಡತಕ್ಕ ಸ್ತ್ರೀಯರೇ, ತಮ್ಮ ತಮ್ಮ ಇಷ್ಟಸಿದ್ಧಿಯನ್ನು ಪಡೆದು, ನಿರ್ಮಲ ವಾದ ಕೀರ್ತಿಯನ್ನೂ ಸಂಪಾದಿಸಬಲ್ಲರು. ನಿನ್ನಂತಹ ಪತಿಯು ನಮ್ಮ ಗ ರ್ಭದಲ್ಲಿ ಪುತ್ರರೂಪದಿಂದ ಜನಿಸಿದಪಕ್ಷದಲ್ಲಿ, ಅದರಿಂದ ನಮಗುಂಟಾಗತ ಕ್ಕ ಸನ್ಮಾನಕ್ಕೆ ಮಿತಿಯುಂಟೆ? ಇವೆಲ್ಲವೂ ನಿನಗೆ ತಿಳಿಯದ ವಿಷಯವಲ್ಲ. ಇದಲ್ಲದೆ, ಆದಿಯಿಂದಲೂ ನಿನ್ನಲ್ಲಿ ನನಗಿರತಕ್ಕ ಅನುರಾಗಕ್ಕೆ ಮಿತಿಯಿಲ್ಲ. ಇದಕ್ಕೆ ನಿದರ್ಶನವೇನೆಂದು ಕೇಳುವೆಯಾ? ನಮ್ಮ ಬಾಲ್ಯದ ಸ್ನೇಹಿತೆಯಾದ ದಕ್ಷನು, ನಮ್ಮೆಲ್ಲರನ್ನೂ ಕರೆಸಿ ನಮಗೆ ಇಷ್ಟನಾದ ವರನು ಯಾರೆಂಬುದನ್ನು ತಿಳಿಸಿದರೆ, ಅವನಿಗೇ ನನ್ನುನ್ನು ಕೊಟ್ಟು ವಿವಾಹಮಾ ಡುವುದಾಗಿ ತಿಳಿಸಿದನು. ಆಗ ನಾವೆಲ್ಲರೂ ನಿನ್ನನ್ನೇ ವರಿಸಿರುವುದಾಗಿ ಹೇ ಳಿದೆವು. ಆ ನಮ್ಮ ಅಭಿಪ್ರಾಯವನ್ನು ತಿಳಿಪಡೆಯಲೆಯೇ, ನನ್ನೊಡನೆ ಹುಟ್ಟಿ ಮೂರುಮಂದಿ ಸಹೋದರಿಯರನ್ನೂ ನಿನಗೆ ಕೊಟ್ಟುವಿವಾಹಮಾಡಿದನು ಮದುವೆಯಾದುದುವೊದಲು ನಾವು ನಿನ್ನ ಧರ್ಮಪತ್ನಿಯಾಗಿ ನಿನ್ನನ್ನೇ ಅನುಸರಿಸುತ್ತಿರುವೆವು. ಹೀಗೆ ಅಪೇಕ್ಷಿಸಿನ್ನವಾದ ಪ್ರೇಮವುಳ್ಳ ನಮ್ಮ ಕೋರಿಕೆಯನ್ನು ಈಡೇರಿಸದಿರುವುದು ನಿನಗೆ ಧರ್ಮವಲ್ಲ! ಇದಲ್ಲದೆ ನಿಮ್ಮಂತವರಲ್ಲಿ ಯಾಚಿಸಿದ ಕೋರಿಕೆಯು ಯಾವಾಗಲೂ ವ್ಯರ್ಥ ವಾಗಬಾರದು. ಆದುದರಿಂದ ನನ್ನನ್ನು ರಕ್ಷಿಸಬೇಕು" ಎಂದಳು. ಹೀಗೆ ಕಾಮಾತುರದಿಂದ ಬಾಯಿಗೆ ಬಂದಹಾಗೆ ಮಾತುಗಳನಾಡುತ್ತಿರುವ ಪತಿಯನ್ನು ನೋಡಿ ಕಶ್ಯಪನು, ಒಳಗೊಳಗೆ ನಗುತ್ತ, ಒಳ್ಳೇ ಮಾತು ಗಳಿಂದಲೇ ಅವಳನ್ನು ಆ ಅಕೃತ್ಯದಿಂದ ತಪ್ಪಿಸಬೇಕೆಂದೆಣಿಸಿ, "ಓ ಸುಂದರಿ! ನೀನು ಹೇಳಿದುದೆಲ್ಲವೂ ಸತ್ಯವು! ನಿನ್ನ ಕೋರಿಕೆಯನ್ನು ನಡೆಸಬೇಕಾದುದೇ ನನ್ನ ಕೃತ್ಯವು. ಭಯಪಡಬೇಡ! ನಿನ್ನ ಇಷ್ಟವನ್ನು

ಈಡೇರಿಸುವೆನು. ಪುರುಷನಿಗೆ ಯಾರಿಂದಲೇ ಧರ್ಮಾರ್ಥಕಾಮುಗಳೆಂಬ ಮೂರು ಪುರುಷಾರ್ಥಗಳ ಫಲವು ಸಿದ್ಧಿಸಬೇಕಾಗಿರುವುದೋ, ಅಂತಹ ಭಾರ್ಯೆಯರ ಕೋರಿಕೆಯನ್ನು ಯಾವನು ತಾನೇ ತೀರಿಸಬಾರುವನು? ಪುರುಷನು ಪತ್ನೀಸಮೇತನಾಗಿದ್ದರಲ್ಲವೇ ಬ್ರಹ್ಮಚರ್ಯವೇ ಮೊದಲಾದ ಬೇರೆ ಆಶ್ರಮದಲ್ಲಿರುವವರನ್ನೂ ಪೋಷಿಸಬಲ್ಲನು ಮತ್ತು ಹಡಗು ಸಮುದ್ರವನ್ನು ದಾಟಿಸುವಂತೆ, ಪುರುಷರಿಗೆ ಉಂಟಾಗತಕ್ಕ ಇಂದ್ರಿಯವ್ಯಸನವೆಂಬ ಮಹಾ ಸಮುದ್ರವನ್ನು ದಾಟಿಸುವುದಕ್ಕೆ ಅವರ ಭಾರ್ಯೆಯರೇ ಮುಖ್ಯಸಾಧನವು. ಇಂದ್ರಿಯಜಯಕ್ಕೂ ಭಾರ್ಯೆಯೇ ಸಹಕಾರಿಣಿಯು. ಮತ್ತು ಪುರುಷನಿಗೆ ಪತ್ನಿಯು ಅರ್ಧದೇಹವೆನಿಸಿರುವಳು. ಆದುದರಿಂದಲೇ ಪುರುಷನು ಗೃಹಕೃತ್ಯದ ಭಾರಗಳೆಲ್ಲವನ್ನೂ ಭಾರ್ಯೆಯೆಲ್ಲರಿಸಿ, ತಾನು ನಿಶ್ಚಿಂತನಾಗಿರುವನು. ಓ, ಸುಂದರೀ! ದುರ್ಗಪಾಲಕನಾದ ರಾಜನು, ದುರ್ಗದ ಆಶ್ರಯದಿಂದ ಶತ್ರುಗಳನ್ನೂ, ಚೋರರನ್ನೂ, ಲೀಲಾಮಾತ್ರದಿಂದಲೇ ತಡೆಯುವಂತೆ, ಪುರುಷಾಪ ನಾವು, ನಿನ್ನಂತಹ ಧರ್ಮಪತ್ನಿಗಳನ್ನಾಶ್ರಯಿಸಿಯೇ ಬ್ರಹ್ಮಚರ್ಯಾದ್ಯಾಶ್ರಮುಗಳಲ್ಲಿಯೂ ಜಯಿಸಲಸಾಧ್ಯವಾದ ಇಂದ್ರಿಯಗಳನ್ನು ಅನಾಯಾಸವಾಗಿ ನಿಗ್ರಹಿಸುವೆವು. ಪತಿಗೆ ಇಷ್ಟುವಿಧದಲ್ಲಿ ಸಹಾಯಕಳಾದ ಭಾರ್ಯೆಗೆ ತಕ್ಕ ಪ್ರತ್ಯುಪಕಾರವನ್ನು ಮಾಡಿ, ಆ ಋಣವನ್ನು ತೀರಿಸುವುದಕ್ಕೆ ನಮ್ಮ ಈ ಪುರುಷಾಯುಸ್ಸೇ ಸಾಲದೆಂದು ಹೇಳಬಹುದು. ಕೊನೆಗೆ ಜನ್ಮಾಂತರವೂ ಸಾಲದೆಂದೇ ಎಣಿಸುವೆನು. ಸರ್ವಪಿಥದಲ್ಲಿಯೂ ಉಪಕಾರಕಳಾದ ನಿನ್ನ ಋಣವನ್ನು ತೀರಿಸುವುದಕ್ಕೆ ನಾನು ಸಮರ್ಥನಲ್ಲ. ಹಾಗಿದ್ದರೂ ನಿನ್ನಂಥ ಸಾಧ್ವಿಯಾದ ಉಪಕಾರವನ್ನು ಮಾಡಿ ನಿನ್ನನ್ನು ನಾನು ಸಂತೋಷಪಡಿಸುವುದಕ್ಕೆ ಯಾವ ಸಂದೇಹವೂ ಇಲ್ಲ. ಸಂತಾನಾಪೇಕ್ಷೆಯಿಂದ ಬಂದ ಈ ನಿನ್ನ ಕೋರಿಕೆಯನ್ನು ತಪ್ಪದೆ ಈಡೇರಿಸುವೆನು. ಇದರೆ ಒಂದೆರಡು ಮುಹೂರ್ತಕಾಲದವರೆಗೆ ನೀನು ನಿರೀಕ್ಷಿಸುತ್ತಿರಬೇಕು ಈ ಸಮಯವಾದರೋ ಬಹಳ ಭಯಂಕರವಾದುದು! ಭಯಂಕರವಸ್ತುಗಳಿಗೂ ಭಯವನ್ನುಂಟುಮಾಡುತ್ತಿರುವುದು! ಇದು ಸಂಭೋಗಕ್ಕೆ ಉಚಿತಕಾಲವಲ್ಲ. ಇದು ಸಂಧ್ಯಾಸಮಯವು. ಈ ಸಮಯದ

ಲ್ಲಿ ರುದ್ರನಿಗೆ ಅನುಚರಗಳಾದ ಭೂತಗಣಗಳೆಲ್ಲವೂ ಸಂಚರಿಸುತ್ತಿರುವುವು. ಭೂತಪತಿಯಾದ ರುದ್ರನೂಕೂಡ, ಈ ಸಮಯದಲ್ಲಿ ತನ್ನ ಪ್ರಮಥಗಣಗಳೊಡನೆ ಎಲ್ಲೆಲ್ಲಿಯೂ ಸಂಚರಿಸುತ್ತಿರುವನು. ಲೋಕಸುಖಕ್ಕಾಗಿ ಈಗ ರುದ್ರನು,ತನ್ನ ವಾಹನವಾದ ನಂದಿಯನ್ನೇರಿ, ನಾನಾಕಡೆಗಳಲ್ಲಿಯೂ ಸುತ್ತುವನು. ಎಲೆ ದೇವಿ! ನಿನ್ನ ಮೈದುನ (ಸಹೋದರಿಯ ಗಂಡ) ನಾದ ಆ ರುದ್ರನ ಪ್ರಭಾವವನ್ನು ಕೇಳಬೇಕೆ? ಶ್ಮಶಾನವಾಸ! ಸುಳಿಗಾಳಿಯಿಂದೆದ್ದ ಧೂಳಿನಿಂದ ಧೂಮ್ರವರ್ಣವಾದ ಜಟೆಗಳು! ಸುವರ್ಣದಂತಿರುವ ದೇಹಕಾಂತಿಯನ್ನು ಮರೆಸುವಂತೆ ಮೈಮೇಲೆ ಬೂದಿ! ಈವೇಷದಿಂದ ಅಲ್ಲಲ್ಲಿ ಸಂಚರಿಸುತ್ತ, ತನ್ನ ಮೂರು ಕಣ್ಣುಗಳಿಂದಲೂ, ಲೋಕವ್ಯಾಪಾರವನ್ನು ನೋಡುತ್ತಿರುವನು. ಆತನ ಕಣ್ಣಿಗೆ ಬೀಳದ ಸ್ಥಳವೊಂದಾದರೂ ಇರುವುದಿಲ್ಲ. ಪ್ರಿಯೆ! ಆವನಿಗೂ, ನನಗೂ ಇರುವ ಬಂಧುತ್ವವನ್ನಾದರೂ ಆಲೋಚಿಸು! ಅಂತಹ ಬಂಧುಗಳ ಕಣ್ಣಿರಿಗೆ ಸಂಭೋಗಿಸುವುದು ನನುಗೆ ಯುಕ್ತವೆ? ಈ ಬಂಧುತ್ವದ ದಾಕ್ಷಿಣ್ಯದಿಂದ ಆತನು ನಮ್ಮ ಅಕೃತ್ಯವನ್ನು ಮನ್ನಿಸಬಹುದೆಂದೆಣಿಸಬೇಡ! ಅವನಿಗೆ ತನ್ನವರೆಂದೂ, ಹೆರವರೆಂದೂ ಭೇದಬುದ್ಧಿಯಿಲ್ಲ. ಆತನಿಗೆ ಪ್ರೀತಿಪಾತ್ರನೆಂದೂ ನಿಂದನೀಯನೆಂದೂ ವ್ಯತ್ಯಾಸವಿಲ್ಲ! ಪ್ರಕೃತಿಸಂಬಂಧದಿಂದ ಬುದ್ಧಿಮೋಹವನ್ನು ಹೊಂದಿ ಸ್ವಪ್ರಯೋಜನವನ್ನು ಅಪೇಕ್ಷಿಸುವವನಿಗಲ್ಲವೇ, ತನ್ನದೆಂದೂ, ಇತರರದೆಂದೂ ಭೇದಬುದ್ಧಿಯುಂಟಾಗುವುದು. ಈ ರುದ್ರನಾದರೋ ಎಲ್ಲರನ್ನೂ ಸಮವಾಗಿ ನೋಡತಕ್ಕವನು. ಸಾಂಸಾರಿಕಲೋಕಗಳನ್ನೂ, ಆ ಪದರೊಳಗಿನ ಅತಿಶಯಗಳನ್ನೂ ಆತಿಸುವವನಲ್ಲ. ಆದುದರಿಂದಲೇ ಇವನಿಗೆ ತನ್ನವರೆಂದೂ,ಇತರರೆಂದೂ ಭೇದಬುದ್ಧಿಯುಂಟಾಗಲಾರದು. ಎಲೆ ದೇವಿ! ಆ ಮಹಾನುಭಾವನು ಯಥೇಚ್ಛವಾಗಿ ಅನುಭವಿಸಿ ಕೊನೆಗೆ ನಿರ್ಲಕ್ಷ್ಯದಂತೆ ಕಾಲಿಂದೊದೆದು ನಿರಾಕರಿಸಿರುವ ಮಾಯೆಯ ಪರಿಣಾಮರೂಪವಾದ ಐಶ್ವರ್ಯವನ್ನು ಪಡೆಯುವುದಕ್ಕಾಗಿ, ಸಂಸಾರಿಗಳಾದ ನಾವೆಲ್ಲರೂ, ಅನೇಕಕರ್ಮಗಳಲ್ಲಿ ಬಿದ್ದು ಶ್ರಮಪಡುತ್ತಿರುವೆವು. ಅವನು ಕಾಲಿಂದೊದೆದು ತಳ್ಳಿದುದನ್ನು ಪಡೆಯುವುದಕ್ಕಾಗಿಯೇ ನಮ್ಮಂತವರು ಎಷ್ಟೋ

ಶ್ರಮಪಡಬೇಕಾಗಿರುವಾಗ, ಇನ್ನು ಅವನ ಮಹಿಮೆಯನ್ನು ಕೇಳಬೇಕೆ? ಎಲೆ ಪ್ರಿಯೆ! ‘‘ಶ್ಮಶಾನವಾಸಿಯಾಗಿ ಪಿಶಾಚದಂತೆ ತಿರುಗುವ ಆ ರುದ್ರನಿಗಾಗಿ ನಾವು ಶಂಕಿಸಬೇಕಾದುದೇನು?” ಎಂದು ನೀನು ಕೇಳಬಹುದು. ಅದು ಹಾಗಲ್ಲ. ಆ ರುದ್ರನೇ ಎಲ್ಲರಿಗೂ ಜ್ಞಾನಪ್ರದನೆನಿಸಿರುವನು. ಜ್ಞಾನವನ್ನು ಮರೆಸಿಡತಕ್ಕ ಅವಿದ್ಯೆಯೆಂಬ ಆವರಣವನ್ನು (ತೆರೆಯನ್ನು) ಕಿತ್ತು ಹಾಕಬೇಕೆಂಬ ಅಪೇಕ್ಷೆಯುಳ್ಳ ಪಂಡಿತರೆಲ್ಲರೂ, ನಿರ್ದುಷ್ಟವಾದ ಆತನ ಚರಿತ್ರವನ್ನೇ ವಿಶೇಷವಾಗಿ ಆದರಿಸುವರು. ಆದರೆ ‘‘ಇಷ್ಟು ಮಹಾಪ್ರಭಾವವುಳ್ಳ ಆ ರುದ್ರನು, ಶ್ಮಶಾನವಾಸಿಯಾಗಿ ಭೂತಗಣಗಳೊಡನೆ ಕಲೆತಿರುವುದೇಕೆ?” ಎಂದು ನೀನು ಕೇಳಬಹುದು. ಆ ರುದ್ರನು ತನಗಿಂತಲೂ ಉತ್ತಮರಾಗಲಿ, ತನಗೆ ಸಮಾನರಾಗಲಿ ಇಲ್ಲದಷ್ಟು ಜ್ಞಾನಾತಿಶಯವುಳ್ಳವನೆನಿಸಿದ್ದರೂ, ಕೇವಲಜ್ಞಾನಾಪೇಕ್ಷೆಯುಳ್ಳವರೆಲ್ಲರೂ ತನ್ನಂತೆಯೇ ಸರ್ವವಿಧದಲ್ಲಿಯೂ ವಿರಕ್ತರಾಗಿರಬೇಕೆಂದು ತೋರಿಸುವುದಕ್ಕಾಗಿಯೇ ಹಾಗೆ ನಟಿಸುವನು. ಮತ್ತು ಎಲೆ ಕಾಂತೆ! ಆ ರುದ್ರನಾದರೋ ಕೇವಲ ಆತ್ಮಾನಂದದಲ್ಲಿ ನಿರತನಾದವನು. ಅವನ ಉದ್ದೇಶವನ್ನೂ, ನಡತೆಯನ್ನೂ ಚೆನ್ನಾಗಿ ತಿಳಿಯಲಾರದ ದುರ್ಭಾಗ್ಯರುಮಾತ್ರ, ಅವನ ಆಕೃತಿಯನ್ನು ನೋಡಿ ಹಾಸ್ಯನಾಡಬಹುದೇ ಹೊರತು, ತತ್ತ್ವಜ್ಞರು ಅವನನ್ನು ನಿಂದಿಸಲಾರರು ಲೋಕದಲ್ಲಿ ಯಾವ ಮನುಷ್ಯರು, ನಾಯಿನರಿಗಳ ಆಹಾರಯೋಗ್ಯವಾದ ಈ ದೇಹವನ್ನೇ ಆತ್ಮವೆಂದು ಭ್ರಮಿಸಿ, ಅದನ್ನು ಅನೇಕವಸ್ತ್ರಾಭರಣಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ಕುಂಕುಮ ಕಸ್ತೂರಿ ಮೊದಲಾದ ಲೇಪನದ್ರವ್ಯಗಳಿಂದಲೂ ಅಲಂಕರಿಸುತ್ತಿರುವರೋ, ಅಂತವರು ಮಾತ್ರವೇ ಆ ಮಹಾನುಭಾವನ ವೇಷವನ್ನು ನೋಡಿ ಹಾಸ್ಯನಾಡುವರು. ಇಂತವರನ್ನು ಅಜ್ಞರೆಂದೂ, ನಿರ್ಭಾಗ್ಯರೆಂದೂ ಹೇಳುವುದರಲ್ಲಿ ಸಂದೇಹವೇನಿದೆ? ಎಲೆ ದೇವಿ! ಮುಖ್ಯವಾಗಿ ಸಂಗ್ರಹಿಸಿ ಹೇಳುವೆನು ಕೇಳು! ಚತುರ್ಮುಖನನ್ನು ಬಿಟ್ಟು, ಉಳಿದ ಸಮಸ್ತಜೀವರಾತಿಗಳೂ, ಯಾವನ ನಿಯಮಕ್ಕೊಳಪಟ್ಟು ನಡೆಯುತ್ತಿರುವುವೋ, ಈ ಜಗತ್ತಿಗೆಲ್ಲಕ್ಕೂ ಯಾವನು ಕಾರಣಭೂತನೋ, ಅಹಂಕಾರರೂಪವಾದ ಮಾಯೆಯೆಂಬುದು ಯಾವನ

ಆಜ್ಞಾಧೀನವಾಗಿ ನಡೆಯುತ್ತಿರುವುದೋ, ಅಂತಹ ಮಹಾನುಭಾವನು, ಸ್ವೇಚ್ಛೆಯಿಂದ ಅಂಗೀಕರಿಸತಕ್ಕ ಆ ಪಿಶಾಚಸ್ವಭಾವವು, ನಟನಮಾತ್ರವಲ್ಲದೆ ಬೇರೆಯಲ್ಲ. ಅಂತಹ ಮಹಾತ್ಮನು ಕಣ್ಣಿಟ್ಟು ನೋಡುತ್ತಿರುವಾಗ, ನಾವು ಈ ಸಂಧ್ಯಾಕಾಲದಲ್ಲಿ ಸಂಗಮಿಸುವುದು ಯುಕ್ತವೆ?! ಎಂದು ಹೇಳಿ ಕಶ್ಯಪನು ದಿತಿಯನ್ನು ನಿರಾಕರಿಸಿಬಿಟ್ಟನು. ಕಶ್ಯಪನು ಹೀಗೆ ಬುದ್ಧಿವಾದವನ್ನು ಹೇಳುತಿದ್ದರೂ ಕೇಳದೆ, ಕಾಮಪೀಡಿತೆಯಾದ ದಿತಿಯು, ವೇಶ್ಯಾಸ್ತ್ರೀಯಂತೆ ನಾಚಿಕೆಯನ್ನು ಬಿಟ್ಟು, ತಾನೇ ಪತಿಯಮೇಲೆ ಬಿದ್ದು ಆತನ ಬಟ್ಟೆಯನ್ನು ಹಿಡಿದೆಳೆಯುವುದಕ್ಕಾರಂಭಿಸಿದಳು. ಹೀಗೆ ಕಾಮಾತುರದಿಂದ ಮೇಲೆ ಬಿದ್ದು ಬರುತ್ತಿರುವ ದಿತಿಯನ್ನು ತಡೆಯಲಾರದೆ, ಕಶ್ಯಪನು ಭಗವಂತನಲ್ಲಿ ಅಪರಾಧಕ್ಷಾಪಣವನ್ನು ಬೇಡಿಕೊಂಡು, ಏಕಾಂತಸ್ಥಳವನ್ನು ಸೇರಿ, ಅವಳ ಕೋರಿಕೆಯನ್ನು ಈಡೇರಿಸಿದನು. ಆಮೇಲೆ ಆ ಮಹರ್ಷಿಯು ನದಿಗೆ ಹೋಗಿ ಮುಳುಗಿ, ಪ್ರಾಣಾಯಾಮವನ್ನು ಮಾಡಿ, ಮೌನವನ್ನವಲಂಬಿಸಿ ಬ್ರಹ್ಮ ಧ್ಯಾನವನ್ನು ಮಾಡುತ್ತ, ಪ್ರಣವಮಂತ್ರವನ್ನು ಜಪಿಸಲಾರಂಭಿಸಿದನು. ಇತ್ತಲಾಗಿ ದಿತಿಗೂಕೂಡ ತನ್ನ ಕಾಮಾತುರವು ತೀರಿದಮೇಲೆ, ತಾನು ನಡೆಸಿದ ಅಕೃತ್ಯಕ್ಕಾಗಿ ನಾಚಿಕೆ ಹುಟ್ಟಿತು. ಮನಸ್ಸಿನಲ್ಲಿ ಕೊರಗುತ್ತ ಪತಿಯಾದ ಕಶ್ಯಪನ ಬಳಿಗೆ ಹೋಗಿ, ನಾಚಿಕೆಯಿಂದ ತಲೆಬಗ್ಗಿಸಿಂತು "ಓ ನಾಥಾ! ನಾನು ಬಹಳ ಕೆಟ್ಟಕಾರ್ಯವನ್ನು ನಡೆಸಿದೆನು. ನಿನ್ನ ಬುದ್ಧಿವಾದವನ್ನು ಕೇಳದೆ ಅತಿಕ್ರಮಿಸಿ ಬಂದ ನನ್ನಲ್ಲಿ ಕೋಪಿಸದೆ ನೀನು ದಯಾದೃಷ್ಟಿಯಿಂದ ಅನುಗ್ರಹಿಸಬೇಕು. ಭೂತಪತಿಯಾದ ರುದ್ರನ ಕೋಪಕ್ಕೂ ನಾನು ಪಾತ್ರಳಾದೆನು. ಈ ಕೋಪದಿಂದ ಆತನು ನನ್ನ ಗರ್ಭವನ್ನು ಹಿಂಸಿಸದಿರಲಾರನು ಆತನು ನನ್ನ ಸಂತಾನವನ್ನು ಕೆಡಿಸದಂತೆ, ಈಗಲೂ ಯಾವುದಾದರೂ ಒಂದುಪಾಯವನ್ನು ನೀನೇ ಆಲೋಚಿಸಬೇಕು. ದೇವನಾಥನಾಗಿಯೂ, ಭೂತಪತಿಯಾಗಿಯೂ, ಶಾಂತಸ್ವರೂಪನಾಗಿಯೂ, ದುಷ್ಟಸಂಹಾರಕನಾಗಿಯೂ, ಅತ್ರಿತರ ಕಷ್ಟವನ್ನು ನೀಗಿಸತಕ್ಕವನಾಗಿಯೂ ಇರುವ ಆ ರುದ್ರನಲ್ಲಿ, ನಾನೂ ಅಪರಾಧಕ್ಷಾಪಣವನ್ನು ಮಾಡಿಕೊಂಡು ಪ್ರಾರ್ಥಿಸುವೆನು. "ಸತೀದೇವಿಗೆ ಪತಿಯಾದ ಆ ಶಂಕರ

ನು, ಕೇವಲಘೃಣಾಕುಕರಿಗೂ ಕಸಿಕರವನ್ನು ಹುಟ್ಟಿಸತಕ್ಕ ಅಬಲೆಯೆರಾದ ನಮ್ಮಂತವರಲ್ಲಿ ದಯೆಯಿಂದ ವರ್ತಿಸಲಿ! ಆ ಶಂಕರನು ನನಗೆ ಪ್ರಸನ್ನನಾಗಲಿ" ಎಂದು ದೈನ್ಯದಿಂದ ಪ್ರಾರ್ಥಿಸುತಿದ್ದಳು. ಹೀಗೆ ತನ್ನ ಗರ್ಭಕ್ಕೆ ಅಪಾಯವಿಲ್ಲದಿರುವುದಕ್ಕಾಗಿ ದೇವಪ್ರಾರ್ಥನೆಯನ್ನು ಮಾಡುತ್ತ, ಭೆಯೆದಿಂದ ತತ್ತಳಿಸುತ್ತಿರುವ ತನ್ನ ಭಾರ್ಯೆಯನ್ನು ನೋಡಿ ಕಶ್ಯಪನು, ತನ್ನ ಆಹ್ನಿಕ ಕೃತ್ಯಗಳು ಮುಗಿದಮೇಲೆ ಅಕೆಯನ್ನು ಕುರಿತು ''ಎಲೆ ನಿರ್ಭಾಗ್ಯಳೆ! ಈಗ ನೀನು ಪರಿತಪಿಸುವುದರಿಂದ ಪ್ರಯೋಜನವೇನು? ಮುಖ್ಯವಾಗಿ ನಿನ್ನ ಮನಸ್ಸು ಶುದ್ಧವಾದುದಲ್ಲ. ಈ ಸಂಧ್ಯಾಕಾಲದಲ್ಲಿ ಸಂಭೋಗವನ್ನು ಮಾಡಿದ ದೋಷಕ್ಕೆ ನಿನ್ನು ಪಾತ್ರಳಾದೆ! ಪತಿಯಾದ ನನ್ನ ಹಿತೋಪದೇಶವನ್ನೂ ತಿರಸ್ಕರಿಸಿದೆ! ಭೂತಪತಿಯಾದ ಈಶ್ವರನನ್ನೂ ಅಸಡ್ಡೆ ಮಾಡಿದೆ! ಈ ಕಾರಣಗಳಿಂದ ನಿನಗೆ ಯಾವುದಾನರೂ ಒಂದುವಿಧದಲ್ಲಿ ಅಶ್ರೇಯಸ್ಸುಂಟಾಗದೆ ತೀರದು ನಿನ್ನಲ್ಲಿ ಹುಟ್ಟತಕ್ಕ ಕುಮಾರರು ಲೋಕ ಕಂಟಕರಾಗಿ, ಕ್ರೂರಸ್ವಭಾವದಿಂದ ನಡೆಯುವರು. ಆ ನಿನ್ನ ದುಷ್ಪುತ್ರರು ಲೋಕದಲ್ಲಿ ಸ್ತ್ರೀಯರನ್ನೂ, ದೇವತೆಗಳನ್ನೂ, ಮನುಷ್ಯರನ್ನೂ, ಮಹರ್ಷಿಗಳನ್ನೂ, ಬಹಳವಾಗಿ ಪೀಡಿಸುವರು. ತಮ್ಮ ಕ್ರೂರಕಾರ್ಯಗಳಿಂದ ಮೂರು ಲೋಕಕ್ಕೂ ಬಾಧೆಯನ್ನುಂಟುಮಾಡಿ, ಅವೆಲ್ಲವನ್ನೂ ಆಕ್ರಮಿಸಿಕೊಳ್ಳುವರು. ಇದರಿಂದ ಮಹಾತ್ಮರ ಕೋಪಕ್ಕೆ ಪಾತ್ರರಾಗುವರು! ದುರ್ಬಲರಾದ ಮನುಷ್ಯರನ್ನು ಕೊಲ್ಲುವರು! ಪತಿವ್ರತಾಸ್ತ್ರೀಯರನ್ನು ಬಲಾತ್ಕರಿಸುವರು! ಹೀಗೆ ಸ್ವೇಚ್ಛೆಯಿಂದ ನಡೆಯುತ್ತಿರುವುದನ್ನು ನೋಡಿ, ಲೋಕರಕ್ಷಕನಾದ ಶ್ರೀಹರಿಯು ಮಹಾಪಸ್ಯಸಿಂಹಾವತಾರಗಳನ್ನು ಧರಿಸಿ, ದೇವೇಂದ್ರನು ಪರ್ವತಗಳನ್ನು ಭೇದಿಸುವಂತೆ, ಆ ನಿನ್ನ ಪುತ್ರರಿಬ್ಬರನ್ನೂ ಕೊಲ್ಲುವನು. ಇವೆಲ್ಲಕ್ಕೂ ಈ ನಿನ್ನ ಅಕೃತ್ಯವೇ ಮೂಲವೆಂದು ತಿಳಿ" ಎಂದನು. ಅದಕ್ಕಾ ದಿತಿಯು, ''ಓ ನಾಥಾ! ಚಿಂತೆಯಿಲ್ಲ! ನನ್ನ ಮಕ್ಕಳಿಗೆ ಆ ಭಗವಂತನ ಕೈಯಿಂದಲೇ ಮರಣವುಂಟಾಗುವುದೆಂಬ ವಾರ್ತೆಯು ನನ್ನ ಮನಸ್ಸಿಗೆ ಎಷ್ಟೋ ಸಂತೋಷವನ್ನುಂಟುಮಾಡಿತು. ಅದು ಹಾಗೆಯೇ ನಡೆಯುವಂತೆ ನೀನು ಅನುಗ್ರಹಿಸಬೇಕು. ಬ್ರಾಹ್ಮಣಶಾಪದಿಂದ ಸಾಯುವುದಕ್ಕಿಂ


ತಲೂ, ಭಗವಂತನ ಕೈಯಿಂದ ಸಾಯುವುದು ಎಷ್ಟೋ ಉತ್ತಮವು. ಬ್ರಾಹ್ಮಣಶಾಪದಿಂದ ಹತರಾದವರು ಕೇವಲ ಪಾಪಾತ್ಮರೆನಿಸುವರು. ಅವರ ವಿಷಯದಲ್ಲಿ ನರಕವಾಸಿಗಳಿಗಾದರೂ ದಯೆ ಹುಟ್ಟುವುದು. ಅಂತಹ ಪಾಪಿಗಳನ್ನು ಪಡೆದ ತಂದೆತಾಯಿಗಳಿಗೂಕೂಡ ನರಕಪ್ರಾಪ್ತಿಯೇ ನಿಶ್ಚಯವು" ಎಂದಳು. ಅದಕ್ಕಾ ಕಶ್ಯಪನು "ಓ ಸುಂದರೀ! ನೀನು ಮೊದಲು ವಿವೇಕವಿಲ್ಲದೆ ಪಾಪಕಾರ್ಯದಲ್ಲಿ ಪ್ರವರ್ತಿಸಿದರೂ, ಅದಕ್ಕಾಗಿ ಈಗ ಪಶ್ಚಾತ್ತಾಪ ಪಡುವುದನ್ನು ನೋಡಿ ನಾನು ಸಂತೋಷಿಸುವೆನು. ಇದಲ್ಲದೆ, ನೀನು ಆ ಶ್ರೀಹರಿಯಲ್ಲಿ ವಿಶೇಷಗೌರವವನ್ನೂ, ನನ್ನಲ್ಲಿ ಭಕ್ತಿಯನ್ನೂ ತೋರಿಸುತ್ತಿರುವುದಕ್ಕಾಗಿ ನಾನು ನಿನ್ನಲ್ಲಿ ಪ್ರಸನ್ನನಾದೆನು. ನಿನ್ನ ಮಕ್ಕಳಿಬ್ಬರೂ ಕೇವಲ ದುರಾತ್ಮರಾಗಿದ್ದರೂ, ಅವರಲ್ಲಿ ಒಬ್ಬನಾದ ಹಿರಣ್ಯಕಶಿಪುವೆಂಬವನಿಗೆ, ಬಹಳ ಗೌರವಾಸ್ಪದನಾಗಿಯೂ, ವಿಷ್ಣುಭಕ್ತಶಿರೋಮಣಿಯಾಗಿಯೂ ಇರುವ ಪುತ್ರನೊಬ್ಬನು ಹುಟ್ಟುವನು. ಲೋಕದಲ್ಲಿ ಸತ್ಪುರುಷರೆಲ್ಲರೂ ಆ ಮಹಾತ್ಮನ ಕೀರ್ತಿಯನ್ನು ಭಗವಂತನ ಕೀರ್ತಿಗೆ ಸಮಾನವಾಗಿ ಭಾವಿಸಿ ಕೊಂಡಾಡುವರು. ಕ್ಷಾರವೇ ಮೊದಲಾದ ಇತರವಸ್ತುಗಳ ಸಂಬಂಧದಿಂದ, ಬಂಗಾರವನ್ನು ಶುದ್ಧಮಾಡುವ ಹಾಗೆ, ಸಾಧುಗಳೂಕೂಡ ಅತನ ಸುಗುಣಗಳನ್ನನುಸರಿಸಿಯೇ ತಮ್ಮ ಮನಸ್ಸನ್ನು ಶುದ್ಧಪಡಿಸಿಕೊಳ್ಳಬೇಕಾಗಿರುವುದು. ಪ್ರಿಯೆ! ಯಾವನ ಅನುಗ್ರಹದಿಂದ ಈ ಸಮಸ್ತಲೋಕಗಳೂ ಪ್ರಸನ್ನವಾಗುವುವೋ, ಯಾವನಿಗೆ ಈ ಜಗತ್ತೆಲ್ಲವೂ ಶರೀರಭೂತವಾಗಿರುವುದೋ, ಅಂತಹ ಭಗವಂತನನ್ನು ನಿನ್ನ ಮುಮ್ಮಗನು ತನ್ನಭಕ್ತಿಯಿಂದ ವಶಮಾಡಬಲ್ಲನು. ಆ ಸಣ್ಣಬಾಲಕನು ಸಮಸ್ತಗುಣಗಳಿಗೂ ನೆಲೆಯಾಗುವನು. ಪರಮಭಾಗವತೋತ್ತಮನೆಂಬ ಖ್ಯಾತಿಯನ್ನು ಹೊಂದುವನು. ಮಹಾತ್ಮರಿಗೂ ಮಹಾತ್ಮನೆನಿಸಿಕೊಳ್ಳುವನು. ಅವನು ಮೇಲೆಮೇಲೆ ಹೆಚ್ಚುವ ವಿಷ್ಣುಭಕ್ತಿಯಿಂದ, ತದೇಕಧ್ಯಾನಪರನಾಗಿ, ಉಳಿದ ರಾಜ್ಯಸಂಪತ್ತುಗಳೆಲ್ಲವನ್ನೂ ತೊರೆದು ಬಿಡುವನು. ಸಂಸಾರದಲ್ಲಿ ವಿರಕ್ತಿಯನ್ನು ಹೊಂದುವನು. ಪರಮಸುತೀಲನೆನಿಸಿಕೊಳ್ಳುವನು. ಬಹಳ ದಯಾಶಾಲಿಯೆನಿಸಿಕೊಳ್ಳುವನು. ಅಜಾತಶತ್ರುವೆಂದು ಪ್ರಸಿದ್ಧಿಹೊಂದುವನು. ಚಂದ್ರನು ತನ್ನ

ತಂಪಾದ ಕಿರಣಗಳಿಂದ ಬೇಸಗೆಕಾಲದ ಸಂತಾಪವನ್ನು ನೀಗಿಸುವಂತೆ, ಆ ನಿನ್ನ ಮುಮ್ಮಗನು, ತನ್ನ ತಂದೆಯಿಂದ ಪೀಡಿತವಾದ ಲೋಕವನ್ನು ತನ್ನ ಸುಗುಣಗಳಿಂದ ಸಂತೋಷಪಡಿಸುವನು. ಮತ್ತು ಆ ನಿನ್ನ ಪುತ್ರನು, ಶ್ರಿಯಃ ಪತಿಯಾಗಿಯೂ, ದಿವ್ಯಕುಂಡಲಗಳಿಂದ ಶೋಭಿತವಾದ ಮುಖಕಮಲ ವುಳ್ಳವನಾಗಿಯೂ, ಪುಂಡರೀಕಾಕ್ಷನಾಗಿಯೂ, ಆಶ್ರಿತರ ಇಚ್ಛಾನುಸಾರ ವಾಗಿ ಬೇರೆಬೇರೆ ರೂಪಗಳನ್ನು ಕೈಕೊಂಡು ಅವನಿಗೆ ಗೋಚರಿಸತಕ್ಕವ ನಾಗಿಯೂ, ಶುದ್ಧಸ್ವರೂಪನಾಗಿಯೂ ಇರುವ ಆ ಶ್ರೀಹರಿಯನ್ನು ತನ್ನ ಹೃದಯಕಮಲದಲ್ಲಿಯೂ, ಹೊರಭಾಗದಲ್ಲಿಯೂ ಸಾಕ್ಷಾತ್ಕರಿಸಬಲ್ಲನು." ಎಂದನು. ಆಗ ದಿತಿದೇವಿಯು ತನ್ನ ಕುಮಾರರಿಗೆ ಸಾಕ್ಷಾದ್ಭಗವಂತನ ಕೈಯಿಂದಲೇ ಮರಣವೆಂಬುದನ್ನೂ, ತನ್ನ ಮುಮ್ಮಗನು ಪರಮಭಾಗವ ತೋತ್ತಮನಾಗಿ, ಹುಟ್ಟುವನೆಂಬುದನ್ನೂ ಕೇಳಿ, ಅತ್ಯಂತಸಂತೋಷಭರಿತ ಳಾಗಿದ್ದಳು. ಇಲ್ಲಿಗೆ ಹದಿನಾಲ್ಕನೆಯ ಅಧ್ಯಾಯವು.

ದಿತಿಗರ್ಭವು ಬೆಳೆಯುತ್ತಬಂದ ಹಾಗೆಲ್ಲಾ, ಅದರ ತೇಜಸ್ಸಿನಿಂದ ಲೋಕವೆಲ್ಲವೂ ಅಂಧಕಾರಮಯವಾ ದುದು. ಬ್ರಹ್ಮನು ದೇವತೆಗಳಿಗೆ ಅದರ ಕಾರಣವನ್ನು ತಿಳಿಸಿದುದು. ಜಯವಿಜಯರ ಶಾಪ ಮುಂತಾದುವು.

ವಿದುರಾ? ಹೀಗೆ ದಿತಿಯು ಸಂತೋಷದಿಂದ ಕಾಲವನ್ನು ಕಳೆಯುತ್ತ ಬರುವಾಗ, ಅವಳ ಗರ್ಭದಲ್ಲಿ ಕಶ್ಯಪನ ವೀರ್ಯವು ಕ್ರಮಕ್ರಮವಾಗಿ ಬೆಳೆ ಯುತ್ತ ಬಂದಿತು. ಅದರ ತೇಜಸ್ಸು ಇತರ ತೇಜಸ್ಸುಗಳೆಲ್ಲವನ್ನೂ ಮರೆಸಿ ತು. ಆ ಗರ್ಭವನ್ನು ದಿತಿಯು ನೂರುವರುಷಗಳವರೆಗೆ ಧರಿಸಿದ್ದಳು. ಅದರೆ ಇಷ್ಟುಕಾಲವೂ! ಅವಳು ತನ್ನ ಸವತಿಯ ಮಗನಾದ ಇಂದ್ರನಿಂದ ತನ್ನ ಗರ್ಭಕ್ಕೆ ಯಾವ ಅಪಾಯವುಂಟಾಗುವುದೋ ಎಂದು ಭಯಪಡುತಿದ್ದಳು. ಇಷ್ಟರೊಳಗಾಗಿ ಅವಳ ಗರ್ಭದ ತೇಜಸ್ಸು, ನಾನಾದಿಕ್ಕುಗಳಿಗೂ ವ್ಯಾಪಿಸಿ, ಸೂರ್ಯಚಂದ್ರರ ಕಾಂತಿಯನ್ನೇ ಅಡಗಿಸಿಬಿಟ್ಟುದರಿಂದ, ಲೋಕವೆಲ್ಲವೂ ಅಂಧಕಾರಮಯವಾಗಿ, ದೇವತೆಗಳಿಗೆ ಹಗಲಿರುಳೆಂಬ ವಿಭಾಗವೇ ತಿಳಿ

ಯದಂತಾಯಿತು. ಆಗ ದೇವತೆಗಳೆಲ್ಲರೂ ಸೇರಿ, ಚತುರ್ಮುಖನ ಬಳಿಗೆ ಹೋಗಿ ಹೀಗೆಂದು ವೊರೆಯಿಡುವರು. ''ಚತುರ್ಮುಖಾ ! ನಿನಗೆ ವಂದನವು. ನೀನು ಭೂತಭವಿಷ್ಯದ್ವರ್ತಮಾನಗಳೆಲ್ಲವನ್ನೂ ತಿಳಿದವನಾದುದರಿಂದ, ನಮಗೆ ಈಗ ಪ್ರಾಪ್ತವಾಗಿರುವ ಭಯಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. ಭಗವಂತನು ಅವೇಶಾವತಾರವೆನಿಸಿದ ನೀನು ದೇವತೆಗಳಿಗೂ ದೇವನೆನಿಸಿಕೊಂಡವನು. ಲೋಕಪಾಲಕರೆಲ್ಲರಿಗೂ ತಿರೋಮಣಿಯಂತಿರುವನು. ಹಿಂದು ಮುಂದಿನ ವಿಷಯಗಳೆಲ್ಲವನ್ನೂ ತಿಳಿದವನು. ಜಗತ್ಸೃಷ್ಟಿಗಾಗಿ ರಜೋಗುಣವನ್ನು ಹೊಂದಿದ ಭಗವಂತನೇ ನೀನಲ್ಲದೆ ಬೇರೆಯಲ್ಲ ! ಮಾಯೆಯನ್ನು ಮುಂದಿಟ್ಟುಕೊಂಡು ಸಮಸ್ತಜಗತ್ತುಗಳನ್ನೂ ಸೃಷ್ಟಿಸುವೆ ! ನೀನು ಜ್ಞಾನವನ್ನೇ ವೀರ್ಯವಾಗಿ ಉಳ್ಳವನು! ಸಮಸ್ತ ಪ್ರಪಂಚಕ್ಕೂ ಕಾರಣಭೂತನು. ಇಂತಹ ನಿನಗೆ ನಮ್ಮ ವಂದನೆಗಳನ್ನರ್ಪಿಸಿದೆವು. ಓ ಕಮಲಾಸನಾ ! ನೀನು ಸಮಸ್ತಜೀವಿಗಳನ್ನೂ ದೇವಮನುಷ್ಯಾದಿರೂಪಗಳಿಂದ ಸಿರ್ಮಿಸಿ, ಕೊನೆಗೆ ಆ ಸಮಸ್ತಚರಾಚರಪ್ರಪಂಚವನ್ನೂ ನಿನ್ನಲ್ಲಿಯೇ ಅಡಗಿಸಿಕೊಳ್ಳತಕ್ಕವನು. ಕಾರ್ಯಕಾರಣಗಳೆಂಬ ಎರಡು ರೂಪದಿಂದಲೂ ತೋರತಕ್ಕವನು. ಇಂತಹ ನಿನ್ನನ್ನು, ಯೋಗಾಭ್ಯಾಸದಿಂದ ಪರಿಪಕ್ವವಾದ ಮನಸ್ಸಿನಲ್ಲಿ ಯಾರು ಭಾವಿಸುವರೋ, ಅಂತವರು ತಮ್ಮ ಶ್ವಾಸವನ್ನೂ, ಇಂದ್ರಿಯವನ್ನೂ ನಿಗ್ರಹಿಸಿ, ನಿನ್ನ ದಯೆಗೆ ಪಾತ್ರರಾಗಿ, ಲೋಕದಲ್ಲಿ ಬೇರೊಬ್ಬರ ಪರಾಭವಕ್ಕೆ ಸಿಕ್ಕದೆ ವರ್ತಿಸಬಲ್ಲರು. ಹೇ ದೇವಾ ! ಹಗ್ಗದಿಂದ ಕಟ್ಟಲ್ಪಟ್ಟ ಪಶುಗಳಂತೆ, ಸಮಸ್ತ ಜಂತುಗಳೂ, ವೇದಾತ್ಮಕವಾದ ನಿನ್ನ ವಾಕ್ಯಗಳಿಗೆ ಬದ್ಧವಾಗಿ, ನಿನಗೆ ಪರತಂತ್ರವಾಗಿ, ನಿನ್ನ ಪೂಜೆಗಳನ್ನು ನಡೆಸುವುವು. ಅಂತಹ ಪ್ರಧಾನಪುರುಷನಾದ ನಿನಗೆ ನಮಸ್ಕಾರವು. ಓ ಪ್ರಭೂ ! ಈಗ ನಮ್ಮ ದುರವಸ್ಥೆಯನ್ನು ನೋಡು ! ಲೋಕವೆಲ್ಲವೂ ಕತ್ತಲೆಕವಿದಂತಿರುವುದು. ಅಹೋರಾತ್ರವಿಭಾಗವೇ ಕಾಣದುದರಿಂದ ನಮ್ಮ ಕರ್ಮಗಳೆಲ್ಲವೂ ಕೆಟ್ಟುಹೋಗುತ್ತಿರುವುವು. ಹೀಗೆ ವಿಪತ್ತಿನಲ್ಲಿ ಸಿಕ್ಕಿ ಬಿದ್ದಿರುವ ನಮ್ಮನ್ನು, ನಿನ್ನ ಕೃಪಾಕಟಾಕ್ಷದಿಂದ ನೋಡಿ ರಕ್ಷಿಸಬೇಕು. ಎಲೈ ಲೋಕಕರ್ತನೆ! ದಾರುವಿನಲ್ಲಿ ಅಗ್ನಿಯಂತೆ, ಕಶ್ಯಪನ ತೇಜಸ್ಸು ದಿತಿಯ



483. ಶ್ರೀವೈಕುಂಠವು.

ಗರ್ಭದಲ್ಲಿ ಗೂಢವಾಗಿ ಬೆಳೆಯುತ್ತ, ಸಮಸ್ತ ದಿಕ್ಕುಗಳನ್ನೂ ಅಂಧಕಾರಮಯವಾಗಿ ಮಾಡುತ್ತಿರುವುದು. ಈ ಕತ್ತಲೆಯಲ್ಲಿ ಕಣ್ಣು ಕಾಣದೆ ತತ್ತಳಿಸುತ್ತಿರುವ ನಮ್ಮನ್ನು ಈ ವಿಪತ್ತಿನಿಂದ ತಪ್ಪಿಸಿ ಕಾಪಾಡಬೇಕು" ಎಂದರು. ಇದನ್ನು ಕೇಳಿ ವೇದವೇದ್ಯನಾದ ಬ್ರಹ್ಮನು, ಆ ದೇವತೆಗಳನ್ನು ನೋಡಿ ನಗುತ್ತ, ಮಧುರವಾಕ್ಯದಿಂದ ಅವರನ್ನು ಸಮಾಧಾನಪಡಿಸಿ "ಎಲೈ ದೇವತೆಗಳಿರಾ! ನೀವು ಇದಕ್ಕಾಗಿ ದುಃಖಿಸಬೇಡಿರಿ! ನನ್ನ ಮಾತನ್ನು ಸಾವಧಾನವಾಗಿ ಕೇಳಿರಿ! ನಿಮಗಿಂತಲೂ ಮೊದಲು ನನ್ನಿಂದ ಹುಟ್ಟಿದ ಸನಕಾದಿಮುನಿಕುಮಾರರು ನಾಲ್ವರೂ, ಲೋಕವ್ಯಾಪಾರಗಳಲ್ಲಿ ವಿರಕ್ತರಾಗಿ, ಆಕಾಶಗಮನದಿಂದ ಹೊರಟು, ಸಮಸ್ತಲೋಕಗಳನ್ನೂ ದಾಟಿ, ಕೊನೆಗೆ ಒಂದಾನೊಂದು ದಿನದಲ್ಲಿ ಭಗವಂತನಿಗೆ ನಿವಾಸಸ್ಥಾನವಾಗಿ ಸರ್ವಲೋಕಸಮಸ್ಕೃತವಾಗಿರುವ ವಿಷ್ಣುಲೋಕಕ್ಕೆ ಹೋದರು ಆ ವೈಕುಂಠದ ಮಹಿಮೆಯಾದರೋ ಅನಿರ್ವಚನೀಯವಾದುದು. ಅಲ್ಲಿ ವಾಸ ಮಾಡತಕ್ಕವರೆಲ್ಲರೂ ವಿಷ್ಣುವಿಗೆ ಸಮಾನರೂಪವುಳ್ಳವರಾಗಿ, ನಿಷ್ಕಾಮರಾಗಿ, ಸರ್ವಕಾಲದಲ್ಲಿಯೂ ಆ ಹರಿಯನ್ನು ಪೂಜಿಸುತ್ತಿರುವರು. ಅಲ್ಲಿ ಆದಿಪುರುಷನಾಗಿಯೂ, ವೇದವೇದ್ಯನಾಗಿಯೂ, ಜಗತ್ಕಾರಣಭೂತನಾಗಿಯೂ, ಜ್ಞಾನಾದಿಷಡ್ಗುಣಪರಿಪೂರ್ಣನಾಗಿಯೂ ಇರುವ ಶ್ರೀಮನ್ನಾರಾಯಣನು, ರಜಸ್ಸು ಮೊದಲಾದ ಇತರಗುಣಗಳ ಸಂಪರ್ಕವೇ ಇಲ್ಲದೆ, ಕೇವಲ ಶುದ್ಧಸತ್ವಮಯವಾದ ದಿವ್ಯಮಂಗಳವಿಗ್ರಹದೊಡನೆ, ತನ್ನ ಭಕ್ತಜನರನ್ನು ಸಂತೋಷಪಡಿಸುತ್ತಿರುವನು. ಅಲ್ಲಿ ನಿಶ್ರೇಯಸವೆಂದು ಕರೆಯಲ್ಪಡುವ ಒಂದಾನೊಂದು ದಿವ್ಯೋದ್ಯಾನವುಂಟು. ಆ ವನದಲ್ಲಿ ಬೇರೆಬೇರೆ ಋತುಗಳಲ್ಲಿ ಹುಟ್ಟತಕ್ಕ ಪುಷ್ಪಫಲಗಳೆಲ್ಲವೂ, ಕಾಲನಿಯಮವಿಲ್ಲದೆ ಯಾವಾಗಲೂ ಸಮೃದ್ಧವಾಗಿರುವುವು. ಕೇಳಿದ ಕೋರಿಕೆಗಳೆಲ್ಲವನ್ನೂ ಈಡೇರಿಸತಕ್ಕ ಕಲ್ಪವೃಕ್ಷಗಳು ಅಲ್ಲಿ ಎಷ್ಟೋ ತುಂಬಿರುವುವು. ಮೋಕ್ಷಸುಖವೇ ಆ ಉದ್ಯಾನರೂಪದಿಂದ ಕಾಣುವಂತೆ ತೋರುವುದು. ಅಲ್ಲಿನವರೆಲ್ಲರೂ ತಮ್ಮ ತಮ್ಮ ಪತ್ನಿಯರೊಡನೆ ವಿಮಾನಾರೂಢರಾಗಿ ಆ ವನವನ್ನು ಸುತ್ತಿಸುತ್ತಿ ಬರುವಾಗ, ಅಲ್ಲಿ ಅವಿಚ್ಛಿನ್ನವಾಗಿ ಮಕರಂದವನ್ನು ಸುರಿಸುತ್ತಿರುವ ಮಾಧವೀಪುಷ್ಪ

ಗಳಮೇಲೆ ಬೀಸಿಬರುವ ಸುಗಂಧವಾಯುವು, ಎಂತವರ ಮನಸ್ಸನ್ನಾದರೂ ಕ್ಷಣಮಾತ್ರದಲ್ಲಿ ಆಕರ್ಷಿಸತಕ್ಕವುಗಳಾಗಿದ್ದರೂ, ಆ ವೈಮಾನಿಕದಂಪತಿಗಳು, ಆಸುಗಂಧವಾಯುವನ್ನೂ ಲಕ್ಷಿಸದೆ, ಹರಿಕೀರ್ತನಾನಂದವನ್ನೇ ಮೇಲಾಗಿ ಭಾವಿಸಿ, ಅದರಲ್ಲಿಯೇ ಮನಸ್ಸಿಟ್ಟು ವಿಹರಿಸುತ್ತಿರುವರು. ಹೀಗೆ ಅಲ್ಲಿ ಭೋಗವಸ್ತುಗಳೂ, ಭೋಗಸಾಧನಗಳೂ, (ಇಂದ್ರಿಯಗಳೂ) ಭೋಗಸ್ಥಾನಗಳೂ ಅನುಕೂಲವಾಗಿದ್ದರೂ, ಆ ಲೋಕದಲ್ಲಿರುವವರು ಅವೊಂದಕ್ಕೂ ಲಕ್ಷ್ಯಕೊಡದೆ, ಭಗವದ್ಭಾಗವತಾನುಭವವೊಂದರಲ್ಲಿಯೇ ಆಸೆಯುಳ್ಳವರಾಗಿರುವರು. ಇದಕ್ಕಿಂತಲೂ ಮತ್ತೊಂದಾಶ್ಚರ್ಯವೇನೆಂದರೆ! ಅಲ್ಲಿನ ತಿರ್ಯಗ್ಜಂತುಗಳೂ, ಸ್ಥಾವರವರ್ಗಗಳೂಕೂಡ ಭಗವಂತನಲ್ಲಿಯೇ ತಮಗಿರುವ ಅತ್ಯಾಸಕ್ತಿಯನ್ನು ತೋರಿಸುತ್ತಿರುವುವು. ಅಲ್ಲಿನ ವನಗಳಲ್ಲಿ, ಪಾರಿವಾಳ, ಕೋಗಿಲೆ, ಸಾರಸ, ಚಕ್ರವಾಕ, ಚಾತಕ, ಹಂಸ, ಗಿಳಿ, ತಿತ್ತಿರಿ, ನವಿಲು, ಮುಂತಾದ ಪಕ್ಷಿಜಾತಿಗಳೆಲ್ಲವೂ ಅತ್ಯುತ್ಸಾಹದಿಂದ ಕೋಲಾಹಲಧ್ವನಿಯನ್ನು ಮಾಡಿ ಕೂಗುತ್ತಿರುವಸಮಯದಲ್ಲಿ, ಆ ಸುತ್ತಿನಲ್ಲಿ ಬೇರೆ ಯಾವಕಡೆಯಿಂದಲಾದರೂ ಒಂದು ಭ್ರಮರಝಂಕಾರಧ್ವನಿಯು ಕಿವಿಗೆ ಬಿದ್ದೊಡನೆ, ಆ ಪಕ್ಷಿಗಳೆಲ್ಲವೂ ಸ್ತಬ್ಧವಾಗಿ "ಆಹೋ! ಆ ಭೃಂಗವು ಹಂಕಥೆಗಳನ್ನು ಗಾನ ಮಾಡುವಂತಿದೆ! ಇನ್ನು ನಾವು ಸಾವಧಾನವಾಗಿ ಕೇಳಬೇಕು!" ಎಂಬ ಅಭಿಪ್ರಾಯದಿಂದ, ತಮ್ಮಕಲಕಲವನ್ನು ನಿಲ್ಲಿಸಿ, ಭಕ್ತಿಯಿಂದ ಕಿವಿಗೊಟ್ಟು ಕೇಳುತ್ತಿರುವುವು. ಮತ್ತು ಆ ವನದಲ್ಲಿ, ಪಾರಿಜಾತ, ಮಲ್ಲಿಗೆ, ಗೊರಂಟೆ, ಸೈದಿಲೆ, ಸಂಪಗೆ, ತಾವರೆ, ನಾಗಕೇಸರ, ಹೊನ್ನೆ, ಪಗಡೆ, ಮಂದಾರ, ಮುಂತಾದ ಹೂಗಿಡಗಳು, ತಮ್ಮ ಪುಷ್ಪಗಳ ಸುವಾಸನೆಯನ್ನು ಸರ್ವತೋಮುಖವಾಗಿ ಹರಡುತ್ತಿದ್ದರೂ, ಕೇವಲ ತುಲಸಿಯೊಂದನ್ನೇ ಭಗವಂತನು ತನಗೆ ಮುಖ್ಯಾಭರಣವಾಗಿ ಅಂಗೀಕರಿಸುವುದನ್ನು ನೋಡಿ, ಅಂತಹ ಭಾಗ್ಯವು ತಮಗಿಲ್ಲದುದಕ್ಕಾಗಿ ಆ ತುಲಸಿಯ ತಪಸ್ಸನ್ನು ಕೊಂಡಾಡುತ್ತಿರುವುವು. ಹೀಗೆ ಅಲ್ಲಿನ ತಿರ್ಯಗ್ಜಂತುಗಳೂ, ಸ್ಥಾವರಗಳೂಕೂಡ, ಶ್ರೀಹರಿಯ ಸೇವೆಯೊಂದೇ ತಮ್ಮ ಜನ್ಮಕ್ಕೆ ಸಾಫಲ್ಯವೆಂದು ಭಾವಿಸಿರುವುವು. ಮತ್ತು! ಆ ವೈಕುಂಠವು ಸುವರ್ಣಮಯವಾಗಿಯೂ, ವೈಡೂರ್ಯಮರಕತ

ಮಣಿಗಳಿಂದ ಕೆತ್ತಲ್ಪಟ್ಟುದಾಗಿಯೂ, ಕೇವಲ ಭಗವದ್ಭಕ್ತಿಯಿಂದಲೇ ಲಭಿಸತಕ್ಕುದಾಗಿಯೂ ಇರುವ ದಿವ್ಯವಿಮಾನಗಳಿಂದ ಎಡೆಬಿಡದೆ ಶೋಭಿಸುತ್ತಿರುವುದು. ಅಲ್ಲಿನ ವಿಷ್ಣುಭಕ್ತರು,ತಮ್ಮ ತಮ್ಮ ಪ್ರಿಯಪತ್ನಿಯರ ಸಹವಾಸದಲ್ಲಿದ್ದರೂಕೂಡ ಕೇವಲಭಗವದ್ಧ್ಯಾನಪರರಾಗಿರುವರೇ ಹೊರತು, ಅವರಿಗೆ ತಮ್ಮಪತ್ನಿಯರ ವಿಸ್ತಾರವಾದ ಕಟಿಪ್ರದೇಶವಾಗಲಿ, ಮುಗುಳ್ನಗೆಯಿಂದ ಕೂಡಿದ ಸುಂದರವದನವಾಗಲಿ ಮನಸ್ಸಿನಲ್ಲಿ ಕಾಮವನ್ನು ಹುಟ್ಟಿಸಲಾರದು. ಬ್ರಹ್ಮನೇ ಮೊದಲಾಗಿ ಸಮಸ್ತಜಗತ್ತೂ ಯಾವಳ ಅನುಗ್ರಹಕ್ಕಾಗಿ ಇದಿರುನೋಡುತ್ತಿರುವುದೋ, ಅಂತಹ ಲಕ್ಷ್ಮೀದೇವಿಯು ನಿರ್ದುಷ್ಟವಾದ ನಿಜರೂಪದೊಡನೆ, ಚಿನ್ನದ ರೇಕುಗಳಿಂದ ಚಿತ್ರಿಸಲ್ಪಟ್ಟ ಸ್ಫಟಿಕದ ಗೋಡೆಗಳುಳ್ಳ ಆ ನಿವಾಸಗೃಹದಲ್ಲಿ, ತನ್ನ ಕಾಲಂದುಗೆಗಳ ಘಲ್ಘಲಧ್ವನಿಯೊಡನೆ ಸಂಚರಿಸುತ್ತ, ಆ ಭಗವನ್ಮಂದಿರವನ್ನು ತನ್ನ ಕೈಯಿಂದಲೇ ಮಕರಂದರಸದಿಂದ ಸಾರಿಸುವಂತೆ ಕಮಲವನ್ನು ಲೀಲೆಯಿಂದಾಡಿಸುತ್ತಿರುವಳು. ಮತ್ತು ಹವಳಮಯವಾದ ತೀರಗಳಿಂದಲೂ, ಅಮೃತಸಮಾನವಾದ ತಿಳಿನೀರಿನಿಂದಲೂ ಕೂಡಿದ ಅಲ್ಲಿನ ಬಾವಿಗಳಲ್ಲಿಯೂ, ಕ್ರೀಡಾವನಗಳಲ್ಲಿಯೂ, ಆ ಮಹಾಲಕ್ಷ್ಮಿಯು, ತನ್ನ ಪರಿಚಾರಿಕೆಯರೊಡನೆ ವಿಹರಿಸುತ್ತ, ತನ್ನ ಕೈಯಿಂದಲೇ ತುಲಸೀದಳಗಳನ್ನೆತ್ತಿ ಭಗವಂತನನ್ನು ಪೂಜಿಸುತ್ತಿರುವಳು. ಆ ಬಾವಿಯ ಪಡಪದಲ್ಲಿ ನಿಂತು. ಸ್ವಚ್ಛವಾದ ಆ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ, ಅಂದವಾದ ಮುಂಗುರುಳುಗಳಿಂದಲೂ, ಉನ್ನತವಾದ ನಾಸಾಗ್ರದಿಂದಲೂ ಶೋಭಿಸುತ್ತಿರುವ ಆ ತನ್ನ ಪ್ರತಿಬಿಂಬವನ್ನೇ ಭಗವಂತನ ಮುಖವೆಂದು ಭ್ರಮಿಸಿ,ತನ್ನ ಮುಖವನ್ನು ಮುದ್ದಿಡುವುದಕ್ಕಾಗಿ ಭಗವಂತನು ಮುಖವನ್ನು ನೀಡುತ್ತಿರುವನೆಂದು ತನ್ನಲ್ಲಿ ತಾನೇ ನಾಚಿಕೆಪಡುತ್ತಿರುವಳು. ಮತ್ತು ಆ ವೈಕುಂಠನಗರವು ಕೇವಲ ಪುಣ್ಯಾತ್ಮರಿಗೆ ಸುಲಭವಲ್ಲದೆ ಪಾಪಿಗಳಿಗೆ ಲಭಿಸಲಾರದು. ಹರಿಕಥೆಗಳನ್ನು ಅನಾದರಿಸಿ ಕುತ್ಸಿತಕಥೆಗಳನ್ನು ಕೇಳುತ್ತಿರುವವರು ಆ ಸ್ಥಾನವನ್ನು ನೋಡಲಾರರು. ಅಂತಹ ಕುತ್ಸಿತಕಥೆಗಳು ನಿರ್ಭಾಗ್ಯರಾದ ಮನುಷ್ಯರ ಕಿವಿಗೆ ಬಿದ್ದೊಡನೆ, ಅವರ ಪೂರ್ವಪುಣ್ಯಗಳೆಲ್ಲವನ್ನೂ ಅಪಹರಿಸಿ, ಅಂ

ತವರನ್ನು ನಿರಾಶ್ರಯವಾದ ನರಕಗಳಲ್ಲಿ ಬಿಳಿಸುವುವು. ಕೆಲವು ನೀಚಾತ್ಮರು, ತಮ್ಮ ಅದೃಷ್ಟವಶದಿಂದ ಮನುಷ್ಯಜನ್ಮವನ್ನು ಹೊಂದಿರುವಾಗಲೂ, ನಿವೃತ್ತಿಧರ್ಮಸಹಿತವಾದ ತತ್ವಜ್ಞಾನವನ್ನು ಸಂಪಾದಿಸದೆ, ಮಾಯೆಯಿಂದ ಮೋಹಿತರಾಗಿ, ಭಕ್ತಿಹೀನರಾಗಿ, ಭಗವದಾರಾಧನದಿಂದ ತಾವು ಪಡೆದ ಮಾನವಜನ್ಮವನ್ನು ಸಾರ್ಥಕಗೊಳಿಸದೆ ಕೆಟ್ಟುಹೋಗುವರು. ಅಂತಹ ಅವಿವೇಕಿಗಳನ್ನು ನೋಡಿ ನನ್ನ ಮನಸ್ಸು ಕನಿಕರಗೊಳ್ಳುವುದು. ಅಂತವರು ಆ ದಿವ್ಯಲೋಕವನ್ನು ಸ್ವಪ್ನದಲ್ಲಿಯೂ ಕಾಣಲಾರರು. ಹೀಗಿಲ್ಲದೆ, ಯಾವ ಮಹಾತ್ಮರು, ತಮ್ಮ ಹೃದಯಕಮಲದಲ್ಲಿ ಆ ಶ್ರೀಹರಿಯ ಪಾದಕಮಲವನ್ನು ನೆಲೆಗೊಳಿಸಿ, ಶಮದಮಾದಿಗುಣಗಳುಳ್ಳವರಾಗಿ, ಯಾವಾಗಲೂ ಆ ಶ್ರೀಹರಿಯ ಗುಣಾನುವಾದವನ್ನು ಮಾಡುತ್ತಿರುವರೋ, ಯಾರು ಭಕ್ತಿಪಾರವಶ್ಯದಿಂದ ಆನಂದಬಾಷ್ಪವನ್ನು ಸುರಿಸುತ್ತಿರುವರೋ ಯಾರು ಆ ಭಗವಂತನ ಗುಣಶ್ರವಣಮಾಡುವಾಗ ಅದರಿಂದುಂಟಾದ ಆನಂದದಿಂದ ಪುಳಕಿತವಾದ ಮೈಯುಳ್ಳವರಾಗುವರೋ, ಅಂತವರಿಗೆ ಆ ವೈಕುಂಠಲೋಕವು ಬಹಳಸುಲಭವಾಗಿ ಗೋಚರಿಸುವುದು. ಎಲ್ಲೆ ದೇವತೆಗಳಿರಾ! ಹೀಗೆ ಲೋಕೈಕಸುಂದರವಾಗಿಯೂ, ಮಹಾದ್ಭುತವಾಗಿಯೂ, ದೇವಶ್ರೇಷ್ಠರ ನಿಮಾನಕಾಂತಿಯಿಂದ ಶೋಭಿತವಾಗಿಯೂ ಇರುವ ವೈಕುಂಠನಗರವನ್ನು, ಸನಕಾದಿಮುನಿಕುಮಾರರು ತಮ್ಮ ಯೋಗಬಲದಿಂದ ಪ್ರವೇಶಿಸಿದರು. ಅಲ್ಲಿನ ಒಂದೊಂದು ಸನ್ನಿವೇಶವೂ ಅತ್ಯಾನಂದಕರವಾಗಿದ್ದರೂ, ಆ ಸನಕಾದಿಗಳು ಭಗವಂತನನ್ನು ದರ್ಶನಮಾಡಬೇಕೆಂಬ ಒಂದೇ ಆತುರದಿಂದ ಅಲ್ಲಿನ ಅದ್ಭುತಗಳೊಂದನ್ನೂ ಲಕ್ಷಿಸದೆ,ಆ ವೈಕುಂಠದ ಆರುಪ್ರಾಕಾರದ್ವಾರಗಳನ್ನೂ ದಾಟಿ, ಏಳನೆಯತೊಟ್ಟಿಯ ಬಾಗಿಲಿಗೆ ಬಂದಾಗ, ಅಲ್ಲಿ ಸಮಾನವಯಸ್ಸುಳ್ಳ ದೇವತೆಗಳಿಬ್ಬರು,ಅತ್ಯುತ್ತಮವಾದ ಕಿರೀಟಕೇಯೂರಾದ್ಯಾಭರಣಗಳಿಂದ ಶೋಭಿತರಾಗಿ, ಕೈಯಲ್ಲಿ ಗದೆಯನ್ನು ಹಿಡಿದು ನಿಂತಿರುವುದನ್ನು ಕಂಡರು. ಆ ದ್ವಾರಪಾಲಕರಿಗಾದರೋ ಚತುರ್ಭುಜಗಳು ! ಕಂಠದಲ್ಲಿ ಭ್ರಮರಪಙ್ತಿಗಳಿಂದ ಶೋಭಿತವಾದ ತುಲಸೀಮಾಲಿಕೆ! ಕೋಪವನ್ನು ಸೂಚಿಸುವಂತೆ ಸ್ವಲ್ಪಕೆಂಪಾದ ಕಣ್ಣು ! ಮುಖದಲ್ಲಿ ಕುಟಿಲವಾದ ಮತ್ತು

ಭಯಂಕರವಾದ ಹುಬ್ಬುಗಂಟು! ಗಂಭೀರವಾದ ಉಸಿರಾಟದಿಂದ ಅಗಾಗ ಅರಳುತ್ತಿರುವ ಮೂಗಿನ ರಂಧ್ರಗಳು ! ಸನಕಾದಿಮುಗಳು ಈ ದ್ವಾರಪಾಲಕರನ್ನು ನೋಡಿಯೊಕೂಡ, ಅವರನ್ನು ಮಾತಾಡಿಸದೆ, ಅವರ ಭಯಂಕರಸ್ವರೂಪಕ್ಕೆ ಸ್ವಲ್ಪಮಾತ್ರವೂ ಹೆದರದೆ, ಭಗವದ್ದರ್ಶನವೊಂದರಲ್ಲಿಯೇ ಆತುರವುಳ್ಳವರಾಗಿ, ಹಿಂದಿನ ಆರು ಗೋಪುರದ್ವಾರಗಳನ್ನು ದಾಟಿ ಬಂದಂತೆ, ಈ ಏಳನೆಯ ತೊಟ್ಟಿಯ ಬಾಗಿಲನ್ನೂ ನಿರ್ಭಯವಾಗಿ ಪ್ರವೇಶಿಸುವುದಕ್ಕೆ ಹೋದರು. ವಿದುರಾ! ದ್ವಾರಪಾಲಕರ ಅನುಮತಿಯಿಲ್ಲದೆ ಒಳಗೆ ಪ್ರವೇಶಿಸುವುದು ತಪ್ಪಲ್ಲವೆ?' ಎಂದು ನೀನು ಶಂಕಿಸಬಹುದು. ಹಾಗಲ್ಲ ! ಆ ಮಹರ್ಷಿಗಳು ಎಲ್ಲವನ್ನೂ ಸಮದೃಷ್ಟಿಯಿಂದ ನೋಡತಕ್ಕವರು ! ಎಲ್ಲರನ್ನೂ ತಮ್ಮಂತೆಯೇ ಭಾವಿಸಿ ನಿಶ್ಶಂಕವಾಗಿ, ತಿರುಗುತಿದ್ದವರು. ಹೀಗೆ ನಿರಂಕುಶವಾಗಿ ನಡೆಯತಕ್ಕವರಿಗೆ ಇತರರಲ್ಲಿ ದೈನ್ಯವನ್ನು ತೋರಿಸಿ ಪ್ರಾರ್ಥಿಸಬೇಕಾದ ಅವಶ್ಯವೇನು ? ವಯೋವೃದ್ಧರಾಗಿದ್ದರೂ ಐದುವರುಷದ ಸಣ್ಣಮಕ್ಕಳಂತೆ ಕಾಣುತ್ತ, ಪರಮಾತ್ಮನ ಸ್ವರೂಪವನ್ನು ತಿಳಿದವರಾಗಿದ್ದ ಆ ಮಹರ್ಷಿಗಳು,ನೇಮೇಲೆ ಒಟ್ಟೆಯಿಲ್ಲದೆ, ಹೀಗೆ ಅತಿಕ್ರಮಿಸಿ ಬರುವುದನ್ನು ನೋಡಿದಾಗ ಆ ದ್ವಾರಪಾಲಕರಿಗೆ ಕೋಪವು ಹುಟ್ಟಿತು. ಆ ದ್ವಾರಪಾಲಕರಾದರೋ ಈ ಮಹರ್ಷಿಗಳ ಪ್ರಭಾವವನ್ನು ತಿಳಿದವರಲ್ಲ. ಮತ್ತು ಅವರು, ಆಶ್ರಿತವತ್ಸಲನಾದ ಭಗವಂತನ ಸ್ವಭಾವಕ್ಕೆ ಕೇವಲ ವಿರುದ್ಧಸ್ವಭಾವವುಳ್ಳವರು. ಇದರಿಂದ ಆ ದ್ವಾರಪಾಲಕರಿಬ್ಬರೂ ಈ ಮಹರ್ಷಿಗಳನ್ನು ಹಾಸ್ಯಮಾಡುತ್ತ,ತಾವು ಕೈಯಲ್ಲಿ ಹಿಡಿದಿದ್ದ ದಂಡದಿಂದಲೂ, ಭಯಂಕರವಾದ ನೇತ್ರಸಂಜ್ಞೆಯಿಂದಲೂ, ಕಠಿನವಾಕ್ಯದಿಂದಲೂ ಅವರನ್ನು ಅಲ್ಲಿಯೇ ತಡೆದು ನಿಲ್ಲಿಸಿಬಿಟ್ಟರು ಅನೇಕದೇವತೆಗಳ ಮುಂದೆ ತಮಗೆ ಈ ಅವಮಾನವುಂಟಾದುದನ್ನೂ, ಭಗವಂತನನ್ನು ದರ್ಶನಮಾಡಬೇಕೆಂಬ ತಮ್ಮ ಉದ್ದೇಶಕ್ಕೆ ಭಂಗವುಂಟಾದುದನ್ನೂ ನೋಡಿ, ಆ ಮಹರ್ಷಿಗಳು,ಆಗಲೇ ಸ್ವಲ್ಪಸ್ವಲ್ಪವಾಗಿ ಅಂಕುರಿಸುತ್ತಿರುವ ಕೋಪದಿಂದ ಕೆರಳಿದ ಕಣ್ಣುಳ್ಳವರಾಗಿ, ಆ ದ್ವಾರಪಾಲಕರನ್ನು ಕುರಿತು ಹೀಗೆಂದು ಹೇಳುವರು. ‘‘ಆಹಾ! ಏನಿದು ? ನಾವು ಶ್ರೀಮನ್ನಾರಾಯಣನ ಪಾದಪದ್ಮ

ಸಂದರ್ಶನಕ್ಕಾಗಿ ಭಕ್ತಿಯಿಂದ ಬರುತ್ತಿರುವಾಗ, ನಮ್ಮನ್ನು ತಡೆಯುವ ಈ ದುರಾತ್ಮರಾರು ? ಅನೇಕ ಪುಣ್ಯಕಾರ್ಯಗಳನ್ನು ನಡೆಸಿ, ನಿರತಿಶಯವಾದ ಹರಿಭಕ್ತಿಯನ್ನು ಸಂಪಾದಿಸಿ, ಅದರಿಂದ ಭಗವದನುಗ್ರಹಕ್ಕೆ ಪಾತ್ರರಾದವರಲ್ಲವೇ ಈ ಲೋಕದಲ್ಲಿರುವುದಕ್ಕೆ ಯೋಗ್ಯರು ! ಸಾಮಾನ್ಯವಾಗಿ ಇಲ್ಲಿನವರೆಲ್ಲರೂ ಆ ಭಗವಂತನಿಗೆ ಸಮಾನಗುಣವುಳ್ಳವರಾಗಿಯೇ ಇರಬೇಕಲ್ಲವೆ? ಭಕ್ತವತ್ಸಲನಾದ ಭಗವಂತನು ಇಂತಹ ವಿಷಮಸ್ವಭಾವಕ್ಕೆ ಎಂದಿಗೂ ಸಮ್ಮತಿಸುವವನಲ್ಲ. ಹೀಗಿರುವಾಗ ಕೇವಲದುಸ್ಸ್ವಭಾವವುಳ್ಳ ನಿಮಗೆ ಈ ಪುಣ್ಯಸ್ಥಾನವು ಎಂದಿಗೂ ವಾಸಾರ್ಹವಲ್ಲ. ಇಲ್ಲಿನವರೆಲ್ಲರೂ ಕೇವಲ ಶಾಂತಸ್ವಭಾವವುಳ್ಳವರು. ಇಲ್ಲಿ ಕಲಹವೆಂಬ ಪ್ರಸಕ್ತಿಯೇ ಇರದು. ಯಾರ ಬಾಯಿಂದಲೂ ಕ್ರೂರವಾಕ್ಯವೆಂಬುದು ಹೊರಡದು! ಇಂತಹ ನಿರ್ದುಷ್ಟವಾದ ಈ ಲೋಕದಲ್ಲಿಯೂ, ತೀಲಸ್ವಭಾವಗಳ ವಿಷಯದಲ್ಲಿ ಸಂದೇಹಿಸಬೇಕಾದವನೊಬ್ಬನುಂಟೆ? ಎಲೆ ದುರಾತ್ಮರೆ! ನಿಮ್ಮಂತೆ ಕುಟಿಲಸ್ವಭಾವವುಳ್ಳಬೇರೆ ಕೆಲವರು ಈ ಲೋಕದಲ್ಲಿದ್ದರಲ್ಲವೇ ಆಗ ' ಭಗವತ್ಪಾಲಯಕ್ಕೆ ಯಾರನ್ನು ಬಿಡಬಹುದು! ಯಾರನ್ನು ಬಿಡಬಾರದು" ಎಂಬ ಸಂದೇಹವುಂಟಾಗಬಹುದು. ಯಾರಲ್ಲಿಯೂ, ಯಾವದೋಷವೂ ಇಲ್ಲದ ಈ ಪುಣ್ಯಸ್ಥಳದಲ್ಲಿಯೂ, ನಿಮಗೆ ನಮ್ಮಂತಹ ಬೇರೊಬ್ಬರಲ್ಲಿ ಸಂದೇಹವೆ? ಈ ಲೋಕದವರೆಲ್ಲರೂ ಶುದ್ಧಸ್ವಭಾವವುಳ್ಳವರಾಗಿದ್ದರೂ,ಭಗವಂತನಿಗೆ ಇಷ್ಟರಾದವರನ್ನು ಮಾತ್ರಬಿಡುವುದಾಗಿ ಹೇಳುವಿರೇನು? ಸಮಸ್ತ ಜೀವರಾಶಿಯನ್ನೂ ಸಮಬುದ್ಧಿಯಿಂದ ತನ್ನ ಹೊಟ್ಟೆಯಲ್ಲಿ ಧರಿಸಿರತಕ್ಕ ಭಗವಂತನಿಗೆ, ಒಬ್ಬನು ಇಷ್ಟನೆಂದೂ, ಮತ್ತೊಬ್ಬನು ಅನಿಷ್ಟನೆಂದೂ ತಾರತಮ್ಯವುಂಟೆ ? ಎಲೈ ಮೂಢಾತ್ಮರೆ ! ಭಗವಂತನನ್ನು ಬಿಟ್ಟ ವಸ್ತುವು ಲೋಕದಲ್ಲಿ ಯಾವುದುಂಟು ? ಘಟಪಟಾದಿಗಳಲ್ಲಿರುವ ಆಕಾಶವನ್ನು ಮಹಾಕಾಶದಲ್ಲಿ ಅಪೃಥಕ್ಸಿದ್ಧವಾಗಿ (ಏಕಾಕಾರವಾಗಿ) ಅನುಸಂಧಾನಮಾಡುವಂತೆ, ಯೋಗೀಶ್ವರರೆಲ್ಲರೂ ಪರಮಾತ್ಮನಲ್ಲಿ ಜೀವಾತ್ಮಗಳನ್ನು ಅಪೃಥಕ್ಸಿದ್ಧವಾಗಿಯೇ ನೋಡುತ್ತಿರುವರಲ್ಲವೆ ? ಪರಮಾತ್ಮನಿಗೆ ಶರೀರದಂತಿರುವ ಜೀವನು ಅವನನ್ನಗಲಿರುವುದೆಂದರೇನು ? ಆ ಜೀವಪರಮಾತ್ಮರಿಗೆ ಕೆಲವು



488. ಜಯವಿಜಯರೆಂಬ ದ್ವಾರಪಾಲಕರು ವೈಕುಂಠದ್ವಾರದಲ್ಲಿ ಸನಕಾದಿಮುನಿ
ಕುಮಾರರನ್ನು ತಡೆದುದು.

ವಿಷಯಗಳಲ್ಲಿ ಅವಾಂತರಭೇದವಿದ್ದರೂ ಜ್ಞಾನೈಕಾಕಾರತ್ವದ ಮೂಲಕವಾಗಿ ಭೇದವೇನೂ ಇರದು. ಹೀಗೆ ಸರ್ವಾತ್ಮಕನಾಗಿರುವ ಭಗವಂತನಿಗೆ "ತನ್ನವರು, ಹೆರವರು" ಎಂಬ ಪಕ್ಷಪಾತವೆಲ್ಲಿಯದು? ರಾಗದ್ವೇಷಗಳೇ ಮೊದಲಾದ ದೋಷವೊಂದಕ್ಕೂ ಅವಕಾಶವಿಲ್ಲದ ಈ ಪುಣ್ಯಲೋಕದಲ್ಲಿಯೂ! ನಿಮಗೆ ಬೇರೊಬ್ಬರನ್ನು ತಡೆಯಬೇಕೆಂಬ ಬುದ್ಧಿಯು ಹೇಗೆ ಹುಟ್ಟಿತು? ಇಲ್ಲಿಗೆ ತಕ್ಕಂತೆ ವೈಷ್ಣವವೇಷದಿಂದಿರುವ ನಿಮಗೆ ಈ ವೈಷಮ್ಯ ಬುದ್ಧಿಯೆಲ್ಲಿಯದು? ನೀವು ಬೇರೊಬ್ಬರನ್ನು ತಡೆಯುವುದೆಂದರೇನು? ಎಲೈ ದ್ವಾರಪಾಲಕರೆ! ನೀವು ಆ ಶ್ರೀಮಹಾವಿಷ್ಣುವಿನ ಸೇವಕರಾಗಿದ್ದರೂಕೂಡ, ಹೀಗೆ ಮೂಢಬುದ್ಧಿಯುಳ್ಳವರಾಗಿ ಈ ಕುಚೇಷ್ಟೆಯನ್ನು ನಡೆಸಿದಿರಲ್ಲವೆ? ನಾವೂ ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಆಲೋಚಿಸದೆ ಬಿಡಲಾರೆವು! ಇನ್ನು ನೀವು ಈ ಲೋಕದಲ್ಲಿರಬಾರದು! ಕೇವಲ ಪಾಪ ಪ್ರಚುರವಾಗಿಯೂ, ಈ ವಿಧವಾದ ವೈಷಮ್ಯಬುದ್ಧಿಗೆ ಮುಖ್ಯಸ್ಥಾನವಾಗಿಯೂ, ಕಾಮ, ಕ್ರೋಧ, ಲೋಭಾದಿದುರ್ಗುಣಗಳಿಂದ ತುಂಬಿಹುದಾಗಿಯೂ ಇರುವ ಭೂಲೋಕಕ್ಕೆ ಹೋಗಿರಿ! ನಿಮ್ಮಂತಹ ನಿಷಮಬುದ್ಧಿಗಳಿಗೆ ಆಸ್ಥಳವೇ ಯೋಗ್ಯವೇಹೊರತು ಇದು ಯೋಗ್ಯವಾದ ಸ್ಥಳವಲ್ಲ" ಎಂದರು. ಎಷ್ಟೇ ಶಸ್ತ್ರಸಮೂಹಗಳಿಂದಲೂ ತಡೆಯುವುದಕ್ಕಾಗದ ಬ್ರಹ್ಮದಂಡದಂತೆ, ಭಯಂಕರವಾದ ಈ ಶಾಪವಾಕ್ಯವು ಆ ಮಹರ್ಷಿಗಳ ಬಾಯಿಂದ ಹೊರಟಕೂಡಲೆ, ದ್ವಾರಪಾಲಕರಿಬ್ಬರೂ ಬಹಳ ಭಯಪೀಡಿತರಾಗಿ, ತಟ್ಟನೆ ಆ ಮುನಿಗಳ ಕಾಲಮೇಲೆ ಬಿದ್ದು ದೈನ್ಯದಿಂದ ಪ್ರಾರ್ಥಿಸುವರು. "ಎಲೈ ಮುನೀಂದ್ರರೆ! ನಿಮ್ಮಲ್ಲಿ ನಾವು ಮಹಾಪರಾಧವನ್ನು ನಡೆಸಿಬಿಟ್ಟೆವು! ನಮ್ಮ ತಪ್ಪಿತಕ್ಕಾಗಿ ನಾವು ತಿಕ್ಷೆಯನ್ನು ಅನುಭವಿಸಿಯೇ ತೀರಬೇಕು ಇದುವರೆಗೆ ಭಗವಂತನ ಪಾದದರ್ಶನಕ್ಕಾಗಿ ಬಂದ ಎಷ್ಟೋ ದೇವತೆಗಳನ್ನೂ, ಈಗ ನಿಮ್ಮನ್ನೂ ತಿರಸ್ಕರಿಸಿದ ನಮ್ಮ ಪಾಪಕ್ಕೆ ಈಗ ನಿಮ್ಮಿಂದಾದ ತಿಕ್ಷೆಯೇ ಪ್ರಾಯಶ್ಚಿತ್ತರೂಪವಾಗಿ, ನಮ್ಮ ಪಾಪವನ್ನು ಪರಿಹರಿಸಲಿ! ಆದರೆ ನಮ್ಮದೊಂದು ಪ್ರಾರ್ಥನೆಯುಂಟು. ನಿಮ್ಮ ಶಾಪದಿಂದ ನಾವು ಇನ್ನು ಮುಂದೆ ನೀಚಯೋನಿಗಳಲ್ಲಿ ಹುಟ್ಟಿದರೂ,

ಆ ನೀಚಜನ್ಮದಲ್ಲಿಯೂ ನಮಗೆ ಭಗವನ್ನಾಮಸ್ಮರಣವನ್ನು ತಪ್ಪಿಸತಕ್ಕ ಬುದ್ಧಿಮೋಹವುಮಾತ್ರ ಉಂಟಾಗದಂತೆ ಅನುಗ್ರಹಿಸಬೇಕು. ಈ ನಮ್ಮ ಕೋರಿಕೆಯು ಈಡೇರುವಂತೆ ನಮ್ಮಲ್ಲಿ ಲೇಶಮಾತ್ರ ಕೃಪೆಯನ್ನು ತೋರಿಸಬೇಕು." ಎಂದು ದೈನ್ಯದಿಂದ ಪ್ರಾರ್ಥಿಸುತಿದ್ದರು. ಇಷ್ಟರಲ್ಲಿ ಲಕ್ಷ್ಮೀಸಹಿತನಾಗಿ ಅಂತಃಪುರದಲ್ಲಿದ್ದ ಭಗವಂತನಿಗೆ ಈ ವೃತ್ತಾಂತವು ತಿಳಿಯಿತು. ಒಡನೆಯೇ ಭಕ್ತವತ್ಸಲನಾದ ಆ ಭಗವಂತನು, ತನ್ನ ಕಡೆಯ ಕಿಂಕರರಿಂದ ಸನಕಾದಿಮಹರ್ಷಿಗಳಿಗೆ ತಿರಸ್ಕಾರವುಂಟಾದುದಕ್ಕಾಗಿ ಪರಿತಪಿಸುತ್ತ, ಅವರನ್ನು ತಾನೇ ಬಂದು ಸಮಾಧಾನಪಡಿಸಬೇಕೆಂದೆಣಿಸಿ, ಮಹಾಲಕ್ಷ್ಮೀಸಮೇತನಾಗಿ ಅಲ್ಲಿಂದ ಹೊರಟನು. ಗರುತ್ಮಂತನ ಹೆಗಲ ಮೇಲೆ ತನ್ನ ಎಡದ ಕೈಯನ್ನೂರಿ, ಬಲಗೈಯಲ್ಲಿ ನಾಳಸಹಿತವಾದ ಒಂದು ಕಮಲವನ್ನು ಲೀಲೆಯಿಂದ ತಿರುಗಿಸುತ್ತ, ಕಾಲುನಡೆಯಿಂದಲೇ ಹೊರಟು, ಸನಕಾದಿಗಳು ನಿಂತಿದ್ದ ದ್ವಾರಪ್ರದೇಶದಕಡೆಗೆ ಬಂದನು. ಯಾವ ಪಾದಾರವಿಂದಗಳನ್ನು ಮಹಾಯೋಗಿಗಳೂ ಪ್ರಯತ್ನಪೂರ್ವಕವಾಗಿ ಹುಡುಕುತ್ತಿರುವರೋ, ಆ ಪಾದಗಳಿಂದಲೇ ಭಗವಂತನು ತನಗಿದಿರಾಗಿ ನಡೆದು ಬರುತ್ತಿರುವುದನ್ನು ಕಂಡು, ಸನಕಾದಿಮಹರ್ಷಿಗಳೆಲ್ಲರೂ, ತಮ್ಮ ತಪಃಫಲವೇ ಅಲ್ಲಿಗೆ ಮೂರ್ತೀಭವಿಸಿ ಬಂದಂತೆ ತಿಳಿದು, ಪರಮಾನಂದಭರಿತರಾಗಿ ನೋಡುತಿದ್ದರು. ಸುತ್ತಲೂ ಸೇವಾನಿರತರಾದ ಅನೇಕಭಕ್ತವರ್ಗದಿಂದ ಪರಿವೃತನಾಗಿ ಬರುತಿವ್ದ ಆ ಭಗವಂತನ ದಿವ್ಯವೈಭವವನ್ನು ಕೇಳಬೇಕೆ? ಆತನ ಉಭಯಪಾರ್ಶ್ವಗಳಲ್ಲಿಯೂ ಹಂಸವಿಧುನದಂತೆ ಬಿಳೀಚಾಮರಗಳು ತೂಗಾಡುತ್ತಿರುವುವು! ಕಿರೀಟಾಗ್ರದಲ್ಲಿ ಚಂದ್ರಬಿಂಬಕ್ಕೆಣೆಯಾದ ಶ್ವೇತಚ್ಛತ್ರವು ಕಂಗೊಳಿಸುತ್ತಿರುವುದು! ಈ ಶ್ವೇತಚ್ಛತ್ರದ ಸುತ್ತಿನ ಜಾಲರಿಗಳು, ಚಾಮರದ ಗಾಳಿಯಿಂದ ಅಲುಗಾಡುತಿದ್ದಹಾಗೆಲ್ಲಾ, ಅವುಗಳಿಂದ ಅಮೃತಬಿಂದುಗಳು ಭಗವಂತನ ಮೈಮೇಲೆ ಮೆಲ್ಲಮೆಲ್ಲಗೆ ತೊಟ್ಟಿಕ್ಕುತ್ತಿರುವುವು! ಮತ್ತು ಆ ಭಗವಂತನ ಮುಖದಲ್ಲಿ ಭಕ್ತಾನುಗ್ರಹಸೂಚಕವಾದ ಮುಗುಳ್ನಗೆ! ಸರ್ವಜನಸ್ಪೃಹಣೀಯವಾದ ದೇಹಕಾಂತಿ! ಲೋಕಮನೋಹರವಾದ ಪ್ರಸನ್ನದೃಷ್ಟಿ! ವಿಶಾಲವಾಗಿ ಉಬ್ಬಿದ ಅತನ ವಕ್ಷ

ಸ್ಥಲದಲ್ಲಿ ವೈಕುಂಠಲೋಕವೆಲ್ಲವನ್ನೂ ಬೆಳಗುವಂತೆ ಥಳಥಳಿಸುವ ಲಕ್ಷ್ಮೀದೇವಿಯ ದೇಹಕಾಂತಿ! ಆತನ ಕಟಿಪ್ರದೇಶದಲ್ಲಿ ಪೀತಾಂಬರವೆಂಬ ಪಟ್ಟೆಮಡಿ! ಅದರಮೇಲೆ ಸುತ್ತಿ ಕಟ್ಟಿದ ಸುವರ್ಣಮಯವಾದ ಡಾಬು! ಕಂಠದಲ್ಲಿ ಭ್ರಮರ ಝಂಕಾರಗಳಿಂದ ಕೂಡಿದ ವನಮಾಲಿಕೆ! ಹಸ್ತಾಗ್ರದಲ್ಲಿ ಕಾಂತಿಯಿಂದ ಝಗಝಗಿಸುವ ರತ್ನಾಂಗದಗಳು! ಕಪೋಲದಲ್ಲಿ ಮಿಂಚಿನ ಕಾಂತಿಯನ್ನು ತಿರಸ್ಕರಿಸುವಂತಿರುವ ಮಕರಕುಂಡಲಗಳು! ಉಬ್ಬಿ ಎಸಳಾದ ಮೂಗು! ವಿಶಾಲವಾದ ಹಣೆ! ತಲೆಯಮೇಲೆ ಜಾಜ್ವಲ್ಯಮಾನವಾಗಿ ಹೊಳೆಯುವ ರತ್ನಕಿರೀಟದ ಕಾಂತಿ! ಚತುರ್ಭುಜಗಳನಡುವೆ ತೂಗಾಡುತ್ತಿರುವ ಅತ್ಯುತ್ತಮವಾದ ಮುತ್ತಿನ ಸರಗಳು! ಕಂಠದಲ್ಲಿ ಕೌಸ್ತುಭಮಣಿ! ತ್ರಿಲೋಕಸುಂದರಿಯೆನಿಸಿದ ಲಕ್ಷ್ಮೀದೇವಿಗೂ ಆಶ್ಚರ್ಯವನ್ನುಂಟುಮಾಡತಕ್ಕ ಸೌಂದರ್ಯಸಮೃದ್ಧಿ! ಭಕ್ತರ ಮನಸ್ಸಿನಲ್ಲಿ ಅನವರತವೂ ಭಾವಿಸಲ್ಪಡತಕ್ಕ ನಿರತಿಶಯವಾದ ದೇಹಕಾಂತಿ! ಇಂತಹ ಮಹಾದ್ಭುತ ಸೌಂದರ್ಯವಿಶಿಷ್ಟನಾದ ಭಗವಂತನನ್ನು ನೋಡಿದೊಡನೆ, ಸನಕಾದಿಮಹರ್ಷಿಗಳೆಲ್ಲರೂ, ಆ ಶ್ರೀಮನ್ನಾರಾಯಣನ ದಿವ್ಯಸೌಂದರ್ಯವನ್ನು ಎಷ್ಟೆಷ್ಟು ನೋಡಿದರೂ ಪರಿಣಿಯಲಾರದೆ, ಬ್ರಹ್ಮಾದಿದೇವತೆಗಳಿಗೂ, ಸಮಸ್ತಯೋಗೀಶ್ವರರಿಗೂ ವಂದನೀಯವಾದ ಅತನ ಪಾದಾರವಿಂದಗಳಿಗೆ ತಲೆಯನ್ನು ಸೋಕಿಸಿ ಸಾಷ್ಟಾಂಗಪ್ರಣಾಮವನ್ನು ಮಾಡಿದರು. ಆ ಮಹರ್ಷಿಗಳು ಯಾವವಿಷಯದಲ್ಲಿಯೂ ಕದಲದ ದೃಢಮನಸ್ಸುಳ್ಳವರಾಗಿದ್ದರೂ, ಆ ಭಗವಂತನು ಮೆಲ್ಲಮೆಲ್ಲಗೆ ಹಜ್ಜೆಯನ್ನಿಟ್ಟು ಮುಂದೆ ಬರುವಾಗ, ಕಮಲದಳಗಳಂತಿರುವ ಅವನ ಕಾಲ್ಬೆರಳುಗಳಿಂದ ಚಿಮ್ಮಿ ಬಂದ ಧೂಳಿಯು, ತುಲಸೀಗಂಧಮಿಶ್ರವಾಗಿ ವಾಯುವಿನಲ್ಲಿ ಕಲೆತು, ಈ ಮಹರ್ಷಿಗಳ ಘ್ರಾಣೇಂದ್ರಿಯದಲ್ಲಿ ಪ್ರವೇಶಿಸಿದೊಡನೆ, ಇವರಿಗೆ ಮೈಮರೆಯುವಂತೆ ಮಾಡಿತು. ಆ ಮಹರ್ಷಿಗಳು ಮೊದಲು, ನೀಲೋತ್ಪಲದಂತಿರುವ ಆ ಭಗವಂತನ ಮಂದಹಾಸಸುಂದರವಾದ ಮುಖಬಿಂಬವನ್ನು ನೋಡಿ, ಅದರ ಸೌಂದರ್ಯಾನುಭವದಿಂದ ಆನಂದಿತರಾಗಿ, ಬಾರಿಬಾರಿಗೂ ಆಪಾದಚೂಡಪರ್ಯಂತವಾಗಿ ಆ ಭಗವಂತನ ದಿವ್ಯಸೌಂದರ್ಯಾಮೃತವನ್ನು ಪಾನಮಾಡುತಿದ್ದರು. ಆ

ಸೌಂದರ್ಯವನ್ನು ಮನಸ್ಸಿನಲ್ಲಿಯೇ ಅನವರತವೂ ಧ್ಯಾನಿಸುತ್ತಿದ್ದರು. ವಿದುರಾ! ಬೇರೊಬ್ಬರಿಗೆ ದುರ್ಲಭವಾದ ಸಹಜಗುಣಗಳಿಂದಲೂ, ಅಣಿಮಾದ್ಯಷ್ಟೈಶ್ವರ್ಯಗಳಿಂದಲೂ ಶೋಭಿತನಾದ ಆ ಭಗವಂತನು, ಕರ್ಮಜ್ಞಾನಭಕ್ತಿಗಳೆಂಬ ಯೋಗಮಾರ್ಗಗಳಿಂದ ಆತ್ಮಸ್ವರೂಪವನ್ನು ಚಿಂತಿಸತಕ್ಕವರೆಲ್ಲರಿಗೂ, ಯಾವುದೊಂದೇ ಧ್ಯಾನವಿಷಯವಾಗಿರುವುದೋ, ನೋಡುತಿದ್ದಹಾಗೆಲ್ಲಾ ಯಾವುದು ನೇತ್ರಾನಂದಕರವಾಗಿ ಮೇಲೆಮೇಲೆ ಆತ್ಯಾದರವನ್ನು ಹೆಚ್ಚಿಸುತ್ತಿರುವುದೋ, ಅಂತಹ ಪುರುಷಾಕೃತಿಯಿಂದ ಬಂದು ದನ್ನು ಕಂಡೊಡನೆ, ಈ ಮುನಿಕುಮಾರರು ನಾಲ್ವರೂ ಬದ್ಧಾಂಜಲಿಗಳಾಗಿ ಹೀಗೆಂದು ಸ್ತುತಿಸಿದರು. "ಹೇ ದೇವಾ! ನೀನು ಸರ್ವಸಮವಾಗಿ ಎಲ್ಲರ ಹೃದಯದಲ್ಲಿ ಸೇರಿದ್ದರೂ, ಯೋಗಬಲವಿಲ್ಲದವರಿಗೆ ಗೋಚರಿಸದ ಮಹಾಮಹಿಮೆಯುಳ್ಳವನು! ಇಂತಹ ನೀನು ಈಗ ನಮ್ಮ ಕಣ್ಣುಗಳಿಗೆ ಗೋಚರಿಸಿದುದು ನಮ್ಮ ಮಹಾಭಾಗ್ಯವಲ್ಲದೆ ಬೇರೆಯಲ್ಲ. ಆದಿಯಲ್ಲಿ ನಿನ್ನಿಂದ ಜನಿಸಿದ ನಮ್ಮ ಜನಕನಾದ ಚತುರ್ಮುಖನಿಂದ, ನಾವು ನಿನ್ನ ಮಹಾಮಹಿಮೆಯನ್ನು ಕವಿಯಿಂದ ಕೇಳಿದ್ದೆವು. ನಿನ್ನ ರೂಪವು ನಮ್ಮ ಹೃದಯಗುಹೆಯಲ್ಲಿ ಪ್ರವೇಶಿಸಿ, ಇದುವರೆಗೂ ಕೇವಲ ಧ್ಯಾನವಿಷಯವಾಗಿದ್ದಿತು ಆ ರೂಪವು ಈಗ ನಮ್ಮ ಕಣ್ಣುಗಳಿಗೆ ಸಾಕ್ಷಾತ್ತಾಗಿಯೇ ಗೋಚರಿಸಿತು! ಈಗಲೀಗ ನಮ್ಮ ಜನ್ಮವು ಕೃತಾರ್ಥವಾಯಿತು. ಎಲೈ ಪರಮಪುರುಷನೆ! ಕೇವಲಸತ್ವಮಯವಾದ ದೇಹದಿಂದ, ನಮ್ಮಂತಹ ಭಕ್ತರಿಗೆ ಕ್ಷಣಕ್ಷಣಕ್ಕೂ ಭಕ್ತಿರೂಪವಾದ ಅನುರಾಗವನ್ನು ಹೆಚ್ಚಿಸುತ್ತಿರುವ ಈ ನಿನ್ನ ರೂಪವೇ, ಹಿಂದೆ ನಮ್ಮ ಜನಕನು ನಮಗೆ ಉಪದೇಶಿಸಿದ ಆತ್ಮಸ್ವರೂಪವೆಂಬುದನ್ನು ಈಗ ನಾವು ಚೆನ್ನಾಗಿ ತಿಳಿದೆವು. ಸಂಸಾರದ ವಿಷಯದಲ್ಲಿ ಜಿಹಾಸೆಹೊಂದಿ, ಅದರಿಂದ ಹುಟ್ಟಿದ ಭಕ್ತಿಯೋಗದಿಂದ ವಿಷಯಾಭಿಲಾಷೆಗಳನ್ನೂ ಬಿಟ್ಟು, ವಿರಕ್ತರಾಗಿಯೂ, ಅಹಂಕಾರರಹಿತರಾಗಿಯೂ ಇರುವ ಪುರಾತನಮಹರ್ಷಿಗಳು ಮನಸ್ಸಿನಲ್ಲಿ ಯಾವುದನ್ನು ಆತ್ಮತತ್ವವೆಂದು ಭಾವಿಸುವರೋ, ಅದೇ ಈ ನಿನ್ನ ರೂಪವೆಂಬುದನ್ನೂ ತಿಳಿದೆವು. ಹೇ ದೇವಾ! ನಿನ್ನ ಪಾದಾಶ್ರಯದಿಂದ ಮೇಲ್ಮೈಯನ್ನು ಪಡೆದು, ನಿನ್ನ ಕಥಾಮೃತದ ರುಚಿಯ

ನ್ನು ತಿಳಿದು, ಅದರಿಂದ ತಮ್ಮನ್ನು ಕೃತಾರ್ಥರೆಂದು ಭಾವಿಸಿದ ಭಕ್ತೋತ್ತಮರು ಯಾರುಂಟೋ, ಅವರು ನಿನ್ನ ಪೂರ್ಣಾನುಗ್ರಹದಿಂದ ಪಡೆಯಬೇಕಾದ ಮೋಕ್ಷಸುಖವನ್ನೂ ಕೂಡ ಲಕ್ಷೀಕರಿಸಲಾರರು. ಹೀಗಿರುವಾಗ ನಿನ್ನ ಹುಬ್ಬಿನಾಟಗಳಿಂದಲೇ ಸ್ಥಿತಿನಾಶಗಳನ್ನು ಹೊಂದತಕ್ಕುದಾಗಿ ಭಯಾಸ್ಪದವಾದ ಬೇರೆ ಸ್ವರ್ಗಾದಿಲೋಕಗಳನ್ನು ಆಪೇಕ್ಷಿಸಲಾರರೆಂಬುದನ್ನು ಹೇಳಬೇಕೆ? ಅಂತಹ ನಿನ್ನ ರೂಪವೇ ನಮ್ಮ ಕಣ್ಣುಮುಂಬೆ ಗೋಚರಿಸಿದ ಮೇಲೆ ನಮ್ಮ ಭಾಗ್ಯಕ್ಕೆಣೆಯುಂಟೆ ? ಹೇದೇವಾ ! ನಮ್ಮ ಮನಸ್ಸು ನಿನ್ನ ಪಾದಾರವಿಂದದಲ್ಲಿ ಭ್ರಮರದಂತೆ ಯಾವಾಗಲೂ ವಿಹರಿಸುತ್ತಿದ್ದರೆ, ನಮ್ಮ ಮಾತುಗಳು ಅನವರತವೂ ನಿನ್ನ ಪುಣ್ಯಚರಿತ್ರಗಳನ್ನು ಕೀರ್ತಿಸುತಿದ್ದರೆ, ನಮ್ಮ ಕರ್ಣರಂಧ್ರಗಳು ಯಾವಾಗಲೂ ನಿನ್ನ ಗುಣಶ್ರವಣದಿಂದ ಸಂತೋಷಹೊಂದುತಿದ್ದರೆ, ನಮ್ಮ ಪೂರ್ವಾರ್ಜಿತಪಾಪಗಳೂಕೂಡ ನಮಗೆ ಆಧೋಗತಿಯನ್ನುಂಟುಮಾಡಲಾರವು. ಇದು ನಿಶ್ಚಯವು ! ಎಲ್ಲೈ ದೇವದೇವನೆ ! ವೇದಗಳಿಗೂ ಅಗೋಚರವಾದ ಈ ನಿನ್ನ ದಿವ್ಯರೂಪವು ನಮ್ಮ ಕಣ್ಣಿಗೆ ಗೋಚರಿಸಿದುದರಿಂದ, ನಮ್ಮ, ಕಣ್ಣುಗಳು ಪೂರ್ಣಸುಖವನ್ನು ಹೊಂದಿದುವು. ಕುತ್ಸಿತಯೋಗಿಗಳಿಗೆ ಗೋಚರನಾಗದ ನಿನಗೆ, ಇದೋ ನಾವು ಅನೇಕ ವಂದನೆಗಳನ್ನರ್ಪಿಸುವೆವು" ಎಂದು ದಂಡಪ್ರಣಾಮವನ್ನು ಮಾಡಿದರು. ಇಲ್ಲಿಗೆ ಹದಿನೈದನೆಯ ಅಧ್ಯಾಯವು.

ಭಗವಂತನು ಸನಕಾದಿಗಳನ್ನು ಸಮಾಧಾನಪಡಿಸಿದುದು.

ಯೋಗನಿಷ್ಠರಾದ ಮಹರ್ಷಿಗಳು ಹೀಗೆ ಸ್ತುತಿಸುತ್ತಿರುವುದನ್ನು ಕೇಳಿ ಭಗವಂತನು ಪ್ರಸನ್ನನಾಗಿ ಅವರನ್ನು ಪ್ರತಿನಮಸ್ಕಾರದಿಂದ ಮನ್ನಿಸಿ ಹೀಗೆಂದು ಹೇಳುವನು. " ಎಲ್ಲೈ ಮುನೀಂದ್ರರೆ ! ಇವರಿಬ್ಬರೂ ನನ್ನ ದ್ವಾರಪಾಲಕರು! ಇವರಿಗೆ ಜಯವಿಜಯರೆಂದು ಹೆಸರು! ಇವರು ನನ್ನನ್ನೂ ಲಕ್ಷ್ಯಮಾಡದೆ ನಿಮ್ಮ ಮಾರ್ಗವನ್ನು ತಡೆದು, ನಿಮ್ಮಲ್ಲಿ ಅತಿಕ್ರಮಿಸಿ ನಡೆದುದೇನೋ ಬಹಳ ತಪ್ಪು ! ನೀವು ಇದಕ್ಕಾಗಿ ಕೋಪಿಸಿ, ಇವರಿಗೆ ಶಿಕ್ಷೆ

ಯನ್ನು ವಿಧಿಸಿದುದು ನನಗೂ ಸಮ್ಮತವೇ! ಮಹಾತ್ಮರಾದ ನಿಮ್ಮಲ್ಲಿ ಅತಿಕ್ರಮಿಸಿ ನಡೆದುದಕ್ಕೆ ಇಂತಹ ಶಿಕ್ಷೆಯು ಯುಕ್ತವಾಗಿಯೂ ಇರುವುದು. ಆದರೆ ಎಲೈ ಮಹಾತ್ಮರೆ! ಇದೋ! ಅವರ ಅಪರಾಧಕ್ಕಾಗಿ ನಾನೇ ನಿಮ್ಮಲ್ಲಿ ಕ್ಷಮೆಯನ್ನು ಬೇಡುವೆನು. ನಿಮ್ಮಂತಹ ಬ್ರಾಹ್ಮಣರೇ ನನಗೆ ಪರದೈವವು' ನನ್ನ ಕಡೆಯವರು ನಿಮ್ಮನ್ನು ಅವಮಾನಪಡಿಸಿದುದು. ನಾನೇ ನಿಮ್ಮಲ್ಲಿ ತಪ್ಪಿನಡೆದಂತಾಗುವುದೇಹೊರತು ಬೇರೆಯಲ್ಲ! ಭೃತ್ಯರ ಅಪರಾಧವು ಯಜಮಾನನಿಗೇ ಸೇರುವುದು! ಆದುದರಿಂದ ನಿಮ್ಮಲ್ಲಿ ಅಪರಾಧಿಯಾದ ನನ್ನನ್ನು ಮನ್ನಿಸಬೇಕು! ಲೋಕದಲ್ಲಿ ರಾಜಭಟರು ತಪ್ಪಿತವನ್ನು ನಡೆಸಿದರೂ, ಆದರಿಂದುಂಟಾಗತಕ್ಕ ಅಪರಾಧಕ್ಕೆ ರಾಜನೇ ಭಾಗಿಯಾಗುವನು. ದೇಹದೊಳಗಿನ ರೋಗವು ಮೇಲಿನ ಚರ್ಮದ ಬಣ್ಣವನ್ನು ಕೆಡಿಸುವಂತೆ,ಭಟರ ದೋಷವು ರಾಜನ ಕೀರ್ತಿಗೇ ಕಳಂಕವನ್ನುಂಟುಮಾಡುವುದು. ಎಲೈ ಮಹರ್ಷಿಗಳೇ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು ? ಲೋಕದಲ್ಲಿ ನನಗಿರತಕ್ಕ ಗೌರವವೂಕೂಡ ನಿಮ್ಮಂತಹ ಮಹಾತ್ಮರ ಸೇವಾಫಲವೆಂದೇ ಎಣಿಸುವೆನು! ಚಂಡಾಲಪರ್ಯಂತವಾಗಿ ಸಮಸ್ತಜೀವರಾತಿಗಳೂಕೂಡ ನನ್ನ ಕೀರ್ತಿಯೆನ್ನು ಕೇಳಿದನೂತ್ರಕ್ಕೆ ಪವಿತ್ರವಾಗುವುವೆಂದು ಜನರೆಲ್ಲರೂ ಹೇಳುವರು. ನಿಮ್ಮ ಅನುಗ್ರಹಬಲದಿಂದಲೇ ನಾನು ಇಂತಹ ಕೀರ್ತಿಗೆ ಪಾತ್ರನಾದೆನು. ನಿಮಗೆ ಪ್ರತಿಕೂಲವಾಗಿ ನಡೆದ ನನ್ನತೋಳನ್ನಾದರೂ ನಾನು ಕತ್ತರಿಸಿಡುವುದಕ್ಕೆ ಹಿಂಜರಿಯುವವನಲ್ಲ. ಹೀಗಿರುವಾಗ ದುರಾತ್ಮರಾದ ಈ ನನ್ನ ಭಟರು, ನಿಮ್ಮ ವಿಷಯದಲ್ಲಿ ತಪ್ಪಿನಡೆದ ಮೇಲೆ ಅವರನ್ನು ಶಿಕ್ಷಿಸುವವಿಷಯದಲ್ಲಿ ನಾನು ಸಮ್ಮತಿಸುವೆನೆ? ಎಲೈ ಮಹಾತ್ಮರೆ! ಇನ್ನು ಹೆಚ್ಚುಮಾತಿನಿಂದೇನು ? ನಿಮ್ಮಂತಹ ಮಹಾನುಭಾವರನ್ನು ಅನವರತವೂ ನಾನು ಸೇವಿಸುತ್ತಿರುವುದರಿಂದಲೇ ನನ್ನ ಪಾದರಜಸ್ಸು ಲೋಕಪವಿತ್ರವೆನಿಸಿಕೊಂಡಿತು! ನಿಮ್ಮಂತಹ ಬ್ರಾಹ್ಮಣರ ಸೇವೆಯಿಂದಲ್ಲವೇ ನನ್ನ ಚರಿತ್ರವು ಲೋಕಪಾವನವೆನಿಸಿರುವುದು! ಬ್ರಾಹ್ಮಾದಿದೇವತೆಗಳೂಕೂಡ ಯಾವಳ ಲೇಶಮಾತ್ರಕೃಪೆಗಾಗಿ ಅನೇಕವ್ರತಗಳನ್ನಾಚರಿಸುತ್ತಿರುವರೋ ಅಂತಹ ಲಕ್ಷ್ಮೀದೇವಿಯು, ನಾನಾಗಿ ಉಪೇ

ಕ್ಷಿಸಿದರೂ ನನ್ನನ್ನು ಬಿಡದೆ, ನನಗೆ ನಿತ್ಯಾನಪಾಯಿನಿಯಾಗಿ ನನ್ನನ್ನನುಸರಿಸುತ್ತಿರುವುದೂ ನಿಮ್ಮಂತಹ ಮಹಾತ್ಮರ ಸೇವಾಪ್ರಭಾವದಿಂದಲ್ಲದೆ ಬೇರೆಯೆಲ್ಲ! ಮತ್ತು ಯಾಗಮಾಡತಕ್ಕವರು ಯಜ್ಞದಲ್ಲಿ ಘೃತಮಿಶ್ರವಾದ ಹವಿಸ್ಸನ್ನು ಅಗ್ನಿಮುಖವಾಗಿ ನನಗೆ ಕೊಡುತಿದ್ದರೂ, ಅದರಿಂದ ನನಗುಂಟಾಗುವ ತೃಪ್ತಿಯು, ತಮ್ಮತಮ್ಮ ವರ್ಣಾಶ್ರಮಧರ್ಮಗಳೆಲ್ಲವನ್ನೂ ನನ್ನ ಪ್ರೀತ್ಯರ್ಥವಾಗಿಯೇ ನಡೆಸತಕ್ಕ ನಿಮ್ಮಂತಹ ಬ್ರಾಹ್ಮಣರಿಗೆ ಭೋಜನವನ್ನಿಕ್ಕಿ, ಅವರು ಒಂದೊಂದು ಕಬಳವನ್ನು ಭುಜಿಸುವಾಗ ನನಗುಂಟಾಗತಕ್ಕ ತೃಪ್ತಿಗೆ ಕಲಾಮಾತ್ರವೂ ಸಾಟಿಯಾಗಲಾರದು! ಮತ್ತು ಲೋಕದ ಜನರು ನನ್ನನ್ನು ಯಾವವಿಷಯದಲ್ಲಿಯೂ ತಡೆಯಿಲ್ಲದ ಆಶ್ಚರ್ಯಶಕ್ತಿಯುಳ್ಳವನೆಂದೂ, ಚಂದ್ರಚೂಡನಾದ ಶಿವನಿಗೂಕೂಡ ತನ್ನ ಪಾದತೀರ್ಥದ ಸಂಬಂಧದಿಂದ ಲೋಕಪೂಜ್ಯತೆಯನ್ನುಂಟುಮಾಡಿದವನೆಂದೂ ಕೊಂಡಾಡುತ್ತಿರುವುವು. ಈ ವಿಧವಾಗಿ ಜನಗಳಿಂದ ಗೌರವಿಸಲ್ಪಡುತ್ತಿರುವ ನಾನೇ ಮಹಾತ್ಮರಾದ ನಿಮ್ಮಂತಹ ಬ್ರಾಹ್ಮಣರ ಪಾದಧೂಳಿಯನ್ನು ಶಿರಸ್ಸಿನಲ್ಲಿ ಧರಿಸತಕ್ಕವನಾಗಿರುವೆನು. ಇನ್ನು ಇತರಜನರು ನಿಮ್ಮನ್ನು ಗೌರವಿಸಬೇಕೆಂಬುದನ್ನು ಹೇಳಬೇಕಾದುದೇನು? ಲೋಕದಲ್ಲಿ ಯಾವ ಮೂಢಾತ್ಮರು, ನನಗೆ ಶರೀರದಂತಿರುವ ಗೋಬ್ರಾಹ್ಮಣರನ್ನಾಗಲಿ, ಅನಾಥವೆನಿಸಿಕೊಂಡ ಇತರಭೂತಗಳನ್ನಾಗಲಿ ನನ್ನಂತೆಯೇ ಭಾವಿಸದೆ, ಭೇದಬುದ್ಧಿಯಿಟ್ಟು, ಸರ್ಪದಂತೆ ಕ್ರೂರದೃಷ್ಟಿಯಿಂದ ನೋಡುವರೋ, ಅಂತಹಪಾಪಿಗಳು ಸತ್ತು ನರಕದಲ್ಲಿ ಬಿದ್ದೊಡನೆ, ಅಲ್ಲಿ ನನ್ನ ಕಡೆಯ ದಂಡಾಧಿಕಾರಿಯಾದ ಯಮನ ಪ್ರೇರಣೆಯಿಂದ ಉಕ್ಕಿನ ಮೂತಿಯುಳ್ಳ ರಣಹದ್ದುಗಳು, ಅವರ ಕಣ್ಣುಗಳನ್ನು ಕುಕ್ಕಿ ತಿನ್ನದೆ ಬಿಡಲಾರವು. ಹೀಗಿಲ್ಲದೆ ಅಪಕಾರಮಾಡಿದ ಬ್ರಾಹ್ಮಣರನ್ನೂ ಯಾರು ಪ್ರಸನ್ನದೃಷ್ಟಿಯಿಂದ ನೋಡಿ, ಪ್ರೇಮವಾಕ್ಯದಿಂದ ಮನ್ನಿಸಿ, ತಂದೆಯು ಮಕ್ಕಳನ್ನು ಕಾಣುವಂತೆ ಪ್ರೀತಿಯಿಂದ ಕಾಣುವರೋ, ಅಂತಹ ಸಾಧುಗಳು ನನ್ನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವರು. ಅಂತವರನ್ನು ನಾನು ನನಗೆ ಪರಮೋಪಕಾರಿಗಳನ್ನಾಗಿ ಭಾವಿಸುವೆನು. ಈ ದ್ವಾರಪಾಲಕರು, ಈ ನನ್ನ ಸ್ವಭಾವವನ್ನು ತಿಳಿಯದೆ, ಅವಿವೇಕ

ದಿಂದ ನಿಮ್ಮಲ್ಲಿ ತಪ್ಪಿನಡೆದರು.ನೀವು ಅದಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಿದುದ
ಕ್ಕಾಗಿ ನಾನು ಸಂತೋಷಿಸುವೆನೇಹೊರತು ಅಸಮಾಧಾನಪಡುವವನಲ್ಲ.ಅಥ
ರೆ ಇವರು ನನ್ನ ಕಿಂಕರರಾದುದಕ್ಕಾಗಿ, ಇವರಲ್ಲಿ ನಾನು ಸ್ವಲ್ಪಮಾತ್ರವಾ
ದರೂ ಕನಿಕರವನ್ನು ತೋರಿಸಬೇಕಾಗಿರುವುದು. ಇದಕ್ಕಾಗಿ ನಾನು ನಿಮ್ಮ
ಲ್ಲಿಯೇ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಿಮ್ಮ ಆಜ್ಞೆಯಂತೆ ಇವರು
ಹೀನಜಾತಿಯಲ್ಲಿ ಹುಟ್ಟಿದರೂ, ಶೀಘ್ರದಲ್ಲಿಯೇ ನನ್ನ ಸ್ಥಾನಕ್ಕೆ ಹಿಂತಿ
ರುಗಿ ಬಂದು ಸೇರುವಂತೆ ನೀವು ಅನುಗ್ರಹಿಸಬೇಕು. ಇದೇ ಅವರ ವಿಷಯ
ದಲ್ಲಿ ನಾನು ಮಾಡಬಹುದಾದ ವಾಕ್ಸಹಾಯವು." ಎಂದನು. ವೇದಮಂ
ತ್ರಕ್ಕೆ ಸಮಾನವಾದ ಭಗವಂತನ ಈ ಮಧುರವಾಕ್ಯವನ್ನು ಕೇಳಿ, ಆ
ಮಹರ್ಷಿಗಳಿಗೆ ದಿಗ್ಭ್ರಮೆಹಿಡಿದಂತಾಯಿತು ! ಈ ಮಹರ್ಷಿಗಳು, ತ
ಮಗೆ ಯಾವಾಗಲೂ ಸಹಜವಾಗಿರಬೇಕಾದ ಶಾಂತಸ್ವಭಾವವನ್ನು ಬಿಟ್ಟು,
ಕೋಪಕ್ಕೆ ವಶರಾಗಿ, ಜಯವಿಜಯರನ್ನು ಶಪಿಸಿದುದರಿಂದ, ತಾವೇ ಆ
ಪರಾಧಿಗಳೆಂಬ ಶಂಕೆಯು ಇವರ ಮನಸ್ಸನ್ನು ಮೊದಲೇ ಬಹಳವಾಗಿ
ಬಾಧಿಸುತಿತ್ತು. ಇದರಮೇಲೆ ಭಗವಂತನು ತಮ್ಮನ್ನು ಅಷ್ಟಾಗಿ ಸ್ತು
ತಿಸುವುದಕ್ಕೆ ಕಾರಣವೇನೆಂದು ತಿಳಿಯಲಿಲ್ಲ. ಭಗವಂತನ ಬಾಯಿಂದ
ಹೊರಟ ಗಂಭೀರಾರ್ಥವುಳ್ಳ ಆ ಒಂದೆರಡು ಮಾತುಗಳನ್ನು ತಮ್ಮ ಮ
ನಸ್ಸಿನಲ್ಲಿಯೇ ಚೆನ್ನಾಗಿ ಆಲೋಚನೆಮಾಡಿದರೂ, ಅದರ ಅಭಿಪ್ರಾಯವೇ
ನೆಂಬುದನ್ನು ನಿಶ್ಚಯಿಸಲಾರದೆ, ಮುಂದೆ ಮಾಡಬೇಕಾದ ಕಾರ್ಯವೇನೆಂ
ದೂ ತಿಳಿಯದೆ, ಸ್ವಲ್ಪಹೊತ್ತಿನವರೆಗೆ ಸುಮ್ಮನಿದ್ದರೂ. ಸಂದೇಹಾಸ್ಪದ
ವಾದ ಈ ವಾಕ್ಯಗಳನ್ನು ಕೇಳಿ ಅವರ ಮನಸ್ಸಿನಲ್ಲಿ ಕೋಪವು ಅಂಕುರಿ
ಸುತ್ತಿದ್ದರೂ, ಆ ಭಗವಂತನ ಮುಖಾರವಿಂದವನ್ನು ನೋಡಿದೊಡನೆ,
ಅವನ ಪ್ರಸನ್ನದೃಷ್ಟಿಗಳು ತಮ್ಮ ಮೇಲೆ ಬಿಳುತ್ತಿರುವುದನ್ನು ಕಂಡು, ಆ
ನಂದದಿಂದ ಪುಲಕಿತವಾದ ಮೈಯುಳ್ಳವರಾಗಿದ್ದರು. ಹೀಗೆ ಸಂತುಷ್ಟಾಂ
ತರಂಗರಾದ ಆ ಮಹರ್ಷಿಗಳು, ಪ್ರಕೃತಿಜನ್ಯವಾದ ಪ್ರಪಂಚದಮೇಲೆ
ಬ್ರಹ್ಮಾದಿದೇವತೆಗಳಿಗೂ ಅಯಾ ಅಧಿಕಾರವನ್ನು ನಿಯಮಿಸತಕ್ಕ
ಆ ಶ್ರೀಹರಿಯ ಮುಂದೆ, ಬದ್ಧಾಂಜಲಿಗಳಾಗಿ ನಿಂತು ವಿಜ್ಞಾಪಿಸುವರು.

"ದೇವಾ! ಸರ್ವೇಶ್ವರನಾಗಿಯೂ, ಸರ್ವಜ್ಞನಾಗಿಯೂ ಇರುವ ನೀನು, ನಮ್ಮನ್ನು ಇಷ್ಟೊಂದು ಪ್ರಶಂಸೆಮಾಡಿ, ನಮ್ಮಲ್ಲಿಯೇ ಅನುಗ್ರಹವನ್ನು ಬೇಡುತ್ತಿರುವೆಯಲ್ಲಾ! ಈ ನಿನ್ನ ವಾಕ್ಯದ ಅಭಿಸಾಯವೇನೋ ತಿಳಿಯಲಿಲ್ಲ! ನಿನ್ನ ವಿಚಿತ್ರವ್ಯಾಪಾರಗಳನ್ನು ಯಾರುತಾನೇ ತಿಳಿಯಬಲ್ಲರು? ದೇವಾ! ಬ್ರಾಹ್ಮಣರನ್ನೇ ನನಗೆ ದೈವವೆಂದು ಹೇಳಿದೆಯಲ್ಲವೆ? ಸರ್ವಲೋಕೇಶ್ವರನಾದ ನೀನು, ಬ್ರಾಹ್ಮಣರನ್ನು ನಿನಗೆ ದೇವತೆಗಳನ್ನಾಗಿ ಹೇಳುವುದು ಆಶ್ಚರ್ಯಕರವಾಗಿರುವುದು. ದೇವತೆಗಳೆಲ್ಲರಿಗೂ ಪರದೇವತೆಯೆನಿಸಿಕೊಂಡು, ಷಡ್ಗುಣೈಶ್ವರ್ಯಪರಿಪೂರ್ಣನಾಗಿ, ತನಗೆತಾನೇ ದೇವನಾಗಿರುವ ನಿನಗೆ ಬೇರೆ ದೈವವೊಂದುಂಟೆ? ನೀನು ನಮ್ಮಂತಹ ಬಡಬ್ರಾಹ್ಮಣರನ್ನು ದೈವವೆಂದು ಗೌರವಿಸುತ್ತಿರುವುದು, ಇತರಜನಗಳಿಗೆ ಹಾಗೆ ನಡೆಯಬೇಕೆಂದು ತೋರಿಸುವುದಕ್ಕಾಗಿಯೇಹೊರತು ಬೇರೆಯಲ್ಲ! ಹೇ ಸರ್ವೇಶ್ವರಾ! ಬ್ರಾಹ್ಮಣಾದಿವರ್ಣಾಶ್ರಮಗಳನ್ನು ಏರ್ಪಡಿಸಿದವನೇ ನೀನು! ಬೇರೆಬೇರ ಅವತಾರಗಳನ್ನೆತ್ತಿ ಅದನ್ನು ರಕ್ಷಿಸತಕ್ಕವನೂ ನೀನೇ! ಆಯಾಧರ್ಮಗಳಿಗೆ ಫಲವೂ ನೀನೇ! ಸಮಸ್ತಧರ್ಮಗಳಿಗೂ ನಿನ್ನ ಪಾದಪದ್ಮವನ್ನು ಸೇರುವುದೊಂದೇ ಮುಖ್ಯಫಲವೇಹೊರತು ಬೇರೆ ಫಲವಿಲ್ಲ ಲೋಕದಲ್ಲಿ ಯೋಗೀಶ್ವರರೆಲ್ಲರೂ ನಿನ್ನ ಅನುಗ್ರಹವನ್ನು ಸಂಪಾದಿಸಿದಮೇಲಲ್ಲವೇ ಮಹಾತ್ಮರೆನಿಸಿಕೊಂಡು, ಮೃತ್ಯುಭಯವನ್ನೂ ನೀಗುವರು. ಹೀಗಿರುವಾಗ ನೀನು ಮತ್ತೊಬ್ಬರ ಅನುಗ್ರಹವನ್ನು ಕೋರುವುದೆಂದರೇನು? ಓ ಪರಮಪುರುಷಾ! ಚತುರ್ವಿಧಪುರುಷಾರ್ಥಗಳನ್ನು ಕೋರುವ ಮನುಷ್ಯರೆಲ್ಲರೂ, ಯಾವಳ ಪಾದರೇಣುವನ್ನು ತಮ್ಮ ಶಿರಸ್ಸಿನಿಂದ ಧರಿಸುತ್ತಿರುವರೋ, ಅಂತಹ ಲಕ್ಷ್ಮೀದೇವಿಯೇ ಕ್ಷಣಮಾತ್ರವೂ ನಿನ್ನ ಪಾದವನ್ನು ಎಡೆಬಿಡದೆ ಅನುವರ್ತಿಸುತ್ತಿರುವಳು. ಆ ಶ್ರೀದೇವಿಗೆ ನೀನು ನಿನ್ನ ವಕ್ಷಸ್ಥಲವನ್ನೇ ನಿವಾಸಸ್ಥಾನವಾಗಿ ಕೊಟ್ಟಿದ್ದರೂ, ಅವಳು ಆ ಸ್ಥಳವನ್ನು ಬಿಟ್ಟು, ತುಲಸೀಮಾಲಿಕೆಯಿಂದ ಶೋಭಿತವಾದ ನಿನ್ನ ಪಾದಪದ್ಮಗಳನ್ನೇ ಬಯಸಿ ಬಂದು, ಅಲ್ಲಿನ ಗಂಧಕ್ಕಾಗಿ ಸುತ್ತುತ್ತಿರುವ ಭ್ರಮರಗಳ ಗುಂಪಿನಲ್ಲಿ ತಾನೂ ಸೇರಿ, ಎಡೆಬಿಡದೆ ನಿನ್ನನ್ನು ಸೇವಿಸುತ್ತಿರುವಳು. ಹೀಗೆ ಶ್ರೀದೇವಿಯು ಪರಮಪ್ರೇಮದಿಂದ ನಿನ್ನ

ಪಾದಗಳನ್ನು ಸೇವಿಸುತ್ತಿದ್ದರೂಕೂಡ, ನೀನು ಅವಳನ್ನು ಆದರಿಸುವುದಕ್ಕೂ ತಕ್ಕಷ್ಟು ಸಮಯವಿಲ್ಲದೆ, ಪಾಮಾತ್ರಿತರಾದ ಭಕ್ತರನ್ನಾದರಿಸುವುದರಲ್ಲಿ ಹೆಚ್ಚು ಪ್ರೀತಿಯುಳ್ಳವನಾಗಿರುವೆ. ಎಲೈ ಭಗವಂತನೆ! ಬ್ರಾಹ್ಮಣರ ಪಾದಧೂಳಿಯೇ ನಿನಗೆ ಭೂಷಣವೆಂದು ಹೇಳಿದೆಯಷ್ಟೆ? ಇತರಜನರಿಗೆ ಬ್ರಾಹ್ಮಣರಲ್ಲಿ ಗೌರವವನ್ನು ಹುಟ್ಟಿಸುವುಕ್ಕಾಗಿ ನೀನು ಈಮಾತನ್ನಾಡಿರಬಹುದೇ ಹೊರತು, ಪರಮಪಾವನನಾದ ನೀನೆಲ್ಲಿ? ನಿನ್ನ ಆಜ್ಞಾನುವರ್ತಿಗಳಾದ ನಮ್ಮಂತಹ ಬ್ರಾಹ್ಮಣರೆಲ್ಲಿ? ಅವರ ಪಾದರೇಣುವು ನಿನ್ನನ್ನು ಪಾವನಮಾಡುವುದೆಂದರೇನು? ಈ ನಿನ್ನ ವಾಕ್ಯವೊಂದೊಂದೂ ಆಶ್ಚರ್ಯವನ್ನುಂಟುಮಾಡುತ್ತಿರುವುದು! ಸಹಜವಾಗಿ ನಿರತಿಶಯಸೌಂದರ್ಯವಿಶಿಷ್ಟನಾದ ನೀನು, ಶ್ರೀವತ್ಸವೆಂಬ ಮಚ್ಚೆಯನ್ನು ಒಂದು ಭೂಷಣವನ್ನಾಗಿ ತಳೆದಂತೆ, ಲೋಕಪಾವನನಾದ ನೀನು ಬ್ರಾಹ್ಮಣಪಾದರೇಣುವನ್ನೂ ಭೂಷಣಕ್ಕಾಗಿ ಧರಿಸಬೇಕಲ್ಲದೆ ಪವಿತ್ರತೆಗಲ್ಲ! ಷಡ್ಗುಣೈಶ್ವರ್ಯಪರಿಪೂರ್ಣನಾದ ಎಲೈ ಭಗವಂತನೆ! ಧರ್ಮಸ್ವರೂಪನಾದ ನಿನಗೆ, ತಪಸ್ಸು ದಾನ, ದಯೆ ಎಂಬಿವು ಮೂರೂ ಮೂರು ಪಾದಗಳೆನಿಸಿರುವುವು. ಈ ಪಾದತ್ರಯದಿಂದ ನೀನು ಬ್ರಾಹ್ಮಣರನ್ನೂ, ದೇವತೆಗಳನ್ನೂ ರಕ್ಷಿಸುವುದಕ್ಕಾಗಿ, ಬೇರೆಬೇರೆ ಅವತಾರಗಳನ್ನೆತ್ತಿ, ರಜಸ್ತಮೋಗುಣಗಳ ಹೆಚ್ಚಿಕೆಯಿಂದ ಅವರಿಗೆ ವಿರೋಧಿಗಳಾಗಿ ಪ್ರವರ್ತಿಸುತ್ತಿರುವ ದುರ್ಮಾರ್ಗರನ್ನು ನಿಗ್ರಹಿಸಿ, ಚರಾಚರಾತ್ಮಕವಾದ ಸಮಸ್ತಪ್ರಪಂಚಕ್ಕೂ ಕ್ಷೇಮವನ್ನುಂಟುಮಾಡಿ, ಧರ್ಮವನ್ನೂ ಪಾಲಿಸುತ್ತಿರುವೆ. ಹಾಗಿಲ್ಲದಪಕ್ಷದಲ್ಲಿ ಧರ್ಮವೆಂಬುದು ಈ ಲೋಕದಲ್ಲಿ ನಿರ್ಮೂಲವಾಗಿ ನಾಶಕೊಂಡುಹೋಗಿದ್ದಿತು. ಈ ಕಾರ್ಯವು ನಿನ್ನಿಂದಲ್ಲದೆ ಬೇರೊಬ್ಬರಿಂದ ಸಾಧ್ಯವೆ? ಹೀಗೆ ಸರ್ವಶಕ್ತನಾದ ನೀನು ಬೇರೆಬೇರೆ ಅವತಾರಗಳನ್ನೆತ್ತಿ, ಸ್ವತಃ ಧರ್ಮಗಳನ್ನು ನಡೆಸಿ ತೋರಿಸುವುದರಿಂದಲೂ, ಇತರರಿಗೆ ಪ್ರಿಯವಾಕ್ಯಗಳಿಂದ ಅದನ್ನು ಪದೇಶಿಸುವುದರಿಂದಲೂ ಬ್ರಾಹ್ಮಣಕುಲಕ್ಕೆ ಕ್ಷೇಮವನ್ನುಂಟುಮಾಡದಿದ್ದಪಕ್ಷದಲ್ಲಿ, ಸಮಸ್ತಲೋಕಕ್ಕೂ ಶ್ರೇಯಸ್ಸಂಪಾದಕವಾಗಿಯೂ, ಕರ್ಮೋಪಾಸನಾತ್ಮಕವಾಗಿಯೂ ಇರುವ ವೇದಮಾರ್ಗವು ಆಗಲೇ ನಶಿಸುತಿತ್ತು. ಲೋಕವೆಲ್ಲವೂ ನಿನ್ನಂತಹ ಹಿ

ರಿಯರ ನಡತೆಯನ್ನೀ ಪ್ರಮಾಣವಾಗಿಟ್ಟುಕೊಂಡು, ಅದನ್ನನುವರ್ತಿಸಿ ನ
ಡೆಯಬೇಕೆಂಬ ಉದ್ದೇಶದಿಂದಲೇ ನೀನೂ ಕರ್ಮಗಳನ್ನಾಚರಿಸುತ್ತಿರುವೆ.
ಹೇ ದೇವಾ ! ಕೇವಲ ಶುದ್ಧಸತ್ವಮಯನಾಗಿ, ಅನವರತವೂ ಲೋಕಕ್ಷೇಮ
ದಲ್ಲಿಯೇ ನಿರತನಾದ ನೀನು, ಬೇರೆಬೇರೆ ಅವತಾರಗಳನ್ನೆತ್ತಿ ಲೋಕಕಂಟಕ
ರಾದ ದುರ್ಮಾರ್ಗರನ್ನು ನಿಗ್ರಹಿಸುವಂತೆ, ವೇದಮಾರ್ಗವನ್ನು ರಕ್ಷಿಸಬೇಕಾ
ದುದೂ ನಿನಗೆ ಕೃತ್ಯವು. ಸರ್ವಲೋಕಾಧಿಪತಿಯಾಗಿಯೂ, ಸರ್ವ
ಶಕ್ತನಾಗಿಯೂ, ಸರ್ವದೇವದೇವನಾಗಿಯೂ ಇರುವ ನೀನು, ಹೀಗೆ
ಬ್ರಾಹ್ಮಣರಿಗೆ ತಲೆಬಗ್ಗಿದ ಮಾತ್ರಕ್ಕೆ, ಅದರಿಂದ ನಿನ್ನ ಮಹಿಮೆಗೆ ಕೊರ
ತೆಯೇನೂ ಉಂಟಾಗಲಾರದು. ಈ ನೈಜ್ಯಾನುಸಂಧಾನವೂ ಕೂಡ, ನೀನು
ಲೋಕಶಿಕ್ಷಣಾರ್ಥವಾಗಿ ನಡೆಸತಕ್ಕ ಲೀಲೆಯೇ ಹೊರತು ಬೇರೆಯಲ್ಲ.
ದೇವಾ ! ಈಗ ನಮ್ಮದೊಂದು -ವಿಜ್ಞಾಪನೆಯುಂಟು. ಲಾಲಿಸಬೇಕು !
ಈಗ ನಾವೇನೋ ನಿನ್ನ ಕಿಂಕರರಾದ ಈ ಜಯವಿಜಯರನ್ನು ಶಪಿಸಿ
ಬಿಟ್ಟೆವು. ಈ ಶಾಪವೇ ಅವರಿಗೆ ತಕ್ಕ ದಂಡನೆಯೆಂದು ನೀನು ಅಂಗೀಕ
ರಿಸಿದರೂ ಅಂಗೀಕರಿಸಬಹುದು ! ಇಲ್ಲವೇ ಇದಕ್ಕೆ ನೀನು ಬೇರೆ ಪ್ರತೀಕಾ
ರವನ್ನು ಯೋಜಿಸಿ, ಅವರನ್ನು ಅನುಗ್ರಹಿಸಿದರೂ ಅನುಗ್ರಹಿಸಬಹುದು !
ಅಥವಾ ಅತಿಕ್ರಮಿಸಿ ಬಂದವರನ್ನು ತಡೆದು ನಿಲ್ಲಿಸುವುದು ಈ ದ್ವಾರಪಾಲ
ಕರಿಗೆ ಕರ್ತವ್ಯವಾದುದರಿಂದ, ಆ ವಿಷಯದಲ್ಲಿ ನಿರಪರಾಧಿಗಳಾದ ಈ ಜಯ
ವಿಜಯರನ್ನು ನಾವು ವಿವೇಕವಿಲ್ಲದೆ ಶಪಿಸಿದುದಕ್ಕಾಗಿ, ನಮ್ಮನ್ನೇ ನೀನು
ಶಿಕ್ಷಿಸುವುದಾದರೂ ಆ ಶಿಕ್ಷೆಯನ್ನನುಭವಿಸುವುದಕ್ಕೂ ನಾವು ಸಿದ್ಧರಾಗಿ
ರುವೆವು. ಈ ವಿಷಯದಲ್ಲಿ ನಾವು ನಿನ್ನ ಆಜ್ಞಾಧೀನರಾಗಿ ನಡೆದುಕೊಳ್ಳ
ತಕ್ಕವರು ! " ಎಂದು ಹೇಳಿ ಬದ್ಧಾಂಜಲಿಗಳಾಗಿ ನಿಂತಿದ್ದರು. ಆಗ ಭಗವಂ
ತನು ಆ ಮುನಿಕುಮಾರರ ಭಕ್ತಿವಿನಯಗಳನ್ನು ನೋಡಿ, ಅವರಲ್ಲಿ ಕನಿಕರ
ಗೊಂಡು "ಎಲ್ಲೆ ಮಹರ್ಷಿಗಳಿರಾ ! ಇವರು ನಿಮ್ಮಾಜ್ಞೆಯಂತೆ ಅಸುರ
ಜನ್ಮದಲ್ಲಿ ಹುಟ್ಟಬೇಕಾದುದೇ ಅವಶ್ಯವು. ಆದರೆ ಇವರಿಗೆ ಆಗಲೂ ನನ್ನ
ಸ್ಮರಣವುಮಾತ್ರ ತಪ್ಪದಂತೆ ಅನುಗ್ರಹಿಸುವೆನು. ಇವರು ರಾಕ್ಷಸಜನ್ಮದ
ಲ್ಲಿ ಹುಟ್ಟಿ, ಹುಟ್ಟಿದುದುಮೊದಲು ಸಾಯುವವರೆಗೆ ನನ್ನಲ್ಲಿ ವೈರಬುದ್ಧಿ

ಯುಳ್ಳವರಾಗಿದ್ದರೂ, ಆ ನಿವಡಿಂದಲೇ ನನ್ನನ್ನು ಅನವರತವೂ ಭಾವಿಸುತಿದ್ದು, ಅದರ ಫಲದಿಂದ ಶೀಘ್ರದಲ್ಲಿ ತಿರುಗಿ ನನ್ನ ಸಾನ್ನಿಧ್ಯಕ್ಕೆ ಬಂದು ಸೇರಲಿ! ಎಲೈ ಮಹರ್ಷಿಗಳೇ! ನೀವು ಇವರಿಗೆ ಕೊಟ್ಟ ಶಾಪವನ್ನು ನಾನೇ ನಿಮ್ಮ ಬಾಯಿಂದ ನುಡಿಸಿರುವೆನೆಂದು ತಿಳಿಯಿರಿ" ಎಂದನು ಆಮೇಲೆ ಸನಕಾದಿಮಹರ್ಷಿಗಳೆಲ್ಲರೂ ನೇತ್ರಾನಂದಕರನಾದ ಆ ಭಗವಂತನನ್ನೂ, ಆತನಿಗೆ ನಿವಾಸಸ್ಥಾನವಾಗಿ ಸ್ವಯಂಪ್ರಕಾಶವುಳ್ಳ ವೈಕುಂಠಲೋಕದ ಸೊಬಗನ್ನೂ ನೋಡುತ್ತ, ಪರಮಾನಂದಭರಿತರಾಗಿ,ಆ ಭಗವಂತನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಆತನ ಅನುಜ್ಞೆಯನ್ನು ಪಡೆದು, ಆ ವಿಷ್ಣುವಿನ ಮಹಾಮಹಿಮೆಯನ್ನು ಕೊಂಡಾಡುತ್ತ ಸಂತೋಷದಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು. ಆಮೇಲೆ ನಾರಾಯಣನು ತನ್ನ ಭೃತ್ಯರಾದ ಜಯವಿಜಯರನ್ನು ನೋಡಿ "ಎಲೈ ಭೃತ್ಯರೆ! ಇನ್ನು ನೀವು ಹೊರಡಬಹುದು! ಇದಕ್ಕಾಗಿ ನೀವು ಭಯಪಡಬೇಕಾದುದಿಲ್ಲ! ನಿಮಗೆ ಶುಭವಾಗಲಿ! ನಾನು ಈ ಬ್ರಾಹ್ಮಣಶಾಪವನ್ನು ತಪ್ಪಿಸುವುದಕ್ಕೆ ಶಕ್ತನಾಗಿದ್ದರೂ, ನಿಮಗೆ ಈ ಶಿಕ್ಷೆಯಾಗಬೇಕೆಂಬುದು ನನಗೂ ಸಮ್ಮತವಾದುದರಿಂದಲೇ ತಪ್ಪಿಸಿಲಿಲ್ಲವು. ಇಪ್ಪಲ್ಲದೆ ನನ್ನ ಪ್ರಿಯಪತ್ನಿಯಾದ ಲಕ್ಷ್ಮೀದೇವಿಗೂ, ನಿಮಗೆ ಈ ವಿಧವಾದ ದಂಡನೆಯಾಗಬೇಕೆಂಬುದೇ ಇಷ್ಟವು. ಅದಕ್ಕೆ ಕಾರಣವನ್ನು ತಿಳಿಸುವೆನು ಕೇಳಿರಿ! ಹಿಂದೆ ನಾನು ಲಕ್ಷ್ಮೀದೇವಿಯೆಲ್ಲಿ ಪ್ರಣಯಕಲಹದಿಂದ ಮಾತಾಡದೆ ಸುಮ್ಮನೆ ಮಲಗಿದ್ದಾಗ, ಆಕೆಯು ಅಂತಃಪುರವನ್ನು ಬಿಟ್ಟು, ಸ್ವಲ್ಪಹೊತ್ತಿನವರೆಗೆ ಹೊರಗಿದ್ದು ಹಿಂತಿರುಗಿ ಶಯನಗೃಹವನ್ನು ಪ್ರವೇಶಿಸುವುದಕ್ಕೆ ಬರಲು, ಈಗಿನಂತೆಯೇ ನೀವು ಆ ದೇವಿಯನ್ನೂ ನಿವಾರಿಸಿದಿರಿ! ಇದಕ್ಕಾಗಿ ಆಕೆಯು ಹಿಂದೆಯೇ ನಿಮ್ಮನ್ನು ಇದೇರೀತಿಯಲ್ಲಿ ಶಪಿಸಿರುವಳು. ಆದುದರಿಂದ ನಿಮಗೆ ಈ ರಾಕ್ಷಸ ಜನ್ಮವು ಹೇಗಿದ್ದರೂ ತಪ್ಪದು. ನೀವು ಹುಟ್ಟಿದುದುವೊದಲು ನನ್ನಲ್ಲಿ ವೈರವನ್ನೇ ಬೆಳಸಿ, ದೇವತೆಗಳಿಗೂ, ಲೋಕಗಳಿಗೂ ಅಪಾಯವನ್ನುಂಟು ಮಾಡುತ್ತಿರುವಾಗ, ನಾನು ಬೇರಬೇರೆ ಅವತಾರಗಳನ್ನೆತ್ತಿ ನನ್ನ ಕೈಯಿಂದಲೇ ನಿಮ್ಮನ್ನು ಕೊಲ್ಲುವೆನು. ಸ್ವಲ್ಪಕಾಲದಲ್ಲಿಯೇ ನೀವು ನನ್ನ ಸ



408. ಕ್ಷೀರಸಮುದ್ರಶಾಯಿಯಾದ ಮುರಾರಿ

ನ್ನಿಧಾನವನ್ನೂ ಸೇರುವಿರಿ" ಎಂದನು. ಹೀಗೆ ಭಗವಂತನು ಜಯವಿಜಯರಿಗೆ ನಿಯಮಿಸಿ, ಅನೇಕ ವಿಮಾನಪರಂಪರೆಗಳಿಂದ ಶೋಭಿತವಾಗಿ ನಿರತಿಶಯ ಸೌಂದರ್ಯದಿಂದೊಪ್ಪುತ್ತಿರುವ ತನ್ನ ನಿವಾಸಸ್ಥಾನಕ್ಕೆ ಲಕ್ಷ್ಮೀಸಹಿತನಾಗಿ ಹಿಂತಿರುಗಿದನು. ಒಡನೆಯೇ ಇತ್ತಲಾಗಿ ಜಯವಿಜಯರಿಬ್ಬರಿಗೂ ಬ್ರಾಹ್ಮಣಶಾಪದಿಂದ ಮುಖವು ಕಳೆಗುಂದಿತು. ಅವರ ಪ್ರಭಾವವೆಲ್ಲವೂ ನಶಿಸಿತು. ಆಗಲೇ ವೈಕುಂಠಲೋಕದಿಂದ ಕೆಳಕ್ಕೆ ಇಳಿಯಲಾರಂಭಿಸಿದರು. ಹೀಗೆ ಆ ಜಯವಿಜಯರಿಬ್ಬರೂ ಕೊಬ್ಬಡಗಿ, ವೈಕುಂಠದಿಂದ ಕೆಳಗೆ ಬಿಳುವಾಗ, ಆಕಾಶದಲ್ಲಿ ವಿಮಾನಸಂಚಾರಿಗಳಾದ ಮಹಾತ್ಮರೆಲ್ಲರೂ, ಅವರ ದುಸ್ಥಿತಿಯನ್ನು ನೋಡಿ ಕನಿಕರಗೊಂಡು, ಹಾಹಾಕಾರದಿಂದ ಕೂಗಿಡುತಿದ್ದರು. ಎಲ್ಲೆ ದೇವತೆಗಳಿರಾ ! ವೈಕುಂಠದ್ವಾರಪಾಲಕರಾದ ಆ ಜಯವಿಜಯರೇ ಈಗ ದಿತಿಯೆಗರ್ಭದಲ್ಲಿ ಕಶ್ಯಪನ ತೇಜಸ್ಸಾಗಿ ಪ್ರವೇಶಿಸಿರುವರು ಅವರ ತೇಜಸ್ಸಿನಿಂದಲೇ ಈ ಲೋಕವೆಲ್ಲವೂ ಹೀಗೆ ಅಂಧಕಾರಮಯವಾಗಿರುವುದು. ಆ ರಾಕ್ಷಸರ ತೇಜಸ್ಸು ಕ್ರಮಕ್ರಮವಾಗಿ ಹೆಚ್ಚಿ, ಕೆಲವು ಕಾಲಪರ್ಯಂತರೆಗೆ ನಿಮ್ಮ ಶಕ್ತಿಯನ್ನಡಗಿಸಿದರೂ, ಸ್ವಲ್ಪಕಾಲದೊಳಗಾಗಿಯೇ ಭಗವಂತನು ಅವತಾರಗಳನ್ನೆತ್ತಿ ಅವರ ಶಕ್ತಿಯನ್ನಡಗಿಸಿ, ನಿಮ್ಮ ತೇಜಸ್ಸನ್ನು ಸ್ಥಾಪಿಸುವನು. ಪ್ರಪಂಚದ ಸೃಷ್ಟಿಸ್ಥಿತಿಲಯೆಗಳನ್ನು ನಿರ್ವಹಿಸತಕ್ಕವನಾಗಿಯೂ, ತ್ರಿಲೋಕಾಧಿಪತಿಯಾಗಿಯೂ, ಯೋಗೀಶ್ವರರಿಗೂ ವೀರಲಸಾಧ್ಯವಾದ ಮಾಯೆಯನ್ನು ತನ್ನ ಕೈವಶವಾಗಿಟ್ಟುಕೊಂಡವನಾಗಿಯೂ ಇರುವ ಆ ಸರ್ವೇಶ್ವರನು, ಆಯಾ ಕಾಲವು ಬಂದೊಡನೆ, ಆ ರಾಕ್ಷಸರನ್ನುಕೊಂದು,ನಮ್ಮೆಲ್ಲರಿಗ್ಕೂಕ್ಷೇಮವನ್ನುಂಟುಮಾಡದೆ ಬಿಡಲಾರನು ಇದಕ್ಕಾಗಿ ಈಗ ನಾವು ಚಿಂತಿಸಿ ಪ್ರಯೋಜನವಿಲ್ಲ. ನಾವು ಚಿಂತಿಸಬೇಕಾದ ಆವಶ್ಯಕತೆಯೂ ಇಲ್ಲ" ಎಂದನು. ಇಲ್ಲಿಗೆ ಹದಿನಾರನೆಯ ಅಧ್ಯಾಯವು.

ಹಿರಣ್ಯಾಕ್ಷ ಹಿರಣ್ಯಕಶಿಪುಗಳ ಜನನವು.

ಹೀಗೆ ಬ್ರಹ್ಮನು ಸನಾಥಾನವನ್ನು ಹೇಳಿದೊಡನೆ, ದೇವತೆಗಳೆಲ್ಲರೂ ತಮ್ಮ ಮನಸ್ಸಿನಲ್ಲಿದ್ದ ಭಯವನ್ನು ಬಿಟ್ಟು, ಬ್ರಹ್ಮಲೋಕದಿಂದ

ಹಿಂತಿರುಗಿ ತಮ್ಮತಮ್ಮ ಲೋಕಗಳನ್ನು ಸೇರಿದರು ಓ ! ವಿದುರಾ ! ಇತ್ತಲಾಗಿ ದಿತಿಯು ' ತನ್ನ ಗರ್ಭದಲ್ಲಿ ಲೋಕಕಂಟಕರಾದ ದುಷ್ಪುತ್ರರು ಹುಟ್ಟುವರೆಂದು ಹೇಳಿದ ತನ್ನ ಪತಿಯ ವಾಕ್ಯವನ್ನು ಕೇಳಿದಮೇಲೆ, ಅವಳ ಮನಸ್ಸಿಗೆ ಪಶ್ಚಾತ್ತಾಪವು ಹುಟ್ಟಿತು. ತನ್ನ ಮಕ್ಕಳಿಗೆ ದೇವತೆಗಳಿಂದ ಸಾವು ಸಿದ್ಧವೆಂಬ ವಿಷಯವನ್ನೂ ಕೇಳಿ ಮನಸ್ಸಿನಲ್ಲಿ ಕೊರಗುತ್ತ, ನೂರು ವರುಷಗಳವರೆಗೆ ಗರ್ಭವನ್ನು ಧರಿಸಿದ್ದು ಇಬ್ಬರು ಕುಮಾರರನ್ನು ಹಡೆದಳು. ಈ ಮಕ್ಕಳ ಜನನಕಾಲದಲ್ಲಿಯೇ ಸಮಸ್ತಲೋಕಗಳಿಗೂ ಭಯವನ್ನು ಹುಟ್ಟಿಸುವಂತೆ ಆಕಾಶದಲ್ಲಿಯೂ, ಭೂಮಿಯಲ್ಲಿಯೂ, ಅ ಸಂಖ್ಯಾತಗಳಾದ ಮಹೋತ್ಪಾತಗಳು ಕಾಣಿಸಿದುವು. ಸಮಸ್ತಪರ್ವತ ಸಮೂಹಗಳೊಡನೆ ಭೂಮಿಯು ಗಿರುಗಿರನೆ ತಿರುಗಲಾರಂಭಿಸತು. ದಿಕ್ಕುಗಳೆಲ್ಲವೂ ಉರಿಯುತಿದ್ದುವು. ಆಕಾಶದಿಂದ ಜುಳ್ಕಿಗಳು ಬೀಳುತಿದ್ದವು. ನಾನಾಕಡೆಗಳಲ್ಲಿಯೂ ಸಿಡಿಲಿನ ವರ್ಷವು ಕರೆಯುತಿತ್ತು. ಲೋಕೋಪದ್ರವ ಸೂಚಕಗಳಾದ ಧೂಮಕೇತುಗಳು ಆಕಾಶದಲ್ಲಿ ಕಾಣಿಸಿದುವು. ತಡೆಯಲಸಾಧ್ಯವಾದ ದೊಡ್ಡ ಬಿರುಗಾಳಿಯ ಮಹಾಧ್ವನಿಯಿಂದ ಭೋರ್ಗರೆಯುತ್ತ ಬೀಸತೊಡಗಿತು. ಈ ಬಿರುಗಾಳಿಯ ವೇಗದಿಂದ ಅನೇಕವೃಕ್ಷಗಳು ಮೂಲಸಹಿತವಾಗಿ ಕಿತ್ತುಬಿಳುತಿದ್ದುವು. ಮತ್ತು ಆ ಬಿರುಗಾಳಿಯ ಜಯಧ್ವಜದಂತೆ ದೊಡ್ಡಧೂಳಿಯೆದ್ದು, ಸಮಸ್ತಲೋಕಕ್ಕೂ ಭಯವನ್ನು ಹುಟ್ಟಿಸುತಿತ್ತು. ಕಣ್ಣುಗಳನ್ನು ಕೋರೈಸುವ ಮಿಂಚುಗಳೊಡನೆ ಮೇಘಸಮೂಹವು ಆಕಾಶವೆಲ್ಲವನೂ ದಟ್ಟವಾಗಿ ತುಂಬಿ, ಸಮಸ್ತಲೋಕವನ್ನೂ ಅಂಧಕಾರಮಯವನ್ನಾಗಿ ಮಾಡಿತು. ಇದೇಸಮಯದಲ್ಲಿ ಸಪ್ತಸಮುದ್ರಗಳೂ ಅಲೆಗಳೆಂಬ ಕೈಗಳಿಂದ ಎದೆಯನ್ನು ಚಚ್ಚಿಕೊಂಡು, ದುಃಖದಿಂದ ಕೂಗುತ್ತಿರುವಂತೆ ಭಯಂಕರಧ್ವನಿಯಿಂದ ಮೊರೆಯಿಡುತಿದ್ದಿತು. ಕೊಳ, ಕೆರೆ, ಬಾವಿಗಳೆಲ್ಲವೂ ಕಲಗಿಹೋದುವು. ಚಂದ್ರಸೂರ್ಯಬಿಂಬಗಳೆರಡಕ್ಕೂ ಆಕಾಲಗ್ರಹಣದೊಡನೆ, ಸುತ್ತಲೂ ಪರಿವೇಷವು ಕಾಣುತಿತ್ತು. ಮೇಘಗರ್ಜನೆಗಳೂ, ಪರ್ವತಗುಹೆಗಳಲ್ಲಿ ಅದರ ಪ್ರತಿಧ್ವನಿಗಳೂ, ಭಯಂಕರವಾಗಿ ಕೇಳಿಸುತ್ತಿದ್ದುವು. ನರಿ, ಗೂಬೆ, ಮೊದಲಾದ ಶ್ಮಶಾನಜೀವಿಗಳೆಲ್ಲವೂ ಗ್ರಾ

ಮಮಥ್ಯದಲ್ಲಿಶ್ಚಿಪ್ರವೇತಿಸಿ, ಬಾಯಿಂದ ಬೆಂಕಿಯನ್ನು ಕಕ್ಕುತ್ತ, ಭಯಂಕರವಾಗಿ ಅಮಂಗಳಧ್ವನಿಯಿಂದ ಕೂಗಲಾರಂಭಿಸಿದುವು. ಅಲ್ಲಲ್ಲಿ! ನಾಯಿಗಳು ತಮ್ಮ ಮುಖವನ್ನು ಮೇಲಕ್ಕೆತ್ತಿ, ಒಮ್ಮೊಮ್ಮೆ ಹಾಡುವಂತೆಯೂ, ಮತ್ತೊಮ್ಮೆ ಅಳುವಂತೆಯೂ ಕೂಗುತಿದ್ದುವು. ಅಲ್ಲಲ್ಲಿ ಕತ್ತೆಗಳು ಕಠಿನವಾದ ತಮ್ಮ ಕಾಲ್ಗೊರಸಲುಗಳಿಂದ ನೆಲವನ್ನಪ್ಪಳಿಸುತ್ತ,ಕ್ರೂರಧ್ವನಿಯಿಂದ ಅರಚಿಕೊಂಡು, ನಾನಾದಿಕ್ಕುಗಳಿಗೆ ಓಡುತ್ತಿದ್ದುವು. ಹೀಗೆ ನಾನಾಕಡೆಗಳಿಂದ ಹೊರಟ ಅಮಂಗಳಧ್ವನಿಯನ್ನು ಕೇಳಿ ಭಯಪಟ್ಟು, ಆಕಾಶದಲ್ಲಿದ್ದ ಪಕ್ಷಿಗಳೂಕೂಡ ವಿಕಾರಧ್ವನಿಯಿಂದ ಕೂಗುತ್ತ, ತಮ್ಮ ಗೂಡುಗಳನ್ನು ಬಿಟ್ಟು ಹಾರಾಡುತ್ತಿದ್ದುವು. ಮಂದೆಗಳಲ್ಲಿಯೂ, ಕಾಡುಗಳಲ್ಲಿಯೂ, ಹಸುಗಳು ಎಡೆಬಿಡದೆ ಮಲಮೂತ್ರಗಳನ್ನು ಸುರಿಸತೊಡಗಿದುವು. ಗೋವುಗಳು ಭಯದಿಂದ ಮೈಮರೆತು ಹಾಲಿಗೆ ಬದಲಾಗಿ ರಕ್ತವನ್ನು ಕರೆಯುತಿದ್ದುವು. ಮೇಘಗಳು ರಕ್ತದ ಮಳೆಯನ್ನು ಸುರಿಸುತಿದ್ದುವು. ದೇವಾಲಯದಲ್ಲಿರುವ ದೇವತಾಪ್ರತಿಮೆಗಳೆಲ್ಲವೂ ಕಣ್ಣೀರುಬಿಡುತಿದ್ದುವು.ನಿಷ್ಕಾರಣವಾಗಿ ಅಲ್ಲಲ್ಲಿ ವೃಕ್ಷಗಳು ಉರುಳುತಿದ್ದವು. ಶುಭಗ್ರಹಗಳೆಲ್ಲವನ್ನೂ ಕ್ರೂರಗ್ರಹಗಳು ಪೀಡಿಸತೊಡಗಿದುವು. ಒಂದೊಂದುಗ್ರಹವೂ ವಕ್ರಗತಿಯಿಂದ ತಿರುಗುತ್ತ ಅನ್ಯೋನ್ಯವಾಗಿ ಯುದ್ಧವನ್ನಾರಂಭಿಸಿದುವು. ಈ ವಿಧವಾದ ಮಹೋತ್ಪಾತಗಳು ಇನ್ನೂ ಅನೇಕವಾಗಿ ಕಾಣಿಸಿಕೊಂಡುವು. ಜ್ಞಾನಸಂಪನ್ನರಾದ ಮರೀಚಿ ಮೊದಲಾದ ಬ್ರಹ್ಮಪುತ್ರರುಹೊರತು, ಇತರ ಸಮಸ್ತಪ್ರಜೆಗಳೂ ಭಯದಿಂದ ತಪ್ತಳಿಸುತಿದ್ದರು ಸಮಸ್ತಲೋಕಗಳಿಗೂ ಯಾವುದೋ ಒಂದು ಮಹಾವಿಪತ್ತು ಸಂಭವಿಸದೆ ಬಿಡದೆಂದು ಎಲ್ಲರಿಗೂ ನಿಶ್ಚಯವು ಹುಟ್ಟಿತು. ಇದು ಹೀಗಿರಲು,ಇತ್ತಲಾಗಿ ದಿತಿಯು ಗರ್ಭದಲ್ಲಿ ಹುಟ್ಟಿದ ರಾಕ್ಷಸರಿಬ್ಬರೂ ಪೂರ್ವಜನ್ಮದಲ್ಲಿ ತಮಗಿದ್ದ ಪೌರುಷಪ್ರಭಾವಗಳನ್ನೇ ತೋರಿಸುತ್ತ, ಮೇಲೆಮೇಲೆ ಬೆಳೆಯುತ್ತ ಬಂದರು. ಅವರ ಎಣೆಯಿಲ್ಲದ ಶಕ್ತಿಯನ್ನೂ, ಮಹಾದ್ಭುತವಾದ ಆಕಾರವನ್ನೂ ಕೇಳಬೇಕೆ ? ಉಕ್ಕಿನಂತೆ ಕಠಿನವಾದ ಮೈ ! ಪರ್ವತಗಳಂತೆ ಮಹತ್ತಾದ ಆಕೃತಿ! ಕಿರೀಟಾಗ್ರದಿಂದ ಆಕಾಶವನ್ನೇ ಮೇಲೆತ್ತುವಂತೆ ಮಹೋನ್ನತವಾದ ಬೆಳೆವಳಿಕೆ! ಎಂ

ಟ್ಟು ದಿಕ್ಕುಗಳನ್ನೂ ಆಪ್ಪಿಕೊಳ್ಳುವಂತೆ, ಕೇಯೂರಾಂಗದಗಳಿಂದ ಶೋಭಿತವಾಗಿ ನೀಡಿದ ತೋಳುಗಳು ! ನೆಲವನ್ನು ನಡುಗಿಸುವಂತೆ ಭಾರವಾದ ನಡೆ ! ಇಂತಹ ಅದ್ಭುತಾಕಾರವುಳ್ಳ ಆ ರಾಕ್ಷಸರಿಬ್ಬರೂ, ಕಾಂಚೀದಾಮದಿಂದ ಶೋಭಿತವಾದ ತಮ್ಮ ಕಟಿಸ್ಥಲ (ನಡುವಿನಿಂದ) ದಿಂದಲೇ ಸೂರ್ಯನನ್ನತಿಕ್ರಮಿಸುವಂತೆ ವೃದ್ಧಿಹೊಂದುತ್ತ ಬಂದರು. ಆಗ ಕಶ್ಯಪನು ಆ ಅವಳಿಮಕ್ಕಳಿಬ್ಬರನ್ನೂ ನೋಡಿ, ಅವರಲ್ಲಿ-* ತನ್ನ ದೇಹದಿಂದ ಮೊದಲು ಹುಟ್ಟಿದ ಬಾಲಕನಿಗೆ ಹಿರಣ್ಯಕಶಿಪುವೆಂದೂ, ದಿತಿಯ ದೇಹದಿಂದ ಮೊದಲು ಹುಟ್ಟಿದ ಮಗನಿಗೆ ಹಿರಣ್ಯಾಕ್ಷನೆಂದೂ ಹೆಸರಿಟ್ಟು ನಾಮಕರಣವನ್ನು ಮಾಡಿದನು. ಆಮೇಲೆ ಹಿರಣ್ಯಕಶಿಪುವೆಂಬವನು, ತನ್ನ ಬಾಹುಬಲದಿಂದಲೂ ಬ್ರಹ್ಮನು ತನಗೆ ಕೊಟ್ಟವರದ ಬಲದಿಂದಲೂ, ತನಗೆ ಮರಣವೇ ಇಲ್ಲವೆಂದು ನಿಶ್ಚಯಿಸಿ, ಮೂರುಲೋಕಗಳನ್ನೂ, ಲೋಕಪಾಲಕರನ್ನೂ ಪೀಡಿಸಿ ತನ್ನವಶಮಾಡಿಕೊಂಡನು. ಆತನ ತಮ್ಮನಾದ ಹಿರಣ್ಯಾಕ್ಷನೂ ಕೂಡ, ತನ್ನಣ್ಣನಿಗೆ ಸಹಾಯಕನಾಗಿ, ದೇವತೆಗಳನ್ನು ಪೀಡಿಸುವುದರಿಂದ ಅವನಿಗೆ ಸಂತೋಷವನ್ನುಂಟುಮಾಡುತ್ತಿದ್ದನು. ಹೀಗಿರುವಲ್ಲಿ ಒಮ್ಮೆ ಹಿರಣ್ಯಾಕ್ಷನು, ಮೈಕೊ

---

* ಇಲ್ಲಿ ಕಶ್ಯಪನು ತನಗೆ ಮೊದಲು ಹುಟ್ಟಿದ ಮಗನಿಗೆ ಹಿರಣ್ಯಕಶಿಪುವೆಂದೂ, ದಿತಿಗೆ ಮೊದಲು ಹುಟ್ಟಿದ ಮಗನಿಗೆ ಹಿರಣ್ಯಾಕ್ಷನೆಂದೂ ಹೆಸರಿಟ್ಟುದಾಗಿ ಹೇಳಿದುದರ ತಾತ್ಪರ್ಯವೇನೆಂದರೆ:—ಪುರುಷನ ವೀರ್ಯವು ಸ್ತ್ರೀಗರ್ಭದಲ್ಲಿ ಪ್ರವೇಶಿಸುವಾಗ, ಆ ಸ್ತ್ರೀಯರ ಗರ್ಭಕೋಶದಲ್ಲಿರುವ ವ್ಯತ್ಯಾಸದಿಂದ, ಎರಡುಭಾಗವಾಗಿ ಬೇರ್ಪಡುವುದುಂಟು. ಇಂತಹ ಸ್ಥಿತಿಯಲ್ಲಿಯೇ ಅವಳಿಮಕ್ಕಳು ಹುಟ್ಟುವರು. ಈ ಸಂದರ್ಭದಲ್ಲಿ ಪುರುಷಶರೀರದಿಂದ ಮೊದಲು ಹೊರಟ ವೀರ್ಯವು, ಸ್ತ್ರೀಗರ್ಭದಲ್ಲಿ ಮೊದಲು ನಿಂತು, ಆಮೇಲೆ ಎರಡನೆಯ ಬಿಂದುವು ಅದಕ್ಕೆ ಮುಂದೆ ನಿಲ್ಲುವುದು. ಪ್ರಸವಕಾಲದಲ್ಲಿ ಎರಡನೆಯ ವೀರ್ಯಬಿಂದುವಿನಿಂದುಂಟಾದ ಶಿಶುವು ಮೊದಲು ಹುಟ್ಟಿ, ಆಮೇಲೆ ಅದರ ಹಿಂಪೆ ಸೇರಿದ ಮೊದಲನೆಯ ಬಿಂದುವಿನಿಂದುಂಟಾದ ಶಿಶುವು ಜನಿಸ್ಸುವುದು. ಇದರಿಂದ ಪುರುಷಶರೀರದಿಂದ ಸ್ತ್ರೀಗರ್ಭದಲ್ಲಿ ಸೇರಿದ ತೇಜಸ್ಸು, ಅಲ್ಲಿಂದ ಶಿಶುವಾಗಿ ಹುಟ್ಟುವಾಗ ಜನನಕ್ರಮವು ವ್ಯತ್ಯಸ್ತವಾಗುವುದು. ಈ ಕ್ರಮವನ್ನನುಸರಿಸಿ, ದಿತಿಯ ಗರ್ಭದಿಂದ ಮೊದಲು ಹುಟ್ಟಿದವನು ಹಿರಣ್ಯಾಕ್ಷನೆಂದೂ, ಕಶ್ಯಪನ ಶರೀರದಿಂದ ಮೊದಲು ಜನಿಸಿದವನು ಹಿರಣ್ಯಕಶಿಪುವೆಂದೂ ತಿಳಿಯಬೇಕು.

ಬ್ಬಿನಿಂದ ಯುದ್ಧನಾಡಬೇಕೆಂದು ಆಸೆಪಟ್ಟು, ತನ್ನೊಡನೆ ಸಮವಾಗಿ ಯುದ್ಧಕ್ಕೆ ನಿಲ್ಲತಕ್ಕವರನ್ನು ಭೂಮಿಯಲ್ಲಿ ಕಾಣದೆ ಸ್ವರ್ಗಕ್ಕೆ ಹೋದನು. ಅಸಾಧ್ಯವೇಗವುಳ್ಳ ಈ ಹಿರಣ್ಯಾಕ್ಷನು, ಕೊರಲಿಗೆ ಒಂದು ದೊಡ್ಡ ಹೂವಿನ ದಂಡೆಯನ್ನು ಹಾಕಿಕೊಂಡು, ಮಹಾಗದೆಯನ್ನು ಕೈಯಲ್ಲಿ ಹಿಡಿದು, ಚಿನ್ನದ ಕಾಲಂದುಗೆಗಳ ಘಲಘಲಧ್ವನಿಯೊಡನೆ, ವೇಗದಿಂದ ನಿರ್ಭಯವಾಗಿ ಮುಂದೆ ಬರುವುದನ್ನು ನೋಡಿ, ದೇವತೆಗಳೆಲ್ಲರಿಗೂ ಮನಸ್ಸಿನಲ್ಲಿ ಭಯವು ಹುಟ್ಟಿತು. ಹಿರಣ್ಯಾಕ್ಷನಿಗಾದರೋ ಸಹಜವಾಗಿಯೇ ಮನಸ್ಸಿನಲ್ಲಿ ಹುಟ್ಟಿರುವ ಗರ್ವವೊಂದು! ದೇಹಬಲವೊಂದು! ವರಬಲವೊಂದು! ಇವುಗಳಿಂದ ಮೈನುರಿಯುವಷ್ಟು ಮದೋದ್ರೇಕವುಂಟಾಯಿತು. ಅವನನ್ನು ತಡೆಯುವ ವರೊಬ್ಬರಾದರೂ ಇರಲಿಲ್ಲ. ತನಗೆ ಯಾರೂ ಇದಿರಿಲ್ಲದೆ ನಿರ್ಭಯವಾಗಿ ಬರುತ್ತಿರುವ ಆ ಹಿರಣ್ಯಾಕ್ಷನನ್ನು ನೋಡಿದೊಡನೆ, ದೇವತೆಗಳು ಗರುಡನನ್ನು ಕಂಡ ಹಾವುಗಳಂತೆ ಸಂದುಗೊಂದುಗಳಲ್ಲಿ ಅಡಗಿಕೊಂಡಿದ್ದರು. ಹಿರಣ್ಯಾಕ್ಷನು ಅಲ್ಲಿ ಇಂದ್ರಾದಿದೇವತೆಗಳೆಲ್ಲರೂ ತನ್ನ ವೀರ್ಯಕ್ಕೆ ಹೆದರಿ ಓಡಿ ಹೋದುದನ್ನು ನೋಡಿ, ಮತ್ತಷ್ಟು ಗರ್ವಿತನಾಗಿ, ತನ್ನಿದಿರಿಗೆ ನಿಲ್ಲುವ ವರೊಬ್ಬರನ್ನೂ ಕಾಣದುದಕ್ಕಾಗಿ, ಭಯಂಕರವಾದ ಒಂದು ಸಿಂಹನಾದವನ್ನುಮಾಡಿ, ಹಿಂತಿರುಗಿ, ಆಲ್ಲಲ್ಲಿ ತನಗೆ ತೋರಿದಂತೆ ಪ್ರಾಣಿಹಿಂಸೆಗಳಿಂದ ವಿಹರಿಸುತ್ತ, ಕೊಳದಲ್ಲಿಳಿಯುವ ಮದದಾನೆಯಂತೆ ಸಮುದ್ರದಲ್ಲಿ ಪ್ರವೇಶಿಸಿ, ಪಾತಾಳದ ಕಡೆಗೆ ಹೊರಟನು. ದಾರಿಯಲ್ಲಿ ವರುಣನ ಸೈನಿಕರೂ, ಇತರ ಜಲಜಂತುಗಳೂ ಅವನನ್ನು ನೋಡಿ ಭಯಪಟ್ಟು ಚಿಂತಾಕುಲರಾಗಿ ಮುಂದೇನುಮಾಡಬೇಕೆಂದು ತೋರದೆ, ತಮಗೆತಾವೇ ಮೈಮರೆಸಿಕೊಂಡು ಅಲ್ಲಲ್ಲಿ ಅಡಗಿದರು. ಇದನ್ನು ನೋಡಿ ಹಿರಣ್ಯಾಕ್ಷನಿಗೆ ಮತ್ತಷ್ಟು ಹೆಮ್ಮೆಯುಂಟಾಯಿತು. ಆ ಸಮುದ್ರಜಲದಲ್ಲಿಯೇ ನಿರಾತಂಕವಾಗಿ ಅನೇಕಸಂವತ್ಸರಗಳವರೆಗೆ ಸುತ್ತುತ್ತಿದ್ದನು. ಬಿರುಗಾಳಿಯಿಂದುಬ್ಬಿಬರುವ ಆ ಸಮುದ್ರದ ಅಲೆಗಳೆಲ್ಲವನ್ನೂ ತನ್ನ ಉಕ್ಕಿನ ಗದಾದಂಡದಿಂದ ಅಪ್ಪಳಿಸುತ್ತ, ಮುಂದೆಮುಂದೆ ಹೋಗಿ, ಕೊನೆಗೆ ವರುಣನ ರಾಜಧಾನಿಯಾದ ವಿಭಾವರೀಪಟ್ಟಣವನ್ನು ಪ್ರವೇಶಿಸಿದನು. ಅಲ್ಲಿ ಜಲಾಧಿಪತಿಯಾದ ವರುಣನನ್ನು

ನೋಡಿ, ಮಂದಹಾಸದಿಂದ ನಗುತ್ತ, ಅವನಲ್ಲಿ ಬಹಳ ನೈಜ್ಯವನ್ನು ತೋರಿಸುವಂತೆ ತಲೆಬಗ್ಗಿ ನಮಸ್ಕರಿಸಿ, ''ಓ ಜಲಾಧಿಪತೀ! ನನಗೆ ಯುದ್ಧಭಿಕ್ಷೆಯನ್ನು ನೀಡಬೇಕು! ನೀನು ಲೋಕಪಾಲಕನೆಂದು ಪ್ರಸಿದ್ಧಕೀರ್ತಿಯನ್ನು ಹೊಂದಿದವನಲ್ಲವೆ? ಇದಲ್ಲದೆ ಪೂರ್ವದಲ್ಲಿ ನೀನು ಅನೇಕದೇವದಾನವರನ್ನು ಜಯಿಸಿ, ದೊಡ್ಡ ರಾಜಸೂಯಯಾಗವನ್ನು ನಡೆಸಿದ ಮಹಾವೀರನೆಂದೂ ಕೇಳಿರುವೆನು! ಆದುದರಿಂದ ಈಗ ನನ್ನೊಡನೆ ಯುದ್ಧವನ್ನು ಮಾಡಿ, ನನಗೂ ನಿನ್ನ ಪರಾಕ್ರಮವನ್ನು ತೋರಿಸಿ ಸಂತೋಷಪಡಿಸಬೇಕು." ಎಂದನು. ಈ ಮಾತನ್ನು ಕೇಳಿದಾಗ ವರುಣನಿಗೆ, ದುರಾತ್ಮನಾದ ಆ ರಾಕ್ಷಸನ ಮಹಾಗರ್ವವನ್ನೂ, ಅವನ ಕೊಬ್ಬನ್ನೂ ನೋಡಿ, ತಡೆಯಲಾರದ ಕೋಪವುಂಟಾಯಿತು. ಹಾಗಿದ್ದರೂ ಅದು ಸಮಯವಲ್ಲವೆಂದು ಆ ಕೋಪವನ್ನು ತನ್ನಲ್ಲೆಯೇ ಅಡಗಿಸಿಕೊಂಡು, ಅವನಿಗಿಂತಲೂ ಹೆಚ್ಚಾದ ವಿನಯವನ್ನು ನಟಿಸುತ್ತ ಹೀಗೆಂದು ಹೇಳುವನು. ''ಎಲೈ ದಾನವಸಾರ್ವಭೌಮನೆ! ನಾನು ಪೂರ್ವದಲ್ಲಿ ಯಾವಾಗಲೋ ಒಮ್ಮೆ ಒಬ್ಬಿಬ್ಬರನ್ನು ಜಯಿಸಿ, ರಾಜಸೂಯಯಾಗವನ್ನು ನಡೆಸಿದುದುಂಟು! ಈಗ ಅಶಕ್ತನಾಗಿ ಯುದ್ಧದ ಪ್ರಸಕ್ತಿಯನ್ನೇ ಬಿಟ್ಟಿರುವೆನು. ವೀರಾಗ್ರಣಿಯಾದ ನೀನೆಲ್ಲಿ? ಅತಿದುರ್ಬಲನಾದ ನಾನೆಲ್ಲಿ? ನಾನು ನಿನ್ನೊಡನೆ ಎಂದಿಗೂ ಯುದ್ಧಮಾಡಲಾರೆನು. ಆದರೆ ನಿನಗೆ ಸಮಾನನಾದ ಬೇರೊಬ್ಬ ವೀರನನ್ನು ತೋರಿಸಿಕೊಡುವೆನು ಅವನು ಮಹಾಬಲಾಢ್ಯನು! ಯುದ್ಧದಲ್ಲಿ ಬಹಳ ಆಸೆಯುಳ್ಳವನು! ನಿನ್ನಂತಹ ವೀರರನ್ನು ಕಂಡರೆ ಬಹಳಸಂತೋಷಪಡುವನು! ಪುರುಷರಲ್ಲಿ ತಾನೇ ಮೇಲೆನಿಸಿಕೊಂಡಿರುವನು. ಅವನೊಬ್ಬನನ್ನು ಬಿಟ್ಟರೆ, ಬೇರೊಬ್ಬರೂ ನಿನ್ನೊಡನೆ ಹೋರಾಡಲಾರರು. ಅವನು ವೈಕುಂಠದಲ್ಲಿರುವನು. ನೀನು ಅಲ್ಲಿಗೆ ಸೋದರೆ, ನಿನ್ನ ಕೋರಿಕೆಯನ್ನು ತೀರಿಸಿಕೊಳ್ಳಬಹುದು ರಾಕ್ಷಸೇಂದ್ರಾ! ಅವನು ನಿಮ್ಮಂತವರನೇಕರನ್ನು ಕೊಲ್ಲುವುದಕ್ಕಾಗಿಯೇ ಬೇರೆಬೇರೆ ರೂಪಗಳನ್ನೂ ಧರಿಸುತ್ತಿರುವನು. ಅಲ್ಲಿಗೆ ಹೋದಪಕ್ಷದಲ್ಲಿ ನೀನು ಬದುಕಿಬರುವುದೇ ಸಂದೇಹವೆಂದೂ ನನಗೆ ತೋರಿರುವುದು. ನೀನು ಆ ವೀರನೊಡನೆ ಯುದ್ಧಕ್ಕೆ ನಿಂತರೆ, ಅವನು ರಣರಂಗದಲ್ಲಿ ನಿನ್ನನ್ನು ಸೀಳಿ ನಿನ್ನ

ಮಾಂಸದಿಂದ ನಾಯಿನರಿಗಳಿಗೆ ಔತನವನ್ನು ಮಾಡದೆ ಬಿಡಲಾರನು" ಎಂದನು. ಇಲ್ಲಿಗೆ ಹದಿನೇಳನೆಯ ಅಧ್ಯಾಯವು.

ಹಿರಣ್ಯಾಕ್ಷನು ವರುಣನಮಾತಿನಮೇಲೆ ಶ್ರೀಮಹಾವಿಷ್ಣುವನ್ನು ಹುಡುಕುತ್ತ ಪೊರಟುದು. ವರಾಹಹಿರಣ್ಯಾಕ್ಷ ಯುದ್ಧವು.

ವಿದುರಾ! ಕೇಳು. ವರುಣನು ಹೇಳಿದ ಈ ಮಾತನ್ನು ಕೇಳಿ ಹಿರಣ್ಯಾಕ್ಷನು ಬಹಳ ಉತ್ಸಾಹಗೊಂಡನು. ವರುಣನು ವಿಷ್ಣುವಿನಿಂದ ತನಗೆ ಸಾವು ನಿಶ್ಚಯವೆಂಬ ಮಾತನ್ನು ಸೂಚಿಸಿದ್ದರೂ, ಅದನ್ನೂ ಲಕ್ಷ್ಯಮಾಡದೆ, ಮದೋದ್ರಿಕ್ತನಾಗಿ ವೈಕುಂಠವ ಕಡೆಗೆ ಹೊರಟನು. ಇಷ್ಟರಲ್ಲಿ ನಾರದನು ದಾರಿಯಲ್ಲಿ ಇವನನ್ನು ಸಂಧಿಸಿ, ವಿಷ್ಣುವು ವೈಕುಂಠದಿಂದ ರಸಾತಲಕ್ಕೆ ಹೋಗಿರುವುದಾಗಿ ಸೂಚಿಸಲು, ಒಡನೆಯೇ ಅತಿವೇಗದಿಂದ ಪಾತಾಳದಕಡೆಗೆ ತಿರುಗಿ ರಸಾತಲವನ್ನು ಪ್ರವೇಶಿಸಿದನು. ಅಲ್ಲಿ ಪರ್ವತದಂತೆ ಮಹೋನ್ನತನಾಗಿ ತನ್ನ ದಂಷ್ಟ್ರಾಗ್ರದಿಂದ ಭೂಮಿಯನ್ನು ಮೀಟಿ ಮೇಲಕ್ಕೆತ್ತುತ್ತ, ತನ್ನ ಕೆಂಪಾದ ಕಣ್ಣುಗಳ ಕಾಂತಿಯಿಂದಲೇ ಶತ್ರುತೇಜಸ್ಸನ್ನು ತಗ್ಗಿಸುವಂತೆ ನಿಂತಿರುವ ವರಾಹರೂಪಿಯಾದ ಹರಿಯನ್ನು ಕಂಡು, ಅಟ್ಟಹಾಸದಿಂದ ನಗುತ್ತ, ''ಓಹೋ! ಇದೇನಿದು! ಕಾಡಿನಲ್ಲಿರಬೇಕಾದ ಹಂದಿಯು ಇಲ್ಲಿಗೆ ಬಂದುದು ಹೇಗೆ"?ಎಂದು ಮಂದಹಾಸದೊಡನೆ ಮುಂದೆ ಬಂದು, ಆ ವರಾಹವನ್ನು ''ಓ ಬುದ್ಧಿಯಿಲ್ಲದ ಕಾಡುಮೃಗವೆ! ಇದೇನಿದು? ನೀನು ಕೋರೆಯಲ್ಲಿ ಕಿತ್ತಿರುವ ಭೂಮಿಯನ್ನು ಅಲ್ಲಿಯೇ ಇಡು! ಇದೋ! ನನ್ನ ಸಮೀಪಕ್ಕೆ ಬಂದು ನನ್ನೊಡನೆ ಯುದ್ಧಮಾಡು! ಈ ಭೂಮಿಯನ್ನು ಬ್ರಹ್ಮನು ಪಾತಾಳಲೋಕದಲ್ಲಿರುವವರಿಗೆ ಕೊಟ್ಟು ಬಿಟ್ಟಿರುವನು. ಇದು ರಾಕ್ಷಸರಾದ ನಮಗೆ ಸೇರತಕ್ಕುದು. ಹೀಗಿರುವಾಗಲೂ ನೀನು ನನ್ನ ಕಣ್ಣ ಮುಂದೆಯೇ ಕಳ್ಳತನದಿಂದ ಅದನ್ನು ಸಾಗಿಸಿಕೊಂಡು ಹೋಗುವೆಯಾ? ಈ ಭೂಮಿಯನ್ನೆತ್ತಿಕೊಂಡು ಹೋಗುವುದರಿಂದ ಎಂದಿಗೂ ನಿನಗೆ ಕ್ಷೇಮವುಂಟಾಗದು! ಎಲೆ ಸುರಾಧಮಾ! ಏನೋ ಮೊಸಕ್ಕಾಗಿಯೇ ಈ ಆಕಾರವನ್ನು ತಾಳಿರುವಂತಿದೆ. ಹಿಂದೆಯೂ ನೀನು ಇದೇವಿಧವಾದ ನಿನ್ನ ಮಾ

ಯಾಬಲದಿಂದಲೇ ನಮ್ಮ ಕಡೆಯವರನೇಕರನ್ನು ಸಂಹರಿಸಿರುವೆ. ದೇವತೆಗಳು ನಮ್ಮ ನಾಶಕ್ಕಾಗಿಯೇ ನಿನಗೆ ಈ ರೂಪವನ್ನು ಕೊಟ್ಟು ಕಳುಹಿಸಿರಬಹುದು? ಅತ್ಯಲ್ಪಬಲವುಳ್ಳವನಾದುದರಿಂದಲೇ ನೀನು ಹೀಗೆ ವೇಷಾಂತರಗಳಿಂದ ಬರುವಹಾಗಿದೆ! ಆದರೇನು? ಇರಲಿ! ಇದೋ ನೋಡು! ಈಗಲೇ ಈ ಗದಾಪಂಡದಿಂದ ನಿನ್ನನ್ನು ಬಡಿದು, ನಮ್ಮ ಬಂಧುಮಿತ್ರರಿಗೆ ಕಣ್ಣೀರನ್ನೊರೆಸುವೆನು. ಇದೋ! ಒಂದೇಪ್ರಹಾರಕ್ಕೆ ನನ್ನ ಗದೆಯಿಂದ ನಿನ್ನನ್ನು ಕೊಂದು ನಿನ್ನತಲೆಯನ್ನು ಮುರಿಯುವೆನು ನೋಡು! ಇದುವರೆಗೆ ನಿನ್ನನ್ನಾಶ್ರಯಿಸಿಕೊಂಡು, ನಿನಗೆ ಬಲಿಗಳನ್ನು ತಂದೊಪ್ಪಿಸುತಿದ್ದ ಋಷಿಗಳೂ, ದೇವತೆಗಳೂ ಇನ್ನು ಮೇಲೆ ದಿಕ್ಕಿಲ್ಲದೆ ಸಾಯುವುದರಲ್ಲಿ ಸಂದೇಹವಿಲ್ಲ" ಎಂದನು. ರಾಕ್ಷಸನು ಈ ಮಾತನ್ನಾಡಲು, ಆ ವರಾಹಮೂರ್ತಿಗೆ, ಅವನ ಕ್ರೂರವಾಕ್ಯಗಳೆಂಬ ಶೂಲಗಳು ಮೈಗೆ ನಾಟಿದಂತಾಗಿ, ಸಹಿಸಲಾರದ ಕೋಪವುಂಟಾಯಿತು. ಹೀಗೆ ಕೋಪೋದ್ರಿಕ್ತನಾದ ಆದಿವರಾಹನು, ಮಡುನಿನಲ್ಲಿ ಮೊಸಳೆಯ ಕೈಗೆ ಸಿಕ್ಕಿ ಬಿದ್ದ ಮಹಾಗಜವು, ತನ್ನ ಹೆಣ್ಣಾನೆಯನ್ನೂ ಹಿಂದಿಕ್ಕಿಕೊಂಡು ಕೋಪದಿಂದ ಹೆಣಗಾಡುವಂತೆ, ತನ್ನ ದಂಷ್ಟ್ರಾಗ್ರದಲ್ಲಿ ಭಯದಿಂದ ನಡುಗುತ್ತಿರುವ ಭೂದೇವಿಯನ್ನು ದೃಢವಾಗಿ ಹಿಡಿದು, ಆ ಜಲಮಧ್ಯದಿಂದ ಮೇಲಕ್ಕೆದ್ದು ಬರುತಿದ್ದನು. ಹೀಗೆ ವೇಗದಿಂದ ಮೇಲಕ್ಕೆದ್ದು ಬರುತ್ತಿರುವ ಆ ವರಾಹಮೂರ್ತಿಯನ್ನು, ಹಿರಣ್ಯಾಕ್ಷನೂ ಕೂಡ ಮದದಾನೆಯನ್ನು ಬೆನ್ನಟ್ಟಿ ಬರುವ ಮೊಸಳೆಯಂತೆ ಭಯಂಕರವಾದ ಕೋರೆ ದಾಡೆಗಳೊಡನೆ ಬೆನ್ನಟ್ಟಿ ಸಿಡಿಲಿನಂತೆ ಆರ್ಭಟಿಸಿ, "ಎಲೆ ದುರಾತ್ಮಾ! ನಾಚಿಕೆಯಿಲ್ಲದೆ ಭಯಪಟ್ಟು ಪಲಾಯನಮಾಡುವೆಯಾ? ನಿನ್ನಂತಹ ನೀಚಜಂತುಗಳು ಲೋಕಾಪವಾದಕ್ಕೂ ಅಂಜದೆ ಓಡಿ ಹೋಗುವುದೇನೋ ಸಹಜವೆ?" ಎಂದು ಮೂದಲಿಸಿ ಮುಂದೆ ಬರುತ್ತಿದ್ದನು. ಈ ರಾಕ್ಷಸನ ಮಾತನ್ನು ಕೇಳಿ ವರಾಹಮೂರ್ತಿಗೂ ಮೇಲೆಮೇಲೆ ಕೋಪವು ಉಕ್ಕಿಬರುತಿತ್ತು. ತನ್ನ ದಂಷ್ಟ್ರಾಗ್ರದಲ್ಲಿ ಧರಿಸಿದ್ದ ಭೂಮಿಯನ್ನು ಆ ಮಹಾಸಮುದ್ರದಮೇಲೆಯೇ ತನ್ನ ಆಧಾರಶಕ್ತಿಯಿಂದ ನಿಲ್ಲಿಸಿಬಿಟ್ಟನು. ಈ ಅದ್ಭುತ ವ್ಯಾಪಾರವನ್ನು ನೋಡಿ ಬ್ರಹ್ಮಾದಿದೇವತೆಗಳೆಲ್ಲರೂ ಆಶ್ಚರ್ಯದಿಂದಲೂ,

ಸಂತೋಷದಿಂದಲೂ ಆ ಆದಿವರಾಹನನ್ನು ಕೊಂಡಾಡುತಿದ್ದರು. ಹಿರ ಣ್ಯಾಕ್ಷನು ನೋಡುತಿದ್ದಹಾಗೆಯೇ ಆಕಾಶದಿಂದ ಪುಷ್ಪವರ್ಷವನ್ನೂ ಕ ರೆದರು. ಹೀಗೆ ದೇವತೆಗಳೆಲ್ಲರೂ ನಾನಾವಿಕ್ಕುಗಳಿಂದ ಸ್ತೋತ್ರಮಾ ಡುತ್ತಿರಲು, ಭಗವಂತನು ಮರ್ಮಭೇದಕಗಳಾದ ಮಾತಿನಿಂದ ತನ್ನನ್ನು ಬೆನ್ನಟ್ಟಿ ಬರುತಿದ್ದ ಗದಾಪಾಣಿಯಾದ ಹಿರಣ್ಯಾಕ್ಷನನ್ನು ನೋಡಿ, ಮಂದ ಹಾಸದಿಂದ ನಗುತ್ತ "ಎಲೆ ರಾಕ್ಷಸಾ! ನೀನು ನನ್ನನ್ನು ನೋಡಿ ಕಾಡು ಮೃಗವೆಂದು ಹಾಸ್ಯಮಾಡಿದೆಯಲ್ಲವೆ? ಹೌದು! ನಾವು ಕಾಡುಮೃಗಗಳೆಂ ಬುದೇನೋ ವಾಸ್ತವವು! ನಿಮ್ಮಂತಹ ನಾಯಿಗಳನ್ನು ಹುಡುಕಿ ಕೊಲ್ಲುವು ದಕ್ಕಾಗಿಯೇ, ನಾವು ಈ ಮೃಗರೂಪವನ್ನು ಧರಿಸಿರುವೆವು. ಎಲೆ ದುರಾ ತ್ಮಾ! ಕೆಲಸಕ್ಕೆ ಬಾರದ ಈ ಕೂಗಾಟಗಳಿಂದ ಫಲವಿಲ್ಲ! ನಿಜವಾದ ವೀ ರ್ಯವುಳ್ಳವರು ಯಾವಾಗಲೂ ಇಂತಹ ಗರ್ವೋಕ್ತಿಗಳನ್ನು ಬಾಯಿಂದ ನು ಡಿಯಲಾರರು. ಮೃತ್ಯುಪಾಶದಲ್ಲಿ ಸಿಕ್ಕಿ ಬಿದ್ದಿರುವ ನೀನು, ಈ ಆತ್ಮಸ್ತು ತಿಯನ್ನು ಮಾಡಿಕೊಂಡಮಾತ್ರಕ್ಕೆ ಇದನ್ನು ವೀರರೊಬ್ಬರೂ ಮೆಚ್ ಲಾರರು! ಆದು ಹಾಗಿರಲಿ! ನೀನೇನು ಹೇಳಿದೆ ? ಪಾತಾಳವಾಸಿಗಳಿಗಾಗಿ ಬ್ರಹ್ಮನು ನಿರ್ಮಿಸಿಕೊಟ್ಟ ಈ ಭೂಮಿಯನ್ನು 'ನಾವು, ಕದ್ದುಕೊಂಡು ಭಯದಿಂದೋಡಿ ಬಂದೆವೆಂದೂ ನಾಚಿಕೆಯಿಲ್ಲದವರೆಂದೂ ಹೇಳಿಬೆಯ ಲ್ಲವೆ? ಹಾಗೆಯೇ ಆಗಲಿ! ಪಾತಾಳವಾಸಿಗಳಾದ ನಿಮ್ಮ ಸ್ವತ್ತನ್ನೇ ನಾವು ಅಪಹರಿಸಿಕೊಂಡು ಬರುತ್ತಿರುವೆವು. ನಾವು ನಾಚಿಕೆಯಿಲ್ಲದ ವರು ! ನಿನ್ನ ಗದೆಗೆ ಭಯಪಟ್ಟೇ ಓಡಿಬರುತ್ತಿರುವೆವು. ಮಹಾಬ ಲಾಢ್ಯನಾದ ನಿನ್ನೊಡನೆ ವೈರವನ್ನು ಬೆಳೆಸಿ, ನಾವು ಮತ್ತೆಲ್ಲಿಗೆ ಹೋದರೆ ತಾನೇ ಬದುಕಬಲ್ಲೆವು! ನೀನು ಹೇಳಿದಂತೆ ನಾವೇನೋ ಅಲ್ಪಬಲವುಳ್ಳವ ರೇ ವಾಸ್ತವವು! ನನಗೆ ನಿಮ್ಮಂತಹ ಬಲಾಢ್ಯರೊಡನೆ ಯುದ್ಧಮಾಡುವ ಷ್ಟು ಬಲವಿಲ್ಲದಿದ್ದರೂ, ನಮ್ಮಿಂದಾದಷ್ಟು ಶಕ್ತಿಯನ್ನು ಪಯೋಗಿಸಿ, ನಿ ನ್ನೊಡನೆ ಯುದ್ಧಮಾಡಿಯೇ ತೀರಬೇಕಲ್ಲವೆ?" ಎಲೆ ರಾಕ್ಷಸಾ ! ಪದಾತಿಗ ಳಲ್ಲಿ ಮೇಲೆನಿಸಿಕೊಂಡ ನೀನೂಕೂಡ ಆದಷ್ಟು ತೀಕ್ಷ್ಣಬುದ್ಧಿಯಲ್ಲಿ ನಮ್ಮನ್ನು ಜಯಿಸುವುದಕ್ಕೆ ಯತ್ನಿಸು! ನಿರ್ಭಯವಾಗಿ ಮುಂದೆ ಬಂದುನಿಲ್ಲು ! ನಮ್ಮ

ನ್ನುಕೊಂದು ನಿನ್ನ ಬಂಧುಮಿತ್ರರ ಕಣ್ಣೀರನ್ನೊರಸುವನಾಗು ! ನೀನು ವೀರನಾಗಿದ್ದರೆ ಹಾಗೆಯೇ ನಡೆಸಬೇಕು! ಅಡಿದ ಮಾತನ್ನು ನಡೆಸದಮೇಲೆ ಮನುಷ್ಯನಿಗೆ ಗೌರವವೆಲ್ಲಿ?"ಎಂದನು. ವರಾಹಮೂರ್ತಿಯು ಹೇಳಿದ ಈ ವ್ಯಂಗ್ಯವಾಕ್ಯಗಳು ಆ ರಾಕ್ಷಸನ ಕಿವಿಯಲ್ಲಿ ಶೂಲದಂತೆ ನಾಟಿದುವು. ಕಾಲಿಂದ ಮೆಟ್ಟಿದ ಕಾಳಸರ್ಪದಂತೆ ಆ ದುಷ್ಟರಾಕ್ಷಸನು ಕೋಪದಿಂದ ಬುಸುಗುಟ್ಟುತಿದ್ದನು. ತಡೆಯಲಾರದ ಕೋಪದಿಂದ ಅವನ ಕಣ್ಣುಗಳು ಉರಿಯನ್ನು ಕಾರುತಿದ್ದುವು. ಅವನ ಇಂದ್ರಿಯಗಳೆಲ್ಲವೂ ಕಲಗಿಹೋದುವು. ಒಡನೆಯೇ ತನ್ನ ಮಹಾಗದೆಯನ್ನು ಗಿರಗಿರನೆ ತಿರುಗಿಸಿ, ಆ ವರಾಹದ ಎದೆಗೆ ಗುರಿಯಿಟ್ಟು, ಬೀಸಿದನು. ಇಷ್ಟರೊಳಗಾಗಿ ವರಾಹಮೂರ್ತಿಯು, ಥಟ್ಟನೆ ಅಡ್ಡಲಾಗಿ ತಿರುಗಿ, ಯೋಗಸಿದ್ಧನು ಮೃತ್ಯುವನ್ನು ತಪ್ಪಿಸಿಕೊಳ್ಳುವಂತೆ ಆದರ ಪ್ರಹಾರವನ್ನು ತಪ್ಪಿಸಿಕೊಂಡನು. ಇಷ್ಟರಲ್ಲಿ ಹಿರಣ್ಯಾಕ್ಷನು, ಮತ್ತೊಮ್ಮೆ ಗದೆಯನ್ನು ತಿರುಗಿಸುತ್ತ ಮುಂಬೆ ಬರುತ್ತಿರಲು ,ವರಾಹಮೂರ್ತಿಯು ಕೋಪದಿಂದ ತುಟಿಗಳನ್ನು ಕಚ್ಚುತ್ತ, ತಾನು ಹಿಡಿದಿದ್ದ ಗದೆಯಿಂದ ಆ ರಾಕ್ಷಸನ ಬಲಭುಜಕ್ಕೆ ಗುರಿಯಿಟ್ಟುಹೊಡೆದನು ಆದರೆ ಗದಾಯುದ್ಧದಲ್ಲಿ ಜತುರನಾದ ರಾಕ್ಷಸನು, ತನ್ನ ಗದೆಯನ್ನು ಅಡ್ಡಲಾಗಿ ಹಿಡಿದು, ಆ ಪ್ರಹಾರವನ್ನೂ ತಪ್ಪಿಸಿಕೊಂಡನು ಅವರಿಬ್ಬರೂ ಒಬ್ಬರನ್ನೊಬ್ಬರು ಕ್ರೂರವಾಗಿ ಹೊಡೆದಾಡುತಿದ್ದರು.ಹೀಗೆ ಒಬ್ಬರಮೇಲೊಬ್ಬರು ಸ್ವಲ್ಪ ಸ್ಥಳವಿಂದ ಹೋರಾಡುತ್ತ, ಗದೆಯಿಂದಪ್ಪಳಿಸುನಾಗ, ಮೈಗಾಯದಿಂದ ಹೊರಟ ರಕ್ತದ ವಾಸನೆಯು ಮೂಗಿಗೆ ಏರದಹಾಗೆಲ್ಲಾ,ಇಬ್ಬರಿಗೂ ಮೇಲೆ ಮೇಲೆ ಕೋಪವೂ ಹೆಚ್ಚಿ ಬರುತಿತ್ತು.ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ, ಆ ವರಾಹರಾಕ್ಷಸರಿಬ್ಬರೂ ವಿಚಿತ್ರಗತಿಗಳಿಂದ ತಿರುಗಿತಿರುಗಿ, ಎರಡು ಮಹಾವೃಷಭಗಳಂತೆ ಯುದ್ಧಮಾಡುತ್ತ ಬಂದರು. ಮಾಯಾವರಾಹಸ್ವರೂಪವನ್ನು ಕೈಕೊಂಡಿದ್ದ ಯಜ್ಞಮೂರ್ತಿಯಾದ ಆ ಮಹಾವಿಷ್ಣುವಿಗೂ, ಹಿರಣ್ಯಾಕ್ಷನಿಗೂ ನಡೆಯುತಿದ್ದ ಈ ಮಹಾಯುದ್ಧವನ್ನು ನೋಡಬೇಕೆಂಬ ಕುತೂಹಲದಿಂದ ಜತುರ್ಮುಖನು, ತನ್ನ ಮಕ್ಕಳಾದ ಮರೀಚಿ ಮೊದಲಾದವರೊಡನೆ ಅಲ್ಲಿಗೆ ಬಂದು ಸೇರಿದನು. ಆ ಹಿರಣ್ಯಾಕ್ಷನ ಪರಾ

ಕ್ರಮವಾದರೋ ಸ್ವಲ್ಪಮಾತ್ರವೂ ತಗ್ಗದೆ ಮೇಲೆಮೇಲೆ ಹೆಚ್ಚುತಿತ್ತು. ಭಗವಂತನು ಪ್ರಯೋಗಿಸಿದ ಒಂದೊಂದು ಗದಾಪ್ರಹಾರವೂ ಅವನಮೇಲೆ ಬಿಳದೆ ತಪ್ಪಿಹೋಗುತಿದ್ದಿತು. ಆ ರಾಕ್ಷಸನೂ ನಿರ್ಭಯವಾಗಿ ಮೇಲೆ ಬಿದ್ದು ಹೆಮ್ಮೆಯಿಂದುಕ್ಕುತಿದ್ದನು. ಅವನ ಪರಾಕ್ರಮವು ತಡೆಯಲ ಸಾಧ್ಯವಾಯಿತು. ಈ ಸ್ಥಿತಿಯನ್ನು ನೋಡಿ, ದೇವಾಧಿಪತಿಯಾದ ಬ್ರಹ್ಮನು, ಅದಿವರಾಹರೂಪಿಯಾದ ಭಗವಂತನನ್ನು ಹೀಗೆಂದು ಪ್ರಾರ್ಥಿಸತೊಡಗಿದನು ''ಓ ದೇವಾ! ಈ ರಾಕ್ಷಸನಾದರೋ ಬಹಳ ದುರಾತ್ಮನು! ನಿನ್ನನ್ನೇ ನಂಬಿ ಬದುಕುತ್ತಿರುವ ಬ್ರಾಹ್ಮಣರನ್ನೂ, ದೇವತೆಗಳನ್ನೂ ನಿರಪರಾಧಿಗಳಾದ ಇತರಭೂತಗಳನ್ನೂ ಕರುಣೆಯಿಲ್ಲದೆ ಕೊಲ್ಲುತ್ತಿರುವನು. ಲೋಕವೆಲ್ಲವನ್ನೂ ಹೆದರಿಸುತ್ತಿರುವನು. ನಾನು ಕೊಟ್ಟ ವರಬಲದಿಂದಲೇ ಬಹಳವಾಗಿ ಕೊಬ್ಬಿ ಲೋಕವನ್ನು ಹಿಂಸಿಸುತ್ತಿರುವನು. ತನಗೆ ಜೋಡಿಯಾರೂ ಇದಿರಿಲ್ಲವೆಂಬ ಮೈಕೊಬ್ಬಿನಿಂದ ಸಿಕ್ಕಿದವರನ್ನೆಲ್ಲಾ ಯಃಕ್ಕಶ್ಚಿತ್ಕಕ್ಕೆ ಕರೆಯುತ್ತ, ಲೋಕವನ್ನು ಸುತ್ತುತ್ತಿರುವನು. ಲೋಕಕಂಟಕನಾದ ಈತನು, ಬಹಳ ಮಾಯಾವಿಯಾಗಿ ತನ್ನ ವೀರ್ಯಕ್ಕೆ ಎಲ್ಲಿಯೂ ತಡೆಯಿಲ್ಲವೆಂದು ಬೀಗಿ ಬೆರೆಯುತ್ತಿರುವನು. ಅತಿಕ್ರೂರಾತ್ಮನಾದ ಇವನೊಡನೆ ಯುದ್ಧಮಾಡುವಾಗಲೂ ನೀನು ಇಷ್ಟು ಅಲಕ್ಷ್ಯಭಾವದಿಂದ ಮಕ್ಕಳಾಟಿಕೆಯೆನ್ನಾಡುತ್ತಿರುವೆಯೆಲ್ಲಾ! ಈ ದುರಾತ್ಮನೊಡನೆ ಹೀಗೆ ಆಟವಾಡುತ್ತಿರುವುದು, ಹಾವಿನೊಡನೆ ಸರಸವಾಡುವಂತೆಯೇಹೊರತು ಬೇರೆಯಲ್ಲ! ಇನ್ನು ನೀನು ತಡಮಾಡುತ್ತಿರುವುದು ಸರಿಯಲ್ಲ. ಇದೋ! ಈಗಾಗಲೇ ಸಂಧ್ಯಾಕಾಲವು ಸಮೀಪಿಸುತ್ತಿರುವುದು. ಈ ಕಾಲದಲ್ಲಿ ರಾಕ್ಷಸರಿಗೆ ಬಲವು ಹೆಚ್ಚು! ಆದುದರಿಂದ ನೀನು ಇವನೊಡನೆ ಈ ಮಕ್ಕಳಾಟಿಕೆಯನ್ನು ಬಿಟ್ಟು, ನಿನ್ನ ಮಾಯಾಬಲವನ್ನು ಹಿಡಿದು, ಸಾಯಂಕಾಲಕ್ಕೆಮೊದಲೇ ಇವನನ್ನು ಕೊಂದು ಬಿಡಬೇಕು! ಆದರಿಂಪಾಜೆಗೆ ಇವನನ್ನು ಕೊಲ್ಲುವುದು ದುಸ್ಸಾಧ್ಯವಾಗುವುದು. ಸಂಧ್ಯಾಕಾಲವೆಂಬುದು ಲೋಕಕ್ಕೆ ಬಹಳ ಭಯಂಕರವಾದುದು. ಆದುದರಿಂದ ಎಲೈ ಸರ್ವಾತ್ಮಕನೆ! ಅದಕ್ಕೆ ಮೊದಲೇ ಇವನನ್ನು ಸಂಹರಿಸಿ, ದೇವತೆಗಳಿಗೆ ಕ್ಷೇಮವನ್ನುಂಟುಮಾಡು! ಈಗ

ಅಭಿಜಿತ್ತೆಂಬ ಹೆಸರುಳ್ಳ ;ಮಧ್ಯಾಹ್ನಕಾಲವು ಆರಂಭಿಸಿರುವುದು. ಇವನನ್ನು ಕೊಲ್ಲುವುದಕ್ಕೆ ಇದೇ ತಕ್ಕ ಸಮಯವು. ದುರ್ಜಯನಾದ ಈತನನ್ನು ಈಗಲೇ ಕೊಂದು, ನಿನ್ನ ಪಾದಾಶ್ರಿತರಾದ ನಮಗೆ ಕ್ಷೇಮವನ್ನುಂಟುಮಾಡು ! ಇವನಿಗೂ ಮರಣಕಾಲವು ಸಮೀಪಿಸಿರುವುದು ! ಈಗಲೇ ನೀನು ತಕ್ಕ ಪರಾಕ್ರಮವನ್ನು ಪಯೋಗಿಸಿ, ಇವನನ್ನು ಕೊಂದು ಸಮಸ್ತ ಲೋಕಕ್ಕೂ ಕ್ಷೇಮವನ್ನುಂಟುಮಾಡು!" ಎಂದನು. ಇಲ್ಲಿಗೆ ಹದಿನೆಂಟನೆಯ ಅಧ್ಯಾಯವು.

ವರಾಹಮೂರ್ತಿಯು ಹಿರಣ್ಯಾಕ್ಷನನ್ನು ಕೊಂದುದು.

ಹೀಗೆ ಚತುರ್ಮುಖನು ಭಗವಂತನನ್ನು ಕುರಿತು, ಸಿದ್ಧುಷ್ಟವಾಗಿಯೂ, ಯಥಾರ್ಥವಾಗಿಯೂ ಅಮೃತದಂತೆ ಪ್ರಿಯವಾಗಿಯೂ ಇರುವ ವಾಕ್ಯಗಳಿಂದ ಪ್ರಾರ್ಥಿಸುತ್ತಿರಲು, ಭಗವಂತನು ಅದನ್ನು ಕೇಳಿ,ತನ್ನಲ್ಲಿ ತಾನು ‘‘ಆಹಾ ! ಕಾಲಸ್ವರೂಪನಾಗಿ ಸರ್ವಸಂಹಾರಕನಾದ ನನಗೇ ಇವರು ಶತ್ರುಭಯವನ್ನು ಕಲ್ಪಿಸುತ್ತಿರುವರಲ್ಲಾ!" ಎಂದು ಒಳಗೊಳಗೆ ನಗುತ್ತ, ಮಂದಹಾಸಪೂರ್ವಕವಾಗಿ ಬ್ರಹ್ಮನಕಡೆಗೆ ತಿರುಗಿ, ಅವನ ಮಾತನ್ನು ಪ್ರೀತಿಪೂರ್ವಕವಾಗಿ ಅಂಗೀಕರಿಸಿದಂತೆ, ಪ್ರಸನ್ನದೃಷ್ಟಿಯಿಂದ ನೋಡಿದನು. ಆದರೆ ರಾಕ್ಷಸರಿಗೆ ಬಲವನ್ನು ಹೆಚ್ಚಿಸತಕ್ಕ ಸಂಧ್ಯಾಕಾಲದಲ್ಲಿಯೇ ಅವನನ್ನು ಸಂಹರಿಸಿ, ತನ್ನ ಮಹಿಮೆಯನ್ನು ಬ್ರಹ್ಮಾದಿಗಳಿಗೆ ತೋರಿಸಿಕೊಂಡಬೇಕೆಂದು ತನ್ನಲ್ಲಿ ತಾನು ಸಂಕಲ್ಪಿಸಿಕೊಂಡನು ಅನಂತರದಲ್ಲಿ ಆ ವರಾಹಮೂರ್ತಿಯು ತನ್ನ ಮುಂದೆ ಮದದಾನೆಯಂತೆ ನಿರ್ಭಯವಾಗಿ ನಿಂತಿರುವ ಆ ರಾಕ್ಷಸನನ್ನು ನೋಡಿ, ಕೋಪಾವೇಶವನ್ನು ನಟಿಸುತ್ತ, ತನ್ನ ಗದಾದಂಡವನ್ನೆತ್ತಿ ಹಾರಿಬಂದು ಆ ರಾಕ್ಷಸನ ದವಡೆಯಮೇಲೆ ವೇಗದಿಂದ ಅಪ್ಪಳಿಸಿದನು. ಈ ಗದೆಯು ಇಷ್ಟರಲ್ಲಿಯೇ ರಾಕ್ಷಸನ ಗದೆಯಿಂದ ಪ್ರತಿಹತವಾಗಿ, ಭಗವಂತನ ಕೈಯಿಂದ ಜಾರಿ,ಮಹಾಧ್ವನಿಯೊಡನೆ ಕೆಳಗೆ ಬಿದ್ದಿತು. ಇದು ನೋಡುವವರಿಗೆ ಆತ್ಯಾಶ್ಚರ್ಯವನ್ನುಂಟುಮಾಡಿತು. ಈ ಸಮಯದಲ್ಲಿ ವರಾಹಮೂರ್ತಿಯನ್ನು ಹೊಡೆಯುವುದಕ್ಕೆ ರಾಕ್ಷಸನಿಗೆ ತಕ್ಕ ಅವಕಾಶವಿದ್ದರೂ,

ಆ ರಾಕ್ಷಸನು ಯುದ್ಧಧರ್ಮವನ್ನು ಯೋಚಿಸಿ,ನಿರಾಯುಧನಾಗಿದ್ದ ಭಗವಂ
ತನನ್ನು ಹೊಡೆಯಲಾರದೆ,ಉಕ್ಕಿಬರುವ ಕೋಪವನ್ನು ಹಾಗೆಯೇ ಅಡಗಿಸಿ
ಕೊಂಡು ಸುಮ್ಮನಿದ್ದನು. ಭಗವಂತನ ಗದೆಯು ವಿಫಲವಾಗಿ ಬಿದ್ದುದ
ನ್ನು ನೋಡಿ, ಸುತ್ತಲೂ ಹಾಹಾಕಾರವು ಹೊರಟಿತು. ಆದರೆ ಭಗವಂತನು
ಮಾತ್ರ,ಆ ರಾಕ್ಷಸನ ಧರ್ಮಬುದ್ಧಿಯನ್ನೇ ಗೌರವಿಸುತ್ತ,ಕೊನೆಗೆ ಸುನಾಭ
ವೆಂಬ ತನ್ನ ಚಕ್ರಾಯುಧವನ್ನು ಸ್ಮರಿಸಿಕೊಂಡನು.ಭಗವಂತನು ಸ್ಮರಿಸಿದೊ
ಡನೆ ಸುದರ್ಶನಚಕ್ರವು ಆತನ ಕೈಗೆ ಬಂದು ಸೇರಿತು. ಈ ಸುದರ್ಶನಚಕ್ರ
ವು, ಪೂರ್ವಜನ್ಮದಲ್ಲಿ ತನಗೆ ಸಹವಾಸಿಯಾಗಿದ್ದ ಆ ದಿತಿಪುತ್ರನನ್ನೇ ಬಿ
ಡದ್ದು, ಅವನೊಡನೆ ಸೇರುವುದಕ್ಕೆ ಆತುರಪಡುತ್ತಿರುವುದನ್ನು ನೋಡಿ, ಯು
ದ್ಧದರ್ಶನಕ್ಕಾಗಿ ಬಂದಿದ್ದ ದೇವತೆಗಳ ಗುಂಪಿನಲ್ಲಿ "ದೇವಾ ! ಆ ರಾಕ್ಷಸನ
ನ್ನು ಕೊಲ್ಲು ! ಕೊಲ್ಲು ! ನಿನಗೆ ಜಯವಾಗಲಿ" ಎಂಬಿವೇ ಮೊದಲಾದ ಉ
ತ್ಸಾಹವಾಕ್ಯಗಳು ನಾನಾಪಥವಾಗಿ ಹೊರಡುತಿದ್ದುವು. ಹಿರಣ್ಯಾಕ್ಷನಿಗಾ
ದರೋ, ತನ್ನ ಮುಂದೆ ಸುದರ್ಶನವನ್ನು ಕೈಯಲ್ಲಿ ಹಿಡಿದು ನಿಂತಿರುವ ಪುಂ
ಡರೀಕಾಕ್ಷನಾದ ಆ ವರಾಹಮೂರ್ತಿಯನ್ನು ನೋಡಿದೊಡನೆ ಮೇಲೆಮೇಲೆ
ಕೋಪವು ಉಕ್ಕುತಿತ್ತು. ಆಗಾಗ ತುಟಿಯನ್ನು ಕಚ್ಚುವನು! ಉದ್ಧವಾಗಿ ನಿ
ಟ್ಟುಸಿರನ್ನು ಬಿಡುವನು! ಕಣ್ಣುಗಳಿಂದಲೇ ಭಸಿಸುವಂತೆ ನೋಡುವನು!ಹೀ
ಗೆ ಭಯಂಕರವಾದ ಕೋರೆಪಾಡೆಗಳುಳ್ಳ ಆ ರಾಕ್ಷಸನು,ಕೋಪಾವೇಶದ್ದೊ
ಡನೆ ವೇಗದಿಂದೋಡಿಬಂದು "ಇದೋ! ಇದರಿಂದ ನೀನು ಸತ್ತೆ" ಎಂದು
ತನ್ನ ಗದೆಯನ್ನು ಬೀಸಿದನು. ಯಜ್ಞಮೂರ್ತಿಯಾದ ಭಗವಂತನಾದ
ರೋ, ವಾಯುವೇಗದಿಂದ ಹೊರಟ ಆ ಗದೆಯು ತನ್ನ ಸಮೀಪಕ್ಕೆ ಬರುವ
ಷ್ಟರಲ್ಲಿ, ಆ ಶತ್ರುವು ನೋಡುತಿದ್ದಹಾಗೆಯೇ ಲೀಲಾಮಾತ್ರದಿಂದ ಅದ
ನ್ನು ತನ್ನ ಎಡಗಾಲಿನಿಂದ ಮೆಟ್ಟಿನಿಂತು, ಆಶಾಭಂಗಹೊಂದಿ ಮುಂದೆ
ನಿಂತಿದ್ದ ರಾಕ್ಷಸನನ್ನು ನೋಡಿ "ಎಲೆ ರಾಕ್ಷಸಾ! ಚಿಂತಿಸಬೇಡ! ಇದೋ
ತಿರುಗಿ ನಿನ್ನ ಆಯುಧವನ್ನೆತ್ತಿಕೊಂಡು ಯುದ್ಧಕ್ಕೆ ನಿಲ್ಲು! ನಿನ್ನಿಂದಾದ ಪ್ರ
ಯತ್ನವನ್ನು ಮಾಡು! ಅವಶ್ಯವಾಗಿ ನೀನೇ ಜಯಿಸಬಹುದು" ಎಂದನು.
ಇದನ್ನು ಕೇಳಿ ರಾಕ್ಷಸನಿಗೆ ಮತ್ತಷ್ಟು ಕೋಪವುಂಟಾಯಿತು ತಿರುಗಿ ಅದೇ

ಗದೆಯನ್ನು ತೆಗೆದು ವರಾಹಮೂರ್ತಿಯಮೇಲೆ ಬೀಸಿ ಸಿಂಹನಾದವನ್ನು ಮಾಡಿದನು. ಈ ಗದೆಯು ಸಮೀಪಕ್ಕೆ ಬರುವುದನ್ನು ನೋಡಿ ಭಗವಂತನು, ಗರುಡನು ಹಾವನ್ನು ಹಿಡಿಯುವಂತೆ ಲೀಲಾಮಾತ್ರದಲ್ಲಿ ಅದನ್ನು ತನ್ನ ಕೈಯಿಂದಾತುಕೊಂಡನು. ಹೀಗೆ ತನ್ನ ಪೌರುಷವೆಲ್ಲವೂ ವ್ಯರ್ಥವಾದುದ ಕ್ಕಾಗಿ ಆ ಹಿರಣ್ಯಾಕ್ಷನು, ಮನಸ್ಸಿನಲ್ಲಿ ಗರ್ವವಡಗಿ, ಚಿಂತಾಕುಲನಾಗಿದ್ದ ನು. ಭಗವಂತನು ತಿರುಗಿ ಅದೇ ಗದೆಯನ್ನು ಕೈಗೆ ಕೊಡುವುದಕ್ಕೆ ಬಂ ದಾಗಲೂಕೂಡ, ಆ ರಾಕ್ಷಸನು ಅದನ್ನು ತೆಗೆದುಕೊಳ್ಳುವುದಕ್ಕೆ ನಾಚಿಕೆ ಪಟ್ಟು ಉತ್ಸಾಹಹೀನನಾಗಿದ್ದನು. ಕೊನೆಗೆ ಅಗ್ನಿಯಂತೆ ಜಾಜ್ವಲ್ಯಮಾ ನವಾದ ಒಂದು ತ್ರಿಶೂಲವನ್ನು ಕೈಗೆತ್ತಿಕೊಂಡು, ಶುದ್ಧಾತ್ಮನಾದ ಬ್ರಾಹ್ಮಣನಮೇಲೆ ಶೂನ್ಯದೇವತೆಯೆನ್ನು ಕಳುಹಿಸುವಂತೆ, ಅದನ್ನು ಯಜ್ಞ ಸ್ವರೂಪನಾದ ವರಾಹಮೂರ್ತಿಯಮೇಲೆ ಪ್ರಯೋಗಿಸಿದನು. ಆಕಾಶಮ ಧ್ಯದಲ್ಲಿ ಅತ್ಯಂತಕಾಂತಿಯಿಂದ ಜ್ವಲಿಸುತ್ತ, ಮುಂದೆ ಬರುತ್ತಿರುವ ಆ ತ್ರಿ ಶೂಲವನ್ನು ನೋಡಿ ಭಗವಂತನು, ತೀಕ್ಷ್ಣವಾದ ಅಲಗುಗಳುಳ್ಳ ತನ್ನ ಚ ಕ್ರಾಯುಧವನ್ನು ಪ್ರಯೋಗಿಸಿ * ಪೂರ್ವದಲ್ಲಿ ಗರುಡನು ತನ್ನ ಮೈಯಿಂ ದುದಿರಿಸಿದ ರೆಕ್ಕೆಯ ಗರಿಯೆನ್ನು ದೇವೇಂದ್ರನು ಹೇಗೋ ಹಾಗೆ,ಆ ತ್ರಿಶೂ ಲವನ್ನು ಛಿನ್ನಭಿನ್ನವಾಗಿ ಭೇದಿಸಿದನು. ಈ ಚಕ್ರಾಯುಧದಿಂದ ತನ್ನ ತ್ರಿ ಶೂಲವು ಮುರಿದುಬಿದ್ದೊಡನೆ, ರಾಕ್ಷಸನು ಮತ್ತಷ್ಟು ಕೋಪಾವೇಶವನ್ನು ಹೊಂದಿ, ದೃಢವಾದ ಮುಷ್ಟಿಯನ್ನು ಹಿಡಿದು, ಸಿಂಹನಾದಮಾಡುತ್ತ ಮುಂದೆ ಬಂದು ಲಕ್ಷ್ಮೀದೇವಿಗೆ ನಿವಾಸಸ್ಥಾನವಾದ ಆ ಭಗವಂತನ ಎದೆಯ ಮೇಲೆ ವೇಗದಿಂದಪ್ಪಳಿಸಿ, ಒಡನೆಯೇ ತನ್ನ ಮಾಯೆಯಿಂದ ಕಣ್ಮರೆಯಾದ

---

* ಪೂರ್ವದಲ್ಲಿ ದೇವತೆಗಳನ್ನು ಜಯಿಸಿ, ಅಮೃತಕಲಶವನ್ನು ಸಾಗಿಸಿಕೊಂಡು ಹೋಗುತ್ತಿದ್ದ ಗರುಡನಮೇಲೆ, ಇಂದ್ರನು ತನ್ನ ವಜ್ರಾಯುಧವನ್ನು ಪ್ರಯೋಗಿಸಿ ದನು. ಅಮೋಘವಾದ ಆ ವಜ್ರಾಯುಧಕ್ಕೆ ಗೌರವವನ್ನು ಕೊಡಬೇಕೆಂಬುದಕ್ಕಾಗಿ, ಗರುಡನು ತನ್ನ ಮೈಯಿಂದ ಒಂದು ಗರಿಯೆನ್ನುದಿರಿಸಿ ಮುಂದೆ ಸಾಗಿದುದಾಗಿಯೂ, ಆ ಗರಿಯನ್ನು ಇಂದ್ರನು ಕೋಪದಿಂದ ತುಂಡುತುಂಡಾಗಿ ಭೇದಿಸಿದುದಾಗಿಯೂ ಪೂರ್ವಕಥೆಯುಂಟು.

ನು. ವಿದುರಾ! ಈ ಪ್ರಹಾರವೇಗವೊಕೂಡ ಆದಿಮೂರ್ತಿಯಾದ ಭಗವಂತನ ಮೈಮೇಲೆ ಬಿದ್ದಾಗ, ಪುಷ್ಪಮಾಲಿಕೆಯಿಂದ ಮದದಾನೆಯನ್ನು ಹೊಡೆದಂತಾಯಿತೇಹೊರತು, ಅವನಿಗೆ ಸ್ವಲ್ಪವಾದರೂ ನೋವನ್ನುಂಟುಮಾಡಲಿಲ್ಲ. ಅಮೇಲೆ ಹಿರಣ್ಯಾಕ್ಷನು, ಸಮಸ್ತಮಾಯಾಶಕ್ತಿಗಳಿಗೂ ನಿಯಾಮಕನಾದ ಆ ಭಗವಂತನಮೇಲೆ, ತನ್ನ ಮಾಯೆಗಳನ್ನು ಇನ್ನೂ ನಾನಾವಿಧವಾಗಿ ತೋರಿಸುವುದಕ್ಕೆ ತೊಡಗಿದನು. ರಾಕ್ಷಸನು ಈ ಮಾಯಾಯುದ್ಧವನ್ನಾರಂಭಿಸಿದೊಡನೆ, ಸಮಸ್ತಪ್ರಜೆಗಳೂ, "ಲೋಕಕ್ಕೆ ಇದೇನೋ ಒಂದು ಮಹಾಪ್ರಳಯ" ವೆಂದು ಮನಸ್ಸಿನಲ್ಲಿ ಭಯಪಟ್ಟು ನಡುಗುತಿದ್ದುವು. ವಿದುರಾ! ಆ ರಾಕ್ಷಸನ ಮಾಯಾಪ್ರಭಾವವನ್ನು ಕೇಳಬೇಕೆ? ಇದ್ದಕ್ಕಿದ್ದಹಾಗೆ ಭಯಂಕರವಾದ ಬಿರಗಾಳಿಯೆದ್ದು,ದೊಡ್ಡ ಧೂಳಿಯನ್ನೆಬ್ಬಿಸಿತು! ಲೋಕವೆಲ್ಲವೂ ಕತ್ತಲೆಕವಿದಂತಾಯಿತು! ಕವಣೆಗಳಿಂದ ಬೀರಿದಂತೆ ನಾನಾದಿಕ್ಕುಗಳಿಂದಲೂ ಶಿಲಾವರ್ಷವು ಕರೆಯುತಿತ್ತು! ಆಕಾಶದಲ್ಲಿ ನಕ್ಷತ್ರಗಳೆ ಹುಟ್ಟೇ ಇರಲಿಲ್ಲ! ಇದ್ದಕ್ಕಿದ್ದಹಾಗೆ ಅಂತರಿಕ್ಷದಲ್ಲಿ ಮಿಂಚುಗುಡುಗುಗಳೊಡನೆ ಮೇಘಗಳು ಗುಂಪುಗೂಡಿ, ಅತಿದುರ್ಗಂಧವುಳ್ಳ ಮಲಮೂತ್ರಗಳನ್ನೂ, ಒಮ್ಮೊಮ್ಮೆ ರಕ್ತಧಾರೆಗಳನ್ನೂ ಕರೆಯುತಿದ್ದುವು. ಅಲ್ಲಲ್ಲಿರುವ ಪರ್ವತಗಳಿಂದ ಇದ್ದಕ್ಕಿದ್ದಹಾಗೆ ಆಯುಧಪರಂಪರೆಗಳು ಹಾರಿಬೀಳುತಿದ್ದುವು. ಅಲ್ಲಲ್ಲಿ ಪಿಶಾಚಿಗಳೂ, ರಾಕ್ಷಸಿಯರೂ, ಕೈಯಲ್ಲಿ ಶೂಲವನ್ನು ಹಿಡಿದು, ತಲೆಯನ್ನು ಕೆದರಿ, ನಿರ್ವಾಣವಾಗಿ ನಿಂತಹಾಗೆ ಕಾಣಿಸುತಿದ್ದುವು. ಇಷ್ಟರಲ್ಲಿ ಇತ್ತಲಾಗಿ ರಾಕ್ಷಸಸೈನ್ಯದಿಂದ, ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗಗಳೊಡಗೂಡಿ, ಯಕ್ಷರೂ, ರಾಕ್ಷಸರೂ ಅಲ್ಲಲ್ಲಿ ಗುಂಪುಗುಂಪಾಗಿ ಹೊರಟು, "ಕೊಲ್ಲು! ತಿನಿ!" ಎಂದು ಕೂಗಿಡುತಿದ್ದರು. ಹೀಗೆ ಆ ರಾಕ್ಷಸನ ಮಾಯೆಯು ಲೋಕಭಯಂಕರವಾಗಿ ಹಬ್ಬುತ್ತಿರುವುದನ್ನು ನೋಡಿ ಭಗವಂತನು, ಅದನ್ನಡಗಿಸುವುದಕ್ಕಾಗಿ ತನ್ನ ಸುದರ್ಶನಚಕ್ರವನ್ನು ಪ್ರಯೋಗಿಸಿಬಿಟ್ಟನು. ಭಗವಂತನ ಕೈಯಿಂದ ಚಕ್ರಾಯುಧವು ಹೊರಟೊಡನೆ, ಅತ್ತಲಾಗಿ ಹಿರಣ್ಯಾಕ್ಷನ ತಾಯಿಯಾದ ದಿತಿಗೆ, ತನ್ನ ಕುಮಾರನಿಗೆ ಶ್ರೀವಿಷ್ಣುವಿನಿಂದಲೇ ಮರಣವೆಂಬ

ಮಾತು ನೆನಪಿಗೆ ಬಂದು, ಅವಳ ಮನಸ್ಸಿಗೆ ನಡುಕವು ತೋರಿತು. ಆ ವಳ ಸ್ತನಾಗ್ರದಿಂದ ರಕ್ತವು ಜಿನುಗಿತು. ಇತ್ತಲಾಗಿ ರಣರಂಗದಲ್ಲಿ ಸುದ ರ್ಶನಚಕ್ರದ ಪ್ರಭಾವದಿಂದ ಆ ರಾಕ್ಷಸನ ಮಾಯೆಯೆಲ್ಲವೂ ವ್ಯರ್ಥವಾ ಯಿತು. ಆದರೂ ಬಿಡದೆ ಹಿರಣ್ಯಾಕ್ಷನು, ಉದ್ಭವಾದ ತನ್ನ ತೋಳುಗಳ ನ್ನು ನೀಡಿಕೊಂಡು, ಮುಂದೆ ನುಗ್ಗಿ,ಆ ವರಾಹಮೂರ್ತಿಯನ್ನು ತನ್ನ ಭುಜ ಗಳನಡುವೆ ಸಿಕ್ಕಿಸಿಕೊಳ್ಳಬೇಕೆಂದು ಪ್ರಯತ್ನಿಸಿದನು. ಆಗಲೂ ವರಾಹ ಮೂರ್ತಿಯು ತನ ಕೈಗೆ ಸಿಕ್ಕದೆ ತಪ್ಪಿಸಿಕೊಂಡುದನ್ನು ನೋಡಿ, ವಜ್ರಮು ಷ್ಟಿಯನ್ನು ಹಿಡಿದು, ಆ ಭಗವಂತನ ಎದೆಯಮೇಲೆ ಹೊಡೆದನು. ಇಷ್ಟರಲ್ಲಿ ಶ್ರೀಹರಿಯು, ದೇವೇಂದ್ರನು ವೃತಾಸುರವನ್ನು ಹೊಡೆದಂತೆ, ತನ್ನ ಅಂಗೈ ಯಿಂದ ಆ ರಾಕ್ಷಸನ ಕನ್ನೆಯಮೇಲೆ ಅಪ್ಪಳಿಸಿದನು.ಈ ಪ್ರಹಾರವು ಬಿದ್ದೊ ಡನೆ, ಆ ರಾಕ್ಷಸನು ಗಿರುಗಿರನೆ ಸುತ್ತಿ, ಬಿರುಗಾಳಿಯಿಂದ ಮುರಿದು ಬಿದ್ದ ವೃಕ್ಷದಂತೆ ಕಣ್ಣು ಮುಚ್ಚಿ ಕೆಳಗೆ ಬಿದ್ದನು ಆ ರಾಕ್ಷಸನ ಕೈ, ಕಾಲು, ಕಂಠ. ಮುಂತಾದ ಅವಯವಗಳೆಲ್ಲವೂ ಛಿನ್ನ ವಿಚ್ಛಿನ್ನವಾದುವು. ಭಯಂಕರವಾ ದ ಕೋರೆಗಳುಳ್ಳ ಆ ರಾಕ್ಷಸನು, ಹೀಗೆ ವರಾಹಮೂರ್ತಿಯಿಂದ ಹತನಾ ಗಿ ತುಟಿಯನ್ನು ಕಚ್ಚಿ, ಕೆಳಗೆ ಬಿದ್ದಿರುವುದನ್ನೂ, ಸತ್ತಮೇಲೆಯೂ ಅವನ ಮುಖದ ತೇಜಸ್ಸು ಕಂದುಬಿರುವುದನ್ನೂ ನೋಡಿ, ಬ್ರಹ್ಮಾದಿದೇವತೆಗಳೆ ಲ್ಲರೂ ಆಶ್ಚರ್ಯಭರಿತರಾಗಿ ಮುಂದೆ ಬಂದು, "ಅಹಾ! ಈತನಲ್ಲವೇ ಪು ಣ್ಯಾತ್ಮನು! ಭಗವಂತನ ಕೈಯಿಂದಲೇ ಮರಣವನ್ನು ಹೊಂದುವ ಇಂತ ಹ ಪುಣ್ಯಾತ್ಮರು ಲೋಕದಲ್ಲಿ ವಿರಳವಲ್ಲವೆ ? ಯೋಗೀಶ್ವರರಲ್ಲರೂ ಸಂಸಾ ರವನ್ನು ತ್ಯಜಿಸಿ,ಯೋಗಮಾರ್ಗವನ್ನು ಹಿಡಿದು,ಬಹಳ ಶ್ರಮದಿಂದ ಯಾವ ನ ಪಾದಪದ್ಮಗಳನ್ನು ;ರಹಸ್ಯನಾಗಿ ಹುಡುಕುತ್ತಿರುವರೋ,ಅಂತಹ ಭಗವಂ ತನ ಪಾದದಿಂದಲೇ ಈತನಿಗೆ ಮರಣವುಂಟಾಯಿತಲ್ಲವೆ ? ಪ್ರಾಣೋತ್ಕ್ರ ಮಣಕಾಲದಲ್ಲಿಯೂಕೂಡ, ಪ್ರತ್ಯಕ್ಷದಲ್ಲಿ ಭಗವಂತನ ಮುಖವನ್ನು ನೋ ಡುತ್ತ ತನ್ನ ದೇಹವನ್ನು ನೀಗಿದ ಈ ರಾಕ್ಷಸನಲ್ಲವೇ ಪರಮಧನ್ಯನು! ಇಂತ ಹ ಭಾಗ್ಯವು ಬೇರೊಬ್ಬರಿಗೆ ಲಭಿಸುವುದೆ ? ಪೂರ್ವದಲ್ಲಿ ಭಗವಂತನ ದ್ವಾರ ಪಾಲಕರಾಗಿದ್ದ ಜಯವಿಜಯರೇ ಇವರು!ಬ್ರಾಹ್ಮಣಶಾಪದಿಂದ ರಾಕ್ಷಸರಾಗಿ



516. ವರಾಹಮೂರ್ತಿಯು ಹಿರಣ್ಯಾಕ್ಷನನ್ನು ಕೊಂದುದು.

ಹುಟ್ಟಿದ್ದವರು,ಕೆಲವು ದಿನಗಳೊಳಗಾಗಿಯೇ ತಿರುಗಿ ಆ ಭಗವಂತನ ಸಾನ್ನಿಧ್ಯವನ್ನು ಸೇರತಕ್ಕವರು! ಇವರು ಪುಣ್ಯಾತ್ಮರೆಂಬುದನ್ನು ಹೇಳಬೇಕಾದುದೇನು?" ಎಂದು ಆ ರಾಕ್ಷಸನ ಭಾಗ್ಯವನ್ನ ಕೊಂಡಾಡುತಿದ್ದರು. ಆ ಮೇಲೆ ಬ್ರಹ್ಮಾದಿದೇವತೆಗಳೆಲ್ಲರೂ ಮುಂದೆ ಬಂದು, ಭಗವಂತನನ್ನು ಸ್ತೋತ್ರಮಾಡುವರು. "ಓ ದೇವಾ! ಸಕಲಯಜ್ಞಸ್ವರೂಪನಾದ ನಿನಗೆ ನಮಸ್ಕಾರವು. ಶುದ್ಧಸತ್ವಮೂರ್ತಿಯಾದರೂ,ಲೋಕರಕ್ಷಣಕ್ಕಾಗಿ ಹೀಗೆ ಸ್ವೇಚ್ಛೆಯಿಂದ ನಾನಾವಿಧಶರೀರಗಳನ್ನು ಧರಿಸತಕ್ಕ ನಿನಗೆ ನಮಸ್ಕಾರವು! ನಮ್ಮಭಾಗ್ಯೋದಯದಿಂದ ಲೋಕಕಂಟಕನಾದ ಈ ರಾಕ್ಷಸನು ಹತನಾದನು! ನಿನ್ನ ಪಾದಾಶ್ರಯದಿಂದ ನಾವು ಸುಖಿಗಳಾದೆವು," ಎಂದರು. ವಿದುರಾ! ಹೀಗೆ ಆದಿವರಾಹರೂಪವನ್ನು ಧರಿಸಿದ ಭಗವಂತನು, ಬೇರೊಬ್ಬರಿಂದ ತಡೆಯಲಸಾಧ್ಯವಾದ ಕ್ರೂರಪರಾಕ್ರಮವುಳ್ಳ ಹಿರಣ್ಯಾಕ್ಷನನ್ನು ಕೊಂದು, ಬ್ರಹ್ಮಾದಿದೇವತೆಗಳಿಂದ ಸ್ತುತಿಸಲ್ಪಡುತ್ತ, ಸರ್ವೋತ್ತಮಸೌಭಾಗ್ಯವುಳ್ಳ ತನ್ನ ವೈಕುಂಠಲೋಕಕ್ಕೆ ಹಿಂತಿರುಗಿದನು. ಎಲ್ಲೈ ಮಿತ್ರನೆ! ಈಗ ನಾನು ವರಾಹರೂಪಿಯಾದ ಆ ಭಗವಂತನ ಚರಿತ್ರೆಯನ್ನು ಎಷ್ಟು ಸುಲಭವಾಗಿ ನಿನಗೆ ತಿಳಿಸಿದೆನೋ, ಇದರಂತೆಯೇ ಆ ಭಗವಂತನೂಕೂಡ ಕೇವಲ ಲೀಲಾಮಾತ್ರದಿಂದಲೇ ಹಿರಣ್ಯಾಕ್ಷನನ್ನು ಕೊಂದು ಕೆಡಹಿದನು.ಆ ಭಗವಂತನ ಅದ್ಭುತಶಕ್ತಿಗೆ ಇದೊಂದು ದುಷ್ಕರಕಾರ್ಯವೆಂದೆಣಿಸಬೇಡ." ಎಂದು ಮೈತ್ರೇಯನು ಈ ಕಥೆಯನ್ನು ಹೇಳಿದೊಡನೆ, ಭಾಗವತೋತ್ತಮನಾದ ವಿದುರನಿಗೆ ಅತ್ಯಾನಂದವುಂಟಾಯಿತು. ಎಲ್ಲೈ ಪರೀಕ್ಷಿದ್ರಾಜನೆ! ಲೋಕದಲ್ಲಿ ಸಾಮಾನ್ಯವಾಗಿ ಒಂದೊಂದು ಕಾರ್ಯದಲ್ಲಿ ಹೆಸರನ್ನು ಪಡೆದ ಮಹಾತ್ಮರ ಚರಿತ್ರೆಯನ್ನು ಕೇಳುವಾಗಲೇ, ಮನುಷ್ಯರಿಗೆ ಎಷ್ಟೋಸಂತೋಷವಾಗುವುದು. ಇನ್ನು ಸಾಕ್ಷಾದ್ಭಗವಂತನ ಚರಿತ್ರವನ್ನು ಕೇಳುವುದರಿಂದುಂಟಾಗುವ ಆನಂದವನ್ನು ಕೇಳಬೇಕೆ? ರಾಜೇಂದ್ರಾ!ಪೂರ್ವದಲ್ಲಿ ಅನೇಕಸಂವತ್ಸರಗಳವರೆಗೆ ಮೊಸಳೆಯ ಬಾಯಿಗೆ ಸಿಕ್ಕಿ, ಪ್ರಾಣಾಪಾಯದಲ್ಲಿದ್ದ ಗಜೇಂದ್ರವು, ತನ್ನ ಹೆಣ್ಣಾನೆಗಳೊಡನೆ ಒಂದಾವರ್ತಿ ಭಗವಂತನ ಹೆಸರನ್ನು ಕೂಗಿ ಕರೆದಮಾತ್ರಕ್ಕೆ, ಆ ಭಗವಂತನು

ಚಕ್ರಧಾರಿಯಾಗಿ ಬಂದು, ವೊಸಳೆಯನ್ನುಕೊಂದು, ಗಜೇಂದ್ರನನ್ನು ಕಾಪಾಡಿದನಲ್ಲವೆ ? ದಿಕ್ಕಿಲ್ಲದ ಮನುಷ್ಯರಿಗೆ ಬಹಳ ಸುಲಭವಾಗಿ ಪ್ರಸನ್ನನಾಗತಕ್ಕವನಾಗಿಯೂ, ದುರಾತ್ಮರಿಗೆ ಎಷ್ಟೆಷ್ಟೇ ಪ್ರಯತ್ನಪಟ್ಟರೂ ದುರ್ಲಭನಾಗಿಯೂ ಇರುವ ಆಶ್ರಿತವತ್ಸಲನಾದ ಆ ಭಗವಂತನನ್ನು ಸೇವಿಸುವುದಕ್ಕಾಗಲಿ, ಆತನ ಸಜ್ಜರಿತ್ರಗಳನ್ನು ಕೇಳುವುದಕ್ಕಾಗಲಿ, ಕೃತಜ್ಞಬುದ್ಧಿಯುಳ್ಳ ಯಾವಮನುಷ್ಯನು ತಾನೇ ಹಿಂತೆಗೆಯುವನು ? ಓ ರಾಜೇಂದ್ರಾ ! ಅದು ಹಾಗಿರಲಿ ! ಲೋಕದಲ್ಲಿ ಯಾವನು, ಹಿರಣ್ಯಾಕ್ಷವಧರೂಪವಾದ ಈ ವರಾಹಾವತಾರದ ಚರಿತ್ರವನ್ನು ಕವಿಯಿಂದ ಕೇಳುವನೋ, ಇಲ್ಲವೇ ಬೇರೆಯವರು ಹೇಳುವುದನ್ನು ಕೇಳಿಯಾದರೂ ಅನುಮೋದಿಸುವನೋ, ಅಂತವನು ಬ್ರಹ್ಮಹತ್ಯಾದಿಸಮಸ್ತ ಪಾಪಗಳಿಂದಲೂ ವಿಮುಕ್ತನಾಗುವನು. ಈ ಚರಿತ್ರವು ಬಹಳ ಪವಿತ್ರವಾದುದು. ಬಹಳ ಪುಣ್ಯಕರವಾದುದು. ವಿಶೇಷಕೀರ್ತಿಸಾಧಕವು. ಆಯುಸ್ಸನ್ನು ಹೆಚ್ಚಿಸತಕ್ಕುದು. ಇಷ್ಟಾರ್ಥವನ್ನು ಕೈಗೂಡಿಸತಕ್ಕುದು. ಯುದ್ಧದಲ್ಲಿ ನಿಂತವರು ಈ ಚರಿತ್ರವನ್ನು ಸ್ಮರಿಸಿದಮಾತ್ರಕ್ಕೆ, ಅವರ ಪ್ರಾಣಗಳಿಗೂ, ಇಂದ್ರಿಯಗಳಿಗೂ ಶಕ್ತಿಯನ್ನು ಹೆಚ್ಚಿಸುವುದು. ಇವೆಲ್ಲವೂ ಹಾಗಿರಲಿ ! ದೇಹಾವಸಾನದಲ್ಲಿ ಭಗವಂತನ ಸಾನ್ನಿಧ್ಯವನ್ನೇ ಸೇರಿಸುವುದು " ಎಂದನು. ಇಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯವು.

ದೇವ ಸೃಷ್ಟಿಕ್ರಮವು.

ಇದುವರೆಗೆ ವಿದುರನು ಮೈತ್ರೇಯನಿಂದ ಕೇಳಿದ ವಿಷಯಗಳನ್ನೇ ಶುಕಮುನಿಯು ಪರಿಕ್ಷಿದ್ರಾಜನಿಗೆ ತಿಳಿಸಿದುದಾಗಿ, ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುತ್ತಿರುವಾಗ, ಶೌನಕಮುನಿಯು ನಡುವೆ ಒಂದು ಪ್ರಶ್ನೆಯನ್ನು ಮಾಡುವನು. " ಓ ಮಹಾತ್ಮಾ ! ಸೂತಾ ! ಸ್ವಾಯಂಭುವಮನುವು ಭೂಮಿಯನ್ನು ಸ್ಥಿರವಾಗಿ ನಿಲ್ಲುವಂತೆ ಮಾಡಿದಮೇಲೆ, ಲೋಕಕ್ಕೆ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಕೈಗೂಡಿಸುವದಕ್ಕಾಗಿ ಯಾವಯಾವ ಮಾರ್ಗಗಳನ್ನು ತೋರಿಸಿಕೊಟ್ಟನು ? ಅದಕ್ಕಾಗಿ ತಾನು

ಯಾವ ರೀತಿಯಲ್ಲಿ ನಡೆಯುತಿದ್ದನು ? ಅವೆಲ್ಲವನ್ನೂ ವಿಸ್ತರಿಸಬೇಕು. ಮತ್ತು ವಿದುರನು ವಿಶೇಷವಾದ ಭಗವದ್ಭಕ್ತಿಯುಳ್ಳವನು. ಕೃಷ್ಣನಿಗೆ ಅತ್ಯಂತಪ್ರೀತಿಪಾತ್ರನು. ಭಾರತಯುದ್ಧಕ್ಕೆಮೊದಲು, ಕೃಷ್ಣನು ಸಂಧಿಕಾರ್ಯಕ್ಕಾಗಿ ಪಾಂಡವದೂತನಾಗಿ ಬಂದಿದ್ದಾಗ, ಅವನನ್ನು ಅವಮಾನಪಡಿಸಿದರೆಂಬ ಕೋಪಕ್ಕಾಗಿ ತನ್ನ ಒಡಹುಟ್ಟಿದ ಧೃತರಾಷ್ಟ್ರನನ್ನೂ ಅವನಪುತ್ರರನ್ನೂ ಪರಿತ್ಯಾಗಮಾಡಿ ಬಂದವನು. ಮತ್ತು ಪೂಜ್ಯನಾದ ವ್ಯಾಸಮಹಾಮುನಿಗೆ ಪುತ್ರನಾಗಿ ಹುಟ್ಟಿ, ಮಹಿಮೆಯಲ್ಲಿ ತನಗೆ ಸಮಾನನೆನಿಸಿಕೊಂಡವನು. ಸರ್ವಕಾಲದಲ್ಲಿಯೂ ಆ ಕೃಷ್ಣನನ್ನೂ, ಕೃಷ್ಣಭಕ್ತರನ್ನೂ ಸೇವಿಸತಕ್ಕವನು. ಇಂತಹ ಮಹಾನುಭಾವನಾದ ವಿದುರನು, ಗಂಗಾದಿಪುಣ್ಯತೀರ್ಥಗಳೆಲ್ಲವನ್ನೂ ಯಾತ್ರೆಮಾಡಿ ಬಂದು, ಪಾಪರಹಿತನಾಗಿ, ಕುಶಾವರ್ತವೆಂಬ ಪುಣ್ಯತೀರ್ಥವನ್ನು ಸೇರಿ, ಅಲ್ಲಿ ತತ್ವಜ್ಞಾನಾದ ಮೈತ್ರೇಯನನ್ನು ಕಂಡು, ಭಗವದ್ವಿಷಯಗಳನ್ನು ಪ್ರಶ್ನೆಮಾಡತೊಡಗಿದನೆಂದು ಹೇಳಿದೆಯಲ್ಲವೆ? ಅವನು ಇನ್ನೂ ಯಾವಯಾವ ಪ್ರಶ್ನೆಗಳನ್ನು ಕೇಳಿದನು ಭಾಗವತೋತ್ತಮಾದ ವಿದುರಮೈತ್ರೇಯರಿಬ್ಬರಿಗೂ ನಡೆದ ಪ್ರಸಂಗಗಳಲ್ಲಿ, ಆ ಭಗವಂತನ ಪುಣ್ಯಚರಿತ್ರವೊಂದಲ್ಲದೆ ಬೇರೊಂದಿರದು. ಭಗವಂತನ ಪಾದಾಗ್ರದಿಂದ ಹೊರಟ ಗಂಗಾಜಲದಂತೆ, ಅವರ ಮುಖದಿಂದ ಹೊರಟ ಒಂದೊಂದು ವಿಷಯವೂ ಲೋಕಪಾವನವಾಗಿರುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಯಾವಾಗಲೂ ಸಾಧುಗಳಿಂದ ಕೀರ್ತಿಸಲ್ಪಡತಕ್ಕದಾಗಿಯೂ, ಆಶ್ಚರ್ಯಚರಿತ್ರಗಳುಳ್ಳದಾಗಿಯೂ ಇರುವ ಆ ಕಥೆಗಳನ್ನೆಲ್ಲಾ ನನಗೆ ತಿಳಿಸಬೇಕು. ನಿನಗೆ ಮಂಗಳವಾಗಲಿ! ಒಂದಾವರ್ತಿ ಹರಿಕಥೆಯೆಂಬ ಅಮೃತವನ್ನು ಪಾನಮಾಡಿ, ಅದರ ರಸವನ್ನು ತಿಳಿದಮೇಲೆ, ಯಾವನು ತಾನೇ ಅದರಲ್ಲಿ ತೃಪ್ತಿಹೊಂದುವನು!" ಎಂದನು. ಆಗ ಭಗವದ್ಧ್ಯಾನಪರನಾದ ಸೂತನು, ಶೌನಕಾದಿಗಳನ್ನು ಕುರಿತು ! "ಎಲೈ ಮಹರ್ಷಿಗಳಿರಾ, ಕೇಳಿರಿ ! ನಿಮ್ಮಂತೆಯೇ ಪರೀಕ್ಷಿದ್ರಾಜನೂ ಶುಕಮುನಿಯನ್ನು ಕುರಿತು, ಈ ವಿದುರಮೈತ್ರೇಯರ ಸಂವಾದವನ್ನೇ ತಿಳಿಸಬೇಕೆಂದು ಕೇಳಿದನು. ಶುಕಮುನಿಯೂ ಅದೇವಿಷಯವನ್ನು ವಿವರಿಸಿ ತಿಳಿಸಿರುವನು. ಅದನ್ನೇ ನಿಮು

ಗೂ ಹೇಳುವೆನು. ಶ್ರೀಮಹಾವಿಷ್ಣುವು' ವರಾಹಾವತಾರವನ್ನೆತ್ತಿ, ರಸಾತಲದಿಂದ ಭೂಮಿಯನ್ನುದ್ಧರಿಸಿ,ಹಿರಣ್ಯಾಕ್ಷನನ್ನು ಕೊಂದು,ನಿಜಲೋಕವನ್ನು ಸೇರಿದನೆಂಬ ಕಥೆಯನ್ನು ಕೇಳಿ ವಿದುರನು, ಸಂತೋಷಭರಿತನಾದನಷ್ಟೆ?ಆವನು ತಿರುಗಿ ಮೈತ್ರೇಯನನ್ನು ಕುರಿತು ಹೀಗೆಂದು ಪ್ರಶ್ನೆಮಾಡುವನು. "ಓ ಮುನೀಂದ್ರಾ! ಜಗತ್ಸೃಷ್ಟಿಯನು ಪ್ರಜೆಗಳನ್ನು ಹೆಚ್ಚಿಸುವುದಕ್ಕಾಗಿ, ಮರೀಚಿ ಮೊದಲಾದ ಪ್ರಜಾಪತಿಗಳನ್ನು ಸೃಷ್ಟಿಸಿದನೆಂದು ಹೇಳಿದೆಯೆಲ್ಲವೆ? ಅದರಿಂದಾಚೆಗೆ ಬ್ರಹ್ಮನು ಮಾಡಿದ ಕೆಲಸವೇನು? ನೀನು ಇಂದ್ರಿಯಗಳಿಗೆ ಗೋಚರಿಸದ ವಿಷಯಗಳನ್ನೂ ತಿಳಿದುಕೊಳ್ಳತಕ್ಕ ಜ್ಞಾನದೃಷ್ಟಿಯುಳ್ಳವನಾದುದರಿಂದ, ಅವೆಲ್ಲವನ್ನೂ ಯಥಾರ್ಥವಾಗಿ ನನಗೆ ತಿಳಿಸಬೇಕು. ಮರೀಚಿ ಮೊದಲಾದ ಮಹರ್ಷಿಗಳೂ, ಸ್ವಾಯಂಭುವಮನುವೂ ಹುಟ್ಟಿದನಂತರ ಅವರಿಂದ ಪ್ರಜಾವೃದ್ಧಿಯಾದುದು ಹೇಗೆ? ಅವರು ತಮ್ಮ ತಮ್ಮ ಪತ್ನಿಯರ ಮೂಲಕವಾಗಿ ಸೃಷ್ಟಿಸಿದರೆ? ಅಥವಾ ಈ ಸೃಷ್ಟಿಕಾರ್ಯದಲ್ಲಿ ಬೇರೊಬ್ಬರ ಅಪೇಕ್ಷೆಯಿಲ್ಲದೆ ತಾವುತಾವೇ ಸ್ವತಂತ್ರವಾಗಿ ಸೃಷ್ಟಿಸಿದರೆ? ಅಥವಾ ತಮ್ಮಲ್ಲಿನವೇ ಒಬ್ಬರಿಗೊಬ್ಬರು ಸಹಾಯಕರಾಗಿ ಪ್ರಜಾಸೃಷ್ಟಿಯನ್ನು ನಡೆಸಿದರೆ? ಇದರ ನಿಜಸ್ಥಿತಿಯನ್ನು ತಿಳಿಸಬೇಕು" ಎಂದನು. ಅದಕ್ಕಾ ಮೈತ್ರೇಯನು, "ವಿದುರಾ! ಮಹತ್ತು ಮೊದಲಾದ ತತ್ವಗಳ ಸೃಷ್ಟಿಕ್ರಮವನ್ನು ನಾನು ನೊದಲೇ ನಿನಗೆ ತಿಳಿಸಿರುವೆನಾದರೂ, ಮತ್ತೊಮ್ಮೆ ಸಂಗ್ರಹಿಸಿ ಹೇಳುವೆನು ಕೇಳು. ಎಣೆಯಿಲ್ಲದ ಮಹಾಮಹಿಮೆಯುಳ್ಳ ಸರ್ವೇಶ್ವರನು, ಕಾಲದಿಂದ ಎಚ್ಚರಗೊಂಡು, ಸೃಷ್ಟಿಕಾರ್ಯಕ್ಕೆ ಸಂಕಲ್ಪಿಸಿದೊಡನೆ, ಅವನಿಗೆ ಶರೀರವಾಗಿದ್ದ ಪ್ರಕೃತಿಯಿಂದ, ಮಹತ್ತೆಂಬ ತತ್ವವು ಹುಟ್ಟಿತು. ರಜೋಗುಣಪ್ರಧಾನವಾಗಿ, ಭೂತಗಳ ಮತ್ತು ಇಂದ್ರಿಯಗಳ ಸಮುದಾಯೆಸ್ವರೂಪವಾದ ಆ ಮಹತ್ತತ್ವವು, ಭಗವಂತನಿಂದ ಪ್ರೇರಿಸಲ್ಪಟ್ಟೊಡನೆ, ಅದರಿಂದ ಭೂತಾದಿಯೆಂಬ ಅಹಂಕಾರವೂ, ಪಂಚ ಮಹಾಭೂತಗಳೂ, ಪಂಚತನ್ಮಾತ್ರಗಳೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ, ಇವೈದೂ ಕ್ರಮವಾಗಿ ಹುಟ್ಟಿದುವು. ಆಕಾಶವೇ ಮೊದಲಾದ ಈ ಪಂಚಭೂತಗಳು, ಪರಸ್ಪರಸಂಬಂಧವಿಲ್ಲದೆ ಬೇರೆಯಾಗಿದ್ದಾಗ, ಮುಂ

ದೆ ತಮ್ಮಿಂಬಾಗಬೇಕಾದ ಅಂಡವನ್ನು ಹುಟ್ಟಿಸುವುದಕ್ಕೆ ಅಸಮರ್ಥಗ ಳಾಗಿದ್ದುವು. ಕೂನೆಗೆ ಭಗವಂತನ ಶಕ್ತಿಯಿಂದ ಆವೆಲ್ಲವೂ ಏಕೀಭವಿಸಿ (ಪಂ ಚೀಕರಣವನ್ನು ಹೊಂದಿ) ಒಂದು ಸುವರ್ಣಮಯವಾದ, ಅಂಡರೂಪಕ್ಕೆ ತಿರುಗಿತು. ಈ ಅಂಡವೆಂಬುದು ನಿಶ್ಚೇತನವಾಗಿ, ಆವರಣಜಲದ ಮಧ್ಯದಲ್ಲಿ ಬಹುಕಾಲದವರೆಗೆ ನುಳಿಗಿದ್ದಿತು. ಅಸಿರುದ್ಧರೂಪಿಯಾದ ಭಗವಂತನೂ, ಜಲಾವೃತವಾದ ಆ ಅಂಡಕೋಶದಲ್ಲಿಯೇ ಸಹಸ್ರವತ್ಸರಗಳವರೆಗೆ ಆಡ ಗಿದ್ದನು. ಹೀಗಿರುವಾಗ ಆ ಅನಿರುದ್ಧನ ನಾಭಿಯಿಂದ, ಕೋಟಿಸೂ ರ್ಯಪ್ರಕಾಶವುಳ್ಳ ಒಂದು ಕಮಲವು ಮೇಲೆ ಹೊರಟಿತು. ವಿದುರಾ! ಆ ಕಮಲವೇ ಸಮಸ್ತಜೀವರಾಶಿಗಳಿಗೂ ನಿವಾಸಸ್ಥಾನವು. ಆ ಕಮಲದಿಂದ ಮೊದಲು ಬ್ರಹ್ಮನು ತಾನಾಗಿಯೇ ಹುಟ್ಟಿದನು. ಆಗ ಜಲಶಾಯಿಯಾಗಿ ದ್ದ ಭಗವಂತನು.ತನ್ನ ಸಂಕಲ್ಪರೂಪವಾದ ಜ್ಞಾನದೊಡನೆ ತಾನೂ ಆ ಬ್ರ ಹ್ಮನಲ್ಲಿ ಪ್ರವೇಶಿಸಿದನು. ಅದರ ಬಲದಿಂದ ಚತುರ್ಮುಖನು, ಈ ಸಮಸ್ತ ಪ್ರಪಂಚವನ್ನೂ ಪೂರ್ವಕಲ್ಪದಲ್ಲಿದ್ದಂತೆ ನಾಮರೂಪಭೇದಗಳಿಂದ ಸೃ ಷ್ಟಿಸಲಾರಂಭಿಸಿದನು ಎಲ್ಲಕ್ಕಿಂತಲೂ ಮೊದಲು, ತಮೋಗುಣವನ್ನು ಮುಂದಿಟ್ಟುಕೊಂಡು, ತಾಮಿಸ್ರವೆಂದೂ, ಅಂಧತಾಮಿಸ್ರವೆಂದೂ, ತಮ ಸ್ಸೆಂದೂ, ಮೋಹವೆಂದೂ, ಮಹಾತಮಸ್ಸೆಂದೂ ಕರೆಯಲ್ಪಡುವ ಐ ದುಬಗೆಯ ಅವಿದ್ಯೆಗಳನ್ನು ಸೃಷ್ಟಿಸಿದನು. ಇವುಗಳನ್ನು ಸೃಷ್ಟಿಸಿದ ಮೇಲೆ, ಆಜ್ಞಾನಹೇತುವಾದ ಆ ತನ್ನ ಸ್ವಭಾವವನ್ನು ನೋಡಿ, ಅವನಿಗೆ ಜಿಜ್ಞಾಸೆಯು ಹುಟ್ಟಿತು. ಇದರಿಂದ ಬ್ರಹ್ಮನು, ತಮೋಮಯವಾದ ತನ್ನ ಶರೀರವನ್ನು ಜಗಲೇ ತ್ಯಜಿಸಿಬಿಟ್ಟನು ಅದರಿಂದ ಯಕ್ಷರೂ, ರಾಕ್ಷಸರೂ ಹುಟ್ಟಿ, ಆ ಬ್ರಹ್ಮಶರೀರವನ್ನೇ ತಮಗೆ ಹಸಿವುಬಾಯಾರಿಕೆಗಳನ್ನು ಹೆಚ್ಚಿ ಸತಕ್ಕ ರಾತ್ರಿಯೆನ್ನಾಗಿ ಗ್ರಹಿಸಿದರು. ಮತ್ತು ಅವರೆಲ್ಲರೂ ಹಸಿವು ಬಾ ಯಾರಿಕೆಗಳಿಂದ ಪೀಡಿತರಾಗಿ, ಆ ಚತುರ್ಮುಖಶರೀರವನ್ನೇ ಭಕ್ಷಿಸುವುದ ಕ್ಕೆ ಹೊರಟರು. ಕೆಲವರು "ಅವನನ್ನು ರಕ್ಷಿಸಬೇಡಿರಿ"ಎಂದೂ, ಮತ್ತೆ ಕೆಲ ವರು ಭಕ್ಷಿಸಿಬಿಡಿರಿ" ಎಂದೂ ಕೂಗುತ್ತ ಮೇಲೆ ಬಿಳುವುದಕ್ಕೆಬರಲು, ಚ ತುರ್ಮುಖನು ಭಯಪಟ್ಟು ಅವರನ್ನು ಕುರಿತು "ಎಲ್ಲೆ ನಾನು ನಿಮಗೆ

ಜನಕನಲ್ಲವೆ? ನನ್ನ ಮಕ್ಕಳಾದ ನೀವೇ ಈ ನನ್ನ ದೇಹವನ್ನು ಭಕ್ಷಿಸುವುದು ಯುಕ್ತವೆ? ಈ ಕ್ರೂರಕರ್ಮವನ್ನು ಬಿಡಿರಿ! ನಿಮ್ಮಲ್ಲಿ ಕೆಲವರು ನನ್ನನ್ನು ರಕ್ಷಿಸಬಾರದೆಂದೂ, ಬೇರೆ ಕೆಲವರು ಭಕ್ಷಿಸಬೇಕೆಂದೂ ಕೂಗುತ್ತ ಬಂದುದರಿಂದ, ಕ್ರಮವಾಗಿ ನಿನುಗೆ ರಾಕ್ಷಸರೆಂದೂ, ಯಕ್ಷರೆಂದೂ ಹೆಸರುಂಟಾಗಲಿ!" ಎಂದು ಅವರನ್ನು ತಡೆದು, ಒಡನೆಯೇ ಆ ತಮಸ್ಸನ್ನು ನಿವಾರಿಸತಕ್ಕ ತೇಜಸ್ಸನ್ನು ಹೊರಡಿಸಿ, ಪೂರ್ವಾಭಿಮುಖವಾಗಿ ನಿಂತು, ದೇವತೆಗಳನ್ನು ಸೃಷ್ಟಿಸಿದನು. ಆ ದೇವತೆಗಳೆಲ್ಲರೂ ತೇಜೋವಿಶಿಷ್ಟರಾಗಿ ತೇಜೋರೂಪವಾದ ಆ ಬ್ರಹ್ಮದೇಹವನ್ನು ಹಗಲನ್ನಾಗಿ ಕೈಕೊಂಡರು. ಆಮೇಲೆ ಬ್ರಹ್ಮನು ತನ್ನ ಜಘನಪ್ರದೇಶದಿಂದ ವಿಶೇಷಕಾಮಸ್ವಭಾವವುಳ್ಳ ಅಸುರರನ್ನು ಸೃಷ್ಟಿಸಿದನು. ಇವರು ಹುಟ್ಟಿದೊಡನೆ, ಕಾಮಾತುರದಿಂದ ಸಂಭೋಗವನ್ನಪೇಕ್ಷಿಸಿ, ತನ್ನ ತಂದೆಯಾದ ಬ್ರಹ್ಮನಮೇಲೆ ಬಿದ್ದು, ಅವನನ್ನೇ ಅಪ್ಪಿಕೊಳ್ಳುವುದಕ್ಕಾಗಿ ಹೋದರಂತೆ! ಹೀಗೆ ನಾಚಿಕೆಯಿಲ್ಲದೆ ಮೇಲೆ ಬಿದ್ದುಬರುತ್ತಿರುವ ಆ ಅಸುರರನ್ನು ನೋಡಿ ಬ್ರಹ್ಮನು ನಗುತ್ತ, ಅವರ ದುಶ್ಚೇಷ್ಟೆಯನ್ನು ತಡೆಯುವುದಕ್ಕೆ ಸಾಧ್ಯವಿಲ್ಲದೆ ಓಡಿಹೋಗಿ, ಆಶ್ರಿತರಕ್ಷನಾಗಿಯೂ, ಭಕ್ತಾನುಗ್ರಹಾರ್ಥವಾಗಿ ಅವರವರ ಭಾವನೆಗೆ ತಕ್ಕಂತೆ ದರ್ಶನವನ್ನು ಕೊಡತಕ್ಕವನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಸಮೀಪಿಸಿ, ಕೈಮುಗಿದು ಹೀಗೆಂದು ಪ್ರಾರ್ಥಿಸುವನು. "ಓ ದೇವಾ! ನನ್ನನ್ನು ರಕ್ಷಿಸು ರಕ್ಷಿಸು! ದುಷ್ಟರನ್ನಡಗಿಸಿ ಶಿಷ್ಟರನ್ನು ಪರಿಪಾಲಿಸತಕ್ಕ ಸ್ವಾಮಿ, ಅಪಾಯಕ್ಕೆ ಸಿಕ್ಕಿರುವ ನನ್ನನ್ನು ಕಾಪಾಡಬೇಕು. ನಿನ್ನ ಆಜ್ಞಾಧೀನನಾಗಿ ನಾನು ಪ್ರಜೆಗಳನ್ನು ಸೃಷ್ಟಿಸುತ್ತಿರುವ ಸಂದರ್ಭದಲ್ಲಿ, ಈ ದುರಾತ್ಮರು ಬಲಾತ್ಕಾರದಿಂದ ನನ್ನಮೇಲೆ ಬೀಳುವುದಕ್ಕೆ ಬರುತ್ತಿರುವರು. ಇವರನ್ನು ನಿವಾರಿಸಿ ನನ್ನನ್ನು ರಕ್ಷಿಸತಕ್ಕ ಭಾರವು ನಿನ್ನದಾಗಿದೆ" ಎಂದನು. ಆಗ ಶ್ರೀಮನ್ನಾರಾಯಣನು ಬ್ರಹ್ಮನ ದೈನ್ಯವನ್ನು ನೋಡಿ ಕನಿಕರಗೊಂಡು "ಓ ಚತುರ್ಮುಖಾ! ನೀನು ಕಾಮಪ್ರಚುರವಾದ ಯಾವ ಸ್ವಭಾವದಿಂದ ಇವರನ್ನು ಸೃಷ್ಟಿಸಿದೆಯೋ, ಆ ಸ್ವಭಾವವನ್ನೂ ತ್ಯಜಿಸಿಬಿಡು" ಎಂದನು. ಒಡನೆಯೇ ಬ್ರಹ್ಮನು ಅದನ್ನು

ತ್ಯಜಿಸಲು, ಆದು ಕಾಮೋದ್ರೇಕಕಾಲವಾದ ಸಾಯಂಸಂಧ್ಯೆಯಾಗಿ ಪರಿ ಣಮಿಸಿ, ಸುಂದರಾಕಾರವುಳ್ಳ ಒಂದು ಸ್ತ್ರೀರೂಪದಂತೆ ಕಾಣಿಸಿಕೊಂಡಿತು. ಆ ಸ್ತ್ರೀವ್ಯಕ್ತಿಗಾದರೋ ಕನುಲದಂತೆ ಸುಂದರವಾದ ಕಾಲುಗಳು ! ಕಾ ಲುಗಳಲ್ಲಿ ಘಲಘಲನೆ ಧ್ವನಿಮಾಡುತ್ತಿರುವ ಕಾಲಂದುಗೆಗಳು! ಮದದಿಂದ ತೊಳಲುತ್ತಿರುವ ಕಣ್ಣಾ ಲೆಗಳು! ರತ್ನಮಯವಾದ ಡಾಬು! ನಿತಂಬಬಿಂಬ ದಲ್ಲಿ ಶೋಭಿಸುತ್ತಿರುವ ಅಂದವಾದ ದುಕೂಲದ ಮಡಿ ! ಒಂದಕ್ಕೊಂದು ಒತ್ತುತ್ತಿರುವಂತೆ ಉಬ್ಬಿದ ಸ್ತನಗಳು! ಎಸಳಾದ ಮೂಗು!ಅಂದವಾದ ದಂ ತಪಙ್ತಿ! ಮುಖದಲ್ಲಿ ಮನೋಹರವಾದ ಮುಗುಳ್ನಗೆ ! ಪ್ರಸನ್ನ ದೃಷ್ಟಿ ! ಕಪ್ಪಾದ ಮುಂಗುರುಳು ! ನೋಡುವವರಿಗೆ ಮೋಹವನ್ನುಂಟುಮಾಡು ವಂತೆ ಆಗಾಗ ಲಜ್ಜೆಯಿಂದ ಮೈಮೇಲಿನ ಸೆರಗನ್ನು ಮುಂದಕ್ಕೆಳೆದು ಸರಿ ಮಾಡಿಕೊಳ್ಳತಕ್ಕ ಸೊಬಗು ! ಇಂತಹ ಲೀಲಾವಿಶೇಷದಿಂದ ಕೂಡಿದ ಆ ವ್ಯಕ್ತಿಯನ್ನು ನೋಡಿದೊಡನೆ, ಅಸುರರೆಲ್ಲರೂ ಮತ್ತಷ್ಟು ಕಾಮವೋಹಿ ತರಾಗಿ, ತಮ್ಮೊಳಗೆ ತಾವು ''ಆಹಾ! ಎಂತಹ ಸೌಂದರ್ಯವು ! ಎಂತಹ ಲಾ ವಣ್ಯವು! ಎಂತಹ ನವಯೌವನವು! ನಾವು ಇಷ್ಟುಮಂದಿಯೂ ಕಾಮಿಸಿ ಇವಳಲ್ಲಿ ಅನುರಾಗವನ್ನು ತೋರಿಸುತಿದ್ದರೂ, ಈಕೆಯು ನಮ್ಮಲ್ಲಿ, ಒಬ್ಬರ ನ್ನಾದರೂ ವರಿಸದೆ,ಸ್ವಲ್ಪಮಾತ್ರವೂ ಕಾಮವಿಲ್ಲದವಳಂತೆ ಹೋಗುತ್ತಿರು ವಳಲ್ಲಾ! ಇದೇನಾಶ್ಚರ್ಯವು" ಎಂದು ನಾನಾವಿಧವಾಗಿ ಚರ್ಚಿಸುತ್ತ, ಸ್ತ್ರೀರೂಪದಿಂದಿದ್ದ ಆ ಸಂಧ್ಯೆಯನ್ನು ಪ್ರೀತಿ ಗೌರವಗಳೊಡನೆ ಹೀಗೆಂ ದು ಪ್ರಶ್ನೆಮಾಡುವರು. ''ಎಲೆ ಸುಶ್ರೋಣಿ! ನೀನು ಯಾರು ? ಯಾರ ಕಡೆಯವಳು?ಯಾವ ಕಾರ್ಯಕ್ಕಾಗಿ ಇಲ್ಲಿ ಬಂದಿರುವೆ? ನೀನಾದರೋ ಈಗ ನಿನ್ನ ಸೌಂದರ್ಯವೆಂಬ ಅಮೂಲ್ಯವಾದ ವಸ್ತುವನ್ನು ಮಾರಾಟಕ್ಕಾಗಿ ಇ ಟ್ಟಿರುವಂತಿದೆ! ಆದರೆ ಅದನ್ನು ಕೊಂಡುಕೊಳ್ಳುವಷ್ಟು ಭಾಗ್ಯವನ್ನು ನಾ ವು ಪಡೆಯಲಿಲ್ಲ! ಹೀಗೆ ಭಾಗ್ಯಹೀನರಾದ ನಮ್ಮನ್ನು ಬಾಧಿಸುತ್ತಿರುವೆಯ ಲ್ಲಾ? ನೀನು ದೇವತಾಸ್ತ್ರೀಯೋ?ಮನುಷ್ಯಸ್ತ್ರೀಯೋ? ಯಾರೋ ಗೊ ತ್ತಾಗಲಿಲ್ಲ. ನೀನು ಯಾರಾದರೇನು? ನಮ್ಮ ಭಾಗ್ಯೋದಯದಿಂದ ನಿನ್ನ ದರ್ಶನವು ನಮಗೆ ಲಭಿಸಿತು! ಎಲೆ ನಾರೀಮಣಿಯೇ! ಮೇಲೆಮೇಲೆ ಪುಟಹಾರು

ತ್ತಿರುವ ಚಂಡನನ್ನು ಹೊಡೆಯುವುದಕ್ಕಾಗಿ ಆತುರಪಡುತ್ತಿರುವ ಈ ನಿನ್ನ ಪಾದಕಮಲವು, ನಿಂತಲ್ಲಿ ನಿಲ್ಲದೆ ಚಲಿಸುತ್ತಿರುವುದು ! ನೀನು ಕೈಯಿಂದ ಚಂಡಾಡುತ್ತಿರುವ ರೀತಿಯಲ್ಲಿ, ನಮ್ಮ ಮನಸ್ಸನ್ನೂ ಚಂಡಾಡಿಸುತ್ತಿರುವೆಯಲ್ಲಾ ! ಈ ನಿನ್ನ ಉಬ್ಬಿದ ಸ್ತನಗಳ ಭಾರದಿಂದ ಭಯಪಟ್ಟು ಕಂಪಿದಂತೆ ನಿನ್ನ ಮಧ್ಯಭಾಗವು ಬಹಳವಾಗಿ ಕೃತಿಸಿ ಕಷ್ಟಪಡುತ್ತಿರುವುದು ! ನಿನ್ನ ದೃಷ್ಟಿಯು ಗಂಭೀರವಾಗಿ ಪ್ರಸರಿಸುತ್ತಿರುವುದು ! ಎಲೆ ಸುಂದರಿ ! ಈ ಚಂಡಾಟದ ಆತುರದಲ್ಲಿ ಬಿಚ್ಚಿ ಹೋಗಿರುವ ಈ ನಿನ್ನ ತುರುಬನ್ನಾದರೂ ಸರಿಯಾಗಿ ಕಟ್ಟಿಕೊಳ್ಳಬಾರದೆ?" ಎಂದರು. ಹೀಗೆ ಆ ಅಸುರರೆಲ್ಲರೂ ಕಾಮಾತುರದಿಂದ ಗುಂಪುಕೂಡಿ ವಿವೇಕವಿಲ್ಲದವರಾಗಿ * ಆ ಸಂಜ್ಞೆಯನ್ನೇ ಒಂದು ಸುಂದರಸ್ತ್ರೀಯನ್ನಾಗಿ ತಿಳಿದು ಅವಳನ್ನು ಗ್ರಹಿಸಿದರು. ಆಗ ಬ್ರಹ್ಮನು ತನಗೆ ಬಿಡುಗಡೆಯಾಯಿತೆಂಬ ಸಂತೋಷದಿಂದ ತನ್ನನ್ನೇ ತಾನು ಮೂಸಿನೋಡುತ್ತ, ತನ್ನ ಸೌಂದರ್ಯದಿಂದ ಗಂಧರ್ವರನ್ನೂ, ಅಪ್ಸರಸ್ಸುಗಳನ್ನೂ ಹುಟ್ಟಿಸಿ, ಆ ಸ್ವಭಾವವನ್ನೂ ಅಷ್ಟರಲ್ಲಿಯೇ ಬಿಟ್ಟನು ಅದು ಪ್ರಾತಿಸ್ವಂಥ್ಯವೆನಿಸಿಕೊಂಡಿತು. ಆಸನ್ನ ವಿಶ್ವಾವಸು ಮೊದಲಾದ ಗಂಧರ್ವರೂ, ಅಪ್ಸರಸ್ಸುಗಳೂ ಗ್ರಹಿಸಿದರು. ಆಮೇಲೆ ಬ್ರಹ್ಮನು ನಿದ್ರಾರೂಪವಾದ ಸ್ವಭಾವವನ್ನು ಹಿಡಿದು, ಅದರಿಂದ ಭೂತಗಳನ್ನೂ, ಪಿಶಾಚಿಗಳನ್ನೂ ಸೃಷ್ಟಿಸಿದನು. ಕೇವಲನಿರ್ವಾಣವಾಗಿ ನಿಂತು ತಲೆಕೆದರಿಕೊಂಡಿದ್ದ ಇವರನ್ನು ನೋಡಿ ಅಸಹ್ಯಪಟ್ಟು, ಕಣ್ಣುಗಳನ್ನು ಮುಚ್ಚಿ ಆ ಸ್ವಭಾವವನ್ನೂ ಅಷ್ಟಕ್ಕೇ ಬಿಟ್ಟುಬಿಟ್ಟನು. ಆದನ್ನು ಆ ಭೂತಪಿಶಾಚಾದಿಗಳು ಕೈಕೊಂಡುವು. ಆಕಳಿಕೆ ಮುಂತಾದ ವಿಕಾರಗಳುಳ್ಳ ಈ ಆಲಸ್ಯಸ್ವಭಾವದ ಸಂಬಂಧದಿಂದಲೇ, ಭೂತಗಳಲ್ಲಿ ನಿದ್ರೆಯೂ, ಉನ್ಮಾದವೂ, ಆಲಸ್ಯವೂ ಹೆಚ್ಚಾಗಿ ಕಾಣುವುದು ಆಮೇಲೆ ಬ್ರಹ್ಮನು ತನ್ನ ಬಲವನ್ನು ಮುಂದಿಟ್ಟುಕೊಂಡು, ಸಾಧ್ಯರನ್ನೂ, ಪಿತೃದೇವತೆಗಳನ್ನೂ ಪರೋ

---

* ಇಲ್ಲಿ ಅಸ್ತಮಿಸುತಿದ್ದ ಸೂರ್ಯನೇ ಚಂಡು. ಮೇಘಗಳ ನಡುನಡುವೆ ಕಾಣುವುದೇ ಸಂಚಾರರೀತಿ, ನಕ್ಷತ್ರಗಳೇ ಕಣ್ಣು, ಕತ್ತಲೆಯೇ ತಲೆಕೂದಲೆಂದು ಊಹಿಸಿಕೊಳ್ಳಬೇಕು.

ಕ್ಷದಲ್ಲಿ ಸೃಷ್ಟಿಸಿದನು. ಆ ಸಾಧ್ಯರೂ,ಪಿತೃಗಳೂ,ಬಲರೂಪವಾದ ಅಬ್ರಹ್ಮನ ದೇಹವನ್ನೇ ಗ್ರಹಿಸಿದರು. ಇದಕ್ಕಾಗಿಯೇ ರಾಜ್ಯವನ್ನೂ, ಸಂತಾನವೃದ್ಧಿಯನ್ನೂ ಅಪೇಕ್ಷಿಸತಕ್ಕವರು, ಕ್ರಮವಾಗಿ ಸಾಧ್ಯರನ್ನೂ, ಪಿತೃದೇವತೆಗಳನ್ನೂ ಭಜಿಸುವರು. ಆಮೇಲೆ ಬ್ರಹ್ಮನು ತಿರೋಧಾನಶಕ್ತಿಯನ್ನವಲಂಬಿಸಿ, ಸಿದ್ಧವಿದ್ಯಾಧರರನ್ನು ಸೃಷ್ಟಿಸಿ, ಆ ಅದೃಶ್ಯಶಕ್ತಿಯೆಂಬ ಅದ್ಭುತಸ್ವಭಾವವನ್ನು ಸಿದ್ಧರಿಗೂ, ವಿದ್ಯಾಧರರಿಗೂ ಕೊಟ್ಟನು. ಆಮೇಲೆ ಬ್ರಹ್ಮನು ತನ್ನ ಪ್ರತಿಬಿಂಬವನ್ನು ನೋಡುತ್ತ, ಅದರಿಂದ ಕಿನ್ನರರನ್ನೂ, ಕಿಂಪುರುಷರನ್ನೂ ಸೃಷ್ಟಿಸಿ. ಆ ಪ್ರತಿಬಿಂಬವನ್ನೂ ಅಷ್ಟಕ್ಕೇ ತ್ಯಜಿಸಿಬಿಟ್ಟನು. ಕಿನ್ನರಾದಿಗಳು ಅದನ್ನು ಗ್ರಹಿಸಿದರು. ಇದರಿಂದ ಕಿನ್ನರರೂ ಕಿಂಪುರುಷರೂ, ಬಿಂಬಪ್ರತಿಬಿಂಬಗಳಂತೆ ಜತೆಜತೆಯಾಗಿಯೇ ಇದ್ದು, ಪ್ರತಿದಿನದ ಪ್ರಾತಃಕಾಲದಲ್ಲಿಯೂ, ಆ ಬ್ರಹ್ಮನನ್ನು ಗಾನಮಾಡಿ, ಸ್ತುತಿಸುವರು. ಆಮೇಲೆ ಬ್ರಹ್ಮನು ದೇಹವನ್ನು ಉದ್ದಕ್ಕೆ ನೀಡಿ ಮಲಗಿ, ತನ್ನ ಸೃಷ್ಟಿಯು ವೃದ್ಧಿಯಾಗದುದಕ್ಕಾಗಿ ಬಹಳ ಚಿಂತಿಸುತ್ತಿದ್ದು, ಸ್ವಲ್ಪಹೊತ್ತಿನಮೇಲೆ ಆ ಚಿಂತಾಸ್ವಭಾವವನ್ನು ಬಿಟ್ಟು, ಉಗ್ರವಾದ ಕೋಪವನ್ನು ಹೊಂದಿದನು. ಆಗ ದೇಹದಿಂದುದಿರಿದ ಕೂದಲುಗಳೇ ಸರ್ಪಗಳಾಗಿ ಹುಟ್ಟಿದುವು. ಓ ವಿದುರಾ! ಬ್ರಹ್ಮನು ಚಿಂತೆಯಿಂದ ಕೈಕಾಲುಗಳನ್ನೊದರುವಾಗ, ಆ ವೇಗದಲ್ಲಿ ಹುಟ್ಟಿದುದರಿಂದ, ಅವು ಸರ್ಪಗಳೆಂದೂ, (ವೇಗವುಳ್ಳವು) ನಾಗಗಳೆಂದೂ, ಕೋಪಾವಸ್ಥೆಯಲ್ಲಿ ಹುಟ್ಟಿದುದರಿಂದ ಕ್ರೂರಸ್ವಭಾವವುಳ್ಳವುಗಳೆಂದೂ, ಮೈನೀಡಿ ಮಲಗಿದ್ದಾಗ ಹುಟ್ಟಿದುದರಿಂದ ಭೋಗಿಗಳೆಂದೂ, ನೀಡಿದ ಕೂದಲುಳ್ಳವುಗಳೆಂದೂ ಕರೆಯಲ್ಪಡುವುವು. ಅನಂತರದಲ್ಲಿ ಬ್ರಹ್ಮನು ಈ ದೇವಸೃಷ್ಟಿಯಿಂದ ತನ್ನನ್ನು ಕೃತಕೃತ್ಯನನ್ನಾಗಿ ಭಾವಿಸಿ, ಮನಸ್ಸಿನಲ್ಲಿ ಒಮ್ಮೆ ನೆಮ್ಮದಿಯಿಂದಿದ್ದಾಗ, ಪ್ರಜಾಸೃಷ್ಟಿಕಾರ್ಯಕ್ಕೆ ಸಮರ್ಥರಾದ ಮನುಗಳನ್ನು ಸೃಷ್ಟಿಸಿ, ಅವರಿಗೆ ತನ್ನಂತೆ ಪುರುಷಾಕಾರವಾದ ದೇಹವನ್ನೇ ಕೊಟ್ಟನು. ಹೀಗೆ ಬ್ರಹ್ಮನಿಂದ ಪುರುಷಾಕಾರವನ್ನು ಹೊಂದಿದವರೆಲ್ಲರೂ ಆಶ್ಚರ್ಯದಿಂದ ಬ್ರಹ್ಮನಬಳಿಗೆ ಬಂದು ''ದೇವಾ! ನೀನು ಮಾಡಿದ ಈ ಪುರುಷಾಕಾರಸೃಷ್ಟಿಯೇ ಬಹಳ ಉತ್ತಮವಾದುದು. ಸ್ವರ್ಗ

ಮೋಕ್ಷಸಾಧನಗಳಾದ ಕರ್ಮಗಳೆಲ್ಲವೂ ಇಂತಹ ಪುರುಷಜನ್ಮದಿಂದಲೇ ಆ ಚರಿಸಲ್ಪಡಬೇಕಾಗಿರುವುದು. ಆದುದರಿಂದ ನಾವು ಈ ಪೌರುಷಶರೀರದಿಂದಲೇ ಸಮಸ್ತಭೋಗ್ಯವರ್ಗಗಳೆಲ್ಲವನ್ನೂ ಅನುಭವಿಸಬಲ್ಲೆವು" ಎಂದು ಆ ಬ್ರಹ್ಮನನ್ನು ಕೊಂಡಾಡುತಿದ್ದರು. ಆಮೇಲೆ ಬ್ರಹ್ಮನು ತಪಸ್ಸು, ಭಗವದುಪಾಸನಾರೂಪವಾದ ವಿದ್ಯೆ, ಜ್ಞಾನ, ಚಿತ್ತೈಕಾಗ್ರತೆ, ಮುಂತಾದುವುಗಳಿಂದ ಋಷಿಗಳನ್ನು ಸೃಷ್ಟಿಸಿದನು. ಅವರಲ್ಲಿ ಕೆಲಕೆಲವರಿಗೆ, ಆ ತಪಸ್ಸು, ವಿದ್ಯೆ, ಸಮಾಧಿ, ಅಣಿಮಾದಿಸಿದ್ಧಿಗಳು, ಇವೇ ಮೊದಲಾದ ತನ್ನ ಸ್ವಭಾವದಲ್ಲಿ ಒಂದೊಂದಂಶಗಳನ್ನು ಕೊಟ್ಟನು." ಎಂದನು ಇಲ್ಲಿಗೆ ಇಪ್ಪತ್ತನೆಯ ಅಧ್ಯಾಯವು.

ಕರ್ದಮನ ತಪಸ್ಸು, ಭಗವಂತನು ಅವನಲ್ಲಿ ಪ್ರಸನ್ನನಾಗಿ ಅವನಿಗೆ ವಿವಾಹಮಾರ್ಗವನ್ನು ತೋರಿಸಿದುದು

ತಿರುಗಿ ವಿದುರನು ಮೈತ್ರೇಯನನ್ನು ಕುರಿತು "ಎಲೈ ಮಹಾತ್ಮನೆ! ಲೋಕದಲ್ಲಿ ಸ್ವಾಯಂಭುವಮನುವಿನ ವಂಶವು ಅತ್ಯಂತವಿಖ್ಯಾತವಾದುದಲ್ಲವೆ? ಆ ವಂಶದಲ್ಲಿ ಸ್ತ್ರೀಪುರುಷಸಂಯೋಗದಿಂದ ಪ್ರಜಾವೃದ್ಧಿಯಾದ ಕ್ರಮವೇನು? ಆ ಸ್ವಾಯಂಭುವನ ಪುತ್ರರಾದ ಪ್ರಿಯವ್ರತನೂ, ಉತ್ತಾನಪಾದನೂ, ಸಪ್ತದ್ವೀಪಗಳಿಂದ ಕೂಡಿದ ಸಮಸ್ತಭೂಮಿಯನ್ನೂ ಧರ್ಮದಿಂದ ಪಾಲಿಸುತಿದ್ದುದಾಗಿ ಹೇಳಿದೆಯಷ್ಟೆ? ಅವರ ಧರ್ಮಪರಿಪಾಲನ ಕ್ರಮವನ್ನು ವಿವರಿಸಬೇಕು. ಮತ್ತು ದೇವಹೂತಿಯೆಂಬ ಸ್ವಾಯಂಭುವನ ಪುತ್ರಿಯನ್ನು, ಕರ್ದಮಪ್ರಜಾಪತಿಯು ಮದುವೆಯಾದುದಾಗಿ ಹೇಳಿದೆಯಲ್ಲವೆ! ಶಮದಮಾದಿಗುಣಗಳಿಂದ ಕೂಡಿದ ಆ ದೇವಹೂತಿಯಲ್ಲಿ, ಕರ್ದಮನು ಎಷ್ಟುಮಕ್ಕಳನ್ನು ಪಡೆದನು? ರುಚಿಯೆಂದೂ, ದಕ್ಷನೆಂದೂ ಪ್ರಸಿದ್ಧರಾದ ಬ್ರಹ್ಮನ ಪುತ್ರರು, ಕ್ರಮವಾಗಿ ಆಕೂತಿಯೆಂದೂ, ಪ್ರಸೂತಿಯೆಂದೂ ಹೆಸರುಗೊಂಡ ಪತ್ನಿಯರನ್ನು ವರಿಸಿದಮೇಲೆ, ಅವರು ಪ್ರಜಾವೃದ್ಧಿಯನ್ನು ಮಾಡಿದ ಕ್ರಮವೇನು? ಇವೆಲ್ಲವನ್ನೂ ನನಗೆ ತಿಳಿಸಬೇಕು" ಎಂದನು. ಅದಕ್ಕಾ ಮೈತ್ರೇಯನು ವಿದುರನನ್ನು ಕುರಿತು, "ವಿದುರಾ ಕೇಳು;!

ವು.ಎಲ್ಲಾ ತಪಃಫಲವೂ ಈಗ ನನಗೆ ಕೈಗೂಡಿತು. ಈ ನಿ
ೀಅಲ್ಲವೇ ಯೋಗೀಶ್ವರರೆಲ್ಲರೂ ಅನೇಕ ಜನ್ಮಗಳವರೆಗೆ
ೋಗವನ್ನು ಹಿಡಿದು, ಕೊನೆಗೆ ಎಷ್ಟೋಪ್ರಯತ್ನದಿಂದ ಅದ
ುವರು! ಹೀಗೆ ಮುಹಾಯೋಗಿಗಳಿಗೂ ದುರ್ಲಭವಾದ ನಿನ್ನ ದ
ಷ್ಟು ಸುಲಭವಾಗಿ ನನಗೆ ಲಭಿಸಿದುದು,ನನ್ನ ಭಾಗ್ಯೋದಯವಲ್ಲ
ಂವಾ! ಲೋಕದಲ್ಲಿ ಅನೇಕಮಾನವರು ನಿನ್ನ ಮಾಯಾವಿಶಿಷ್ಟವಲ್ಲ
ಕ್ಕಬಿದ್ದು,ಬುದ್ಧಿಗೆಟ್ಟು,ಸಂಸಾರಸಮುದ್ರಕ್ಕೆ ನಾವೆಯೆಂತಿರುವ ನಿನ್ನ ಪಾ
ದಾರವಿಂದವನ್ನು ಅತ್ಯಲ್ಪಸುಖಕ್ಕಾಗಿಯೂ ಉಪಾಸನೆಮಾಡುವುದುಂಟು.
ನೀನು ನಿನ್ನನ್ನು ಭಜಿಸಿದವರಿಗೆ ಸರ್ವೋತ್ತಮವಾದ ಮೋಕ್ಷವನ್ನೇ ಕೊಡು
ವುದಕ್ಕೆ ಸಿದ್ಧನಾಗಿದ್ದರೂ, ಅವರವರ ಇಷ್ಟಾನುಸಾರವಾಗಿ ಅವರಿಗೆ ಅತ್ಯ
ಲ್ಪವಾದ ಸಂಸಾರಸುಖವನ್ನೇ ಕೊಟ್ಟು ತೃಪ್ತಿಪಡಿಸುವೆ ! ಉತ್ತಮಪುರು
ಷಾರ್ಥವನ್ನು ಕೈಗೂಡಿಸಬಲ್ಲ ನಿನ್ನನ್ನು ಭಜಿಸಿ, ಈ ಅಲ್ಪಸುಖವನ್ನು ಪಡೆ
ಯತಕ್ಕವರು ವಿವೇಕಹೀನರೆಂಬುದರಲ್ಲಿ ಸಂದೇಹವೇನಿಲ್ಲ. ಹಾಗಿದ್ದರೂ ಈ
ಗ ನಾನೂಕೂಡ. ನಿನ್ನನ್ನು ಇನ್ನುವರೆಗೆ ಉಪಾಸನೆಮಾಡಿ, ಆ ಅಲ್ಪಸುಖ
ವನ್ನೇ ಅಪೇಕ್ಷಿಸತಕ್ಕವನಾಗಿರುವೆನು ಮೋಕ್ಷದಾಯಕನಾದ ನೀನು ನ
ನ್ನಲ್ಲಿ ಪ್ರಸನ್ನನಾಗಿರುವಾಗಲೂಕೂಡ, ಈಗ ನನಗೆ ಆ ಮುಕ್ತಿಕಾಂತಿಯ
ನ್ನು ಪಡೆಯತಕ್ಕ ಭಾಗ್ಯವಿಲ್ಲದಂತಿರುವುದು. ಗುಣದಲ್ಲಿಯೂ, ವಯಸ್ಸಿನ
ಲ್ಲಿಯೂ, ರೂಪದಲ್ಲಿಯೂ, ಮೇಲೆನಿಸಿಕೊಂಡು ನನಗೆ, ಅನುಕೂಲೆಯಾಗಿ
ಗೃಹಸ್ಥಾಶ್ರಮದಲ್ಲಿ ನನಗೆ ಸೌಖ್ಯವನ್ನು ಹೆಚ್ಚಿಸತಕ್ಕ ಒಬ್ಬ ಸಾಮಾನ್ಯಸ್ತ್ರೀ
ಯನ್ನು ಅನುಗ್ರಹಿಸಿಕೊಡಬೇಕೆಂದು ನಿನ್ನಲ್ಲಿ ಪ್ರಾರ್ಥಿಸಬೇಕಾಗಿರುವುದು.
ಆಹಾ! ಈ ನನ್ನ ದುರ್ಬುದ್ಧಿಗೆ ನಾನೇ ಲಜ್ಜಿಪಡಬೇಕಲ್ಲವೆ ? ಕಲ್ಪವೃಕ್ಷ
ದಂತೆ ಸರ್ವಫಲಪ್ರದನಾದ ನೀನು ನನ್ನ ಕಣ್ಣಮುಂದೆ ಬಂದುನಿಂತಿರು
ವಾಗಲೂ, ಅತ್ಯಲ್ಪವಾದ ಸಂಸಾರಸುಖವನ್ನು ಪೇಕ್ಷಿಸಿ, ಕಾಮುಕಸ್ವಭಾವವ
ನ್ನು ನಿಲ್ಲಿಸಿ ತೋರಿಸಬೇಕಾಯಿತು ! ಓ ಪ್ರಭೂ ! ಈ ವಿಷಯದಲ್ಲಿ ನಾ
ನು ಯುಕ್ತಾಯುಕ್ತವನ್ನು ಬಲ್ಲವನಾಗಿದ್ದರೂಕೂಡ, ಈ ಅಲ್ಪಸುಖವನ್ನ
ಪೇಕ್ಷಿಸುವುದೇಕೆಂಬುದು ನಿನಗೆ ತಿಳಿಯದ ವಿಷಯವಲ್ಲ! ನಾನು ಯಾವ ಕಾ

ಜತುರ್ಮುಖನು ಕರ್ದಮನನ್ನು ಪಡೆದು, ಅವನಿಗೆ
ಬೇಕೆಂದು ಹೇಳಿದೊಡನೆ,ಆ ಕರ್ದಮನು ಸರಸ್ವತೀನದಿ
ಅಲ್ಲಿ ಹತ್ತು ಸಾವಿರವರುಷಗಳವರೆಗೆ ತಪಸ್ಸನ್ನು ಮಾಡುತಿರ್ದ
ರ್ದಮನು ದೃಢಮನಸ್ಸಿನಿಂದ ಭಗವದುಪಾಸನಾರೂಪ
ಯೋಗವನ್ನು ಹಿಡಿದು,ಕೃತಯುಗಾರಂಭದಲ್ಲಿ ಹತ್ತು ಸಾವಿರವಷ
ತಪಸ್ಸುಮಾಡುತ್ತಿರಲು, ಪುಂಡರೀಕಾಕ್ಷನಾದ ಭಗವಂತನು ಅವನಲ್ಲಿ
ನ್ನನಾಗಿ, ಪಂಚೋಪನಿಷತ್ತುಗಳಿಂದ ವೇದ್ಯವಾಗಿಯೂ, ಸೌಂದರ್ಯ
ಕುಮಾರ್ಯಗಳೇ ಮೊದಲಾದ ಅನೇಕಕಲ್ಯಾಣಗುಣಗಳಿಗೆ ನೆಲೆಯಾಗಿಯೂ
ಇರುವ ತನ್ನ ದಿವ್ಯಮಂಗಳವಿಗ್ರಹದೊಡನೆ ಅವನಿಗೆ ಪ್ರತ್ಯಕ್ಷನಾದನು. ನಿ
ಷ್ಕಲ್ಮಷವಾಗಿಯೂ, ಕೋಟಿಸೂರ್ಯಪ್ರಕಾಶಮಾನವಾಗಿಯೂ ಇದ್ದ ಆ
ಭಗವಂತನ ಮಹಾದ್ಭುತಸೌಂದರ್ಯವನ್ನು ಕೇಳಬೇಕೆ ? ಕಂಠದಲ್ಲಿ ತಾವರೆ
ನೈದಿಲೆಗಳಿಂದ ಕಟ್ಟಿದ ಹೂವಿನದಂಡೆ! ಹಣೆಯಮೇಲೆ ಹೊಳೆಯುತ್ತಿರುವ
ಕಪ್ಪಾದ ಮುಂಗುರುಳು! ನಡುವಿನಲ್ಲಿ ಸುವರ್ಣಕಾಂತಿಯಿಂದ ಥಳಥಳಿಸುವ
ಪಟ್ಟೆವುಡಿ! ತಲೆಯಲ್ಲಿ ರತ್ನಕಿರೀಟದ ಹೊಳಪು! ಕಿವಿಯಲ್ಲಿ ಜಾಜ್ವಲ್ಯಮಾನ
ವಾದ ಕುಂಡಲಗಳು ! ಮೂರು ಕೈಗಳಲ್ಲಿ ಶಂಖ ಚಕ್ರ ಗದೆಗಳೆಂಬ
ಮೂರು ದಿವ್ಯಾಯುಧಗಳು!ಮತ್ತೊಂದು ಹಸ್ತದಲ್ಲಿ ಲೀಲಾರ್ಥವಾಗಿ ಹಿಡಿ
ದಿರುವ ಬೀಳೀ ನೈದಿಲೆಯ ಹೂವು!ನೋಡುವವರ ಮನಸ್ಸನ್ನು ~~ಆಕರ್ಷಿಸು~~
ವಂತೆ ಕರುಣಾರಸವನ್ನು ತೊಟ್ಟಿಕ್ಕುತಿರುವ ಪ್ರಸನ್ನದೃಷ್ಟಿ ! ಎದೆಯಲ್ಲಿ
ಮಹಾಲಕ್ಷ್ಮಿ ! ಕಂಠದಲ್ಲಿ ಕೌಸ್ತುಭಮಣಿ ! ಇಂತಹ ದಿವ್ಯವೈಭವದಿಂದ
ಕೂಡಿದ ಭಗವಂತನು, ಗರುಡಾರೂಢನಾಗಿ ಬಂದು, ಆಕಾಶಮಧ್ಯದಲ್ಲಿ
ನಿಂತಿರುವಂತೆ ಈ ಕರ್ದಮನ ಕಣ್ಣಿಗೆ ಗೋಚರಿಸಿದನು. ಇಂತಹ ದಿ
ವ್ಯಾಕೃತಿಯು ಕಣ್ಣಮುಂದೆ ಗೋಚರಿಸಿದೊಡನೆ, ಕರ್ದಮನು ಅತ್ಯಾ
ನಂದದಿಂದುಕ್ಕುತ್ತ, ತನ್ನ ತಲೆಯನ್ನು ನೆಲಕ್ಕೆ ಸೋಕಿಸಿ, ಸಾಷ್ಟಾಂಗಪ್ರ
ಣಾಮವನ್ನುಮಾಡಿ,ಭಕ್ತಿಯುಕ್ತನಾಗಿ ಕೈಜೋಡಿಸಿ ನಿಂತು, ಆ ಭಗವಂತ
ನನ್ನು ಸ್ತುತಿಸಲಾರಂಭಿಸಿದನು. "ಓ ದೇವಾ ! ಲೋಕಸ್ತುತ್ಯನಾಗಿಯೂ,
ಶುದ್ಧಸತ್ವಮಯನಾಗಿಯೂ ಇರುವ ನಿನ್ನ ದರ್ಶನದಿಂದ ನನ್ನ ಕಣ್ಣುಗಳೇ

ಆರ್ಯವನ್ನು ನಡೆಸಬೇಕಾದರೂ ನಿನ್ನ ಆಜ್ಞಾಧೀನನಾಗಿ ನಡೆಯಬೇಕೇ ಹೊರತು, ಯಾವ ವಿಷಯದಲ್ಲಿಯೂ ಸ್ವತಂತ್ರನಲ್ಲ. ಓ ಸರ್ವೇಶ್ವರಾ! ಈ ಸಾಂಸಾರಿಕಸ್ವಭಾವವನ್ನು ಅನುಸರಿಸುವುದಕ್ಕೆ ನನಗೆ ಸ್ವಲ್ಪಮಾತ್ರವೂ ಸೆಮ್ಮತವಿಲ್ಲ! ಹಾಗಿದ್ದರೂ, ನನ್ನ ತಂದೆಯಾದ ಬ್ರಹ್ಮದೇವನ ಆಜ್ಞೆಯನ್ನು ಮೀರಲಾರೆನು. ದೇವಾ! ಸಮಸ್ತಲೋಕವೂ ನಿನ್ನಿಂದ ಉಪದೇಶಿಸಲ್ಪಟ್ಟ ವೇದವಾಕ್ಯಗಳೆಂಬ ಹಗ್ಗದಲ್ಲಿ ಹಸುವಿನಂತೆ ಕಟ್ಟುಬಿದ್ದು ನಡೆಯುತ್ತಿರುವುದು. ಹಾಗೆಯೇ ನಾನೂ ಕಾಮಕ್ಕೆ ಕಟ್ಟುಬಿದ್ದು ಈ ಸಾಂಸಾರಿಕಲೋಕವನ್ನೇ ಅನುವರ್ತಿಸಿ ನಡೆಯಬೇಕೆಂದು, ಚತುರ್ಮುಖರೂಪದಿಂದ ನನಗೆ ತಂದೆಯಾಗಿರುವ ನಿನ್ನಿಂದಲೇ ಆಜ್ಞಾಪಿಸಲ್ಪಟ್ಟಿರುವೆನು. ಆದುದರಿಂದ ಆ ಗೃಹಸ್ಥಧರ್ಮಗಳಿಂದಲೇ ನಾನು ನಿನ್ನನ್ನು ಆರಾಧಿಸಬೇಕಾಗಿರುವುದು. ಎಲೈ ದೇವದೇವನೆ! ಲೋಕದಲ್ಲಿ ಜ್ಞಾನವುಳ್ಳ ಮಹಾತ್ಮರು, ಈ ಸಾಂಸಾರಿಕಲೋಕಗಳನ್ನೂ, ಅದಕ್ಕೆ ಸೇರಿದ ವ್ಯಾಪಾರಗಳನ್ನೂ, ಪಶುಪ್ರಾಯವಾದ ಇತರಪರಿವಾರವನ್ನೂ ಬಿಟ್ಟು, ನಿನ್ನ ಕಥಾಮೃತವನ್ನು ಆಗಾಗ ಪಾನಮಾಡುತ್ತ, ಹುಟ್ಟು, ಮುಪ್ಪು, ಸಾವು ಎಂಬಿವೇ ಮುಂತಾದ ಶರೀರಧರ್ಮಗಳನ್ನು ನಿರಾಕರಿಸಿದವರಾಗಿ, ಸಂಸಾರತಾರಕವಾದ ನಿನ್ನ ಪಾದಾರವಿಂದವನ್ನಾಶ್ರಯಿಸುವರೋ, ಅಂತವರ ಆಯುಸ್ಸುಮಾತ್ರವೇ ಸಾರ್ಥಕವೆನಿಸುವುದು. ಹಸಿವು, ಬಾಯಾರಿಕೆ, ಮುಪ್ಪು, ಮುಂತಾದ ಕಷ್ಟಗಳೊಂದೂ ಅವರನ್ನು ಬಾಧಿಸಲಾರವು. ಓ ದೇವಾ! ಕಾಲವೆಂಬ ಚಕ್ರವು ನಿನ್ನ ಕೈಯಲ್ಲಿ ಅಡಗಿರುವುದು. (ಅಧಿಕಮಾಸದೊಡಗೂಡಿ) ಹದಿಮೂರು ತಿಂಗಳುಗಳೆಂಬ ಅಡ್ಡಗಡ್ಡಿಗಳಿಂದಲೂ, ದಿನಗಳೆಂಬ ಮುನ್ನೂರರವತ್ತು ಗಿಣ್ಣು (ತುಂಡು)ಗಳಿಂದಲೂ, ಋತುಗಳೆಂಬ ಆರೆಳೆಯ ಪಟ್ಟೆಗಳಿಂದಲೂ, ಕ್ಷಣ ಮುಹೂರ್ತಾದಿಗಳೆಂಬ ಅನೇಕ್ಲಾನೇಕಪಳಗಳಿಂದಲೂ, ಚಾತುರ್ಮಾಸ್ಯಗಳೆಂಬ ಮೂರು ನಾಭಿ(ಮಧ್ಯರಂಧ್ರ ಅಥವಾ ತಿರುಗುಳಿ)ಗಳಿಂದಲೂ ಏರ್ಪಟ್ಟು, ತೀವ್ರವೇಗವುಳ್ಳ ಕಾಲಚಕ್ರವೆಂಬುದು ನಿನ್ನಿಂದಲೇ ತಿರುಗಿಸಲ್ಪಡುತ್ತ, ಸಂಸಾರಿಗಳ ಆಯುಸ್ಸನ್ನು ಕ್ಷಣಕ್ಷಣಕ್ಕೂ ಎಳೆದುಕೊಂಡು ಹೋಗುತಿದ್ದರೂ, ಅದರಿಂದುಂಟಾಗತಕ್ಕ ಆಯುಃಕ್ಷಯವು ನಿನ್ನ

ಗುಣಾನುಭವವನ್ನು ಮಾಡತಕ್ಕವರ ವಿಷಯದಲ್ಲಿಮಾತ್ರ ಸಂಭವಿಸಲಾರದು ಅಂತಹ ಕಾಲಚಕ್ರವೇ ನಿನ್ನ ಕೈಯಲ್ಲಿ ಸೇರಿರುವುದರಿಂದ, ಜೀವಿಗಳ ಆಯುಸ್ಸನು ತಗ್ಗಿಸುವುದಕ್ಕಾಗಲಿ, ಹೆಚ್ಚಿಸುವುದಕ್ಕಾಗಲಿ ನೀನಲ್ಲದೆ ಬೇರೊಬ್ಬರು ಸಮರ್ಥರಲ್ಲ. ಈಗ ನಾನೂ ನಿನ್ನಾಜ್ಞೆಯನ್ನು ವೀರಲಾರದುದಕ್ಕಾಗಿ ಸಂಸಾರವನ್ನ ವಲಂಬಿಸುವೆನೇಹೊರತು ಕಾಮಸುಖಾಪೇಕ್ಷೆಯಿಂದಲ್ಲ. ಈಕಾರಣದಿಂದ ನೀನು ನನ್ನಲ್ಲಿ ದಯೆಯಿಟ್ಟು, ನನ್ನ ಆಯುಃಪ್ರಮಾಣವು ವ್ಯರ್ಥವಾಗಿ ಕಳೆದು ಹೋಗದಂತೆ ಅನುಗ್ರಹಿಸಬೇಕು. ನಿನ್ನನ್ನು ನಾನು ಮರೆಹೊಕ್ಕಿರುವೆನು. ಆದರೆ ಬ್ರಹ್ಮರುದ್ರಾದಿದೇವತೆಗಳೆಲ್ಲರೂ ಇರುವಾಗ, ಅವರೆಲ್ಲರನ್ನೂ ಬಿಟ್ಟು ನಿನ್ನನ್ನುಮಾತ್ರ ಭಜಿಸುವುದೇಕೆಂದು ಕೇಳುವೆಯಾ ? ದೇವಾ ! ಸೃಷ್ಟಿಗೆ ಮೊದಲು ನೀನೊಬ್ಬನೇ ನಾಮರೂಪ ವಿಭಾಗಗಳೊಂದೂ ಇಲ್ಲದೆ, ಸೂಕ್ಷ್ಮದಶೆಯಲ್ಲಿದ್ದ ಚಿದಚಿತ್ತುಗಳನ್ನೂ, ಕಾಲವನ್ನೂ ಶರೀರವಾಗಿ ಹೊಂದಿದ್ದವನು ! ಆಮೇಲೆ ನೀನೇ ನಾಮರೂಪವಿಭಾಗಗಳಿಂದ ಸ್ಥೂಲಾವಸ್ಥೆಯುಳ್ಳ ಪ್ರಪಂಚವನ್ನು ಸೃಷ್ಟಿಸಬೇಕೆಂದೆಣಿಸಿ, ನಿನಗೆ ಶರೀರವಾಗಿದ್ದ ಪ್ರಕೃತಿಯನ್ನು ಮುಂದಿಟ್ಟುಕೊಂಡು, ಅದರಿಂದ ಪ್ರಪಂಚವನ್ನು ಸೃಷ್ಟಿಸಿದವನು ! ತನ್ನ ಶರೀರದಿಂದ ನೂಲನ್ನೆಳೆದು, ಆ ನೂಲಿನ ಬಲೆಯಲ್ಲಿ ತಾನೂ ಆಡಗಿದ್ದು, ಸಮಯವು ಬಂದಾಗ ಆ ನೂಲನ್ನು ತನ್ನಲ್ಲೆಯೇ ಆಡಗಿಸಿಕೊಳ್ಳತಕ್ಕ ಜೇಡರ ಹುಳದಂತೆ, ನೀನೂಕೂಡ, ನಿನ್ನ ಅದ್ಭುತಶಕ್ತಿಯಿಂದ. ನಿನಗೆ ಶರೀರಭೂತಗಳಾದ ಚಿದಚಿತ್ತುಗಳನ್ನೇ ಪ್ರಪಂಚರೂಪವಾಗಿ ಹರಡಿ, ಅದರೊಳಗೆ ನೀನೂ ಸೇರಿ, ಅದನ್ನು ಪಾಲಿಸುತಿದ್ದು, ಕೊನೆಗೆ ಅದನ್ನು ನಿನ್ನಲ್ಲಿಯೇ ಉಪಸಂಹಾರಮಾಡಿಕೊಳ್ಳುವೆ ! ಆದುದರಿಂದ ನೀನೇ ಜಗತ್ಕಾರಣನು ! ನಿನ್ನನ್ನು ಬಿಟ್ಟ ವಸ್ತುವು ಬೇರೊಂದಿಲ್ಲ ! ಜಗತ್ಕಾರಣವಸ್ತುವೇ ಧ್ಯಾನಯೋಗ್ಯವೆಂದು ನಾನುಹಿರಿಯರಿಂದ ಕೇಳಿರುವೆನು. ಆದುದರಿಂದ ಲೋಕಕಾರಣನಾದ ನಿನ್ನ ಪಾದವನ್ನೇ ನಾನು ಮರೆಹೊಕ್ಕಿರುವೆನು. ಓದೇವಾ! ನೀನು ನಿನ್ನ ಸಂಕಲ್ಪದಿಂದ ಅಹಂಕಾರವನ್ನು ಮೊದಲು ಸೃಷ್ಟಿಸಿದೆ! ಅದರಿಂದ ಶಬ್ದಾದಿ ಪಂಚತನ್ಮಾತ್ರಗಳನ್ನೂ, ಅವುಗಳಿಂದ ಪಂಚಭೂತಗಳನ್ನೂ ಸೃಷ್ಟಿಸಿದೆ! ಭೂತಸೃಷ್ಟಿಗೆ ಅಹಂ-

ಕಾರವೇ ಪ್ರಥಮಕಾರಣವಾದುದರಿಂದ. ನಮ್ಮಂತಹ ಜೀವಿಗಳೆಲ್ಲರೂ ಅದಕ್ಕೆ ವಶ್ಯರಾಗಿ, ನಿನ್ನ ಸ್ಥಾನವನ್ನು ಕೋರದೆ, ಇಂತಹ ತುಚ್ಛವಾದ ಸಂಸಾರಸುಖವನ್ನೇ ಆಶಿಸಬೇಕಾಗಿದೆ. ಆದರೇನು ? ತುಲಸೀಮಾಲಿಕೆಯಿಂದ ಶೋಭಿತವಾದ ನಿನ್ನ ದಿವ್ಯಮಂಗಳವಿಗ್ರಹವನ್ನು ನೋಡಿದಾಗಲೇ, ನಾನು ನಿನ್ನ ಪೂರ್ಣಾನುಗ್ರಹಕ್ಕೆ ಪಾತ್ರನಾದಂತಾಯಿತು. ನಾನಾಗಿ ಆ ಜ್ಞಾನಸಂಬಂಧದಿಂದ ನಿನ್ನ ಸಾನ್ನಿಧ್ಯವನ್ನ ಪೇಕ್ಷಿಸದಿದ್ದರೂ, ನನ್ನಲ್ಲಿ ನಿನಗಿರುವ ಈ ಅಸಾಧಾರಣವಾತ್ಸಲ್ಯವನ್ನು ನೋಡಿದರೆ, ನನ್ನನ್ನು ನೀನು, ನಿನ್ನ ಸಾನ್ನಿಧ್ಯಕ್ಕೆ ಸೇರಿಸಿಕೊಳ್ಳದೆ ಬಿಡಲಾರೆಯೆಂದೇ ನಂಬಿರುವೆನು. ಓ ಪರಮಪುರುಷಾ! ನಮ್ಮಂತವರನ್ನು ಅನುಗ್ರಹಿಸುವುದಕ್ಕಾಗಿಯೇ ನೀನು ದೀಕ್ಷೆಯನ್ನು ವಹಿಸಿದವನು! ಅನಂದಮಯನೆನಿಸಿ ಪೂರ್ಣಕಾಮನಾಗಿದ್ದರೂ, ಸ್ವೇಚ್ಛೆಯಿಂದ ಜಗದ್ವ್ಯಾಪಾರವನ್ನು ನಡೆಸತಕ್ಕವನು. ನಿನ್ನನ್ನು ಸ್ವಲ್ಪವಾಗಿ ಆರಾಧಿಸಿದರೂ, ಅವರ ಕೋರಿಕೆಗಳೆಲ್ಲವನ್ನೂ ಈಡೇರಿಸತಕ್ಕವನು. ಸರ್ವಲೋಕಕ್ಕೂ ವಂದನಾರ್ಹವಾದ ಪಾದಾರವಿಂದಗಳುಳ್ಳವನು. ಇಂತಹ ನಿನ್ನನ್ನು ಬಾರಿಬಾರಿಗೂ ವಂದಿಸುವೆನು"ಎಂದು ಬದ್ಧಾಂಜಲಿಯಾಗಿ ಸ್ತುತಿಸುತಿದ್ದನು. ವಿದುರಾ! ಹೀಗೆ ನಿಷ್ಕಲ್ಮಷವಾಗಿ ಪ್ರಾರ್ಥಿಸುತ್ತಿರುವ ಕರ್ದಮನನ್ನು, ಗರುಡಾರೂಢನಾಗಿ ನಿಂತಿದ್ದ ನಾರಾಯಣಮೂರ್ತಿಯು, ಪ್ರೇಮಪೂರ್ವಕವಾದ ಮಂದಹಾಸದೊಡನೆ ಪ್ರಸನ್ನದೃಷ್ಟಿಯಿಂದ ನೋಡತ್ತ, ಅಮೃತದಂತೆ ಮಧುರವಾಕ್ಯದಿಂದ ಹೀಗೆಂದು ನಿಯಮಿಸುವನು,-"ಓಕರ್ದಮಾ! ಶಮದಮಾದಿಗುಣಗಳಿಂದ ಕೂಡಿದ ನೀನು ಭಾರ್ಯೆಯನ್ನಪೇಕ್ಷಿಸಿ ನನ್ನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದೆ ! ನಿನ್ನ ತಪಸ್ಸಿಗಾಗಿ ನಾನು ಮೆಚ್ಚಿದ್ದೆನು. ನಿನ್ನ ಉದ್ದೇಶವನ್ನೂ ನಾನು ಕಂಡುಕೊಂಡೆನು. ನಿನ್ನ ಕೋರಿಕೆಯನ್ನಿಡೇರಿಸುವುದಕ್ಕಾಗಿ ಇದಕ್ಕೆ ಮೊದಲೇ ನಾನು ತಕ್ಕ ಉಪಾಯವನ್ನೂ ಮಾಡಿರುವೆನು. ಓ ಮಹಾತ್ಮಾ! ಸಾಧಾರಣವಾಗಿ ಲೋಕದಲ್ಲಿ ನನ್ನನ್ನುಕುರಿತು ಮಾಡಿದ ಆರಾಧನವು ಎಂದಿಗೂ ವ್ಯರ್ಥವಾಗಿ ಹೋಗಲಾರದು. ಆದರಲ್ಲಿಯೂ ಮುಖ್ಯವಾಗಿ, ಜಿತೇಂದ್ರಿಯರಾದ ನಿಮ್ಮಂತವರು ನಡೆಸಿದ ಇಂತಹ ತಪಸ್ಸು ವ್ಯರ್ಥವಾಗುವುದೆಂದರೇನು ? ಮುಂ

ಬೆ ನಡೆಯಬೇಕಾದ ಕಾರ್ಯವನ್ನು ತಿಳಿಸುವೆನು ಕೇಳು ! ಬ್ರಹ್ಮಪುತ್ರನಾದ ಸ್ವಾಯಂಭುವನೆಂಬ ಚಕ್ರವರ್ತಿಯೊಬ್ಬನಿರುವನು. ಆತನ ಶುಭಚರಿತ್ರಗಳು ಲೋಕಪ್ರಸಿದ್ಧವಾದುವು. ಆವನು ಬ್ರಹ್ಮಾವರ್ತದಲ್ಲಿ ವಾಸಮಾಡುತ್ತ, ಸಪ್ತಸಮುದ್ರಗಳ ಮಧ್ಯದಲ್ಲಿರುವ ಸಮಸ್ತಭೂಮಂಡಲವನ್ನೂ ಪರಿಪಾಲಿಸುತ್ತಿರುವನು. ಆತನಿಗೆ ಶತರೂಪೆಯೆಂಬ ಭಾರ್ಯೆಯೊಬ್ಬಳುಂಟು. ಆ ದಂಪತಿಗಳಿಗೆ ದೇವಹೂತಿಯೆಂಬ ಕನ್ಯಾರತ್ನವೊಂದಿರುವುದು. ಆ ಕನ್ಯೆಯು ಲೋಕೋತ್ತರವಾದ ಸೌಂದರ್ಯವುಳ್ಳವಳು. ಗುಣದಲ್ಲಿಯೂ ಎಣೆಯಿಲ್ಲದವಳು. ಅವಳಿಗೆ ವಿವಾಹಕಾಲವು ಸಮೀಪಿಸಿರುವುದು. ಆಕೆಯ ತಂದೆಯಾದ ಸ್ವಾಯಂಭುವನುವು,ಅವಳನ್ನು ತಕ್ಕ ವರನಿಗೆ ಕೊಡಬೇಕೆಂದು ಆಲೋಚಿಸುತ್ತಿರುವನು. ಇಷ್ಟರಲ್ಲಿ ಆವನು ನಿನ್ನ ಗುಣಗಳನ್ನೂ, ನಿನ್ನ ಪ್ರಭಾವವನ್ನೂ ಕೇಳಿ, ನಿನಗೆ ತನ್ನ ಕುಮಾರಿಯನ್ನು ಕೊಡಬೇಕೆಂಬ ಉದ್ದೇಶದಿಂದ ನಾಳೆ ತನ್ನ ಪತ್ನೀಸಮೇತನಾಗಿ ಆ ಕುಮಾರಿಯನ್ನೂ ಕರೆದುಕೊಂಡು ನಿನ ಆಶ್ರಮಕ್ಕೆ ಬರುವನು. ಆ ಕನ್ಯೆಯನ್ನು ನಿನಗೆ ಕೊಟ್ಟು ವಿವಾಹ ಮಾಡುವುದರಲ್ಲಿ ಸ್ವಲ್ಪಮಾತ್ರವೂ ಸಂದೇಹವಿಲ್ಲ. ಓ ಕರ್ದಮಾ! ನೀನು ಇದುವರೆಗೆ ಯಾವ ಉದ್ದೇಶದಿಂದ ಕಳವಳಿಸುತಿದ್ದೆಯೋ,ಅಂತಹ ಕನ್ಯಾಲಾಭವು ನಿನಗೆ ಕೂಡಲೇ ಕೈಸೇರುವುದು. ಇವಳು ನಿನ್ನೊಡನೆ ಯಥೇಚ್ಛವಾಗಿ ಕಾಮವನ್ನನುಭವಿಸುತ್ತ, ಅನೇಕವರುಷಗಳನ್ನು ಕ್ಷಣಮಾತ್ರದಂತೆ ಕಳೆಯುವಳು.ಆಕೆಯಲ್ಲಿ ನಿನಗೆ ಒಂಭತ್ತುಮಂದಿ ಕುಮಾರಿಯರು ಹುಟ್ಟುವರು. ಆ ನಿನ್ನ ಕನ್ನೆಯರೆಲ್ಲರೂ, ಮರೀಚಿ ಮೊದಲಾದ ಮಹರ್ಷಿಗಳನ್ನು ಪರಿಗ್ರಹಿಸಿ, ಅನೇಕಪುತ್ರರನ್ನು ಪಡೆದು ಸಂತಾನವನ್ನು ವೃದ್ಧಿಗೊಳಿಸುವರು. ಓ ಮುನೀಂದ್ರಾ! ಇನ್ನು ನೀನು ಈ ನನ್ನಾಜ್ಞೆಯನ್ನನುಸರಿಸಿ, ನಡೆಸತಕ್ಕ ಒಂದೊಂದುಕಾರ್ಯಗಳನ್ನೂ ನನ್ನಲ್ಲಿಯೇ ಅರ್ಪಿತವನ್ನಾಗಿ ಮಾಡಿ, ಭಕ್ತಿಸಿರತನಾಗಿದ್ದಪಕ್ಷದಲ್ಲಿ, ನೀನು ನನ್ನ ಸಾನ್ನಿಧ್ಯವನ್ನು ಸೇರುವುದರಲ್ಲಿ ಸಂದೇಹವಿಲ್ಲ. ಮತ್ತು ನೀನು ಜಿತೇಂದ್ರಿಯನಾಗಿ, ಸಮಸ್ತಪ್ರಾಣಿಗಳಲ್ಲಿಯೂ ದಯೆಯನ್ನೇ ತೋರಿಸುತ್ತಿರು! ಮರೆಹೊಕ್ಕವರಿಗೆ ಅಭಯಪ್ರದಾನವನ್ನು ಮಾಡುತ್ತ ಆತ್ಮಜ್ಞಾನಪರನಾಗಿರು!ಆಗ ನಿನಗೆ ಜರಾಜರಾತ್ಮಕವಾದ ಈ ಸಮಸ್ತಪ್ರಪಂಚವೂ ನನ್ನಲ್ಲಿಯೇ ಅಡಗಿರುವುದೆಂದೂ, ಸಮಸ್ತಜಗತ್ತಿನಲ್ಲಿಯೂ

ನಾನೇ ಅಂತರಾತ್ಮನಾಗಿ, ಅವುಗಳಿಗೆ ನಿಯಾಮಕನಾಗಿಯೂ, ಧಾರಕನಾ
ಗಿಯೂ ಇರುವೆನೆಂದೂ, ಆ ನನ್ನ ಸ್ವರೂಪವು ಸ್ಪಷ್ಟವಾಗಿ ತಿಳಿಯುವು
ದು. ಕರ್ದಮಾ! ಕೆಲವು ಕಾಲದಮೇಲೆ ನಾನೂಕೂಡ ನನ್ನ ಅಂಶದಿಂದ
ನಿನ್ನ ಪತ್ನಿಯಾದ ದೇವಹೂತಿಯಲ್ಲಿ ನಿನಗೆ ಪುತ್ರನಾಗಿ ಹುಟ್ಟಿ,ಅವಳಿಗೆ,ಪ್ರ
ಕೃತಿ, ಪುರುಷ, ಈಶ್ವರರೆಂಬ ಮೂರು ತತ್ವಗಳ ವಿಭಾಗವನ್ನು ತಿಳಿಸತಕ್ಕ
ತತ್ವಸಂಹಿತೆಯನ್ನು ಪದೇಶಿಸುವೆನು"ಎಂದನು. ಭಗವಂತನು ಹೀಗೆ ಕರ್ದಮ
ನಿಗೆ ವರಪ್ರದಾನವನ್ನು ಮಾಡಿ, ಆ ಆಶ್ರಮವನ್ನು ಬಿಟ್ಟು, ಅನೇಕಯೋ
ಗೀಶ್ವರರಿಂದಲೂ, ದೇವತೆಗಳಿಂದಲೂ ಸ್ತೋತ್ರಮಾಡಲ್ಪಡುತ್ತ, ಗರು
ಡಾರೂಢನಾಗಿ, ತನ್ನ ಲೋಕಕ್ಕೆ ತೆರಳಿದನು. ಇತ್ತಲಾಗಿ ಕರ್ದಮನು,ಭಗ
ವಂತನು ಹೇಳಿದ್ದ ಕಾಲವನ್ನು ನಿರೀಕ್ಷಿಸುತ್ತಿರುವಲ್ಲಿ, ಸ್ವಾಯಂಭುವಮನು
ವು, ಸುವರ್ಣಾಲಂಕೃತವಾದ ರಥದಲ್ಲಿ ತನ್ನ ಪತ್ನಿಯನ್ನೂ, ಕನ್ಯೆಯನ್ನೂ
ಕುಳ್ಳಿರಿಸಿಕೊಂಡು,ಭೂಮಿಯೆಲ್ಲವನ್ನೂ ಸುತ್ತಿಸುತ್ತಿ,ಕೊನೆಗೆ ಭಗವಂತನು
ಸೂಚಿಸಿದ್ದಕಾಲಕ್ಕೆ ಸರಿಯಾಗಿ, ಈಕರ್ದಮಾಶ್ರಮಕ್ಕೆ ಬಂದು ಸೇರಿದನು.
ವಿದುರಾ!ಆಕರ್ದಮಾಶ್ರಮದ ಮಹಿಮೆಯನ್ನು ಕೇಳಬೇಕೆ?ಹಿಂದೊಮ್ಮೆ ಭಗ
ವಂತನು ಕರ್ದಮಪ್ರಜಾಪತಿಯ ಭಕ್ತಿವಿಶೇಷವನ್ನು ನೋಡಿ, ದಯಾತಿಶಯ
ದಿಂದ ಆನಂದಬಾಷ್ಪವನ್ನು ಬಿಟ್ಟಾಗ,ಒಂದು ಬಾಷ್ಪಬಿಂದುವು ಅಲ್ಲಿದ್ದಸ
ರೋವರದಲ್ಲಿ ಬಿದ್ದುದರಿಂದ ಅದಕ್ಕೆ ಬಿಂದುಸರೋವರವೆಂಬ ಹೆಸರುಂ
ಟಾಯಿತು. ಆ ಬಿಂದುಸರೋವರವು ಸುತ್ತಲೂ ಸರಸ್ವತೀನದಿಯಿಂದ
ಆವೃತವಾಗಿ, ದರ್ಶನಮಾತ್ರದಿಂದಲೇ ಸಮಸ್ತಪಾಪಗಳನ್ನೂ ನೀಗಿ
ಸುವುದು. ಅಮೃತದಂತೆ ಮಧುರವಾದ ಅದರ ಜಲವನ್ನು ಪಾನಮಾಡಿದರೆ
ಸಮಸ್ತರೋಗಗಳೂ ನಿವೃತ್ತವಾಗುವುವು. ಪ್ರತಿದಿನವೂ ಅನೇಕಮಹರ್ಷಿ
ಗಳು ಅಲ್ಲಿಗೆ ಬಂದು ಆ ಪುಣ್ಯಜಲದಲ್ಲಿ ತಮ್ಮ ನಿತ್ಯಕರ್ಮಗಳನ್ನು ನಡೆಸು
ತ್ತಿರುವರು. ಇಂತಹ ಸರೋವರವನ್ನೊಳಕೊಂಡ ಆ ಪುಣ್ಯಾಶ್ರಮವು,ಸು
ತ್ತಲೂ ಪರಮಪಾವನಗಳಾದ ಗಿಡುಬಳ್ಳಿಗಳಿಂದ ಶೋಭಿತವಾಗಿರುವುದು.
ಅಲ್ಲಿನ ಮೃಗಪಕ್ಷಿಗಳೆಲ್ಲವೂ ಪರಮಪಾವನಗಳೆನಿಸಿಕೊಂಡಿರುವುವು. ಋ
ತುಧರ್ಮವನ್ನನುಸರಿಸಿ ಬೇರೆಬೇರೆ ಕಾಲದಲ್ಲಿ ಬಿಡತಕ್ಕ ಫಲಪುಷ್ಪಗಳೆಲ್ಲವೂ,

ಅಲ್ಲಿ ಸರ್ವಕಾಲದಲ್ಲಿಯೂ ಕಂಗೊಳಿಸುತ್ತಿರುವುವು.ವನಲಕ್ಷ್ಮಿಗೆ ನಿತ್ಯನಿವಾಸವೆನಿಸಿದ ಆ ವನದ ಒಂದು ಕಡೆಯಲ್ಲಿ ಪಕ್ಷಿಗಳ ಮಧುರಧ್ವನಿ ! ಮತ್ತೊಂದು ಕಡೆಯಲ್ಲಿ ಭ್ರಮರಝಂಕಾರಗಳು ! ಇನ್ನೊಂದು ಕಡೆಯಲ್ಲಿ ಮಥಿಸಿದ ನವಿಲುಗಳ ನರ್ತನಗಳು ! ಬೇರೊಂದು ಕಡೆಯಲ್ಲಿ ಒಂದನ್ನೊಂದು ಕೂಗಿ ಕರೆಯುತ್ತಿರುವ ಕೋಗಿಲೆಗಳ ಮಧುರಧ್ವನಿ! ಹೀಗೆ ಆ ಆಶ್ರಮೋದ್ಯಾನವು ಸರ್ವಸೌಭಾಗ್ಯವಿಶಿಷ್ಟವಾಗಿರುವುದು. ಮತ್ತು, ಕಡವು, ಪಗಡೆ, ಆಸುಗೆ, ಬಂಧುಗೆ, ಮೊಲ್ಲೆ, ಮಲ್ಲಿಗೆ, ಪಾರಿಜಾತ, ಗಿರಿಮಲ್ಲಿಕೆ, ಮಾವು, ಮಂತಾದ ಫಲಪುಷ್ಪವೃಕ್ಷಗಳೆಲ್ಲವೂ ದಟ್ಟವಾಗಿ ತುಂಬಿರುವುವು. ಅಲ್ಲಿನ ಸರೋವರಗಳಲ್ಲಿ, ಹಂಸಗಳು,ಕಾರಂಡವಗಳು, ನೀರುಕೋಳಿಗಳು, ಸಾರಸಗಳು,ಚಕ್ರವಾಕಗಳು ಇವೇ ಮೊದಲಾದ ಬಗೆಬಗೆಯ ಜಲಪಕ್ಷಿಗಳೆಲ್ಲವೂ ಕಿವಿಗಿಂಪಾಗಿ ಕೂಗುತ್ತಿರುವುವು. ಅದರ ಸುತ್ತಿನ ತೋಪುಗಳಲ್ಲಿ, ಜಿಂಕೆ, ಹಂದಿ, ಮುಳ್ಳುಹಂದಿ, ಕಡವೆ, ಆನೆ, ಸಿಂಗಳೀಕ, ಸಿಂಹ, ಕಪಿ, ಮುಂಗುಸಿ,ಕಸ್ತೂರೀಮೃಗಗಳು, ಮುಂತಾದ ಸಮಸ್ತಜಾತಿಯ ಮೃಗಗಳೂ, ಇತರರಿಗೆ ಭಾಧೆಯಿಲ್ಲದೆ ತಮಗೆ ತಾವು ಸ್ವೇಚ್ಛೆಯಿಂದ ವಿಹರಿಸುತ್ತಿರುವುವು. ಆದಿರಾಜನೆನಿಸಿದ ಸ್ವಾಯಂಭುವಮನುವು,ಹೀಗೆ ಸರ್ವಶೋಭಾಸ್ಪದವಾಗಿದ್ದ ಕರ್ದಮಾಶ್ರಮವನ್ನು ಪ್ರವೇಶಿಸಿ, ಅಲ್ಲಿ ಹೋಮಕಾರ್ಯವನ್ನು ಮುಗಿಸಿಕೊಂಡು ಸುಖಾಸೀನನಾಗಿದ್ದ ಕರ್ದಮಮಹರ್ಷಿಯನ್ನು ಕಂಡನು ಆ ಮಹರ್ಷಿಯಾದರೋ ಭಗವಂತನ ಕೃಪಾಕಟಾಕ್ಷಕ್ಕೆ ಸಂಪೂರ್ಣಪಾತ್ರನಾದುದರಿಂದ, ಬಹುಕಾಲದ ತಪಸ್ಸಿನಲ್ಲಿ ಕ್ಲೇಶಪಟ್ಟಿದ್ದರೂ, ಅವನ ದೇಹದಲ್ಲಿ ಅಷ್ಟಾಗಿ ಕಂದುಕುಂದುಗಳೇನೂ ಕಾಣುತ್ತಿರಲಿಲ್ಲ. ಮತ್ತು ಇದಕ್ಕೆ ಮೊದಲು ಭಗವಂತನು ಅತನಿಗೆ ಪ್ರತ್ಯಕ್ಷನಾಗಿ ಬಂದು, ಅವನೊಡನೆ ಸಂಭಾಷಣಮಾಡಿದಾಗ,ಆ ಭಗವಂತನ ವಾಕ್ಯಾಮೃತಸೇಚನದಿಂದ ಅತನ ದೇಹದಲ್ಲಿ ಅಪೂರ್ವವಾದ ಒಂದು ಶೋಭಾವಿಶೇಷವೂ ಕಾಣುತಿತ್ತು. ಮತ್ತು ಉನ್ನತವಾದ ಆಕೃತಿ! ಕಮಲದಳದಂತೆ ಕಣ್ಣುಗಳು! ಹೀಗೆ ಸರ್ವೋತ್ತಮಮಹಾಪುರುಷಲಕ್ಷಣಗಳಿಂದ ಕೂಡಿದ್ದರೂ ಆ ಮಹರ್ಷಿಯು, ತಲೆಯಲ್ಲಿ ಜಡೆ, ನಡುವಿನಲ್ಲಿ ನಾರುಮಡಿ, ಇವುಗಳನ್ನು ಧರಿಸಿ ಸಾಣೆಯಿ

ಕ್ಕದ ಮಹಾರತ್ನದಂತೆ ದೇಹಸಂಸ್ಕಾರವಿಲ್ಲದಿದ್ದನು. ಇಂತಹ ಕರ್ದಮನನ್ನು ನೋಡಿ ಸ್ವಾಯಂಭುವಮನುವು, ಆತನ ಸಮೀಪಕ್ಕೆ ಹೋಗಿ ನಮಸ್ಕರಿಸಿದನು. ಆಗ ಕರ್ದಮನು, ತನ್ನ ಪರ್ಣಶಾಲೆಗೆ ಅತಿಥಿಯಾಗಿ ಬಂದ ಆ ಮನುಚಕ್ರವರ್ತಿಯನ್ನು ಮನ್ನಿಸಿ, ಉಚಿತವಾಕ್ಯಗಳಿಂದ ಆಶೀರ್ವದಿಸಿ, ತಕ್ಕ ಸತ್ಕಾರಗಳನ್ನು ಮಾಡಿದನು ಹೀಗೆ ಮನುಚಕ್ರವರ್ತಿಯು ಆ ಮಹರ್ಷಿಯಿಂದ ಸತ್ಕೃತನಾಗಿ ಕುಳಿತಮೇಲೆ, ಕರ್ದಮನು ತನಗೆ ಭಗವಂತನು ಆಜ್ಞಾಪಿಸಿದ ವಾಕ್ಯವನ್ನು ಸ್ಮರಿಸಿಕೊಂಡು, ಮಧುರವಾಕ್ಯದಿಂದ ಅವನನ್ನು ಕುರಿತು, ''ಓ ಸಾರ್ವಭೌಮಾ ! ಭಗವಂತನು ತನ್ನ ರಕ್ಷಣಶಕ್ತಿಯೆನ್ನೇ ನಿನ್ನ ರೂಪದಿಂದ ಭೂಲೋಕದಲ್ಲಿ ಸೃಷ್ಟಿಸಿರುವನು. ಅದರಿಂದಲೇ ನೀನು, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪರಿಪಾಲಿಸುವುದಕ್ಕಾಗಿ ಭೂಮಂಡಲವೆಲ್ಲವನ್ನೂ ಸುತ್ತುತ್ತಿರುವೆ! ರಾಜೇಂದ್ರಾ! ಲೋಕರಕ್ಷಣಾರ್ಥವಾಗಿ ಭಗವಂತನೇ ಸೂರ್ಯಚಂದ್ರಾದಿಗ್ರಹಗಳ ರೂಪದಿಂದಲೂ, ಇಂದ್ರ, ಅಗ್ನಿ, ಯಮ, ವರುಣ, ವಾಯು, ಕುಬೇರ,ಮುಂತಾದ ದಿಕ್ಪಾಲಕರ ರೂಪದಿಂದಲೂ, ಆಯಾ ಕಾರ್ಯಗಳನ್ನು ನಡೆಸುತ್ತಿರುವನು. ಶುದ್ಧಸ್ವರೂಪನಾಗಿಯೂ, ಮಹಾತ್ಮನಾಗಿಯೂ ಇರುವ ಆ ಭಗವಂತನೇ ನಮ್ಮನ್ನೂ ಒಂದೊಂದು ಕಾರ್ಯದಲ್ಲಿ ನಿಯಮಿಸತಕ್ಕವನು. ಮೊದಲು ನನಗೆ ಧ್ಯಾನಯೋಗ್ಯನಾದ ಆ ಭಗವಂತನಿಗೆ ನಮಸ್ಕರಿಸುವೆವು. ಓ ಚಕ್ರವರ್ತೀ! ನೀನು ರತ್ನಖಚಿತವಾದ ನಿನ್ನ ವಿಜಯರಥವನ್ನೇರಿ, ಶತ್ರುಭಯಂಕರವಾದ ಧನುಸ್ಸನ್ನು ಕೈಯಲ್ಲಿ ಹಿಡಿದು, ಅಸುರ ಟಂಕಾರದಿಂದಲೇ ಧರ್ಮವಿರೋಧಿಗಳಾದ ದುಷ್ಟರನ್ನು ಹೆದರಿಸುತ್ತ, ಪಾದಾಹತಿಯಿಂದ ಭೂಮಂಡಲವನ್ನು ನಡುಗಿಸುವಂತೆ ದೊಡ್ಡ ಚತುರಂಗಸೈನ್ಯವನ್ನು ಸಂಗಡ ಕರೆದುಕೊಂಡು, ಸೂರ್ಯನಂತೆ ದಿವ್ಯತೇಜಸ್ಸಿಂದ ಪ್ರಕಾಶಿಸುತ್ತ ಅನವರತವೂ ಸುತ್ತುತ್ತಿರುವವರೆಗೆ, ಸಮಸ್ತ [illegible]ಮಧರ್ಮಗಳೂ ಕ್ರಮವಾಗಿ ನಡೆಯುವುವು. ನೀನು ಈ [illegible]ನ್ನು ನಿಲ್ಲಿಸಿ ನಿರ್ವ್ಯಾಪಾರನಾಗಿದ್ದಪಕ್ಷದಲ್ಲಿ, ದುಷ್ಟರ ಪ್ರಾಬಲ್ಯದಿಂದ ಆ ವರ್ಣಾಶ್ರಮದ ಕಟ್ಟುಗಳೆಲ್ಲವೂ ಒಡನೆಯೇ ಸಡಿಲಿ ಹೋಗುವುವು. ಕೇವ

ಲ ಅರ್ಥಕಾಮಪರಾಯಣರಾದ ನೀಚಜನರಿಂದ ಅಧರ್ಮವು ಹೆಚ್ಚಿಸ
ಲ್ಪಡುವುದು. ನೀನು ಕ್ಷಣಕಾಲದವರೆಗೆ ಶ್ರಮಪರಿಹಾರಾರ್ಥವಾಗಿ ನಿದ್ರೆ
ಮಾಡಿದಪಕ್ಷದಲ್ಲಿ, ಲೋಕವೆಲ್ಲವೂ ಚೋರರ ಬಾಧೆಯಿಂದ ನಶಿಸಿ ಹೋಗು
ವುದು. ಆದುದರಿಂದ ನೀನು ಲೋಕಸಂಚಾರಿಯಾಗಿ ಸುತ್ತುತ್ತಿರಬೇಕಾ
ಹುದೇ ಉಚಿತವು ! ಈಗ ನೀನು ನನ್ನಲ್ಲಿಗೆ ಬಂದುದೂಕೂಡ ಯಾವುದೋ
ಒಂದುವಿಧವಾದ ಲೋಕಕ್ಷೇಮಕ್ಕಾಗಿಯೇ ಇರಬಹುದು ! ಹಾಗಿದ್ದರೂ
ನನ್ನಲ್ಲಿಗೆ ಬಂದವರ ಉದ್ದೇಶವನ್ನು, ಅವರ ಬಾಯಿಂದಲೇ ಕೇಳಿ ತಿಳಿ
ಯಬೇಕಾದುದು ನನಗೆ ಮರ್ಯಾದೆಯಾದುದರಿಂದ, ನಿನ್ನನ್ನು ಪ್ರಶ್ನೆಮಾಡ
ಬೇಕಾಗಿರುವುದು. ನೀನು ಇಷ್ಟುದೂರದವರೆಗೆ ಬಂದ ಉದ್ದೇಶವೇನು ?
ನಿನ್ನ ಉದ್ದೇಶವನ್ನು ತಿಳಿಸಿದಪಕ್ಷದಲ್ಲಿ, ಅದನ್ನು ನಾವು ಮನಃಪೂರ್ವಕವಾ
ಗಿ ವಂಚನೆಯಿಲ್ಲದೆ ನಡೆಸಿಕೊಡುವೆವು." ಎಂದನು. ಇಲ್ಲಿಗೆ ಇಪ್ಪತ್ತೊಂದ
ನೆಯ ಅಧ್ಯಾಯವು.

ಸ್ವಾಯಂಭುವಮನುವು ತನ್ನ ಮಗಳಾದ ದೇವಹೂ
ತಿಯನ್ನು ಕರ್ದಮನಿಗೆ ಕೊಟ್ಟು ವಿವಾಹ
ಮಾಡಿದುದು. ಮನುರಾಜ್ಯವೈಭವವು.

ಮನುಚಕ್ರವರ್ತಿಯು ಬಹಳ ಗಂಭೀರಸ್ವಭಾವವುಳ್ಳವನಾದುದರಿಂ
ದ, ಕರ್ದಮಮುನಿಯು ತನ್ನ ಗುಣಗಳನ್ನೂ, ಕಾರ್ಯಗಳನ್ನೂ, ಬಹಳವಾಗಿ
ಸ್ತುತಿಸುತ್ತಿರುವುದಕ್ಕಾಗಿ ನಾಚಿಕೆಗೊಂಡು, ಲೋಕವ್ಯಾಪಾರಗಳಲ್ಲಿ ಕೇವ
ಲ ವಿರಕ್ತನಾದ ಆ ಮಹರ್ಷಿಯನ್ನು ಕುರಿತು ''ಎಲ್ಲೈ ಮಹಾತ್ಮನೆ ! ಸಾ
ಮಾನ್ಯಪ್ರಜೆಗಳನ್ನು ರಕ್ಷಿಸುವುದಕ್ಕಾಗಿ ಭಗವಂತನು ನಮ್ಮನ್ನು ಸೃಷ್ಟಿಸಿ
ಹುದೇನೋ ವ ನಾಗಿರಬಹುದು. ಆದರೆ ವೇದಮಯನಾದ ಆ ಪರಮಾ
ತ್ಮನು, ವೇ ಸ್ವರೂಪವನ್ನು ರಕ್ಷಿಸುವುದಕ್ಕಾಗಿಯೇ, ತಪಸ್ಸಿನಲ್ಲಿ
ಯೂ, ಭಗವ[illegible]ನಾರೂಪವಾದ ವಿದ್ಯೆಯಲ್ಲಿಯೂ, ಜ್ಞಾನಯೋಗ
ದಲ್ಲಿಯೂ ನಿಷ್ಠರಾಗಿ, ವಿಷಯಾಭಿಲಾಷೆಯನ್ನು ಬಿಟ್ಟಿರತಕ್ಕ ನಿಮ್ಮಂತಹ
ಮಹಾತ್ಮರನ್ನು, ತನ್ನ ಮುಖದಿಂದ ಸೃಷ್ಟಿಸಿರುವನಲ್ಲವೆ? ವೇದಸ್ವರೂಪ

ರಾದ ನಿಮ್ಮಂತಹ ಬ್ರಾಹ್ಮಣೋತ್ತಮರನ್ನು ಬೇರೆಯವರಿಂದ ಅಪಾಯವಿಲ್ಲದೆ ರಕ್ಷಿಸುವುದಕ್ಕಾಗಿ, ತನ್ನ ಸಹಸ್ರಭುಜಗಳಿಂದ ಕ್ಷತ್ರಿಯರಾದ ನಮ್ಮನ್ನು ಸೃಷ್ಟಿಸಿರುವನು. ಇದರಿಂದ ಆ ಪರಮಾತ್ಮನಿಗೆ ನಿಮ್ಮ ಬ್ರಾಹ್ಮಣಕುಲವೇ ಹೃದಯವೆಂದೂ,ನಮ್ಮ ಕ್ಷತ್ರಿಯಕುಲವೇ ಅಂಗವೆಂದೂ ಹೇಳುವರು. ಓ ಮುನೀಂದ್ರಾ! ಹೀಗೆ ವೇದಗಳನ್ನು ರಕ್ಷಿಸುವುದಕ್ಕಾಗಿ ನಿಮ್ಮನ್ನೂ,ನಿಮಗೆ ಅಪಾಯವಿಲ್ಲದಂತೆ ನೋಡಿಕೊಳ್ಳುವುದಕ್ಕಾಗಿ ನಮ್ಮನ್ನೂ, ಆ ಪರಮಾತ್ಮನು ಸೃಷ್ಟಿಸಿರುವುದರಿಂದ,ನಾವುನಾವು ನಮಗೆ ವಿಹಿತವಾದ ಕಾರ್ಯಗಳನ್ನು ನಡೆಸುತ್ತ ಬಂದರಲ್ಲವೇ ನಮ್ಮ ಈ ಉಭಯಕುಲಕ್ಕೂ ಕಾರಣನಾದ ನಾರಾಯಣನು ನಮ್ಮನ್ನು ರಕ್ಷಿಸುತ್ತಿರುವನು. ಓ ಮಹಾತ್ಮಾ! ಈ ನಿನ್ನ ಸಂದರ್ಶನಮಾತ್ರದಿಂದಲೇ ನನ್ನ ಸಮಸ್ತಸಂದೇಹಗಳೂ ನಿವೃತ್ತವಾದುವು. ನೀನು ನನ್ನನ್ನು ನೋಡಿದೊಡನೆ, ನನ್ನನ್ನು ಸ್ತೋತ್ರಮಾಡುವ ನೆವದಿಂದ, ಲೋಕರಕ್ಷಣವೇ ಕ್ಷತ್ರಿಯಧರ್ಮವೆಂದು ಸೂಚಿಸಿಬಿಟ್ಟೆಯಲ್ಲವೆ. ಇನ್ನು ನಿನ್ನಿಂದ ನಾನು ಪುನಃ ಕೇಳಿ ತಿಳಿಯಬೇಕಾದ ಧರ್ಮವೇನುಂಟು ? ಪುಣ್ಯಹೀನರಿಗೆ ದೊರೆಯಲಾರದ ನಿನ್ನ ದರ್ಶನವು ನನ್ನ ಭಾಗ್ಯೋದಯದಿಂದ ಈಗ ನನಗೆ ಲಭಿಸಿತು. ನನ್ನ ಭಾಗ್ಯೋದಯದಿಂದ ನಿನ್ನ ಪಾದರೇಣುವನ್ನು ನಾನು ತಲೆಯಿಂದ ಧರಿಸುವಂತಾಯಿತು! ನಿನ್ನಂತಹ ಮಹಾತ್ಮರ ಬುದ್ಧಿವಾದರೂಪವಾದ ಅನುಗ್ರಹಕ್ಕೆ ಈಗ ನಾನು ಪಾತ್ರನಾದುದೂ ನನ್ನ ಭಾಗ್ಯವೇ ಸರಿ ! ಮನೋಹರವಾದ ನಿನ್ನ ಮಧುರವಾಕ್ಯವನ್ನು ಕಿವಿಯಿಂದ ಕೇಳುವ ಹಾಗಾದುದೂಕೂಡ ನನ್ನ ಭಾಗ್ಯೋದಯವಲ್ಲದೆ ಬೇರೆಯೆಲ್ಲ ! ಓ ಮುನೀಂದ್ರಾ! ಈಗ ನನ್ನದೊಂದು ಪ್ರಾರ್ಥನೆಯುಂಟು. ಇದೋ! ನನಗೆ ಒಬ್ಬ ಕನ್ಯೆಯಿರುವಳು. ಇವಳಲ್ಲಿ ನನಗಿರತಕ್ಕ ಪ್ರೇಮಾತಿಶಯವು, ಇವಳಿಗೆ ತಕ್ಕ ವರನು ಸಿಕ್ಕುವನೋ ಇಲ್ಲವೋ ಎಂದು ಅನವರತವೂ ನನ್ನನ್ನು ಕಳವಳಗೊಳಿಸುತ್ತಿರುವುದು. ಹೀಗೆ ಚಿಂತಾಕುಲನಾದ ನನ್ನ ವಿಜ್ಞಾಪನೆಯೆಲ್ಲವನ್ನೂ ಕೃಪೆಯಿಂದ ಲಾಲಿಸಬೇಕು. ಇದೋ! ಇವಳೇ ನನ್ನ ಕುಮಾರಿಯು. ಇವಳಿಗೆ ದೇವಹೂತಿಯೆಂದು ಹೆಸರು! ಇವಳು ಪ್ರಿಯವ್ರತನೆಂದೂ, ಉತ್ತಾನಪಾದನೆಂದೂ ಕರೆಯಲ್ಪಡುವ ನನ್ನ ಪುತ್ರರಿಬ್ಬರಿ

ಗೂ ತಂಗಿಯೆನಿಸಿರುವಳು. ಈ ನನ್ನ ಕುಮಾರಿಯು, ವಯಸ್ಸಿನಲ್ಲಿಯೂ, ಗುಣದಲ್ಲಿಯೂ, ಸೌಂದರ್ಯದಲ್ಲಿಯೂ, ತನಗೆ ಸಮಾನನಾದ ಪತಿಯನ್ನು ಪಡೆಯಬೇಕೆಂದು ಕೋರುತ್ತಿರುವಳು. ಈಗ ಕೆಲವು ದಿನಗಳಹಿಂದೆ ಈ ಕೆಯು ನಾರದಮುನಿಯಿಂದ ನಿನ್ನ ಪ್ರಭಾವವನ್ನೂ, ಸೌಂದರ್ಯವನ್ನೂ, ವಿದ್ಯಾತಿಶಯವನ್ನೂ ಕೇಳಿ, ನಿನ್ನನ್ನು ಬಿಟ್ಟು ಬೇರೊಬ್ಬರನ್ನು ತಾನು ವರಿಸುವುದಿಲ್ಲವೆಂದು ನಿಶ್ಚಯಿಸಿರುವಳು. ಎಲೈ ಮಹಾತ್ಮನೆ! ಇವಳು ಗೃಹಸ್ಥ ಧರ್ಮಗಳಲ್ಲಿ ನಿನಗೆ ಸರ್ವವಿಧದಲ್ಲಿಯೂ ಅನುಕೂಲೆಯಾಗಿರುವಳೆಂಬುದರಲ್ಲಿ ಸಂದೇಹವಿಲ್ಲ! ನಿನಗೆ ಒಪ್ಪಿಸಬೇಕೆಂಬ ಉದ್ದೇಶದಿಂದಲೇ ಈಕೆಯನ್ನು ಕರೆತಂದಿರುವೆನು. ಇವಳನ್ನು ನೀನು ಪರಿಗ್ರಹಿಸಬೇಕು. ದೈವಿಕವಾಗಿ ಲಭಿಸಿದ ವಸ್ತುವನ್ನು ಸರ್ವಸಂಗಪರಿತ್ಯಾಗನಾಡಿದ ಯೋಗಿಯಾದರೂ ಅಂಗೀಕರಿಸದೆ ಬಿಡುವುದು ಯುಕ್ತವಲ್ಲ. ಹೀಗಿರುವಾಗ ಮನಸ್ಸಿನಲ್ಲಿ ಕೋರುತಿದ್ದ ವಸ್ತುವು ತಾನಾಗಿಯೇ ಬಂದಾಗ ಅದನ್ನು ಯಾರುತಾನೇ ನಿರಾಕರಿಸುವರು? ಹೀಗೆ ದೈವಿಕವಾಗಿ ಲಭಿಸಿದ ವಸ್ತುವನ್ನು ಮುಂದಾಲೋಚನೆಯಿಲ್ಲದೆ ತಿರಸ್ಕರಿಸಿ, ಆಮೇಲೆ ಅದಕ್ಕಾಸೆಪಟ್ಟು, ಅಲ್ಪಮನುಷ್ಯರಲ್ಲಿ ಹೋಗಿ ಅದನ್ನು ಯಾಚಿಸುವವನ ಕೀರ್ತಿಯು ಎಷ್ಟೇ ದೊಡ್ಡದಾಗಿದ್ದರೂ ಕ್ಷಣಮಾತ್ರದಲ್ಲಿ ಕ್ಷೀಣಿಸುವುದು. ಕೆಲವು ಸಮಯಗಳಲ್ಲಿ ಇತರರ ತಿರಸ್ಕಾರದಿಂದ ಅವನ ಗೌರವಕ್ಕೂ ಹಾನಿಯುಂಟಾಗುವುದು ನೀನು ವಿವಾಹಪ್ರಯತ್ನದಲ್ಲಿರುವುದಾಗಿ ಇದಕ್ಕೆ ಮೊದಲೇ ನಾನು ಕೇಳಿದ್ದೆನು. ಅದಕ್ಕಾಗಿಯೇ ಈ ನನ್ನ ಮಗಳನ್ನು ನಿನಗೆ ವಿವಾಹಮಾಡಿಕೊಡಬೇಕೆಂದು ಕರೆತಂದಿರುವೆನು. ಇವಳನ್ನು ನಿನ್ನ ಧರ್ಮಪತ್ನಿಯೆನ್ನಾಗಿ ಸ್ವೀಕರಿಸಬೇಕು" ಎಂದನು. ಈ ಮಾತನ್ನು ಕೇಳಿ ಕರ್ದಮನು, ಸಂತೋಷಪೂರ್ವಕವಾಗಿ "ಓ ರಾಜೇಂದ್ರಾ! ಇದುವರೆಗೆ ನೀನು ಬೇರೊಬ್ಬರಿಗೆ ವಾಗ್ದಾನ ಮಾಡದೆ, ಈ ನಿನ್ನ ಮಗಳನ್ನು ನನಗೇ ಕೊಡಬೇಕೆಂದು ಕರೆತಂದಿರುವುದರಿಂದ, ಇವಳನ್ನು ವರಿಸುವವಿಷಯದಲ್ಲಿ ನನಗೇನೂ ಅಭ್ಯಂತರವಿಲ್ಲ. ಅವಶ್ಯವಾಗಿ ವರಿಸುವೆನು. ನೀನು ಹೇಳಿದಂತೆ ನಮ್ಮಿಬ್ಬರ ದಾಂಪತ್ಯವು ಬಹಳ ಅನುರೂಪವಾಗಿಯೇ ಇರುವುದು. ಸೃಷ್ಟಿಯಲ್ಲಿ ಮೊದಲನೆಯದೆನಿಸಿಕೊ

ಳ್ಮುವ ಬ್ರಾಹ್ಮಣವಿವಾಹವಿಧಿಯು ಈಗಲೇ ಆರಂಭಿಸಲಿ ! ಎಲೆ ರಾಜೇಂದ್ರಾ ! ನಿನ್ನ ಮಗಳಿಗೆ ವೇದೋಕ್ತವಿಧಿಯಿಂದಲೇ ವಿವಾಹವನ್ನು ನಡೆಸು. ನಿನ್ನ ನಿರ್ಬಂಧಕ್ಕಾಗಿ ನಾನು ಈಕೆಯನ್ನು ವರಿಸುವೆನೆಂದೆಣಿಸಬೇಡ. ಲಕ್ಷ್ಮೀದೇವಿಯನ್ನೇ ತಿರಸ್ಕರಿಸುವಷ್ಟು ದಿವ್ಯಸೌಂದರ್ಯವುಳ್ಳ ಈ ನಿನ್ನ ಕುಮಾರಿಯನ್ನು ಯಾರು ತಾನೇ ಆಸೆಪಟ್ಟು ವರಿಸದೆ ಬಿಡುವರು ? ಈಕೆಯು ಹಿಂದೊಮ್ಮೆ ತನ್ನ ಕಾಲಂದುಗೆಗಳ ಘಲ್ಘಲಧ್ವನಿಯೊಡನೆ ಉಪ್ಪರಿಗೆಯಲ್ಲಿ ತನ್ನ ಸಖೀಜನಗಳೊಡಗೂಡಿ ಚಂಡಾಟವನ್ನಾಡುತ್ತಿರುವಾಗ, ನಿಂಜಿನಂತೆ ಚಂಚಲವಾದ ಇವಳ ಕಡೆಗಣ್ಣಿನ ಸೌಂದರ್ಯವಿಶೇಷವನ್ನು ನೋಡಿ, ಆಕಾಶದಲ್ಲಿ ವಿಮಾನಾರೂಢನಾಗಿ ಬರುತಿದ್ದ ವಿಶ್ವಾವಸುವೆಂಬ ಗಂಧರ್ವರಾಜನು, ಹಾಗೆಯೇ ಮೋಹಪರವಶನಾಗಿ ಮೂರ್ಛೆಬಿದ್ದುದಾಗಿ ಕೇಳಿರುವೆನು. ಹೀಗೆ ದೇವತೆಗಳಿಗೂ ಇವಳ ಸೌಂದರ್ಯವು ಮೋಹಕರವಾಗಿರುವಾಗ, ಲಕ್ಷ್ಮೀಕಟಾಕ್ಷವಿಲ್ಲದವರಿಗೆ ಇವಳ ದರ್ಶನವೇ ದುರ್ಲಭವೆಂದು ಹೇಳಬಹುದು. ಸ್ತ್ರೀಯರಿಗೆ ಶಿರೋಮಣಿಪ್ರಾಯಳಾಗಿ, ಮಹಾತ್ಮನಾದ ಉತ್ತಾನಪಾದನಿಗೆ ಒಡಹುಟ್ಟಿದವಳಾಗಿರುವ ಈ ಕನ್ಯಾರತ್ನವು, ತಾನಾಗಿಯೇ ಅಪೇಕ್ಷಿಸಿ ಬಂದಾಗ, ಬುದ್ಧಿಶಾಲಿಯಾದ ಯಾವನು ತಾನೇ ವರಿಸದಿರುವನು ? ಅವಶ್ಯವಾಗಿ ನಾನು ವರಿಸುವೆನು. ಆದರೆ ಈ ವಿಷಯದಲ್ಲಿ ನಾವು ನಾವು ನಿರ್ಣಯಿಸಿಕೊಳ್ಳಬೇಕಾದ ಒಪ್ಪಂದವೊಂದುಂಟು. ಅದಕ್ಕೆ ನೀನೂ ಸಮ್ಮತಿಸಬೇಕು. ಅದೇನೆಂದು ಕೇಳುವೆಯಾ? ಈಕೆಯಲ್ಲಿ ಸಂತಾನವುಂಟಾಗುವವರೆಗೆನುಮಾತ್ರವೇ ಇವಳೊಡನೆ ನಾನು ಗೃಹಸ್ಥಧರ್ಮವನ್ನು ನಡೆಸುತ್ತಿರುವೆನು. ಇವಳಿಗೆ ಸಂತಾನವುಂಟಾದಕೂಡಲೆ, ನಾನು ಇವಳನ್ನು ಬಿಟ್ಟು, ನಿವೃತ್ತಿಧರ್ಮವನ್ನು ಹಿಡಿದು, ಭಗವಂತನಿಂದ ವಿಧಿಸಲ್ಪಟ್ಟ ಸಾತ್ವಿಕಮಾರ್ಗದಲ್ಲಿ ನಿಲ್ಲುವೆನು. ಈ ನನ್ನ ಉದ್ದೇಶವು ನನ್ನ ಬುದ್ಧಿಪೂರ್ವಕವಾಗಿ ಹುಟ್ಟಿದುದೆಂದು ತಿಳಿಯಬೇಡ ! ದೇವಮನುಷ್ಯಾದಿಭೇದಗಳುಳ್ಳ ಚಿತ್ರವಿಚಿತ್ರವಾದ ಈ ಪ್ರಪಂಚವೆಲ್ಲವೂ ಯಾವನಿಂದ ಉತ್ಪನ್ನವಾಗುವುದೋ, ಯಾವನು ಅದರೊಳಗೆ ತಾನೂ ಸೇರಿ, ಅದಕ್ಕೆ ನಿಯಾಮಕನಾಗಿಯೂ, ಧಾರಕನಾಗಿಯೂ ಇರುವನೋ, ಕೊನೆಗೆ ಯಾವನಲ್ಲಿಯೇ ಆ ಪ್ರಪಂಚವು ಲಯ

ಹೊಂದುವುದೋ,ಅಂತಹ ಭಗವಂತನ ಸಂಕಲ್ಪದಿಂದಲೇ ಏರ್ಪಟ್ಟುದೆಂದು ತಿಳಿ! ಆದುದರಿಂದ ಈ ಒಪ್ಪಂದವು ನಮ್ಮಿಬ್ಬರಿಗೂ ಈಗಲೇ ನಡೆಯಬೇಕಾಗಿರುವುದು" ಎಂದನು. ಕರ್ದಮನು ಹೀಗೆಂದು ಹೇಳಿ ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಿಸುತ್ತ, ತನ್ನ ಮುಗಳ್ನಗೆಯ ಸೊಗಸಿನಿಂದ ದೇವಹೂತಿಯ ಮನಸ್ಸನ್ನು ಮೋಹಪಡಿಸುತಿದ್ದನು. ಮನುಚಕ್ರವರ್ತಿಯೂಕೂಡ ಕರ್ದಮನ ನಿಯಮಕ್ಕೆ ಸಮ್ಮತಿಸಿ,ಪತ್ನೀಸಮೇತನಾಗಿ ತನ್ನ ಕುಮಾರಿಯೆನ್ನು ಕರ್ದಮನಿಗೆ ಕೊಟ್ಟು ವಿವಾಹಮಾಡಿದನು. ಮನುಪತ್ನಿಯಾದ ಶತರೂಪೆಯೂ ಕೂಡ ಸಂತೋಷಪೂರ್ವಕವಾಗಿ ಮಗನಿಗೂ ಅಳಿಯನಿಗೂ ಬೇಕುಬೇಕಾದ ವಸ್ತ್ರಾಭರಣಗಳನ್ನೂ, ಕ್ರೀಡಾಸಾಮಗ್ರಿಗಳನ್ನೂ ಬಳುವಳಿಯಾಗಿ ಕೊಟ್ಟು ಸಂತೋಷಪಡಿಸಿದಳು. ಮನುಚಕ್ರವರ್ತಿಯು ತನ್ನ ಮಗಳಿಗೆ ತಕ್ಕ ವರನು ಸಿಕ್ಕಿದುದಕ್ಕಾಗಿ ಪರಮಸಂತೋಷಹೊಂದಿ, ಅಳಿಯನನ್ನು ಪ್ರೀತಿಯಿಂದಾಲಂಗಿಸಿಕೊಂಡು, ತನ್ನ ಮಗಳನ್ನು ಬಿಟ್ಟು ಹೋಗಲಾರದ ವ್ಯಸನದಿಂದ ಆಗಾಗ ಕಣ್ಣೀರನ್ನು ಸುರಿಸಿ, ‘‘ ಅಮ್ಮಾ ! ಕುಮಾರೀ ! ” ಎಂದು ಬಾರಿಬಾರಿಗೂ ಮುದ್ದಿಸಿ ಕರೆಯುತ್ತ ದುಃಖಿಸುತಿದ್ದನು. ಕೊನೆಗೆ ಮನಸ್ಸನ್ನು ದೃಢಪಡಿಸಿಕೊಂಡು,ಮಗಳಿಗೆ ಬುದ್ಧಿವಾದವನ್ನು ಹೇಳಿ, ಕರ್ದಮನಿಂದ ಅನುಮತಿಯೆನ್ನು ಪಡೆದು, ರಥವನ್ನೇರಿ ಪರಿವಾರಸಮೇತನಾಗಿ ತನ್ನಪಟ್ಟಣಕ್ಕೆ ಹೊರಟನು. ದಾರಿಯಲ್ಲಿ ಅನೇಕಮಹರ್ಷಿಗಳಿಂದ ತುಂಬಿದ ಸರಸ್ವತೀನದಿಯ ಉಭಯತೀರಗಳಲ್ಲಿಯೂ,ಸಾಲಾಗಿರುವ ಪರ್ಣಶ್ರಮಗಳ ಸಮೃದ್ಧಿಯನ್ನು ನೋಡುತ್ತ ಹೋದನು. ಇಷ್ಟರಲ್ಲಿಯೇ ಪಟ್ಟಣದ ಪ್ರಜೆಗಳೆಲ್ಲರೂ ತಮ್ಮ ರಾಜನು ಬ್ರಹ್ಮಾವರ್ತದಿಂದ ಹಿಂತಿರುಗಿ ಬರುತ್ತಿರುವ ವೃತ್ತಾಂತವನ್ನು ತಿಳಿದು,ಗೀತವಾದ್ಯಧ್ವನಿಗಳೊಡನೆ ಸಂತೋಷದಿಂದ ಇದಿರುಗೊಂಡು ಬಂದರು.ರಾಜನು ತನ್ನ ಪ್ರಜೆಗಳು ತನಗೆ ಮಾಡಿದ ಈ ಸತ್ಕಾರಗಳನ್ನೆಲ್ಲಾ ಪ್ರೀತಿಯಿಂದಾದರಿಸಿ,ಪುರಪ್ರವೇಶವನ್ನು ಮಾಡಿದನು.ವಿದುರಾ! ಆ ಚಕ್ರವರ್ತಿಯು ಪಾಲಿಸುತಿದ್ದ ರಾಜಧಾನಿಗೆ ಬರ್ಹಿಷ್ಮತಿಯೆಂದು ಹೆಸರು!ಪೂರ್ವದಲ್ಲಿ ವರಾಹರೂಪಿಯಾದ ಭಗವಂತನು, ಭೂಮ್ಯುದ್ಧರಣಕಾಲದಲ್ಲಿ,ತನ್ನ ಮೈಯನ್ನು ಝಾಡಿಸಿದಾಗ, ಅವನ ದೇಹದಿಂದಕೆಲವು ರೋಮಗಳು

ಕೆಳಕ್ಕುದಿರಿ,ಆ ನೆಲದಲ್ಲಿ ಬಿದ್ದು, ಹಸುರುದರ್ಭೆಗಳಾಗಿಯೂ, ನೊದೆಹುಲ್ಲಾಗಿಯೂ ಬೆಳೆದುವು. ಇವುಗಳಿಂದಲೇ ಅನೇಕಮಹರ್ಷಿಗಳು, ಅಲ್ಲಿ ಯೆಜ್ಞವಿರೋಧಿಗಳಾದ ರಾಕ್ಷಸರನ್ನು ನಿರಾಕರಿಸಿ,ವಿಷ್ಣುಪ್ರೀತ್ಯರ್ಥವಾಗಿ ಯಾಗಗಳನ್ನು ನಡೆಸಿದರು. ಮನುಜಕ್ರವರ್ತಿಯೂಕೂಡ ಅಲ್ಲಿ ಹುಟ್ಟಿದ ದರ್ಭೆಗಳಿಂದ ಅದೇ ಸ್ಥಳದಲ್ಲಿ ನಾರಾಯಣಪ್ರೀತ್ಯರ್ಥವಾಗಿ ಯಾಗಗಳನ್ನು ಮಾಡಿದನು. ಹೀಗೆ ದರ್ಭೆಗಳಿಂದ ಸಮೃದ್ಧವಾಗಿ, ಯಾಗಗಳಿಗೆ ಅನುಕೂಲವಾದ ಆ ಸ್ಥಳವು ಕೊನೆಗೆ ಒಂದು ದೊಡ್ಡಪಟ್ಟಣವಾಯಿತು. ಈ ಕಾರಣದಿಂದಲೇ ಅದಕ್ಕೆ ಬರ್ಹಿಷ್ಮತಿಯೆಂಬ ಹೆಸರು ಪ್ರಸಿದ್ಧವಾಗಿರುವುದು. ಸ್ವಾಯಂಭುವಮನುವು ಸಕಲಸಂಪತ್ಸಮೃದ್ಧವಾದ ಆ ಪುರವನ್ನು ಪ್ರವೇಶಿಸಿ, ಭಾರ್ಯಾಪುತ್ರರೊಡಗೂಡಿ ತನ್ನ ವರ್ಣಾಶ್ರಮಗಳಿಗೂ, ಧರ್ಮಕ್ಕೂ ವಿರೋಧವಿಲ್ಲದಂತೆ, ಸಮಸ್ತಭೋಗಗಳನ್ನೂ ಅನುಭವಿಸುತ್ತ, ದೇವತೆಗಳಿಂದಲೂ ಸ್ತುತಿಸಲ್ಪಡುವ ಪುಣ್ಯಕೀರ್ತಿಯುಳ್ಳವನಾಗಿದ್ದನು. ಭೂಮಂಡಲಕ್ಕೆ ತಾನೇ ಅಧಿರಾಜನಾಗಿದ್ದರೂ, ಹರಿಭಕ್ತಿಯನ್ನು ಬಿಡದೆ, ಪ್ರತಿದಿನವೂ ಬೆಳಿಗ್ಗೆ ಹರಿಕಥೆಗಳನ್ನು ಕೀರ್ತಿಸುತ್ತ, ಯಾವಾಗಲೂ ಹರಿಧ್ಯಾನಪರನಾಗಿ ತನ್ನ ಮನ್ವಂತರಕಾಲವೆಲ್ಲವನ್ನೂ ಈ ವಿಧವಾದ ಸತ್ಕಾಲಕ್ಷೇಪದಿಂದಲೇ ಕಳೆಯುತಿದ್ದನು. ಅವನಿಗೆ ಭೋಗಸಾಮಗ್ರಿಗಳು ಯಥೇಚ್ಛವಾಗಿದ್ದರೂ, ಅವನ ಮನಸ್ಸನ್ನು ವಶಪಡಿಸಿಕೊಳ್ಳಲಾರದೆ ಹೋದುವು ಅವನು ತನ್ನ ಆಳ್ವಿಕೆಗೆ ನಿರ್ಣಯಿಸಲ್ಪಟ್ಟ ಎಪ್ಪತ್ತೊಂದುಯುಗಗಳಲ್ಲಿ(ಎಂದರೆ ಸ್ವಾಯಂಭುವ ಮನ್ವಂತರದಲ್ಲಿ) ಒಂದು ಕ್ಷಣಮಾತ್ರವನ್ನೂ ವ್ಯರ್ಥಮಾಡದೆ, ಭಗವದ್ವಿಷಯದಲ್ಲಿಯೇ ಆಸಕ್ತನಾಗಿ,ರಾಜಕಾರ್ಯವನ್ನು ನಿರ್ವಹಿಸುತಿದ್ದನು. ಅವನ ಆಳ್ವಿಕೆಯಲ್ಲಿ ಪ್ರಜೆಗಳೆಲ್ಲರೂ,ದೇಹಸಂಬಂಧವಾದ ರೋಗಗಳಾಗಲಿ,ಮನೋವ್ಯಾಧಿಗಳಾಗಲಿ, ಶೀತೋಷ್ಣಾದಿಬಾಧೆಗಳಾಗಲಿ, ಶತ್ರುಜೋರಭಯಗಳಾಗಲಿ,ಬೇರೆ ಯಾವ ಈತಿಬಾಧೆಯಾಗಲಿ ಇಲ್ಲದೆ,ಸುಖದಿಂದ ಕಾಲವನ್ನು ಕಳೆಯುತಿದ್ದರು.ವಿದುರಾ! ಸರ್ವಕಾಲದಲ್ಲಿಯೂ ಶ್ರೀಹರಿಯನ್ನೇನಂಬಿದ ಹರಿಭಕ್ತಿಪರಾಯಣರಾದವರಿಗೆ ಯಾವವಿಧವಾದ ಕ್ಲೇಶವೂ ಉಂಟಾಗದು.ಆಸ್ವಾಯಂಭುವಮನುವು ಕ್ಷತ್ರಿಯನೆನಿಸಿಕೊಂಡಿದ್ದರೂ, ಯೋಗೀಶ್ವರರಿಗಿಂತಲೂ,

ಮೇಲಾದ ಜ್ಞಾನಾತಿಶಯವುಳ್ಳವನಾಗಿ,ಆಗಾಗ ತನ್ನಲ್ಲಿಗೆ ಸಂದೇಹಪರಿ ಹಾರ್ಥವಾಗಿ ಬಂದ ಸಾಮಾನ್ಯಜನರಿಗೂ, ಮಹರ್ಷಿಗಳಿಗೂ, ವರ್ಣಾಶ್ರಮಧರ್ಮಗಳನ್ನೂ, ಮೋಕ್ಷಧರ್ಮವನ್ನೂ ಉಪದೇಶಿಸುತಿದ್ದನು. ವಿದುರಾ! ಆದಿರಾಜನೆನಿಸಿದ ಆ ಮನುವಿನ ಚರಿತ್ರವನ್ನು ನಿನಗೆ ವಿವರಿಸಿತಿಳಿಸಿದೆನು. ಇನ್ನು ಅವನ ಮಗಳಾದ ದೇವಹೂತಿಯ ಚರಿತ್ರವನ್ನೂ ತಿಳಿಸುವೆನು ಕೇಳು" ಎಂದನು. ಇಲ್ಲಿಗೆ ಇಪ್ಪತ್ತೆರಡನೆಯ ಅಧ್ಯಾಯವು.

ಕರ್ದಮನು ತನ್ನ ಯೋಗಬಲದಿಂದ ವಿಮಾನವನ್ನು ಕಲ್ಪಿಸಿಕೊಂಡು, ಭಾರ್ಯಾಸಮೇತನಾಗಿ ಸುಖದಿಂದ ವಿಹರಿಸುತಿದ್ದುದು

೧.ವಿದುರಾ ಕೇಳು! ಸ್ವಾಯಂಭುವನು, ಕರ್ಣಾಶ್ರಮವನ್ನು ಬಿಟ್ಟು ತನ್ನ ರಾಜಧಾನಿಗೆ ಹಿಂತಿರುಗಿದಕೂಡಲೆ, ಇತ್ತಲಾಗಿ ಅವನ ಕುಮಾರಿಯಾದ ದೇವಹೂತಿಯು, ತನ್ನ ಸೌತೀಲ್ಯಕ್ಕೂ, ಚಾತುರ್ಯಕ್ಕೂ ತಕ್ಕಂತೆ, ಕರ್ದಮನ ಮನೋಭಿಪ್ರಾಯವನ್ನು ಅವನ ಮುಖಭಾವದಿಂದ ತಾನಾಗಿಯೇ ತಿಳಿದುಕೊಂಡು, ಪಾರ್ವತೀದೇವಿಯು ಪಶುಪತೀಶ್ವರನನ್ನು ಹೇಗೋ ಹಾಗೆ ಪತಿಯನ್ನು ಪೂಜರಿಸುತಿದ್ದಳು ನಂಬಿಕೆ, ನಡತೆ, ಮರ್ಯಾದೆ, ತಾಳ್ಮೆ, ಇಂದ್ರಿಯನಿಗ್ರಹಶಕ್ತಿ, ಪತಿಯ ಬುದ್ಧಿವಾದವನ್ನು ಕೇಳುವುದರಲ್ಲಿ ವಿಶೇಷವಾದ ಶ್ರದ್ಧೆ, ಪತಿಯಲ್ಲಿರಬೇಕಾದ ಪ್ರೀತಿ, ಮೃದುವಾದ ಮಾತು, ಈ ಸಮಸ್ತಗುಣಗಳಲ್ಲಿಯೂ ಪತಿಗೆ ಸಂತೋಷವನ್ನುಂಟುಮಾಡುತ್ತಿದ್ದಳು. ಮತ್ತು ಆಕೆಯು ಸ್ತ್ರೀಜಾತಿಗೆ ಸಹಜವಾದ ಕಾಮಾತುರವನ್ನಾಗಲಿ, ಹೆಮ್ಮೆಯನ್ನಾಗಲಿ, ಅಸೂಯೆಯನ್ನಾಗಲಿ, ಅತ್ಯಾಸೆಯನ್ನಾಗಲಿ, ದುರಾಚಾರವನ್ನಾಗಲಿ, ಮದವನ್ನಾಗಲಿ ತೋರಿಸದೆ, ಬಹಳ ಎಚ್ಚರಿಕೆಯಿಂದ ಪತಿಯ ಮನಸ್ಸನ್ನನುವರ್ತಿಸಿಕೊಂಡು, ಅವನನ್ನು ಸಂತೋಷಪಡಿಸುತಿದ್ದಳು. ಹೀಗೆ ಪತಿಯನ್ನೇ ಪರದೈವಕ್ಕಿಂತಲೂ ಹೆಚ್ಚಾಗಿ ಭಾವಿಸಿ, ತನ್ನ ಪೂರ್ಣಾನುಗ್ರಹಕ್ಕಾಗಿ ಇದಿರುನೋಡುತ್ತಿರುವ ಆ ಮನುಪುತ್ರಿಯನ್ನು ನೋಡಿ ಕರ್ದಮನು, ಅವಳ ಶುಶ್ರೂಷೆಗಾಗಿ ಬಹಳಸಂತೋಷಗೊಂಡು,

ಬಹುಕಾಲದಿಂದ ತನ್ನ ಶುಶ್ರೂಷೆಯಲ್ಲಿ ಆಕೆಯ ದೇಹವು ಬಹಳವಾಗಿ ಕಂದಿರುವುದನ್ನೂ ನೋಡಿ, ಅವಳಲ್ಲಿ ಕನಿಕರಗೊಂಡು, ಪ್ರೇಮಪೂರ್ವಕವಾದ ಗದ್ಗದಸ್ವರದೊಡನೆ ಹೀಗೆಂದು ಹೇಳುವನು. ''ಪ್ರಿಯೆ! ನೀನು ನನ್ನಲ್ಲಿ ತೋರಿಸುತ್ತಿರುವ ಗೌರವಕ್ಕೂ, ನಿನ್ನ ಭಕ್ತಿಗೂ, ನೀನು ಮಾಡಿದ ಉಪಚಾರಕ್ಕೂ ನಾನು ಬಹಳಸಂತೋಷಪಟ್ಟೆನು. ಎಲೆ ದೇವಿ! ಲೋಕದಲ್ಲಿ ಪ್ರಾಣಿಗಳಿಗೆ ತಮ್ಮ ದೇಹಕ್ಕಿಂತಲೂ ಪ್ರಿಯವಾದ ವಸ್ತುವಿಲ್ಲ! ಅಂತಹ ಕೋಮಲವಾದ ನಿನ್ನ ಶರೀರವನ್ನೂ ಕೂಡ, ನೀನು ನನ್ನ ನಿಮಿತ್ತವಾಗಿ ಕಂದಿಸುತ್ತಿರುವೆಯೆಲ್ಲಾ! ಇಂತಹ ಪತಿಪರಾಯಣೆಯಾದ ಸ್ತ್ರೀಯನ್ನು ಇದುವರೆಗೂ ನಾನು ಕಂಡು ಕೇಳಿದುದಿಲ್ಲ. ನಿನ್ನ ವಿಷಯದಲ್ಲಿ ನಾನು ಬಹಳಸಂತೋಷಪಟ್ಟೆನು! ಎಲೆ ಮಾನಿನಿ! ನಾನೂ ನನ್ನ ವರ್ಣಾಶ್ರಮಧರ್ಮಗಳಿಗೆ ವಿಧಿಸಲ್ಪಟ್ಟ ಕರ್ಮಗಳಲ್ಲಿಯೇ ನಿರತನಾಗಿ,ತಪಸ್ಸಿನಿಂದಲೂ,ಮನೋದಾರ್ಢ್ಯದಿಂದಲೂ, ಭಗವದುಪಾಸನದಿಂದಲೂ, ಆತ್ಮಜ್ಞಾನದಿಂದಲೂ ಭಗವಂತನ ಪೂರ್ಣಾನುಗ್ರಹವನ್ನು ಸಂಪಾದಿಸಿರುವೆನು. ಇದರಿಂದ ನನಗೆ ಸಮಸ್ತ ಭೋಗ್ಯಪದಾರ್ಥಗಳೂ, ದುಃಖಭೆಯೆಗಳೊಂದೂ ಇಲ್ಲದ ಭೋಗಸ್ಥಾನಗಳೂ ಸುಲಭವಾಗಿ ಕೈಗೂಡಬಲ್ಲವು. ನೀನು ಮನಃಪೂರ್ವಕವಾದ ಪರಿಚರ್ಯೆಯಿಂದ ನನ್ನನ್ನು ಇದುವರೆಗೆ ಸಂತೋಷಪಡಿಸಿದೆ. ನನಗೆ ಲಭಿಸಬಹುದಾದ ಸಮಸ್ತಲೋಕಗಳೂ ನಿನಗೂ ಲಭಿಸುವುದರಲ್ಲಿ ಸಂದೇಹವಿಲ್ಲ. ಆದರೆ ಅವೆಲ್ಲವನ್ನೂ ಅನುಭವಿಸುವುದಕ್ಕೆ ತಕ್ಕಂತೆ ನಿನಗೆ ದಿವ್ಯದೃಷ್ಟಿಯನ್ನು ಕೊಡುವೆನು. ಭಗವಂತನ ಪೂರ್ಣಾನುಗ್ರಹವು ನಮ್ಮಲ್ಲಿರುವಾಗ, ನಮಗೆ ಯಾವ ಪುರುಷಾರ್ಥಗಳಿಗೂ ಕಡಿಮೆಯಿಲ್ಲ. ಆದರೆ, ಎಲೆ ಪ್ರಿಯೆ! ಇಂತಹ ಸಂದರ್ಭದಲ್ಲಿ ನಾವು ಅಲ್ಪಫಲಗಳಿಗಾಗಿ ಆಸೆಪಡಬಾರದು. ಆ ಭಗವಂತನ ಹುಬ್ಬಿನಾಟಗಳಿಂದಲೇ ತಲೆಕೆಳಗಾಗತಕ್ಕ ತುಚ್ಛಭೋಗಗಳನ್ನು ಬಯಸುವುದರಿಂದ ಫಲವಿಲ್ಲ? ನಿನಗೆ ಈ ನಿನ್ನ ಪಾತಿವ್ರತ್ಯದ ಬಲದಿಂದಲೇ ಸಮಸ್ತಸಿದ್ಧಿಗಳೂ ಕೈಗೂಡಿರುವುವು. ಇವು ಸಾಮಾನ್ಯಜನರಿಗೆ ಲಭಿಸಲಾರವು. ಚಕ್ರವರ್ತಿಗಳಿಗೂ ಆಶೆಯನ್ನು ಹುಟ್ಟಿಸತಕ್ಕ ಉತ್ತಮಭೋಗಗಳನ್ನು ನೀನು ಅನುಭವಿಸಬಹುದು" ಎಂದನು. ಇದನ್ನು ಕೇಳಿ ಆಕೆ

ಯು, ತನ್ನ ಪತಿಯ ತಪಃಪ್ರಭಾವಕ್ಕೂ, ಆತನ ಜ್ಞಾನಾತಿಶಯಕ್ಕೂ ಆಶ್ಚರ್ಯ ಪಡುತ್ತ, ತನ್ನ ಮನೋವ್ಯಥೆಯೆಲ್ಲವನ್ನೂ ಬಿಟ್ಟು, ನಾಚಿಕೆಯಿಂದುಂಟಾದ ಮಂದಹಾಸದೊಡನೆ, ವಿನಯಪೂರ್ವಕವಾಗಿ ತನ್ನ ಪತಿಗೆ ಹೀಗೆಂದು ವಿಜ್ಞಾಪಿಸುವಳು. ''ನಾಥಾ ! ಅನೋಘವಾದ ತಪೋಮಹಿಮೆಯುಳ್ಳ ನೀನು ಪತಿಯಾಗಿರುವಾಗ, ಲೋಕದಲ್ಲಿ ನನಗೆ ದುರ್ಲಭವಾದ ಕೋರಿಕೆಯು ಯಾವುದುಂಟು ? ಇಥನ್ನು ನಾನು ಮೊದಲೇ ಚೆನ್ನಾಗಿ ಬಲ್ಲೆನು ! ಆದರೆ ಈಗ ನನ್ನದೊಂದು ಪ್ರಾರ್ಥನೆಯುಂಟು. ನಮ್ಮ ವಿವಾಹಕಾಲದಲ್ಲಿ ನೀನು, ನನಗೆ ಸಂತಾನವಾಗುವವರೆಗೆ ನನ್ನೊಡನೆ ಕೂಡಿರುವುದಾಗಿ ಭರವಸನವನ್ನು ಕೊಟ್ಟಿದ್ದೆಯಲ್ಲವೆ ? ಸ್ತ್ರೀಯರಿಗೆ ತಮ್ಮ ಪತಿಯಿಂದ ಲಭಿಸತಕ್ಕ ಸಂತಾನಕ್ಕಿಂತಲೂ ಮೇಲಾದ ಲಾಭವು ಬೇರೊಂದಿಲ್ಲವು. ಇದಲ್ಲದೆ ಮತ್ತೊಂದುವಿಷಯವನ್ನು ನಿನ್ನಲ್ಲಿ ತಿಳಿಸುವುದಕ್ಕೆ ನಾನು ನಾಚಿಕೆಪಡುತ್ತಿರುವೆನು ! ನಾನು ಕಾಮಬಾಧೆಯಿಂದಲೇ ಹೀಗೆ ದಿನದಿನಕ್ಕೆ ಕೃಶಳಾಗುತ್ತಿರುವೆನು. ಈ ನಿನ್ನ ದೇಹಸೌಂದರ್ಯವೇ ನನಗೆ ಆ ಕಾಮವನ್ನು ಮೇಲೆಮೇಲೆ ಹೆಚ್ಚಿಸುತ್ತಿರುವುದು. ನನಗೆ ನಿನ್ನಿಂದಲೇ ಹುಟ್ಟಿರುವ ಈ ಕಾಮಾಭಿಲಾಷೆಯನ್ನು ನೀನೇ ತೀರಿಸಬೇಕಲ್ಲವೆ? ಆದುದರಿಂದ ಮೊದಲು ನೀನು ನಮಗೆ ಬೇಕಾದ ಭೋಗಸಾಮಗ್ರಿಗಳನ್ನೂ, ಭೋಗಮಂದಿರವನ್ನೂ ಕಲ್ಪಿಸಿಕೊಟ್ಟು ನನಗೆ ಮಾಡಿಪ ವಾಗ್ದಾನವನ್ನು ನೆರವೇರಿಸಬೇಕಲ್ಲವೆ ? ಎಂದಳು. ಇದನ್ನು ಕೇಳಿ ಕರ್ದಮನು, ಆಕ್ಷಣವೇ ತನ್ನ ಯೋಗಸಾಮರ್ಥ್ಯದಿಂದ ಮಹಾದ್ಭುತವಾದ ಒಂದು ವಿಮಾನವನ್ನು ಕಲ್ಪಿಸಿದನು. ತಪಃಪ್ರಭಾವದಿಂದ ನಿರ್ಮಿತವಾದ ಆ ದಿವ್ಯವಿಮಾನದ ಅತಿಶಯವನ್ನು ಕೇಳಬೇಕೆ? ನವವಿಧರತ್ನಗಳಿಂದಲೂ ತುಂಬಿ, ಕೋರಿದಾಗ ಕೋರಿದ ವಸ್ತುಗಳೆಲ್ಲವನ್ನೂ ಆಗಾಗಲೇ ಹುಟ್ಟಿಸುತ್ತ, ಕ್ಷಣಕ್ಷಣಕ್ಕೂ ಅದರ ಭಾಗ್ಯವು ಮೇಲೆ ಮೇಲೆ ಹೆಚ್ಚುತ್ತಿರುವಂತೆ ಕಾಣವುದು. ಸುತ್ತಲೂ ರತ್ನದ ಕಂಬಗಳು ! ಎಲ್ಲಿ ನೋಡಿದರೂ ದೇವಯೋಗ್ಯವಾದ ಭೋಗಸಾಮಗ್ರಿಗಳು ! ಅಲ್ಲಲ್ಲಿ ಕಟ್ಟಿದ ಚಿತ್ರವಿಚಿತ್ರಗಳಾದ ಧ್ವಜಪತಾಕೆಗಳು ! ಚಿತ್ರಕಾರ್ಯವುಳ್ಳ ದುಕೂಲದ ಪಟ್ಟೆಗಳು ! ಭ್ರಮರಝಂಕಾರಗಳೊಡನೆ ತೂಗಾಡುತ್ತಿರುವ

ಹೂವಿನದಂಡೆಗಳು! ನಾನಾಬಣ್ಣದ ಪಟ್ಟೆಮಡಿಯ ಕುಚ್ಚುಗಳು! ಮೇಲೆ ಮೇಲೆ ಎತ್ತರಿಸಿಕಟ್ಟಿದ ಬೇರೆಬೇರೆ ಅಂತಸ್ತುಗಳು! ಅಲ್ಲಲ್ಲಿ ಮನೋಹರಗಳಾದ ಶಯನಗೃಹಗಳು! ಅವುಗಳ ನಡುನಡುವೆ ಚಿನ್ನದ ಮಂಚಗಳು! ತಾನಾಗಿಯೇ ಆಡುತ್ತಿರುವ ಬೀಸಣಿಗೆಗಳು! ಅದರಮೇಲೆ ಪಟ್ಟೆಮಡಿಯ ಹಾಸಿಗೆಗಳು! ಎಲ್ಲಿ ನೋಡಿದರೂ ಚಿತ್ರವಿಚಿತ್ರಗಳಾದ ಶಿಲ್ಪಕಾರ್ಯಗಳು! ಅಲ್ಲಲ್ಲಿ ಇಂದ್ರನೀಲದ ನೆಲಗಟ್ಟುಗಳು! ಅವುಗಳನೆಲೆ ಹವಳದ ಜಗುಲಿಗಳು! ಪ್ರತಿಬಾಗಿಲಿಗೂ ಹವಳದ ಕುಡಿಗಳಿಂದ ಮಾಡಿದ ಹೊಸ್ತಿಲುಗಳು. ವಜ್ರದ ಕಡಗಳು! ಒಂದೊಂದು ಮನೆಯಮೇಲೆಯೂ ಇಂದ್ರನೀಲದ ಗೋಪುರಗಳು. ಅದರಮೇಲೆ ಸುವರ್ಣಕಲಶಗಳು! ಒಂದೊಂದುಮನೆಗೂ ವಜ್ರದಗೋಡೆಗಳು! ಅವುಗಳ ನಡುನಡುವೆ ಕಣ್ಣುಗಳನ್ನು ಬಿಡಿಸಿಡಂತೆ ತೋರುವ ಕೆಂಪುಕಲ್ಲುಗಳು! ಚಿತ್ರವಿಚಿತ್ರಗಳಾದ ಮೇಲುಕಟ್ಟುಗಳು! ಒಂದೊಂದುಬಾಗಿಲಿಗೂ ಚಿನ್ನದ ತೋರಣಗಳು! ಇದಲ್ಲದೆ ಅದರಲ್ಲಿ ರತ್ನದ ಕೆಲಸಗಳಿಂದ ಮಾಡಿದ ಹಂಸಪಕ್ಷಿಗಳನ್ನೂ, ಪಾರಿವಾಳಗಳನ್ನೂ ನೋಡಿ, ಲೀಲಾರ್ಥವಾಗಿ ಸಾಕಿದ ಹಂಸಗಳೂ, ಪಾರಿವಾಳಗಳೂ ಅವುಗಳನ್ನು ತಮ್ಮ ಜಾತಿಯ ಹಕ್ಕಿಗಳೆನ್ನಾಗಿ ಭ್ರಮಿಸಿ, ಪ್ರೀತಿಯಿಂದ ಕರೆಯುವಂತೆ ಧ್ವನಿಮಾಡುತ್ತ, ಅವುಗಳನ್ನು ಮುದ್ದಿಕ್ಕುವಂತೆ ಹಾರಿಹಾರಿ ಬಿಳುತ್ತಿರುವುವು. ಮತ್ತು ಅದರಲ್ಲಿ ವಿಹಾರಸ್ಥಾನಗಳೂ, ವಿಶ್ರಮಸ್ಥಾನಗಳೂ, ಶಯನಗೃಹಗಳೂ, ಅಂಗಳಗಳೂ, ಪಡಸಾಲೆಗಳೂ, ಪ್ರಾಕಾರದ ಹೊರಭಾಗಗಳೂ, ಕಾಲೋಚಿತವಾದ ಸುಖಕ್ಕೆ ತಕ್ಕಂತೆ ಹೇರಳವಾಗಿ ಕಂಗೊಳಿಸುತ್ತಿರುವುದು. ಇನ್ನು ಹೆಚ್ಚು ವರ್ಣಿಸಿನಿಂದೇನು? ಆ ಕರ್ದಮನು ತನ್ನ ಶಕ್ತಿಯಿಂದಲೇ ಅದನ್ನು ಸೃಷ್ಟಿಸಿದ್ದರೂ, ನೋಡಿದಹಾಗೆಲ್ಲಾ ಆ ವಿಮಾನವು, ಅವನ ಮನಸ್ಸಿಗೇ ಆಶ್ಚರ್ಯವನ್ನುಂಟುಮಾಡುತಿತ್ತು. ಹೀಗೆ ಸಮಸ್ತಸೌಖ್ಯಗಳಿಗೂ ನೆಲೆಯಾಗಿದ್ದ ಆ ವಿಮಾನವನ್ನು ನೋಡಿದಾಗಲೂಕೂಡ, ದೇವಹೂತಿಯ ಮನಸ್ಸಿನಲ್ಲಿ ಆಶ್ಚಾರ್ಯಿ ಸಂತೋಷವಿಲ್ಲದಿರುವುದನ್ನು ನೋಡಿ, ಸಮಸ್ತಭೂತಗಳ ಅಭಿಪ್ರಾಯವನ್ನೂ ತನ್ನ ಧ್ಯಾನದೃಷ್ಟಿಯಿಂದಲೇ ತಿಳಿಯಬಲ್ಲವನಾದ ಆ ಕರ್ದಮನು, ತಾನಾಗಿಯೇ ಅವಳನ್ನು ಕರೆದು ಹೀಗೆಂ

ದು ಹೇಳುವನು. ‘‘ಪ್ರಿಯೆ! ಚಿಂತಿಸಬೇಡ! ನಿನ್ನ ಅಭಿಪ್ರಾಯವು ನನಗೆ ತಿಳಿಯಿತು. ನೀನು ಮೊದಲು,ಇದೋ!ಈ ಕೊಳದಲ್ಲಿ ಸ್ನಾನಮಾಡಿ ಬಂದು,ಈ ವಿಮಾನವನ್ನೇರಿ ಕುಳ್ಳಿರು! ಭಗವಂತನ ಆನಂದಬಾಷ್ಪದಿಂದ ಕಲ್ಪಿತವಾದ ಈ ಕೊಳವು, ಕೋರಿದ ಕೋರಿಕೆಗಳೆಲ್ಲವನ್ನೂ ಈಡೇರಿಸಬಲ್ಲುದು. ನೀನು ಇದರಲ್ಲಿ ಸ್ನಾನಮಾಡಿ, ಈ ವಿಮಾನವನ್ನೇರಿದೊಡನೆ, ನಿನ್ನ ಕೋರಿಕೆಯು ಈಡೇರುವುದರಲ್ಲಿ ಸಂದೇಹವಿಲ್ಲ” ಎಂದನು. ಈ ಮಾತನ್ನು ಕೇಳಿದೊಡನೆ, ಕನ್ನೈದಿಲೆಯಂತೆ ಕಣ್ಣುಳ್ಳ ಆ ದೇವಹೂತಿಯು, ಕೊಳೆಮುಚ್ಚಿದ ಮೈ, ಹೆಣೆದ ತುರುಬು, ಮೈಲಿಗೆಯ ಬಟ್ಟೆ, ಇವುಗಳೊಡನೆಯೇ ಹೋಗಿ ಸರಸ್ವತೀನದಿಯಿಂದಾವೃತವಾದ ಆ ಬಿಂದುಸರೋವರದಲ್ಲಿಳಿದು ಮುಳುಗಿದಳು. ವಿದುರಾ! ಆಗಿನ ಆಶ್ಚರ್ಯವೆನ್ನೇನೆಂದು ಹೇಳಲಿ! ಅವಳು ಆ ಕೊಳದಲ್ಲಿ ಮುಳುಗಿದೊಡನೆ, ಆ ಜಲಮಧ್ಯದಲ್ಲಿ ಒಂದಾನೊಂದು ದಿವ್ಯಭವನವೂ, ಅದರಲ್ಲಿ ಎಳವಯಸ್ಸುಳ್ಳ ಸಾವಿರಮಂದಿ ಪದ್ಮಿನೀಜಾತಿಯ ಕನ್ಯೆಯರೂ ಕಾಣಿಸಿದರು. ಅವರೆಲ್ಲರೂ ದೇವಹೂತಿಯನ್ನು ಕಂಡೊಡನೆಯೇ ಆ ಮನೆಯಿಂದ ಹೊರಗೆ ಬಂದು, ಇವಳ ಮುಂದೆ ಕೈಜೋಡಿಸಿನಿಂತು ‘‘ಎಲೆ ಯೇನಿ! ನಾವು ನಿನ್ನ ಸೇವಕಿಯರು. ಮಾಡಬೇಕಾದ ಕಾರ್ಯವನ್ನು ಆಜ್ಞಾಪಿಸಬೇಕು. ಹೇಳಿದ ಕಾರ್ಯವನ್ನು ಮಾಡುವುದಕ್ಕೆ ಸಿದ್ಧರಾಗಿರುವೆವು” ಎಂದು ಹೇಳಿ, ಒಡನೆಯೇ ಆಕೆಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ, ಉತ್ತಮವಾದ ಸುಗಂಧದೆಣ್ಣೆಯಿಂದ ಅಭ್ಯಂಗನಮಾಡಿಸಿ, ಮೇಲಾದ ಎರಡು ಧುಕೂಲಗಳನ್ನುಡಿಸಿ, ಅವಳಿಗೆ ಇಷ್ಟವಾದ ಆಭರಣಗಳಿಂದಲಂಕರಿಸಿ, ಮೃಷ್ಟಾನ್ನಭೋಜನವನ್ನೂ, ಪಾನೀಯೆಗಳನ್ನೂ ಕೊಟ್ಟು ಉಪಚರಿಸಿದರು. ಹೀಗೆ ವಸ್ತ್ರಾಲಂಕಾರಗಳೆಲ್ಲವನ್ನೂ ತೊಡಿಸಿ, ಭೋಜನ ಮಾಡಿಸಿದಮೇಲೆ, ಅವಳಮುಂದೆ ಒಂದು ನಿಲುಗನ್ನಡಿಯನ್ನು ತಂದು ತೋರಿಸಲು, ಅವಳು ತನ್ನ ದೇಹಸೌಂದರ್ಯವನ್ನು ನೋಡತ್ತ ಬಂದಳು. ದಿವ್ಯವಾದ ಮಾಲಿಕೆ! ಶುದ್ಧವಾದ ಪಟ್ಟೆಸೀಡೆ! ಶುಭ್ರವಾದ ಮೈ! ಸುತ್ತಲೂ ಗೌರವಿಸಿ ಪೂಜಿಸತಕ್ಕ ಪರಿಜಾರಿಕೆಯರು! ಮಂಗಳಾರ್ಥವಾದ ದೇಹಸಂಸ್ಕಾರಗಳು! ಸ್ನಾನದಿಂದ ಹೊಳೆಯುತ್ತಿರುವ ತಲೆಕೂದಲು! ಕಾಲಿಂದ ತಲೆ

ಯವರೆಗೆ ಸರ್ವಾವಯವಗಳಲ್ಲಿಯೂ ದಿವ್ಯಾಭರಣಗಳು ! ಕಂಠದಲ್ಲಿ ಥಳಥಳಿಸುವ ಸುವರ್ಣಪದಕಗಳು ! ಘಲುಘಲನೆ ಧ್ವನಿಮಾಡುತ್ತಿರುವ ಚಿನ್ನದ ಕಾಲಂದುಗೆಗಳು ! ಮಧ್ಯಭಾಗದಲ್ಲಿ ನವರತ್ನಗಳಿಂದ ಖಚಿತವಾದ ಚಿನ್ನದಡಾಬು! ಉತ್ತಮವಾದ ಮುತ್ತಿನ ಹಾರಗಳು! ಕುಂಕುಮವೇ ಮೊದಲಾದ ಮಂಗಳದ್ರವ್ಯದಿಂದ ಮಾಡಿದ ಅನುಲೇಪನಗಳು! ಕಾಮನ ಬಿಲ್ಲಿನಂತೆ ತಿದ್ದಿದ ಹುಬ್ಬು! ಮೊಲ್ಲೆಯ ಮೊಗ್ಗಿನಂತೆ ಅಂದವಾದ ದಂತಪಙ್ಕ್ತಿ! ಸ್ನೇಹಸೂಚಕವಾಗಿ ಕಮಲದ ಮೊಗ್ಗಿನಂತಿರುವ ಕಡೆಗಣ್ಣಿನ ಸೊಗಸು ! ಮುಖವನ್ನು ಮತ್ತಷ್ಟು ಅಂದಗೊಳಿಸುವುದಕ್ಕಾಗಿ ಜೀವರೇಖೆಯನ್ನು ಕಟ್ಟಿದಂತಿರುವ ಮುಂಗುರುಳು!ಹೀಗೆ ತನಗೇ ಆಶ್ಚರ್ಯವನ್ನುಂಟುಮಾಡತಕ್ಕ ತನ್ನ ಸೌಂದರ್ಯವನ್ನು ನೋಡಿ ಅಕೆಯು,ಕೂಡಲೇ ತನ್ನ ಮನಸ್ಸಿನಲ್ಲಿ ಪತಿಯಾದ ಕರ್ದಮನನ್ನು ಸ್ಮರಿಸಿಕೊಂಡಳು.ಇವಳು ತನ್ನ ಪತಿಯನ್ನು ಸ್ಮರಿಸುತ್ತಿರುವಾಗಲೇ, ಆ ಸಮಸ್ತಸ್ತ್ರೀಸಮೂಹದೊಡನೆ ಕರ್ದಮನ ಬಳಿಯೆಲ್ಲಿ ತಾನಿರುವುದನ್ನೂ ಕಂಡಳು. ಹೀಗೆ ದೇವಹೂತಿಯು, ತಾನು ಮನಸ್ಸಿನಲ್ಲಿ ಯಾವುದನ್ನು ಯೋಜಿಸಿದರೂ, ಆಯಾಕ್ಷಣವೇ ಅದು ಕೈಗೂಡಿ ಬರುತ್ತಿರುವುದನ್ನೂ, ಆ ಬಿಂದುಸರಸ್ಸಿಗೆ ಸ್ನಾನಕ್ಕಾಗಿ ಹೋದ ತಾನು, ಸ್ವಪ್ರಯತ್ನವಿಲ್ಲದೆ ಈಗ ತನ್ನ ಪತಿಯನ್ನುಂದೆ ಅನೇಕಸ್ತ್ರೀಯರೊಡಗೂಡಿ ನಿಂತಿರುವುದನ್ನೂ ನೋಡಿ, ಪತಿಯಾದ ಆ ಕರ್ದಮನ ತಪಃಪ್ರಭಾವವನ್ನು ಹೀಗೆಂದು ನಿಶ್ಚಯಿಸಲಾರದೆ, ಆಶ್ಚರ್ಯದಿಂದ ಸ್ತಬ್ಧಳಾಗಿದ್ದಳು. ಆಗ ಕರ್ದಮನೂಕೂಡ, ಇದಕ್ಕೆ ಮೊದಲು ದೇಹಸಂಸ್ಕಾರವೊಂದೂ ಇಲ್ಲದೆ ತನ್ನ ಶುಶ್ರೂಷೆಯಲ್ಲಿ ಕೃಶಳಾಗಿದ್ದ ದೇವಹೂತಿಯು, ಈಗ ಸ್ನಾನಾದಿದೇಹಸಂಸ್ಕಾರಗಳಿಂದ ವಿವಾಹಕ್ಕೆ ಮೊದಲಿದ್ದ ರಾಜಕುಮಾರ್ತಿಯ ರೂಪದಿಂದಿರುವುದನ್ನೂ, ನವಯೌವನವನ್ನು ಸೂಚಿಸತಕ್ಕ ಅಕೆಯ ಎದೆಯ ಕಟ್ಟನ್ನೂ, ಅನೇಕ ವಿದ್ಯಾಧರಸ್ತ್ರೀಯರಿಂದ ಅಕೆಯ ಉಪಚರಿಸಲ್ಪಡುವುದನ್ನೂ, ಅವಳು ಧರಿಸಿದ ವಸ್ತ್ರಾಭರಣಗಳ ಸೊಗಸನ್ನೂ ನೋಡಿ ಪರಮಸಂತೋಷಭರಿತನಾಗಿ, ಅವಳನ್ನು ಕೆರೆದು ವಿಮಾನದಮೇಲೆ ಕುಳ್ಳಿರಿಸಿಕೊಂಡನು. ಏದುರಾ ! ಕರ್ದಮನು ಸಾವಿರಾರುಮಂದಿ ವಿದ್ಯಾಧರ

ಸ್ತ್ರೀಯರಿಂದ ಉಪಚರಿಸಲ್ಪಡುತಿದ್ದ ಆಕೆಯನ್ನು ತನ್ನೊಡನೆ ವಿಮಾನದಲ್ಲಿ ಕುಳ್ಳಿರಿಸಿಕೊಂಡಾಗ, ಆಕಾಶದಲ್ಲಿ ಅನೇಕತಾರೆಗಳ ಸಮೂಹದಿಂದ ಪರಿವೃತನಾದ ಚಂದ್ರನಂತೆ ಪ್ರಕಾಶಿಸುತಿದ್ದನು. ಹೀಗೆ ಕರ್ದಮನು ತನ್ನ ಪತ್ನಿಯಾದ ಆ ದೇವಹೂತಿಯೊಡನೆ ವಿಮಾನಾರೂಢನಾಗಿ, ಆಕಾಶದಲ್ಲಿ ಸಂಚರಿಸುತ್ತ, ಅಷ್ಟದಿಕ್ಪಾಲಕರಿಗೆ ಕ್ರೀಡಾಸ್ಥಾನವಾಗಿಯೂ, ಮಲಯ ಮಾರುತದ ಸಂಜಾತದಿಂದ ಕಾಮೋದ್ದೀಪಕವಾಗಿಯೂ, ಗಂಗಾನದಿಯ ಜಲಪಾತದಿಂದ ಕರ್ಣಾನಂದಕರವಾದ ಧ್ವನಿಯುಳ್ಳುದಾಗಿಯೂ ಇರುವ ಮೇರುಪರ್ವತದ ಗುಹೆಗಳಲ್ಲಿಯೂ, ಮತ್ತು ಮಾನಸಸರೋವರಡಲ್ಲಿಯೂ, ವೈಸ್ರಂಭಕ, ಸ್ವರಸನ, ನಂದನ, ಪುಷ್ಪಭದ್ರ, ಚೈತ್ರರಥ, ಮುಂತಾದ ದೇವೋದ್ಯಾನಗಳಲ್ಲಿಯೂ ಪ್ರವೇತಿಸಿ, ಅಲ್ಲಲ್ಲಿ ಸಿದ್ಧರಿಂದ ಸ್ತುತಿಸಲ್ಪಡುತ್ತ ಕುಬೇರನಂತೆ ಪರಮಾನಂದದಿಂದ ಕ್ರೀಡಿಸುತ್ತಿದ್ದನು. ಕೋರಿದ ಸ್ಥಳಕ್ಕೆ ಆಯೋಕ್ಷಣವೇ ತಂದು ಸೇರಿಸತಕ್ಕ ಆ ಮಹಾವಿಮಾನದಲ್ಲಿ ಕುಳಿತು, ಸಮಸ್ತ ಪ್ರದೇಶಗಳಲ್ಲಿಯೂ ತಡೆಯಿಲ್ಲದ ಸಂಚಾರವುಳ್ಳವನಾಗಿ, ಸಮಸ್ತ ದೇವಲೋಕಗಳನ್ನೂ ತಿರುಗುತಿದ್ದನು. ವಿದುರಾ ! ತಾಪತ್ರಯನಿವಾರಕವಾದ ಭಗವಂತನ ಪಾದಗಳನ್ನು ನಂಬಿ, ಪವಿತ್ರವಾದ ಮನಸ್ಸುಳ್ಳವರಿಗೆ ಲೋಕದಲ್ಲಿ ದುರ್ಲಭವಾದ ವಸ್ತುವಾವುದುಂಟು ? ಹೀಗೆ ಆಶ್ಚರ್ಯಪ್ರಭಾವವುಳ್ಳ ಆ ಮಹರ್ಷಿಯು,ಎಲ್ಲೆಲ್ಲಿಯೂ ನಿರಂಕುಶವಾದ ಸಂಚಾರವುಳ್ಳವನಾಗಿ,ಒಂದೊಂದು ಸ್ಥಲವಿಶೇಷಗಳನ್ನೂ ತನ್ನ ಪತ್ನಿಗೆ ತೋರಿಸುತ್ತ ಬಂದು, ತನ್ನಾಶ್ರಮಕ್ಕೆ ಹಿಂತಿರುಗಿ, ಅಲ್ಲಿಯೂ ತನ್ನ ಪತ್ನಿಯಾದ ದೇವಹೂತಿಯಮನಸ್ಸನ್ನು ಸರ್ವವಿಧದಲ್ಲಿಯೂ ಸಂತೋಷಪಡಿಸುತ್ತ,ಅನೇಕ ಸಂವತ್ಸರಗಳನ್ನು ಕ್ಷಪ್ರಾಯವಾಗಿ ಕಳೆಯುತಿದ್ದನು.ಆ ಮನುಪುತ್ರಿಯೂಕೂಡ ವಿಮಾನದಲ್ಲಿ ತನ್ನ ಪತಿಸಮಾಗಮದಿಂದುಂಟಾದ ಸುಖವನ್ನನುಭವಿಸುತ್ತ, ತಾನು ಇದುವರೆಗೆ ಕಳೆದ ಅನೇಕವರುಷಗಳ ಕಾಲವನ್ನೂ ತಿಳಿಯದಂತೆ ಆನಂದರಸದಲ್ಲಿ ಮುಳುಗಿದ್ದಳು. ಈ ದಾಂಪತ್ಯಸುಖವನ್ನನುಭವಿಸುವಾಗಲೇ ಕರ್ದಮನು, ತನ್ನ ತೇಜಸ್ಸನ್ನು ಒಂಭತ್ತುಭಾಗವಾಗಿ ಮಾಡಿ, ತನ್ನ ಭಾರ್ಯೆಯ ಗರ್ಭದಲ್ಲಿಟ್ಟನು.ಆಕೆಯೂಕೂಡ ಪತಿಯ ತೇಜಸ್ಸನ್ನು ಗರ್ಭದ

ಲ್ಲಿ ಧರಿಸಿ, ಒಂಭತ್ತುಮಂದಿ ಕನ್ಯೆಯರನ್ನು ಹಡೆದಳು. ಆ ಕನ್ಯೆಯರೆಲ್ಲರೂ ಸರ್ವಾಂಗ ಸೌಂದರ್ಯವುಳ್ಳವರಾಗಿ, ಕನ್ನೈದಿಲೆಯಂತೆ ಸುವಾಸನೆಯುಳ್ಳ ದೇಹದಿಂದ ಶೋಭಿಸುತಿದ್ದರು. ಹೀಗೆ ಸಂತಾನಪ್ರಾಪ್ತಿಯಾದಮೇಲೆ ದೇವಹೂತಿಯು, ತನ್ನನ್ನು ಬಿಟ್ಟು ಹೋಗುವುದಕ್ಕಾಗಿ ಯತ್ನಿಸುತ್ತಿರುವ ಪತಿಯನ್ನು ನೋಡಿ,ಅತನವಿರಹದುಃಖದಿಂದ ಕೊರಗುತ್ತ, ದುಃಖವನ್ನು ತಡೆಯಲಾರದೆ ಕಣ್ಣೀರುಬಿಡುತಿದ್ದಳು. ಈ ವಿರಹವ್ಯಸನದಿಂದ ತಲೆಯೆನ್ನು ಬಗ್ಗಿಸಿ ತನ್ನ ಮನೋವ್ಯಥೆಯನ್ನು ಹೊರಗೆ ಕಾಣಿಸಲಾರದೆ, ತನ್ನ ಕಾಲಿನ ಹೆಬ್ಬೆರಳಿನಿಂದ ನೆಲವನ್ನು ಕೀರುತ್ತ, ಪ್ರಯತ್ನಪೂರ್ವಕವಾಗಿ ಕಣ್ಣೀರನ್ನು ತಡೆದಿಟ್ಟುಕೊಂಡು, ಮುಖದಲ್ಲಿ ಮುಗುಳ್ನಗೆಯೆನ್ನು ನಟಿಸುತ್ತ, ಮೃದುವಾಕ್ಯದಿಂದ ತನ್ನ ಪತಿಯೆನ್ನುಕುರಿತು ಹೀಗೆಂದು ಹೇಳುವಳು. "ಹೇ ನಾಥಾ! ನೀನು ನನಗೆ ಪ್ರತಿಜ್ಞೆಮಾಡಿಕೊಟ್ಟಂತೆ ನನ್ನ ಕೋರಿಕೆಗಳೆಲ್ಲವನ್ನೂ ನೆರವೇರಿಸಿದೆ! ಆದರೆ ನಿನಗೆ ನನ್ನಲ್ಲಿ ಪ್ರೀತಿಯಿದ್ದಪಕ್ಷದಲ್ಲಿ, ನನಗೆ ಮತ್ತೊಂದು ವಿಷಯದಲ್ಲಿ ಅಭಯಪ್ರದಾನವನ್ನು ಮಾಡಬೇಕು. ಈ ನನ್ನ ಗರ್ಭದಲ್ಲಿ ಹುಟ್ಟಿದ ಕನ್ಯೆಯರನ್ನು ತಕ್ಕ ವರರಿಗೆ ಕೊಟ್ಟು, ವಿವಾಹವನ್ನು ಮಾಡಿ, ಇವರನ್ನು ಅವರವರ ಗಂಡಂದಿರ ಮನೆಗೆ ಕಳುಹಿಸಿಕೊಟ್ಟಮೇಲೆ, ನೀನು ನಿನಗಿಷ್ಟಬಂದ ಸ್ಥಳಕ್ಕೆ ಹೋಗಬಹುದು. ಈ ಸ್ಥಿತಿಯಲ್ಲಿಯೇ ನೀನು ಬಿಟ್ಟು ಹೋದರೆ, ನನ್ನನ್ನು ಬಹಳ ದುಃಖದಲ್ಲಿ ನಿಲ್ಲಿಸಿದಂತಾಗುವುದು. ಇದಲ್ಲದೆ ನಿನ್ನ ವಿರಹದುಃಖವನ್ನು ಮರೆಸುವಂತೆ, ನನಗೆ ಒಂದು ಪುತ್ರಸಂತಾನವನ್ನೂ ಅನುಗ್ರಹಿಸಬೇಕು. ಇದುವರೆಗೆ ಸಂಸಾರಸುಖದಲ್ಲಿಯೇ ನಾನು ಕಾಲವನ್ನು ಕಳೆದುದಾಯಿತು. ಇನ್ನು ನನಗೆ ಆ ಸುಖವನ್ನನುಭವಿಸಬೇಕೆಂಬ ಆಸೆಯಿಲ್ಲ. ಇದುವರೆಗೆ ನಾನು ಸ್ವಲ್ಪಮಾತ್ರವೂ ಪರಮಾತ್ಮನನ್ನು ಪಾಸಿಸುವುದರಲ್ಲಿ ಮನಸ್ಸಿಟ್ಟವಳಲ್ಲ. ಇಷ್ಟುಮಾತ್ರ ಮಹಾತ್ಮನಾದ ನಿನ್ನ ಸೇವೆಯಲ್ಲಿದ್ದರೂ, ಸಂಸಾರಸು ಎಲವನ್ನು ಕಳೆಯುತಿದ್ದನೇಹೊರತು, ನಿನ್ನಿಂದ ಆತ್ಮಜ್ಞಾನವನ್ನು ಪಡೆಯುವುದಕ್ಕೂ ಪ್ರಯತ್ನಿಸಲಿಲ್ಲ! ಇದಕ್ಕಾಗಿ ನಾನು ಈಗ ಬಹಳ ವಿಚಾರಪಡುತ್ತಿರುವೆನು. ಈ ವಿಷಯದಲ್ಲಿ ನನಗಿರುವ ಭಯವನ್ನು ನಿವೃತ್ತಿಮಾಡುವುದಕ್ಕೆ ತಕ್ಕ ಉಪಾ

ಯವನ್ನು ನೀನೇ ಯೋಚಿಸಬೇಕು. ನನ್ನನ್ನು ಕೃತಾರ್ಥಳನ್ನಾಗಿ ಮಾಡುವ ವಿಷಯದಲ್ಲಿ ನಿನ್ನ ಅಭಿಪ್ರಾಯವನ್ನು ಬೇಡುವೆನು. ನಾಥಾ! ನಿನ್ನೊಡನೆ ನಾನು ಇಂದ್ರಿಯೆಚ್ಛಾಪಲ್ಯದಲ್ಲಿಯೇ ಇದುವರೆಗೆ ಕಾಲವನ್ನು ಕಳೆಯುತಿದ್ದರೂ, ಅದೂ ನನಗೆ ಶ್ರೇಯಸ್ಕರವೇ ಆದುದರಿಂದ, ಭಯಪಡಬೇಕಾದುದಿಲ್ಲ! ಏಕೆಂದರೆ, ಬುದ್ಧಿಪೂರ್ವಕವಾಗಿ ಮಾಡಿದರೂ, ಅಬುದ್ಧಿಪೂರ್ವಕವಾಗಿ ಮಾಡಿದರೂ, ದುರ್ಜನರ ಸಹವಾಸವು ದುರ್ಗತಿಗೆ ಕಾರಣವಾಗುವುದು. ಸಜ್ಜನರ ಸಹವಾಸವು ಸದ್ಗತಿಗೆ ಕಾರಣವು. ಪುಣ್ಯಪಾಪಗಳೆರಡಕ್ಕೂ ಸಹವಾಸವೇ ಕಾರಣವಾಗಿರುವುದು. ಸತ್ಪುರುಷಶ್ರೇಷ್ಠನಾದ ನಿನ್ನೊಡನೆ ನಾನು ಇದುವರೆಗೆ ವ್ಯರ್ಥಕಾಲಕ್ಷೇಪವನ್ನು ಮಾಡಿದರೂ, ನಿನ್ನ ಸಹವಾಸವೇ ನನಗೆ ಮೇಲ್ಮೆಯೆನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ. ಆದರೆ, ಈ ಲೋಕದಲ್ಲಿ ಮನುಷ್ಯನು ನಡೆಸತಕ್ಕ ಯಾವ ಕರ್ಮಕಲಾಪಗಳು, ಧರ್ಮಕ್ಕಾಗಲಿ, ಜ್ಞಾನಕ್ಕಾಗಲಿ, ಭಗವದ್ಭಕ್ತಿಗಾಗಲಿ ಸಹಕಾರಿಗಳಾಗುವುದಿಲ್ಲವೋ, ಅಂತಹ ಮನುಷ್ಯನು ಬದುಕಿದ್ದರೂ ಸತ್ತವನೆಂದೇ ಎಣಿಸಬೇಕು. ಮುಖ್ಯವಾಗಿ ನನ್ನ ಜನ್ಮವು ನಿರರ್ಥಕವಾಯಿತು. ನಾನು ಇದುವರೆಗೂ ನಡೆಸಿದ ಕೃತ್ಯಗಳೆಲ್ಲವೂ ನಿಷ್ಪ್ರಯೋಜನಗಳಾದುವು. ತತ್ತ್ವೋಪದೇಶದಿಂದ ಮೋಕ್ಷಪ್ರದನಾಗಿಯೂ, ಮಹಾತ್ಮನಾಗಿಯೂ ಇರುವ ನಿನ್ನೊಡನೆ ನಾನು ಇದುವರೆಗೆ ಸಹವಾಸವನ್ನು ಮಾಡಿದರೂ, ಮುಕ್ತಿಯನ್ನು ಕೈಗೂಡಿಸತಕ್ಕ ಧರ್ಮಜ್ಞಾನವನ್ನು ಸಂಪಾದಿಸಲಾರದೆ ಹೋದೆನು. ಭಗವನ್ಮಾಯೆಯಿಂದ ನಾನು ವಂಚಿತಳಾದೆನು. ಹಾಗಿಲ್ಲದಪಕ್ಷದಲ್ಲಿ, ಮೋಕ್ಷಪ್ರದನಾದ ನಿನ್ನನ್ನು ಸೇರಿಯೂ ನಾನು ಮುಕ್ತಿಮಾರ್ಗಕ್ಕೆ ಪ್ರಯತ್ನಿಸದೆ, ಹೀಗೆ [illegible]ವಾಗಿ ಕಾಲವನ್ನು ಕಳೆಯುತ್ತಿದ್ದೆನೆ?" ಎಂದಳು. ಇಲ್ಲಿಗೆ ಇಪ್ಪತ್ತೈದನೆಯ [illegible]ವು.

ಕಪಿಲಾವತಾರದ ಕಥೆ.

ವಿದುರಾ ಕೇಳು! ಹೀಗೆ ಪಶ್ಚಾತ್ತಾಪಪಟ್ಟು, ಅತಿದೈನ್ಯದಿಂದ ಪ್ರಾರ್ಥಿಸುತ್ತಿರುವ ದೇವಹೂತಿಯ ಮಾತನ್ನು ಕೇಳಿ ಕರ್ದಮನು, ಅವಳಲ್ಲಿ

ಬಹಳ ಕಸಿಕರಗೊಂಡು, ಹಿಂದೆ ಭಗವಂತನು ತನಗೆ ಹೇಳಿದ್ದ ವಾಕ್ಯವನ್ನೂ ಸ್ಮರಿಸಿಕೊಂಡು, ಅವಳಿಗೆ ಹೀಗೆಂದು ಸುಖಸಮಾಧಾನವನ್ನು ಮಾಡುವನು. "ಸಾಧ್ವೀಮಣೀ! ನಿನ್ನ ಸೌತೀಲ್ಯಶ್ಯಾಗಿ ನಾನು ಬಹಳ ಸಂತೋಷಪಟ್ಟೆನು. ರಾಜಪುತ್ರೀ! ಇದಕ್ಕಾಗಿ ಈಗ ನೀನು ಸ್ವಲ್ಪಮಾತ್ರವೂ ಚಿಂತಿಸಬೇಕಾದುದಿಲ್ಲ! ಪ್ರಾಕೃತಗುಣಸಂಬಂಧವಿಲ್ಲದ ಆ ಪರಮಪುರುಷನೇ ಇನ್ನು ಸ್ವಲ್ಪಕಾಲದೊಳಗಾಗಿ ನಿನ್ನ ಗರ್ಭದಲ್ಲಿ ಬೆಳೆದು, ನನಗೆ ಪುತ್ರನಾಗಿ ಅವತರಿಸುವನು. ನಿನಗೆ ಮಂಗಳವಾಗಲಿ! ಇದುಮೊದಲು ನೀನು, ಇಂದ್ರಿಯಗಳನ್ನೂ, ಮನಸ್ಸನ್ನೂ ತಡೆದು, ಭಗವದುಪಾಸನವೆಂಬ ಹಿಂದೇ ವ್ರತವನ್ನು ಹಿಡಿದು, ಪಾತಿವ್ರತ್ಯವೆಂಬ ತಪಸ್ಸಿನಲ್ಲಿ ನೆಲೆಗೊಂಡು, ದಾನಾದಿಸತ್ಕರ್ಮಗಳನ್ನು ಶ್ರದ್ಧೆಯಿಂದ ನಡೆಸುತ್ತ, ಆ ಈಶ್ವರನನ್ನು ಎಡೆಬಿಡದೆ ಭಜಿಸುತ್ತಿರು! ಇದರಿಂದ ಕರುಣಾಸಮುದ್ರನಾದ ಭಗವಂತನು ಸಂತೋಷಿಸಿ, ನಿನ್ನ ಗರ್ಭದಲ್ಲಿ ಜನಿಸಿ, ಲೋಕದಲ್ಲಿ ನಮ್ಮಿಬ್ಬರ ಕೀರ್ತಿಯನ್ನೂ ವಿಸ್ತರಿಸುವುದಲ್ಲದೆ, ನಿನಗೂ ತತ್ತ್ವಜ್ಞಾನವನ್ನು ಪದೇಶಿಸಿ, ನಿನ್ನ ಮನಸ್ಸಿನ ಸಂದೇಹಗಳೆಲ್ಲವನ್ನೂ ಪರಿಹರಿಸುವನು" ಎಂದನು. ವಿದುರಾ! ಈ ಮಾತನ್ನು ಕೇಳಿ ದೇವಹೂತಿಗೆ ಅತ್ಯಂತಸಂತೋಷವುಂಟಾಯಿತು. ಆಕೆಯು ತನ್ನ ಪತಿಯ ಆಜ್ಞೆಯನ್ನು ಭಕ್ತಿಯಿಂದಲೂ, ಶ್ರದ್ಧೆಯಿಂದಲೂ ಗೌರವಿಸುತ್ತ, ವಿಕಾರರಹಿತನಾಗಿಯೂ, ಅಜ್ಞಾನನಿವರ್ತಕನಾಗಿಯೂ ಇರುವ ಪರಮಪುರುಷನನ್ನು ಸರ್ವಕಾಲದಲ್ಲಿಯೂ ಭಕ್ತಿಯಿಂದ ಭಜಿಸುತಿದ್ದಳು. ಹೀಗೆ ಬಹುದಿನಗಳು ಕಳೆದಮೇಲೆ, ಭಗವಂತನು ಕರ್ದಮನ ತೇಜಸ್ಸಿನ ಮೂಲಕವಾಗಿ ದೇವಹೂತಿಯ ಗರ್ಭದಲ್ಲಿ ಪ್ರವೇಶಿಸಿ, ದಾರುವಿನಿಂದ ಅಗ್ನಿಯಂತೆ ಕಪಿಲರೂಪದಿಂದ ಹುಟ್ಟಿದನು. ಈ ಶಿಶುವಿನ ಜನನಕಾಲದಲ್ಲಿಯೇ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದುವು. ಮೇಘಗಳು ಸುವೃಷ್ಟಿಯನ್ನು ಕರೆದುವು. ಗಂಧರ್ವಗಾನದೊಡನೆ ಅಪ್ಸರಸ್ಸುಗಳು ಆಕಾಶದಲ್ಲಿ ನರ್ತನಮಾಡುತಿದ್ದರು. ದೇವತೆಗಳು ಜಯಜಯಧ್ವನಿಗಳನ್ನು ಮಾಡುತ್ತ ಪುಷ್ಪವೃಷ್ಟಿಯನ್ನು ಸುರಿಸಿದರು. ಸಮಸ್ತದಿಕ್ಕುಗಳೂ, ಸಮಸ್ತ ಜಲಾಶಯಗಳೂ, ಸಮಸ್ತಜನರ ಮನಸ್ಸೂ ಪ್ರಸನ್ನವಾಗಿದ್ದುವು.

ಇಷ್ಟರಲ್ಲಿ ಬ್ರಹ್ಮದೇವನೂ, ತನ್ನ ಪುತ್ರರಾದ ಮರೀಚಿ ಮೊದಲಾದ ಮಹರ್ಷಿಗಳೊಡಗೂಡಿ, ಸತ್ಯಲೋಕದಿಂದ ಹೊರಟು, ಸರಸ್ವತೀನದಿಯಿಂದ ಸುತ್ತಲ್ಪಟ್ಟ ಈ ಕರ್ದಮಾಶ್ರಮಕ್ಕೆ ಬಂದು ಸೇರಿದನು. ಸರ್ವಜ್ಞನಾಗಿಯೂ, ಭಗವದಂಶವುಳ್ಳವನಾಗಿಯೂ ಇರುವ ಆ ಜಗತ್ತುರ್ಮುಖಬ್ರಹ್ಮನು, ಪ್ರಕೃತಿ, ಪುರುಷ, ಈಶ್ವರರೆಂಬ ಈ ಮೂರು ತತ್ತ್ವಗಳ ನಿಜಸ್ಥಿತಿಯನ್ನು ಲೋಕಕ್ಕೆ ತಿಳಿಸುವುದಕ್ಕಾಗಿ, ಪರಮಪುರುಷನೇ ನಿಜಾಂಶಭೂತವಾದ ಸತ್ವಗುಣದೊಡನೆ, ಪುತ್ರರೂಪದಿಂದವತರಿಸಿರುವನೆಂಬುದನ್ನು ತಿಳಿದು, ಆ ಭಗವಂತನ ವಿಚಿತ್ರವ್ಯಾಪಾರಗಳನ್ನು ಕೊಂಡಾಡುತ್ತ, ಸಂತೋಷಸಂಭ್ರಮಗಳೊಡನೆ ಕರ್ದಮಮಹರ್ಷಿಯ ಬಳಿಗೆ ಬಂದು, ಹೀಗೆಂದು ಹೇಳುವನು. ‘‘ಕುಮಾರಾ! ನಿಷ್ಕಪಟವಾದ ಪ್ರೇಮದಿಂದ ನೀನು ನನ್ನ ಮಾತನ್ನು ಗೌರವಿಸಿ ನಡೆಸಿದುದಕ್ಕಾಗಿ ಬಹಳ ಸಂತೋಷಪಟ್ಟೆನು. ನನ್ನ ಮಾತಿನಂತೆ ನೀನು ಪ್ರಜಾಸೃಷ್ಟಿಯನ್ನು ನಡೆಸಿದುದರಿಂದ, ನನ್ನನ್ನು ನೀನು ಸರ್ವವಿಧದಿಂದಲೂ ಆರಾಧಿಸಿದಂತಾಯಿತು. ತಂದೆಯ ಮಾತನ್ನು ಗೌರವಿಸಿ ನಡೆಸುವುದೇ ಮಕ್ಕಳು ತಂದೆಗೆ ಮಾಡಬೇಕಾದ ಮುಖ್ಯಶುಶ್ರೂಷೆಯೆಂದು ತಿಳಿ! ಕರ್ದಮಾ! ಈ ನಿನ್ನ ಕುಮಾರಿಯೆರೆಲ್ಲರೂ ಬಹಳ ಸುಸ್ವಭಾವವುಳ್ಳವರು. ಎಣೆಯಿಲ್ಲದ ಸೌಂದರ್ಯವುಳ್ಳವರು. ಇವರೆಲ್ಲರೂ ತಮ್ಮ ತಮ್ಮ ಅಂಶಗಳಿಂದ, ಮುಂದೆ ಪುತ್ರ ಪೌತ್ರ ಪರಂಪರೆಯಾಗಿ ಪ್ರಜಾವೃದ್ಧಿಯನ್ನು ಹೆಚ್ಚಿಸುವುದಕ್ಕೆ ಕಾರಣವೆನಿಸಿರುವರು. ಆದುದರಿಂದ ನೀನು ಈ ಒಂಬತ್ತು ಕನ್ಯೆಯರನ್ನೂ, ಅವರವರ ಇಷ್ಟಕ್ಕೂ, ಸ್ವಭಾವಕ್ಕೂ ತಕ್ಕಂತೆ, ಮರೀಚಿ ಮೊದಲಾದ ಈ ಮಹರ್ಷಿಗಳಿಗೆ ಕೊಟ್ಟು ವಿವಾಹವನ್ನು ನಡೆಸು. ಇದರಿಂದ ನಿನಗೆ ಬಹಳವಾದ ಕೀರ್ತಿಯುಂಟು! ವತ್ಸ ಕರ್ದಮಾ! ಆದಿಪುರುಷನಾದ ಭಗವಂತನು, ತನ್ನ ಸಂಕಲ್ಪದಿಂದ, ಸಮಸ್ತಭೂತಗಳಿಗೂ ಅವರವರ ಕೋರಿಕೆಗಳನ್ನು ಕೈಗೂಡಿಸುವುದರಲ್ಲಿ ನಿಧಿಯೆಂತಿರುವ ದೇಹವನ್ನವಲಂಬಿಸಿ, ಕಪಿಲರೂಪದಿಂದ ನಿನ್ನ ಗರ್ಭದಲ್ಲಿ ಜನಿಸಿರುವುದಾಗಿ ತಿಳಿದೇ ನಾನೂ ಇಲ್ಲಿಗೆ ಬಂದನು” ಎಂದು ಹೇಳಿ, ದೇವಹೂತಿಯ ಕಡೆಗೆ ತಿರುಗಿ, ‘‘ಎಲೆ ಮನುಪುತ್ರಿ! ಲೋಕದ ಜನಗಳಿಗೆ ಜೀವಾತ್ಮಪರಮಾತ್ಮರ ವಿಷಯವಾ

ದ ಜ್ಞಾನೋಪದೇಶದಿಂದ, ಅವರವರ ಪುಣ್ಯಪಾಪರೂಪವಾದ ಕರ್ಮಬಂ
ಧವನ್ನು ಬಿಡಿಸುವುದಕ್ಕಾಗಿ, ಸಾಕ್ಷಾದ್ಭಗವಂತನೇ ನಿನ್ನ ಗರ್ಭದಲ್ಲಿ ಪ್ರವೇ
ಶಿಸಿ, ನಿನಗೆ ಪುತ್ರನಾಗಿ ಹುಟ್ಟಿರುವನು. ಪುಂಡರೀಕಾಕ್ಷನಾದ ಆ ಭಗವಂ
ತನೇ ನಿನಗೂ ದೇಹಾತ್ಮಭ್ರಮರೂಪವಾದ ಅಜ್ಞಾನವನ್ನು ನೀಗಿಸಿ
ಲೋಕೋದ್ಧರಣಾರ್ಥವಾಗಿಯೂ ಅಲ್ಲಲ್ಲಿ ಸಂಚರಿಸುತ್ತ, ಸಮಸ್ತಯೋಗಿ
ಗಳಿಗೂ ತಾನೇ ಮೇಲೆನಿಸಿಕೊಳ್ಳುವನು. ಲೋಕದಲ್ಲಿ ಆತ್ಮತತ್ವವನ್ನು ಪದೇ
ಶಿಸತಕ್ಕವರೆಲ್ಲರಿಗೂ ತಾನೇ ಗುರುವೆನಿಸಿಕೊಂಡು, ಕಪಿಲಮಹಾಮುನಿಯೆಂಬ
ಖ್ಯಾತಿಯನ್ನು, ಪಡೆದು ನಿನಗೂ ಕೀರ್ತಿಯನ್ನು ತರುವನು" ಎಂದನು. ವಿಹು
ರಾ ! ಹೀಗೆ ಲೋಕಕರ್ತನಾದ ಬ್ರಹ್ಮನು, ಆ ಮುನಿದಂಪತಿಗಳನ್ನು ತನ್ನ
ಪ್ರಿಯವಾಕ್ಯಗಳಿಂದ ಸಂತೋಷಪಡಿಸಿ, ತನ್ನ ವಾಹನವಾದ ಹಂಸವ
ನ್ನೇರಿ, ಸನಕಾದಿಕುಮಾರರೊಡನೆಯೂ, ನಾರದನೊಡನೆಯೂ ಸೇರಿ, ತನ್ನ
ಲೋಕಕ್ಕೆ ಹಿಂತಿರುಗಿದೊಡನೆ, ಇತ್ತಲಾಗಿ ಕರ್ದಮನು, ಆ ಬ್ರಹ್ಮನ ಆಜ್ಞೆ
ಯಂತೆ ತನ್ನ ಒಂಬತ್ತುಮಂದಿ ಕುಮಾರಿಯರನ್ನೂ, ಅವರವರ ಅಭಿಪ್ರಾ
ಯಕ್ಕೂ,ಗುಣಕ್ಕೂ ತಕ್ಕಂತೆ ಪ್ರಜಾಧಿಪತಿಗಳೆನಿಸಿಕೊಂಡ ಮರೀಚಿ ಮೊದ
ಲಾದವರಿಗೆ ಕೊಟ್ಟು ವಿವಾಹಮಾಡಿದನು. ತನ್ನ ಒಂಬತ್ತುಮಂದಿ ಕನ್ಯೆ
ಯರಲ್ಲಿ, ಕಲೆಯೆಂಬವಳನ್ನು ಮರೀಚಿಗೂ, ಅನಸೂಯೆಯನ್ನು ಅತ್ರಿಮುನಿ
ಗೂ, ಶುದ್ಧೆಯೆಂಬವಳನ್ನು ಅಂಗಿರಸ್ಸಿಗೂ,ಹವಿರ್ಭುವೆಂಬವಳನ್ನು ಪುಲಸ್ತ್ಯ
ನಿಗೂ, ಗತಿಯೆಂಬವಳನ್ನು ಪುಲಹನಿಗೂ, ಕ್ರಿಯೆಯೆಂಬವಳನ್ನು ಕ್ರತುವಿ
ಗೂ, ಖ್ಯಾತಿಯನ್ನು ಭೃಗುಮಹರ್ಷಿಗೂ, ಅರುಂಧತಿಯನ್ನು ವಸಿಷ್ಠನಿಗೂ
ಶಾಂತಿಯೆಂಬವಳನ್ನು ಅಥರ್ವನಿಗೂ ವಿವಾಹಮಾಡಿ ಕೊಟ್ಟನು. ಈ ಅಥ
ರ್ವಶಾಂತಿಯೆರಿಬ್ಬರೂ ಲೋಕದಲ್ಲಿ ಅನೇಕಯಾಗಗಳನ್ನು ವಿಸ್ತರಿ
ಸುವವರಾದರು. ಹೀಗೆ ವಿವಾಹಕಾರ್ಯವನ್ನು ನಡೆಸಿದಮೇಲೆ ಕರ್ದಮ
ನು, ಪತ್ನೀಸಮೇತರಾದ ಆ ಮಹರ್ಷಿಗಳೆಲ್ಲರನ್ನೂ ಅನೇಕವಿಧದಿಂದ ಸತ್ಕರಿ
ಸಿ, ಬೇಕಾದ ಬಳುವಳಿಗಳನ್ನು ಕೊಟ್ಟು ಸಂತೋಷಗೊಳಿಸಿದನು. ವಿವಾ
ಹಿತರಾದ ಆ ದಂಪತಿಗಳೆಲ್ಲರೂ, ಕರ್ದಮನ ಅನುಜ್ಞೆಯನ್ನು ಪಡೆದು,ಪರಂ
ತೋಷದಿಂದ ತಮ್ಮತಮ್ಮ ಆಶ್ರಮಗಳಿಗೆ ಹಿಂತಿರುಗಿದರು. ಆಮೇಲೆ ಇ

ತ್ತಲಾಗಿ ಕರ್ದಮನು,ಷಡ್ಗುಣಪರಿಪೂರ್ಣನಾದ ಭಗವಂತನೇ ಕಪಿಲರೂಪದಿಂದ ತನಗೆ ಕುಮಾರನಾಗಿ ಹುಟ್ಟಿರುವುದನ್ನು ತಿಳಿದು, ಆ ಪುತ್ರನನ್ನು ಏಕಾಂತಸ್ಥಳಕ್ಕೆ ಎತ್ತಿಕೊಂಡುಹೋಗಿ, ಭಕ್ತಿಯಿಂದ ನಮಸ್ಕರಿಸಿ ವಿಜ್ಞಾಪಿಸುವನು. "ಆಹಾ ! ಲೋಕಪಲ್ಲಿ ನಾನಲ್ಲವೇ ಮಹಾಭಾಗ್ಯಶಾಲಿಯು ! ತಮ್ಮ ತಮ್ಮ ಪಾಪಕರ್ಮಗಳಿಂದ ನರಕದಲ್ಲಿ ಬಿದ್ದುಬೇಯುತ್ತ, ಸಂಸಾರ ಸಮುದ್ರದಲ್ಲಿ ಮುಳುಗಿ ತೇಲುತ್ತಿರುವ ಮನುಷ್ಯರಿಗೆ, ಬಹುಕಾಲಕ್ಕಲ್ಲದೆ ದೈವಾನುಗ್ರಹವು ಲಭಿಸಲಾರದು ! ಇದು ನಿಶ್ಚಯವು! ಮತ್ತು ಮಹಾಯೋಗಿಗಳೂಕೂಡ, ಅನೇಕಜನ್ಮಗಳವರೆಗೆ ಬಹಳ ಪ್ರಯತ್ನಪಟ್ಟು ಸಾಧಿಸಿದ ಯೋಗಬಲದಿಂದಲ್ಲದೆ ನಿನ್ನ ಸ್ವರೂಪವನ್ನು ಕಾಣಲಾರರು. ಯೋಗಿಗಳೆಲ್ಲರೂ,ರಾಗದ್ವೇಷಾದಿದೋಷಗಳೊಂಚೂ ಇಲ್ಲದಂತೆ,ತಮ್ಮ ಮನಸ್ಸನ್ನು ಶುದ್ಧಪಡಿಸಿಕೊಂಡು, ನಿನ್ನ ಪಾದಪರ್ಶನಕ್ಕಾಗಿ ಎಷ್ಟೋ ಪ್ರಯತ್ನಪಡುವರು. ಹೀಗೆ ಯೋಗಿಗಳಿಗೂ ದುರ್ಲಭನಾದ ನೀನು, ಭಕ್ತಪರಿಪಾಲನವೆಂದ ಉದ್ದೇಶವೊಂದನ್ನೇ ಪ್ರಧಾನವಾಗಿಟ್ಟುಕೊಂಡು, ನಮ್ಮಂತಹ ಗ್ರಾಮ್ಯಜನರ ಯೋನಿಯಲ್ಲಿ ಹುಟ್ಟುವುದರಿಂದಾಗುವ ಅಗೌರವವನ್ನೂ ಲಕ್ಷ್ಯಮಾಡದೆ, ಈ ನಮ್ಮ ಗುಡಿಸಿಲಿನಲ್ಲಿ ಜನಿಸಿದೆಯೆಲ್ಲವೆ ? ಇದು ನಮ್ಮ ಮಹಾಭಾಗ್ಯವಲ್ಲದೆ ಬೇರೆಯೇನು? ಹಿಂದೆ ನೀನು ನನಗೆ ವಾಗ್ದಾನಮಾಡಿದಂತೆ,ಸಾಧುಗಳನ್ನು ರಕ್ಷಿಸಿ, ಜ್ಞಾನೋಪದೇಶದಿಂದ ಲೋಕೋಜ್ಜೀವನವನ್ನು ಮಾಡುವುದಕ್ಕಾಗಿಯೇ ನೀನು ಈ ಅವತಾರವನ್ನೆತ್ತಿ ನಮ್ಮ ಮನೆಯಲ್ಲಿ ಜನಿಸಿದೆ! ಕರ್ಮರಹಿತನಾದ ನಿನಗೆ ಆ ಕರ್ಮಸಂಬಂಧದಿಂದುಂಟಾಗತಕ್ಕ ರೂಪಭೇದಗಳೊಂದೂ ಇಲ್ಲದಿದ್ದರೂ,ನಿನ್ನ ಭಕ್ತರನ್ನುದ್ಧರಿಸುವುದಕ್ಕಾಗಿಯೇ, ಆಯಾ ಭಕ್ತರ ಇಷ್ಟಕ್ಕೆ ತಕ್ಕಂತೆ ನೀನೂ ಬೇರೆಬೇರೆ ರೂಪಗಳನ್ನು ಕೈಕೊಂಡು ಲೋಕದಲ್ಲಿ ಅವತರಿಸುವೆ ? ನೀನು ಸರ್ವವಿಧದಲ್ಲಿಯೂ ಸ್ವತಂತ್ರನಾಗಿದ್ದರೂ, ಭಕ್ತರ ಇಷ್ಟವನ್ನೇ ತನ್ನ ಇಷ್ಟವನಾಗಿ ತಿಳಿದು, ಈವಿಧವಾದ ರೂಪಾಂತರಗಳನ್ನು ಧರಿಸುವುದನ್ನು ನೋಡಿದರೆ, ಭಕ್ತರಲ್ಲಿ ನಿನಗಿರುವ ವಾತ್ಸಲ್ಯವು ಇಷ್ಟೆಂಬುದನ್ನು ಯಾರು ತಾನೇ ನಿರ್ಣಯಿಸಬಲ್ಲರು? ಲೋಕದಲ್ಲಿ ಪ್ರಕೃತಿಪುರುಷರ ನಿಜಸ್ವರೂಪವನ್ನು ತಿಳಿಯಬೇಕೆಂಬ

ಉದ್ದೇಶವುಳ್ಳ ಪಂಡಿತರೆಲ್ಲರೂ ನಿನ್ನ ಪಾದಗಳನ್ನು ಸೇವಿಸುವರು. ಹೀಗೆ ಮಹಾತ್ಮರಿಗೂ ಸೇವ್ಯನಾಗಿ, ಷಡ್ಗುಣೈಶ್ವರ್ಯಪರಿಪೂರ್ಣನಾಗಿರುವ ನಿನ್ನ ಪಾದಾರವಿಂದಗಳನ್ನು ನಾನು ಮರೆಹುಗುವೆನು. ಓ ದೇವಾ ! ನೀನು ಪ್ರಕೃತಿಪುರುಷರಿಗಿಂತಲೂ ವಿಲಕ್ಷಣನು ! ಆ ಪ್ರಕೃತಿಪುರುಷರಿಬ್ಬರನ್ನೂ ಶರೀರವಾಗಿ ಉಳ್ಳವನು! ನೀನೇ ಕಾಲಸ್ವರೂಪನು! ಕಾರ್ಯಾವಸ್ಥೆಯನ್ನು ಹೊಂದಿದ ಮಹತ್ತತ್ವವನ್ನೂ ಶರೀರವಾಗಿ ಹೊಂದಿದವನು! ಸರ್ವಜ್ಞನು' ಸತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳಿಗೂ ನೆಲೆಯಾದ ಜೀವಶರೀರಕನೂ ನೀನೇ ! ಚಿದಚಿದಾತ್ಮಕವಾದ ಸಮಸ್ತ ಪ್ರಪಂಚಕಕ್ಕೂ ನೀನೇ ರಕ್ಷಕನು ! ಕೊನೆಗೆ ನಿಜಸಂಕಲ್ಪಶಕ್ತಿಯಿಂದ ಸಮಸ್ತಲೋಕಗಳನ್ನೂ ತನ್ನಲ್ಲಿ ಅಡಗಿಸಿಕೊಳ್ಳತಕ್ಕವನೂ ನೀನೇ ! ಮತ್ತು ನೀನು ಸ್ವತಂತ್ರಶಕ್ತಿಯುಳ್ಳವನು! ಕಪಿಲರೂಪದಿಂದವತರಿಸಿರುವ ಭಗವಂತನಾದ ನಿನ್ನನ್ನು ಮರೆಹುಗುವೆನು. ಲೋಕನಾಥನಾದ ನಿನ್ನಲ್ಲಿ ನನ್ನದೊಂದು ಮುಖ್ಯಪ್ರಾರ್ಥನೆಯುಂಟು ! ನೀನು ನನಗೆ ಪುತ್ರನಾಗಿ ಹುಟ್ಟಿದುದರಿಂದ, ನಾನು ಪಿತೃಋಣವೇ ಮೊದಲಾದ ಮೂರು ಬಗೆಯ ಋಣಗಳನ್ನೂ ತೀರಿಸಿಕೊಂಡಂತಾಯಿತು ! ಹೀಗೆ ನಿನ್ನಿಂದ ಲೌಕಿಕಸುಖಗಳೆಲ್ಲವನ್ನೂ ಅನುಭವಿಸಿದ ನಾನು, ಇನ್ನುಮೇಲೆ ನಿನ್ನನ್ನೇ ಧ್ಯಾನಿಸುತ್ತ, ಸಂಸಾರತಾಪತ್ರಯೆಗಳಿಂದುಂಟಾಗಬಹುದಾದ ದುಃಖಗಳೊಂದೂ ಮೇಲೆ ಬಿಳದಂತೆ, ಕೊನೆಯ ಆಶ್ರಮವಾದ ಸನ್ಯಾಸವನ್ನು ಪರಿಗ್ರಹಿಸಿ, ವಿರಕ್ತನಾಗಿರಬೇಕೆಂದು ಕೋರುವೆನು. ನನಗೆ ಅನುಮತಿಯೆನ್ನು ಕೊಡಬೇಕು" ಎಂದನು. ಆಗ ಭಗವಂತನು ಕರ್ದಮನನ್ನು ನೋಡಿ "ಓ ಮುನೀಂದ್ರಾ ! ಲೋಕದಲ್ಲಿರುವವರೆಲ್ಲರಿಗೂ, ವೈದಿಕವಿಷಯಗಳಲ್ಲಿಯಾಗಲಿ, ಲೌಕಿಕವಿಷಯಗಳಲ್ಲಿಯಾಗಲಿ, ನಾನು ಹೇಳಿಹುದೇ ಪ್ರಮಾಣವು ! ನಾನು ಹೇಳಿದುದೆಲ್ಲನ್ನೂ ಸತ್ಯವಾಗಿಯೇ ಇರುವುವು. ಇದಕ್ಕೆ ಮೊದಲೇ ನಾನು ನಿನಗೆ ಪುತ್ರನಾಗಿ ಹುಟ್ಟುವೆನೆಂದು ಹೇಳಿದ್ದೆನಲ್ಲವೆ ? ಅದನ್ನು ಸತ್ಯವಾಗಿ ಮಾಡಬೇಕೆಂಬುದಕ್ಕಾಗಿಯೇ ಈ ರೂಪದಿಂದ ನಾನು ಹುಟ್ಟಿರುವೆನು. ಲೋಕದಲ್ಲಿ ಅನೇಕರು ದೇಹವನ್ನೇ ಆತ್ಮವೆಂದು ಭ್ರಮಿಸಿ ಮೋಸಹೋಗುವರು. ಅಂತವರಿಗೆ ಆ ಭ್ರ

ಮವನ್ನು ತಪ್ಪಿಸಿ, ಪ್ರಕೃತಿಗೂ, ಪುರುಷನಿಗೂ, ಪರಮಾತ್ಮನಿಗೂ ಇ
ರುವ ಪರಸ್ಪರಭೇದವನ್ನು ತಿಳಿಸಿ, ಅವುಗಳ ನಿಜವಾದ ಸ್ವರೂಪವ
ನ್ನು ತೋರಿಸಬೇಕೆಂಬುದಕ್ಕಾಗಿಯೇ ನಾನು ಈ ಜನ್ಮವನ್ನೆತ್ತಿರುವೆನು.
ಮೋಕ್ಷಾಭಿಲಾಷೆಯುಳ್ಳ ಸಾಧುಗಳಿಗೆ ಪರಮಾತ್ಮಸ್ವರೂಪವನ್ನು ತಿಳಿಸಿ,
ಅವರನ್ನುದ್ಧರಿಸಬೇಕೆಂಬುದೇ ನನ್ನ ಉದ್ದೇಶವು. ಇದೇ ನಾನು ಈ ಅವ
ತಾರವನ್ನೆತ್ತಿದುದಕ್ಕೆ ಪ್ರಯೋಜನವು. ಆತ್ಮತತ್ವವೆಂಬುದು ಬಹಳ ಸೂ
ಕ್ಷ್ಮವಾದುದು. ಜನರಿಗೆ ಸುಲಭವಾಗಿ ತಿಳಿಯತಕ್ಕುದಲ್ಲ ! ಈ ತತ್ವವನ್ನು
ನಾನು ಹಿಂದೆಯೇ ತಿಳಿಸಿದ್ದರೂ, ಬಹುಕಾಲವು ಕಳೆದುಹೋದುದರಿಂದ,
ಆ ಜ್ಞಾನಮಾರ್ಗವು ಲೋಕದಲ್ಲಿ ನಷ್ಟವಾಗುತ್ತ ಬಂದಿರುವುದು. ತಿರುಗಿ
ಅದನ್ನು ದೃಢವಾಗಿ ನೆಲೆಗೊಳಿಸಬೇಕೆಂಬುದಕ್ಕಾಗಿ ನಾನು ಈ ದೇಹವನ್ನೆ
ತ್ತಿರುವೆನೆಂದು ತಿಳಿ ! ಇನ್ನು ನೀನು ನಿನ್ನ ಇಷ್ಟಾನುಸಾರವಾಗಿ ಹೊರಡಬ
ಹುದು. ನಾನು ಅನುಜ್ಞೆಯನ್ನು ಕೊಟ್ಟಿರುವೆನು. ಇನ್ನುಮೇಲೆ ನೀನು
ನಡೆಸತಕ್ಕ ಒಂದೊಂದು ಕರ್ಮವನ್ನೂ ನನ್ನಲ್ಲಿಯೇ ಅರ್ಪಿತವಾಗಿ ಮಾಡಿ,
ಸಾಮಾನ್ಯಜನರಿಗೆ ಜಯಿಸಲಸಾಧ್ಯವಾದ ಮೃತ್ಯುವನ್ನು ಜಯಿಸಿ, ಮೋಕ್ಷ
ವೊಂದರಲ್ಲಿಯೇ ಮನಸ್ಸಿಟ್ಟು, ನನ್ನನ್ನು ಭಜಿಸುತ್ತಿರು! ಹೀಗೆ ಮಾಡುವುದ
ರಿಂದ,ನೀನು ಈ ನನ್ನ ರೂಪವನ್ನು ನಿನ್ನ ಮನಸ್ಸಿನಲ್ಲಿಯೇ ನೋಡಬಹುದು.
ಮೋಕ್ಷಕ್ಕೆ ವಿರೋಧಿಗಳಾದ ನಿನ್ನ ಪ್ರಾಚೀನಕರ್ಮಗಳೆಲ್ಲವೂ ನಶಿ
ಸುವುವು. ಅದರಮೇಲೆ ನೀನು ಸಮಸ್ತಜೀವಾಂತರ್ಯಾಮಿಯಾಗಿಯೂ
ಸ್ವಯಂಪ್ರಕಾಶವುಳ್ಳವನಾಗಿಯೂ, ಸಮಸ್ತಭೂತಗಳ ಹೃದಯದಲ್ಲಿಯೂ
ಅಡಗಿರತಕ್ಕವನಾಗಿಯೂ, ಯಾವವಿಧದಲ್ಲಿಯೂ, ಯಾವ ಭಯಕ್ಕೂ ಈ
ಡಾಗದವನಾಗಿಯೂ, ಇರುವ ನನ್ನನ್ನು ಸೇರಬಹುದು. ಇನ್ನುಮೇಲೆ ನಾನು
ನನ್ನ ತಾಯಿಯಾದ ಈ ದೇವಹೂತಿಗೂ, ಎಲ್ಲಾ ಬಗೆಯ ಕರ್ಮಬಂಧಗಳ
ನ್ನೂ ಬಿಡಿಸತಕ್ಕ ಬ್ರಹ್ಮವಿದ್ಯೆಯನ್ನು ಉಪದೇಶಿಸುವೆನು. ಆ ಉಪದೇಶದಿಂದ
ಆಕೆಯೂಕೂಡ ನಿನ್ನಂತೆಯೇ ಮೃತ್ಯುವನ್ನು ದಾಟಿ ಮೋಕ್ಷವನ್ನು ಸೇರು
ವಳು" ಎಂದನು. ಇದನ್ನು ಕೇಳಿ ಕರ್ದಮನು, ಪರಮಾನಂದಭರಿತನಾಗಿ,
ಆ ಕಪಿಲಾಚಾರ್ಯನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಆಗಲೇ ವ

ನ ಪ್ರಯಾಣಕ್ಕಾಗಿ ಹೊರಟನು. ಆಹಾ! ಏನಾಶ್ಚರ್ಯವು! ಆ ಕ್ಷಣವೇ ಕರ್ದಮನು ಅನೇಕಭೋಗಸಾಮಗ್ರಿಗಳಿಂದ ತುಂಬಿದ ತನ್ನ ಗೃಹವನ್ನೂ ಬಿಟ್ಟನು? ಬೇರೆ ಯಾರೊಡನೆಯೂ ಮಾತಾಡದೆ ಮೌನವ್ರತವನ್ನು ಹಿಡಿದು ಪರಮಾತ್ಮನೊಬ್ಬನಲ್ಲಿಯೇ ಮನಸ್ಸಿಟ್ಟನು! ಮನಸ್ಸನ್ನು ಎಳೆಯತಕ್ಕ ಶಬ್ದಾದಿವಿಷಯಗಳಲ್ಲಿ ಪೂರ್ಣವಾದ ಜಿಹಾಸೆಯೆನ್ನು ಹೊಂದಿದನು ಸಂಸಾರಿಗಳ ಸಹವಾಸವನ್ನೇ ಬಿಟ್ಟನು! ಅದುವರೆಗೆ ತಾನು ಕಾಪಾಡುತಿದ್ದ ಗೃಹಸ್ಥರಿಗೆ ಯೋಗ್ಯವಾದ ಹೋಮಾಗ್ನಿಯನ್ನೂ ತ್ಯಜಿಸಿದನು. ಹೀಗೆ ಸಮಸ್ತವನ್ನೂ ತೊರೆದು, ನಿಲ್ಲುವುದಕ್ಕೆ ನೆಲೆಯೆನ್ನೂ ಅಪೇಕ್ಷಿಸದೆ, ಭೂಪ್ರದಕ್ಷಿಣವನ್ನು ಮಾಡುತಿದ್ದನು. ಚೇತನಾಚೇತನಗಳಿಗಿಂತಲೂ ವಿಲಕ್ಷಣವಾಗಿ, ಮಂಗಳಗುಣಗಳಿಗೆ ನೆಲೆಯಾಗಿ, ಹೇಯಗುಣಸಂಬಂಧವೇ ಇಲ್ಲದ ಪರಬ್ರಹ್ಮಸ್ವರೂಪವೊಂದರಲ್ಲಿಯೇ ಮನಸ್ಸನ್ನು ನಿಲ್ಲಿಸಿಬಿಟ್ಟನು. ಮತ್ತು ತನ್ನ ದೇಹದಲ್ಲಿಯೂ, ತನ್ನ ಹೆಂಡಿರುಮಕ್ಕಳೆಂಬ ಪರಿವಾರಗಳಲ್ಲಿಯೂ ಮಮತೆಯನ್ನು ತೊರೆದು, ಚಳಿ, ಗಾಳಿ, ಸೆಕೆಯೆಂಬ ದೇಹಧರ್ಮಗಳಿಗೂ ಹೆದರದೆ, ಸಮಸ್ತವಸ್ತುಗಳಲ್ಲಿಯೂ ಆತ್ಮಬುದ್ಧಿಯಿಂದ ಸಮವಾಗಿ ವರ್ತಿಸುತಿದ್ದನು. ಮತ್ತು ಪ್ರಕೃತಿಗಿಂತಲೂ ವಿಲಕ್ಷಣನಾದ ಪರಮಾತ್ಮಸ್ವರೂಪವನ್ನು ಚೆನ್ನಾಗಿ ತಿಳಿದು, ಬ್ರಹ್ಮಸ್ವರೂಪವಾದ ಜೀವಾತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ, ಆ ಆತ್ಮಾನುಭವಸುಖದಿಂದ ಹಸಿವು, ಬಾಯಾರಿಕೆ, ದುಃಖ, ಮೋಹ. ಮುಪ್ಪು, ಸಾವು, ಎಂಬ ವಿಕಾರಗಳೊಂದಕ್ಕೂ ಈಡಾಗದೆ, ಅಲೆಯಿಲ್ಲದ ಸಮುದ್ರದಂತೆ ಶಾಂತನಾಗಿದ್ದನು. ಸರ್ವಜ್ಞನಾಗಿಯೂ, ಸಮಸ್ತಜೀವಗಳಲ್ಲಿಯೂ ಪ್ರವೇಶಿಸಿ ಅವುಗಳನ್ನು ಧರಿಸತಕ್ಕವನಾಗಿಯೂ, ಅವುಗಳಿಗೆ ನಿಯಾಮಕನಾಗಿಯೂ ಇರುವ ಭಗವಂತನಲ್ಲಿ ದೃಢವಾದ ಭಕ್ತಿಯೋಗವನ್ನು ಹಿಡಿದನು. ಸಮಸ್ತಭೂತಗಳೂ ಆ ಪರಮೇಶ್ವರುಷನಲ್ಲಿಯೇ ಅಡಗಿರುವುವೆಂಬುದನ್ನೂ ಕಂಡುಕೊಂಡನು. ಪ್ರಕೃತಿಸಂಬಂಧದಿಂದುಂಟಾಗುವ ರಾಗದ್ವೇಷಾದಿಗಳೆಲ್ಲವನ್ನೂ ತೊರೆದನು. ದೇವಮನುಷ್ಯಾದಿಶರೀರಭೇದಗಳೆಲ್ಲವೂ, ಅವರವರ ಕರ್ಮಾನುಸಾರವಾಗಿಯೇ ಉಂಟಾಗುವುವೆಂಬುದನ್ನೂ, ಪ್ರಕೃತಿಯು ಒಂದೇ ಆಗಿದ್ದರೂ, ಸತ್ವಾದಿಗುಣ

ಭೇದದಿಂದ ಚಿತ್ರವಿಚಿತ್ರವಾಗಿ ಕಾಣುವುವೆಂದೂ, ಶರೀರಗಳಲ್ಲಿ ಅಡಗಿರುವ ಜೀವಾತ್ಮಗಳು ಬೇರೆಬೇರೆಯಾಗಿ ತೋರಿದರೂ, ಅವೆಲ್ಲವೂ ಜ್ಞಾನ ಸ್ವರೂಪವುಳ್ಳವುಗಳಾದುದರಿಂದ ಒಂದೇ ಲಕ್ಷಣವುಳ್ಳವುಗಳೆಂದೂ, ಇವೆಲ್ಲಕ್ಕೂ ಅಂತರಾತ್ಮನಾದ ಸರ್ವೇಶ್ವರನೇ ಎಲ್ಲವುಗಳಲ್ಲಿಯೂ ಸರ್ವಸಮನಾಗಿ ವರ್ತಿಸುವನೆಂದೂ ತಿಳಿದುಕೊಂಡನು. ಹೀಗೆ ಕರ್ದಮನು, ಸಮಸ್ತಭೂತಗಳಲ್ಲಿಯೂ ಸಮದೃಷ್ಟಿಯುಳ್ಳವನಾಗಿ, ಭಗವಂತನಲ್ಲಿ ಭಕ್ತಿಯನ್ನು ಹಿಡಿದು, ಕೊನೆಗೆ ಮೋಕ್ಷವನ್ನೂ ಹೊಂದಿದನು. ಇಲ್ಲಿಗೆ ಇಪ್ಪತ್ತು ನಾಲ್ಕನೆಯ ಅಧ್ಯಾಯವು.

ಕಪಿಲನಿಗೂ ದೇವಹೂತಿಗೂ ನಡೆದ ಸಂವಾದಗಳು.

ವಿದುರಮೈತ್ರೇಯರಿಗೆ ನಡೆದ ಈ ಸಂವಾದವನ್ನು, ಶುಕಮುನಿಯು ಪರೀಕ್ಷಿದ್ರಾಜನಿಗೆ ತಿಳಿಸಿದುದಾಗಿ, ಸೂತಪೌರಾಣಿಕನು ಶೌನಕಾದಿ ಮಹರ್ಷಿಗಳಿಗೆ ಹೇಳುತ್ತಿರುವಲ್ಲಿ, ನಡುವೆ ಶೌನಕನು ಸೂತನನ್ನು ಪ್ರಶ್ನೆ ಮಾಡುವನು. ''ಓ ಮಹಾತ್ಮಾ ! ಸೂತಾ ! ಕರ್ಮಸಂಬಂಧವಾದ ಉತ್ಪತ್ತಿವಿನಾಶಗಳಿಲ್ಲದವನಾದ ಸರ್ವೇಶ್ವರನು, ಮನುಷ್ಯರಿಗೆ ಜೀವಾತ್ಮಪರಮಾತ್ಮರ ನಿಜಸ್ವರೂಪವನ್ನು ವಿವರಿಸುವುದಕ್ಕಾಗಿ ಈ ಕಪಿಲಾವತಾರವನ್ನೆತ್ತಿದನಲ್ಲವೆ ! ಈ ಕಪಿಲಾಚಾರ್ಯನ ಮಹಾಮಹಿಮೆಯನ್ನು ಕೇಳುತಿರ್ದ್ದಹಾಗೆಲ್ಲಾ, ಸಂತೋಷದಿಂದಲೂ, ಆಶ್ಚರ್ಯದಿಂದಲೂ ನನ್ನ ಸರ್ವೇಂದ್ರಿಯಗಳೂ ಉತ್ಸಾಹಗೊಳ್ಳುತ್ತಿರುವುವು. ಅವನ ಚರಿತ್ರೆಗಳನ್ನು ಎಷ್ಟೆಷ್ಟು ಕೇಳಿದರೂ ಮನಸ್ಸಿಗೆ ತೃಪ್ತಿಯುಂಟಾಗದಿರುವುದು. ಆದುದರಿಂದ ಭಗವಂತನು ಈ ಕಪಿಲಾವತಾರದಲ್ಲಿ ನಡೆಸಿದ ಚರಿತ್ರೆಗಳೆಲ್ಲವನ್ನೂ ವಿವರವಾಗಿ ತಿಳಿಸಬೇಕು" ಎಂದನು. ಆದಕ್ಕಾ ಸೂತನು, '' ಶೌನಕಾದಿಗಳೇ ಕೇಳಿರಿ ! ಹಿಂದೆ ವಿದುರನೂ ಮೈತ್ರೇಯನನ್ನು ಕುರಿತು ಇದೇ ಪ್ರಶ್ನೆಯನ್ನು ಕೇಳಿದುದಕ್ಕೆ, ಮೈತ್ರೇಯಮಹಾಮುನಿಯು ಹೇಳಿದ ಉತ್ತರವನ್ನೇ ಹೇಳುವೆನು. ವಿದುರನು ಈ ಪ್ರಶ್ನೆಯನ್ನು ಮಾಡಿದಮೇಲೆ ಮೈತ್ರೇಯನು ಅವನನ್ನು ಕುರಿತು, ''ವಿದುರಾ ! ಕೇಳು ! ಕರ್ದಮನು ಅರಣ್ಯ

ಕ್ಕೆ ಹೋಗಮೇಲೆ, ಇತ್ತಲಾಗಿ ಕಪಿಲಮುನಿಯು, ತನ್ನ ತಾಯಿಯಾದ ದೇವಹೂತಿಯ ಕೋರಿಕೆಯನ್ನು ಕೈಗೂಡಿಸಬೇಕೆಂಬುದಕ್ಕಾಗಿ, ಆ ಬಿಂದು ಸರೋವರದ ತೀರದಲ್ಲಿ ಆಕೆಯಸಂಗಡಲೇ ಇರುತಿದ್ದನು. ತತ್ವಜ್ಞಾನಾಗಿಯೂ, ಕರ್ಮಸಂಬಂಧವನ್ನು ನೀಗಿದವನಾಗಿಯೂ ಇದ್ದ ಕಪಿಲಾಚಾರ್ಯನು, ಒಮ್ಮೆ ಸುಖಾಸೀನನಾಗಿ ಕುಳಿತಿದ್ದಾಗ, ದೇವಹೂತಿಯು ತನಗೆ ಹಿಂದೆ ಬ್ರಹ್ಮದೇವನು ಹೇಳಿದ್ದ ಮಾತನ್ನು ನೆನೆಸಿಕೊಂಡು, ಸಾಕ್ಷಾತ್ಪರಮ ಪುರುಷನೇ ತನಗೆ ಜ್ಞಾನೋಪದೇಶವನ್ನು ಮಾಡುವುದಕ್ಕಾಗಿ ತನ್ನ ಗರ್ಭದಲ್ಲಿ ಕಪಿಲರೂಪದಿಂದ ಹುಟ್ಟಿರುವನೆಂಬುದನ್ನೂ ತಿಳಿದು, ತನ್ನ ಪುತ್ರನ ಬಳಿಗೆ ಬಂದು ಹೀಗೆಂದು ಪ್ರಾರ್ಥಿಸುವಳು. ''ಓ ಮಹಾತ್ಮಾ! ನಾನು ಇದುವರೆಗೂ ಇಂದ್ರಿಯಸುಖದಲ್ಲಿಯೇ ಕಾಲವನ್ನು ಕಳೆದುಬಿಟ್ಟೆನು. ಇದಕ್ಕಾಗಿ ಈಗ ಪಶ್ಚಾತ್ತಾಪಪಟ್ಟು ಕೊರಗುತ್ತಿರುವೆನು. ಹೀಗೆ ನಾನು ಇಂದ್ರಿಯತೃಪ್ತಿಯಲ್ಲಿಯೇ ಕಾಲವನ್ನು ವ್ಯರ್ಥವಾಗಿ ಕಳೆದುಬಿಟ್ಟುದರಿಂದ, ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿಹೋಗಿರುವೆನು. ಕೊನೆಮೊದಲಿಲ್ಲದ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿರುವ ನನ್ನನ್ನು ಉದ್ಧರಿಸಬೇಕಾದ ಭಾರವು ನಿನ್ನದು. ಇದುವರೆಗೆ ಎಷ್ಟೋ ಜನ್ಮಾಂತರಗಳನ್ನು ಕಳೆದಮೇಲೆ, ನಿನ್ನ ಅನುಗ್ರಹದಿಂದ ನನಗೆ ಈ ವಿವೇಕವೆಂಬ ಕಣ್ಣು ಲಭಿಸಿರುವುದು. ಮನುಷ್ಯರಿಗೆ ಇಂದ್ರಿಯತೃಪ್ತಿಯೇ ಪುರುಷಾರ್ಥವೆಂದು ತಿಳಿದು ಮೋಸಹೋಗಿದ್ದ ನನಗೆ, ಈಗ ಆ ವಿಷಯದಲ್ಲಿ ಪಶ್ಚಾತ್ತಾಪವು ಹುಟ್ಟಿದುದಕ್ಕೂ ನಿನ್ನ ಅನುಗ್ರಹವೇಹೊರತು ಬೇರೆ ಕಾರಣವಿಲ್ಲ. ಓ ಪ್ರಭೂ ! ನೀನು ನನಗೆ ಪುತ್ರನಲ್ಲ! ಸರ್ವಜಗತ್ಕಾರಣನಾಗಿ, ಸರ್ವನಿಯಾಮಕನಾಗಿ, ಷಡ್ಗುಣಪರಿಪೂರ್ಣನಾದ ಭಗವಂತನೇ ನೀನು ! ಅಜ್ಞಾನವೆಂಬ ಕತ್ತಲೆಯಲ್ಲಿ ಕಣ್ಣು ಕಾಣದೆ ತಡವರಿಸುತ್ತಿರುವ ಲೋಕಕ್ಕೆ ಕ್ಷೇಮವನ್ನು ಕೋರಿ, ಪ್ರಪಂಚಕ್ಕೆ ಬೆಳಕನ್ನು ಕೊಡುವ ಸೂರ್ಯನಂತೆ,ನೀನು ಈಗ ನನ್ನ ಗರ್ಭದಲ್ಲಿ ಉದಿಸಿರುವೆ. ಹೇ ಜಗದೀಶಾ'ಲೋಕದಲ್ಲಿ ಜನರಿಗೆ ಅಹಂಕಾರಮಮಕಾರಗಳೆಲ್ಲವೂ ನಿನ್ನಿಂದಲೇ ಏರ್ಪಟ್ಟಿರುವುವು ! ಅದನ್ನು ನೀಗಿಸುವುದಕ್ಕೂ ನೀನಲ್ಲದೆ ಬೇರೆ ಯಲ್ಲ! ಮತ್ತು ನೀನು,ನಿನ್ನಲ್ಲಿ ಭಕ್ತಿಯೋಗವ

ನ್ನು ಹಿಡಿದವರಿಗೆ, ಸಂಸಾರದ ಕಟ್ಟನ್ನು ಕತ್ತರಿಸುವುದರಲ್ಲಿ ದೀಕ್ಷೆಯೆನ್ನು ವ ಹಿಸಿದವನು. ಸರ್ವರಕ್ಷಕನು. ಸರ್ವಸಮರ್ಥನು! ಉತ್ತಮಧರ್ಮವೆನಿಸಿಕೊಂ ಡ ನಿವೃತ್ತಿಮಾರ್ಗವನ್ನು ಹಿಡಿದ ಯೋಗೀಶ್ವರರಿಗೂ ನೀನೇ ಪ್ರಧಾನಗು ರುವೆನಿಸಿಕೊಂಡವನು. ಆದುದರಿಂದ ನಿನ್ನ ಪಾದಗಳನ್ನು ಮರೆಹೊಕ್ಕಿರುವೆ ನು.ತತ್ವಜ್ಞಾನಾದ ನೀನು, ಪ್ರಕೃತಿಯೆಂದೂ, ಪುರುಷನೆಂದೂ ಈಶ್ವರನೆಂ ದೂ ಕರೆಯಲ್ಪಡುವ ಮೂರುತತ್ವಗಳ ನಿಜಸ್ಥಿತಿಯನ್ನು ನನಗೆ ತಿಳಿಸಿ ರಕ್ಷಿಸ ಬೇಕು" ಎಂದಳು. ವಿದುರಾ! ಇದನ್ನು ಕೇಳಿ ಕಪಿಲಮುನಿಯು,ಪ್ರಾಣಿಗಳಿಗೆ ಮೋಕ್ಷದಲ್ಲಿ ರುಚಿಯೆನ್ನು ಹೆಚ್ಚಿಸತಕ್ಕುದಾಗಿಯೂ, ನಿರ್ದುಷ್ಟವಾಗಿಯೂ ಇರುವ ದೇವಹೂತಿಯ ಮಾತಿಗಾಗಿ ಬಹಳಸಂತೋಷಗೊಂಡು, ಮಂದ ಹಾಸಪೂರ್ವಕವಾಗಿ ಆಕೆಯನ್ನು ಕುರಿತು ಹೀಗೆಂದು ಹೇಳುವನು. " ಅ ಮ್ಮಾ!ಕೇಳು!ಪ್ರಕೃತಿಗಿಂತಲೂ ಬೇರೆಯಾದ ಆತ್ಮಸ್ವರೂಪವನ್ನು ಚೆನ್ನಾ ಗಿ ತಿಳಿಯತಕ್ಕ ಈ ಜ್ಞಾನಯೋಗವೆಂಬುದೇ ಮೋಕ್ಷಾಪೇಕ್ಷೆಯುಳ್ಳವರಿಗೆ ಮುಕ್ತಿಯನ್ನು ತರುವುದೆಂಬುದು ನನ್ನ ಮತವು ! ಈ ಜ್ಞಾನಯೋಗ ವು ಕೈಗೂಡಿದಪಕ್ಷದಲ್ಲಿ, ಶಬ್ದಾದಿವಿಷಯಗಳಿಂದುಂಟಾಗುವ ಸುಖದುಃಖಗ ಳೆಲ್ಲವೂ ನಿಶ್ಶೇಷವಾಗಿ ತೊಲಗಿಹೋಗುವುವು. ಆತ್ಮಯೋಗವನ್ನು ಕೇಳಬೇ ಕೆಂದು ಪ್ರಾರ್ಥಿಸಿದ ಋಷಿಗಳಿಗೆ,ನಾನು ಮೊದಲೇ ಅದನ್ನು ತಿಳಿಸಿರುವೆನು. ಈ ಆತ್ಮಯೋಗಕ್ಕೆ ಶಮೆ,ದಮೆ,ವೊದಲಾದ ಹಲವು ಅಂಗಗಳುಂಟು. ಅವೆ ಲ್ಲವನ್ನೂ ಸಂಪೂರ್ಣವಾಗಿ ಅನುಷ್ಠಿಸಿದಾಗಲೇ, ಈ ಯೋಗಬಲವು ಸಾಧಿ ಸಲ್ಪಡುವುದು. ಆ ಆತ್ಮಯೋಗವನ್ನೇ ನಿನಗೆ ಹೇಳುವೆನು ಕೇಳು! ಅಮ್ಮಾ! ಈ ಜೀವಾತ್ಮನಿಗೆ ಉಂಟಾಗತಕ್ಕ ಸಂಸಾರಬಂಧಕ್ಕಾಗಲಿ, ಅದರಿಂದ ಬಿಡು ಗಡೆಯೆನಿಸಿದ ಮೋಕ್ಷಕ್ಕಾಗಲಿ, ಮನಸ್ಸೇ ಕಾರಣವೆಂಬುದು ಸರ್ವ ಸಮ್ಮತವಾದ ವಿಷಯವು. ಮನಸ್ಸು ಶಬ್ದಾದಿವಿಷಯಗಳಲ್ಲಿ ಪ್ರವರ್ತಿಸಿದರೆ ಅದು ಸಂಸಾರದಲ್ಲಿ ಕಟ್ಟುಹಾಕುವುದು.ಅದೇ ಮನಸ್ಸು ಪರಮಪುರುಷನಲ್ಲಿ ಪ್ರವರ್ತಿಸಿದಪಕ್ಷದಲ್ಲಿ ಮೋಕ್ಷವನ್ನು ಕೊಡುವುದು. ಆ ಮನಸ್ಸೆಂಬುದರ ಶುದ್ಧಸ್ವರೂಪವನ್ನು ತಿಳಿಸುವೆನು ಕೇಳ ಆತ್ಮನು, ತನ್ನ ನಿಜರೂಪ ವನ್ನು ತಿಳಿಯದೆ, ಆತ್ಮವಲ್ಲದ ಮೇಲಿನ ಶರೀ ನೋಡಿ, ಅದನ್ನೇ

ಆತ್ಮವೆಂದು (ತಾನೆಂದು) ಭಾವಿಸುವುದೇ ಅಹಂಕಾರವೆನಿಸುವುದು. ತನಗೆ ಸಂಬಂಧವಿಲ್ಲದ ವಸ್ತುವಿನಲ್ಲಿ ತನ್ನ ದೆಂಬ ಅಭಿಮಾನವೇ ಮಮಕಾರವೆನಿಸುವುದು. ಹೀಗೆ ತಾನು, ತನ್ನದು, ಎಂಬೀ ಅಭಿಮಾನಗಳೆರಡೂ ಅಹಂಕಾರ ಮಮಕಾರಗಳಾಗಿರುವುವು. ಈ ಅಹಂಕಾರಮಮಕಾರಗಳಿರುವವರೆಗೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳೂ ಹೆಚ್ಚುತ್ತ ಬರುವುವು. ಅವುಗಳಿಂದ ಪುಣ್ಯಪಾಪರೂಪಗಳಾದ ಕರ್ಮಲಗಳೂ ಅಂಟಿಬರುವುವು. ಮನಸ್ಸಿಗೆ ಇವೊಂದನ್ನೂ ಅಂಟಿಸಿಕೊಳ್ಳದಿದ್ದಾಗಲೇ, ಆ ಮನಸ್ಸು ಶುದ್ಧವೆನಿಸುವುದು. ಅದನ್ನು ಸುಖದುಃಖಗಳೆಂದೂ ಕದಲಿಸಲಾರದು. ಯಾವಾಗಲೂ ಒಂದೇವಿಧದಲ್ಲಿ ಶಾಂತವಾಗಿರುವ ಇಂತಹ ಶುದ್ಧ ಮನಸ್ಸುಳ್ಳ ಪುರುಷನು, ಜ್ಞಾನ, ವೈರಾಗ್ಯ, ಭಕ್ತಿಯೆಂಬಿವು ಮೂರನ್ನೂ ಬಲಪಡಿಸಿಕೊಂಡು, ಪ್ರಕೃತಿಯ ಕಾರ್ಯರೂಪಗಳಾದ ಶರೀರ, ಇಂದ್ರಿಯ, ಮನಸ್ಸು, ಪ್ರಾಣ, ಮೊದಲಾದುವುಗಳಿಗಿಂತಲೂ ಸ್ವರೂಪದಲ್ಲಿಯೂ, ಸ್ವಭಾವದಲ್ಲಿಯೂ ವಿಲಕ್ಷಣವಾದ ಆತ್ಮಸ್ವರೂಪವನ್ನು ತಿಳಿಯಬಲ್ಲನು. ಆ ಆತ್ಮನಿಗೆ ಸತ್ವಾದಿಗುಣಗಳೆ ಸಂಬಂಧವೇನೂ ಇರುವುದಿಲ್ಲ. ದೇವತೆಯೆಂದೂ, ಮನುಷ್ಯನೆಂದೂ ಕರೆಯಲ್ಪಡುವ ಆಕಾರಭೇದಗಳೆಲ್ಲವೂ, ಪ್ರಕೃತಿವಿಕಾರವೆನಿಸಿಕೊಳ್ಳುವ ಶರೀರಕ್ಕೆ ಸೇರಿದುದೇಹೊರತು ಆತ್ಮನಿಗೆ ಆ ಬೇಧವಿಲ್ಲ. ಬೇರೆಬೇರೆ ಶರೀರಗಳಲ್ಲಿ ಜೀವಾತ್ಮನು ಪ್ರತ್ಯೇಕವಾಗಿ ಸೇರಿದ್ದರೂ, ಜ್ಞಾನವೆಂಬ ಆಕಾರವು ಸರ್ವ ಜೀವಸಾಧಾರಣವಾದುದರಿಂದ, ಜೀವಾತ್ಮಗಳಲ್ಲಿ ಪರಸ್ಪರವ್ಯತ್ಯಾಸವಿಲ್ಲ. ಮತ್ತು ಜೀವಾತ್ಮನು ಬಹಳಸೂಕ್ಷ್ಮವಾದ ಅಣುವಾದುದರಿಂದ, ಅದನ್ನು ಆಯುಧಗಳಿಂದ ಕಡಿಯುವುದಕ್ಕಾಗಲಿ, ಅಗ್ನಿಯಿಂದ ದಹಿಸುವುದಕ್ಕಾಗಲಿ, ಬೇರೆ ವಿಕಾರಹೊಂದಿಸುವುದಕ್ಕಾಗಲಿ ಸಾಧ್ಯವಲ್ಲ. ಆ ಆತ್ಮಕ್ಕೆ ಎಂದಿಗೂ ನಾಶವಿಲ್ಲ. ಮತ್ತು ದೀಪವು ತೇಜಸ್ಸ್ವರೂಪವಾಗಿ, ತೇಜೋಗುಣವುಳ್ಳುದಾಗಿ, ತನಗೆ ತಾನೇ ಪ್ರಕಾಶಿಸುವಂತೆ, ಆತ್ಮವೂ ಜ್ಞಾನಸ್ವರೂಪವಾಗಿ ಜ್ಞಾನಗುಣವುಳ್ಳುದಾಗಿ ಸ್ವಯಂಪ್ರಕಾಶವುಳ್ಳುದಾಗಿ, ನಿರ್ವ್ಯಾಪಾರವಾಗಿರುವುದೆಂಬೀ ವಿಷಯವೆಲ್ಲವೂ ಅಂತಹ ಶುದ್ಧಮನ

ಸ್ನಿಗೆ ಚೆನ್ನಾಗಿ ತಿಳಿಯುವುದು. ಜೀವಿಗಳಿಗೆ ಸಂಸಾರಬಂಧವನ್ನುಂಟು ಮಾಡತಕ್ಕ ಪ್ರಕೃತಿಯು, ¡ಅಂತಹ ಶುದ್ಧನಾದ ಜೀವಾತ್ಮನಲ್ಲಿ ತನ್ನ ಕೈಸಾಗದೆ ಸುಮ್ಮನಾಗುವುದೆಂದೂ ತಿಳಿಯಬಲ್ಲನು. ಅಮ್ಮಾ ! ಸಮಸ್ತ ಪ್ರಾಣಿಗಳಿಗೂ ಅಂತರಾತ್ಮನಾದ ಭಗವಂತನಲ್ಲಿ ದೃಢಭಕ್ತಿಯೇ ಮೋಕ್ಷಕ್ಕೆ ಸುಲಭಸಾಧನವೇಹೊರತು, ಆದರಂತೆ ಉತ್ತಮವಾದ ಬೇರೆ ಯಾವ ಉಪಾಯವೂ ಇಲ್ಲವೆಂದು ಯೋಗಿಗಳು ನಿರ್ಣಯಿಸಿರುವರು ಜೀವನು ಪ್ರಕೃತಿಗಿಂತಲೂ ವಿಲಕ್ಷಣನೆಂದು ತಿಳಿದಮಾತ್ರಕ್ಕೆ ಆತ್ಮಸ್ವರೂಪವು ಸ್ಪಷ್ಟವಾಯಿತೆಂದು ತಿಳಿಯಬೇಡ! ಜೀವಾತ್ಮನ ಸಹಜವಾದ ಸ್ವರೂಪವೂ ಪರಮಾತ್ಮನಿಗೆ ಶರೀರವಾಗಿರುವುದರಿಂದ, ಆ ಪರಮಾತ್ಮನ ಸ್ವರೂಪವನ್ನು ತಿಳಿಯಬೇಕಾದುದೂ ಅವಶ್ಯಕವು. ಆದುದರಿಂದ ಜೀವಾತ್ಮನ ಸ್ವರೂಪವು, ಅದಕ್ಕಾಶ್ರಯವಾದ ಪರಮಾತ್ಮನೊಡನಲ್ಲದೆ ಪ್ರತ್ಯೇಕವಾಗಿ ಲಭಿಸದು ಆ ಪರಮಾತ್ಮಸ್ವರೂಪವನ್ನು ತಿಳಿದುಕೊಂಡಾಗ ಮಾತ್ರವೇ ಪ್ರತ್ಯಗಾತ್ಮಸ್ವರೂಪವೂ ವ್ಯಕ್ತವಾಗುವುದು. ಅಂತಹ ಪರಮಾತ್ಮನನ್ನು ಸಾಕ್ಷಾತ್ಕರಿಸುವುದಕ್ಕೆ ಉಪಾಯವೇನೆಂದರೆ, ಆ ಭಗವಂತನಲ್ಲಿರುವ ದೃಢಭಕ್ತಿಯೇ ಮುಖ್ಯಸಾಧನವು. ಅಮ್ಮಾ ! ಅಂತಹ ಭಕ್ತಿಯು ಹುಟ್ಟುವುದಕ್ಕೂ, ಆ ಭಕ್ತಿಗೆ ಕಾರಣವಾದ ನಿವೃತ್ತಿಧರ್ಮದಲ್ಲಿ ಅಭಿರುಚಿ ಹುಟ್ಟುವುದಕ್ಕೂ, ಸತ್ಸಹವಾಸವೇ ಮುಖ್ಯಕಾರಣವೆಂದು ತಿಳಿ! ಜೀವಾತ್ಮನಿಗೆ ಮೋಪಾಸ್ಪದವಾದ ಇಂದ್ರಿಯವಿಷಯಗಳಲ್ಲಿ ಆಸಕ್ತಿಯಾಗಲಿ, ಆ ಆಸೆಯುಳ್ಳವರೊಡನೆ ಸಮವಾಸವಾಗಲಿ, ದೃಢವಾದ ಸಾಂಬಂಧವೇಹೊರತು ಬೇರೆಯೆಲ್ಲವೆಂದು ಪಂಡಿತರು ಹೇಳುವರು. ಈ ಆಸಕ್ತಿಯೇ ಸಾಧುಗಳ ಸಹವಾಸಬಲ್ಲಿರುವುದಾದರೆ, ಅದು, ತೆಡೆಯಿಲ್ಲದೆ ತೆರೆದಿಟ್ಟ ಮೋಕ್ಷದ್ವಾರವೆನಿಸುವುದು. ಅಂತಹ ಸಾಧುಗಳು ಯಾರೆಂದು ಕೇಳಿದೆಯಾ ? ಅವರ ಗುಣಸ್ವಭಾವಗಳನ್ನು ತಿಳಿಸುವೆನು ಕೇಳು. ಮೂರ್ಖಜನದಲ್ಲಿಯೊಕೂಡ ಭೂಮಿಯಂತೆ ತಾಳ್ಮೆಯಿಂದಿರುವುದು, ಇತರರ ಮುಖವನ್ನು ನೋಡಿದೊಡನೆ ಬಹಳ ಕನಿಕರಗೊಂಡು ಅವನೊಡನೆ ಸಮಾನವಾಗಿ ಮುಖಿಸುವುದು, ಸಮಸ್ತ ಪ್ರಾಣಿಗಳಲ್ಲಿಯೂ ಮಿತ್ರಭಾವದಿಂದ ವರ್ತಿಸುವುದು, ಬೇರೆ ಯಾರೊಡ

ನೆಯೂ ವಿರೋಧಿಸದಿರುವುದು, ಶಮದಮಾದಿಗುಣಗಳಿಂದ ಕೂಡಿರುವುದು, ಇತರರ ಪ್ರಯೋಜನಕ್ಕಾಗಿ ಶ್ರಮಪಡುವುದು, ಇಂದ್ರಿಯಗಳನ್ನು ಜಯಿಸಿಡುವುದು, ಸಜ್ಜರಿತ್ರವನ್ನೇ ಭೂಷಣವಾಗಿ ಹೊಂದಿರುವುದು, ಈ ಗುಣವುಳ್ಳವರೇ ಸಾಧುಗಳೆನಿಸುವರು. ಮತ್ತು ಯಾರು, ಈಶ್ವರನಾದ ನನ್ನಲ್ಲಿ ದೃಢಮನಸ್ಸನ್ನಿಟ್ಟು ಭಕ್ತಿಯಿಂದ ಸೇವಿಸುತ್ತ, ಆ ಭಕ್ತಿಗೆ ವಿರೋಧಿಗಳಾದ ಇತರಧರ್ಮಗಳೆಲ್ಲವನ್ನೂ ಬಿಟ್ಟು, ಜ್ಞಾತಿಗಳನ್ನೂ, ಬಂಧುಗಳನ್ನೂ ತೊರೆದು, ನನ್ನನ್ನೇ ಸಕಲವಿಧಬಂಧುವನ್ನಾಗಿ ಭಾವಿಸಿ, ನನ್ನ ಕಥಾಶ್ರವಣಕೀರ್ತನಗಳಿಂದಲೇ ಸಂತೋಷಿಸುತ್ತ, ನನ್ನನ್ನು ಸೇರುವುದೇ ಮೋಕ್ಷವೆಂದೂ, ನಾನೇ ಮೋಕ್ಷವನ್ನು ಕೊಡತಕ್ಕವನೆಂದೂ ನಂಬಿರುವರೋ, ಅಂತವರೇ ಸಾಧುಗಳು. ಹೀಗೆ ಸರ್ವಸಂಗಪರಿತ್ಯಾಗನಾಮಿ, ನನ್ನನ್ನೇ ನಂಬಿದವರ ಸಹವಾಸವನ್ನ ನೀನು ಮೊಡಲು ಬಯಸಬೇಕು ಅದರಿಂದ ಸಮಸ್ತ ದೋಷಗಳೂ ನೀಗುವುವು. ಅಂತಹ ಸಾಧುಗಳನ್ನು ಸಂಸಾರಸಂಬಂಧವಾದ ತಾಪಗಳೊಂದೂ ಪೀಡಿಸಲಾರವು. ಯಾವುದಕ್ಕೂ ಅವರು ಭಯಪಡಲಾರರು. ಎಲೆ ಸಾಧ್ವಿ! ನೀನು ಅಂತಹ ಸಾಧುಗಳ ಸಹವಾಸವನ್ನು ಮಾಡಿದರೆ,ನುನಿನ್ನಿಗೂ, ಕವಿಗಳಿಗೂ ಅಮೃತಪ್ರಾಯವಾಗಿ ನನ್ನ ವೀರಕಾರ್ಯಗಳೆಲ್ಲವೂ ಆಗಾಗ ನಿನ್ನ ಕಿವಿಗೆ ಬೀಳುತ್ತಿರುವುವು ಅವುಗಳನ್ನು ಕೇಳುವುದರಿಂದ ತೀಕ್ಷ್ಣುದಲ್ಲಿಯೇ ನಿನಗೆ ಶ್ರದ್ಧಾಭಕ್ತಿಯೂ ನನ್ನಲ್ಲಿ ಭಕ್ತಿಯೂ, ಮೋಕ್ಷದಲ್ಲಿ ಅಭಿರುಚಿಯೂ ಹುಟ್ಟುತ್ತಿರುವುದು. ಗೃಹ ವ್ಯಾಪಾರಗಳನ್ನು ಚಿಂತಿಸುವಂತೆ ಮಾಡುವ ಆ ಭಕ್ತಿಯು ಪುರುಷನಿಷ್ಠನು, ಮನುಷ್ಯನು, ಕಣ್ಣಿಗೆ ಕಾಣಬಹುದಾದ ಬ್ರಹ್ಮಾದಿಸ್ಥಾನಫಲಗಳಿಗಿಂತಲೂ ಹೆಚ್ಚಿನಯೂ, ಶ್ರುತಿಗಳಿಂದ ಕೇಳಿರುವ ಸ್ವರ್ಗಾದಿಪಾತಾಲಾಂತಫಲಗಳನ್ನೆಲ್ಲವನ್ನೂ ಮೀರಿಸಿಕೊಂಡಿ, ಫಲಾಪೇಕ್ಷೆಯಿಲ್ಲದ ಕರ್ಮಯೋಗ ಜ್ಞಾನಯೋಗಗಳನ್ನು ಹಿಡಿದು, ವಿವೇಕಾದಿಗಳಿಂದ ಮನಸ್ಸನ್ನು ಶೋಧಿಸು, ಆ ಭಕ್ತಿಯೊಂದಲ್ಲದೆಯೇ ನೆಲ್ಲೆಹೊಡೆಲಾಗುವುದಕ್ಕೆ ಯತ್ನಿಸುವನು. ನಿಷಿದ್ಧವಾದ ಅನ್ನಾದಿಗಳನ್ನು ಭುಜಿಸದೆ, ವೈರಾಗ್ಯಬಲದಿಂದ ಹೆಚ್ಚಿಸಿದ ಜ್ಞಾನಯೋಗದಿಂದಲೂ, ಫಲಾಪೇಕ್ಷೆಯಿಲ್ಲದ ಕರ್ಮಯೋಗದಿಂದಲೂ, ಭಕ್ತಿಯೋಗವನ್ನು ಸಂಪಾದಿಸಿದ ಮನುಷ್ಯನು,

ಜೀವಾತ್ಮಶರೀರಕನಾದ ನನ್ನ ಸ್ವರೂಪವನ್ನು ಚೆನ್ನಾಗಿ ತಿಳಿಯಬಲ್ಲನು" ಎಂದನು. ಆಗ ದೇವಹೂತಿಯು "ಮಹಾತ್ಮಾ! ಭಕ್ತಿಯೋಗವೆಂಬುದಾವುದು? ಅದರ ಸ್ವರೂಪವೇನು? ನಾನು ಯಾವ ವಿಧದಿಂದ ಆ ಭಕ್ತಿಯನ್ನವಲಂಬಿಸಬೇಕು? ಸಂಸಾರತಾಪದಲ್ಲಿ ಸಿಕ್ಕಿ ಬೇಯುತ್ತಿರುವವರು, ನಿರತಿಶಯಾನಂದರೂಪವಾದ ನಿನ್ನ ಪಾದಾರವಿಂದವನ್ನು ಯಾವ ಸುಲಭೋಪಾಯದಿಂದ ಪಡೆಯಬಹುದು? ಎಲ್ಲೆ ಆನಂದಸ್ವರೂಪನೆ! ಗುರಿಯಿಟ್ಟ ಬಾಣದಂತೆ ಭಗವಂತನಾದ ನಿನ್ನನ್ನೇ ಲಕ್ಷೀಕರಿಸತಕ್ಕ ಭಕ್ತಿಯೋಗವೆಂಬುದಾವುದು. ಅದಕ್ಕೆ ಅಂಗಗಳೆಷ್ಟು? ಪರಮಾತ್ಮತತ್ವವನ್ನು ತಿಳಿಯುವಂತೆ ಮಾಡುವ ಆ ಅಂಗಗಳೆಲ್ಲವನ್ನೂ ನನಗೆ ತಿಳಿಸಬೇಕು. ಹೇ ದೇವಾ! ನೀನು ಹೇಳಿದ ಭಕ್ತಿಯೋಗದ ಸ್ವರೂಪವು ಜ್ಞಾನಿಗಳಿಗೂ ತಿಳಿಯಲಸಾಧ್ಯವಾದುದು. ಕೇವಲ ಮೂಢಬುದ್ಧಿಯುಳ್ಳ ಹೆಣ್ಣುಹೆಂಗಸಾದ ನನಗೆ, ಅದರ ತತ್ವವು ಸುಲಭವಾಗಿ ಅವಗಾಹನೆಗೆ ಬರುವಂತೆ ಅನುಗ್ರಹಿಸಬೇಕು" ಎಂದಳು. ಇದನ್ನು ಕೇಳಿ ಕಪಿಲರೂಪಿಯಾದ ಭಗವಂತನು, ತನ್ನ ತಾಯಿಯ ದೈನ್ಯಕ್ಕಾಗಿ ಮರುಕಗೊಂಡು, ಅವಳಿಗೆ ತತ್ವಬೋಧಕವಾಗಿಯೂ, ಭಕ್ತಿಯನ್ನು ಹೆಚ್ಚಿಸತಕ್ಕ ಜ್ಞಾನಯೋಗವನ್ನು ವಿವರಿಸತಕ್ಕುದಾಗಿಯೂ ಇರುವ ಶಾಸ್ತ್ರವನ್ನು ಪದೇಶಿಸತೊಡಗಿದನು. "ಅಮ್ಮಾ! ಭಕ್ತಿಯೆಂಬುದು ಎಂತದೆಂದು ಕೇಳಿದೆಯೆಲ್ಲವೆ? ಅದರ ಸ್ವರೂಪವನ್ನು ಹೇಳುವೆನು ಕೇಳು. ಮನುಷ್ಯನಿಗೆ ಶಬ್ದಾದಿವಿಷಯಗಳನ್ನು ತಿಳಿಸುವುದಕ್ಕಾಗಿ, ಐದು ಜ್ಞಾನೇಂದ್ರಿಯಗಳೂ, ಶಾಸ್ತ್ರೋಕ್ತವಾದ ಕರ್ಮಗಳನ್ನು ನಡೆಸುವುದಕ್ಕಾಗಿ ಐದು ಕರ್ಮೇಂದ್ರಿಯಗಳೂ ಏರ್ಪಟ್ಟಿರುವುವು. ಈ ಜ್ಞಾನಕರ್ಮೇಂದ್ರಿಯಗಳೆಲ್ಲವನ್ನೂ ಯಾವ ಫಲಾಪೇಕ್ಷೆಯೂ ಇಲ್ಲದೆ, ಭಗವಂತನ ವಿಷಯದಲ್ಲಿಯೇ ಉಪಯೋಗಪಡಿಸಿ, ಏಕಾಗ್ರತೆಯಿಂದ ನಡೆಸುವ ಮನಸ್ಸಿನ ವ್ಯಾಪಾರವೇ ಭಕ್ತಿಯೆಂದು ಹೆಸರು. ಈ ಭಕ್ತಿಯೆಂಬುದು ಐಶ್ವರ್ಯ ಕೈವಲ್ಯಾದಿಪುರುಷಾರ್ಥಗಳಿಗಿಂತಲೂ ಬಹಳ ಮೇಲಾದುದು! ಹೊಟ್ಟೆಯೊಳಗಿನ ಜಾಠರಾಗ್ನಿಯು, ಆಹಾರ ಪದಾರ್ಥಗಳನ್ನು ಜೀರ್ಣಮಾಡುವಂತೆ, ಈ ಭಕ್ತಿಯೆಂಬುದು ಅನಾದಿಯಾಗಿ ಅನುಸರಿಸಿಬಂದ ಕರ್ಮವಾಸನೆ

ಯನ್ನು ನಾಶಮಾಡಿಬಿಡುವುದು. ನನ್ನ ಪಾದಸೇವೆಯೆಲ್ಲಿ ವಿಶೇಷಶ್ರದ್ಧೆ ಯುಳ್ಳವರಾಗಿ, ತಮ್ಮ ಸರ್ವೇಂದ್ರಿಯವ್ಯಾಪಾರಗಳನ್ನೂ ನನ್ನಲ್ಲಿಯೇ ನೆಲೆಗೊಳಿಸಿ, ಈ ಭಕ್ತಿಯನ್ನು ಸಾಧಿಸಿದ ಕೆಲವು ಮಹಾತ್ಮರು, ತಮ್ಮಲ್ಲಿ ಒಬ್ಬರಿಗೊಬ್ಬರು ಸೇರಿ ನನ್ನ ಸಚ್ಚರಿತ್ರೆಗಳನ್ನು ಸರ್ವಕಾಲದಲ್ಲಿಯೂ ಕೊಂಡಾಡುತ್ತಿರುವರು. ಆ ಆನಂದದಲ್ಲಿ ರುಚಿಹೊಂದಿದವರು, ನನ್ನ ಸಾರೂಪ್ಯರೂಪವಾದ ಮುಕ್ತಿಗೂ ಅಪೇಕ್ಷಿಸಲಾರರು! ಇದರಿಂದಲೇ ನೀನು ಭಕ್ತಿಯೆಂಬುದು ಎಷ್ಟು ಸರ್ವೋತ್ತಮವಾದುದೆಂಬುದನ್ನು ತಿಳಿಯ ಬಹುದು. ಮತ್ತೆ ಕೆಲವುಸತ್ಪುರುಷರು, ನಾನು ಬೇರೆಬೇರೆ ಅವತಾರಗ ಳನ್ನೆತ್ತಿ ಭೂಮಿಯಲ್ಲಿ ಅವತರಿಸಿದಾಗ, ಪ್ರಸನ್ನಮುಖದಿಂದಲೂ, ರಕ್ತಾಂತಲೋಚನದಿಂದಲೂ ಕೂಡಿದ ನನ್ನ ದಿವ್ಯಮಂಗಳವಿಗ್ರಹವ ನ್ನು ನೋಡಿ, ಅದನ್ನೇ ಧ್ಯಾನಿಸುತ್ತ, ಆಯಾ ರೂಪಗಳಲ್ಲಿ ನಾನು ನುಡಿದ ಮಾತುಗಳನ್ನೇ ಆಗಾಗ ಅನುವಾದಮಾಡುತ್ತ, ಅದರಿಂದ ಅಮಿತಾನಂದ ವನ್ನು ಹೊಂದುವರು. ಅಂತವರು ನನ್ನ ಅಂದವಾದ ಅವಯವಗಳು! ನನ್ನ ಲೀಲೆಗಳು! ನನ್ನ ಮುಗುಳ್ನಗೆ! ನನ್ನ ಪ್ರಸನ್ನದೃಷ್ಟಿ! ನನ್ನ ಅಮೃತ ಸಮಾನವಾದ ಮಧುರವಾಕ್ಯಗಳು! ಇವುಗಳಲ್ಲಿಯೇ ನಷ್ಟಮನಸ್ಸು ಳ್ಳವರಾಗುವರು. ಇಂತವರೆಲ್ಲರೂ ಈ ಆನಂದಾನುಭವದಿಂದ ಪರವಶವಾದ ಸರ್ವೇಂದ್ರಿಯವುಳ್ಳವರಾಗಿ, ಮೋಕ್ಷವನ್ನೇ ಅಪೇಕ್ಷಿಸದಿದ್ದರೂ, ನನ್ನಲ್ಲಿ ಅವರಿಗಿರತಕ್ಕ ಭಕ್ತಿಯೇ ಅವರನ್ನು ಮೋಕ್ಷಮಾರ್ಗವಾದ ಅರ್ಚಿರಾದಿಗತಿಗೆ ತಾನಾಗಿ ತಂದು ಸೇರಿಸುವುದು. ಎಲ್ಲರಿಗೂ ಸುಲಭವಲ್ಲದ ಈ ಅರ್ಚಿರಾದಿ ಮಾರ್ಗವನ್ನು ಸೇರಿದೊಡನೆ, ಅವರು ಆ ದಾರಿಯಿಂದ ಹೋಗುವಾಗ, ನನ್ನ ಮಾಯೆಯಿಂದ ಸೃಷ್ಟಿಸಲ್ಪಟ್ಟ ಬ್ರಹ್ಮಲೋಕದವರೆಗಿನ ಪುಣ್ಯ ಲೋಕಗಳನ್ನಾಗಲಿ, ಭಕ್ತಿಬಲದಿಂದ ಲಭಿಸಬಹುದಾದ ಅಣಿಮಾದ್ಯ ಷ್ಟೈಶ್ವರ್ಯಗಳನ್ನಾಗಲಿ, ಕಣ್ಣೆತ್ತಿಯೂ ನೋಡಲಾರರು. ಇಂತವರು ಮುಕ್ತಿಯನ್ನು ದ್ವೇಷಿಸಿ ಹೋಗುವಾಗ, ದಾರಿಯಲ್ಲಿ ಬ್ರಹ್ಮೇಂದ್ರಾದಿದೇವ ತೆಗಳು, ತಮ್ಮತಮ್ಮ ಲೋಕಾಧಿಪತ್ಯವನ್ನೇ ಕೊಡುವುದಾಗಿ ಪ್ರಾರ್ಥಿಸಿ ಕೇಳಿಕೊಂಡರೂ, ಅವರ ಮಾತನ್ನೂ ನಿರಾಕರಿಸಿ, ಅವರಿಗೆ ಸಮಾಧಾನವ

ನ್ನು ಹೇಳಿ ಮುಂದೆ ಸಾಗುವರು. ಜನನೀ ! ಭಗವದ್ಬ್ರಹ್ಮಾನುಭವವೆಂಬ ಮಹಾನಂದದಿಂದ ಮೋಕ್ಷವನ್ನೇ ಅಪೇಕ್ಷಿಸದಿರುವ ಇಂತಹ ಭಕ್ತೋತ್ತಮರು, ಬ್ರಹ್ಮಾದಿಲೋಕಗಳಲ್ಲಿಯಾಗಲಿ, ಅಣಿಮಾದ್ಯೈಶ್ವರ್ಯಗಳಲ್ಲಿಯಾಗಲಿ ಆಸೆಪಡದಿರುವರೆಂಬುದೇನಾಶ್ಚರ್ಯವು ? ಅವರು ಬೇರೊಂದರಲ್ಲಿಯೂ ದೃಷ್ಟಿಯಿಡದೆ ನನ್ನ ನಿವಾಸಸ್ಥಾನವಾದ ನಿತ್ಯವಿಭೂತಿಯನ್ನು ಸೇರುವರು. ಎಲೈ ಶಾಂತಾತ್ಮಳೆ ! ಅವರು ನನ್ನ ಲೋಕವನ್ನು ಸೇರಿ, ನನ್ನನ್ನು ಅನುಭವಿಸುವುದರಲ್ಲಿಯೇ ಅಕ್ಕರೆಯುಳ್ಳವರಾದಮೇಲೆ, ಅವರಿಗೆ ಆ ಅನುಭವವು ಎಂದಿಗೂ ತಪ್ಪಿ ಹೋಗಲಾರದು ! ನನ್ನ ಸ್ಥಾನವಾದ ನಿತ್ಯವಿಭೂತಿಗೆ ಎಂದಿಗೂ ಚ್ಯುತಿಯಿಲ್ಲ. ಇದನ್ನು ಬಿಟ್ಟು ಇತರಲೋಕಗಳೆಲ್ಲಕ್ಕೂ ನಾಶವುಂಟು ! ಅದಕ್ಕಾಗಿಯೇ ನನ್ನ ಸ್ಥಾನವು ನಿತ್ಯವಿಭೂತಿಯೆನಿಸುವುದು. ಇಲ್ಲಿನ ಆನಂದಕ್ಕೂ ಯಾವಾಗಲೂ ನ್ಯೂನತೆಯಿಲ್ಲ ! ನನ್ನ ಸ್ಥಾನವಾದ ಪರಮಪದದಲ್ಲಿ ಕಾಲಶಕ್ತಿಯೂ ನಡೆಯದುದರಿಂದ, ಇಲ್ಲಿ ಸೇರಿದವರನ್ನು ನನ್ನ ಸಂಕಲ್ಪರೂಪವಾದ ಕಾಲಚಕ್ರವೂ ಮುಟ್ಟಲಾರದು ! ಇದಕ್ಕೆ ಕಾರಣವೇನೆಂದು ಕೇಳುವೆಯಾ ! ನನ್ನಕಡೆಗೆ ಸೇರಿದವರು ನನಗೆ ಸರ್ವವಿಧದಲ್ಲಿಯೂ ಪ್ರೀತಿವಿಷಯರಾಗುವರು ! ಅಂತವರಿಗೆ ನಾನು ಮಗನಂತೆ ಪ್ರೀತಿಪಾತ್ರನು ! ಗೆಳೆಯನಂತೆ ನಂಬಿಕೆಗೆ ಪಾತ್ರನು. ಗುರುವಿನಂತೆ ಹಿತವನ್ನುಪದೇಶಿಸತಕ್ಕವನು. ಸುಹೃತ್ತುಗಳಂತೆ ಕ್ಷೇಮವನ್ನುಂಟುಮಾಡುವೆನು. ಇಷ್ಟದೈವದಂತೆ ಪೂಜ್ಯನು. ಹೀಗೆ ಸರ್ವವಿಧದಿಂದಲೂ ನನಗೆ ಪ್ರಿಯರಾದ ಅಂತಹ ಭಕ್ತರನ್ನು ಎಂದಿಗೂ ನಾನು ಬಿಟ್ಟು ಕೊಡಲಾರೆನು. ಜನನೀ ! ಇಹಲೋಕಸುಖಗಳನ್ನೂ, ಸ್ವರ್ಗಾದಿಪಾರಲೌಕಿಕ ಸುಖಗಳನ್ನೂ ಅಶಾಶ್ವತಗಳೆಂದು ತಿಳಿದು, ಅವೆಲ್ಲವನ್ನೂ ತೊರೆದು, ಈ ಸುಖಗಳನ್ನು ಸಾಧಿಸುವುದಕ್ಕೆ ಮುಖ್ಯಕಾರಣವಾದ ತಮ್ಮ ದೇಹದಲ್ಲಿಯೂ ಅಭಿಮಾನವನ್ನು ಬಿಟ್ಟು, ಆ ದೇಹಾನುಬಂಧಿಗಳಾದ ಹೆಂಡಿರು ಮಕ್ಕಳನ್ನೂ ತ್ಯಜಿಸಿ, ಮನೆಮಠಗಳನ್ನೂ, ಆಸ್ತಿಪಾಸ್ತಿಗಳನ್ನೂ ನಿರಾಕರಿಸಿ, ನನ್ನನ್ನೇ ಮೊರೆಹೊಕ್ಕುಬಂದವರಿಗೆ, ನಾನು ಯಾವ ವಿಧವಾದ ಪ್ರಿಯವನ್ನು ಮಾಡಿದರೆ ತಾನೇ ತೀರುವುದು ? ಸರ್ವಜ್ಞನಾದ ನನ್ನನ್ನು ನಿಶ್ಚಲವಾದ ಭಕ್ತಿಯಿಂದ

ಭಜಿಸತಕ್ಕವರಿಗೆ, ನಾನು ಆಕ್ಷಣವೇ ಸಂಸಾರಪಾಶವನ್ನು ತಪ್ಪಿಸುವುದಲ್ಲದೆ, ಅವರಿಗೆ ತಿರುಗಿ ಸಂಸಾರಸಂಬಂಧವೇ ಇಲ್ಲದಂತೆಯೂ ಮಾಡುವೆನು. ಸರ್ವ ಜೀವಾಂತರ್ಯಾಮಿಯಾಗಿ, ಚಿದಚಿದ್ರೂಪವಾದ ಸಮಸ್ತಪ್ರಪಂಚವನ್ನೂ ಧರಿಸಿರತಕ್ಕ ನನಗಿಂತಲೂ ಲೋಕದಲ್ಲಿ ಬೇರೆ ದೈವವಿಲ್ಲ! ಬ್ರಹ್ಮರುದ್ರರೇ ಮೊದಲಾದ ಬೇರೆ ಯಾವ ದೇವತೆಗಳೂ ಆ ಸಂಸಾರಭಯವನ್ನು ನೀಗಿಸಲಾರರು. ಬೇರೆ ಎಲ್ಲಾ ದೇವತೆಗಳೂ ನನ್ನ ಆಜ್ಞಾನುವರ್ತಿಗಳು. ಎಲೆ ಜನನಿ! ಇನ್ನು ಹೆಚ್ಚು ನೂತಿನಿಂದೇನು? ನನಗಾಗಿ ಭಯಪಟ್ಟೇ ಗಾಳಿಯು ಬೀಸುತ್ತಿರುವುದು. ನನ್ನ ಭಯಕ್ಕಾಗಿಯೇ ಸೂರ್ಯನು ತಪಿಸುತ್ತಿರುವನು. ನನ್ನ ಭಯದಿಂದಲೇ ಇಂದ್ರನು ಮಳೆಯನ್ನು ಕರೆಯುವನು. ನನ್ನ ಭಯಕ್ಕಾಗಿಯೇ ಅಗ್ನಿಯು ದಹಿಸುವನು. ನನಗೆ ಭಯಪಟ್ಟೇ ಮೃತ್ಯುವು ತನ್ನ ಅಧಿಕಾರವನ್ನು ನಡೆಸುವನು. ಹೀಗೆ ಸಮಸ್ತದೇವತೆಗಳೂ ನನ್ನ ನಿಯಮಕ್ಕೊಳಪಟ್ಟು, ನನಗೆ ಭೀತರಾಗಿಯೇ ತಮ್ಮತಮ್ಮ ಅಧಿಕಾರಗಳನ್ನು ತಪ್ಪದೆ ನಡೆಸುತ್ತಿರುವರು. ಇದಕ್ಕಾಗಿಯೇ ಯೋಗಿಗಳು ತಮ್ಮ ಶ್ರೇಯಸ್ಸಿಗಾಗಿ ಜ್ಞಾನವೈರಾಗ್ಯಗಳೊಡಗೂಡಿದ ಭಕ್ತಿಯೋಗವನ್ನು ಹಿಡಿದು, ಸಮಸ್ತ ಭಯವನ್ನೂ ನೀಗಿಸತಕ್ಕ ನನ್ನ ಪಾದಮೂಲವನ್ನು ಸೇವಿಸುವರು. ಜನನೀ! ನಾನು ಹೇಳತಕ್ಕ ಶಾಸ್ತ್ರಾರ್ಥದಸಾರವನ್ನು ಸಂಗ್ರಹಿಸಿ ಹೇಳುವೆನು ಕೇಳು! ಯಾವ ಕಾರಣಾಂತರದಿಂದಲೂ ಕುಂದದ ತೀವ್ರವಾದ ಭಕ್ತಿಯೋಗದಿಂದ ಮನಸ್ಸನ್ನು ನನ್ನಲ್ಲಿ ಸ್ಥಿರವಾಗಿ ನಿಲ್ಲಿಸಿಡುವುದೊಂದೇ, ಈ ಪ್ರಕೃತಿಮಂಡಲದಲ್ಲಿ ಸಂಸಾರಕ್ಕೆ ಕಟ್ಟುಬಿದ್ದಿರುವ ಜೀವನಿಗೆ ಮೋಕ್ಷೋಪಾಯವೆಂದುತಿಳಿ! ಎಂದನು. ಇಲ್ಲಿಗೆ ಇಪ್ಪತ್ತೈದನೆಯ ಅಧ್ಯಾಯವು.

ಕಪಿಲನು ದೇವಹೂತಿಗೆ ಪ್ರಕೃತಿ ಪುರುಷರಸ್ವರೂಪವನ್ನು ತಿಳಿಸಿದುದು.

ಅಮ್ಮಾ! ಮೋಕ್ಷಕ್ಕೆ ಬೇಕಾದ ಪ್ರಧಾನಮಾರ್ಗವನ್ನು ನಿನಗೆ ತಿಳಿಸಿದೆನಷ್ಟೆ? ಪ್ರಕೃತಿ, ಪುರುಷ, ಕಾಲವೆಂಬೀ ಮೂರು ತತ್ವಗಳ ಸ್ವರೂಪವನ್ನು

ನಿನಗೆ ಬೇರೆಬೇರೆಯಾಗಿ ವಿವರಿಸಿ ತಿಳಿಸುವೆನು ಕೇಳು. ಈ ತತ್ವಗಳ ಸ್ವರೂಪವನ್ನು ತಿಳಿದಾಗಲೇ, ಮೋಕ್ಷಾಭಿಲಾಷೆಯುಳ್ಳ ಮನುಷ್ಯನಿಗೆ ಪ್ರಕೃತಿಗುಣಗಳಾದ ಸತ್ವರಜಸ್ತಮಸ್ಸುಗಳು ಬಿಟ್ಟುಹೋಗುವುವು. ಪರಬ್ರಹ್ಮನನ್ನು ಸಾಕ್ಷಾತ್ಕರಿಸುವುದಕ್ಕೆ ಬೇಕಾದ ಯಾವ ಜ್ಞಾನವನ್ನು ಮೋಕ್ಷಕಾರಣವೆಂದು ವೇದಾಂತಿಗಳು ಹೇಳಿರುವರೋ, ಯಾವ ಜ್ಞಾನದಿಂದ ಅಜ್ಞಾನವು ನೀಗುವುದೋ ಅಂತಹ ಜ್ಞಾನವನ್ನು ನಿನಗೆ ವಿವರಿಸುವೆನು. ಮೊದಲು ಜೀವಾತ್ಮದ ಸ್ವರೂಪವು ಎಂತದೆಂಬುದನ್ನು ಕೇಳು. ಜೀವನು ತನಗೆತಾನೇ ತೋರುವ ಸ್ವರೂಪವುಳ್ಳವನು. ಎಂದರೆ, ದೀಪದಂತೆ ಸ್ವಯಂಪ್ರಕಾಶವುಳ್ಳವನು. ಜ್ಞಾನವೇ ಅವನ ಸ್ವರೂಪವೂ, ಜ್ಞಾನವೇ ಅವನ ಗುಣವಾಗಿಯೂ ಇರುವುದು. ದೀಪವು ತನ್ನ ಪ್ರಭೆಯಿಂದ ಇತರವಸ್ತುಗಳನ್ನು ಪ್ರಕಾಶಗೊಳಿಸುತ್ತ, ಸ್ವಧರ್ಮವಾದ ಪ್ರಭೆಯನ್ನಪೇಕ್ಷಿಸದೆ ತನಗೆತಾನೇ ಬೆಳಗುವಂತೆ, ಜೀವನೂ ತನ್ನೊಳಗೆ ತಾನೇ ತಿಳಿಯತಕ್ಕ ನಿಜಸ್ವರೂಪವುಳ್ಳವನಾಗಿ, ಇತರವಸ್ತುಗಳನ್ನೂ ತಿಳಿಯುವನು. ಪ್ರಕೃತಿಯೆ ವಿಕಾರರೂಪವಾದ ಶರೀರ, ಇಂದ್ರಿಯಗಳು, ಮನಸ್ಸು, ಇವೆಲ್ಲಕ್ಕಿಂತಲೂ ವಿಲಕ್ಷಣನಾಗಿರುವನು. ಸಹಜವಾಗಿ ಅವನಿಗೆ ಪ್ರಕೃತಿಗುಣಗಳಾದ ಸತ್ವಾದಿಗಳ ಸಂಬಂಧವಿಲ್ಲ. ಇವನು ಶರೀರದಲ್ಲಿ ಪ್ರವೇಶಿಸಿ, ಅದನ್ನು ಧರಿಸಿಕೊಂಡಿರುವನು. ಈ ಜೀವಾತ್ಮಸ್ವರೂಪವು, ಬ್ರಹ್ಮನು ಮೊದಲಾಗಿ ಸಣ್ಣ ಕ್ರಿಮಿಯವರೆಗೆ ಎಲ್ಲಾ ಶರೀರದಲ್ಲಿಯೂ ವ್ಯಾಪಿಸಿರುವುದು. ಹುಟ್ಟು, ಸಾವು ಮುಂತಾದ ವಿಕಾರಗಳು ಆ ದೇಹಕ್ಕಲ್ಲದೆ ಜೀವನಿಗಿಲ್ಲ. ಆದರೆ "ನಾನು ದೇವನೆಂದೂ, ನಾನು, ಮನುಷ್ಯನೆಂದೂ ನನ್ನ ಆಕಾರವು ದೊಡ್ಡದೆಂದೂ, ಅವನ ಆಕಾರವು ಸಣ್ಣದೆಂದೂ, ಜೀವಾತ್ಮರಲ್ಲಿ ಒಬ್ಬರಿಗೊಬ್ಬರಿಗೆ ವ್ಯತ್ಯಾಸವೇಕೆ? ಆಯಾ ದೇಹಗಳೊಡನೆ ಜೀವಾತ್ಮವು ಒಂದಾಗಿರುವಂತೆಯೇ ತೋರುವಾಗ, ಆಯಾ ದೇಹಗಳೊಡನೆ ಆಯಾಜೀವನಿಗೂ ಜನನಮರಣಾದಿಗಳೆಲ್ಲವೆಂಬುದು ಹೇಗೆ?" ಎಂದು ನೀನು ಶಂಕಿಸಬಹುದು. ಜೀವನು ವರ್ಣ್ಯಶಾಪರೂಪಗಳಾದ ಕರ್ಮಗಳ ವ್ಯತ್ಯಾಸದಿಂದಲೇ ದೇವಮನುಷ್ಯಾದಿಭೇದಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುವನೇಹೊರತು, ಆ ದೇಹಾದಿಗಳೊಡನೆ ಜೀವನಿಗೆ ಜನನಮರ

ಣಾದಿಗಳೊಂದೂ ಇರುವುದಿಲ್ಲ. ಕನಸನ್ನು ಕಾಣುವವನು, ಎಚ್ಚರಗೊಂಡಾಗ,ತಾನು ಕನಸಿನಲ್ಲಿ ಕಂಡ ವಸ್ತುಗಳು ನಾಶಹೊಂದಿದರೂ,ತಾನು ಹೇಗೆ ನಾಶಹೊಂದುವುದಿಲ್ಲವೋ, ಹಾಗೆಯೇ ಜೀವನೂಕೂಡ, ಪ್ರಕೃತಿಸಂಬಂಧದಿಂದ ತನಗುಂಟಾದ ದೇಹಾದಿಗಳು ಬಿಟ್ಟು ಹೋದರೂ, ತಾನು ನಾಶವಿಲ್ಲದಂತಿರುವನು. ಇಂತಹ ಜೀವನು ಬಹಳಸೂಕ್ಷ್ಮಸ್ವರೂಪವುಳ್ಳವನಾದುದರಿಂದ, ಅನೇಕವಸ್ತುಗಳಲ್ಲಿ ಒಳಹೊಕ್ಕು ವ್ಯಾಪಿಸಿರತಕ್ಕ ಸ್ವಭಾವವುಳ್ಳವನು. ಪ್ರಕೃತಿಯೆಂಬುದು ಜಗತ್ಸೃಷ್ಟಿಗೆ ಮೊದಲು,ಭೂಮಿ ಮೊದಲಾದ ಹೆಸರು, ಆಕಾರವೆಂಬೀ ವ್ಯತ್ಯಾಸಗಳೊಂದೂ ಇಲ್ಲದೆ, ಸೂಕ್ಷ್ಮದಶೆಯಲ್ಲಿ,ಪರಮಪುರುಷನ ಕ್ರೀಡಾಸಾಮಗ್ರಿಯೆನಿಸಿಕೊಂಡಿರುವುದು. ಈ ಪ್ರಕೃತಿಯೇ ಸತ್ವಾದಿಗುಣಗಳಿಗೆ ನೆಲೆಯಾಗಿರುವುದು. ಜೀವಾತ್ಮನು ಒಂದೊಂದುಕಾಲದಲ್ಲಿ ಈ ಪ್ರಕೃತಿಯ ಸಂಬಂಧವನ್ನು ಹೊಂದುವನೇಹೊರತು, ಇದು ಅವನಿಗೆ ಸಹಜವಾಗಿ ಹುಟ್ಟಿದ ಸಂಬಂಧವಲ್ಲ. ಆ ಪ್ರಕೃತಿಯು ಭಗವಂತನ ಸಂಕಲ್ಪದಿಂದ ಪ್ರೇರಿತವಾಗಿ, ಒಂದೇ ಬಗೆಯಾದ ಜೀವನನ್ನು ಚಿತ್ರವಿಚಿತ್ರವಾಗಿ ಕಾಣಿಸುತ್ತಿರುವುದು. ಈ ಪ್ರಕೃತಿಯು ಜ್ಞಾನವನ್ನು ಮರೆಸತಕ್ಕ ಸ್ವಭಾವವುಳ್ಳದು.ಜೀವನು ಈ ಪ್ರಕೃತಿಸಂಬಂಧವನ್ನು ಹೊಂದಿದಾಗ ಅದರ ಸ್ವರೂಪವನ್ನು ಕಾಣುತಿದ್ದಹಾಗೆಲ್ಲಾ ಬುದ್ಧಿಮೋಹವನ್ನು ಹೊಂದಿ, ತನ್ನ ಸ್ವರೂಪವನ್ನು ಮರೆತು,ಅದನ್ನೇ ತಾನೆಂದು(ಆತ್ಮವೆಂದು) ಭ್ರಮಿಸುವನು. ಆ ಪ್ರಕೃತಿಯ ಗುಣಗಳ ಪ್ರಾಬಲ್ಯದಿಂದಲೇ ಕರ್ಮಗಳಲ್ಲಿಯೂ ಪ್ರವರ್ತಿಸಿ, ಅದನ್ನು ತಾನೇ ನಡೆಸುವುದಾಗಿಯೂ ಆರೋಪಿಸಿಕೊಳ್ಳುವನು. ಸಂಸಾರಸಂಬಂಧವಾಷ ಕಾರ್ಯಗಳಲ್ಲಿ ಜೀವನಿಗುಂಟಾಗುವ ಪ್ರಯತ್ನವು, ಆ ಪ್ರಕೃತಿಗುಣಗಳ ಮೂಲಕವಾಗಿ ಬಂದುದೇಹೊರತು,ಅವನಿಗೆ ಸಹಜವಾದುದಲ್ಲ. ಹೀಗೆ ಪ್ರಕೃತಿಸಂಬಂಧದಿಂದುಂಟಾದ ಕರ್ತೃತ್ವವನ್ನು ಜೀವನು ತನ್ನಲ್ಲಿ ಆರೋಪಿಸಿಕೊಳ್ಳುವುದರಿಂದಲೇ ಇವನಿಗೆ ಸಂಸಾರಬಂಧವೂ ಉಂಟಾಗುವುದು. ಅದರಿಂದಲೇ ಇವನು ಕರ್ಮಗಳಲ್ಲಿಯೂ ಕಟ್ಟುಬೀಳುವನು.ಜೀವನು ಸಹಜವಾಗಿ ಸಂಚಾರಾದಿವ್ಯಾಪಾರಹಿಲ್ಲದವನಾಗಿದ್ದರೂ ಅವನಿಗೆ ಅದರಲ್ಲಿ ಪ್ರವರ್ತನವು ಪುಣ್ಯಪಾಪಸಂಬಂಧದಿಂದಲೇ ಉಂಟಾಗು

ವುದು. ಮತ್ತು ಜೀವಾತ್ಮನ ಗುಣಸ್ವರೂಪಗಳೆರೂ ಜ್ಞಾನವೇ ಆದುದರಿಂದ, ಅವನ ಜ್ಞಾನವು ಸಹಜವಾಗಿ ಶುದ್ಧವಾಗಿರುವುದು. ಅಂತಹ ಜೀವಾತ್ಮಗಳಿಗೆ ಅವಿದ್ಯೆಯ ಸಂಬಂಧವುಂಟಾದಾಗ, ಆ ಜ್ಞಾನಕ್ಕೆ ಹೆಚ್ಚು ಕಡಿಮೆಗಳು ಏರ್ಪಡುವುವು. ಇದರಿಂದಲೇ ಜೀವಾತ್ಮನು, ಕರ್ಮಾನುಸಾರವಾಗಿ ಬ್ರಹ್ಮನಿಂದ ಹಿಡಿದು, ಸಣ್ಣ ಹುಳುವಿನವರೆಗೆ ಬೇರೆಬೇರೆ ವಿಚಿತ್ರಗಳಾದ ದೇಹಗಳಲ್ಲಿ ಪ್ರವೇಶಿಸಿ, ಆಯಾದೇಹಗಳಿಗೆ ತಕ್ಕಂತೆ ಜ್ಞಾನದಲ್ಲೆಯೂ ಹೆಚ್ಚು ಕಡಿಮೆಗಳನ್ನು ಹೊಂದಿ, ಆ ದೇಹವನ್ನೇ ಆತ್ಮವೆಂದು ಭ್ರಮಿಸುವರು. ಆಯಾ ದೇಹಾಭಿಮಾನಕ್ಕೆ ತಕ್ಕಂತೆ ಕರ್ಮಗಳಲ್ಲಿಯೂ ಪ್ರವರ್ತಿಸುವರು. ಅವುಗಳಿಗೆ ತಕ್ಕಂತೆ ಸುಖದುಃಖಗಳಿಗೂ ಭಾಗಿಯಾಗುವರು. ಇದೇ ಸಂಸಾರವೆನಿಸುವುದು. ಅಮ್ಮಾ! ಆದುದರಿಂದ ಹಿರಿಯರು, ಆ ಶರೀರ ಜೇಷ್ಟೆಗಳಲ್ಲಿಯೂ, ಇಂದ್ರಿಯವ್ಯಾಪಾರಗಳಲ್ಲಿಯೂ, ಶರೀರರೂಪವಿಂದಿರುವ ಆ ಪ್ರಕೃತಿಯನ್ನೇ ಕಾರಣವಾಗಿ ಹೇಳುವರು. ಮನುಷ್ಯನು ನಡೆಸತಕ್ಕ ಭೋಗಸಾಧನಗಳಾದ ಕಾರ್ಯಗಳೆಲ್ಲವೂ, ಜೀವನನ್ನು ತನ್ನೊಳಗೆ ಮುಚ್ಚಿಕೊಂಡು ಶರೀರರೂಪವಿಂದಿರುವ ಪ್ರಕೃತಿಮೂಲಕವಾದುದೆಂದೇ ನಿಶ್ಚಯಿಸಿರುವರು. ಇದರಿಂದುಂಟಾಗುವ ಸುಖದುಃಖಗಳನ್ನನುಭವಿಸುವುದಕ್ಕೆ ಮಾತ್ರ ಜೀವಾತ್ಮನು ಭಾಗಿಯಾಗುವನು. ಹೀಗೆ ಜೀವನು ಆಶರೀರವನ್ನು ಧರಿಸುವುದಕ್ಕೆ ಪ್ರಯತ್ನಮಾಡುತ್ತಿರುವುದರಿಂದ, ಕರ್ತೃತ್ವಕ್ಕೂ, ಆಪ್ರಕೃತಿಸಂಬಂಧದಿಂದುಂಟಾಗುವ ಸುಖದುಃಖಗಳನ್ನು ಅನುಭವಿಸುವುದರಿಂದ ಭೋಕ್ತೃತ್ವಕ್ಕೂ ಭಾಗಿಯಾಗುವನು" ಎಂದನು. ಇದನ್ನು ಕೇಳಿ ದೇವಹೂತಿಯು,"ಎಲೈ ಪುರುಷೋತ್ತಮನೆ! ಕಾರ್ಯರೂಪವಾದ ಈ ಪ್ರಪಂಚಕ್ಕೆ ಪ್ರಕೃತಿಪುರುಷರಿಬ್ಬರೂ ಕಾರಣವಷ್ಟೆ?ಈ ಕಾರ್ಯದಶೆಯನ್ನು ಹೊಂದುವುದಕ್ಕೆ ಮೊದಲು, ಇವೆರಡೂ ನಾಮರೂಪ ವಿಭಾಗಗಳೊಂದೂ ಇಲ್ಲದೆ, ಭಗವಂತನಿಗೆ ಶರೀರವಾಗಿ, ಸೂಕ್ಷ್ಮದಶೆಯಲ್ಲಿದ್ದುವಷ್ಟೆ? ಆ ಪ್ರಕೃತಿಪುರುಷರಿಬ್ಬರಿಂದ ನಡೆಯುವ ಕಾರ್ಯಭೇದವೇನು ? ಲೋಕದಲ್ಲಿ ತಂದೆ, ಮೊದಲಾದಂತೆ ಕಾರಣರೂಪದಿಂದಲೂ, ಮಗನಂತೆ ಕಾರ್ಯರೂಪದಿಂದಲೂ ತೋರುವ ವಸ್ತುಗಳೆಲ್ಲವೂ ಈ ಪ್ರಕೃತಿಸಂಬಂಧದಿಂದುಂಟಾದ ಭೇದಗಳೇ !

ಈ ತಂದೆಮಕ್ಕಳೆಂಬ ವ್ಯವಹಾರಗಳೆಲ್ಲವೂ ಕೇವಲ ಪ್ರಕೃತಿಯಿಂದಲಾಗಲಿ, ಕೇವಲ ಪುರುಷನಿಂದಲಾಗಲಿ ಉಂಟಾಗಲಾರವು ಕಾರಣದಿಂದ ಅವೆರಡೂ ಸೇರಿಯೇ ಕಾರ್ಯರೂಪಪ್ರಪಂಚವೆನಿಸಬೇಕು. ಇವುಗಳೆರಡರ ಸ್ವರೂಪವನ್ನು ನನಗೆ ಇನ್ನೂ ವಿಶದವಾಗಿ ತಿಳಿಸು" ಎಂದಳು ಆಗ ಕಪಿಲನು ದೇವಹೂತಿಯೆನ್ನುಕುರಿತು "ಅಮ್ಮಾ ಕೇಳು ! ಯಾವುದು ಲೋಕಸೃಷ್ಟಿಗೆ ಪ್ರಧಾನವಸ್ತುವೋ ಅದನ್ನೇ ಪ್ರಕೃತಿಯೆಂದು ಹೇಳುವರು. ಈ ಪ್ರಧಾನವೆಂಬುದು ಕಾರಣದಶೆಯಲ್ಲಿ ಭೂಮಿ ಮೊದಲಾದ ವಿಶೇಷಾಕಾರಗಳೊಂದೂ ಇಲ್ಲದಂತಿರುವುದು. ಆಗ ಇದಕ್ಕೆ ಆಕಾರವೊಂದೂ ಇಲ್ಲದುದರಿಂದಲೇ ಅವ್ಯಕ್ತವೆಂದೂ ಕರೆಯಲ್ಪಡುವುದು. ಇದು ನಿತ್ಯವಾದುದು. ಈ ಪ್ರಕೃತಿಗೆ ಸತ್ವವೆಂದೂ, ರಜಸ್ಸೆಂದೂ, ತಮಸ್ಸೆಂದೂ ಮೂರುಗುಣಗಳುಂಟು. ಇದು ಈ ಗುಣಗಳ ಹೆಚ್ಚುಕಡಿಮೆಯಿಂದ ಕಾರ್ಯದಶೆಯನ್ನು ಹೊಂದಿ, ಭೂಮಿ ಮೊದಲಾದ ಆಕಾರಭೇದಗಳನ್ನೂ ಹೊಂದುವುದು. ಮಹತ್ತು ಮೊದಲಾಗಿ ಪೃಥಿವಿಯವರೆಗೆ ಕಾರಣರೂಪದಿಂದಲೂ, ಬ್ರಹ್ಮನಿಂದ ಸಣ್ಣ ಕ್ರಿಮಿಕೀಟಗಳವರೆಗೆ ಕಾರ್ಯರೂಪದಿಂದಲೂ ಕಾಣುವುದರಿಂದ, ಇದಕ್ಕೆ ಕಾರ್ಯಕಾರಣಗಳೆಂಬ ಎರಡು ರೂಪಗಳೂ ಏರ್ಪಟ್ಟಿರುವುವು. ಭೂಮಿ ಮೊದಲಾದ ಐದು ಭೂತಗಳು. ಅದರ ಗುಣಗಳೆನಿಸಿಕೊಂಡ ಗಂಧವೇ ಮೊದಲಾದ ಐದುತನ್ಮಾತ್ರಗಳು, ಮನಸ್ಸು, ಅಹಂಕಾರ, ಮಹತ್ತು, ಅವ್ಯಕ್ತವೆಂಬಿವು ನಾಲ್ಕು, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂಬಿವು ಹತ್ತು, ಇವಿಷ್ಟೂ ಸೇರಿ, ಇಪ್ಪತ್ತುನಾಲ್ಕು ತತ್ವಗಳ ಸಮುದಾಯವನ್ನು ಪ್ರಕೃತಿ ಕಾರ್ಯವೆಂದು ಹಿರಿಯರು ನಿರ್ಣಯಿಸಿರುವರು. ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಎಂಬಿವೈದೂ ಪಂಚಮಹಾಭೂತಗಳು ! ಈ ಭೂತಗುಣಗಳಾದ, ಗಂಧ, ರಸ, ರೂಪ, ಸ್ಪರ್ಶ, ಶಬ್ದವೆಂಬಿವೈದೂ ಪಂಚತನ್ಮಾತ್ರಗಳು. ಭೂತಸಂಖ್ಯೆಯನ್ನು ಅನೇಕರು ಅನೇಕವಿಧವಾಗಿ ಹೇಳುವುದುಂಟು.ಆದರೆ ಇದೇ ನನ್ನ ಮತವು.ಕಣ್ಣು, ಕಿವಿ, ಮೂಗು, ನಾಲಗೆ, ತೊಗಲು,ಇವೈದು ಜ್ಞಾನೇಂದ್ರಿಯಗಳೂ ವಾಕ್ಕು, ಕೈ, ಕಾಲು, ಜಲದ್ವಾರ, ಮಲದ್ವಾರವೆಂಬೀ ಐದು ಕರ್ಮೇಂದ್ರಿ

ಯೆಗಳೂ ಸೇರಿ ಇಂದ್ರಿಯಗಳು ಹತ್ತಾಗಿರುವುವು. ಅಂತಃಕರಣವೆಂಬ ಒಳಗಿನ ಇಂದ್ರಿಯವೊಂದೇ ತನಗೆ ಲಕ್ಷಣಗಳಾದ, ಸಂಕಲ್ಪ, ಅಧ್ಯವಸಾಯ, ಅಭಿಮಾನ, ಚಿಂತೆಯೆಂಬ ಬೇರೆಬೇರೆ ನಾಲ್ಕು ಬಗೆಯ ವ್ಯಾಪಾರಗಳಿಂದ, ಮನಸ್ಸೆಂದೂ, ಬುದ್ಧಿಯೆಂದೂ, ಅಹಂಕಾರವೆಂದೂ, ಚಿತ್ತವೆಂದೂ, ನಾಲ್ಕು ಬಗೆಯಾಗುವುದು. ಸತ್ವ, ರಜಸ್ಸು, ತಮಸ್ಸು, ಎಂಬ ಈ ಮೂರು ಗುಣಗಳೊಡಗೂಡಿದ ಪ್ರಕೃತಿತತ್ವದ ಅವಸ್ಥಾಭೇದಗಳೆಲ್ಲವೂ ಇಷ್ಟೇ! ತತ್ವಜ್ಞರಾದ ಹಿರಿಯರು ಹೀಗೆ ಇಪ್ಪತ್ತುನಾಲ್ಕು ತತ್ವಗಳೆಂದೇ ನಿರ್ಣಯಿಸಿರುವರು. ಕೆಲವರು ಕಾಲವೆಂಬ ಮತ್ತೊಂದು ತತ್ವವನ್ನೂ ಸೇರಿಸಿ, ಇಪ್ಪತ್ತೈದು ತತ್ವಗಳೆನ್ನುವರು. ಕೆಲವರು ಕಾಲವೆಂಬುದನ್ನು ಬೇರೆ ತತ್ವವಲ್ಲವೆಂದೂ, ಅದು ಪರಮಪುರುಷನ ಶಕ್ತಿಯೆಂದೂ ಈ ಶಕ್ತಿಯಿಂದಲೇ ಜಗತ್ತಿಗೆ ಉತ್ಪತ್ತಿ ವಿನಾಶಾದಿ ರೂಪವಾದ ಸಂಸಾರಭಯವು ಏರ್ಪಟ್ಟಿರುವುದೆಂದೂ ಹೇಳುವರು. ಆದರೆ ಈ ವಿಷಯವಾಗಿ ನನ್ನ ಅಭಿಪ್ರಾಯವನ್ನು ತಿಳಿಸುವೆನು ಕೇಳು! ದೇಹಾಭಿಮಾನವೆಂಬ ಅಹಂಕಾರದಿಂದ ಬುದ್ಧಿವ್ಯಾಮೋಹಗೊಂಡಿದ್ದು ಕೊನೆಗೆ ಪ್ರಳಯದಶೆಯಲ್ಲಿ ತಮಸ್ಸೆಂದು ಕರೆಯಲ್ಪಡುವ ಸೂಕ್ಷ್ಮಪ್ರಕೃತಿಯೊಡನೆ ಸೇರಿರುವ ಜೀವನಿಗೂ, ಸತ್ವಾದಿಗುಣಗಳಲ್ಲಿ ಹೆಚ್ಚು ಕಡಿಮೆಯಿಲ್ಲದೆ ಸಮಸ್ಥಿತಿಯನ್ನು ಹೊಂದಿ ನಾಮರೂಪವಿಶೇಷಗಳೊಂದೂ ಇಲ್ಲದ ಪ್ರಕೃತಿಗೂ, ಈ ಪ್ರಪಂಚರೂಪವಾಗಿ ಮಾರ್ಪಡತಕ್ಕ ಕಾರ್ಯಕ್ಕೆ ಯಾವುದು ಪ್ರೇರಕವೋ, ಅದೇ ಕಾಲವೆಂದೂ, ಅದು ಭಗವಂತನ ಶರೀರವಾಗಿರುವುದೆಂದೂ ನನ್ನ ಮತವು. ಮೇಲೆ ಹೇಳಿದ ವಿಷಯಗಳಿಂದ ಪ್ರಕೃತಿ, ಪುರುಷ, ಕಾಲವೆಂಬಿವು ಮೂರೂ ಭಗವಂತನ ಸ್ವರೂಪಗಳಲ್ಲದೆ ಬೇರೆಯಲ್ಲವೆಂಬುದು ಸಿದ್ಧವಾಗುವುದಷ್ಟೆ? ಅವುಗಳಲ್ಲಿ ಪ್ರಕೃತಿಯೆಂಬುದು ಭೂಮಿ ಮೊದಲಾದ ಸ್ಥೂಲರೂಪಕ್ಕೆ ಮಾರ್ಪಡುವುದರಿಂದ, ಅದರ ಸ್ವರೂಪವನ್ನು ನಾವು ಸ್ಪಷ್ಟವಾಗಿ ತಿಳಿಯಬಹುದು. ಪುರುಷನಿಗೂ, ಕಾಲಕ್ಕೂ ಆ ಸ್ಥೂಲರೂಪವಿಲ್ಲದುದರಿಂದ, ಅವುಗಳನ್ನು ಯುಕ್ತಿಯಿಂದಲೇ ಕಂಡುಕೊಳ್ಳಬೇಕು. ಶಾಸ್ತ್ರದಿಂದಲ್ಲದೆ ಅವುಗಳ ಸ್ವರೂಪವನ್ನು ತಿಳಿಯುವು

ದಕ್ಕೆ ಬೇರೆ ಉಪಾಯವಿಲ್ಲ. ಈ ನಮ್ಮ ದೇಹವೆಂಬುದು, ಭೂಮಿ ಮೊದಲಾದ ಐದು ಭೂತಗಳಿಂದ ಏರ್ಪಟ್ಟಿರುವುದು. ಈ ದೇಹದೊಳಗೆ ಸೇರಿಕೊಂಡು, ಒಂದನ್ನು ದ್ವೇಷಿಸುವುದು, ಒಂದನ್ನು ಪ್ರೀತಿಸುವುದು, ಒಂದನ್ನು ಸುಖವೆಂದು ಭಾವಿಸಿ ಸಂತೋಷಪಡುವುದು, ಮತ್ತೊಂದನ್ನು ದುಃಖವೆಂದು ಭಾವಿಸಿ ಕೊರಗುವುದು, ಈ ರೀತಿಯಾಗಿ ಯಾವನು ಆಗಾಗ ಜ್ಞಾನವಿಕಾರಗಳನ್ನು ಹೊಂದುವನೋ, ಅವನೇ ಪುರುಷನೆಂದೂ, ಜೀವನೆಂದೂ, ಆತ್ಮನೆಂದೂ, ಜೀವಾತ್ಮನೆಂದೂ, ಕ್ಷೇತಜ್ಞನೆಂದೂ, ಪ್ರತ್ಯಗಾತ್ಮನೆಂದೂ ಬೇರೆಬೇರೆ ಹೆಸರಿನಿಂದ ಕರೆಯಲ್ಪಡುವನು. ಸುಖ, ದುಃಖ, ಪ್ರೀತಿ, ದ್ವೇಷ, ಮೊದಲಾದುವೆಲ್ಲವೂ ಜ್ಞಾನವಿಕಾರಗಳಾದುದರಿಂದ, ಇವು ಅಚೇತನವಾದ ಪ್ರಕೃತಿಯ ಧರ್ಮಗಳಲ್ಲ. ಇದರಿಂದ ಶರೀರದೊಳಗೆ ಜೀವನೆಂಬ ಬೇರೆ ವಸ್ತುವು ಅಡಗಿರಬೇಕೆಂದು ಗೊತ್ತಾಗುವುದಷ್ಟೆ! ಮತ್ತು ಆ ದೇಹಾದಿಗಳ ವಿಷಯವಾಗಿ, ಹಿಂದೆ ಇದ್ದುದೆಂದೂ, ಈಗ ಇರತಕ್ಕುದೆಂದೂ, ಮುಂದೆ ಹುಟ್ಟತಕ್ಕುದೆಂದೂ ಹೇಳುವ ವ್ಯವಹಾರವೆಲ್ಲವೂ ಕಾಲಕ್ಕೆ ಸಂಬಂಧಪಟ್ಟುದು. ಈ ವ್ಯವಹಾರಗಳಿಂದಲೇ ಕಾಲವೆಂಬುದೊಂದು ವಸ್ತುವನ್ನೂ ನಾವು ಗ್ರಹಿಸಬೇಕಲ್ಲವೆ? ಹೀಗೆ ಪಂಚಭೂತಗಳ ಸಮುದಾಯದಿಂದ ಏರ್ಪಟ್ಟ ಶರೀರದಲ್ಲಿ, ಸುಖದುಃಖಾದಿಗಳನ್ನನ್ನಭವಿಸತಕ್ಕ ಜೀವಾತ್ಮಸ್ವರೂಪದಿಂದ ಒಳಭಾಗದಲ್ಲಿಯೂ, ಕಾಲಸ್ವರೂಪದಿಂದ ಆ ಶರೀರದಹೊರಗೂ ಯಾವನು ತೋರುತ್ತಿರುವನೋ, ಅವನೇ ಪರಮಪುರುಷನು. ಆದರೆ ಜೀವಾತ್ಮ ಕಾಲಗಳೆರಡೂ ಪರಮಾತ್ಮನಿಗಿಂತಲೂ ಬೇರ್ಪಟ್ಟವುಗಳಾಗಿದ್ದರೂ, ಪರಮಪುರುಷನು ತನ್ನ ಸಂಕಲ್ಪದಿಂದ ಶರೀರದೊಳಗಿನ ಜೀವಾತ್ಮಗಳಿಗೂ, ಹೊರಗಿನ ಕಾಲಕ್ಕೂ ನಿಯಾಮಕನಾಗಿರುವುದರಿಂದ, ಪ್ರಕೃತಿ, ಪುರುಷ, ಕಾಲವೆಂಬಿವು ಮೂರೂ, ಪರಮಪುರುಷನ ಶರೀರವೆಂದೇ ಗ್ರಾಹ್ಯವು. ಇನ್ನು ಸೃಷ್ಟಿಕ್ರಮವನ್ನು ಕೇಳು! ಪ್ರಕೃತಿಯೆಂಬುದು ತನ್ನೊಳಗಿನ ಸತ್ವಾದಿಗುಣಗಳು ಸಮವಾಗಿದ್ದಾಗ, ತಾನೂ ಶಾಂತವಾಗಿರುವುದು. ಆಗ ಪರಮಪುರುಷನು ತನಗೆ ಶರೀರಭೂತವಾಗಿದ್ದ ಪ್ರಕೃತಿಯಲ್ಲಿ, ಮಹತ್ತು ಮೊದಲಾದ ಪ್ರಪಂಚವನ್ನು ಸೃಷ್ಟಿಸಬೇಕೆಂದುದ್ದೇಶಿಸಿ, ತನ್ನ

ಸಂಕಲ್ಪದಿಂದ ಅದಕ್ಕಿದ್ದ ಗುಣಸಾಮ್ಯವನ್ನು ಕದಲಿಸಿ, ಸೃಷ್ಟಿಕಾರ್ಯಕ್ಕಾಗಿ ಪ್ರೇರಿಸುವನು. ನಿರ್ವಿಕಾರನಾಗಿಯೂ, ಜಗತ್ಕಾರಣನಾಗಿಯೂ ಇರುವ ಭಗವಂತನು, ಹೀಗೆ ತನಗೆ ಶರೀರವಾದ ಪ್ರಕೃತಿಯಲ್ಲಿ ಮರೆಸಿ ಹೋಗಿದ್ದ ಜಗತ್ತನ್ನು ಹೊರಕ್ಕೆ ಕಾಣಿಸಬೇಕೆಂದೆಣಿಸಿ, ಜೀವಾತ್ಮಗಳಿಗೆ ಜ್ಞಾನವನ್ನು ತಗ್ಗಿಸತಕ್ಕುದಾದ ತಮೋಗುಣವನ್ನು ತನ್ನ ಸಂಕಲ್ಪದಿಂದ, ಅಡಗಿಸಿಡುವನು. * ಈ ತಮೋಗುಣದ ಶಕ್ತಿಯು ತಗ್ಗಿದಮೇಲೆ, ಆ ಮೂಲಪ್ರಕೃತಿಯಲ್ಲಿ ಪ್ರಕಾಶಸ್ವಭಾವವುಳ್ಳ ಸತ್ವಗುಣವು ತಲೆಯೆತ್ತುವುದರಿಂದ, ಅದು ನಿರ್ಮಲವಾಗಿ, ಕಾಂತಿವಿಶಿಷ್ಟವಾಗಿ ತೋರುವುದು. ಭಗವಂತನನ್ನು ಸಾಕ್ಷಾತ್ಕರಿಸುವುದಕ್ಕೆ ಕಾರಣವಾದ, ಅಂತಹ ಸತ್ವಗುಣ ಮೊಡನೆ ಬೆಳಗುತಿದ್ದ ಮೂಲಪ್ರಕೃತಿಯು, ಅದೇ ಪ್ರಕಾರದಿಂದ ಮಹತ್ತತ್ವರೂಪವಾಗಿ ಮಾರ್ಪಡುವುದು. ಈ ಮೂಲಪ್ರಕೃತಿಮಹತ್ತತ್ವಗಳೆರಡಕ್ಕೂ, ವಾಸುದೇವನೇ ಅಧಿಷ್ಠಾನದೇವತೆಯಾದ ಕಾರಣದಿಂದ ಆ ಮಹತ್ತತ್ವವು ವಾಸುದೇವಪ್ರಭವೆಂದು ಕರೆಯಲ್ಪಟ್ಟಿತು. ಈ ಸತ್ವಗುಣವು ತಲೆಯೆತ್ತಿದಾಗ ಆ ಅವ್ಯಕ್ತವು, ಅಂತಃಕರಣದ ಒಂದುಭೇದವೆನಿಸಿಕೊಂಡ ಚಿತ್ತವೆಂಬುದಕ್ಕೆ ಸಹಾಯಕವಾಗುವುದು. ಅಮ್ಮಾ! ಇದರ ಸಹಾಯದಿಂದ ಅಂತಃಕರಣಕ್ಕೆ ಒದಗಿ ಬರುವ ವ್ಯತ್ಯಾಸವೆಂತದೆಂಬುದನ್ನು ತಿಳಿಸುವೆನು ಕೇಳು. ಸಹಜವಾಗಿಯೇ ಸ್ವಚ್ಛವಾಗಿರುವ ಜಲವು, ಪಾತ್ರೆ, ಕೊಳೆ, ನೊರೆ, ಮುಂತಾದುವುಗಳೊಂದೂ ಇಲ್ಲದೆ ನಿರ್ಮಲವಾಗಿದ್ದಾಗ, ಪ್ರತಿಬಿಂಬವನ್ನು ಗ್ರಹಿಸುವುದಕ್ಕೆ ಹೇಗೆ ಸಮರ್ಥವಾಗುವುದೋ ಹಾಗೆಯೇ ಮನಸ್ಸು, ಯಾವ ವಿಕಾರಗಳೂ ಇಲ್ಲದೆ ಶಾಂತವಾಗಿ, ಭಗವಂತನ ರೂಪವನ್ನು ಗ್ರಹಿಸುವುದಕ್ಕೆ ತಕ್ಕಷ್ಟು ಸ್ವಚ್ಛತೆಯನ್ನು ಹೊಂ

---

* ಪ್ರಳಯದಲ್ಲಿ ಸತ್ವ ಮೊದಲಾದ ಪ್ರಕೃತಿಯ ಮೂರುಗುಣಗಳೂ ಹೆಚ್ಚು ಕಡಿಮೆಯಿಲ್ಲದೆ ಸಮಸ್ಥಿತಿಯಲ್ಲಿ ಶಾಂತವಾಗಿರುವುವು. ಪರಮಪುರುಷನು ಜಗತ್ತನ್ನು ಸೃಷ್ಟಿಸಬೇಕೆಂದು ಸಂಕಲ್ಪಿಸಿದೊಡನೆ, ತನಗೆ ಶರೀರಭೂತವಾಗಿದ್ದ ಆ ಪ್ರಕೃತಿಯ ಮೂರು ಗುಣಗಳಲ್ಲಿ, ತಮೋಗುಣವನ್ನು ತಗ್ಗಿಸಲು, ಸತ್ವಗುಣವು ತಲೆಯೆತ್ತುವುದೆಂದು ಭಾವವು.

ದಿದಾಗ, ಆ ಮನಸ್ಸಿಗೆ ಅವ್ಯಕ್ತದ ಸಹಾಯವುಂಟಾಯಿತೆಂದು ತಿಳಿಯಬೇಕು. ಅಂತಃಕರಣಕ್ಕೆ ಸಂಭವಿಸುವ ಈ ಸ್ಥಿತಿಯೇ ಚಿತ್ತವೆಂದು ಕರೆಯಲ್ಪಡುವುದು. ಹೀಗೆ ಮಹತ್ತತ್ವವುಂಟಾದ ಮೇಲೆ, ಅದು ಭಗವಂತನ ಸಂಕಲ್ಪದಿಂದ ವಿಕಾರಹೊಂದುತ್ತ ಬಂದು, ಅಹಂಕಾರರೂಪವಾಗಿ ಮಾರ್ಪಡುವುದು. ಈ ಅಹಂಕಾರತತ್ವವು ವೈಕಾರಿಕವೆಂದೂ, ತೈಜಸವೆಂದೂ, ತಾಮಸವೆಂದೂ ಮೂರುವಿಧವಾಗಿ ಬೇರ್ಪಡುವುದು ಆದರೆ.ಈ ಅಹಂಕಾರವೆಂಬುದರಲ್ಲಿ, ಕಾರ್ಯಪ್ರವೃತ್ತಿಯನ್ನುಂಟುಮಾಡುವ ರಜೋಗುಣವೇ ಹೆಚ್ಚಾಗಿರುವುದರಿಂದ,ಈ ಅಹಂಕಾರತತ್ವದಿಂದಲೇ ಮನಸ್ಸೂ,ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯಗಳೂ, ಆಕಾಶವೇ ಮೊದಲಾದ ಪಂಚಮಹಾಭೂತಗಳೂ, ಶಬ್ದವೇ ಮೊದಲಾದ ಐದುತನ್ಮಾತ್ರಗಳೂ ಇವೆಲ್ಲವೂ ಹುಟ್ಟುವುವು. ಸಹಸ್ರಶಿರಸ್ಸುಳ್ಳವನಾಗಿ, ಅನಂತನೆಂದು ಕರೆಯಲ್ಪಡುವ ಸಂಕರ್ಷಣಭಗವಂತನು, ಈ ಅಹಂಕಾರತತ್ವಕ್ಕೆ ಅಧಿಷ್ಠಾನದೇವತೆಯಾದುದರಿಂದ, ಇದು ಸಂಕರ್ಷಣವ್ಯೂಹವೆನಿಸುವುದು ಆತ್ಮನಲ್ಲಿ ತಾನೇ ಕೆಲಸಮಾಡತಕ್ಕವನೆಂಬ ಅಭಿಮಾನವೂ, ಇಂದ್ರಿಯಾಭಿಮಾನವೂ, ದೇಹಾಭಿಮಾನವೂ, ಯಾವಾಗ ಹುಟ್ಟುವುವೋ, ಆಗ ಅಂತಃಕರಣಕ್ಕೆ ಅಹಂಕಾರತತ್ವದ ಪ್ರೇರಣೆಯುಂಟಾಯಿತೆಂದು ತಿಳಿಯಬೇಕು. ಅಂತಃಕರಣಕ್ಕೆ ಸಂಭವಿಸುವ ಈ ಸ್ಥಿತಿಯೇ ಅಹಂಕಾರವೆನಿಸುವುದು. ಅಥವಾ ಮನಸ್ಸಿಗೆ ಉಲ್ಲಾಸ, ಚಿಂತೆ, ಮೋಹ, ಇವು ಮೂರನ್ನೂ ಅಹಂಕಾರಲಕ್ಷಣಗಳೆನ್ನಬಹುದು. ಮೇಲೆ ಹೇಳಿದ ಉಲ್ಲಾಸವೆಂಬುದು ಸಾತ್ವಿಕಾಹಂಕಾರಕ್ಕೂ, ಚಿಂತೆಯೆಂಬುದು ರಾಜಸಾಹಂಕಾರಕ್ಕೂ, ಮೋಹವೆಂಬುದು ತಾಮಸಾಹಂಕಾರಕ್ಕೂ ಲಕ್ಷಣಗಳಾದುದರಿಂದ,ಅಹಂಕಾರವೆಂಬುದು ಈ ಮೂರು ಗುಣಗಳಿಂದಲೂ ಕಲೆತಿರುವುವೆಂದು ತಿಳಿಯಬೇಕು.ಹೀಗೆ ಮೂರುವಿಧವಾದ ಅಹಂಕಾರಗಳಲ್ಲಿ ಸಾತ್ವಿಕವೆಂಬುದು ಭಗವಂತನ ಸಂಕಲ್ಪದಿಂದ ಪ್ರೇರಿತವಾಗಿ ವಿಕಾರಹೊಂದುತ್ತ, ಮನಸ್ಸೆಂಬ ತತ್ವವನ್ನು ಹುಟ್ಟಿಸುವುದು. ದೇಹವೂ, ಆತ್ಮವೂ ಒಂದೇ ಎಂಬ ಬುದ್ಧಿಯೂ, ಇನ್ನೂ ಬೇರೆಬೇರೆ ವಿಕಲ್ಪಗಳೂ ಯಾವಾಗ ತೋರುವುವೋ, ಆಗ ಆ ಅಂತಃಕರಣವು ತೈಜಸವೆಂಬ

ಅಹಂಕಾರದಿಂದ ಪ್ರೇರಿತವಾಯಿತೆಂದೂ, ಆದನ್ನೇ ಮನಸ್ಸೆಂದೂ ತಿಳಿಯಬೇಕು. ಈ ಮನಸ್ತತ್ವಕ್ಕೆ ಕಾರಣವೆನಿಸಿದ ಸಾತ್ವಿಕಾಹಂಕಾರಕ್ಕೆ, ಪ್ರದ್ಯುಮ್ನನು ಅಧಿಷ್ಠಾನದೇವತೆಯಾದುದರಿಂದ, ಆ ಸಾತ್ವಿಕಾಹಂಕಾರವು ಪ್ರದ್ಯುಮ್ನವ್ಯೂಹವೆಂದು ಕರೆಯಲ್ಪಡುವುದು.ಶರತ್ಕಾಲದ ಕನ್ನೆ ೃಥಿಲೆಯಂತೆ ಶ್ಯಾಮಲವಾದ ದೇಹಕಾಂತಿಯುಳ್ಳವನಾಗಿಯೂ, ಯೋಗಿಗಳಿಂದ ಶ್ರಮಪಟ್ಟುಧ್ಯಾನಿಸಲ್ಪಡತಕ್ಕವನಾಗಿಯೂ ಇರುವ ಅನಿರುದ್ಧನು, ತೈಜಸಾಹಂಕಾರದಲ್ಲಿ ನೆಲೆಗೊಂಡಿರುವುದರಿಂದ, ಅದು ಅನಿರುದ್ಧವ್ಯೂಹವೆಂದು ಕರೆಯಲ್ಪಡುವುದು.ತೈಜಸಾಹಂಕಾರದಪ್ರೇರಣೆಯಿಂದುಂಟಾದ ಇಂದ್ರಿಯಗಳಿಗೂ ಅನಿರುದ್ಧನೇ ಅಧಿಪತಿಯು,ವಿಕಾರವನ್ನು ಹೊಂದುತ್ತಿರುವ ಈತೈಜಸಾಹಂಕಾರದಿಂದಲೇ ಇಂದ್ರಿಯಗಳಿಗೆ ಸಾಮರ್ಥ್ಯವೂ ಹುಟ್ಟುವುದು. ಇದೇತೈಜಸಾಹಂಕಾರಗಳಿಂದ ಇಂದ್ರಿಯಗಳಿಗೆ ಉಂಟಾಗತಕ್ಕ ಸಾಹಾಯ್ಯವು. ಆ ತೈಜಸಾಹಂಕಾರವು ಭಗವಂತನ ಸಂಕಲ್ಪದಿಂದ ಪ್ರೇರಿತವಾಗಿ, ಸೃಷ್ಟಿಕಾರ್ಯಕ್ಕೆ ತೊಡಗಿದಾಗ, ಆದರಿಂದ ಬುದ್ಧಿಯೆಂಬ ತತ್ವವು ಹುಟ್ಟುವುದು. ಈ ಬುದ್ಧಿತತ್ವವೂ ಇಂದ್ರಿಯಗಳಿಗೆ ಸಹಾಯನೂಡತಕ್ಕ ಸ್ವಭಾವವುಳ್ಳದು. ಸಾಮಾನ್ಯವಾದ ವಸ್ತುಜ್ಞಾನವೂ, ಸಂಶಯವೂ, ಅನ್ಯಥಾಜ್ಞಾನ ವಿಪರೀತಜ್ಞಾನಗಳೂ, ನಿಶ್ಚಯವೂ, ಸ್ಮರಣವೂ, ನಿದ್ರೆಯೂ, ಇವೆಲ್ಲವೂ, ಪ್ರತ್ಯೇಕಪ್ರತ್ಯೇಕವಾಗಿ ಬುದ್ಧಿವ್ಯಾಪಾರಗಳೆನಿಸುವುವು. ಬುದ್ಧಿಯ ಸಹಾಯದಿಂದಲೇ ಇಂದ್ರಿಯಗಳು ಮೇಲೆ ಹೇಳಿದ ಬಗೆಬಗೆಯ ಜ್ಞಾನಗಳನ್ನು ಪಡೆಯುವುವು, ಬುದ್ಧಿತತ್ವದ ಸಹಾಯವು ಇಂದ್ರಿಯಳಿಗೆ ಉಂಟಾಗುದಕ್ಕೆ ಇವೇ ಗುರುತುಗಳು. ಕರ್ಮೇಂದ್ರಿಯ ಜ್ಞಾನೇಂದ್ರಿಯಗಳೆರಡೂ ತೈಜಸಾಹಂಕಾರದಿಂದ ಸಹಕರಿಸಲ್ಪಟ್ಟ ವೈಕಾರಿಕಾಹಂಕಾರದಿಂದಲೇ ಹುಟ್ಟಿದುವುಗಳು.ಇವು ಕೇವಲವೈಕಾರಿಕದಿಂದಲೇ ಹುಟ್ಟಿದವುಗಳಾಗಿದ್ದಪಕ್ಷದಲ್ಲಿಕರ್ಮೇಂದ್ರಿಯಗಳಿಗೆ ಬೇಕಾದ ಕ್ರಿಯಾಶಕ್ತಿಯೂ, ಜ್ಞಾನೇಂದ್ರಿಯಗಳಿಗೆ ಬೆಕಾದ ಜ್ಞಾನಶಕ್ತಿಯೂ ಇರಲಾರವು. ಆದುದರಿಂದ ಈ ಎರಡು ಬಗೆಯ ಇಂದ್ರಿಯೆಗಳೂ ತೈಜಸಾಹಂಕಾರದಿಂದ ಸಹಕರಿಸಲ್ಪಟ್ಟ ವೈಕಾರಿಕಸಾತ್ವಿಕದಿಂದಲೇ ಉಂಟಾಗುವುವು.ಆದರೆ ಆ ಎರಡು

ಯೆ ಇಂದ್ರಿಯೆಗಳಿಗೂ, ಎರಡುಬಗೆಯ ಶಕ್ತಿಯೂ ಇರಬೇಕಲ್ಲವೆ ? ಎಂದರೆ ಜ್ಞಾನೇಂದ್ರಿಯೆವುಂಟಾಗುವಾಗ, ವೈಕಾರಿಕದಲ್ಲಿ ಸತ್ವಗುಣವು ತಲೆಯೆತ್ತಿ, ರಜೋಗುಣವು ಮರೆಸಿಕೊಳ್ಳುವುದು. ಕರ್ಮೇಂದ್ರಿಯಗಳು ಹುಟ್ಟುನಾಗೆ ರಜೋಗುಣವು ತಲೆಯೆತ್ತಿ ಸತ್ವಗುಣವು ಮರೆಸಿಕೊಳ್ಳುವುದು. ಆದುದರಿಂದಲೇ ಕರ್ಮೇಂದ್ರಿಯೆಗಳಲ್ಲಿ ರಜೋಗುಣದ ಪ್ರಾಬಲ್ಯದಿಂದ ಕರ್ಮಶಕ್ತಿಯೂ, ಜ್ಞಾನೇಂದ್ರಿಯೆಗಳಲ್ಲಿ ಸತ್ವಗುಣದ ಬಲದಿಂದ ಕ್ರಿಯಾಶಕ್ತಿಯೂ ನಿಯತವಾಗಿರುವುದು. ಇದಾದಮೇಲೆ ತಾಮಸಾಹಂಕಾರವು ಭಗವಂತನ ಸಂಕಲ್ಪದಿಂದ ಪ್ರೇರಿತವಾದಾಗ,ಅದರಿಂದ ಶಬ್ದತನ್ಮಾತ್ರವು ಹುಟ್ಟಿ, ಅದರಿಂದ ಆಕಾಶವೆಂಬ ಮಹಾಭೂತವು ಜನಿಸಿತು ಆ ಶಬ್ದವನ್ನು ತಿಳಿಸತಕ್ಕುದು ಶ್ರೋತ್ರೇಂದ್ರಿಯೆವು. ಅರ್ಥವನ್ನು ಬೋಧಿಸುವುದೂ, ಸರ್ವಜ್ಞನಾದ ಪರಮಪುರುಷನನ್ನು ತಿಳಿಸುವುದಕ್ಕೆ ಪ್ರಮಾಣವೆನಿಸಿರುವುದೂ, (ಎಂದರೆ, ಶಾಸ್ತ್ರಗಳಿಂದಲ್ಲದೆ ಭಗವಂತನನ್ನು ತಿಳಿಯುವುದು ಸಾಧ್ಯವಲ್ಲದುದರಿಂದಲೂ, ಆ ಶಾಸ್ತ್ರಗಳೆಲ್ಲವೂ ಶಬ್ದಮಯವಾಗಿರುವುದರಿಂದಲೂ,ಭಗವತ್ಸ್ವರೂಪವನ್ನು ತಿಳಿಯಬೇಕಾದುದು ಶಬ್ದಪ್ರಮಾಣದಿಂದಲೇ) ಆಕಾಶವೆಂಬ ಭೂತಕ್ಕೆ ಸೂಕ್ಷ್ಮಸ್ವರೂಪವೆನಿಸಿಕೊಳ್ಳುವುದೂ,ಇವೇ ಶಬ್ದತನ್ಮಾತ್ರಲಕ್ಷಣಗಳು. ಸಮಸ್ತಭೂತಗಳಿಗೂ ಒಳಗೂ, ಹೊರಗೂ ಅವಕಾಶವನ್ನು ಕೊಡುವುದು, ಇಂದ್ರಿಯೆಗಳಿಗೂ, ಪ್ರಾಣಗಳಿಗೂ, ಆತ್ಮನಿಗೂ ಸ್ಥಾನವೆನಿಸಿಕೊಳ್ಳುವುದು, ಇವೇ ಆಕಾಶವೆಂಬ ಭೂತದ ಲಕ್ಷಣಗಳು. ಹೀಗೆ ಶಬ್ದಗುಣವುಳ್ಳ ಆಕಾಶವೆಂಬ ಭೂತವು, ಕಾಲಶರೀರಕನಾದ ಭಗವಂತನ ಸಂಕಲ್ಪದಿಂದ ಪ್ರೇರಿತವಾದಾಗ, ಅದರಿಂದ ಸ್ಪರ್ಶವೆಂಬ ತನ್ಮಾತ್ರವು ಹುಟ್ಟಿತು. ಅದರಿಂದ ವಾಯುವೆಂಬ ಭೂತವು ಏರ್ಪಟ್ಟಿತು. ಈ ಸ್ಪರ್ಶಗುಣವನ್ನು ತಿಳಿಸತಕ್ಕುದು ತ್ವಗಿಂದ್ರಿಯೆವು. ಮೃದುತ್ವ,ಕಠಿನತ್ವ, ಶೀತೋಷ್ಣತ್ವಗಳೂ ವಾಯುವಿಗೆಅಸಾಧಾರಣಗುಣವೆನಿಸುವುದೂ,ಸ್ಪರ್ಶತನ್ಮಾತ್ರ ಲಕ್ಷಣಗಳು ಇತರವಸ್ತುಗಳನ್ನು ಆಡಿಸುವುದು, ಚದರಿಸುವುದು, ಒಂದುಗೂಡಿಸುವುದು, ಗಂಧಗುಣವುಳ್ಳ ವಸ್ತುವನ್ನು ಘ್ರಾಣೇಂದ್ರಿಯೆಕ್ಕೂ, ಶಬ್ದವನ್ನು ಶ್ರೋತ್ರೇಂದ್ರಿಯೆಕ್ಕೂ ತಂದು ಸೇರಿಸುವುದು, ಸರ್ವೇಂದ್ರಿಯೆಗಳಿಗೂ ಧಾರಕ

ವಾಗಿರುವುದು,ಇವೆಲ್ಲವೂ ವಾಯುವಿನ ಲಕ್ಷಣವನ್ನು ತೋರಿಸತಕ್ಕ ಕಾರ್ಯ್ಯ ಗಳು. ಸ್ಪರ್ಶಗುಣವುಳ್ಳ ಈ ವಾಯುವು,ಸೃಷ್ಟಿಕಾರ್ಯ್ಯಕ್ಕಾಗಿ ದೈವಸಂಕಲ್ಪ ದಿಂದ ಪ್ರೇರಿಸಲ್ಪಟ್ಟು, ಆದರಿಂದ, ರೂಪವೆಂಬ ತನ್ಮಾತ್ರವು ಹುಟ್ಟಿ, ಆ ದರಿಂದ ತೇಜಸ್ಸೆಂಬ ಭೂತವು ಏರ್ಪಟ್ಟಿತು. ಆ ರೂಪವನ್ನು ತಿಳಿಸತಕ್ಕು ದು ಚಕ್ಷುರಿಂದ್ರಿಯವು. ರೂಪಗುಣವುಳ್ಳ ತೇಜಸ್ಸು ಮೊದಲಾದ ಭೂತಗ ಳನ್ನು ಇತರಭೂತಗಳಿಂದ ಬೇರೆಯಾಗಿ ತಿಳಿಸುವುದೂ, ದ್ರವ್ಯವನ್ನಾಶ್ರಯಿ ಸಿರುವುದೂ,ಒಂದು ವ್ಯಕ್ತಿಯಿಂದ ಮತ್ತೊಂದು ವ್ಯಕ್ತಿಯನ್ನು ಬೇರೆಯಾ ಗಿ ಕಾಣಿಸುವುದೂ, ತೇಜಸ್ಸಿಗೆ ಅಸಾಧಾರಣಗುಣವೆನಿಸುವುದೂ, ರೂಪ ತನ್ಮಾತ್ರದ ಲಕ್ಷಣಗಳು. ಬೆಳಗುವುದು, ಕಾವೇರಿಸುವುದು,ಹಸಿವು ಬಾಯಾ ರಿಕೆಗಳಮೂಲಕವಾಗಿ ಅನ್ನಪಾನಗಳನ್ನು ಗ್ರಹಿಸುವಹಾಗೆ ಮಾಡುವುದು, ಶೈ ತ್ಯವನ್ನು ನೀಗಿಸಿಬಣಗಿಸುವುದು,ಇವೆಲ್ಲವೂ ತೇಜಸ್ಸಿನ ಲಕ್ಷಣಗಳು.ರೂಪಗು ಣವುಳ್ಳತೇಜಸ್ಸು ದೈವಪ್ರೇರಣೆಯಿಂದ ವಿಕಾರವನ್ನು ಹೊಂದಿ,ರಸತನ್ಮಾತ್ರ ವನ್ನು ಹುಟ್ಟಿಸಿತು. ಅದರಿಂದ ಜಲವೆಂಬ ಮಹಾಭೂತವು ಏರ್ಪಟ್ಟಿತು. ಈ ರಸವನ್ನು ಗ್ರಹಿಸತಕ್ಕುದು ಜಿಹ್ವೇಂದ್ರಿಯವು. ಈರಸವೆಂಬುದು ಒಂದೇ ಆ ಗಿದ್ದರೂ, ಇತರದ್ರವ್ಯಗಳ ಸಂಬಂಧವಿಂದ,ಕಹಿ,ಸೀ ಒಗಚು,ಕಾರ,ಉಪ್ಪು, ಹುಳಿ, ಎಂಬಿವೇ ಮೊದಲಾದ ನಾನಾಭೇದವನ್ನು ಹೊಂದುವುದು. ಇತರ ದ್ರವ್ಯಗಳನ್ನು ನೆನೆಸುವುದು, ಅಂಟಿಸುವುದು, ತೃಪ್ತಿಯೆನ್ನುಂಟುಮಾಡುವು ದು, ಬದುಕಿಸುವುದು, ಹಸಿವುಬಾಯಾರಿಕೆಗಳ ಶ್ರಮವನ್ನು ನೀಗಿಸುವುದು, ಇತರದ್ರವ್ಯಗಳನ್ನು ಮೃದುವಾಗಿ ಮಾಡುವುದು, ಬಾವಿ ಮೊದಲಾದ ಜಲಾಶ್ರಯಗಳಲ್ಲಿ ಮೇಲೆಮೇಲೆ ಎತ್ತಿದಹಾಗೆಲ್ಲಾ ತಿರುಗಿ ತುಂಬಿ ಕೊಳ್ಳುವುದು, ಇವೆಲ್ಲವೂ ಜಲದ ಕಾರ್ಯ್ಯಗಳು. ಈ ರಸಗುಣವುಳ್ಳ ಜ ಲವು ದೈವಪ್ರೇರಣೆಯಿಂದ ವಿಕಾರಹೊಂದುತ್ತ ಬಂದು, ಗಂಧವೆಂಬ ತನ್ಮಾತ್ರವು ಹುಟ್ಟಿ, ಆದರಿಂದ ಭೂಮಿಯು ಏರ್ಪಟ್ಟಿತು. ಗಂಧ ಗುಣವನ್ನು ತಿಳಿಸತಕ್ಕುದು ಘ್ರಾಣೇಂದ್ರಿಯವು. ಈ ಗಂಧವೆಂಬುದೂ ರಸದಂತೆ, ಒಂದೇ ಆಗಿದ್ದರೂ, ತನಗಾಶ್ರಯವಾದ ದ್ರವ್ಯಗಳ ಭೇದವ ನ್ನನುಸರಿಸಿ, ವಿಶ್ರಗಂಧವೆಂದೂ, ದುರ್ಗಂಧವೆಂದೂ, ಸುಗಂಧವೆಂದೂ

ಕಮಲಾದಿಗಳಲ್ಲಿರುವಂತೆ ಮೃದುಗಂಧವೆಂದೂ, ಈರುಳ್ಳಿ ಮುಂತಾದುವು ಗಳಲ್ಲಿರುವಂತೆ ಕ್ರೂರಗಂಧ (ಘಾಟು) ವೆಂದೂ, ಹುಳಿವಾಸನೆಯೆಂದೂ, ನಾನಾಭೇದವನ್ನು ಹೊಂದುವುದು. ಘಟಪಟಾದಿದ್ರವ್ಯಗಳೆನ್ನು ಹುಟ್ಟಿಸುವುದು, ಚರಾಚರಗಳಿಗೆ ಆಧಾರವಾಗಿರುವುದು, ಧಾನ್ಯಾದಿಗಳನ್ನು ಹುಟ್ಟಿಸುವುದು, ಸ್ಥಾನಭೇದದಿಂದ ವಸ್ತುಗುಣಗಳಲ್ಲಿಯೂ, ಪ್ರಾಣಿಗಳ ಆಕಾರದಲ್ಲಿಯೂ ವಿಶೇಷವನ್ನು ಕಾಣಿಸುವುದು, ಇವೆಲ್ಲವೂ ಭೂಮಿಯ ಕಾರ್ಯಗಳು. ಅಮ್ಮಾ! ಇಂದ್ರಿಯಲಕ್ಷಣಗಳೆಲ್ಲವನ್ನೂ ಸಂಗ್ರಹಿಸಿ ತಿಳಿಸುವೆನು ಕೇಳು! ಆಕಾಶಗುಣವಾದ ಶಬ್ದವನ್ನು ಗ್ರಹಿಸತಕ್ಕುದು ಶ್ರೋತ್ರೇಂದ್ರಿಯವು. ವಾಯುಗುಣವಾದ ಸ್ಪರ್ಶವನ್ನು ಗ್ರಹಿಸತಕ್ಕುದು ತ್ವಗಿಂದ್ರಿಯವು. ತೇಜೋಗುಣವಾದ ರೂಪವನ್ನು ಗ್ರಹಿಸತಕ್ಕುದು ಚಕ್ಷುರಿಂದ್ರಿಯವು. ಜಲಗುಣವಾದ ರಸವನ್ನು ಗ್ರಹಿಸತಕ್ಕುದು ರಸನೇಂದ್ರಿಯವು. ಭೂಗುಣವಾದ ಗಂಧವನ್ನು ಗ್ರಹಿಸತಕ್ಕುದು ಘ್ರಾಣೇಂದ್ರಿಯವು. ಹಿಂದಿನ ಭೂತದಲ್ಲಿರುವ ಶಬ್ದಾದಿಗುಣಗಳಲ್ಲಿ ಕೆಲಕೆಲವು ಭಾಗಗಳು, ಅದರಿಂದ ಹುಟ್ಟುವ ಮುಂದಿನ ಭೂತಗಳಲ್ಲಿಯೂ ಸಂಬಂಧಿಸಿ ಬರುವುವು. ಆದುದರಿಂದ ಆಕಾಶವೇ ಮೊದಲಾದ ನಾಲ್ಕುಭೂತಗಳ ಗುಣಗಳೂ,ಭೂಮಿಯಲ್ಲಿ ಸೇರಿರುವುವು. ಹೀಗೆ ಮಹತ್ತು ಮೊದಲಾಗಿ ಭೂಮಿಯವರೆಗೆ ಕ್ರಮಕ್ರಮವಾಗಿ ಹುಟ್ಟಿ ಬರುವ ಏಳುತತ್ವಗಳೂ (ಎಂದರೆ ಮಹತ್ತೆಂಬುದೊಂದು, ಇಂದ್ರಿಯಸಹಿತವಾದ ಅಹಂಕಾರವೆಂಬುದೊಂದು, ಪಂಚತನ್ಮಾತ್ರಗಳೊಡಗೂಡಿದ ಐದು ಮಹಾಭೂತಗಳು ಇವೆಲ್ಲವೂ) ಒಂದಕ್ಕೊಂದು ಸಂಬಂಧವಿಲ್ಲದೆ ಬೇರೆಬೇರೆಯಾಗಿ,ಮುಂದಿನ ಸೃಷ್ಟಿಯನ್ನು ಮಾಡುವುದಕ್ಕೆ ಅಸಮರ್ಥಗಳಾಗಿದ್ದಾಗ, ಭಗವಂತನು ಕಾಲವನ್ನೂ,ಅದೃಷ್ಟವನ್ನೂ, ಸತ್ವರಜಸ್ತಮಸ್ಸುಗಳೆಂಬ ಮೂರುಗುಣಗಳನ್ನೂ ;ಮುಂದಿಟ್ಟುಕೊಂಡು, ಆ ಒಂದೊಂದು ತತ್ವದಲ್ಲಿಯೂ ಪ್ರವೇಶಿಸಿದನು. ಹೀಗೆ ಭಗವಂತನು ಆ ವುಗಳೊಳಗೆ ಪ್ರವೇಶಿಸಿ, ತನ್ನ ಸಂಕಲ್ಪದಿಂದ ಪ್ರೇರಿಸಿದೊಡನೆ, ಆ ಏಳು ತತ್ವಗಳೂ, ಒಂದಕ್ಕೊಂದಕ್ಕೆ ಪರಸ್ಪರಭೇದವೇ ತಿಳಿಯದಂತೆಯೂ, ತಿರುಗಿ ಬಿಚ್ಚಿಡುವುದಕ್ಕೆ ಸಾಧ್ಯವಿಲ್ಲದಂತೆಯೂ ಒಂದಾಗಿ ಸೇರಿಕೊಂಡುವು. ಹೀಗೆ

ಒಂದಾಗಿ ಸೇರಿದ ತತ್ವಸಮುದಾಯದಿಂದ,ಅಚೇತನವಾದ ಒಂದು ಅಂಡವು ಏರ್ಪಟ್ಟಿತು.ಈ ಅಂಡವೇ ಸಮಷ್ಟಿಪುರುಷನೆನಿಸಿದ ಬ್ರಹ್ಮದೇವನ ಉತ್ಪತ್ತಿಗೆ ಕಾರಣವಾಯಿತು. ಈ ಅಂಡವನ್ನೇ ವಿಶೇಷವೆಂಬ ಬೇರೆ ಹೆಸರಿನಿಂದಲೂ ಕರೆಯುವರು. ಈ ಅಂಡವೆಂಬುದು, ಹೊರಗೆ ಪ್ರಕೃತಿಯಿಂದ ಮುಚ್ಚಲ್ಪಟ್ಟು, ಒಂದಕ್ಕಿಂತಲೂ ಮತ್ತೊಂದು ಹತ್ತುಪಾಲು ದೊಡ್ಡದಾದ ನೀರು ಮೊದಲಾದ ಎಲ್ಲಾ ತತ್ವಗಳ ಸಮುದಾಯದಿಂದ ಆವೃತವಾಗಿದ್ದಿತು. ದೇವಮನುಷ್ಯಾದಿಭೇದಗಳುಳ್ಳ ಸಮಸ್ತ ಜಗತ್ತನ್ನೂ ಒಳಕೊಂಡಿದ್ದ ಈ ಅಂಡವೂ ಆ ಭಗವಂತನಿಗೆ ಶರೀರವಾಗಿಯೇ ಇದ್ದಿತು. ಹೀಗೆ ಮಹತ್ತು ಮೊದಲಾದ ತತ್ವಸಮೂಹಗಳಿಂದ ಏರ್ಪಟ್ಟು, ಭಗವಂತನಿಗೆ ಶರೀರವಾಗಿ, ಸುವರ್ಣದಂತೆ ಕಾಂತಿವಿಶಿಷ್ಟವಾಗಿದ್ದ ಈ ಅಂಡವು, ಬಹುಕಾಲದವರೆಗೆ ಅವರಣಜಲಮಧ್ಯದಲ್ಲಿ ಮುಳುಗಿದ್ದಿತು.ಕೊನೆಗೆ ಆ ಅಂಡದಲ್ಲಿ ಅನುಪ್ರವೇಶಮಾಡಿದ್ದ ಅನಿರುದ್ಧರೂಪಿಯಾದ ಭಗವಂತನು, ಸೃಷ್ಟಿಕಾರ್ಯಕ್ಕಾಗಿ ಸಂಕಲ್ಪಿಸಿ, ಅದರಿಂದ ಮೇಲಕ್ಕೆದ್ದು, ಸಮಷ್ಟಿಪುರುಷನೆನಿಸಿದ ಬ್ರಹ್ಮಶರೀರದಲ್ಲಿ ಪ್ರವೇಶಿಸಿ,ಆ ಶರೀರದಲ್ಲಿ ಒಟ್ಟಾಗಿ ಕೂಡಿದ್ದ ಇಂದ್ರಿಯಸಮೂಹಗಳನ್ನು ಅನೇಕವಿಧವಾಗಿ ಬೇರ್ಪಡಿಸಿಡುವುದಕ್ಕೆ ತೊಡಗಿದನು. ಮೊದಲು ಈ ಬ್ರಹ್ಮಶರೀರದಿಂದ ಮುಖವೆಂಬ ಅವಯವವು ಹೊರಪಟ್ಟಿತು. (ಎಂದರೆ,ಸಮಷ್ಟಿಪುರುಷನೆನಿಸಿದ ಈ ಬ್ರಹ್ಮಶರೀರದ ಮುಖವೆಂಬ ಭಾಗದಿಂದ, ದೇವತಾಭಿಭೂತಕಗಳಾಗಿಂದ್ರಿಯಸ್ಥಾನವಾದ ಮುಖವೆಂಬ ಅವಯವಗಳು ಏರ್ಪಟ್ಟವು.)ಈ ವ್ಯಷ್ಟಿಮುಖದಿಂದ ವಾಗಿಂದ್ರಿಯವು ಹುಟ್ಟಿತು,ಅದರಿಂದ ಆ ಇಂದ್ರಿಯಸ್ಥಾನದೇವತೆಯಾದ ಅಗ್ನಿಯು ಹುಟ್ಟಿದನು. ಆ ಮೇಲೆ ಆ ಸಮಷ್ಟಿಪುರುಷನ ಮೂಗಿನ ಸ್ಥಾನದಿಂದ ವ್ಯಷ್ಟಿದೇವತೆಗಳ ಮೂಗಿನಸ್ಥಾನವು ಬೇರ್ಪಟ್ಟು, ಅದರಿಂದ ಘ್ರಾಣೇಂದ್ರಿಯವು ಹುಟ್ಟಿತು. ಆ ಇಂದ್ರಿಯದಿಂದ ಅಧಿಷ್ಠಿತದೇವತೆಯಾದ ವಾಯುವು ಜನಿಸಿದನು. ಹಾಗೆಯೇ ಸಮಷ್ಟಿಪುರುಷನ ನೇತ್ರಗೋಳದಿಂದ ವ್ಯಷ್ಟಿನೇತ್ರಗೋಳವೂ, ಅದರಿಂದ ಅದಧ್ಯಧಿಷ್ಠಾನದೇವತೆಯಾದ ಸೂರ್ಯನೂ, ಆಮೇಲೆ ಸಮಷ್ಟಿಪುರುಷನ ಕರ್ಣದಿಂದ ವ್ಯಷ್ಟಿಕರ್ಣಗಳೂ, ಅದರಲ್ಲಿ ಕರ್ಣೇಂದ್ರಿಯವೂ, ಅದ

ರಿಂದ ಅದಕ್ಕಧಿದೇವತೆಗಳಾದ ದಿಕ್ಕುಗಳೂ, ಆ ವಿರಾಟ್ಪುರುಷನ ಚರ್ಮಸ್ಥಾನದಿಂದ ವ್ಯಷ್ಟಿಚರ್ಮಗಳೂ, ಅದರಲ್ಲಿ ತ್ವಗಿಂದ್ರಿಯವೂ, ಅದರಿಂದ ಆ ಇಂದ್ರಿಯಾಧಿದೇವತೆಗಳಾದ ಓಷಧಿಗಳೂ ಉಂಟಾದುವು. ಆಮೇಲೆ ಸಮಷ್ಟಿಪುರುಷನ ಪುರುಷಲಿಂಗಸ್ಥಾನದಿಂದ ಪುರುಷಲಿಂಗವೂ, ಅದರಲ್ಲಿ ಉಪಸ್ಥೇಂದ್ರಿಯವೂ, ಅದರಿಂದ ಆ ಇಂದ್ರಿಯಾಧಿದೇವತೆಯಾದ ಜಲವೂ ಏರ್ಪಟ್ಟಿತು. ಆಮೇಲೆ ಸಮಷ್ಟಿಪುರುಷನ ಗುಹ್ಯಸ್ಥಾನದಿಂದ ವ್ಯಷ್ಟಿಪುರುಷರ ಗುದಸ್ಥಾನವೂ, ಅದರಲ್ಲಿ ಪಾಯುವೆಂಬ ಇಂದ್ರಿಯವೂ ಏರ್ಪಟ್ಟಿತು. ಆ ಇಂದ್ರಿಯದಿಂದ ಅದಕ್ಕಧಿದೇವತೆಯಾದ ಮೃತ್ಯುವು ಉತ್ಪನ್ನನಾದನು. ಆಮೇಲೆ ಸಮಷ್ಟಿಪುರುಷನ ಹಸ್ತಸ್ಥಾನದಿಂದ ವ್ಯಷ್ಟಿಹಸ್ತಗಳೂ, ಅದರಲ್ಲಿ ಬಲವೆಂಬ ಹೆಸರುಳ್ಳ ಹಸ್ತೇಂದ್ರಿಯವೂ ಏರ್ಪಟ್ಟು, ಅದರಿಂದ ಇಂದ್ರನು ಹುಟ್ಟಿ ಅದಕ್ಕೆ ಅಧಿಷ್ಠಾನದೇವತೆಯಾದನು. ಆಮೇಲೆ ಪಾದಸ್ಥಾನದಲ್ಲಿ ಪಾದಗಳು ಹುಟ್ಟಿ, ಅದರಲ್ಲಿ ಗತಿಯೆಂಬ ಪಾದೇಂದ್ರಿಯವು ಜನಿಸಿತು. ಆ ಇಂದ್ರಿಯದಿಂದ ಉಪೇಂದ್ರನು ಹುಟ್ಟಿ, ಅದಕ್ಕೆ ಅಧಿಷ್ಠಾನದೇವತೆಯಾದನು. ಆಮೇಲೆ ಬ್ರಹ್ಮನ ನಾಡೀಸ್ಥಾನಗಳಿಂದ ವ್ಯಷ್ಟಿನಾಡಿಗಳು ಹುಟ್ಟಿ, ಅದರಲ್ಲಿ ರಕ್ತವೂ. ಆ ರಕ್ತದಿಂದ ಅದಕ್ಕಧಿಷ್ಠಾನದೇವತೆಗಳಾದ ನದಿಗಳೂ ಉತ್ಪನ್ನವಾದುವು. ಅದರಿಂದಾಜೆಗೆ ಉದರವೆಂಬ ಸ್ಥಾನದಿಂದ ವ್ಯಷ್ಟಿಭೂತಗಳ ಉದರಸ್ಥಾನವೂ, ಅದರಲ್ಲಿ ಹಸಿವುಬಾಯಾರಿಕೆಗಳೂ ಉಂಟಾಗಿ, ಅವುಗಳಿಂದ ಅದಕ್ಕಧಿಷ್ಠಾನದೇವತೆಯಾದ ಸಮುದ್ರವು ಹುಟ್ಟಿತು. ಆಮೇಲೆ ವಿರಾಟ್ಪುರುಷನ ಹೃದಯಸ್ಥಾನದಲ್ಲಿ ನೈಋತಿಲೆಯ ಆಕಾರಕ್ಕೆ ಹೃದಯಸ್ಥಾನವು ಏರ್ಪಟ್ಟಿತು. ಅದರಿಂದ ಮನಸ್ಸೆಂಬ ಇಂದ್ರಿಯವು ಹುಟ್ಟಿ, ಅದಕ್ಕೆ ಚಂದ್ರನು ಅಧಿಷ್ಠಾನದೇವತೆಯಾಗಿ ಜನಿಸಿದನು. ಆ ಹೃದಯಸ್ಥಾನದಿಂದಲೇ ಬುದ್ಧಿರೂಪವಾದ ಇಂದ್ರಿಯವು ಏರ್ಪಟ್ಟು, ಅದಕ್ಕೆ ಬ್ರಹ್ಮನು ಅಧಿಪತಿಯಾದನು. ಅದರಿಂದಾಜೆಗೆ ಅದೇ ಹೃದಯಸ್ಥಾನದಿಂದ ಅಹಂಕಾರವು ಹುಟ್ಟಿ ಅದಕ್ಕೆ ರುದ್ರನು ಅಧಿದೇವತೆಯಾದನು. ಅದೇ ಹೃದಯದಿಂದ ಚಿತ್ತವೆಂಬ ಇಂದ್ರಿಯವು ಏರ್ಪಟ್ಟು, ಅದರಲ್ಲಿ ಜ್ಞೈತ್ಯನೆಂಬ ಕ್ಷೇತ್ರಜ್ಞನು ಹುಟ್ಟಿ, ಅದಕ್ಕೆ ಅಧಿದೇವತೆಯಾಗಿನಿಂತನು. ಮೊದಲು ವಿರಾಟ್ಪುರುಷನಿಂದ

ಇಂದ್ರಿಯಸಮೂಹಗಳೂ, ಅವುಗಳಿಗೆ ಆಯಾ ಅಧಿಷ್ಠಾನದೇವತೆಗಳೂ ಹುಟ್ಟಿದೊಡನೆ, ಆಯಾದೇವತೆಗಳಿಂದಧಿಷ್ಠಿತಗಳಾದ ಇಂದ್ರಿಯಗಳೆಲ್ಲವೂ ಆಯಾಶರೀರಗಳಿಗೆ ಕಾರ್ಯಸಾಮರ್ಥವನ್ನುಂಟುಮಾಡುವುದಕ್ಕಾಗಿ ಪ್ರೇರಿಸಿದುವು. ಅಗ್ನಿಯು ವಾಗಿಂದ್ರಿಯದೊಡನೆ ಮುಖದಲ್ಲಿ ಪ್ರವೇಶಿಸಿ, ಬಹಳವಾಗಿ ಪ್ರೇರಿಸುತಿದ್ದಾಗಲೂ, ವ್ಯಷ್ಟಿಶರೀರಗಳು ಕಾರ್ಯಸಮರ್ಥವಾಗಲಿಲ್ಲ. ವಾಯುದೇವತೆಯು ಘ್ರಾಣೇಂದ್ರಿಯದೊಡನೆ ಮೂಗಿನಲ್ಲಿ ಪ್ರವೇಶಿಸಿದಾಗಲೂ, ಆ ಶರೀರಕ್ಕೆ ಕಾರ್ಯಸಾಮರ್ಥ್ಯವುಂಟಾಗಲಿಲ್ಲ. ಸೂರ್ಯನು ಚಕ್ಷುರಿಂದ್ರಿಯದೊಡನೆ ನೇತ್ರಸ್ಥಾನವನ್ನು ಪ್ರವೇಶಿಸಿದಾಗಲೂ ಆ ಶರೀರಗಳಿಗೆ ಕಾರ್ಯಶಕ್ತಿಯುಂಟಾಗಲಿಲ್ಲ. ದಿಙ್ಮೀವತೆಗಳು ಕರ್ಣೇಂದ್ರಿಯದೊಡನೆ ಕಿವಿಯಲ್ಲಿ ಪ್ರವೇಶಿಸಿದಾಗಲೂ ಶರೀರಕ್ಕೆ ಕಾರ್ಯಸಾಮರ್ಥ್ಯವುಂಟಾಗಲಿಲ್ಲ. ಓಷಧಿದೇವತೆಗಳು ತ್ವಗಿಂದ್ರಿಯದೊಡನೆ ಚರ್ಮದಲ್ಲಿ ಪ್ರವೇಶಿಸಿದಾಗಲೂ ಆ ಶರೀರಕ್ಕೆ ಕಾರ್ಯಸಾಮರ್ಥ್ಯವುಂಟಾಗಲಿಲ್ಲ! ಹೀಗೆಯೇ ಜಲದೇವತೆಗಳು ಉಪಸ್ಥೇಂದ್ರಿಯದೊಡನೆ ಪುರುಷಲಿಂಗದಲ್ಲಿಯೂ, ಮೃತ್ಯುದೇವತೆಯು ಪಾಯುವೆಂಬ ಇಂದ್ರಿಯದೊಡನೆ ಗುದಸ್ಥಾನದಲ್ಲಿಯೂ, ವಿಷ್ಣುದೇವತೆಯು ಪಾದೇಂದ್ರಿಯದೊಡನೆ ಕಾಲುಗಳಲ್ಲಿಯೂ, ಇಂದ್ರನು ಬಲವೆಂಬ ಇಂದ್ರಿಯದೊಡನೆ ಹಸ್ತಗಳಲ್ಲಿಯೂ, ಸಮುದ್ರದೇವತೆಯು ಹಸಿವುಬಾಯಾರಿಕೆಗಳೊಡನೆ ಜಠರದಲ್ಲಿಯೂ, ನದಿಗಳು ರಕ್ತದೊಡನೆ ನಾಡಿಗಳಲ್ಲಿಯೂ ಪ್ರವೇಶಿಸಿ, ಬಲವಾಗಿ ಪ್ರೇರಿಸುತಿದ್ದಾಗಲೂ ಆಶರೀರವನ್ನೆಬ್ಬಿಸುವುದಕ್ಕೆ ಸಮರ್ಥರಾಗಲಿಲ್ಲ. ಅದರಂತೆಯೇ ಚಂದ್ರನು ಮನಸ್ಸೆಂಬ ಇಂದ್ರಿಯದೊಡನೆಯೂ, ಬ್ರಹ್ಮನು ಬುದ್ಧೀಂದ್ರಿಯದೊಡನೆಯೂ, ರುದ್ರನು ಅಹಂಕಾರದೊಡನೆಯೂ ಹೃದಯದಲ್ಲಿ ಪ್ರವೇಶಿಸಿದಾಗಲೂ ಆ ಶರೀರವು ಕಾರ್ಯಸಮರ್ಥವಾಗಲಿಲ್ಲ. ಕೊನೆಗೆ ಜ್ಯೈತ್ಯನೆಂದು ಕರೆಯಲ್ಪಡುವ ಕ್ಷೇತ್ರಜ್ಞನು, ಚಿತ್ತೇಂದ್ರಿಯದೊಡನೆ ಯಾವಾಗ ಹೃದಯದಲ್ಲಿ ಪ್ರವೇಶಿಸಿದನೋ, ಆಗಲೇ ಪುರುಷಶರೀರವು ಜಲದಲ್ಲಿದ್ದ ಆ ಬ್ರಹ್ಮಾಂಡವಿಂದ ಮೇಲಕ್ಕೆದ್ದು ಕಾರ್ಯಪ್ರವೃತ್ತಿಯಲ್ಲಿ ಶಕ್ತಿಯನ್ನು ಹೊಂದಿತು. ಅಮ್ಮಾ! ಸಮಸ್ತೇಂದ್ರಿಯಗಳೂ, ತಮ್ಮತಮ್ಮ ಅಧಿಷ್ಠಾನದೇವತೆಗಳೊಡನೆ, ಶರೀರದ ಆಯಾ ಇಂದ್ರಿಯಸ್ಥಾನಗಳಲ್ಲಿ ನೆಲೆ

ಗೊಂಡಿದ್ದರೂ, ಕ್ಷೇತ್ರಜ್ಞನೆಂಬ ಜೀವನು, ಜಿತ್ತೇಂದ್ರಿಯದೊಡನೆ ಹೃದಯದಲ್ಲಿ ಪ್ರವೇಶಿಸಿದಹೊರತು, ಯಾವ ಇಂದ್ರಿಯಗಳೂ ಆ ಶರೀರಕ್ಕೆ ಕಾರ್ಯಶಕ್ತಿಯನ್ನುಂಟುಮಾಡಲಾರದೆ ಜೋಡುವಷ್ಟೆ? ಇದರಂತೆಯೇ, ನಿದ್ರೆಮಾಡುತ್ತಿರುವ ಪುರುಷನ ಶರೀರವನ್ನು, ಅದಕ್ಕಭಿಮಾನಿಯಾದ ಜೀವನ ಇಚ್ಛೆಯಿಲ್ಲದಿದ್ದಾಗ, ಅದರೊಳಗಿನ ಪ್ರಾಣಗಳಾಗಲಿ, ಇಂದ್ರಿಯಗಳಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ, ತಮ್ಮ ಶಕ್ತಿಯಿಂದ ಹೇಗೆ ಕೆಲಸಮಾಡಿಸಲಾರವೋ, ಹಾಗೆಯೇ ಅಗ್ನಿ ಮೊದಲಾದ ದೇವತೆಗಳೆಲ್ಲರೂ, ತಮ್ಮ ಇಂದ್ರಿಯಸ್ಥಾನಗಳೊಡನೆ ಶರೀರದಲ್ಲಿ ಪ್ರವೇಶಿಸಿದ್ದರೂ, ಜೀವಾತ್ಮನ ಪ್ರವೇಶವುಂಟಾಗುವವರೆಗೆ, ಆ ಶರೀರಕ್ಕೆ ಕಾರ್ಯಸಾಮರ್ಥ್ಯವನ್ನುಂಟುಮಾಡಲಾರದಿದ್ದರು. ಆದುದರಿಂದ ಕ್ಷೇತ್ರಜ್ಞನೆಂದೂ, ಜೈಕ್ಯನೆಂದೂ, ಪ್ರತ್ಯಗಾತ್ಮನೆಂದೂ, ನಾಮಭೇದಗಳಿಂದ ಕರೆಯಲ್ಪಡುವ ಜೀವನೇ ಶರೀರಗಳಲ್ಲಿ ಪ್ರಮುಖನು. ಇಂದ್ರಿಯಗಳೂ, ಆ ಇಂದ್ರಿಯಾಭಿಮಾನಿದೇವತೆಗಳೂ, ಅವನಿಗೆ ಸಹಾಯಕರೇಹೊರತು ಅವರಿಗೆ ಪ್ರಾಧಾನ್ಯವಿಲ್ಲ. ಆ ಶರೀರಗಳ ಮೂಲಕವಾಗಿ ಸುಖದುಃಖಾದಿಗಳನ್ನು ಅನುಭವಿಸತಕ್ಕವನುಮಾತ್ರ ಜೀವನೇ ಆದುದರಿಂದ, ಅವನು ಭೋಕ್ತೃವೆನಿಸುವನು. ಶುದ್ಧಸ್ವರೂಪನಾದ ಜೀವನು, ಶರೀರ, ಇಂದ್ರಿಯ, ಪ್ರಾಣ, ಬುದ್ಧಿ ಎಂಬವೇ ಮೊದಲಾದ ವಸ್ತುಗಳೆಲ್ಲಕ್ಕಿಂತಲೂ ಬೇರೆಯಿರುವನೆಂಬುದನ್ನು ಈ ವಿಚಾರಗಳಿಂದ ತಿಳಿದು, ಭಕ್ತಿವೈರಾಗ್ಯಗಳಿಂದಲೂ, ಇವನೇ ಬ್ರಹ್ಮಸ್ವರೂಪನೆಂಬ ತತ್ವಜ್ಞಾನದಿಂದಲೂ, ಮನಸ್ಸಿನಲ್ಲಿ ದೃಢಗೊಳಿಸಬೇಕು. ಯೋಗಪರಿಪಕ್ವವಾದ ಬುದ್ಧಿಯಿಂದ ಈ ನಿಶ್ಚಯವನ್ನು ತಿಳಿದಮೇಲೆ, ಆ ಜೀವನಿಗೂ ಅಂತರಾತ್ಮನಾಗಿರುವ ಪರಮಾತ್ಮನನ್ನೂ ಕೂಡ, ಅದೇ ಕರ್ಮ ಜ್ಞಾನ ಭಕ್ತಿಗಳೆಂಬ ಮೂರುಬಗೆಯ ಯೋಗಗಳಿಂದಲೂ ಉಪಾಸನೆಮಾಡುತ್ತಿರಬೇಕು. ಇಲ್ಲಿಗೆ ಇಪ್ಪತ್ತಾರನೆಯ ಅಧ್ಯಾಯವು.

ಕಪಿಲನು ದೇವಹೂತಿಗೆ ಪ್ರಕೃತಿಪುರುಷರ ಸ್ವರೂಪ ಜ್ಞಾನದಿಂದ ಮೋಕ್ಷಪ್ರಾಪ್ತಿಯೆಂಬುದನ್ನು ನಿರೂಪಿಸಿದುದು.

ಅಮ್ಮಾ ! ಕೇಳು ! ಜೀವನು ಹೀಗೆ ಪ್ರಕೃತಿಕಲ್ಪಿತವಾದ ದೇಹದಲ್ಲಿ ಒಳಹೊಕ್ಕಿದ್ದರೂ, ಅವನಿಗೆ ಪ್ರಕೃತಿಯ ಧರ್ಮಗಳೊಂದೂ ಅಂಟಲಾರವು. ಏಕೆಂದರೆ, ಆ ಜೀವನಿಗೆ ದೇವಮನುಷ್ಯಾದಿವಿಕಾರಗಳಾಗಲಿ, ಸತ್ವಾದಿಗುಣಗಳಾಗಲಿ, ಬಾಹ್ಯವ್ಯಾಪಾರಗಳಾಗಲಿ ಯಾವುದೂ ಸಂಬಂಧಿಸುವುದಿಲ್ಲ. ಇದಕ್ಕೊಂದು ದೃಷ್ಟಾಂತವನ್ನು ತೋರಿಸುವೆನು ನೋಡು ! ಸೂರ್ಯಬಿಂಬವು ನೀರಿನಲ್ಲಿ ಪ್ರತಿಫಲಿಸುವಾಗ, ಆ ನೀರಿನ ಅಲೆಯಾಟದಿಂದ ಆ ಬಿಂಬವೂ ಅಡುವಂತೆ ತೋರಿದರೂ, ಅದು ಕೇವಲಭ್ರಾಂತಿಯೇ ಹೊರತು, ವಾಸ್ತವದಲ್ಲಿ ಜಲದಲ್ಲಿ ನಡೆಯುವ ವಿಕಾರಕ್ಕಾಗಲಿ, ಅದರ ಕಶ್ಮಲಕ್ಕಾಗಲಿ ಆ ಸೂರ್ಯಬಿಂಬವು ಈಡಾಗತಕ್ಕುದಲ್ಲ. ಅದರಂತೆಯೇ ಜೀವನು ಪ್ರಕೃತಿಯೊಡನೆ ಸೇರಿದ್ದರೂ, ಅದರ ಕಾರ್ಯಗಳಿಗೆ ತಾನು ಭಾಗಿಯಾಗಲಾರನು. ಮತ್ತು ಸಣ್ಣಕುಡಿಕೆ, ಹರವಿ, ಕೊಡ, ಮುಂತಾದ ಪಾತ್ರೆಗಳಲ್ಲಿ ಸೇರಿದ ಮಾತ್ರಕ್ಕೆ ಅವುಗಳಿಂದುಂಟಾಗುವ ಸಣ್ಣ ದೊಡ್ಡ ಆಕೃತಿಗಳು ಆಕಾಶಕ್ಕೆ ಹೇಗೆ ಸಂಬಂಧಿಸುವುದಿಲ್ಲವೋ, ಹಾಗೆಯೇ ಜೀವನಿಗೂ ಪ್ರಕೃತಿಯಿಂದುಂಟಾಗುವ ಆಕಾರವ್ಯತ್ಯಾಸವೂ ಅಂಟಲಾರವು. ''ಆದರೆ ಜೀವನಿಗೆ ದೇವಮನುಷ್ಯಾದಿಶರೀರಗಳೊಡನೆ ಸಂಬಂಧವೂ, ಕಾರ್ಯಗಳಲ್ಲಿ ಕರ್ತೃತ್ವವೂ, ಸುಖದುಃಖಾನುಭವವೂ ಹೇಗೆ ಸಂಭವಿಸುವು"ವೆಂದು ಕೇಳುವೆಯಾ ? ಜೀವಾತ್ಮನ ಸ್ವಭಾವವೇ ಇದಕ್ಕೆ ಕಾರಣವು. ಜೀವಾತ್ಮನು ಸಹಜವಾಗಿ ಈ ದೋಷಗಳಿಲ್ಲದವನು. ಆದರೆ ಅವನು ''ನಾನು ದೇವತೆ, ನಾನು ಮನುಷ್ಯನು, ನಾನು ಸುಖಿಸುತ್ತಿರುವೆನು. ನಾನು ದುಃಖಿಸುತ್ತಿರುವೆನು" ಎಂದು ತನ್ನ ದೇಹವನ್ನೇ ಆತ್ಮವೆಂದು ತಿಳಿಯುವ ಜ್ಞಾನವೆಲ್ಲವೂ, ಭ್ರಾಂತಿಯೇಹೊರತು ನಿಜವಲ್ಲ. ಜೀವನು ಸ್ವರೂಪದಲ್ಲಿಯೂ, ಸ್ವಭಾವದಲ್ಲಿಯೂ ಪ್ರಕೃತಿಗಿಂತಲೂ ಬೇರ್ಪಟ್ಟವನಾಗಿದ್ದರೂ, ಆತ್ಮವಲ್ಲದ ದೇಹವನ್ನು ಆತ್ಮವೆಂದು ನೆನೆಸತಕ್ಕ ಈ ಅಹಂಕಾರದಿಂದ, ತನ್ನ ಸ್ವರೂಪವನ್ನು ಮರೆತು, ಪ್ರಕೃತಿಯ ಗುಣಗಳಾ

ದ ಶಬ್ದಾದಿವಿಷಯಗಳಲ್ಲಿ ಆಶೆಪಡುವನು. ಮತ್ತು ''ನಾನೇ ಇದನ್ನು ಮಾಡುವೆನು'' ಎಂದು, ಕಾರ್ಯದಲ್ಲಿ ತನ್ನನ್ನು ಸ್ವತಂತ್ರನಂತೆಯೂ ನೆನೆಸಿಕೊಳ್ಳುವನು. ಮೇಲೆ ಹೇಳಿದ ಅಹಂಕಾರದಿಂದಲೂ, ತಾನೇ ಕರ್ತನೆಂದು ಭಾವಿಸುವ ಅಭಿಮಾನದಿಂದಲೂ ಸಂಸಾರಕ್ಕೆ ಸಿಕ್ಕಿ ಬೀಳುವನು. ಎಂದರೆ ಈ ಶರೀರಸಂಬಂಧವೇ ಸಂಸಾರವೆಂದು ಹೇಳಲ್ಪಡುವುದು. ಹೀಗೆ ಜೀವನು ಕರ್ಮಗಳಿಗೆ ಒಳಪಟ್ಟು, ಆ ಕರ್ಮಾರ್ಥೀನಗಳಾದ ಸುಖದುಃಖಗಳಿಗೂ ಭಾಗಿಯಾಗಿ, ಅದರಲ್ಲಿ ಕೇವಲಸುಖವನ್ನೇ ಅನುಭವಿಸುವುದಕ್ಕೂ ಸಾಧ್ಯವಿಲ್ಲವೆ ಹೆಚ್ಚಾಗಿ ದುಃಖವನ್ನೇ ಅನುಭವಿಸುವನು. ಪ್ರಕೃತಿಸಂಬಂಧದಿಂದ ತನಗೆ ಪ್ರಾಪ್ತವಾದ ಪುಣ್ಯಪಾಪಕರ್ಮಗಳ ಮೂಲಕವಾಗಿ, ಉತ್ತಮಾಧಮಮಧ್ಯಮಗಳೆಂಬ ಮೂರುಬಗೆಯಾದ ದೇವಮನುಷ್ಯತಿರ್ಯಗ್ಜನ್ಮಗಳಲ್ಲಿಯೂ ಹುಟ್ಟುವನು. ಅಮ್ಮಾ! ಇಂತಹ ಶರೀರದಲ್ಲಿ ಪ್ರವೇಶಿಸುವುದರಿಂದ ಜೀವನಿಗುಂಟಾಗುವ ಅನರ್ಥಗಳೇನೆಂದು ಕೇಳುವೆಯಾ ? ಈ ದೇವಮನುಷ್ಯಾದಿಶರೀರಗಳು ಜೀವನಿಗೆ ಸಹಜವಾಗಿ ಏರ್ಪಟ್ಟವುಗಳಲ್ಲವಾದ್ದರೂ, ಅವನು ಆ ಶರೀರಸುಖಕ್ಕಾಗಿ ಶಬ್ದಾದಿವಿಷಯಗಳನ್ನು ಚಿಂತಿಸಿಕೊಂಡಿರುವವರೆಗೆ, ಸಂಸಾರದ ಕಟ್ಟು ಬಿಟ್ಟುಹೋಗಲಾರದು. ಸಂಸಾರವೆಂಬುದೇ ದೊಡ್ಡ ಅನರ್ಥವಾದುದರಿಂದ, ಅದನ್ನು ಬಿಡಿಸಿಕೊಳ್ಳಬೇಕಾದರೆ, ವಿಷಯಾಸಕ್ತಿಯಿಲ್ಲದ ಹಾಗೆ ಮನಸ್ಸನ್ನು ತಡೆಯಿಡಬೇಕಾದುದು ಮೊದಲನೆಯ ಕೆಲಸವು. ಆತ್ಮನಿಗೆ ಸ್ವಪ್ನದಲ್ಲಿ ಅನುಭವಿಸುವ ಶರೀರಗಳು ಸಹಜವಾಗಿ ಏರ್ಪಟ್ಟ ಆಕಾರಗಳೆಲ್ಲವಾದ್ದರೂ, ಅದೇ ಸ್ವಪ್ನದಲ್ಲಿ ಸುಳ್ಳುಸುಳ್ಳಾಗಿಕಾಣುವ ವಿಷಯಾನುಭವದ ಮೂಲಕವಾಗಿ ಸುಖದುಃಖರೂಪನಾದ ಅನರ್ಥಗಳಿಗೂ ಹೇಗೆ ಕಾರಣವಾಗುವುವೋ, ಹಾಗೆಯೇ ಎಚ್ಚರಗೊಂಡಿರುವಾಗಲೂ, ಜೀವನಿಗೆ ಶರೀರವೆಂಬುದು ಶಬ್ದಾದಿವಿಷಯಗಳಲ್ಲಿ ಅಪೇಕ್ಷೆಯನ್ನು ಹುಟ್ಟಿಸಿ, ಆ ಮೂಲಕವಾಗಿ ಅನರ್ಥಹೇತುವಾದ ಸಂಸಾರಬಂಧಕ್ಕೂ ಕಾರಣವಾಗುವುದು. ಆದುದರಿಂದ ಮೊದಲು ವಿಷಯಚಿಂತೆಯಿಂದ ಮನಸ್ಸನ್ನು ತಡೆಯಿಡಬೇಕು. ವಿವೇಕಿಯಾದವನು, ಯಾವ ವಿಧದಿಂದಲೂ ಕದಲದ ವೈರಾಗ್ಯದಿಂದಲೂ, ಭಕ್ತಿಯೋಗದಿಂದಲೂ, ಮೆಲ್ಲಮೆಲ್ಲಗೆ ಮನಸ್ಸನ್ನು ವಶಪಡಿಸಿಕೊಂಡು, ಶ

ಬ್ಧಾದಿವಿಷಯಗಳಲ್ಲಿ ಪ್ರವರ್ತಿಸದಹಾಗೆ ತಡೆದಿಟ್ಟರೆ, ತನ್ನಷ್ಟಕ್ಕೆ ತಾನೇ ಸಂಸಾರವೆಂಬ ಕಟ್ಟಿನಿಂದ ಬಿಡುಗಡೆಯನ್ನು ಹೊಂದುವನು. ಆ ಸಂಸಾರಬಂಧವನ್ನು ತಪ್ಪಿಸಿಕೊಳ್ಳುವುದೇ ಮೋಕ್ಷವು. ಅಮ್ಮಾ ! ಈ ಭಕ್ತಿಯೋಗವನ್ನು ಸಾಧಿಸುವುದಕ್ಕೆ ಬೇಕಾದ ಕಾರ್ಯಗಳು ಅನೇಕ ವಿಧವಾಗಿರುವುವು. ಮನಸ್ಸನ್ನು ಬೇರೆವಿಷಯಗಳಿಗೆ ಪ್ರವರ್ತಿಸದಂತೆ ತಡೆಯುವುದರಲ್ಲಿ ಶ್ರದ್ಧೆಯುಳ್ಳವನಾಗಿ, ಭಕ್ತಿಯೋಗಕ್ಕೆ ಅಂಗಗಳಾದ ಶಮದಮಾದಿಗುಣಗಳಿಂದಲೂ, ಸರ್ವೇಶ್ವರನಾದ ನಾನೇ ತಂದೆ, ತಾಯಿ, ಮೊದಲಾದ ಸರ್ವವಿಧಬಂಧುವೆಂಬ ಮನೋಭಾವದಿಂದಲೂ, ನನ್ನ ಕಥೆಗಳನ್ನೇ ಕೇಳುತ್ತ, ಆ ಭಕ್ತಿಮಾರ್ಗವನ್ನು ಅಭ್ಯಸಿಸಬೇಕು. ಮತ್ತು ಸತ್ಯಸಂಧತೆ, ಸಮಸ್ತಭೂತಗಳಲ್ಲಿಯೂ ಸಮಬುದ್ಧಿ, ಭೂತದಯೆ, ಯಾರಲ್ಲಿಯೂ ವೈರಭಾವವಿಲ್ಲದೆ ನಡೆಯುವುದು, ಶಬ್ಧಾದಿವಿಷಯಗಳಲ್ಲಿ ವಿರಕ್ತಿ, ಬ್ರಹ್ಮಚರ್ಯೆ, ಮಿತವಾಗಿ ಮಾತನಾಡುವುದು, ಭಕ್ತಿಯೋಗವನ್ನು ಹೆಚ್ಚಿಸುವುದಕ್ಕೆ ಪ್ರಧಾನವೆನಿಸಿದ ತನ್ನ ವರ್ಣಾಶ್ರಮಧರ್ಮಾನುಷ್ಠಾನಗಳು, ಇವೆಲ್ಲವನ್ನೂ ಹಿಡಿದು ಆ ಭಕ್ತಿಯನ್ನು ಸಾಧಿಸುತ್ತಿರಬೇಕು. ಮತ್ತು ದೈವಿಕವಾಗಿ ತನಗೆ ತಾನೇ ಲಭಿಸಿದ ಅನ್ನಾದಿಗಳನ್ನು ಮಿತವಾಗಿ ಭುಜಿಸಿ, ಅದರಿಂದಲೇ ತೃಪ್ತಿಹೊಂದಬೇಕು. ಏಕಾಂತಸ್ಥಳವನ್ನು ಹಿಡಿದು, ಮನಸ್ಸಿನಲ್ಲಿ ಭೀತಿ ಮುಂತಾದುವುಗಳನ್ನು ಬಿಟ್ಟು, ವಿರೋಧಿಗಳಲ್ಲಿಯೂ ಮಿತ್ರತ್ವವನ್ನೇ ತೋರಿಸುತ್ತಿರಬೇಕು. ನಿಷ್ಕಲ್ಮಷವಾದ ದೃಢಮನಸ್ಸುಳ್ಳವನಾಗಿ, ಪುತ್ರಮಿತ್ರಕಳತ್ರಾದಿಪರಿವಾರಗಳಲ್ಲಿಯೂ, ತನ್ನ ದೇಹದಲ್ಲಿಯೂ ಅಹಂಕಾರಮಮಕಾರಗಳನ್ನು ಬಿಟ್ಟುಬಿಡಬೇಕು. ಮತ್ತು ಪ್ರಕೃತಿಗೂ ಪುರುಷನಿಗೂ ಇರುವ ನಿಜಸ್ವರೂಪವನ್ನು ತಿಳಿಯುವುದರಿಂದ ಪ್ರಕೃತಿಸಂಬಂಧವು ತ್ಯಾಜ್ಯವೆಂದೂ, ಆತ್ಮಸ್ವರೂಪವೇ ಪ್ರಾಪ್ಯವೆಂದೂ, ವಿವೇಕಜ್ಞಾನವನ್ನು ಹೊಂದಿ ಮನಸ್ಸಿಗೆ ತೋರುವ ಸಂಕಲ್ಪವಿಕಲ್ಪಾದಿಜ್ಞಾನಗಳನ್ನು ತೊಲಗಿಸಿಕೊಂಡು, ಭಗವಂತನಲ್ಲಿಹೊರತು ಬೇರೊಂದರಲ್ಲಿಯೂ ದೃಷ್ಟಿಯಿಡದೆ, ಪ್ರಕೃತಿಗಿಂತಲೂ ವಿಲಕ್ಷಣನಾದ ಆತ್ಮನ ನಿಜವನ್ನು ತಿಳಿದಮೇಲೆ, ಆ ಆತ್ಮಧರ್ಮದಿಂದಲೇ ಅದರೊಳಗೆ ಅಂತರ್ಯಾಮಿಯಾಗಿರು

ವ ಪರಮಾತ್ಮನನ್ನೂ ಸಾಕ್ಷಾತ್ಕರಿಸಬಹುದು. ಜನನೀ! ಇದಕ್ಕೊಂದು ದೃಷ್ಟಾಂತವನ್ನು ಹೇಳುವೆನು ಕೇಳು. ಸೂರ್ಯದೇವನಿಂದ ಅಧಿಷ್ಠಾನಮಾಡಲ್ಪಟ್ಟ ನೇತ್ರೇಂದ್ರಿಯದಿಂದಲೇ ಆ ಸೂರ್ಯನನ್ನು ನೋಡುವಂತೆ, ಪರಮಾತ್ಮನಿಂದ ಅಧಿಷ್ಠಿತವಾದ ಜೀವಾತ್ಮನ ಧರ್ಮದಿಂದಲೇ ಆ ಭಗವಂತನನ್ನೂ ಸಾಕ್ಷಾತ್ಕರಿಸಬೇಕು. ಆದರಿಂದಾಜೆಗೆ ಪ್ರಾರಬ್ಧಕರ್ಮವು ಕಳೆದು, ದೇವಮನುಷ್ಯಾದಿರೂಪದಿಂದಿರುವ ಶರೀರವನ್ನು ತೊರೆದು, ಆ ಪರಮಾತ್ಮನನ್ನು ಸೇರುವನು. ಆ ಪರಮಾತ್ಮನು ಕರ್ಮಸಂಬಂಧದಿಂದುಂಟಾದ ಶರೀರಗಳಿಲ್ಲದವನು. ತನ್ನ ಸಂಕಲ್ಪದಿಂದಲೇ ದೇವಮನುಷ್ಯಾದಿಶರೀರಗಳನ್ನು ಪರಿಗ್ರಹಿಸತಕ್ಕವನು. ಅವನ ಜ್ಞಾನಕ್ಕೆ ಯಾವಾಗಲೂ ನ್ಯೂನತೆಯಿಲ್ಲ. ಜ್ಞಾನವೂ, ಆನಂದವೂ ಅವನ ಸ್ವರೂಪವು. ಜೀವಾತ್ಮನಿಗೆ ಅವನು ಸಕಲವಿಧದಲ್ಲಿಯೂ ಬಂಧುವೆನಿಸಿದವನು. ಅಸತ್ತೆನಿಸಿದ ಈ ದೇಹಾದಿಗಳನ್ನೂ ತನ್ನ ಶಕ್ತಿಯಿಂದಲೇ ಪ್ರಕಾಶಗೊಳಿಸತಕ್ಕವನು. ತನಗಿಂತಲೂ ಉತ್ತಮರಾಗಲಿ, ಸಮಾನರಾಗಲಿ ಇಲ್ಲದ ಮಹಾಮಹಿಮೆಯುಳ್ಳವನು. ಸರ್ವಾಂತರ್ಯಾಮಿಯು. ಇಂತಹ ಪರಮಾತ್ಮನನ್ನು ಸೇರಬಹುದು. ‘‘ಆದರೆ ಆತ್ಮಸ್ವರೂಪವನ್ನು ಪ್ರಕೃತಿಗಿಂತಲೂ ವಿಲಕ್ಷಣವೆಂದು ತಿಳಿದುಕೊಂಡಹಾಗೆಲ್ಲಾ ಅದರಲ್ಲಿ ಅಂತರ್ಯಾಮಿಯಾದ ಆ ಪರಮಾತ್ಮನನ್ನೂ ತಿಳಿಯುವುದೆಂದರೆ ಹೇಗೆ? ಯಾವ ಇಂದ್ರಿಯಗಳಿಗೂ ಗೋಚರಿಸದಷ್ಟು ಸೂಕ್ಷ್ಮವಾದ ಆ ಆತ್ಮಸ್ವರೂಪವು ಹೇಗೆತಾನೇ ದರ್ಶನಯೋಗ್ಯವಾಗುವುದು?’’ ಎಂದು ನೀನು ಶಂಕಿಸಬಹುದು. ಜನನೀ! ನಿಜವಾದ ಆತ್ಮಸ್ವರೂಪವಾಗಲಿ, ಆತ್ಮವಲ್ಲದ ದೇಹಾದಿಗಳಲ್ಲಿ ಆತ್ಮವೆಂಬ ಭ್ರಾಂತಿಯಾಗಲಿ, ಆ ಆತ್ಮಧರ್ಮವೆನಿಸಿದ ಜ್ಞಾನದಿಂದಲೇ ತಿಳಿಯಬೇಕು. ನೆಲದಲ್ಲಿರುವ ಹುಲ್ಲು, ಕಡ್ಡಿ, ಮೊದಲಾದ ವಸ್ತುಗಳನ್ನು ಪ್ರಕಾಶಪಡಿಸತಕ್ಕ ಸೂರ್ಯಕಿರಣದಿಂದಲೇ ಜಲಾದಿಗಳಲ್ಲಿ ಕಾಣುವ ಸೂರ್ಯನ ಪ್ರತಿಬಿಂಬವನ್ನೂ, ಆ ಬೆಳಕಿನಿಂದಲೇ ಆಕಾಶದಲ್ಲಿರುವ ನಿಜವಾದ ಸೂರ್ಯನನ್ನೂ ಕಂಡುಕೊಳ್ಳುವೆವಷ್ಟೆ? ಇದರಂತೆಯೇ ಪಂಚಭೂತಗಳು, ಇಂದ್ರಿಯಗಳು, ಮನಸ್ಸು ಎಂಬೀ ಮೂರುಬಗೆಯ ಅಹಂಕಾರಗಳ ಪರಿಣಾಮರೂಪವಾದ ದೇಹವು, ಆತ್ಮಕ್ಕಿಂತಲೂ ವಿಲಕ್ಷಣ

ವಾಗಿದ್ದರೂ, ಅದನ್ನೇ ಆತ್ಮವೆಂದು ಯಾವ ಜ್ಞಾನದಿಂದ ತಿಳಿಯುವೆವೋ ಆ ಜ್ಞಾನದಿಂದಲೇ ನಿಜವಾದ ಆತ್ಮಸ್ವರೂಪವನ್ನೂ ಕಂಡುಕೊಳ್ಳಬೇಕು ಆದುದರಿಂದ ಆತ್ಮಸ್ವರೂಪವಾಗಲಿ, ದೇಹಾದಿಗಳಲ್ಲಿ ಆತ್ಮಭ್ರಾಂತಿಯಾಗಲಿ, ಆ ಆತ್ಮಗುಣವಾದ ಜ್ಞಾನದಿಂದಲೇ ಉಂಟಾಗುವುದು. ಭೂತಸೂಕ್ಷ್ಮಗಳು, ಇಂದ್ರಿಯಗಳು, ಅಹಂಕಾರ, ಮನಸ್ಸು, ಬುದ್ಧಿ ಮೊದಲಾದುವು ತಮ್ಮ ತಮ್ಮ ಕಾರ್ಯವನ್ನು ನಡೆಸಲಾರದೆ ಎಚ್ಚರತಪ್ಪಿದಾಗಲೂ, ಯಾವುದುಮಾತ್ರ ಎಚ್ಚರತಪ್ಪದೆ, ಆ ದೇಹದಲ್ಲಿಯೇ ಸೇರಿಕೊಂಡು, ದೇಹಾದಿಗಳಲ್ಲಿ ಅಭಿಮಾನವನ್ನು ಮಾತ್ರ ಬಿಟ್ಟ್ಯಂತಿರುವುದೋ, ಅದೇ ಜೀವಾತ್ಮವೆಂದು ಹೇಳಲ್ಪಡುವುದು. ನಿದ್ರೆಯಿಲ್ಲದೆ ಎಚ್ಚರಗೊಂಡಿದ್ದ ಕಾಲದಲ್ಲಿ, ದೇಹಾದಿಗಳನ್ನು ತನ್ನದೆಂದು ಅಭಿಮಾನದಿಂದ ಕಾಣುತ್ತಿರುವ ಜೀವಾತ್ಮನೇ, ಮಲಗಿದಾಗ ಆ ದೇಹಾದಿಗಳನ್ನು ಮರೆತು, ಅದರಿಂದ ಅಹಂಭಾವವೂ ಬಿಟ್ಟು ಹೋಗಿ 'ತಾನುಮಾತ್ರ ನಾಶಹೊಂದಿದ್ದರೂ, ಹಣವನ್ನು ಕಳೆದುಕೊಂಡ ಲೋಭಿಯು ತಾನೇ ನಷ್ಟವಾದಂತೆ ತಿಳಿಯುವ ಹಾಗೆ, ಆಗಲೂ ತನ್ನನ್ನೇ ನಷ್ಟಹೊಂದಿದಂತೆ ಭಾವಿಸಿಕೊಳ್ಳುವುಂಟು. ಇದು ಕೇವಲಭ್ರಮವಲ್ಲದೆ ಬೇರೆಯೆಲ್ಲ ಜನರೀ ! ಲೋಕವ್ಯವಹಾರದಲ್ಲಿ, ಮಲಗಿದ ಮನುಷ್ಯನಿಗೆ ನಿದ್ರೆಯಲ್ಲಿ ಯಾವುದೂ ತಿಳಿಯಲಾರದೆಂದು ಅನೇಕರು ನಂಬುವರು. ಅದು ಹಾಗಲ್ಲ! ನಿದ್ರೆಮಾಡುವವನಿಗೆ ದೇಹಾದಿಗಳೊಂದೂ ತೋರದಿದ್ದರೂ, ಜೀವಾತ್ಮವುಮಾತ್ರ ಎಂದಿಗೂ ಎಚ್ಚರಗೊಂಡೇ ಇರುವುದು. ಇದಕ್ಕೆ ನಿದರ್ಶನವೇನೆಂದು ಕೇಳುವೆಯಾ ? ನಿದ್ರೆಯಿಂದೆಚ್ಚರಗೊಂಡವನು ಎದ್ದಕೂಡಲೇ '' ನಾನು ಸುಖವಾಗಿ ನಿದ್ರಿಸಿದೆನು. ನಿದ್ರೆಯಲ್ಲಿ ನನಗೇನೂ ತಿಳಿಯಲಿಲ್ಲವು." ಎಂದು ಹೇಳುವುದುಂಟಲ್ಲವೆ? ಆ ನಿದ್ರೆಯಲ್ಲಿಯೂ ''ನಾನು, ನನ್ನದು" ಎಂದು ತೋರುವವನೇ ಜೀವನೆಂದು ತಿಳಿ ! ಆದರೆ ಒಂದೊಂದುಸಮಯದಲ್ಲಿ ನಿದ್ರೆಯಿಂದೆಚ್ಚತ್ತವನು '' ತನ್ನನ್ನೇ ತಾನು ಮರೆತಿದ್ದುದಾಗಿ ಹೇಳುವುದುಂಟಲ್ಲವೆ ? ಆಗ ತಾನು ಎಂಬುದರಿಂದ ಜೀವಾತ್ಮನುಂಟೆಂಬುದು ಸಿದ್ಧವಾದರೂ, ತನ್ನನ್ನೇ ತಾನು ಕಾಣದಿದ್ದೆನೆಂಬುದರಿಂದ, ಆ ಜೀವನೂ 'ಎಚ್ಚರತಪ್ಪಿದ್ದನೆಂದು

ಸ್ಪಷ್ಟವಾಗುವುದಲ್ಲವೆ?" ಎಂದು ನೀನು ಆಕ್ಷೇಪಿಸಬಹುದು. ಅದ
ಕ್ಕೂ ಸನೂಧಾನವನ್ನು ಕೇಳು. ಮಲಗಿದವನಿಗೆ "ನಾನು ಇಂತವನು, ಈ
ಸ್ಥಳದಲ್ಲಿರುವೆನು" ಇವೇ ಮೊದಲಾದ ವಿಷಯಗಳುಮಾತ್ರ ತಿಳಿಯದಿರ
ಬಹುದೇಹೊರತು, ಆನಿದ್ರೆಯಲ್ಲಿಯೂ ಕೂಡ "ನಾನು, ನಾನು" ಎಂಬ
ಆತ್ಮಜ್ಞಾನವಿರುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಓ! ಜನನೀ! ಪ್ರಕೃತಿಗಿಂತಲೂ ಜೀವನು ಬೇರ್ಪಟ್ಟವನೆಂಬುದನ್ನು ತಿಳಿಯಲಪೇಕ್ಷೆಯುಳ್ಳವನು,
ಈ ಜೀವಾತ್ಮಸ್ವರೂಪವನ್ನು ಜ್ಞಾನಾಗಿ ಪರಾಮರ್ಶಿಸಿ ತಿಳಿಯಬೇಕು.ಪಂಚ
ಭೂತಗಳಿಂದ ಏರ್ಪಟ್ಟಿರುವ ಈ ಶರೀರವನ್ನು ಧರಿಸಿರತಕ್ಕವನೇ ಜೀವನು.
ಆ ಜೀವನ ಸಂಬಂಧವು ಬಿಟ್ಟು ಹೋದೊಡನೆ,ಶರೀರವೂ ಬಿದ್ದುಹೋಗುವು
ದು. ಆ ಶರೀರಕ್ಕೆ ಉಂಟಾಗುವ ಚಲನಶಕ್ತಿಯೂ ಆ ಜೀವಾತ್ಮನಿಂದಲೇ
ಪ್ರಾಪ್ತವಾಗಿರುವುದು. ಜೀವನಿಲ್ಲದ ದೇಹವು ನಿಲ್ಲುವುದಕ್ಕಾಗಲಿ, ನಡೆ
ಯುವುದಕ್ಕಾಗಲಿ ಶಕ್ತವಾಗಲಾರದು. ದೇಹಕ್ಕಿಂತಲೂ ವಿಲಕ್ಷಣವಾದ
ಈ ಆತ್ಮಸ್ವರೂಪವನ್ನು ತಿಳಿದು, ಆ ಜ್ಞಾನದ ಬಲದಿಂದಲೇ ಅದರೊಳಗೆ
ಸೇರಿರುವ ಪರಮಾತ್ಮನನ್ನೂ ಉಪಾಸಿಸಬೇಕು. ಮನುಷ್ಯನಿಗೆ ಎಚ್ಚರ
ದಲ್ಲಿಯಾಗಲಿ, ಕನಸಿನಲ್ಲಿಯಾಗಲಿ, ಸುಷುಪ್ತಿಯೆಂಬ ಗಾಢನಿದ್ರೆಯಲ್ಲಿಯಾ
ಗಲಿ, ಆತ್ಮಸ್ಫುರಣವೆಂಬುದು ಒಂದೇ ವಿಧವಾದುದು." ಎಂದನು. ಈ
ನಡುವೆ ದೇವಹೂತಿಯು ಮತ್ತೊಂದುಪ್ರಶ್ನೆಯನ್ನು ಮಾಡುವಳು "ಓ
ಮಹಾತ್ಮಾ! ನಿನ್ನ ಮಾತಿನಿಂದ, ಪ್ರಕೃತಿಗೂ, ಜೀವನಿಗೂ ಇರುವಸಂಬಂ
ಧವು ಬಹಳ ಬಲವತ್ತರವಾಗಿ, ಯಾವಾಗಲೂ ಅವು ಒಂದನ್ನೊಂದು ಅಗ
ಲಲಾರವೆಂದೂ ತೋರುವ್ವದು. ಇದಲ್ಲದೆ ಇವೆರಡೂ ನಾಶವಿಲ್ಲದ ನಿತ್ಯವ
ಸ್ತುಗಳಾಗಿರುವ್ವವು. ಭೂಮಿಯೂ, ಅದರ ಗುಣವಾದ ಗಂಧವೂ ಪರಸ್ಪರ
ವಾಗಿ ಒಂದನ್ನೊಂದು ಅಗಲಿರುವುದು ಹೇಗೆ ಅಸಂಭವವೋ, ಅದರಂತೆ
ಯೇ ಪ್ರಕೃತಿಗೂ, ಜೀವನಿಗೂ ಅಗಲಿಕೆಯೆಂಬುದೇ ಅಸಂಭವವೆಂದೂ
ಕಾಣುವುದು. ಮತ್ತು ಜೀವನಿಗೆ ಸಂಸಾರಸಂಬಂಧವಾದ ಸಂಚಾರಾದಿಕ್ರಿ
ಯೆಗಳಲ್ಲಿ ಪ್ರವೃತ್ತಿಯೂಕೂಡ, ಆ ಪ್ರಕೃತಿ ಸಂಬಂಧದಿಂದ ಬಂದುದೇ
ಹೊರತು ಸಹಜವಲ್ಲ. ಮತ್ತು ಸತ್ವಾದಿಗುಣಗಳೂ ಪ್ರಕೃತಿಸಂ

ಬಂಧವಿಂದಲೇ ಬರುವುವು. ಹೀಗೆ ಆ ಪ್ರಕೃತಿಸಂಬಂಧವಾದ ಗುಣಗಳ ಸಹಾಯದಿಂದಲೇ ಇವನಲ್ಲಿ ಕರ್ಮಜ್ಞಾನಾದಿಪ್ರವೃತ್ತಿಗಳು ನಡೆಯುತ್ತಿರುವಾಗ, ಆ ಪ್ರಕೃತಿಯುನ್ನುತ್ರ ಬಿಟ್ಟುಹೋಗುವುದು ಹೇಗೆ? ಭೂಮಿಯೂ ಗಂಧವೂ, ಜಲವೂ ರಸವೂ, ಒಂದನ್ನೊಂದು ಅಗಲದ ಹಾಗೆ, ಜೀವಪ್ರಕೃತಿಗಳು ಒಂದನ್ನೊಂದು ಅಗಲುವುದೇ ಸಮಂಜಸವಲ್ಲ. ಒಂದುವೇಳೆ ಆತ್ಮಜ್ಞಾನದಿಂದ ಆ ಕಾಲಕ್ಕೆ ಸಂಸಾರಭಯವುನ್ನುತ್ರ ನೀಗಬಹುದಾಗಿದ್ದರೂ, ಪ್ರಕೃತಿಯುನ್ನುತ್ರ ಬಿಟ್ಟು ಹೋಗಲಾರದು. ಯಾವಾಗ ಪ್ರಕೃತಿಸಂಬಂಧವು ಅನುವರ್ತಿಸಿಬರುವುದೋ, ಆಗ ತಿರುಗಿ ಎಂದಾದರೂ ಒಮ್ಮೆ ಸಂಸಾರಭಯವೂ ಉಂಟಾಗದಿರದು. ಆದುದರಿಂದ ಪ್ರಕೃತಿಸಂಬಂಧವಿರುವವರೆಗೆ ಸಂಪೂರ್ಣವಾದ ಭಯನಿವೃತ್ತಿಗಾಗಲಿ, ಮೋಕ್ಷಪ್ರಾಪ್ತಿಗಾಗಲಿ ಅವಕಾಶವಿಲ್ಲ. ಹೀಗಿರುವಾಗ ಈ ಆತ್ಮಪರಮಾತ್ಮ ಸ್ವರೂಪಗಳನ್ನು ಉಪಾಸನೆಮಾಡುವುದರಿಂದ ಫಲವೇನು? ಈ ನನ್ನ ಸಂದೇಹವನ್ನು ನಿವೃತ್ತಿಮಾಡಬೇಕು." ಎಂದಳು. ಆದಕ್ಕಾಕಪಿಲನು, "ಅಮ್ಮಾ! ನೀನು ಕೇಳಿದ ಪ್ರಶ್ನೆಯೇನೋ ಉಚಿತವಾಗಿಯೇ ಇರುವುದು. ಆದರೆ ಪ್ರಕೃತಿಯು ಜೀವಾತ್ಮನನ್ನು ಎಂದಿಗೂ ಬಿಟ್ಟುಹೋಗಲಾರದೆಂಬ ನಿಯಮವಿಲ್ಲ. ತಕ್ಕ ಉಪಾಯದಿಂದ ಮೆಲ್ಲಮೆಲ್ಲಗೆ ಅದನ್ನು ಬಿಡಿಸಬಹುದು. ಬೇರೆ ಫಲಾಪೇಕ್ಷೆಯಿಲ್ಲದೆ ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ನಡೆಸುತ್ತ, ಶುದ್ಧನು ನಸ್ಸಿನಿಂದ ನನ್ನ ಕಥಾಶ್ರವಣವನ್ನು ಮಾಡುತಿದ್ದರೆ, ಈ ಕಥಾಶ್ರವಣದ ಬಲದಿಂದ ನನ್ನಲ್ಲಿ ಭಕ್ತಿಯುಂಟಾಗುವುದು. ಈ ಭಕ್ತಿಯೊಂದೇ ಸಂಸಾರಬಂಧವನ್ನು ನೀಗಿಸಬಲ್ಲುದು. ಮತ್ತು ಪ್ರಕೃತಿಪುರುಷರ ಯಥಾರ್ಥಜ್ಞಾನವನ್ನು ಪಡೆಯುವುದು, ವಿರಕ್ತಿಮಾರ್ಗವನ್ನನುಸರಿಸುವುದು, ತಪೋಮಾರ್ಗದಿಂದ ಯೋಗವನ್ನು ಹಿಡಿಯುವುದು, ಮನಸ್ಸನ್ನು ಅತ್ತಿತ್ತ ಕದಲದಹಾಗೆ ನನ್ನಲ್ಲಿಯೇ ನಿಲ್ಲಿಸಿ ಭಕ್ತಿಯೆನ್ನು ಸಾಧಿಸುವುದು, ಈ ಕಾರ್ಯಗಳನ್ನು ನಡೆಸುತಿದ್ದರೆ, ಹಗಲು ರಾತ್ರಿಯೂ ಇವುಗಳಿಂದ ದಹಿಸಲ್ಪಡುತ್ತಿರುವ ಪ್ರಕೃತಿಯು, ಮೆಲ್ಲಮೆಲ್ಲಗೆ ತನಗೆ ತಾನೇ ನಡಿಲಿ ಹೋಗುವುದು. ಜನನೀ! ಬೆಂಕಿಯನ್ನು ತನ್ನೊಳಗೆ ಬಚ್ಚಿಟ್ಟುಕೊಂಡಿರತಕ್ಕ ಅರಣಿಯು, ಕಾಲಾಂತ

ರದಲ್ಲಿ ಆ ಒಳಗಿನ ಬೆಂಕಿಯಿಂದಲೇ ದಗ್ಧವಾಗುವಂತೆ, ಆತ್ಮವನ್ನು ಮರೆಸಿ ಕೊಂಡಿರತಕ್ಕ ಪ್ರಕೃತಿಯೊಕೂಡ, ತೀವ್ರವಾದ ಆ ಆತ್ಮಜ್ಞಾನದಿಂದ ಲೇ ನಿವೃತ್ತವಾಗುವುದು. ಮತ್ತು ಅಗ್ನಿಯ ಉತ್ಪತ್ತಿಕಾರಣವಾದ ಅರಣಿ ಯು, ಆ ಅಗ್ನಿಯಿಂದಲೇ ದಹಿಸಲ್ಪಡುವಂತೆ, ಈ ದೇಹರೂಪವಾದ ಪ್ರಕೃತಿಯೇ, ಮೊದಲು ಸಾತ್ವಿಕಾಹಾರದಿಂದಲೂ,ಸತ್ಕರ್ಮಾದಿರೂಪಗಳಿಂದಲೂ, ಜ್ಞಾನೋತ್ಪತ್ತಿಗೆ ಕಾರಣವಾಗಿದ್ದು,ಕೊನೆಗೆ ಆ ಜ್ಞಾನೋದಯದಿಂದಲೇ ನಾಶಹೊಂದುವುದು.ಈವಿಧವಾಗಿ ಬಿಟ್ಟುಹೋದ ಪ್ರಕೃತಿಯು ತಿರುಗಿಪುರುಷನಿಗೆ ಸಂಸಾರಬಂಧವನ್ನು ಹುಟ್ಟಿಸಲಾರದು. ಜೀವನು ಪ್ರಕೃತಿಸಂಬಂಧದಿಂದುಂಟಾಗುವ ಭೋಗಗಳೆಲ್ಲವನ್ನೂ ಅನುಭವಿಸಿ, ಆಗಾಗಿನ ಅನುಭವದಿಂದ ಅದು ದೋಷಪ್ರಚುರವೆಂಬುದನ್ನು ತಿಳಿದು, ಅದನ್ನು ತೊರೆದು ಬಿಟ್ಟಮೇಲೆ, ಆ ಪ್ರಕೃತಿಯು ಕರ್ಮವಶ್ಯನಲ್ಲದೆಯೂ, ಪಾಪರಾಹಿತ್ಯವೇ ಮೊದಲಾದ ಎಂಟುಬಗೆಯ ಗುಣಗಳೊಡಗೂಡಿಯೂ ಇರುವ ಆ ಜೀವನಿಗೆ ಎಂದಿಗೂ ಸಂಸಾರವನ್ನು ಕಟ್ಟಿಡಲಾರದು. ಮತ್ತು ಓ ಜನನೀ! ಮಲಗಿದ್ದಾಗ ಸ್ವಪ್ನದಲ್ಲಿ ಒಬ್ಬಮನುಷ್ಯನು. ಶಿರಶ್ಛೇದನ, ಬಂಧುಮರಣವೇ ಮೊದಲಾದ ಎಷ್ಟೋಮಹಾನರ್ಥಗಳನ್ನನುಭವಿಸಿದಂತೆ ಕಾಣುವನು. ಎಚ್ಚರವಾದಮೇಲೆ ಏನೂ ಇಲ್ಲದೆ ಸುಖವಾಗಿರುವನು. ಮಲಗಿದ್ದವನಿಗೆ ಎಷ್ಟೋ ಅನರ್ಥಗಳನ್ನು ತಂದಿಟ್ಟ ಸ್ವಪ್ನವು, ಎಚ್ಚರಗೊಂಡವನನ್ನು ಏನೂ ಮಾಡಲಾರದಷ್ಟೆ? ಹಾಗೆಯೇ ಎಚ್ಚರತಪ್ಪಿದವನನ್ನು ಪ್ರಕೃತಿಯು ಸಂಸಾರದಲ್ಲಿ ಕಟ್ಟಿಡಬಹುದೇಹೊರತು, ಪ್ರಕೃತಿ ಪುರುಷೇಶ್ವರರ ನಿಜತತ್ವವನ್ನು ಚೆನ್ನಾಗಿ ಗ್ರಹಿಸಿ, ನನ್ನಲ್ಲಿ ನಟ್ಟ ಮನಸ್ಸುಳ್ಳವರಾಗಿ, ಆತ್ಮಾನುಭವದಲ್ಲಿರುವ ಜ್ಞಾನಿಗಳವಿಷಯದಲ್ಲಿ, ಆಪ್ರಕೃತಿಯು ಯಾವ ಕೇಡನ್ನೂ ಮಾಡಲಾರದು. ಮತ್ತು ಆತ್ಮಧ್ಯಾನಪರನಾಗಿ, ಅನೇಕಜನ್ಮಗಳ ಕಾಲದಿಂದ, ತತ್ವಗಳ ಮತ್ತು ಪುರುಷಾರ್ಥಗಳ ಸ್ವರೂಪವನ್ನು ತಿಳಿದು, ಬ್ರಹ್ಮಾದಿಲೋಕಗಳೊಂದನ್ನೂ ಅಪೇಕ್ಷಿಸದೆ, ನನ್ನೊಬ್ಬನಲ್ಲಿಯೇ ಭಕ್ತಿಯನ್ನಿಟ್ಟು,ನನ್ನ ಸಾಕ್ಷಾತ್ಕಾರದಿಂದ ಸಮಸ್ತಸಂಶಯೆಗಳನ್ನೂ ನೀಗಿದ ಯೋಗಿಯು,ತನ್ನಪ್ರಾರಬ್ಧಕರ್ಮವು ತೀರಿದಮೇಲೆ, ಯಾವಸ್ಥಾನವನ್ನು ಸೇರ

ಬೇಕೋ ಅದು ನನ್ನ ಅನುಗ್ರಹದಿಂದಲೇ ಲಭಿಸಬೇಕು. ಅದನ್ನು ಸೇರಿದ ಮೇಲೆ ಪುನರ್ಜನ್ಮವಿಲ್ಲವು. ಆ ಲೋಕವನ್ನು ಸೇರುವುದೇ ನಿರತಿಶಯಪುರುಷಾರ್ಥರೂಪವಾದ ಮೋಕ್ಷವೆನಿಸುವುದು. ಅದೇ ನನ್ನ ಸ್ಥಾನವು. ಅಮ್ಮಾ! ಭಕ್ತಿಯೋಗದಲ್ಲಿ ಸಿದ್ಧನಾದ ಪುರುಷನಿಗೆ ಅನೇಕಯೋಗಬಲದಿಂದ ಸಾಧ್ಯವಾಗಿಯೂ, ಆಶ್ಚರ್ಯಕರಳಾಗಿಯೂ ಇರುವ ಅಣಿಮಾದಿಸಿದ್ಧಿಗಳೆಲ್ಲವೂ ಸುಲಭವಾಗಿ ಕೈಗೂಡುವಹಾಗಿದ್ದರೂ, ಅವು ಸಂಸಾರಬಂಧಕ್ಕೆ ಕಾರಣಗಳೇ ಹೊರತು ಶ್ರೇಯಸ್ಸನ್ನು ಕೈಗೂಡಿಸಲಾರವು. ಆದುದರಿಂದ ಭಕ್ತಿಯೋಗವನ್ನು ಹಿಡಿದವನು, ಆ ಯೋಗಬಲದಿಂದ ತನಗೆ ತಾನೇ ಲಭಿಸುವ ಆ ಅಣಿಮಾದಿಸಿದ್ಧಿಗಳಲ್ಲಿಯೂ ಮನಸ್ಸುಡದಿದ್ದಪಕ್ಷದಲ್ಲಿ, ಅವನು ಸಂಸಾರಬಂಧವನ್ನು ಬಿಡಿಸಿಕೊಂಡು, ಶರೀರಸಂಬಂಧವನ್ನೂ ನೀಗಿ, ಮಹಾನಂದಸ್ವರೂಪನಾದ ನನ್ನನ್ನು ಸೇರಿ, ಮೃತ್ಯುಭಯವಿಲ್ಲದೆ ನಿತ್ಯಸುಖವನ್ನನುಭವಿಸುವನು. ಇಲ್ಲಿಗೆ ಇಪ್ಪತ್ತೇಳನೆಯ ಅಧ್ಯಾಯವು.

ಕಪಿಲನು ಭಕ್ತಿಸಾಧನಾಕ್ರಮವನ್ನೂ, ಅದರ ಅಂಗಗಳನ್ನೂ ದೇವಹೂತಿಗೆ ವಿವರಿಸಿದುದು.

ಅಮ್ಮಾ! ಇನ್ನು ಭಕ್ತಿಯೋಗದ ಪ್ರಕಾರವನ್ನೂ, ಅದರ ಅಂಗಗಳನ್ನೂ ವಿವರಿಸುವೆನು ಕೇಳು! ಜೀವನು ಈ ಭಕ್ತಿಯೋಗವನ್ನು ಕ್ರಮವಾಗಿ ಅನುಷ್ಠಿಸುತ್ತ ಬಂದಪಕ್ಷದಲ್ಲಿ, ಅವನ ಮನಸ್ಸು, ರಾಗದ್ವೇಷಗಳೇ ಮೊದಲಾದ ಕಲ್ಮಷಗಳೆಲ್ಲವನ್ನೂ ನೀಗಿ, ನಿರ್ಮಲವಾಗಿ, ಸನ್ಮಾರ್ಗದಲ್ಲಿ ಪ್ರವರ್ತಿಸಿ, ಶುಭಾಶ್ರಯನಾದ ಭಗವಂತನ ದಿವ್ಯನುಂಗಳಪಿಗ್ರಹದಲ್ಲಿ ನೆಲೆಗೊಳ್ಳುವುದು. ಆ ಭಕ್ತಿಯೋಗಕ್ಕೆ ಎಂಟುಬಗೆಯ ಯೋಗಗಳು ಅಂಗವೆನಿಸಿರುವುವು. ಯಮನು, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬಿವೆಂಟೂ, ಯೋಗಕ್ಕೆ ಅಷ್ಟಾಂಗಗಳೆನಿಸುವುವು. ಇವುಗಳಲ್ಲಿ ಯಮನಿಯಮಗಳೆಂಬ ಮೊದಲನೆಯ ಎರಡು ಯೋಗಾಂಗಗಳೊಳಗೆ, ಏಳುಬಗೆಯ ಸಾಧನಗಳುಂಟು. ಅವುಗಳನ್ನು ಬೇರೆಬೇರೆಯಾಗಿ ತಿಳಿಸುವೆನು ಕೇಳು. ಬೇರೆ ಯಾವ ಫಲವನ್ನೂ ಅಪೇಕ್ಷಿಸದೆ, ತನ್ನ ಶಕ್ತ್ಯನು

ಸಾರವಾಗಿ ತನ್ನ ವರ್ಣಾಶ್ರಮಗಳಿಗೆ ವಿಧಿಸಲ್ಪಟ್ಟ ಧರ್ಮಗಳನ್ನಾಚರಿಸುತ್ತಿರುವುದು, ನಿಷಿದ್ಧಕರ್ಮಗಳನ್ನು ಬಿಡುವುದು, ದೈವವಶದಿಂದ ತನಗೆ ತಾನೇ ಲಭಿಸಿದ ಅನ್ನಾದಿಗಳಲ್ಲಿಯೇ ತೃಪ್ತಿಪಡುವುದು, ಆತ್ಮತತ್ವವನ್ನು ತಿಳಿದ ಮಹಾತ್ಮರನ್ನು ಪೂಜಿಸುವುದು, ಧರ್ಮಾರ್ಥಕಾಮಗಳೆಂಬ ಲೌಕಿಕ ಧರ್ಮಗಳಲ್ಲಿ ಮನಸ್ಸಿಡದಿರುವುದು, ಮೋಕ್ಷದಲ್ಲಿಮಾತ್ರ ಅಭಿರುಚಿಯನ್ನಿಡುವುದು. ಮತ್ತು ಹೀನಜಾತಿಯವರ ಸಂಪರ್ಕದಿಂದ ಜಾತಿದುಷ್ಟವೆಂದೂ, ಕಶ್ಮಲಸಂಬಂಧದಿಂದ ಆಶ್ರಯದುಷ್ಟವೆಂದೂ, ಇತರಕಾರಣಗಳಿಂದ ನಿಮಿತ್ತದುಷ್ಟವೆಂದೂ ಕರೆಯಲ್ಪಡುವ ಆಹಾರಗಳನ್ನು ತೊರೆದು, ಕೇವಲ ಸಾತ್ವಿಕಾಹಾರಗಳನ್ನೇ ಭುಜಿಸುವುದು. ಆ ಸಾತ್ವಿಕಾಹಾರಗಳನ್ನೂ ಮಿತವಾಗಿ ಭುಜಿಸುವುದು. ವಿಶೇಷವಾಗಿ ಜನರ ಗುಂಪಿಲ್ಲದೆ ಏಕಾಂತವಾಗಿಯೂ, ನುಂದೆ ತನ್ನ ಶ್ರೇಯಸ್ಸಿಗೆ ಎಡೆಯಾಗಿಯೂ ಇರುವ ಸ್ಥಳವನ್ನಾಶ್ರಯಿಸುವುದು, ಇತರಭೂತಗಳನ್ನು ಹಿಂಸಿಸದಿರುವುದು, ಸತ್ಯವನ್ನೇ ನುಡಿಯುವುದು, ಪರರ ಸ್ವತ್ತನ್ನು ಕಳದಿರುವುದು, ತನ್ನ ದೇಹಯಾತ್ರೆಗೆ ಬೇಕಾದಷ್ಟು ಧನದಲ್ಲಿಯೇ ತೃಪ್ತನಾಗಿರುವುದು, ಇಂದ್ರಿಯಗಳನ್ನು ತಡೆದು ಬ್ರಹ್ಮಚರ್ಯವನ್ನು ತಪ್ಪದಿರುವುದು, ಚಾಂದ್ರಾಯಣವೇ ಮೊದಲಾದ ವ್ರತಗಳನ್ನಾಚರಿಸುವುದು, ಸದಾಚಾರಶೀಲನಾಗಿರುವುದು, ವೇದಾಭ್ಯಸನಮಾಡುವುದು, ಭಗವಂತನನ್ನಾರಾಧಿಸುವುದು, ಮಿತವಾಗಿ ಮಾತನಾಡುವುದು, ಇವೆಲ್ಲವೂ ಯಮನಿಯಮಗಳೆಂಬ ಮೊದಲನೆಯ ಎರಡು ಯೋಗಾಂಗಗಳಲ್ಲಿ ಅನುಸರಿಸಬೇಕಾದ ಕ್ರಿಯೆಗಳು. ಇದರಮೇಲೆ ಆಸನವೇ ಮೊದಲಾದ ಮುಂದಿನ ಯೋಗಾಂಗಗಳ ಸ್ವರೂಪವನ್ನೂ ಹೇಳುವೆನು ಕೇಳು! ಎಷ್ಟುಹೊತ್ತಿನವರೆಗೆ ಕುಳಿತಿದ್ದರೂ ಶ್ರಮವೇ ತೋರದಂತಿರುವುದು ಆಸನವೆನಿಸುವುದು. ಮೆಲ್ಲಮೆಲ್ಲಗೆ ಪ್ರಾಣವಾಯುವನ್ನು ಸ್ವಾಧೀನಪಡಿಸುತ್ತ ಬರುವುದು ಪ್ರಾಣಾಯಾಮವು. ಇಂದ್ರಿಯಗಳನ್ನೂ ಮನಸ್ಸನ್ನೂ ಶಬ್ದಾದಿವಿಷಯಗಳಲ್ಲಿ ಪ್ರವರ್ತಿಸದಂತೆ ಹಿಂತಿರುಗಿಸಿ, ಹೃದಯದಲ್ಲಿಯೇ ಅಡಗಿಸಿಡುವುದು ಪ್ರತ್ಯಾಹಾರವೆನಿಸುವುದು. ಪ್ರಾಣವಾಯು, ಅಪಾನವಾಯು, ಮುಂತಾದ ಪಂಚಪ್ರಾಣಗಳನ್ನೂ, ಮನಸ್ಸನ್ನೂ, ಅವುಗ

ಳಿಗೆ ನಿಯತಸ್ಥಾನವಾದ ಹೃದಯ, ಗುದ, ಮುಂತಾದ ಸ್ಥಾನಗಳೊಳಗೆ ಯಾವುದಾದರೂ ಒಂದುಸ್ಥಳದಲ್ಲಿ ತಂದು ನೆಲೆಗೊಳಿಸುವುದು ಧಾರಣವೆನಿಸುವುದು. ಪರಮಪುರುಷನ ಸೃಷ್ಟ್ಯಾದಿಲೀಲಾಕಾರ್ಯಗಳನ್ನು ಎಡೆಬಿಡದೆ ಧ್ಯಾನಿಸುವುದು ಧ್ಯಾನವೆನಿಸುವುದು. ಮನಸ್ಸನ್ನು ಅತ್ತಿತ್ತ ಕದಲಿಸದೆ, ಒಂದೇ ವಿಷಯದಲ್ಲಿ ದೃಢವಾಗಿ ನಿಲ್ಲಿಸಿಡತಕ್ಕ ಶಕ್ತಿಯು ಸಮಾಧಿಯೆನಿಸುವುದು. ಭಕ್ತಿಯೋಗವನ್ನನುಷ್ಠಿಸತಕ್ಕವನು, ಮೇಲೆ ಹೇಳಿದ ಉಪಾಯಗಳಿಂದಲೂ, ಇನ್ನೂ ವ್ರತಪಾಸಾದಿಗಳಿಂದಲೂ, ಶಬ್ದಾದಿವಿಷಯಗಳಲ್ಲಿ ಬಿದ್ದು ಕೆಟ್ಟುಹೋಗಿರುವ ಮನಸ್ಸನ್ನು ಮೆಲ್ಲಮೆಲ್ಲಗೆ ಬುದ್ಧಿಯ ಸಹಾಯದಿಂದ ಹಿಂತಿರುಗಿಸಿ, ಶುಭಾಶ್ರಯನಾದ ಬಗವಂತನ ದಿವ್ಯಾನುಂಗಳಲ್ಲಿ ಗ್ರಹದಲ್ಲಿಯೇ ನೆಲೆಗೊಳಿಸಬೇಕು. ಯಾವನಿಥವಾದ ಶ್ರಮಕ್ಕೂ ಬೇಸರಗೊಳ್ಳದೆ, ಮೊದಲು ಪ್ರಾಣವಾಯುವನ್ನು ಜಯಿಸಿ ತನ್ನ ವಶಮಾಡಿಕೊಂಡಪಶ್ಚಾತ್ತಲ್ಲಿ, ಮನಸ್ಸನ್ನೂ ಅನಾಯಾಸವಾಗಿ ವಶಪಡಿಸಿಕೊಳ್ಳಬಹುದು. ಅಮ್ಮಾ! ಪ್ರಾಣವಾಯುವನ್ನು ಸ್ವಾಧೀನಪಡಿಸುವುದು ಹೇಗೆ ಸಾಧ್ಯವೆಂದು ಚಿಂತಿಸಬೇಡ! ಅದನ್ನು ಜಯಿಸುವುದಕ್ಕೂ ಉಪಾಯವುಂಟು! ಎಷ್ಟು ಹೊತ್ತಿನವರೆಗೆ ಕುಳಿತಿದ್ದರೂ ಮನಸ್ಸಿಗೆ ಬೇಸರವಾಗಲಿ, ದೇಹಕ್ಕೆ ಶ್ರಮವಾಗಲಿ ತೋರದಂತೆ ಮೊದಲು ಆಸನಶಕ್ತಿಯನ್ನು ಸಾಧಿಸಿಕೊಳ್ಳಬೇಕು. ಪರಿಶುದ್ಧವಾದ ಸ್ಥಳದಲ್ಲಿ ಒಂದು ಪೀಠವನ್ನು ಕಲ್ಪಿಸಿಕೊಂಡು, ಅದರಮೇಲೆ ಥರ್ಭೆಗಳನ್ನೂ, ಅದರಮೇಲೆ ಕೃಷ್ಣಾಜಿನವನ್ನೂ, ಅದರಮೇಲೆ ವಸ್ತ್ರವನ್ನೂ ಹಾಸಿ, ಅದರಮೇಲೆ ಶರೀರವು ನೆಟ್ಟಗೆ ನಿಲ್ಲುವಂತೆ ಸ್ವಸ್ತಿಕಾಸನದಿಂದ ಕುಳಿತು, ಪ್ರಣವಮಂತ್ರವನ್ನು ಬಾರಿಬಾರಿಗೂ ಅಭ್ಯಸಿಸುತ್ತ ಬರಬೇಕು. (ಸ್ವಸ್ತಿಕಾಸನವೆಂದರೆ ಉಭಯಪಾರ್ಶ್ವದ ತೊಡೆ ಮತ್ತು ಪೊಳಕಾಲುಗಳ ನಡುವೆ ಪಾದಗಳನ್ನು ಸಿಕ್ಕಿಸಿ ನೆಟ್ಟಗೆ ಕುಳ್ಳಿರುವುದು.) ಪೂರಕ, ಕುಂಭಕ, ರೇಚಕಗಳೆಂಬ ಪ್ರಾಣಾಯಾಮಕಾರ್ಯಗಳಿಂದ ಪ್ರಾಣವಾಯುವಿನ ಮಾರ್ಗವನ್ನು ಶುದ್ಧಮಾಡಬೇಕು. ಪೂರಕವೆಂದರೆ ವಾಯುವನ್ನು ಮೂಗಿನ ದ್ವಾರದಿಂದ ಒಳಕ್ಕೆಳೆದು ತುಂಬಿಡುವುದು. ಕುಂಭಕವೆಂದರೆ ಆ ವಾಯುವನ್ನು ಸ್ವಲ್ಪಕಾಲದವರೆಗೆ ಒಳಗೇ ತಡೆದಿಡುವುದು. ರೇಚಕವೆಂದರೆ

ಒಳಗೆ ತಡೆದಿಟ್ಟು ವಾಯುವನ್ನು ಹೊರಕ್ಕೆ ಬಿಡುವುದು. ಈ ಮೂರುಬಗೆಯ ಕಾರ್ಯಗಳಲ್ಲಿ, ಹೊರಗಿನ ಗಾಳಿಯನ್ನು ದೇಹದೊಳಗೆ ತುಂಬಿ ಸ್ವಲ್ಪಕಾಲದವರೆಗೆ ಅಲ್ಲಿಯೇ ಅದನು ತಡೆದಿಟ್ಟು, ಹೊರಕ್ಕೆ ಬಿಡುವುದರಿಂದಾಗಲಿ, ಒಳಗಿನ ಗಾಳಿಯನ್ನು ಹೊರಕ್ಕೆ ಬಿಟ್ಟು, ಅದನ್ನು ಸ್ವಲ್ಪಕಾಲದವರೆಗೆ ಹೊರಗೆ ತಡೆದಿರುವುದರಿಂದಾಗಲಿ ಈ ಪ್ರಾಣವಾಯುವಿನ ಮಾರ್ಗವನ್ನು ಶುದ್ಧಿಗೊಳಿಸಬಹುದು. (ಎಂದರೆ, ಪೂರಕ ಕುಂಭಕ ರೇಚಕಗಳೆಂಬೀ ಕಾರ್ಯಗಳನ್ನು ಅನುಲೋಮವಾಗಿಯಾಗಲಿ, ವಿಲೋಮವಾಗಿಯಾಗಲಿ ನಡೆಸಿ, ವಾಯುನಾಡಿಮಾರ್ಗವನ್ನು ಶುದ್ಧಮಾಡಬಹುದು.) ಪ್ರಾಣವಾಯುವನ್ನು ಹೀಗೆ ಸ್ವಾಧೀನಪಡಿಸಿಕೊಳ್ಳುವುದರಿಂದ ಮನಸ್ಸು ಸ್ವಾಧೀನವಾಗುವುದು. ಇಂತಹ ಯೋಗಿಯ ಮನಸ್ಸು, ಬೆಂಕಿ ಮತ್ತು ಗಾಳಿ, ಇವುಗಳ ಸಹಾಯದಿಂದ ಊದಿದ ಬಂಗಾರದಂತೆ, ಶೀಘ್ರಕಾಲದಲ್ಲಿಯೇ ಸ್ವಚ್ಛವಾಗುವುದು. ಈ ವಿಧವಾದ ಪ್ರಾಣಾಯಾಮಕಾರ್ಯಗಳಿಂದ, ದೇಹಕ್ಕೆ ವಾತ ಪಿತ್ತ ಶ್ಲೇಷ್ಮಾದಿ ಧಾತು ದೋಷಗಳಿಂದುಂಟಾಗುವ ಬಾಧೆಯನ್ನೂ ನೀಗಿಸಬಹುದು. ಹಾಗೆಯೇ ಪ್ರತ್ಯಾಹಾರವೆಂಬ ಯೋಗದಿಂದ ವಿಷಯಾಸಕ್ತಿಯನ್ನೂ, ಧಾರಣಾದಿಗಳಿಂದ ಪಾಪವನ್ನೂ, ಧ್ಯಾನದಿಂದ ಕ್ಲೇಶದುಃಖಾದಿಗಳನ್ನೂ ನೀಗಿಸಬಹುದು. ಮನಸ್ಸನ್ನು ಭಗವಂತನ ಸ್ವರೂಪದಲ್ಲಿ ನೆಲೆಗೊಳಿಸುವುದೇ ಧ್ಯಾನವೆನಿಸುವುದು. ಈ ಧ್ಯಾನವು ಇತರವಿಷಯವಾದ ಜ್ಞಾನದಿಂದ ಮರೆಸಿಹೋಗದಿರುವುದೇ ಸಮಾಧಿಯೆನಿಸುವುದು. ಈ ವಿಧವಾಗಿ ಮೇಲೆ ಹೇಳಿದ ಪ್ರಾಣಾಯಾಮವೇ ಮೊದಲಾದ ಯೋಗಾಭ್ಯಾಸದಿಂದ ಮನಸ್ಸು ನಿರ್ಮಲವಾಗಿ, ಶುಭಾಶ್ರಯವೆನಿಸಿದ ಭಗವದ್ವಿಗ್ರಹದಲ್ಲಿ ಯಾವಾಗ ನೆಲೆಯಾಗಿ ನಿಲ್ಲುವುದೋ, ಆಗ ಯೋಗಿಯು, ತನ್ನ ದೃಷ್ಟಿಯನ್ನು ಮೂಗಿನ ತುದಿಯಲ್ಲಿರಿಸಿ, ಭಗವಂತನ ದಿವ್ಯಮಂಗಳವಿಗ್ರಹವನ್ನು ಎಡೆಬಿಡದೆ ಧ್ಯಾನಿಸುತ್ತಿರಬೇಕು. ಹೀಗೆ ಧ್ಯಾನಿಸುವಾಗ, ಪ್ರಸನ್ನವಾದ ಮುಖಕಮಲ, ಕಮಲದಳದಂತಿರುವ ಕೆಂಪಾದ ನೇತ್ರಗಳು, ಕನ್ನೈದಿಲೆಯಂತೆ ಶ್ಯಾಮಲವಾದ ದೇಹಕಾಂತಿ, ಹಸ್ತಗಳಲ್ಲಿ ಶಂಖ ಚಕ್ರಗದೆಗಳೆಂಬ ದಿವ್ಯಾಯುಧಗಳು, ಕಮಲಕೇಸರದಂತಿರುವ ದಿವ್ಯ

ಪೀತಾಂಬರವೆಂಬ ಪಟ್ಟೆಮಡಿ, ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆ, ಕಂಠದಲ್ಲಿ ಕೌಸ್ತುಭಮಣಿ, ಭ್ರಮರಝಂಕಾರದಿಂದ ಕೂಡಿದ ವನಮಾಲಿಕೆ, ಕಾಲಂದುಗೆ, ಕೈಬಳೆ, ತೋಳ್ಬಳೆ, ಕಿರೀಟ, ಕುಂಡಲ, ರತ್ನಹಾರಗಳೇ ಮೊದಲಾದ ದಿವ್ಯಾಭರಣಗಳು, ನಿತಂಬದಲ್ಲಿ ರತ್ನದ ಡಾಬು, ಇಂತಹ ದಿವ್ಯಸೌಂದರ್ಯದೊಡನೆ ಭಕ್ತರ ಹೃದಯಕಮಲದಲ್ಲಿ ನಿತ್ಯವಾಸಮಾಡತಕ್ಕವನಾಗಿಯೂ, ನೋಡುತಿದ್ದಹಾಗೆಲ್ಲಾ ತನ್ನ ದಿವ್ಯಸೌಂದರ್ಯದಿಂದ ಆಸೆಯನ್ನು ಹೆಚ್ಚಿಸತಕ್ಕವನಾಗಿಯೂ, ಶಾಂತಸ್ವರೂಪನಾಗಿಯೂ, ನೋಡುವವರಮನಸ್ಸನ್ನೂ, ಕಣ್ಣುಗಳನ್ನೂ ಉಲ್ಲಾಸಗೊಳಿಸತಕ್ಕವನಾಗಿಯೂ, ಭಕ್ತಿಯನ್ನು ಹೆಚ್ಚಿಸತಕ್ಕ ದಿವ್ಯದರ್ಶನವುಳ್ಳವನಾಗಿಯೂ, ಸರ್ವಲೋಕವಂದಿತನಾಗಿಯೂ, ಬಾಲ್ಯವಯಸ್ಸಿನಲ್ಲಿರುವಂತೆ ಮುದ್ದುಬೀರತಕ್ಕವನಾಗಿಯೂ, ಭಕ್ತಾನುಗ್ರಹತತ್ಪರನಾಗಿಯೂ, ಪುಣ್ಯಕೀರ್ತಿಯಾಗಿಯೂ, ಸಾಧುಗಳಿಗೆ ಶ್ರೇಯಸ್ಕರನಾಗಿಯೂ ಇರುವ ಆ ಶ್ರೀನಾರಾಯಣಮೂರ್ತಿಯ ದಿವ್ಯಾಕೃತಿಯನ್ನು ಸಾಕಲ್ಯವಾಗಿ (ಮೊತ್ತಕ್ಕೆ) ಮನಸ್ಸಿನಲ್ಲಿಟ್ಟು, ಅದರಲ್ಲಿಯೇ ಮನಸ್ಸು ಚೆನ್ನಾಗಿ ನಾಟುವಂತೆ ಸಂತತಧ್ಯಾನವನ್ನು ಮಾಡುತ್ತಿರಬೇಕು. ಹೀಗೆ ಧ್ಯಾನಮಾಡುವವನು ತನ್ನತನ್ನ ಭಾವನೆಗೆ ತಕ್ಕಂತೆ, ಆ ಭಗವಂತನನ್ನು ತನ್ನ ಕಣ್ಣಮುಂದೆ ನಿಂತಿರುವಂತೆಯಾಗಲಿ, ನಡೆಯುವಂತೆಯಾಗಲಿ, ಸುಮ್ಮನೆ ಕುಳಿತಿರುವಂತೆಯಾಗಲಿ, ಮಲಗಿದಂತೆಯಾಗಲಿ, ತನ್ನ ಹೃದಯದಲ್ಲಿ ನೆಲೆಗೊಂಡಂತೆಯಾಗಲಿ, ಯಾವ ವಿಧದಿಂದಲಾದರೂ ಆ ದಿವ್ಯಮೂರ್ತಿಯನ್ನು ನಿಷ್ಕಲ್ಮಷವಾದ ಮನಸ್ಸಿನಿಂದ ಸಾಕ್ಷಾತ್ಕರಿಸುತ್ತ ಬರಬಹುದು. ಹೀಗೆ ದೃಢಧ್ಯಾನದಿಂದ ಭಾವಿಸುತ್ತಬಂದರೆ, ಆ ಮನಸ್ಸು ಬೇರೆ ಕಡೆಗೆ ಚಲಿಸಲಾರದು. ಹೀಗೆ ಭಗವಂತನ ಸರ್ವಾವಯವಗಳನ್ನೂ ಏಕಾಕಾರವಾಗಿ ಭಾವಿಸುತ್ತಬಂದು, ತಿರುಗಿ ಕಾಲಿಂದ ತಿರಸ್ಸಿನವರೆಗೆ, ಆ ಭಗವನ್ಮೂರ್ತಿಯ ಒಂದೊಂದವಯವವನ್ನೂ ಬೇರೆಬೇರೆಯಾಗಿ ಮನಸ್ಸಿನಲ್ಲಿ ಭಾವಿಸಬೇಕು. ಯಾವ ಪಾದವು, ವಜ್ರ, ಧ್ವಜ, ಅಂಕುಶ, ಕಮಲಗಳೇ ಮೊದಲಾದ ಮಹಾಪುರುಷಲಕ್ಷಣಗಳನ್ನು ಸೂಚಿಸತಕ್ಕ ಶುಭರೇಖೆಗಳಿಂದ ಕೂಡಿರುವುದೋ, ಯಾವ ಪಾದಾಗ್ರದಲ್ಲಿರುವ ಉಬ್ಬಿದ ಕೆಂಪಾದ ಉಗುರುಗಳೆ

ಕಾಂತಿಯೆಂಬ ಚಂದ್ರಿಕೆಯು,ಭಕ್ತರ ಮನಸ್ಸಿನಲ್ಲಿರುವ ಅಜ್ಞಾನಾಂಧಕಾರವನ್ನು ನೀಗಿಸಿ ಬೆಳಗುತ್ತಿರುವುದೋ,*ಯಾವಪಾದಗಳನ್ನು ತೊಳೆದ ಜಲವಾದ ಗಂಗಾನದಿಯೆ ತೀರ್ಥವನ್ನು ತಲೆಯೆಲ್ಲಿ ಧರಿಸಿದಮಾತ್ರಕ್ಕೆ, ಶಿವನು,ಶಿವ (ಮಂಗಳಕರ) ನೆನಿಸಿಕೊಂಡನೋ, ಯಾವ ಪಾದವು ಧ್ಯಾನಮಾಡತಕ್ಕವರ ಮನಸ್ಸಿನಲ್ಲಿರುವ ಕಲ್ಮಷವೆಂಬ ಪರ್ವತಕ್ಕೆ ವಜ್ರಾಯುಧದಂತಿರುವುದೋ, ಅಂತಹ ಭಗವಂತನ ಪಾದಾರವಿಂದಗಳನ್ನೇ ಮೊದಲು ಮನಸ್ಸಿನಲ್ಲಿ ಧ್ಯಾನಿಸುತ್ತಿರಬೇಕು. ಸರ್ವಲೋಕಜನನಿಯಾಗಿಯೂ, ಬ್ರಹ್ಮಾದಿಸಮಸ್ತದೇವತೆಗಳಿಂದ ನಮಸ್ಕರಿಸಲ್ಪಟ್ಟವಳಾಗಿಯೂ, ಕಮಲಲೋಚನೆಯಾಗಿಯೂ ಇರುವ ಮಹಾಲಕ್ಷ್ಮಿಯು, ತನ್ನ ತೊಡೆಯೆಲ್ಲಿಟ್ಟುಕೊಂಡು ಚಿಗುರಿನಂತೆ ಕೋಮಲವಾದ ತನ್ನ ಕೈಗಳಿಂದ ಅನವರತವೂ ಒತ್ತುತ್ತಿರುವ ಆ ಭಗವಂತನ ಮೊಳಕಾಲುಗಳ ಸೌಂದರ್ಯವನ್ನು ಧ್ಯಾನಿಸಬೇಕು. ಅದರಿಂದಾಚೆಗೆ ಗರುತ್ಮಂತನ ಭುಜಗಳಮೇಲೆ ಧರಿಸಲ್ಪಟ್ಟವುಗಳಾಗಿಯೂ, ತೇಜೋನಿಧಿಯಂತೆ ಪ್ರಕಾಶಿಸತಕ್ಕುವುಗಳಾಗಿಯೂ ಆಗಚೆಯ ಹೂಗಳಂತೆ ಶ್ಯಾಮಲವರ್ಣವುಳ್ಳವುಗಳಾಗಿಯೂ ಇರುವ ಆ ಭಗವಂತನ ತೊಡೆಗಳನ್ನು ಹೃದಯದಲ್ಲಿಟ್ಟು ಧ್ಯಾನಿಸಬೇಕು. ಅದರಿಂದಾಚೆಗೆ ಪಾದಾಗ್ರದವರೆಗೆ ತೂಗುತ್ತಿರುವ ಪೀತಾಂಬರದಿಂದಲೂ, ಅದರಮೇಲೆ ಸುವರ್ಣಮಯವಾದ ಉಡಿದಾರದಿಂದಲೂ ಲೋಕಮೋಹನವಾದ ಆಕಾರವುಳ್ಳ ಆ ಭಗವಂತನ ನಿತಂಬಪ್ರದೇಶವನ್ನು ಹೃದಯದಲ್ಲಿಟ್ಟು ಧ್ಯಾನಿಸಬೇಕು. ಆಮೇಲೆ ಕ್ರಮವಾಗಿ ಸಮಸ್ತಲೋಕಗಳಿಗೂ ಬಂಡಾರದಂತೆ ನಿವಾಸಸ್ಥಾನವಾದ ಆ ಭಗವಂತನ ಉದರಪ್ರದೇಶವನ್ನೂ, ಅದರಲ್ಲಿ ಬ್ರಹ್ಮದೇವನಿಗೆ ನಿವಾಸಸ್ಥಾನವಾಗಿಯೂ, ಜಗದ್ರೂಪವಾದ ತಾವರೆಹೂವಿಗೆ ಜನ್ಮಸ್ಥಾನವಾಗಿಯೂ ಇರುವ ಆ ಭಗವಂತನ ನಾಭಿಯನ್ನೂ, ಅದರ ಮೇಲ್ಭಾಗದಲ್ಲಿ ಮು

---

*ಪೂರ್ವದಲ್ಲಿ ಭಗವಂತನು, ತ್ರಿವಿಕ್ರಮಾವತಾರವನ್ತೆತ್ತಿ, ತನ್ನ ಒಂದು ಪಾದವನ್ನು ಮೇಲೆ ನೀಡಿದಾಗ, ಸತ್ಯಲೋಕದಕಡೆಗೆ ಬಂದ ಆ ಪಾದವನ್ನು ಬ್ರಹ್ಮನು ತನ್ನ ಕಮಂಡಲುತೀರ್ಥದಿಂದ ತೊಳೆಯಲು, ಆ ಪಾದತೀರ್ಥವೇ ಗಂಗಾಜಲವಾಗಿ ಹೊರಟಿತೆಂದು ಪೂರ್ವಕಥೆ.

ತ್ತಿನ ಸರಗಳ ಕಾಂತಿಯಿಂದ ಬಿಳುಪಾಗಿಯೂ, ಮರಕತಮಣಿಗಳಂತೆ ಶ್ಯಾಮಲವಾಗಿಯೂ ಇರುವ ಆ ಭಗವಂತನ ಸ್ತನಾಗ್ರಗಳ ಸೌಂದರ್ಯವನ್ನೂ ಧ್ಯಾನಿಸುತ್ತಿರಬೇಕು. ಅದರಮೇಲೆ ಶ್ರೀಮಹಾಲಕ್ಷ್ಮಿಗೆ ನಿತ್ಯನಿವಾಸ ಸ್ಥಾನವಾಗಿಯೂ, ಧ್ಯಾನಿಸತಕ್ಕವರ ಮನಸ್ಸಿಗೂ, ಕಣ್ಣಿಗೂ ಅತ್ಯಾನಂದವನ್ನುಂಟುಮಾಡತಕ್ಕುದಾಗಿಯೂ ಇರುವ ಆ ಭಗವಂತನ ವಕ್ಷಸ್ಥಲವನ್ನು ಧ್ಯಾನಿಸಬೇಕು. ಅದರಿಂದಾಚೆಗೆ ತನಗೆ ಭೂಷಣವಾದ ಕೌಸ್ತುಭ ಮಣಿಯನ್ನೇ ತನ್ನ ಕಾಂತಿಯಿಂದ ಅಲಂಕರಿಸುವಂತೆ ಅದ್ಭುತಸೌಂದರ್ಯವಿಶಿಷ್ಟವಾದ ಆ ಭಗವಂತನ ಕಂಠವನ್ನು ಧ್ಯಾನಿಸಬೇಕು. ಪೂರ್ವದಲ್ಲಿ ಮಂದರಪರ್ವತದಿಂದ ಕ್ಷೀರಸಮುದ್ರನನ್ನು ಕಡೆಯುವಾಗ, ಅದರ ಸಂಘರ್ಷಣದಿಂದ ಸಾಣೆಹಿಡಿದಂತೆ ಅತ್ಯಂತಪ್ರಕಾಶ ವಿಶಿಷ್ಟವಾದ ತೋಳ್ಬಲೆಗಳಿಂದ ಶೋಭಿತಗಳಾಗಿಯೂ, ಸಮಸ್ತಲೋಕಪಾಲಕರಿಗೂ ಆಶ್ರಯವಾಗಿಯೂ ಇರುವ ಆತನ ತೋಳುಗಳ ಸೌಂದರ್ಯವನ್ನು ಧ್ಯಾನಿಸಬೇಕು. ಅದರಿಂದಾಚೆಗೆ ಆ ಭಗವಂತನ ಹಸ್ತಾಗ್ರಭಲ್ಲಿ ತೇಜಸ್ಸಿನಿಂದ ಜ್ವಲಿಸುತ್ತಿರುವ ಸುದರ್ಶನಚಕ್ರವನ್ನೂ, ಕಮಲದಲ್ಲಿ ತುಳಿತಿರುವ ರಾಜಹಂಸದಂತೆ ಆತನ ಮತ್ತೊಂದು ಹಸ್ತದಲ್ಲಿ ಥರಿಸಲ್ಪಟ್ಟ ಪಾಂಚಜನ್ಯವೆಂಬ ಶಂಖವನ್ನೂ ಧ್ಯಾನಿಸಬೇಕು. ಆಮೇಲೆ ಆ ಭಗವಂತನಿಗೆ ಅತ್ಯಂತಪ್ರೀತಿಪಾತ್ರವಾಗಿಯೂ, ಅನೇಕಶತ್ರುಗಳ ರಕ್ತದ ಕೆಸರಿನಿಂದ ತೊಯ್ದುದಾಗಿಯೂ ಇರುವ ಕೌಮೋದಕಿಯೆಂಬ ಗದೆಯನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು. ಆಮೇಲೆ ಆ ಭಗವಂತನ ಕಂಠದಲ್ಲಿ ಭ್ರಮರಝಂಕಾರಗಳಿಂದ ಕೂಡಿದ ವನಮಾಲಿಕೆಯನ್ನೂ, ಸಮಸ್ತಜೀವಗಳಿಗೂ ಅಧಿಷ್ಠಾನದೇವತಾಸ್ವರೂಪವಾದ ಕೌಸ್ತುಭಮಣಿಯನ್ನೂ ಧ್ಯಾನಿಸಬೇಕು. ಭಕ್ತಾನುಗ್ರಹಕ್ಕಾಗಿಯೇ ತನ್ನ ಸಂಕಲ್ಪದಿಂದ ಬೇರೆಬೇರೆ ಅವತಾರಗಳನ್ನೆತ್ತುವ ಆ ಭಗವಂತನ ಮಂದಹಾಸಸುಂದರವಾದ ಮುಖಕಮಲವನ್ನೂ, ಕುಂಡಲಕಾಂತಿಯಿಂದ ಥಳಥಳಿಸುತ್ತಿರುವ ಆತನ ಕಪೋಲಗಳನ್ನೂ, ಎಸಳಾಗಿ ಉಬ್ಬಿದ ಆತನ ಮೂಗಿನ ಸೌಂದರ್ಯವನ್ನೂ ಹೃದಯದಲ್ಲಿ ಧ್ಯಾನಿಸಬೇಕು. ಯಾವ ಮುಖಾರವಿಂದವು ಕಮಲದಂತಿರುವ ಕಣ್ಣುಗಳಿಂದಲೂ ಮುಂದೆ ತೂಗಾ

ಡುತ್ತಿರುವ ಕಟಾಕ್ಷಪ ಮುಂಗುರುಳುಗಳಿಂದಲೂ ಶೋಭಿತವಾಗಿ,ಸುತ್ತಲೂ ಭ್ರಮುರಪಙ್ಕ್ತಿಯಿಂದಲೂ, ನಡುವೆ ಎರಡುಮೀನುಗಳಿಂದಲೂ, ಕೂಡಿದ ಕಮಲವನ್ನು ತಿರಸ್ಕರಿಸುತ್ತ, ಇಂತಹವಾದ ಹುಬ್ಬುಗಳಿಂದ ಲೋಕಮೋಹಕವಾಗಿರುವುದೋ, ಆ ಮುಖಸೌಂದರ್ಯವನ್ನು ಒಂದೇಮನಸ್ಸಿನಿಂದ ಸಾವಧಾನವಾಗಿ ಧ್ಯಾನಿಸಬೇಕು. ಅತ್ಯುತ್ತರ ಸಂಸಾರತಾಪಶ್ರಯವನ್ನು ನೀಗಿಸುವುದಕ್ಕಾಗಿ ಸುತ್ತಲೂವ್ಯಾಪಿಸುತ್ತಿರುವ ಬಲ್ಲಾಸವಿತಿಷ್ಟವಾದ ಅತನ ಪೃಷ್ಟಿಪ್ರಸರಾವನ್ನು ಚಿರಕಾಲದವರೆಗೆ ಭಾವಿಸುತ್ತಿರಬೇಕು. ಮತ್ತು ತನ್ನಲ್ಲಿ ಮರಹೊಕ್ಕವರ ಪುನರಿಜಿಬಾಷ್ಪವೆಂಬ ಸಮುದ್ರವನ್ನು ಶೋಷಿಸತಕ್ಕ ದಾಂತ ಆ ಭಗವಂತನ ಮಂದಹಾಸವನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು. ಯೋಗಿಗಳ ಮನಸ್ಸನ್ನು ಮೋಹಪಡಿಸುವುದಕ್ಕಾಗಿ ಪ್ರಯತ್ನಿಸುತ್ತಿರುವ ಮನ್ಮಥನೂ ಮರುಳಾಗಿ ನಿಲ್ಲುವಂತೆ, ಜಗನ್ಮೋಹನಸೌಂದರ್ಯವುಳ್ಳ ಆ ಭಗವಂತನ ಪುಟ್ಟಿಬ್ಬಗಳನ್ನು ಹೃದಯಸಲ್ಲಿಟ್ಟು ಧ್ಯಾನಿಸಬೇಕು. ಮತ್ತು ಯೋಗಿಗಳಿಗೂ ಎಡೆಬಿಡದೆ ಧ್ಯಾನಿಸತಕ್ಕುದಾಗಿಯೂ, ತುಟಿಯ ಕಾಂತಿಯಿಂದ ಕೆಂಪೇರಿ, ಪೊಲ್ಲೆಯು ಮೊಗ್ಗಿನಂತಿರುವ ದಂತಪಙ್ಕ್ತಿಯಿಂದ ಶೋಭಿತವಾಗಿಯೂ ಇರುವ ಆ ಭಗವಂತನ ಅಟ್ಟಹಾಸವನ್ನು ಎಡೆಬಿಡದೆ ಹೃದಯಸಲ್ಲಿಟ್ಟು ಭಕ್ತಿಯಿಂದ ಧ್ಯಾನಿಸುತ್ತಿರಬೇಕು. ಹೀಗೆ ಭಗವಂತನ ಮೋಹಸೌಂದರ್ಯದಲ್ಲಿ ನಿಟ್ಟು ಮನಸ್ಸುಳ್ಳವನಾಗಿ, ಬೇರೆಯಿಂದನ್ನು ಕಣ್ಣೆತ್ತಿಯೂ ನೋಡದೆ, ಪ್ರೇಮಪೂರ್ವಕವಾದ ಭಕ್ತಿಯಿಂದ ಎಡೆಬಿಡದೆ ಧ್ಯಾನಿಸುತ್ತ ಬಂದರೆ, ಇದೇ ಸಮಾಧಿಯನಿಸುವುದು ಈ ಆನಂದದಿಂದ ಮನಸ್ಸು ಕರಗಿ, ಮೋಹವೆಲ್ಲವೂ ಪುಳಕಿತವಾಗುವುದು. ಕಣ್ಣುಗಳಲ್ಲಿ ಆನಂದಬಾಷ್ಪವು ತುಳುಕುವುದು ಆನಂದಸಾಗರದಲ್ಲಿ ಮುಳುಗಿದಂತಾಗುವುದು. ಆದರ ಭಗವಂತನ ರೂಪವನ್ನು ಗ್ರಹಿಸುವುದರಲ್ಲಿ ಗಾಳಿದಂತೆ ಬೀಸಿದ ಇಂತಹ ದೃಢತುನಸ್ಸೂಕೂಡ, ಅದನ್ನು ಗ್ರಹಿಸಲಾರದೆ ಹಿಂಜರಿಯುವುದು. ಇಂತಹ ಸ್ಥಿತಿಯಲ್ಲಿ ಭಗವಂತನ ಸೌಂದರ್ಯವು ಗಾಳವನ್ನೇ ಎಳೆದುಕೊಂಡು ಹೋಗುವ ಮೀನಿನಂತೆ ಆ ಮನಸ್ಸನ್ನು ತನ್ನ ಕಡೆಗೇ ಎಳೆಯುತ್ತಿರುವುದು. ಆಗ ಮನಸ್ಸು

ಇತ್ತಲಾಗಿ ಶಬ್ದಾದಿವಿಷಯಗಳಲ್ಲಿ ಆಸೆಯೆನ್ನು ಬಿಟ್ಟುದರಿಂದ, ಹೊಗೆಯಿಲ್ಲದ ಅಗ್ನಿ ಜ್ವಾಲೆಯಂತೆ ನಿಷ್ಕಲ್ಮಷವಾಗಿ, ಅತ್ತಲಾಗಿ ಭಗವಂತನನ್ನೂ ಗ್ರಹಿಸಲಾರದೆ ಹಿಂತಿರುಗಿ ನಿರಾಶ್ರಯವಾಗುವುದು. ಹೊರಗಿನ ವ್ಯಾಪಾರಗಳಿಂದ ವಿಮುಖವಾದ ಅಂತಹ ಮನಸ್ಸಿಗೆ, ತಾನು ಅದುವರೆಗೆ ಧ್ಯಾಸಿಸುತ್ತಿದ್ದ ಪರಮಾತ್ಮನೊಡನೆ ಸಾಕ್ಷಾತ್ಸಂಬಂಧವುಳ್ಳುದಾಗಿಯೂ, ಪರಿಶುದ್ಧವಾಗಿಯೂ ಇರುವ ಆತ್ಮಸ್ವರೂಪವು ಆಗ ತನಗೆತಾನೆ ಗೋಚರಿಸುವುದು. ಈ ನಿಜಸ್ವರೂಪವು ತಿಳಿದೊಡನೆ ಜೀವನಿಗೆ ದೇಹದಲ್ಲಿ ತಾನೆಂಬ ಅಭಿಮಾನವೂ, ಕಾರ್ಯದಲ್ಲಿ ತಾನೇ ಸ್ವತಂತ್ರನೆಂಬ ಅಭಿಮಾನವೂ ತೊಲಗಿ ಆತ್ಮಾನಂದಾನುಭವವುಂಟಾಗುವುದು. ಹೀಗೆ ಭಗವಂತನ ಅವಯವಗಳನ್ನು ಧ್ಯಾಸಿಸುವುದರಿಂದ, ಕೊನೆಗೆ ನೆಲೆಯಾಗಿ ನಿಲ್ಲುವ ಭಕ್ತಿರೂಪವಾದ ಈ ಮನಸ್ಸಿನ ವ್ಯಾಪಾರವು, ಶರೀರಾವಸಾನದವರೆಗೂ ಕದಲದೆ ಅನುಸರಿಸಿ ಬರುವುದು. ಈ ಭಕ್ತಿಯಿಂದ ಶಬ್ದಾದಿವಿಷಯಗಳಲ್ಲಿ ವಿರಕ್ತಿಹೊಂದಿ, ಪರಮಾತ್ಮಸ್ವರೂಪವನ್ನು ಯಥಾಸ್ಥಿತವಾಗಿ ತಿಳಿದು, ಕರ್ಮಸಂಬಂಧದಿಂದುಂಟಾಗುವ ಸುಖ, ದುಃಖ, ಜರೆ, ಮರಣ, ಮುಂತಾದುವೆಲ್ಲವನ್ನೂ ಅತಿಕ್ರಮಿಸಿದ ಆತ್ಮನು, ಪಾಪನಿವೃತ್ತಿಯೇ ಮೊದಲಾದ ಅಷ್ಟಗುಣಗಳಿಂದ ಕೂಡಿದ ತನ್ನ ನಿಜವಾದ ಮಹಿಮೆಯಲ್ಲಿ ನೆಲೆಗೊಳ್ಳುವನು. ಸುಖದುಃಖಗಳಿಗೆ ಕಾರಣವಾದ ದೇಹಾಭಿಮಾನವೂ, ಕರ್ಮಗಳಲ್ಲಿ ತಾನೇ ಸ್ವತಂತ್ರನೆಂಬ ಅಭಿಮಾನವೂ, ಆ ದೇಹಸಂಬಂಧದಿಂದಲೇ ಉಂಟಾದುವೆಂದೂ ತಿಳಿದುಕೊಳ್ಳುವನು. ಮತ್ತು ಸಾಂಸಾರಿಕಪ್ರವರ್ತನಗಳೆಲ್ಲವೂ ಆ ದೇಹಕ್ಕೆ ಸೇರಿದುವೆಂದೂ, ಆ ದೇಹವೆಂಬುದು ಸ್ಥಿರವಲ್ಲದೆ ಜನ್ಮಜನ್ಮಕ್ಕೆ ಬೇರೆಬೇರೆಯಾಗಿ ಮಾರ್ಪಡುವ ಪ್ರಕೃತಿಯ ಪರಿಣಾಮವೆಂದೂ, ಆತ್ಮಸ್ವರೂಪವು ಎಂದಿಗೂ ಬದಲಾಯಿಸದೆ ಜ್ಞಾನಾತ್ಮವಾದುದೆಂದೂ ತಿಳಿಯುವನು. ಹೆಚ್ಚೇಕೆ? ಮನುಷ್ಯನನ್ನು ಕುಡಿದು ಮದವೇರಿದವನು, ತಾನು ಉಟ್ಟ ಬಟ್ಟೆಯೆನ್ನೇ ಅರಿಯದಿರುವಂತೆ, ಈ ಭಕ್ತಿಯೋಗದಿಂದ ಆತ್ಮಸ್ವರೂಪವನ್ನು ತಿಳಿದ ಯೋಗಿಯು, ತಾನು ಪಡೆದಿರುವ ಶರೀರವನ್ನೇ ತಾನು ಮರೆತು ಬಿಡುವನು. ಈಶ್ವರಸಂಕಲ್ಪದಿಂದ

ತನಗೆ ಅಶರೀರಸಂಬಂಧವುಂಟಾಯಿತನ್ನಾಗಲಿ, ಆತ್ಮವು ಬಿಟ್ಟುಹೋದಮೇಲೆ ಶರೀರವು ಕೆಳಗೆ ಬಿದ್ದು ಬಂಧುಗಳಿಂದ ಸುಡಲ್ಪಡುವುದನ್ನಾಗಲಿ, ಕೊನೆಗೆ ಅದು ಭಸ್ಮವಾಗುವುದನ್ನಾಗಲಿ ಯಾವುದನ್ನೂ ಗಮನಿಸಲಾರನು. ಈಶ್ವರ ಸಂಕಲ್ಪದಿಂದುಂಟಾದ ಆ ದೇಹವೂಕೂಡ, ತನ್ನ ಪ್ರಾರಬ್ಧಕರ್ಮವೆಲ್ಲವೂ ನಡೆಸುವವರೆಗೆಮಾತ್ರವೇ ಭೂತೇಂದ್ರಿಯಪ್ರಾಣಂಗಳೊಡಗೂಡಿ ತನಗೆ ತಗುಲುಕಟ್ಟಿರುವುದೆಂದೂ, ಆ ಶರೀರವು ತನ್ನನ್ನು ಬಿಟ್ಟು ತೊಲಗುವುದಕ್ಕೆ, ಪ್ರಾರಬ್ಧಕರ್ಮವು ನಡೆಸುವುದನ್ನೇ ನಿರೀಕ್ಷಿಸುತ್ತಿರುವುದೆಂದೂ ತಿಳಿಯುವನು. ಈ ಸನ್ಯಾಥಿಯೋಗವನ್ನು ಸಾಧಿಸಿದವನು, ಪಾಪನಿವೃತ್ತಿಯೇ ಮೊದಲಾದ ಅಷ್ಟಗುಣಗಳಿಂದ ಕೂಡಿದ ತನ್ನ ಮಹಿಮೆಯನ್ನು ತಾನು ತಿಳಿದೊಡನೆ, ಕನಸಿನಲ್ಲಿ ಕಂಡ ಪದಾರ್ಥಗಳಂತೆ, ತನ್ನ ಶರೀರದಿಂದ ಬಿಡುಗಡೆಹೊಂದಿದಮೇಲೆ, ಅಶಾಶ್ವತಗಳೆನಿಸಿದ ಪತ್ನೀಪುತ್ರಾದಿಗಳೊಡಗೂಡಿದ ಆ ದೇಹವನ್ನು ತಿರುಗಿ ಹೊಂದಲಾರನು. ಅಮ್ಮಾ ! ಲೋಕದಲ್ಲಿ ಮನುಷ್ಯನು, ತನ್ನ ಹೆಂಡಿರು, ಮಕ್ಕಳು, ಮಿತ್ರರು, ಮೊದಲಾದ ಇಷ್ಟಜನರೆಲ್ಲರೂ ತನಗೆ ಅತ್ಯಂತಪ್ರೀತಿಪಾತ್ರರಾಗಿದ್ದರೂ ಅವನ್ನೂ, ಅವರೂ, ಹೇಗೆ ಪ್ರತ್ಯೇಕವಾಗಿ ತೋರುವರೋ, ದೇಹಕ್ಕೂ, ಆತ್ಮಕ್ಕೂ ಇರುವ ಸಂಬಂಧವೂ ಇದರಂತೆಯೇಹೊರತು ಇದಕ್ಕಿಂತಲೂ ಹೆಚ್ಚಲ್ಲ. ಇದನ್ನು ನೋಡಿದರೆ ಜೀವಾತ್ಮನಿಗೂ ದೇಹಕ್ಕೂ ಇರುವ ಸಂಬಂಧವು ವ್ಯಕ್ತವಾಗುವುದು. ಇನ್ನು ಈ ಪ್ರಕೃತಿಪುರುಷರಿಗೂ, ಪರಮಾತ್ಮನಿಗೂ ಇರುವ ಸಂಬಂಧವೆಂತದೆಂಬುದನ್ನು ಹೇಳುವೆನು ಕೇಳು ! ಬೆಂಕಿಯಿಂದುಂಟಾಗುವ ಹೊಗೆ, ಕೊಳ್ಳಿ, ಕಿಡಿ, ಮುಂತಾದುವೆಲ್ಲವೂ ವಿವೇಕಜ್ಞಾನವಿಲ್ಲದವರಿಗೆ ಅಗ್ನಿಯಂತೆಯೇ ಕಾಣುವುದು ಸಹಜವಷ್ಟೆ ? ವಾಸ್ತವದಲ್ಲಿ ಅಗ್ನಿಯು ಇವುಗಳಿಗಿಂತಲೂ ಹೇಗೆ ಬೆಪ್ಪರ್ಟ್ಟಿರುವುದೋ, ಹಾಗೆಯೇ ಭೂತೇಂದ್ರಿಯಗಳಿಂದ ಶರೀರರೂಪವಾಗಿ ಪರಿಣಮಿಸುವ ಪ್ರಕೃತಿಯೂ, ಆ ಶರೀರದೊಳಗೆ ಸೇರಿರುವ ಆತ್ಮವೂಕೂಡ ಪರಬ್ರಹ್ಮನೆಂದು ಹೇಳಲ್ಪಡುವ ಷಡ್ಗುಣಪರಿಪೂರ್ಣನಾದ ಪರಮಾತ್ಮನಿಗಿಂತಲೂ ಬೇರ್ಪರ್ಟ್ಟವುಗಳು. ಆ ಪರಮಾತ್ಮನು, ಈ ಪ್ರಕೃತಿಪುರುಷರಲ್ಲಿ ಪ್ರವೇಶಿಸಿ, ಅವೆರಡಕ್ಕೂ ಧಾರ

ಕನಾಗಿಯೂ, ಪೋಷಕನಾಗಿಯೂ ಇರುವನು. ದೇವತಿರ್ಯಙ್ಮನುಷ್ಯರೇ ಮೊದಲಾದ ಬೇರೆಬೇರೆ ಶರೀರಗಳಲ್ಲಿ ಒಳಹೊಕ್ಕಾಗ್ಯೂ, ಅವುಗಳನ್ನು ಧರಿಸಿರತಕ್ಕ ಜೀವಗಳೆಲ್ಲವೂ, ಜ್ಞಾನಸ್ವರೂಪವಾದುದರಿಂದ, ಸಮಾನಾಕಾರವುಳ್ಳವರೆಂದೂ, ಅವರವರು ಧರಿಸಿರತಕ್ಕ ಮೇ[illegible]ಶರೀರಗಳು, ಕರ್ಮಾಧೀನವಾಗಿ ಬೇರೆಬೇರೆ ಆಕಾರಗಳಿಂದ ತೋರಿದರೂ, [illegible]ಲ್ಲವೂ ಒಂದೇ ಪ್ರಕೃತಿಯ ವಿಕಾರಭೇದವಾದುದರಿಂದ, ಪಾಸ್ಕನೆಯಲ್ಲಿ ಏಕರೂಪವಾದುದೆಂದೂ ತಿಳಿಯಬೇಕು. ಓ ಜನನೀ! ಬೆಂಕಿಯು ತನಗೆ ಆಶ್ರಯವಾದ ಹುಲ್ಲು, ಕಡ್ಡಿ ಮೊದಲಾದುವುಗಳಲ್ಲಿ ನೇರಿದಾಗ, ಆಯಾ ಶ್ರಯವಸ್ತುಗಳ ಆಕಾರಕ್ಕೆ ತಕ್ಕಂತೆ ಉದ್ದವಾಗಿಯೂ, ಸಣ್ಣನಾಗಿಯೂ, ವಕ್ರವಾಗಿಯೂ, ನಾನಾಪ್ರಕಾರವಾಗಿ ಕಾಣುವುದುಂಟು. ಅಗ್ನಿಯಂತೆಯೇ ಒಂದೇ ಆಗಿದ್ದರೂ, ಆಶ್ರಯವಸ್ತುಗಳ ಆಕಾರಭೇದದಿಂದ, ನಾನಾ ಬೇರೆಬೇರೆ ಆಕಾರದಲ್ಲಿ ಕಾಣುವಂತೆ, ದೇವಾದಿಶರೀರಗಳೆಲ್ಲ ಒಳಹೊಕ್ಕಿರುವ ಜೀವಾತ್ಮವೂ ಕೂಡ, ಆ ಶರೀರಭೇದಕ್ಕೆ ತಕ್ಕಂತೆ ನಾನಾಪ್ರಕಾರವಾಗಿ ತೋರುವುದು. ಜ್ಞಾನವೆಂಬ ಒಂದೇ ಆಕಾರವನ್ನು ಹೊಂದಿರುವ ಜೀವಾತ್ಮಗಳೆಲ್ಲವೂ ಒಂದೇ ರೂಪವೆಂದು ಸ್ಪಷ್ಟವಾಗಿರುವುದು. ಆದುದರಿಂದ ಓ ಜನನೀ! ಭಗವಂತನ ಸಂಕಲ್ಪದಿಂದ ಪ್ರೇರಿತವಾಗಿಯೂ, ಪ್ರಪಂಚದಲ್ಲಿ ಕಾರ್ಯಕಾರಣರೂಪದಿಂದ ವಿಸ್ತರಿಸುವುದಾಗಿಯೂ, ಸೂಕ್ಷ್ಮವಾಗಿ ಬಿಟ್ಟು ಹೋಗದಿರುವುದಾಗಿಯೂ ಇರುವ ಈ ಪ್ರಕೃತಿಯನ್ನು, ಭಕ್ತಿಯೋಗದಿಂದ ಅಡಗಿಸಿ, ಅಷ್ಟಗುಣಾಂಗಗಳಿಂದ ಕೂಡಿರುವ ತನ್ನ ನಿಜಸ್ವರೂಪವನ್ನು ಹೊಂದಿದವನು, ತಿರುಗಿ ಸಂಸಾರವೆಂಬ ಕಟ್ಟಿನಲ್ಲಿ ಸಿಕ್ಕಿ ಬೀಳಲಾರನು" ಎಂದನು. ಇದು ಇಪ್ಪತ್ತೆಂಟನೆಯ ಅಧ್ಯಾಯವು.

ಕಪಿಲನು ದೇವಹೂತಿಗೆ ಭಕ್ತಿಯೋಗದ ವಿಭಾಗಗಳನ್ನೂ, ಕಾಲಸ್ವರೂಪವನ್ನೂ ತಿಳಿಸಿದುದು.

ಕಪಿಲನು ಹೇಳಿದ ಈ ಭಕ್ತಿಯೋಗದ ಮಹಿಮೆಯನ್ನು ಕೇಳಿದಮೇಲೆ ದೇವಹೂತಿಯು "ಓ ಮಹಾತ್ಮಾ! ಮಹತ್ತು ಮೊದಲಾದ ತತ್ವಗಳಿ

ಗೂ, ಪ್ರಕೃತಿಗೂ, ಪುರುಷನಿಗೂ ಇರುವ ಪರಸ್ಪರವೈಲಕ್ಷಣ್ಯವನ್ನೂ, ಅವುಗಳ ಸ್ವರೂಪವನ್ನೂ, ಪರಮಾತ್ಮನ ಸ್ವರೂಪವನ್ನೂ ತಿಳಿದುಕೊಂಡೆನು. ಸಿದ್ಧಾಂತಗಳಲ್ಲಿ ಈ ಪ್ರಕೃತಿ ಮೊದಲಾದುವುಗಳ ನಿಜಸ್ಥಿತಿಯನ್ನು ತಿಳಿಯುವುದಕ್ಕೆ ಯಾವ ವಿಧವಾದ ಭಕ್ತಿಯನ್ನು ಮುಖ್ಯವೆಂದು ಹೇಳುವರೋ, ಆ ಭಕ್ತಿಯೋಗದ ಸ್ವರೂಪಲಕ್ಷಣಗಳನ್ನು ನನಗೆ ವಿವರಿಸಿ ತಿಳಿಸಬೇಕು. ಮೋಕ್ಷಾಪೇಕ್ಷೆಯುಳ್ಳವರಿಗೆ ಪರಕ್ಕೆ ಯುಪಯುಕ್ತವಾಗಿರುವ ಸಿದ್ಧಿಸತಕ್ಕ ಸಂಸಾರದ ವಿಚಿತ್ರಗತಿಗಳನ್ನೆಲ್ಲವನ್ನೂ ತಿಳಿಸಬೇಕು. ಮತ್ತು ಎಲ್ಲವೆಂಬುದು ಭಗವಂತನಿಗೆ ಶರೀರವಾಗಿಯೂ, ಬ್ರಹ್ಮಾದಿದೇವತೆಗಳನ್ನು ತನ್ನ ನಿಯಮಾಡಿಕೊಳ್ಳಲ್ಪಟ್ಟವರಾಗಿಯೂ ಇರುವನೆಂದೂ, ಈ ಎಲ್ಲವುದಿಂದ ಬಂದೊದಗುವ ಜರಾಮರಣಾದಿಗಳೇ ಮೊದಲಾದ ಸಾಂಸಾರಿಕಧರ್ಮಗಳನ್ನು ದಾಟುವುದಕ್ಕಾಗಿಯೇ, ಹಿರಿಯರು ನಿವೃತ್ತಿಧರ್ಮವನ್ನಾಚರಿಸುವರೆಂದೂ ಹೇಳಿದೆಯಲ್ಲವೆ? ಅಂತಹ ಕಾಲಸ್ವರೂಪವನ್ನು ವಿವರವಾಗಿ ತಿಳಿಸಬೇಕು. ದೇಹವನ್ನೇ ಆತ್ಮವೆಂದೂ, ತಾನೇ ಸ್ವತಂತ್ರನೆಂದೂ ಭ್ರಮಿಸಿ, ಆತ್ಮ ಪರಮಾತ್ಮಸ್ವರೂಪವನ್ನು ತಿಳಿಯದೆ, ಸ್ವರ್ಗನರಕಾದಿಗಳಿಗೆ ತಂದು ಸೇರಿಸತಕ್ಕ ಕರ್ಮಗಳನ್ನಾಚರಿಸಿ, ಆ ಮೂಲಕವಾಗಿ ಸಂಸಾರವೆಂಬ ಗಾಂಭೀರಾಂಧಕಾರದಲ್ಲಿ ಬಿದ್ದು ನರಳುವ ಪ್ರಪಂಚಕ್ಕೆ ಜ್ಞಾನಪ್ರಕಾಶವನ್ನುಂಟುಮಾಡುವುದಕ್ಕಾಗಿಯೇ ನೀನು ಸೂರ್ಯನಂತೆ ಉದಿಸಿದವನಲ್ಲವೆ? ಆದುದರಿಂದ ಈ ನನ್ನ ಅಜ್ಞಾನಾಂಧಕಾರವನ್ನು ನೀಗಿಸಬೇಕು" ಎಂದಳು. ಇದನ್ನು ಕೇಳಿ ಕಪಿಲಮಹಾಮುನಿಯು ಸಂತೋಷಗೊಂಡು, ತನ್ನ ತಾಯಿಯಾದ ದೇವಹೂತಿಯನ್ನು ಕುರಿತು. ಅಮ್ಮಾ! ಕೇಳು! ಭಕ್ತಿಯನ್ನು ಸಾಧಿಸುವುದಕ್ಕೆ ಅನೇಕಮಾರ್ಗಗಳುಂಟು. ಅದಕ್ಕೆ ತಕ್ಕಂತೆ ಭಕ್ತಿಯೋಗವೆಂಬುದೂ ಹಲವು ಬಗೆಯಾಗಿರುವುದು. ಮನುಷ್ಯನ ಗುಣಸ್ವಭಾವಗಳಿಗೆ ತಕ್ಕಂತೆ ಅವನ ಮನೋಧರ್ಮವೂ ಭೇದಿಸುವುದರಿಂದ, ಆ ಮನಸ್ಸಿಗೆ ವ್ಯಾಪಾರವಾದ ಭಕ್ತಿಯಲ್ಲಿಯೂ, ಸಾತ್ವಿಕವೆಂದೂ ರಾಜಸವೆಂದೂ, ತಾಮಸವೆಂದೂ ಮೂರುಬಗೆಯುಂಟು. ದ್ವೇಷದಿಂದಾಗಲಿ, ಡಂಭದಿಂದಾಗಲಿ, ಮಾತ್ಸರ್ಯದಿಂದಾಗಲಿ, ನಡೆಸತಕ್ಕ ಭಕ್ತಿಯು ತಾಮಸ

ಭಕ್ತಿಯೆನಿಸುವುದು ಈ ತಾಮಸಭಕ್ತಿಯಲ್ಲಿಯೂಕೂಡ ಉತ್ತಮಾಧಮ ಮಧ್ಯಮಗಳೆಂಬ ಮೂರು ಒಳಭೇದಗಳುಂಟು ಕೋಪಸ್ವಭಾವವುಳ್ಳವನಾಗಿಯೂ, ಇತರಭೂತಗಳಲ್ಲಿ ಭೇದಬುದ್ಧಿಯುಳ್ಳವನಾಗಿಯೂ ಇರುವವನು, ಮೇಲೆ ಹೇಳಿದ ಯಾವುದೋ ಒಂದು ಕಾರಣವನ್ನಿಟ್ಟುಕೊಂಡು, ನನ್ನಲ್ಲಿ ಭಕ್ತಿಯನ್ನು ತೋರಿಸಿದರೆ, ಅವನು ತಾಮಸಭಕ್ತನೆನಿಸುವನು. ಶಬ್ದಾದಿ ವಿಷಯಗಳ ಲಾಭವನ್ನಾಗಲಿ, ಕೀರ್ತಿಯನ್ನಾಗಲಿ,ಐಶ್ವರ್ಯವನ್ನಾಗಲಿ ಅಪೇಕ್ಷಿಸಿ ನನ್ನನ್ನು ಪೂಜಿಸತಕ್ಕವನು ರಾಜಸಭಕ್ತನೆನಿಸುವನು. ಇಂತವನಿಗೆ ನನ್ನಲ್ಲಿ ಪರಮಾತ್ಮನೆಂಬ ಬುದ್ಧಿಯೂ, ತನ್ನಲ್ಲಿ ನಾನು ಅಂತರ್ಯಾಮಿಯಾಗಿರುವೆನೆಂಬ ಭಾವವೂ ಇರಲಾರದು ಯಾವುದೋ ಒಂದು ದೇವತೆಯನ್ನಾಗಿ ನೆನೆಸಿ ನನ್ನನ್ನು ಪೂಜಾದಿಗಳಿಂದ ಪುರಸ್ಕರಿಸುತ್ತಿರುವನು. ಇಂತವನ ಭಕ್ತಿಯು ರಾಜಸಭಕ್ತಿಯೆನಿಸುವುದು ಇವೆರಡನ್ನೂ ಬಿಟ್ಟು, ತನ್ನ ಪಾಪಗಳು ನೀಗಬೇಕೆಂದಾಗಲಿ, ಪರಮಪುರುಷನಾದ ನನ್ನಲ್ಲಿ ಕರ್ಮಸಮರ್ಪಣವನ್ನು ಮಾಡಿ, ಅದರಿಂದ ನನ್ನ ಅನುಗ್ರಹವನ್ನು ಪಡೆಯಬೇಕೆಂದಾಗಲಿ, ‘‘ಸರ್ವೇಶ್ವರನ ಆಜ್ಞೆಯಾದುದರಿಂದ ನಾವು ಅವಶ್ಯವಾಗಿ ಇದನ್ನು ನಡೆಸಬೇಕು. ನಡೆಸದಿದ್ದರೆ ಭಗವಂತನ ನಿಗ್ರಹಕ್ಕೆ ಗುರಿಯಾಗುವೆ’’ ವೆಂಬ ಭಾವದಿಂದಾಗಲಿ, ತಾನು ಈಶ್ವರನಿಗೆ ಶರೀರವೆಂದೂ, ತನಗೆ ಪರಮಾತ್ಮನು ಅಂತರಾತ್ಮನೆಂದೂ, ಅವನನ್ನು ಬಿಟ್ಟು ತನಗೆ ಬೇರೆ ಆಶ್ರಯವಿಲ್ಲವೆಂದೂ ತಿಳಿದಾಗಲಿ, ನನ್ನನ್ನು ಪೂಜಿಸಿದರೆ ಅದು ಸಾತ್ವಿಕಭಕ್ತಿಯೆನಿಸುವುದು. ಈ ಸಾತ್ವಿಕಭಕ್ತಿಯೂ ಉತ್ತಮ ಮಧ್ಯಮಾಧಮಗಳೆಂದು ಮೂರು ವಿಧವಾಗಿ ಬೇರ್ಪಟ್ಟಿರುವುದು. ಭಗವಂತನ ಆಜ್ಞೆಯಾದುದರಿಂದಲೇ ಇದನ್ನು ನಾವು ಅವಶ್ಯವಾಗಿ ನಡೆಸಬೇಕೆಂದು ಸಾಧಿಸತಕ್ಕ ಭಕ್ತಿಯೋಗವು ಉತ್ತಮಭಕ್ತಿಸುವುದು.ಭಗವಂತನಲ್ಲಿ ಕರ್ಮಸಮರ್ಪಣವನ್ನು ಮಾಡಿ,ಅವನ ಅನುಗ್ರಹವನ್ನು ಪಡೆಯುವುದಕ್ಕಾಗಿಮಾಡುವ ಭಕ್ತಿಯು ಮಧ್ಯಮವೆನಿಸುವುದು. ತನ್ನ ಪಾಪಗಳನ್ನು ತೀರಿಸಿಕೊಳ್ಳಬೇಕೆಂದು ಮಾಡುವ ಭಕ್ತಿಯು ಅಧಮವೆನಿಸುವುದು ಓ! ಜನನೀ ! ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಅಡಗಿರತಕ್ಕ ಪುರುಷೋತ್ತಮನಾದ ನನ್ನ ಗುಣಗಳನ್ನು ಕವಿಯಿಂದ ಕೇಳಿದಾಗ,

ಗಂಗಾಪ್ರವಾಹವು ನಡುದಾರಿಯಲ್ಲಿ ಎಲ್ಲಿಯೂ ನಿಲ್ಲದೆ ಸಮುದ್ರವನ್ನು ಸೇರುವಂತೆ, ಮನಸ್ಸು, ಬೇರೆ ಯಾವವಿಷಯದಲ್ಲಿಯೂ ಪ್ರವರ್ತಿಸದೆ, ಬೇರೆ ಯಾವ ಫಲವನ್ನೂ ಅಪೇಕ್ಷಿಸದೆ, ನನ್ನಲ್ಲಿಗೆ ಬಂದು ಸೇರಿ, ನನ್ನನ್ನು ಪ್ರೀತಿಸುವರೆ ಅದೇ ಭಕ್ತಿಯೆನಿಸುವುದು. ಇದು ಸತ್ವಾದಿಗುಣಗಳಿಂದುಂಟಾದ ದೋಷಗಳೆಲ್ಲವನ್ನೂ ನೀಗಿಸಿ, ಮುಕ್ತಿಯನ್ನು ಕೈಗೂಡಿಸುವುದು. ಇಂತಹ ಭಕ್ತಿಯೋಗವನ್ನು ಹಿಡಿದವರಿಗೆ, ಸಾಯುಜ್ಯವೆಂದೂ, ಸಾಲೋಕ್ಯವೆಂದೂ, ಸಾಮೀಪ್ಯವೆಂದೂ, ಸಾರೂಪ್ಯವೆಂದೂ, ಬೇರೆಬೇರೆವಿಧವಾದ ಮುಕ್ತಿಗಳೆಲ್ಲವೂ ಸುಲಭವಾಗಿ ಕೈಗೂಡುವುವು. ಆದರೆ ಭಕ್ತಿಯೋಗದಿಂದ ಪಕ್ವವಾದ ಮನಸ್ಸುಳ್ಳವರಿಗೆ, ನನ್ನ ಸೇವೆಯಲ್ಲಿಹೊರತು ಮೇಲೆಹೇಳಿದ ಸಾಲೋಕ್ಯಾದಿಗಳಲ್ಲಿಯೂ ಅಪೇಕ್ಷೆ ಹುಟ್ಟಲಾರದು. ಹೀಗಿರುವಾಗ ಉತ್ತಮಭಕ್ತರಾದವರು, ಸಾಂಸಾರಿಕಫಲವನ್ನು ಅಪೇಕ್ಷಿಸಲಾರರೆಂಬುದನ್ನು ಕೇಳಬೇಕೆ?ಯಾವ ಭಕ್ತಿಯಿಂದ ಪ್ರಕೃತಿಸಂಬಂಧವನ್ನು ಬಿಟ್ಟು, ನನ್ನ ಸಾನ್ನಿಧ್ಯವಾದ ಮೋಕ್ಷವನ್ನು ಹೊಂದುವನೋ, ಅದನ್ನೇ ಆತ್ಯಂತಿಕ (ಮೇಲಾದ)ಭಕ್ತಿಯೆನ್ನುವರು. ಆ ಭಕ್ತಿಯೋಗಕ್ಕೆ ಬೇಕಾದ ಅಂಗಗಳೆಲ್ಲವನ್ನೂ ತಿಳಿಸುವೆನು ಕೇಳು.ಯಾವಫಲವನ್ನೂ ಅಪೇಕ್ಷಿಸದೆ,ತನ್ನ ವರ್ಣಾಶ್ರಮಧರ್ಮಗಳನ್ನು ನಡೆಸುತ್ತಬರುವುದು,ಪಾಂಚರಾತ್ರಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಕ್ರಮದಂತೆ ನನ್ನ ಅರ್ಚಾವಿಗ್ರಹಗಳನ್ನು ಆರಾಧಿಸುತ್ತಿರುವುದು, ಅರ್ಚಾರೂಪಿಯಾದ ನನ್ನ ನಿವಾಸಸ್ಥಾನಗಳನ್ನು ಆಗಾಗ ದರ್ಶನಮಾಡಿ ಬರುವುದು, ನನ್ನ ವಾಸಸ್ಥಾನಗಳನ್ನು ಶುದ್ಧಿಪಡಿಸುವುದು, ನನ್ನ ಮೂರ್ತಿಗಳನ್ನು ಸ್ತೋತ್ರಮಾಡುವುದು, ನಮಸ್ಕರಿಸುವುದು, ಸಮಸ್ತಭೂತಗಳನ್ನೂ ನನ್ನ ಸ್ವರೂಪವೆಂದೇ ಭಾವಿಸುವುದು, ಯಾವ ಕಾರಣದಿಂದಲೂ ಕದಲದ ವೈರಾಗ್ಯವನ್ನು ಹಿಡಿಯುವುದು, ತನಗಿಂತಲೂ ಹಿರಿಯರನ್ನು ಗೌರವಿಸುವುದು, ದುಃಖಿತರಲ್ಲಿ ದಯೆಯನ್ನು ತೋರಿಸುವುದು, ತನಗೆ ಸಮಾನರಾದವರಲ್ಲಿ ಸ್ನೇಹವನ್ನು ಬೆಳೆಸುವುದು, ಯಮನಿಯಮಾದಿಯೋಗಗಳನ್ನು ಅಭ್ಯಾಸಿಸುವುದು. ಯಾವಾಗಲೂ ವೇದಾಂತಶಾಸ್ತ್ರವನ್ನು ಕಿವಿಯಿಂದ ಕೇಳುತ್ತಿರುವುದು, ನನ್ನ ನಾಮಗಳನ್ನು ಸ್ಮರಿಸುವುದು, ತ್ರಿಕರಣಶುದ್ಧಿಯಿಂದ

ಸತ್ಪುರುಷರ ಸೇವೆಯನ್ನು ಮಾಡುವುದು, ನಿರಹಂಕಾರನಾಗಿ ವರ್ತಿಸುವುದು, ಇವೆಲ್ಲವೂ ಭಕ್ತಿಯ ಅಂಗಗಳೆನಿಸುವುವು. ಯಾವನು ಈ ಗುಣಗಳೆಲ್ಲವನ್ನೂ ತಪ್ಪದೆ ಅನುಸರಿಸುತ್ತ, ನನ್ನಿಂದ ವಿಧಿಸಲ್ಪಟ್ಟ ಧರ್ಮಗಳನ್ನನುಷ್ಠಿಸುವನೋ, ಅಂತವನ ಮನಸ್ಸು ನಿರ್ಮಲವಾಗುವುದು. ಅಂತವನು ತನ್ನ ಪ್ರಯತ್ನವಿಲ್ಲದೆಯೇ! ನನ್ನ ಸ್ಥಾನಕ್ಕೆ ಬಂದು ಸೇರುವನು. ಪುಷ್ಪಗಳಲ್ಲಿರುವ ಪರಿಮಳವು, ವಾಯುವಿನ ಸಹಾಯವಿರುವಾಗ, ತನ್ನ ಪ್ರಯತ್ನವಿಲ್ಲದೆ ಬಂದು ಘ್ರಾಣೇಂದ್ರಿಯದಲ್ಲಿ ಸೇರುವಂತೆ, ಯೋಗಿಯ ಮನಸ್ಸು, ಆ ಭಕ್ತಿಯೋಗದ ಬಲದಿಂದ ಅನಾಯಾಸವಾಗಿ ಪರಬ್ರಹ್ಮವನ್ನು ಸೇರುವುದು. ಇವೆಲ್ಲವೂ ಸಾತ್ವಿಕಭಕ್ತಿಯೋಗಗಳೆನಿಸುವುವು. ಇನ್ನು ತಾಮಸಭಕ್ತಿಯೋಗಗಳನ್ನು ತಿಳಿಸುವೆನು ಕೇಳು. ಕೆಲವರು ಸಮಸ್ತಭೂತಗಳಲ್ಲಿಯೂ ಅಂತರಾತ್ಮನಾಗಿರುವ ನನ್ನ ನಿಜವನ್ನು ತಿಳಿಯದೆ, ನಟನೆಗಾಗಿ ನನ್ನ ಅರ್ಚಾವಿಗ್ರಹವನ್ನು ಪೂಜಿಸುವುದುಂಟು ಹೀಗೆ ನಿಜವನ್ನು ತಿಳಿಯದೆ ನಡೆಸತಕ್ಕ ಪೂಜೆಯು, ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವುದೇಹೊರತು ಸಫಲವಾಗದು. ಮನೆಮಕ್ಕಳಲ್ಲಿಯೂ, ತನ್ನ ಶರೀರದಲ್ಲಿಯೂ ಅಭಿಮಾನವನ್ನಿಟ್ಟುಕೊಂಡು, ಇತರಭೂತಗಳನ್ನು ದ್ವೇಷಿಸುವುದರಮೂಲಕವಾಗಿ, ಅವುಗಳಲ್ಲಿ ಅಂತರಾತ್ಮನಾಗಿರುವ ನನ್ನನ್ನೇ ದ್ವೇಷಿಸುತ್ತ, ಅರ್ಚಾವತಾರಗಳನ್ನೂ ನನ್ನಂತೆ ಭಾವಿಸದವನ ಮನಸ್ಸು ಎಂದಿದ್ದರೂ ಶುದ್ಧವೆನಿಸದು. ಅಮ್ಮಾ !. ಹೀಗೆ ಇತರ ಭೂತಗಳಲ್ಲಿ ದ್ವೇಷಬುದ್ಧಿಯುಳ್ಳವನು, ಪರ್ವತದಂತೆ ಪೂಜಾಸಾಮಗ್ರಿಗಳನ್ನು ಸಂಗ್ರಹಿಸಿ ನನ್ನನ್ನು ಪೂಜಿಸಿದರೂ ನಾನು ಸಂತೋಷಿಸಲಾರೆನು. ಅವನಪೂಜೆಗಳೆಲ್ಲವೂ ವ್ಯರ್ಥವೆಂದೇ ತಿಳಿ.ಆದುದರಿಂದ ಮನುಷ್ಯನು,ತನ್ನ ಹೃದಯದಲ್ಲಿಯೂ,ಸಮಸ್ತಭೂತಗಳಲ್ಲಿಯೂ ಸಮವಾಗಿ ವರ್ತಿಸುತ್ತಿರುವನನ್ನನ್ನು ತಿಳಿಯುವವರೆಗೆ,ತನ್ನ ವರ್ಣಾಶ್ರಮಧರ್ಮಗಳನ್ನು ತಪ್ಪದೆ ನಡೆಸುತ್ತ, ಸರ್ವೇಶ್ವರನಾದ ನನ್ನನ್ನು ತನ್ನ ಹೃದಯಕಮಲದಲ್ಲಿಯೇ ಪೂಜಿಸುತ್ತಿರಬೇಕು.ಸಮಸ್ತಭೂತಗಳನ್ನೂ ತನ್ನೊಡನೆ ಸ್ವಲ್ಪಮಾತ್ರವೂ ಭೇದಬುದ್ಧಿಯಿಂದ ನೋಡಬಾರದು. ಹೀಗೆ ಭೇದಬುದ್ಧಿಯಿಂದ ನೋಡುವನಿಗೆ ಮೃತ್ಯು

ಭಯವೂ ಮೇಲೆಮೇಲೆ ಹೆಚ್ಚುತ್ತಿರುವುದು. ಅಂತವನು ಘೋರವಾದ ನರಕದಲ್ಲಿ ಬೀಳುವನು. ಆದುದರಿಂದ ನನ್ನನ್ನು ಪ್ರೀತಿಸಬೇಕೆಂಬ ಅಪೇಕ್ಷೆಯುಳ್ಳವನು, ಮೊದಲು ಇತರಭೂತಗಳಲ್ಲಿ ತನ್ನೊಡನೆ ಸಮಾನಭಾವವನ್ನಿಟ್ಟು, ಮಿತ್ರತ್ವದಿಂದ ನೋಡುತ್ತ, ದಾನಮಾನಗಳಿಂದ ಇತರರನ್ನು ಪೂಜಿಸುತ್ತಿರಬೇಕು. ಓ ಜನನೀ ! ಜೀವಜಾತಿಗಳಲ್ಲಿ ತನಗೆ ಮೇಲಾದವರಲ್ಲಿ ಗೌರವವನ್ನೂ, ತನಗೆ ಸಮಾನರಲ್ಲಿ ಸ್ನೇಹವನ್ನೂ, ತನಗಿಂತಲೂ ಕೀಳಾದವರಲ್ಲಿ ದಾನವನ್ನೂ ಮಾಡಬೇಕು. ಎಲ್ಲರೂ ಜ್ಞಾನಸ್ವರೂಪರಾದುದರಿಂದಲೂ, ಬ್ರಹ್ಮಸ್ವರೂಪರಾದುದರಿಂದಲೂ, ಪರಸ್ಪರಭೇದವಿಲ್ಲದವರೆಂದು ಮನಸ್ಸಿನಲ್ಲಿ ದೃಢಜ್ಞಾನವನ್ನಿಟ್ಟುಕೊಳ್ಳಬೇಕು. ಇತರರನ್ನು ದಾನಮಾನಾದಿಗಳಿಂದ ಗೌರವಿಸುವಾಗ, ಅವರೆಲ್ಲರೂ ಬ್ರಹ್ಮಸ್ವರೂಪರಾದುದರಿಂದ ಅವರಿಗೆ ನಡೆಸತಕ್ಕ ಸತ್ಕಾರಗಳೆಲ್ಲವೂ ಪರಮಾತ್ಮತೃಪ್ತಿಗಾಗಿಯೇ ಎಂಬ ಬುದ್ಧಿಯಿಂದ ನಡೆಸಿದಾಗಲೇ ಅವು ಸಾರ್ಥಕವಾಗುವುವು. ಜನನೀ ! ಇನ್ನು ಜೀವನಾಜೀವನವಸ್ತುಗಳಲ್ಲಿರುವ ತಾರತಮ್ಯವನ್ನು ತಿಳಿಸುವೆನು ಕೇಳು. ಜೀವವಿಲ್ಲದ ವಸ್ತುಗಳಿಗಿಂತಲೂ ಜೀವವುಳ್ಳ ವಸ್ತುಗಳು ಮೇಲೆನಿಸಿಕೊಳ್ಳುವುವು. ಆ ಜೀವಿಗಳಿಗಿಂತಲೂ ಪ್ರಾಣವುಳ್ಳವು ಮೇಲೆನಿಸುವುವು. ಆ ಪ್ರಾಣವುಳ್ಳವುಗಳಿಗಿಂತಲೂ ಜ್ಞಾನವುಳ್ಳವುಗಳು ಮೇಲೆನಿಸಿಕೊಳ್ಳುವುವು. ಅವಕ್ಕಿಂತಲೂ ಇಂದ್ರಿಯವ್ಯಾಪಾರವುಳ್ಳವು ಮೇಲೆನಿಸುವುವು. ಆ ಇಂದ್ರಿಯವ್ಯಾಪಾರವುಳ್ಳವುಗಳಲ್ಲಿ ಸಸ್ಯವರ್ಗಗಳಿಗೆ ಸ್ಪರ್ಶಜ್ಞಾನವುಮಾತ್ರ ಇರುವುದರಿಂದ, ಈ ವೃಕ್ಷಾದಿಗಳಿಂದಲೂ ರಸಜ್ಞಾನಸಾಮರ್ಥ್ಯವುಳ್ಳ ಮತ್ಸ್ಯಾದಿಗಳು ಶ್ರೇಷ್ಠವೆನಿಸುವುವು. ಅವಕ್ಕಿಂತಲೂ ಗಂಧಜ್ಞಾನವನ್ನು ಹೊಂದಿರುವ ಭ್ರಮರಾದಿಗಳು ಶ್ರೇಷ್ಠವೆನಿಸುವುವು, ಅವಕ್ಕಿಂತಲೂ ಶಬ್ದಜ್ಞಾನವುಳ್ಳ ಸರ್ಪಾದಿಗಳು ಉತ್ತಮವೆನಿಸಿರುವುವು. ಆ ಸರ್ಪಾದಿಗಳಿಗಿಂತಲೂ ರೂಪವನ್ನು ಗ್ರಹಿಸುವಶಕ್ತಿಯುಳ್ಳಕಾಗೆ ಮೊದಲಾದ ಜಂತುಗಳು ಮೇಲನಿಸುವುವು. ಈ ಕಾಕಾದಿಗಳಿಗಿಂತಲೂ ಎರಡು ಸಾಲುಹಲ್ಲುಗಳುಳ್ಳ ಜಂತುಗಳು ಉತ್ತಮವೆನಿಸುವುವು. ಅವಕ್ಕಿಂತಲೂ ಚತುಷ್ಪಾದಜಂತುಗಳು ಮೇಲೆನಿಸುವುವು. ಆ ಚತುಷ್ಪಾದಗಳಿಗಿಂತಲೂ ಎ

ರಡುಕಾಲಿನ ಜಂತುಗಳೆನಿಸಿಕೊಳ್ಳುವ ಮನುಷ್ಯಾದಿಗಳು ಉತ್ತಮರೆನಿಸುವರು. ಈ ಮನುಷ್ಯಜಾತಿಯಲ್ಲಿಯೂ ಬ್ರಾಹ್ಮಣ, ಕ್ಷತ್ರಿಯ,ವೈಶ್ಯ, ಶೂದ್ರರೆಂಬ ನಾಲ್ಕುವರ್ಣದವರು ಮೇಲೆನಿಸುವರು. ಈ ನಾಲ್ಕುವರ್ಣದವರಲ್ಲಿ ಬ್ರಾಹ್ಮಣರು ಮೇಲೆನಿಸುವರು. ಬ್ರಾಹ್ಮಣರಲ್ಲಿಯೂ ವೇದಾಧ್ಯಯನವನ್ನು ಮಾಡಿದವರು ಉತ್ತಮರೆನಿಸುವರು. ಅವರಲ್ಲಿ ಆ ವೇದಗಳ ಅರ್ಥವನ್ನು ತಿಳಿದವನು ಮೇಲೆನಿಸುವನು. ಆ ವೇದಾರ್ಥವನ್ನು ತಿಳಿದವರಲ್ಲಿಯೂಕೂಡ ಊಹಾಪೋಹಗಳಿಂದ ! ಸಂದೇಹವೆಲ್ಲವೂ ನೀಗುವಂತೆ ಉತ್ತಮಜ್ಞಾನವನ್ನು ಹೊಂದಿದ ಮೀಮಾಂಸಕನು ಮೇಲೆನಿಸುವನು. ಅವನಿಗಿಂತಲೂ ತನಗೆ ವಿಹಿತವಾದ ಕೃತ್ಯಗಳನ್ನು ನಡೆಸುತ್ತ ಬರುವವನು ಉತ್ತಮನೆನಿಸುವನು. ಅವನಿಗಿಂತಲೂ ನಿಷ್ಕಾಮನಾಗಿ ಸಂಸಾರನಿವೃತ್ತಿಯೆನ್ನು ಹೊಂದು, ಸರ್ವಸಂಗಪರಿತ್ಯಾಗಮಾಡಿದವನು ಮೇಲೆನಿಸುವನು. ಅವನಿಗಿಂತಲೂ ತಾನು ಮಾಡಿದ ಕರ್ಮಕಲಾಪವನ್ನೂ, ಕರ್ಮಫಲವನ್ನೂ, ತನ್ನಲ್ಲಿ ಅಂತರಾತ್ಮನಾಗಿರುವ ನನಗಾಗಿಯೇ ಅರ್ಪಿಸುತ್ತ,ಎಲ್ಲವನ್ನೂ ನನ್ನ ಸ್ವರೂಪವನ್ನಾಗಿ ತಿಳಿದು, ಭೇದಬುದ್ಧಿಯಿಲ್ಲದೆ ಸರ್ವಸಮನಾಗಿ ವರ್ತಿಸತಕ್ಕವನು ಮೇಲೆನಿಸುವನು. ಜನನೀ ! ಮುಖ್ಯನಾಗಿ ಯಾವನು ಸರ್ವನಿಯಾಮಕನಾಗಿಯೂ, ಸರ್ವರಕ್ಷಕನಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಇರುವ ನನ್ನಲ್ಲಿ ಆತ್ಮಭರಸಮರ್ಪಣವನ್ನು ಮಾಡಿ, ‘‘ಕರ್ಮಗಳನ್ನು ಮಾಡಿಸತಕ್ಕವನೂ,ಆಕರ್ಮಗಳಿಗೆ ಫಲವನ್ನು ಕೊಡತಕ್ಕವನೂ ನಾನೇ”ಎಂದು ನಂಬಿ, ಈ ವಿವೇಕಜ್ಞಾನದಿಂದ ತಾನು ಸ್ವತಂತ್ರನೆಂಬ ಅಭಿಮಾನವನ್ನು ಬಿಟ್ಟು, ಜೇತನಾಜೇತನರೂಪವಾದ ಸಮಸ್ತಪ್ರಪಂಚವನ್ನೂ ಬ್ರಹ್ಮಸ್ವರೂಪವೆಂದೇ ತಿಳಿದು, ಎಲ್ಲವನ್ನೂ ತನ್ನೊಡನೆ ಅಭೇದಬುದ್ಧಿಯಿಂದ ಭಾವಿಸುವನೋ, ಆಂತಹ ಜ್ಞಾನಿಗಿಂತಲೂ ಉತ್ತಮವಾದ ಬೇರೊಂದು ಜಂತುವನ್ನು ನಾನು ಕಾಣಲಿಲ್ಲ. ಸಮಸ್ತಭೂತಗಳಲ್ಲಿಯೂ ಭಗವಂತನು ತನ್ನ ನಿಜಾಂಶದಿಂದ ನೆಲೆಗೊಂಡಿರುವನೆಂಬುದನ್ನು ತಿಳಿದು, ಎಲ್ಲರನ್ನೂ ಗೌರವಿಸಿ ನಮಸ್ಕರಿಸಬೇಕು. ಎಲೆ ಮನುಪುತ್ರಿ ! ಇದುವರೆಗೆ ನಾನು ಹೇಳಿದ ಭಗವದುಪಾಸನಾತ್ಮಕವಾದ ಭಕ್ತಿಯೋಗವನ್ನಾಗಲಿ, ಪ್ರಕೃತಿಗಿಂತಲೂ ಬೇರೆಯಾದ

ಜೀವಾತ್ಮಸ್ವರೂಪವನ್ನು ತಿಳಿದುಕೊಳ್ಳತಕ್ಕ ಜ್ಞಾನಯೋಗವನ್ನಾಗಲಿ, ಇವೆರಡರಲ್ಲಿ ಯಾವುದೊಂದನ್ನು ಅನುಷ್ಠಿಸಿದರೂ, ಜೀವನು ಪರಮಪುರುಷನನ್ನು ಸೇರಬಹುದು. ಇನ್ನು ಕಾಲಸ್ವರೂಪವನ್ನು ತಿಳಿಸುವೆನು ಕೇಳು. ಮೇಲೆ ಹೇಳಿದ, ಪ್ರಕೃತಿ, ಪುರುಷರಿಗಿಂತಲೂ, ದೈವಸಂಕಲ್ಪರೂಪವಾದ ಅದೃಷ್ಟಕ್ಕಿಂತಲೂ, ಪುಣ್ಯಪಾಪರೂಪವಾದ ಕರ್ಮಗಳಿಗಿಂತಲೂ ವಿಲಕ್ಷಣವಾಗಿ, ಇವೆಲ್ಲಕ್ಕಿಂತಲೂ ಮೇಲ್ಪಟ್ಟ ವಸ್ತುವೇ ಕಾಲವೆನಿಸುವುದು. ಇದು ಭಗವಂತನಿಗೆ ಶರೀರವಾಗಿ, ಅವನ ಆಜ್ಞೆಗೊಳಪಟ್ಟಿರುವುದು. ಮತ್ತು ಮಹತ್ತು ಮೊದಲಾದ ತತ್ವಗಳಿಗೆ ಮುಂದೆಮುಂದೆ ರೂಪಾಂತರಗಳನ್ನು ಹೊಂದಿಸುವುದಕ್ಕೂ ಇದೇ ಕಾರಣವಾಗಿರುವುದು. ಜೀವಾತ್ಮಗಳೆಲ್ಲವೂ ಜ್ಞಾನಸ್ವರೂಪದಿಂದ ಒಂದೇವಿಧವಾಗಿದ್ದರೂ, ಆ ಆತ್ಮಗಳನ್ನು ದೇವಮನುಷ್ಯಾದಿಭೇದಗಳಿಂದ ಬೇರೆಬೇರೆಯಾಗಿ ಭಾವಿಸತಕ್ಕ ಭೇದಬುದ್ಧಿಯುಳ್ಳವರಿಗೆ, ಹುಟ್ಟು, ಮುಪ್ಪು, ಸಾವು, ಮುಂತಾದ ಸಂಸಾರಭಯವನ್ನುಂಟುಮಾಡತಕ್ಕುದು ಈ ಕಾಲವೇ! ಈ ಕಾಲಸ್ವರೂಪಿಯಾದ ಭಗವಂತನೇ ಸಮಸ್ತಪ್ರಾಣಿಗಳಲ್ಲಿಯೂ ಒಳಹೊಕ್ಕು, ಪ್ರಾಣಿಗಳಿಂದಲೇ ಪ್ರಾಣಿಗಳನ್ನು ಕೊಲ್ಲಿಸುವನು. ಈ ಕಾಲರೂಪಿಯಾದ ಭಗವಂತನೇ ಬ್ರಹ್ಮಾದಿದೇವತೆಗಳಿಗೂ ಅಧಿಪತಿಯು! ಕರ್ಮಗಳೆಲ್ಲವೂ ಈ ಕಾಲಸ್ವರೂಪವೇ! ಈ ಕಾಲಕ್ಕೆ ಎಲ್ಲರೂ ಸಮಾನರೇಹೊರತು, ಇಂತವರು ಮಿತ್ರರೆಂದೂ, ಇಂತವರು ಶತ್ರುಗಳೆಂದೂ ವ್ಯತ್ಯಾಸವಿಲ್ಲ. ಈ ಕಾಲರೂಪಿಯಾದ ಭಗವಂತನು ಯಾವಾಗಲೂ ಎಚ್ಚರಗೊಂಡಿದ್ದು, ಎಚ್ಚರತಪ್ಪಿದವರನ್ನು ಕೊಲ್ಲುತ್ತಿರುವನು. ಎಚ್ಚರತಪ್ಪಿದವರಲ್ಲಿ, ಶೋಕಮೋಹಾದಿರೂಪದಿಂದ ಒಳಹೊಕ್ಕು ಭಾಧಿಸುವನು. ಸಮಸ್ತಭೂತಗಳೂ ಅವನ ನಿಯಮಕ್ಕೊಳಪಟ್ಟೇ ನಡೆಯುವುವು. ಇವನ ಭಯಕ್ಕಾಗಿಯೇ ಸೂರ್ಯನು ಅನವರತವೂ ಬೆಳಗುತ್ತ ಲೋಕಕ್ಕೆ ಬೆಳಕನ್ನೂ, ಉಷ್ಣವನ್ನೂ ಕೊಡುತ್ತಿರುವನು. ಇವನ ಭಯಕ್ಕಾಗಿಯೇ ಪರ್ಜನ್ಯನು ವರ್ಷಿಸುವನು. ಇವನ ಭಯಕ್ಕಾಗಿಯೇ ನಕ್ಷತ್ರಸಮೂಹಗಳು ಮಿನುಗುತ್ತಿರುವುವು. ಇವನ ಭಯಕ್ಕಾಗಿಯೇ ಎಲ್ಲಾ ಬಗೆಯ ಸಸ್ಯಗಳೂ ಕಾಲಕಾಲಕ್ಕೆ ಪುಷ್ಪಫಲಗಳನ್ನು ಕೊಡುತ್ತಿರುವುವು.

ನದಿಗಳು ಪ್ರವಹಿಸುವುದೂ, ಸಮುದ್ರವು ತನ್ನ ಮೇರೆಯನ್ನು ಮೀರದೆ ನಿಂತಿರುವುದೂ, ಅಗ್ನಿಯು ಜ್ವಲಿಸುವುದೂ, ಭೂಮಿಯು ಸಮಸ್ತ ಪರ್ವತ ಸಮೂಹಗಳೊಡನೆ ಕದಲದೆ ಸ್ಥಿರವಾಗಿರುವುದೂ, ಆಕಾಶವು ಸಮಸ್ತ ಜಂತುಗಳಿಗೂ ಅವಕಾಶವನ್ನು ಕೊಡುವುದೂ, ಮಹತ್ತತ್ವವು ಪೃಥಿವಿ ಮೊದಲಾದ ಆವರಣಗಳಿಂದ ಕೂಡಿದ ತನ್ನ ಸ್ವರೂಪವನ್ನು ಪ್ರಪಂಚರೂಪವಾಗಿ ವಿಸ್ತರಿಸಿಡುವುದೂ, ಈ ಕಾಲರೂಪಿಯಾದ ಭಗವಂತನ ಭಯದಿಂದಿದ್ದಲ್ಲದೆ ಬೇರೆಯಲ್ಲ. ಅಮ್ಮಾ ! ರಜಸ್ತಮೋಗುಣಪ್ರಧಾನರಾದ ಬ್ರಹ್ಮ ರುದ್ರಾದಿದೇವತೆಗಳೆಲ್ಲರೂ, ಆತನ ಆಜ್ಞಾನುವರ್ತಿಗಳಾಗಿಯೇ ಪ್ರತಿಯುಗದಲ್ಲಿಯೂ ತಮತಮಗೆ ನಿರ್ಣೀತವಾದ ಸೃಷ್ಟಿ ಸಂಹಾರಾದಿಕಾರ್ಯಗಳನ್ನು ನಡೆಸುತ್ತಿರುವರು. ಮತ್ತು ಕಾಲಸ್ವರೂಪಿಯಾದ ಆ ಭಗವಂತನು, ತಾನುಮಾತ್ರ ಜನನಮರಣಾದಿಗಳೊಂದೂ ಇಲ್ಲದೆ ವರ್ತಿಸುತ್ತಿರುವನು. ತಂದೆ, ತಾಯಿ, ಮೊದಲಾದ ಕಾರಣಗಳನ್ನು ಮುಂದಿಟ್ಟುಕೊಂಡು, ಮಕ್ಕಳು ಮೊದಲಾದ ಕಾರ್ಯವಸ್ತುಗಳನ್ನು ಕಲ್ಪಿಸುವವನೂ ಈತನೇ ! ಈ ಕಾಲರೂಪಿಯಾದ ಭಗವಂತನೇ ಯಮನಿಗೂ ಮರಣವನ್ನು ಕಲ್ಪಿಸತಕ್ಕವನಾದುದರಿಂದ, ಮೃತ್ಯುವಿಗೂ ಮೃತ್ಯುವೆಂದು ಹೇಳಲ್ಪಡುವನು. ಅವನೇ ಆದಿಕರ್ತನು ! ತಾನುಮಾತ್ರ ಆದ್ಯಂತಗಳೊಂದೂ ಇಲ್ಲದವನು" ಎಂದನು. ಇಪ್ಪತ್ತೊಂಬತ್ತನೆಯ ಅಧ್ಯಾಯವು.

{ಕಪಿಲನು ದೇವಹೂತಿಗೆ ವೈರಾಗ್ಯಕಾರಣಗಳಾದ ಸಂಸಾರದುಃಖಗಳನ್ನು ವಿವರಿಸಿದುದು.}

ಅಮ್ಮಾ ! ಹೀಗೆ ಕಾಲವೆಂಬುದು ಭಗವಂತನ ಸ್ವರೂಪವೆಂದೂ, ಯಾರಿಗೂ ದುರ್ಜಯವಾದುದೆಂದೂ ನಿನಗೆ ತಿಳಿಸಿದೆನಷ್ಟೆ ? ಲೋಕವೆಲ್ಲವೂ ಈ ಕಾಲಕ್ಕೆ ವಶವಾಗಿಯೇ ನಡೆಯಬೇಕು, ಚಂಡಮಾರುತವು ಮೇಘುಗಳನ್ನು ನಾನಾದಿಕ್ಕಿಗೆ ಚದರಿಸುವಂತೆ, ಪ್ರಾಣಿಗಳೂಕೂಡ ಈ ಕಾಲದಿಂದ ಪ್ರೇರಿತರಾಗಿಯೇ ಕಾರ್ಯಗಳನ್ನು ನಡೆಸುತಿದ್ದರೂ, ಆ ಕಾಲದ ಶಕ್ತಿಯನ್ನು ತಾವು ತಿಳಿದುಕೊಳ್ಳಲಾರರು. ಜೀವಾತ್ಮನು ತನ್ನ ದೇಹ

ಸುಖಕ್ಕಾಗಿ ಎಷ್ಟೋ ಪ್ರಯಾಸಪಟ್ಟು, ಯಾವಯಾವ ವಸ್ತುಗಳನ್ನು ಶೇಖರಿಸುತ್ತಿರುವನೋ, ಅವೆಲ್ಲವೂ ಕಾಲವಶದಿಂದಲೇ ಬಂದುವಲ್ಲದೆ ಬೇರೆ ಯೆಲ್ಲ. ಕಾಲಸ್ವರೂಪಿಯಾದ ಭಗವಂತನೇ ಅವನ್ನು ಕ್ಷಣಮಾತ್ರದಲ್ಲಿ ಚದರಿಸಿ ನಾಶಮಾಡಿಬಿಡುವನು. ತಾನು ಪ್ರಯತ್ನಪಟ್ಟು ಸಂಪಾದಿಸಿದ ವಸ್ತುಗಳೆಲ್ಲವೂ ನಾಶವಾದುದನ್ನು ನೋಡಿ ಜೀವನು ದುಃಖಿಸಿ ಸಂಕಟಪಡುತ್ತಿರುವನು. ಹೀಗೆ ಜೀವನು, ಇಲ್ಲದ ದುಃಖವನ್ನು ತಂದಿಟ್ಟುಕೊಳ್ಳುವುದಕ್ಕೆ ಕಾರಣವೇನೆಂಬುದನ್ನು ಕೇಳು. ವಿವೇಕಬುದ್ಧಿಯಿಲ್ಲದ ಈ ಜೀವನು, ಹೆಂಡತಿಮಕ್ಕಳೆಂಬ ಅನೇಕಪರಿವಾರಗಳೊಡಗೂಡಿದ ಅಸ್ಥಿರವಾದ ದೇಹವನ್ನೂ, ಆ ದೇಹಕ್ಕೆ ಸಂಬಂಧಪಟ್ಟ ಮನೆಮಠಗಳನ್ನೂ, ಆಸ್ತಿಪಾಸ್ತಿಗಳನ್ನೂ ನಿಜವೆಂದು ನಂಬಿ, ಅವುಗಳಲ್ಲಿ ಮೋಹದಿಂದ ಮರುಳಾಗಿರುವನು. ಅವನ ಅಜ್ಞಾನವೇ ಇದಕ್ಕೆ ಕಾರಣವಲ್ಲದೆ ಬೇರೆಯೆಲ್ಲ. ದೈವಸಂಕಲ್ಪದಿಂದ ತನಗೆ ತಗುಲುಕಟ್ಟಿದ ಈ ವಸ್ತುಗಳು, ದೈವಾಧೀನವಾಗಿಯೇ ಬಿಟ್ಟು ಹೋದುದನ್ನು ನೋಡಿ ಸಂಕಟಪಡುವನು. ಸಂಸಾರದ ವಿಚಿತ್ರಗತಿಗಳನ್ನು ತಿಳಿಸಬೇಕೆಂದು ಕೇಳಿದೆಯೆಲ್ಲವೆ. ಅದನ್ನೂ ವಿವರಿಸುವೆನು ಕೇಳು. ಈ ಸಂಸಾರದಲ್ಲಿ ಜೀವನು, ದೇವಜಾತಿ, ಮನುಷ್ಯಜಾತಿ ಮೊದಲಾದ ಯಾವ ಜನ್ಮಗಳನ್ನು ಹೊಂದಿದರೂ, ಅವೊಂದರಲ್ಲಿಯೂ ಸುಖವನ್ನನುಭವಿಸಲಾರನು. ಒಂದೊಂದು ಜನ್ಮದಲ್ಲಿಯೂ ಕಷ್ಟವನ್ನನುಭವಿಸುತಿದ್ದರೂಕೂಡ, ಅವನಿಗೆ ಈ ಸಂಸಾರದಲ್ಲಿ ವಿರಕ್ತಿಯೂ ಹುಟ್ಟಲಾರದು. ಆಃ! ಇದಲ್ಲವೇ ಆಶ್ಚರ್ಯವು! ಜೀವನು ನರಕದಲ್ಲಿ ಬಿದ್ದಿರುವಾಗಲೂಕೂಡ, ಭಗವಂತನ ಮಾಯೆಯಿಂದ ಮರುಳಾಗಿ, ಆ ನರಕದಲ್ಲಿ ಸಿಕ್ಕುವ ಆಹಾರ ಮೊದಲಾದುವುಗಳಲ್ಲಿಯೇ ತೃಪ್ತಿಪಡುತ್ತ, ಆ ನರಕಾನುಭವಕ್ಕಾಗಿ ಏರ್ಪಟ್ಟ ಪಾಪಿಷ್ಠವಾದ ಆ ಶರೀರವನ್ನು ಬಿಡುವುದಕ್ಕೂ ಇಷ್ಟಪಡದೆ ಕಷ್ಟದಲ್ಲಿಯೇ ನರಳುವನು. "ತನ್ನ ಹೆಂಡಿರು! ತನ್ನ ಮಕ್ಕಳು! ತನ್ನ ಹಣ! ತನ್ನ ಮನೆ! ತನ್ನ ಭೂಮಿ! ತನ್ನ ಪಶುಗಳು! ತನ್ನ ಬಂಧುಗಳೆಂಬ ಅಭಿಮಾನದಿಂದ ಮರುಳುಗೊಂಡು, ಅವುಗಳನ್ನು ನೋಡಿನೋಡಿ ತನ್ನ ಭಾಗ್ಯಕ್ಕೆ ಎಣೆಯೇ ಇಲ್ಲವೆಂದು ತನ್ನಲ್ಲಿ ತಾನೇ ಹಿಗ್ಗು

ವನು. ಈ ದೇಹವನ್ನು ಪೋಷಿಸುವುದರಲ್ಲಿಯೇ ಬಹಳ ಅಕ್ಕರೆಯುಳ್ಳವನಾಗಿ, ತಾನು ಅದರಿಂದ ಮುಂದೆ ಸಂಪಾದಿಸಬಹುದಾದ ಸುಖಕ್ಕಿಂತಲೂ ಹೆಚ್ಚಾಗಿ ಅದನ್ನು ಕಷ್ಟಪಡಿಸುವನು. ಈ ಮನಸ್ಸಿನ ಕಳವಳದಿಂದ ಯುಕ್ತಾಯುಕ್ತವಿವೇಚನೆಯೇ ಇಲ್ಲದೆ, ಯಾವಾಗಲೂ ಪಾಪಕಾರ್ಯದಲ್ಲಿಯೂ ಪ್ರವರ್ತಿಸುವನು. ನಶ್ವರಗಳಾದ ವಸ್ತುಗಳನ್ನು ಸಂಪಾದಿಸುವುದಕ್ಕಾಗಿ ಎಷ್ಟೋ ದುಃಖಗಳನ್ನನುಭವಿಸುತ್ತ, ಅನೇಕ ಪಾಪಗಳಿಗೂ ಗುರಿಯಾಗುವನು.

ಯೌವನದಶೆಯಲ್ಲಿ ಮನುಷ್ಯನು ಗೃಹಸ್ಥಧರ್ಮವನ್ನಾಚರಿಸುವನೆವದಿಂದ ಎಷ್ಟೋ ಪಾಪಕಾರ್ಯಗಳಿಗೊಳಗಾಗುವನು. ಯಾವಾಗಲೂ ಪರಪುರುಷರ ಸೌಂದರ್ಯವನ್ನೇ ಮನಸ್ಸಿನಲ್ಲಿ ಭಾವಿಸುತ್ತಿರುವ ಅಸತಿಯೆರಾದ ಹೆಂಗಸರು, ಏಕಾಂತದಲ್ಲಿ ತನ್ನನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮಾಡುವ ನಲಿದಾಟಗಳನ್ನೂ, ಅವರ ಸಂಭೋಗಚಾತುರ್ಯವನ್ನೂ ನೋಡಿದಾಗ, ಅವನಿಗೆ ಸರ್ವೇಂದ್ರಿಯಗಳೂ ಪರವಶವಾಗುವುವು. ಅವರ ಮಾಯೆಗೆ ಮರುಳಾಗುವನು. ತನ್ನ ಮಕ್ಕಳ ಮುದ್ದುನುಡಿಗಳನ್ನು ಕೇಳಿ ತನ್ನ ಮನಸ್ಸಿನಲ್ಲೆ ತಾನೇ ಹಿಗ್ಗುವನು. ಕೇವಲ ಸುಖಪ್ರಚುರವಾದ ತನ್ನ ಮನೆ ಮಂದಿ ಮಕ್ಕಳಲ್ಲಿ ಎಷ್ಟೋ ಅಭಿಮಾನವನ್ನಿಟ್ಟು, ಸ್ವಲ್ಪಮಾತ್ರವೂ ಎಚ್ಚರತಪ್ಪದೆ ಅವುಗಳನ್ನು ನೋಡುತ್ತ, ಆಗಾಗ ಅವುಗಳಿಗೆ ಬಂದೊದಗುವ ದುಃಖಗಳನ್ನು ತಾನೇ ನಿವಾರಿಸುವುದಾಗಿ ತಿಳಿದು, ಅದಕ್ಕಾಗಿ ತನ್ನಿಂದಾದಷ್ಟು ಕಷ್ಟಪಡುವನು. ಸ್ವಲ್ಪದುಃಖವು ನೀಗಿದಂತೆ ತೋರಿದಮಾತ್ರಕ್ಕೆ, ಅದನ್ನೇ ಪರಮಸುಖವೆಂದು ಭಾವಿಸಿಕೊಳ್ಳುವನು. ಹಗಲುರಾತ್ರಿಯೂ ಎಷ್ಟೋ ಕ್ರೂರಕೃತ್ಯಗಳನ್ನು ನಡೆಸಿ, ಅನೇಕಪ್ರಾಣಿಗಳನ್ನು ಹೀಡಿಸಿ, ದ್ರವ್ಯವನ್ನು ಸಂಗ್ರಹಿಸಿ:ತಂದು, ತನ್ನ ಹೆಂಡತಿಮಕ್ಕಳನ್ನು ಪೋಷಿಸುವನು. ಆ ಹೆಂಡತಿರುಮಕ್ಕಳೂ, ಮತ್ತು ಇತರಪರಿವಾರಗಳೆಲ್ಲವೂ ತಿಂದು ಮಿಗಿಸಿದ ಅಲ್ಪಸ್ವಲ್ಪವನ್ನು ತಾನು ತಿನ್ನುವನು. ಅವರು ಅನುಭವಿಸಿ ಮಿಗಿಸಿದ ಭೋಗವಸ್ತುಗಳನ್ನೇ ತಾನು ಅನುಭವಿಸುವನು. ಇಷ್ಟುಕಷ್ಟಪಟ್ಟುದಕ್ಕೆ ಫಲವಾಗಿ ಕೊನೆಗೆ ನರಕದಲ್ಲಿ ಬೀಳುವನು. ಮನುಷ್ಯನು ತನ್ನ

ಜೀವನಕ್ಕಾಗಿ ಯಾವುದೋ ಒಂದು ವೃತ್ತಿಯನ್ನು ಹಿಡಿದು, ದುರದೃಷ್ಟವ
ಶದಿಂದ ಅದನ್ನು ನಿರ್ವಹಿಸುವುದಕ್ಕೆ ಶಕ್ತಿಯಿಲ್ಲದಿದ್ದಾಗ, ದುರಾಶೆಯಿಂದ
ಪರಸ್ವತ್ತನ್ನು ಸಂಗ್ರಹಿಸುವುದಕ್ಕೆ ಉದ್ಯೋಗಿಸುವನು. ಕುಟುಂಬವನ್ನು
ಪೋಷಿಸುವುದಕ್ಕೆ ಶಕ್ತಿಯಿಲ್ಲದ ಭಾಗ್ಯಹೀನರು ಕೆಲವರು, ತಾವು ಮಾಡತ
ಕ್ಕ ಪ್ರಯತ್ನಗಳೆಲ್ಲವೂ ವಿಫಲವಾದುದನ್ನು ನೋಡಿ ಸಹಿಸಬಾರದ ಸಂಕಟ
ದಲ್ಲಿ ತೊಳಲುವರು. ಯಾವವಿಧವಾದ ಸತ್ಕಾರ್ಯವನ್ನೂ ನಡೆಸದೆ, ಕೇವಲ
ಕೃಪಣರಾಗಿ, ಇಲ್ಲದ ದುಃಖಕ್ಕೆ ಗುರಿಯಾಗಿ ಕಾಲವನ್ನು ಕಳೆಯುವರು. ಜ
ನನೀ ! ಇವೆಲ್ಲವೂ ಯೌವನಕಾರ್ಯಗಳು ! ಇನ್ನು ವಾರ್ಧಕಾವಸ್ಥೆಯನ್ನು
ತಿಳಿಸುವೆನು ಕೇಳು ! ಬಹುಕಾಲದಿಂದ ಕಷ್ಟಪಟ್ಟು ಕುಟುಂಬಭರಣವನ್ನು
ಮಾಡುತ್ತ ಬಂದವನು, ರೋಗದಿಂದಲೋ, ಮುಪ್ಪಿನಿಂದಲೋ, ತನ್ನ
ಹೊಟ್ಟೆ ಹೊರೆಯುವುದಕ್ಕೂ ಶಕ್ತಿಯಿಲ್ಲದೆ ಮಲಗಿದಾಗ, ಅವನ ಅವ
ಸ್ಥೆಯನ್ನು ಕೇಳಬೇಕೆ ? ಮೊದಲು ತನ್ನನ್ನು ಸುತ್ತಿಮುತ್ತಿ ಕಿತ್ತು
ತಿಂದ ಹೆಂಡಿರು ಮಕ್ಕಳು ಮುಂತಾದ ಪರಿವಾರಗಳೇ ಬಹುಕಾಲದಿಂದ
ಮತ್ತು ಕಷ್ಟಪಟ್ಟು ಮುದಿಯಾದ ಎತ್ತನ್ನು ವ್ಯವಸಾಯೆಗಾರರು ಹೇ
ಗೋಹಾಗೆ ಮೊದಲಿನಂತೆ ಆದರಿಸದೆ ಉಪೇಕ್ಷಿಸುವರು. ಹೀಗೆ ಮೊದಲು ತ
ನ್ನಿಂದ ಪೋಷಿಸಲ್ಪಡುತಿದ್ದವರೇ, ಈಗ ತನ್ನನ್ನು ಪೋಷಿಸಬೇಕಾದ ಸ್ಥಿತಿ
ಗೆ ಬಂದು, ಅವರು ತನ್ನನ್ನು ಬಹಳ ಉಪೇಕ್ಷೆಯಿಂದ ಕಾಣುತಿದ್ದಾಗ
ಲೂ, ಸ್ವಲ್ಪವಾದರೂ ಮನಸ್ಸಿನಲ್ಲಿ ವಿರಕ್ತಿಯನ್ನು ತಂದುಕೊಳ್ಳಲಾರನು.
ದೇಹವೆಲ್ಲವೂ ಮುಪ್ಪಿನಿಂದ ಸುಕ್ಕುಬಿದ್ದು, ಈಗಲೋ ನಾಳೆಯೋ ಸಾ
ಯುವುದಕ್ಕೆ ಸಿದ್ಧನಾಗಿ,ಏಳುವುದಕ್ಕೂ ಶಕ್ತಿಯಿಲ್ಲದೆ ಬಿದ್ದಕಡೆಯಲ್ಲಿ ಬಿದ್ದಿ
ರುವಾಗ, ತನ್ನ ಹೆಂಡತಿಮಕ್ಕಳು ತನ್ನನ್ನು ಬಾಯಿಗೆ ಬಂದಹಾಗೆ ಮೂದ
ಲಿಸಿ ತಂದು ಹಾಕಿದ ಅಲ್ಪ ಸ್ವಲ್ಪಕೂಳನ್ನೇ ನಾಯಿಯಹಾಗೆ ತಿಂದು,
ಆ ತಿಂದ ಪದಾರ್ಥವನ್ನು ಅರಗಿಸಿಕೊಳ್ಳುವುದಕ್ಕೂ ತಪ್ಪಿಸ್ಟು ಜೀರ್ಣಶಕ್ತಿ
ಯಿಲ್ಲದೆ ರೋಗಬಾಧೆಯಿಂದ ನರಳುತ್ತ ಕದಲಲಾರದೆ ಮಲಗಿರುವನು.
ಈ ಸ್ಥಿತಿಯಲ್ಲಿಯೂ ತನ್ನ ದುರವಸ್ಥೆಗೆ ತಾನು ಪರಿತಪಿಸಲಾರನು. ಕೊನೆ
ಕೊನೆಗೆ ಶ್ಲೇಷ್ಮವೃದ್ಧಿಯಿಂದ ಕಂಠನಾಳವು ತಡೆದು, ಧಾರಾಳವಾಗಿ

ಉಸಿರಾಡುವುದಕ್ಕಾಗಲಿ, ಮಾತಾಡುವುದಕ್ಕಾಗಲಿ ಶಕ್ತಿಯಿಲ್ಲದೆ,ಘುರ್ಘುರ್ ರಶಬ್ದದಿಂದ ಮೇಲುಸಿರನ್ನೆಳೆಯುತ್ತ ನರಳುವನು. ತಾನು ಮಂಚದಲ್ಲಿ ಮಲಗಿ ಈ ಅವಸ್ಥೆಯಲ್ಲಿರುವಾಗ, ಮಂಚದ ಸುತ್ತಲೂ ನಂಟರಿಷ್ಟರು ಗುಂಪುಗೂಡಿ ರೋದಿಸುತ್ತ, ಆಗಾಗ ತನ್ನ ಹೆಸರನ್ನು ಹಿಡಿದು ಕರೆಯುತಿದ್ದರೂ ಪ್ರತ್ಯುತ್ತರವನ್ನು ಕೊಡುವುದಕ್ಕೂ ಶಕ್ತಿಯಿಲ್ಲದೆ ಒಳಗೊಳಗೇ ಸಂಕಟದಿಂದ ತತ್ತಳಿಸುವನು. ಅಮ್ಮಾ ! ಇವೆಲ್ಲವೂ ಪ್ರಾಣಿಗಳಿಗೆ ಯೌವನದಲ್ಲಿಯೂ, ಮುಪ್ಪಿನಲ್ಲಿಯೂ ಉಂಟಾಗತಕ್ಕ ಅನರ್ಥಗಳು! ಇವೆರಡೂ ಕೇವಲದುಃಖಪ್ರಚುರವೇ ಹೊರತು, ಈ ಸ್ಥಿತಿಯೆಲ್ಲಿ ಸ್ವಲ್ಪಮಾತ್ರವೂ ಸುಖವಿಲ್ಲ.

ಇನ್ನು ಮರಣಾವಸ್ಥೆಯನ್ನು ತಿಳಿಸುವೆನು ಕೇಳು. ಮನುಷ್ಯನು ತನ್ನ ಪ್ರಾಯಕಾಲದಿಂದ ಹಿಡಿದು, ಕುಟುಂಬಪೋಷಣೆಯಲ್ಲಿಯೇ ವ್ಯಾಪೃತನಾಗಿ, ಒಂದು ಸತ್ಕಾರ್ಯವನ್ನಾದರೂ ಆಚರಿಸುವುದಕ್ಕಿಲ್ಲದೆ, ಇಂದ್ರಿಯಚಾಪಲ್ಯವನ್ನೂ ಅಡಗಿಸಿಕೊಳ್ಳಲಾರದೆ, ಜೀವಾವಧಿ ಕಷ್ಟಪಟ್ಟು, ಕೊನೆಗೆ ತನ್ನ ಇಷ್ಟಬಂಧುಗಳೆಲ್ಲರೂ ಸುತ್ತಲೂ ಗುಂಪುಕೂಡಿ ಅಳುತ್ತಿರುವಾಗಲೇ, ಅವರ ಕಣ್ಣಮುಂದೆ ತನ್ನ ಶರೀರವನ್ನು ಬಿಟ್ಟುಹೋಗುವನು. ಒಡನೆಯೇ ಇವನು ಜೀವಿತಕಾಲದಲ್ಲಿ ನಡೆಸಿದ ದುಷ್ಕರ್ಮಗಳನ್ನು ಲೆಕ್ಕ ವಿಟ್ಟುಕೊಂಡು ಕಾದಿದ್ದ ಯಮಭಟರು, ಇವನನ್ನು ಕಾಲಪಾಶದಿಂದ ಬಿಗಿಯುವುದಕ್ಕೆ ಬರುವರು. ಅವರನ್ನು ನೋಡಿದಮಾತ್ರಕ್ಕೇ ಇವನು ಭಯದಿಂದ ಮಲಮೂತ್ರಗಳನ್ನು ಸುರಿಸುತ್ತ ಗಡಗಡನೆ ನಡುಗುವನು. ರಾಜದೂತರು ಅಪರಾಧಿಯನ್ನೆಳೆದುಕೊಂಡುಹೋಗುವಂತೆ, ಒಡನೆಯೇ ಆ ಯಮಭಟರು, ಇವನನ್ನು ಯಾತನಾದೇಹದಲ್ಲಿ ಪ್ರವೇಶಗೊಳಿಸಿ, ಕೊರಲಿಗೆ ಪಾಶವನ್ನು ಬಿಗಿದು ಬಹುದೂರದವರೆಗೆ ಎಳೆದುಕೊಂಡು ಹೋಗುವರು. ನಡುನಡುವೆ ಆ ಯಮಭಟರ ತರ್ಜನಗಳನ್ನೂ, ಹಿಂಸೆಯನ್ನೂ ತಡೆಯಲಾರದೆ ಗಡಗಡನೆ ನಡುಗುವನು. ಆಗಾಗ ಇವನನ್ನು ಆ ದಾರಿಯಲ್ಲಿ ನಾಯಿಗಳು ಕಚ್ಚಿ ತಿನ್ನುವುವು. ಈ ಹಿಂಸೆಗಳನ್ನನುಭವಿಸುವಾಗ, ಹಿಂದೆ ತಾನು ಮಾಡಿದ ದುಷ್ಕೃತ್ಯಗಳೆಲ್ಲವೂ ಅವನ ನೆನಪಿಗೆ

ಬರುವುವು. ಅದಕ್ಕಾಗಿ ಬಹಳ ಪಶ್ಚಾತ್ತಾಪಪಡುವನು. ನಿಲ್ಲುವುದಕ್ಕೆ ನೆಲೆ ಲಾಗಲಿ,ಕುಡಿಯುವುದಕ್ಕೆ ನೀರಾಗಲಿ ಇಲ್ಲದ ಆ ದಾರಿಯಲ್ಲಿ ಹೋಗುವಾಗ, ಈ ಪಾಪಿಜೀವನು, ಹಸಿವುಬಾಯಾರಿಕೆಗಳಿಂದ ತಪಿಸುತ್ತ, ನಡುನಡುವೆ, ಕಾದ ಮರಳಿನಲ್ಲಿ ಅತಿಪ್ರಯಾಸದಿಂದ ನಡೆಯುತ್ತ, ಮೇಲೆ ಬಿಸಿಲಿನ ತಾಪ ದಿಂದಲೂ, ಕೆಳಗೆ ಕಾಡುಗಿಚ್ಚಿನ ಕಾವಿನಿಂದಲೂ, ಸುತ್ತಲೂ ಅತ್ಯುಷ್ಣ ವಾಗಿ ಬೀಸುವ ಬಿರುಗಾಳಿಯ ಬಡಿತದಿಂದಲೂ, ಯಮಭಟರು ಆಗಾಗ ಬೆ ನ್ನಿನಮೇಲೆ ಹೊಡೆಯುತ್ತಿರುವ ಕೊರಡೆಯ ಪೆಟ್ಟುಗಳಿಂದಲೂ ಚಿತ್ರಹಿಂ ಸೆಯನ್ನನುಭವಿಸುತ್ತ ಅತಿಪ್ರಯಾಸದಿಂದ ಮುಂದೆ ಸಾಗುವನು. ಕೇವಲ ಗಾಢಾಂಧಕಾರದಿಂದ ಮುಚ್ಚಲ್ಪಟ್ಟ ಈ ಕೆಟ್ಟದಾರಿಯಿಂದಲೇ ಪಾಪಿ ಜೀವಗಳನ್ನು ಯಮದೂತರು ಅತಿವೇಗದಿಂದೆಳೆದುಕೊಂಡು ಬಂದು, ಯ ಮನ ಸನ್ನಿಧಾನಕ್ಕೆ ತಂದು ಸೇರಿಸುವರು. ಯಮಲೋಕಕ್ಕೆ ಹೋಗಬೇಕಾ ದ ಈ ದಾರಿಯು, ಇಲ್ಲಿಂದ ತೊಂಬತ್ತೊಂಬತ್ತು ಸಾವಿರಯೋಜನಗಳಿರುವು ವು. ಈ ದಾರಿಯೆದ್ದಕ್ಕೂ ಜೀವನು ಯಾತನೆಗಳನ್ನನುಭವಿಸುತ್ತ ಆಗಾಗ ಮೂರ್ಛೆಬಿಳುವನು. ತಿರುಗಿ ಮೆಲ್ಲನೆ ಚೇತರಿಸಿಕೊಂಡು ಮುಂದೆ ಸಾಗುವನು. ಇಷ್ಟು ದೂರವಿದ್ದರೂಕೂಡ ಈ ಜೀವನು ಎರ ಡುಮೂರು ಮುಹೂರ್ತಕಾಲದೊಳಗಾಗಿಯೇ ಸಾಗಿಸಲ್ಪಡುವನು. ಆ ಲೋಕವನ್ನು ಸೇರಿದಮೇಲೆಯೂ ಕೂಡ,ಇಂತಹ ಪಾಪಾತ್ಮರು ಅನುಭವಿ ಸತಕ್ಕ ಬಾಧೆಗೆ ಮಿತಿಯೇ ಇಲ್ಲ. ಕೆಲವು ಯಮಭಟರು ಅವನ ಶರೀರವನ್ನು ಉರಿಯುವ ಕೊಳ್ಳಿಯಿಂದ ಚುಚ್ಚುವರು! ಕೆಲವರು ಅವನ ಶರೀರಮಾಂಸ ವನ್ನೇ ಕತ್ತಿಯಿಂದ ಕತ್ತರಿಸಿ ಅವನ ಬಾಯಿಗೆ ಕೊಟ್ಟು ತಿನ್ನಿಸುವರು!ನಾ ಯಿ, ನರಿ, ಹದ್ದು, ಮುಂತಾದ ಕ್ರೂರಜಂತುಗಳಿಂದ ದೇಹದ ನರಗಳನ್ನು ಕೀಳಿಸುವರು! ಜೇಳು, ಹಾವು, ಮುಂತಾದುವುಗಳಿಂದ ಕಚ್ಚಿಸುವರು! ದೇ ಹವನ್ನು ತುಂಡುತುಂಡಾಗಿ ಕತ್ತರಿಸುವರು! ಆನೆಯ ಕಾಲಿನಿಂದ ತುಳಿಸುವ ರು! ಪರ್ವತಾಗ್ರದಿಂದ ಕೆಳಕ್ಕೆ ನೂಕುವರು! ಹಳ್ಳಕೊಳ್ಳಗಳಲ್ಲಿ ಹಾಕಿ ಮೆ ಟ್ಟುವರು! ಅಂಧತಾಮಿಸ್ರವೇ ಮೊದಲಾದ ನರಕಗಳಲ್ಲಿ ಕೆಡಹಿ ಬಹಳವಾ ಗಿ ಬಾಧಿಸುವರು ! ಸ್ತ್ರೀಯರಾಗಲಿ, ಪುರುಷರಾಗಲಿ ಈ ಯಾತನಾ

ದೇಹಗಳನ್ನು ಹೊಂದಿ ಬಹಳವಾದ ಹಿಂಸೆಗಳನ್ನನುಭವಿಸಬೇಕು. ಓ! ಜನ
ನೀ! ''ಇಷ್ಟೊಂದು ಕ್ರೂರವಾದ ನರಕಗಳೂ ಉಂಟೆ?"ಎಂದು ನೀನು ಸಂ
ದೇಹಿಸಬೇಕಾದುದಿಲ್ಲ. ಈ ಲೋಕದಲ್ಲಿಯೇ ಈ ಬಗೆಯ ನರಕಬಾಧೆಗಳನ್ನನು
ಭವಿಸುವರೆಷ್ಟೋಮಂದಿಯುಂಟು ಇಲ್ಲಿಯೇ ಸ್ವರ್ಗಸುಖವಾಗಲಿ,ನರಕಬಾಧೆ
ಯಾಗಲಿ ಉಂಟೆಂದು ಹೇಳುವರು. ಕೇವಲಕುಟುಂಬಪೋಷಣಕ್ಕಾಗಲಿ,
ಉದರಭರಣಕ್ಕಾಗಲಿ ಕಷ್ಟಪಡುತ್ತಿದ್ದವರು, ಕೊನೆಗೆ ಆ ತಮ್ಮ ಕುಟುಂ
ಬಗಳನ್ನೂ, ಆ ತಮ್ಮದೇಹಗಳನ್ನೂ ಬಿಟ್ಟು ನರಕದಲ್ಲಿ ಬಿದ್ದು, ತಾವು ಹಿಂ
ದೆ ಪಟ್ಟ ಶ್ರಮಕ್ಕೆ ಬಡ್ಡಿಯಾಗಿ, ಈ ಫಲವನ್ನನುಭವಿಸಬೇಕಲ್ಲದೆ ಬೇರೆಯೆ
ಲ್ಲ! ಇತರಭೂತಗಳಿಗೆ ದ್ರೋಹಮಾಡಿ ಸಂಪಾದಿಸಿದ ಹಣದಿಂದ
ತಾವು ಪೋಷಿಸಿದ ತಮ್ಮದೇಹವನ್ನೂ ಇಲ್ಲಿಯೇ ಬಿಟ್ಟು, ಅದರಿಂದ ತನಗೆ
ತಗುಲುಕಟ್ಟಿದ ಪಾಪವನ್ನೇ ಪ್ರಯಾಣದ ಬುತ್ತಿಯೆನ್ನಾಗಿಟ್ಟುಕೊಂಡು
ನರಕದ ದಾರಿಯೆಲ್ಲಿ ತಾನೊಬ್ಬನೇ ಸಾಗಬೇಕಾಗುವದು. ಅವರವರು ಈ
ಕುಟುಂಬರಣಕ್ಕಾಗಿ ಮಾಡಿದ ಪಾಪಗಳಿಗೆ ಅವರವರೇ ಫಲವನ್ನನುಭವಿಸ
ಬೇಕಲ್ಲದೆ, ಅವನ ಪಾಪಪ್ರವ್ಯಥಿಂದ ಉಪಜೀವಿಸುತಿದ್ದ ಕುಟುಂಬದವರಾ
ದರೂ, ಆ ಪಾಪಫಲಕ್ಕೆ ಭಾಗಿಗಳಾಗಿ ಅವನನ್ನು ಹಿಂಬಾಲಿಸಲಾರರು. ''ಎ
ಲ್ಲವನ್ನೂ ಬಿಟ್ಟಂತೆ ಪಾಪವನ್ನೂ ಬಿಟ್ಟುಹೋಗಬಾರದೆ '' ಎಂದರೆ, ಇದು
ಸಾಧ್ಯವಲ್ಲ ! ಈ ಪಾಪಸಂಬಂಧವು ಈಶ್ವರಸಂಕಲ್ಪದಿಂದ ಅವನನ್ನು ಅನು
ಸರಿಸಿಯೇ ಬರುವುದು. ಕಳವುಮಾಡಿದವನು ಕದ್ದಪದಾರ್ಥವನ್ನೂ ಕೊಂ
ಡುಳ್ಳಲ್ಲಿ ಬಚ್ಚಿಟ್ಟುಕೊಂಡು, ಆ ಪದಾರ್ಥವು ತನ್ನಲ್ಲಿರುವವರೆಗೂ ಭಯದಿಂ
ದ ತತ್ತರಿಸುತ್ತ, ಅದನ್ನು ಬಿಟ್ಟು ಹೋಗುವುದಕ್ಕೂ ಇಷ್ಟವಿಲ್ಲದೆ ಓಡು
ವಂತೆ, ದಾರಿಯುದ್ದಕ್ಕೂ ಆ ಪಾಪವನ್ನು ಕಟ್ಟಿಕೊಂಡೇ ದುಃಖಿತನಾಗಿ
ಓಡುತ್ತಿರುವನು. ಲೋಕದಲ್ಲಿ ಕುಟುಂಬಪೋಷಣವೆಂಬುದು ಒಂದು ಧರ್ಮ
ವಾಗಿದ್ದರೂ, ಕೇವಲ ಅಧರ್ಮದಿಂದಲೇ ಆ ಕಾರ್ಯವನ್ನು ನಡೆಸುವವನು, ನರ
ಕದಲ್ಲಿ ಕೊನೆಯದಾದ ಅಂಧತಮಿಸ್ರನಲ್ಲಿ ಬಿಳುವನು. ಯಮಲೋಕದ ನ
ರಕಯಾತನೆಗಳೆಲ್ಲವನ್ನೂ ಕ್ರಮವಾಗಿ ಅನುಭವಿಸಿ, ಅದರಿಂದ ಪಾಪಕ್ಕೆ
ಪ್ರಾಯಶ್ಚಿತ್ತವನ್ನು ಹೊಂದಿದಮೇಲೆ,ಶುದ್ಧನಾದ ಜೀವನು,ಪ್ರಾಯಕವಾಗಿ

ಈ ಭೂಲೋಕದಲ್ಲಿ ಮನುಷ್ಯಜನ್ಮವನ್ನು ಹೊಂದುವನು. ಇಲ್ಲಿಗೆ ಮೂವತ್ತನೆಯ ಅಧ್ಯಾಯವು.

ಗರ್ಭಜನ್ಮಾದಿ ದುಃಖಗಳು.

ಅಮ್ಮಾ ! ಕೇಳು! ಇದುವರೆಗೆ ನಿನಗೆ ಯೌವನದಲ್ಲಿಯೂ, ವಾರ್ಧಕದಲ್ಲಿಯೂ, ಮರಣಾವಸ್ಥೆಯಲ್ಲಿಯೂ, ಮರಣಾನಂತರದಲ್ಲಿಯೂ, ಮನುಷ್ಯನು ಅನುಭವಿಸಬೇಕಾದ ಕಷ್ಟಗಳನ್ನು ತಿಳಿಸಿದೆನು. ಇನ್ನು ಜೀವನು ತಾಯಿಯ ಗರ್ಭದಲ್ಲಿರುವಾಗ,ಅವನಿಗುಂಟಾಗುವ ಕಷ್ಟಗಳನ್ನೂ ತಿಳಿಸುವೆನು ಕೇಳು. ಜೀವನು ಜನ್ಮಾಂತರದಲ್ಲಿ ತಾನು ನಡೆಸಿದ ಕರ್ಮಗಳಿಗೆ ತಕ್ಕಂತೆ,ಈಶ್ವರಸಂಕಲ್ಪದಿಂದ ಪ್ರೇರಿತನಾಗಿ,ನರಕದಲ್ಲಿ ಬಿದ್ದು,ಆ ಕರ್ಮಗಳ ಫಲವನ್ನನುಭವಿಸಿದಮೇಲೆ ಈ ಲೋಕದಲ್ಲಿ ಬೇರೆಬೇರೆ ಶರೀರಗಳನ್ನು ಧರಿಸಿ ಹುಟ್ಟುವನು. ಆದರೆ ಕರ್ಮಫಲಗಳೆಲ್ಲವನ್ನೂ ಅನುಭವಿಸಿ ಮುಗಿಸಿದಮೇಲೆ ಶುದ್ಧನಾದ ಜೀವಾತ್ಮನು, ತಿರುಗಿ ಶರೀರದೊಡನೆ ಹುಟ್ಟುವನೆಂದು ಹಿಂದೆ ಹೇಳಿ,ತಿರುಗಿ ತನ್ನ ಕರ್ಮಾನುಸಾರವಾಗಿ ಈಶ್ವರಪ್ರೇರಣೆಯಿಂದ ಬೇರೆಬೇರೆ ಶರೀರಗಳೊಡನೆ ಹುಟ್ಟುವುದೆಂದರೆ ಹೇಗೆ? ಕರ್ಮಗಳೆಲ್ಲವೂ ಕಳೆದುಹೋದಮೇಲೆ ಶರೀರವನ್ನು ಧರಿಸಿ ಹುಟ್ಟುವನೆಂದೂ,ಕರ್ಮವಶದಿಂದಲೇ ಈ ದೇಹವನ್ನು ಹೊಂದುವನೆಂದೂ ಹೇಳುವುದು ಪರಸ್ಪರವಿರುದ್ಧವಲ್ಲವೆ?"ಎಂದು ನೀನು ಶಂಕಿಸಬಹುದು. ಅದು ಹಾಗಲ್ಲ ! ನರಕವನ್ನನುಭವಿಸಬೇಕಾದ ಕರ್ಮಗಳೆಲ್ಲವೂ ಕ್ಷೀಣಿಸಿದಮೇಲೆ, ಆದರಿಂದ ಪರಿಶುದ್ಧನಾಗಿ, ತಿರುಗಿ ಈ ಲೋಕದಲ್ಲಿ ಜನಿಸುವನೇಹೊರತು, ಅವನ ಕರ್ಮಗಳೆಲ್ಲವೂ ಇಷ್ಟರಲ್ಲಿಯೇ ಕ್ಷೀಣಿಸಿ ಹೋದುದಾಗಿ ತಿಳಿಯಕೂಡದು. ಈ ಪಾಪಕರ್ಮಗಳು ತೀರಿದಮೇಲೆಯೂಕೂಡ, ಶರೀರಸಂಬಂಧವನ್ನುಂಟುಮಾಡತಕ್ಕ ಕರ್ಮಶೇಷವು ತೀರಿಹೋಗಲಾರದು. ಇದು ದೇಹವನ್ನು ಹೊಂದಿಯೇ ಕ್ಷೀಣಿಸಬೇಕಲ್ಲದೆ ನರಕಾನುಭವದಿಂದ ಕ್ಷೀಣಿಸಲಾರದು.ಆದುದರಿಂದ ಜೀವನು,ಭಗವಂತನಸಂಕಲ್ಪಾನುಸಾರವಾಗಿ,ತಮ್ಮ ತಮ್ಮ ಕರ್ಮಶೇಷಕ್ಕೆ ತಕ್ಕಂತೆ ಪ್ರಾಣಿಗಳ ಶರೀರದಲ್ಲಿ ಹುಟ್ಟಬೇಕಾಗುವುದು.ಇದಕ್ಕಾಗಿ ಜೀವನು ಮೊದಲು ಪುರುಷನ ವೀರ್ಯ

ವನ್ನು ಸೇರಿ, ಅಪರ ಮೂಲಕವಾಗಿ ಸ್ತ್ರೀಯರ ಗರ್ಭಕೋಶದಲ್ಲಿ ಪ್ರವೇ ಶಿಸಿ ಒಂದುರಾತ್ರಿಯವರೆಗೆ ಅಲ್ಲಿನ ರಕ್ತದೊಡನೆ ಕಲೆತಿರುವನು. ರಕ್ತ ಮಿಶ್ರವಾದ ಈ ವೀರ್ಯವು ಐದುರಾತ್ರಿಗಳವರೆಗೆ ಪಕ್ವವಾಗಿ ಗುಳ್ಳೆಯಂತೆ ಉಂಡೆಯಾಗುತ್ತ ಬರುವುದು. ಹತ್ತು ದಿನಗಳೊಳಗಾಗಿ ಅದು ಬೋರೆ ಯೆಹಣ್ಣಿನ ಆಕಾರಕ್ಕೆ ತಿರುಗಿ, ಸ್ವಲ್ಪಕಠಿನವಾಗುವುದು. ಅದರಿಂ ದಾಚೆಗೆ ಕೆಲವು ದಿನಗಳೊಳಗಾಗಿ ಒಂದುಮಾಂಸದ ಮುದ್ದೆಯ ಅಥ ವಾ ಒಂದು ಮೊಟ್ಟೆಯ ಆಕಾರಕ್ಕೆ ತಿರುಗುವುದು. ಅದರಿಂದಾಚೆಗೆ ಒಂದು ತಿಂಗಳೊಳಗಾಗಿ ಆ ಮಾಂಸಪಿಂಡದಲ್ಲಿ ತಲೆಯೂ, ಎರಡ ನೆಯ ತಿಂಗಳು ಮುಗಿಯುವುದರೊಳಗಾಗಿ, ಕೈ, ಕಾಲು, ಮುಂತಾದ ಅವಯವವಿಭಾಗಗಳೂ, ಮೂರನೆಯ ತಿಂಗಳಲ್ಲಿ ಉಗುರು, ಕೂದಲು, ಎಲುಬು, ತೊಗಲು, ಮುಂತಾದುವೂ, ಮತ್ತು ಸ್ತ್ರೀಪುರುಷಚಿಹ್ನಗಳನ್ನು ತೋರಿಸತಕ್ಕ ಲಿಂಗಗಳೂ, ಕಣ್ಣು, ಕಿವಿ, ಮೂಗು ಮುಂತಾದ ರಂಧ್ರ ಗಳೂ ಏರ್ಪಡುವುವು. ನಾಲ್ಕನೆಯತಿಂಗಳಲ್ಲಿ ಸಪ್ತಧಾತುಗಳೂ ಕ್ರಮು ವಾಗಿ ತೋರುತ್ತ ಬರುವುವು. ಐದನೆಯ ತಿಂಗಳಲ್ಲಿ ಹಸಿವು ಬಾಯಾರಿ ಕೆಗಳು ಕಾಣುವುವು. ಆರನೆಯ ತಿಂಗಳಲ್ಲಿ ಅದು ಗರ್ಭದ ಜೀಲದಲ್ಲಿ ಬಿಗಿಯಲ್ಪಟ್ಟು, ಸ್ತ್ರೀಯರ ಹೊಟ್ಟೆಯ ಬಲಭಾಗದಕಡೆಗೆ ತಿರುಗಿಕೊಂ ಡಿರುವುದು. ಅಮ್ಮಾ ! ಆಗ ಆ ಜೀವನಿಗುಂಟಾಗುವ ಕಷ್ಟವನ್ನು ಕೇಳಬೇ ಕೆ ? ತಾಯಿಯ ಗರ್ಭಕೋಶದಲ್ಲಿ ಹುದುಗಿರುವ ಈ ಜೀವನಿಗೆ, ಆ ತಾಯಿ ಯು ತೆಗೆದುಕೊಳ್ಳುವ ಅನ್ನಪಾನಾದಿಗಳಿಂದ, ರಕ್ತಮಾಂಸಗಳೇ ಮೊದ ಲಾದ ಧಾತುಗಳು ಬೆಳೆಯುತ್ತ ಬಂದಹಾಗೆಲ್ಲಾ, ಅನೇಕಕ್ರಿಮಿಗಳಿಗೆ ಉತ್ಪತ್ತಿಸ್ಥಾನವಾಗಿಯೂ, ಅಸಹ್ಯವಾಗಿಯೂ ಇರುವ ಆ ಗರ್ಭದ ಗುಳಿ ಯಲ್ಲಿ ಬಿದ್ದು ನರಳುತ್ತಿರಬೇಕಲ್ಲದೆ, ಅಲ್ಲಿರತಕ್ಕ ಕ್ರಿಮಿಗಳೆಲ್ಲವೂ ಹಸಿವಿನ ಬಾಧೆಯಿಂದ ಆ ಜೀವನ ಅವಯವಗಳನ್ನು ಕಚ್ಚಿ ತಿನ್ನುತ್ತಿರುವುವು. ಆಗ ಆ ಜೀವನ ದೇಹವು ಬಹಳ ಮೃದುವಾಗಿರುವುದರಿಂದ, ಈ ಕ್ರಿಮಿಗಳ ಕಡಿ ತದಿಂದುಂಟಾದ ವೇದನೆಗೆ ಸಿಕ್ಕಿ, ಅದನ್ನು ತಡೆಯಲಾರದೆ ಆಗಾಗ ಮೂ ರ್ಛೆಬಿದ್ದು ಚೇತರಿಸಿಕೊಳ್ಳುವನು. ಇದಲ್ಲದೆ ತಾಯಿಯು ತನ್ನ ಇಚ್ಛಾ

ನುಸಾರವಾಗಿ ತಿನ್ನುವ ಉಪ್ಪು, ಹುಳಿ, ಕಾರ, ಮುಂತಾದ ಆಹಾರದೋಷ ದಿಂದಲೂ, ಬಿಸಿಬಿಸಿಯಾಗಿ ತೆಗೆದುಕೊಳ್ಳುವ ಪದಾರ್ಥಗಳ ಉಷ್ಣದಿಂದ ಲೂ, ಅವನ ದೇಹವು ಬೆಂದು ಬೆಂಡಾಗುತ್ತಿರುವುದು. ಈ ಕ್ರೂರವಾದ ಆಹಾರಗಳಿಂದ ಅವನ ಅವಯವಗಳೆಲ್ಲವೂ ಬಹಳ ವೇದನೆಗೊಳಗಾಗುವು ವು. ಮತ್ತು ಗರ್ಭಕೋಶದಲ್ಲಿ ಆ ಗರ್ಭದ ಚೀಲದಿಂದಲೂ, ಅದರ ಹೊ ರಗೆ ತಾಯಿಯ ನರಗಳ ಕಟ್ಟಿನಿಂದಲೂ ಬಿಗಿಯಲ್ಪಟ್ಟು, ಗೂಡಿನಲ್ಲಿ ಅಡ ಗಿದ ಹಕ್ಕಿಯಂತೆ, ಮಲಮೂತ್ರಗಳಿಂದ ತುಂಬಿದ ಆ ಗುಳಿಯಲ್ಲಿ, ಅತ್ತಿತ್ತ ಕದಲಲಾರದೆ, ಬೆನ್ನನ್ನೂ, ಕಂಠವನ್ನೂ ಬಗ್ಗಿಸಿ, ತಲೆಯನ್ನು ಹೊಟ್ಟೆಯಲ್ಲಿ ಸೇರಿಸಿ, ತನ್ನ ದೇಹವೇ ತನಗೆ ಸ್ವಾಧೀನವಿಲ್ಲದಂತೆ ಉಡುಗಿಕೊಂಡಿರುವನು. ಆಗ ದೈವವಶದಿಂದ ಆತನಿಗೆ ತನ್ನ ಪೂರ್ವಕರ್ಮಗಳ ಸ್ಮರಣೆಯುಂಟಾ ಗುವುದು. ಹಿಂದಿನ ಜನ್ಮದಲ್ಲಿ ತಾನು ಮಾಡಿದ ಕರ್ಮಗಳೆಲ್ಲವನ್ನೂ ಒಂ ದೊಂದಾಗಿ ಸ್ಮರಿಸಿಕೊಂಡು, ಆಗಾಗ ಪಶ್ಚಾತ್ತಾಪದಿಂದ ನಿಟ್ಟುಸಿರುಬಿ ಡುವನು. ಕ್ಷಣಮಾತ್ರವೂ ಮನಸ್ಸಿಗೆ ನೆಮ್ಮದಿಯಿಲ್ಲದೆ ತತ್ತ್ವಿಸುತ್ತಿರು ವನು. ಅಮ್ಮಾ ! ಇಂತಹ ಸ್ಥಿತಿಯಲ್ಲಿ ಜೀವನು ಯಾವ ಸುಖವನ್ನು ತಾನೇ ಹೊಂದುವನು ? ಅದರಿಂದಾಚೆಗೆ ಏಳನೆಯ ತಿಂಗಳು ಹುಟ್ಟಿದುದು ಮೊದಲು, ಅವನಿಗೆ ಮುಂದೆ ತನಗೆ ಪ್ರಾಪ್ತವಾಗುವ ಸುಖದುಃಖಗಳ ಜ್ಞಾನವುಂಟಾಗುವುದು. ಆಗ ಪ್ರಸೂತಿವಾಯುವು ಅವನನ್ನು ಅತ್ತಿತ್ತ ಕದಲಿಸುವುದಕ್ಕಾರಂಭಿಸಿ ನಡುಗಿಸುತ್ತಿರುವುವು, ಆ ಹೊಟ್ಟೆಯಲ್ಲಿ ಹು ಟ್ಟಿದ ಇತರ ಕ್ರಿಮಿಗಳ ಗುಂಪಿನಲ್ಲಿ, ತಾನೂ ಒಬ್ಬನಂತೆ ಆ ವಾಯುವಿನ ಪ್ರೇರಣೆಯಿಂದ ಒಂದೇ ಸ್ಥಳದಲ್ಲಿರುವುದಕ್ಕೂ ಅವಕಾಶವಿಲ್ಲದೆ ನಾನಾ ಕಡೆಗಳಿಗೆ ಕದಲುತ್ತಿರುವನು. ಆಗ ಅವನಿಗೆ ಜನ್ಮಾಂತರದಲ್ಲಿ ತಾನು ಮಾಡಿದ ಪಾಪಗಳೆಲ್ಲವೂ ಸ್ಮರಣೆಗೆ ಬರುವುದರಿಂದ ತನ್ನಲ್ಲಿ ತಾನು ‘‘ಅಯ್ಯೋ ! ನಾನು ಬುದ್ಧಿಗೆಟ್ಟು ಎಂತಹ ಪಾಪಗಳನ್ನು ನಡೆಸಿಬಿಟ್ಟೆನು! ಇನ್ನು ಮುಂದೆ ಎಂತಹ ಕ್ರೂರವಾದ ಕಷ್ಟಗಳನ್ನನುಭವಿಸಬೇಕಾಗಿರುವು ದು ! ” ಎಂದು ಮುಂದಿನ ಶರೀರದಲ್ಲಿ ತನಗುಂಟಾಗುವ ಕಷ್ಟಗಳನ್ನೂ ಆಗಲೇ ತಿಳಿದು ಭಯಪಟ್ಟು,ನನ್ನನ್ನು ಕುರಿತು, ‘‘ಓಜಗದ್ರಕ್ಷಕಾ!ನನ್ನ ಕಷ್ಟ

ವನ್ನು ಬಿಡಿಸಿ ನನ್ನನ್ನು ರಕ್ಷಿಸಿಬಾರದೆ" ಎಂದು ದೈನ್ಯದಿಂದ ಮೊರೆಯಿಡುವನು. ಆ ಗರ್ಭದಲ್ಲಿರುವ ಏಳು ಧಾತುಗಳಿಂದ ಬಿಗಿಯಲ್ಪಟ್ಟಿರುವಾಗಲೂ ಅವನು, ಪ್ರಯತ್ನಪೂರ್ವಕವಾಗಿ ಕೈಗಳನ್ನು ಜೋಡಿಸಿ ಅಂಜಲಿಹಸ್ತನಾಗಿ, ಯಾವನ ಸಂಕಲ್ಪದಿಂದ ತನಗೆ ಆ ವಿಧವಾದ ದುಸ್ಥಿತಿಯುಂಟಾಯಿತೋ ಆ ಭಗವಂತನನ್ನು ಹೀಗೆಂದು ಗದ್ಗದಸ್ವರದಿಂದ ಸ್ತೋತ್ರಮಾಡುವನು. "ಓ ಪರಮಪುರುಷಾ! ನೀನು ಸಮಸ್ತಜಗತ್ತನ್ನೂ ರಕ್ಷಿಸತಕ್ಕವನು. ಲೋಕರಕ್ಷಣಕ್ಕಾಗಿಯೇ ಅನೇಕರೂಪಗಳನ್ನು ಧರಿಸತಕ್ಕವನು. ನನ್ನ ದುಷ್ಕರ್ಮಗಳಿಗೆ ತಕ್ಕಂತೆ ನನಗೆ ಈ ದುರ್ಗತಿಯೆನ್ನು ಕಲ್ಪಿಸಿದವನೂ ನೀನೇ! ಆದುದರಿಂದ ಸಮಸ್ತಭಯನಿವಾರಕವಾದ ನಿನ್ನ ಪಾದಗಳನ್ನೇ ನಾನು ಮರೆಹೊಕ್ಕಿರುವೆನು. ದೇವಾ! ಪೂರ್ವಜನ್ಮದಲ್ಲಿ ನಾನು ಸಂಸಾರ ಭಯನಿವಾರಕವಾದ ನಿನ್ನ ಪಾದಗಳನ್ನಾಶ್ರಯಿಸದೆ ಹೋದುದಕ್ಕಾಗಿಯೇ ನನಗೆ ಇಂತಹ ಗತಿಯು ಪ್ರಾಪ್ತವಾಯಿತು. ಹೇ ನಾಥಾ! ಜೀವನಂತೆ ನೀನೂಕೂಡ ಆಗಾಗ ಈ ಪ್ರಕೃತಿಸಂಬಂಧವನ್ನು ಹೊಂದಿ, ಬೇರೆಬೇರೆ ಶರೀರಗಳನ್ನು ಧರಿಸತಕ್ಕವನಾಗಿದ್ದರೂ, ಆ ಮಾಯೆಯ ಗುಣಗಳು ನಿನ್ನನ್ನು ಮುಟ್ಟಲಾರವು. ಮುಪ್ಪು, ಸಾವು, ಮುಂತಾದ ವಿಕಾರಗಳೇನೂ ನಿನಗೆ ಸಂಭವಿಸಲಾರವು. ನಮ್ಮಂತಹ ಜೀವಾತ್ಮರಜ್ಞಾನದಂತೆ ನಿನ್ನ ಜ್ಞಾನವು ಸಂಕುಚಿತವಾಗುತಕ್ಕುದಲ್ಲ. ನೀನು ಕೇವಲಜ್ಞಾನಸ್ವರೂಪನು. ಇಂತಹ ನಿನ್ನ ಪಾದಾರವಿಂದಗಳನ್ನು ನಮಸ್ಕರಿಸುವೆನು. ನನ್ನಂತೆಯೇ ನೀನೂ ಪಂಚಭೂತಗಳಿಂದ ಕಲ್ಪಿತವಾದ ಈ ದೇಹಾದಿಗಳಿಂದ ಆಗಾಗ ಮರೆಸಲ್ಪಡತಕ್ಕವನಾಗಿದ್ದರೂ, ಅದರ ದೋಷವು ಸ್ವಲ್ಪಮಾತ್ರವೂ ನಿನ್ನನ್ನು ಅಂಟಲಾರದು. ನೀನು ಸಮಸ್ತವನ್ನೂ ನಿಯಮಿಸತಕ್ಕವನು. ನಿನ್ನ ಸ್ವರೂಪವು ಯಾವಾಗಲೂ ಪುಣ್ಯಪಾಪಕರ್ಮಗಳಿಂದ ಸಂಕೋಚವನ್ನು ಹೊಂದಲಾರದು. ನೀನು ಸರ್ವಜ್ಞನು. ಪ್ರಕೃತಿಪುರುಷರಿಗಿಂತಲೂ ಬೇರೆಯಾಗಿ, ವಿಲಕ್ಷಣಮಹಿಮೆಯಿಂದೊಪ್ಪುತ್ತಿರುವವನು. ಇಂತಹ ಪರಮಪುರುಷನಾದ ನಿನ್ನ ಪಾದಾರವಿಂದವನ್ನು ಮರೆಹೊಕ್ಕಿರುವೆನು. ಹೇ ದೇವಾ! ನನ್ನಂತಹ ಜೀವನು ನಿನ್ನ ಮಾಯೆಯಿಂದಲೇ ಮೋಹಿತ

ನಾಗಿ, ಸತ್ವಾದಿಗುಣಗಳ ಸಂಬಂಧದಿಂದ ಸಂಸಾರದಲ್ಲಿ ಕಟ್ಟುಬಿಳುವುದ
ಕ್ಕೂ, ನಿನ್ನ ಸಂಕಲ್ಪವೇ ಕಾರಣವಲ್ಲದೆ ಬೇರೆಯಲ್ಲ. ಕಟ್ಟಿದವನೇ ಬಿಡಿ
ಸಬೇಕೆಂಬ ನ್ಯಾಯದಂತೆ, ನನ್ನನ್ನು ಈ ಸಂಸಾರದಲ್ಲಿ ಕಟ್ಟು ಹಾಕಿದ
ನೀನೇ ನನ್ನನ್ನು ಬಿಡಿಸಬೇಕಲ್ಲದೆ ಈ ಕಾರ್ಯಕ್ಕೆ ಬೇರೆ ಸಮರ್ಥರಿಲ್ಲ. ಈ
ಸಂಸಾರಬಂಧದಿಂದಲೇ ನಮ್ಮಂತಹ ಜೀವಾತ್ಮಸಿಗೆ ಜ್ಞಾನಸಂಕೋಚ
ವುಂಟಾಗಿ, ತನ್ನ ನಿಜಸ್ಥಿತಿಯನ್ನು ತಾನು ತಿಳಿಯಲಾರದೆ ತಿರುಗಿ ತಿರುಗಿ ಜ
ನನಮರಣಗಳನ್ನು ಹೊಂದುತ್ತಿರುವನು. ಅಂತವನಿಗೆ ಸ್ವರೂಪಜ್ಞಾನ
ವುಂಟಾಗಬೇಕಾದರೂ, ನಿನ್ನ ಅನುಗ್ರಹದಿಂದಲ್ಲದೆ ಬೇರೆಯಲ್ಲ. ಆದುದ
ರಿಂದ ನಿನ್ನ ಮಾಯೆಯಿಂದ ಮುಚ್ಚಲ್ಪಟ್ಟ ಜೀವನು,ನಿನ್ನ ಅನುಗ್ರಹದಿಂದ
ಲೇ ಬಿಡುಗಡೆಯನ್ನು ಹೊಂದಬೇಕಾಗಿರುವುದು. ಭೂತಭವಿಷದ್ವರ್ತಮಾ
ನಗಳೆಂಬ ಮೂರುಕಾಲಗಳಲ್ಲಿಯೂ ಸಂಕುಚಿತವಾಗದೆ, ಜೀವಾತ್ಮಪರ
ಮಾತ್ಮರ ನಿಜಸ್ಥಿತಿಯನ್ನು ತಿಳಿಯತಕ್ಕ ಜ್ಞಾನವು, ನಿನ್ನ ಅನುಗ್ರಹವಿಲ್ಲದೆ
ಯಾವ ಜೀವನಿಗೂ ಉಂಟಾಗಲಾರದು. ಸರ್ವೇಶ್ವರನಾದ ನೀನೊಬ್ಬನೇ !
ಈ ತ್ರಿಕಾಲದಲ್ಲಿಯೂ ತಡೆಯಿಲ್ಲದ ಜ್ಞಾನವುಳ್ಳವನು. ಬ್ರಹ್ಮಾದಿದೇವತೆಗ
ಳಿಗೂ ನೀನೇ ಅಧಿಪತಿಯಾದುದರಿಂದ, ಅವರಿಗೂ ನಿನ್ನ ಅನುಗ್ರಹದಿಂ
ದಲೇ ಈ ಜ್ಞಾನವುಂಟಾಗಬೇಕು. ಬ್ರಹ್ಮದೇವನು ಮೊದಲಾಗಿ ನಾವೆಲ್ಲ
ರೂ ಕರ್ಮವೆಂಬ ಅವಿದ್ಯೆಯಿಂದ ಮರೆಸಿಹೋದ ಜ್ಞಾನವುಳ್ಳವರು. ಹೀ
ಗೆ ನಿನ್ನನ್ನು ಹೊರತು ಇತರರೆಲ್ಲರೂ ಕರ್ಮಕ್ಕೆ ಕಟ್ಟುಬಿದ್ದಿರುವಾಗ, ನೀನಲ್ಲ
ದೆ ಅದನ್ನು ಬಿಡಿಸತಕ್ಕವರಾರು? ತಾನೇ ಸೆರೆಯಲ್ಲಿ ಸಿಕ್ಕಿಬಿದ್ದ ಮನುಷ್ಯನು
ಮತ್ತೊಬ್ಬನನ್ನು ಹೇಗೆ ತಾನೇ ಸೆರೆಯಿಂದ ಬಿಡಿಸಬಲ್ಲನು ? ಸ್ಥಾವರಜಂಗ
ಮಾತ್ಮಕವಾದ ಶರೀರಗಳಲ್ಲಿ ಪ್ರವೇಶಿಸಿರುವ ಸಮಸ್ತಜೀವಗಳಲ್ಲಿಯೂ
ನೀನು ಅಂತರಾತ್ಮನಾಗಿ, ಅವರನ್ನು ನಿಯಮಿಸತಕ್ಕವನು. ಆದುದರಿಂದ ಆ
ಜೀವಾತ್ಮಗಳು ನಿನ್ನ ಅಂಶಗಳೇ ಅಲ್ಲದೆ ಬೇರೆಯಲ್ಲ. ಇಂತಹ ನಿನ್ನನ್ನು ಮರೆ
ಹುಗುವೆನು. ಜೀವಾತ್ಮಗಳಲ್ಲಿ ಅಂತರಾತ್ಮನಾಗಿದ್ದರೂ, ತನಗೆ ಸ
ಹಜವಾದ ಸರ್ವಜ್ಞತ್ವಾದಿಗುಣಗಳ ಹೆಚ್ಚುಕಡಿಮೆಯನ್ನು ಹೊಂದದೆ, ನ
ಮ್ಮಂತವರಿಗೆ ಜ್ಞಾನಪ್ರದಾನವನ್ನು ಮಾಡಿ, ನಮ್ಮ ಸಂಸಾರದ ಕಟ್ಟನ್ನು

ಬಿಡಿಸಿ ಮಹೋಪಕಾರವನ್ನು ಮಾಡತಕ್ಕ ಸರ್ವೇಶ್ವರನಾದ ನಿನ್ನನ್ನು ಬಿಟ್ಟರೆ ನಮಗೆ ಬೇರೆ ಗತಿಯೇನು ? ಓ ಭಗವಂತಾ ! ಬೇರೊಬ್ಬರ (ತಾಯಿಯು) ದೇಹದಲ್ಲಿರುವ ಗರ್ಭಕೋಶವೆಂಬ ಹಳ್ಳದಲ್ಲಿ ಬಿದ್ದು, ಅಲ್ಲಿನ ಕ್ರಿಮಿಗಳಿಂದ ಕಜ್ಜಲ್ಪಡುತ್ತ, ಆಲ್ಲಿನ ರಕ್ತದಲ್ಲಿಯೂ, ಮಲಮೂತ್ರಗಳಲ್ಲಿಯೂ ಮುಳುಗಿ, ಅಲ್ಲಿನ ಜಠರಾಗ್ನಿಯ ಕಾವಿಗೆ ಸಿಕ್ಕಿ ಬೆಂದು, ಮನಸ್ಸಿನಲ್ಲಿ ನೆಮ್ಮದಿಯಿಲ್ಲದೆ ತತ್ತಳಿಸುತ್ತ, ಈ ಸ್ಥಳದಿಂದ ಹೇಗಾದರೂ ತಪ್ಪಿಸಿಕೊಂಡು ಹೊರಗೆ ಬರಬೇಕೆಂದು ಪ್ರಯತ್ನಿಸಿ, ಕಾಲಾವಧಿಯನ್ನು ನಿರೀಕ್ಷಿಸುತ್ತ ದಿನಗಳನ್ನು ಲೆಕ್ಕವಿಡುತ್ತಿರುವ ನನ್ನನ್ನು ನೀನು ಯಾವಾಗ ಈ ಕೂಪದಿಂದ ಉದ್ಧರಿಸಿ ರಕ್ಷಿಸುವೆಯೋ ಕಾಣೆನು ! ದೇವಾ ! ಸರ್ವನಿಯಾಮಕನಾದ ನಿನ್ನ ಸಂಕಲ್ಪದಿಂದಲೇ ನಾನು ಈ ಗುಳಿಯಲ್ಲಿ ಬಿದ್ದಿರುವೆನು. ದಯಾಸಾಗರನಾದ ನಿನ್ನ ಅನುಗ್ರಹದಿಂದದಲ್ಲವೇ ನನಗೆ ಈ ಹತ್ತುತಿಂಗಳ ಕಾಲದಲ್ಲಿಯೇ ಈ ವಿಧವಾದ ಜ್ಞಾನವು ಹುಟ್ಟಿರುವುದು. ಹೀಗೆ ಜ್ಞಾನಪ್ರದಾನವನ್ನು ಮಾಡಿದ ನಿನ್ನನ್ನು ನಾನು ಯಾವವಿಧವಾದ ಪ್ರತ್ಯುಪಕಾರದಿಂದ ಸಂತೋಷಪಡಿಸಲಿ ? ದೀನನಾಥನಾದ ನೀನು ನನಗೆ ಮಾಡಿರುವ ಉಪಕಾರಕ್ಕಾಗಿ ನಿನ್ನ ಮನಸ್ಸಿನಲ್ಲಿ ನೀನೇ ಸಂತೋಷಿಸಬೇಕಲ್ಲದೆ, ನಾನು ಯಾವವಿಧದಿಂದಲೂ ನಿನ್ನನ್ನು ಸಂತೋಷಪಡಿಸಲಾರೆನು. ಇದೋ! ಈ ಅಂಜಲಿಯೊಂದುಹೊರತು, ಬೇರೆ ಯಾವ ಉಪಕಾರವನ್ನೂ ನಾನು ಮಾಡಲಾರೆನು. ನಾನು ಪ್ರಯತ್ನಪೂರ್ವಕವಾಗಿ ಮಾಡಿದ ಈ ಅಂಜಲಿಯನ್ನೇ ನೀನು ದೊಡ್ಡಪ್ರತ್ಯುಪಕಾರವನ್ನಾಗಿ ಭಾವಿಸಿ, ನನ್ನನ್ನು ಈ ಸೆರೆಯಿಂದ ಬಿಡಿಸಬೇಕು. ದೇವಾ ! ಪರಮಾತ್ಮನಿಗೆ ಸ್ಥಾನವಾಗಿ, ಬ್ರಹ್ಮಪುರವೆಂದು ಕರೆಯಲ್ಪಡುವುದಾಗಿಯೂ, ಅವನವನ ಕರ್ಮಾನುಸಾರವಾಗಿ ಏಪ್ಪಟ್ಟುದಾಗಿಯೂ ಇರುವ ದೇಹದಲ್ಲಿ, ಆ ಪ್ರಕೃತಿಗಿಂತಲೂ ಬೇರ್ಪಟ್ಟವನಾಗಿ, ಏಳು ಬಗೆಯ ತ್ವಕ್ಕುಗಳಿಂದ ಮುಚ್ಚಲ್ಪಟ್ಟಿದ್ದಾಗಲೂ, ಶಮದಮಾದಿಗುಣಗಳುಳ್ಳ ಜೀವನು (ಯೋಗಿಯು) ಈಶ್ವರದತ್ತವಾದ ಯಾವ ಬುದ್ಧಿಯಿಂದ ಆ ಪರಮಪುರುಷನನ್ನು ಸಾಕ್ಷಾತ್ಕರಿಸುವನೋ, ಅದೇವಿಧವಾದ ಬುದ್ಧಿಯಿಂದ ನಾನೂ ಈಗ, ಹೊರಗೂ ಒಳಗೂ ಪ್ರಕಾಶಿಸುವ

ನಿನ್ನನ್ನು ಸಾಕ್ಷಾತ್ಕರಿಸುತ್ತಿರುವೆನು. ಹೇ ದೇವಾ ! ಈ ಗರ್ಭನರಕವು ನನಗೆ ವಿಶೇಷಬಾಧೆಯನ್ನುಂಟುಮಾಡುತಿದ್ದರೂ, ಈಗ ದಿವ್ಯಜ್ಞಾನ ಹೇತುವಾದ ಈ ಸ್ಥಳವನ್ನು ಬಿಟ್ಟು ಹೊರಗೆ ಬರುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಈ ಕೂಪದಿಂದ ಹೊರಕ್ಕೆ ಬಂದೊಡನೆಯೇ, ನಿನ್ನ ಮಾಯೆಯು ಬಂದು ನನ್ನನ್ನು ಆವರಿಸಿ, ಈ ದಿವ್ಯಜ್ಞಾನವೆಲ್ಲವನ್ನೂ ಕ್ಷಣಮಾತ್ರದಲ್ಲಿ ನೀಗಿಸಿ ಬಿಡುವುದು. ಅದರಿಂದ ನನಗೆ ದೇಹಾದಿಗಳಲ್ಲಿ ಅಭಿಮಾನವು ಹೆಚ್ಚುತ್ತಬಂದು, ತಿರುಗಿತಿರುಗಿ ಹುಟ್ಟಿ ಸಾಯುತ್ತ ಸಂಸಾರಚಕ್ರದಲ್ಲಿ ತಿರುಗಬೇಕಾಗುವುದು. ಆದುದರಿಂದ ಈಗ ನೀನು ನನ್ನನ್ನು ಈ ಗರ್ಭಕುಹರದಿಂದ ತಪ್ಪಿಸಿದರೂ, ಅದಕ್ಕಿಂತಲೂ ಅಧಿಕಭಯಂಕರವಾದ ಸಂಸಾರಕೂಪದಲ್ಲಿ ಬಿಳಿಸದೆ, ನನಗೆ ಇದೇವಿಧವಾದ ಜ್ಞಾನವು ಮುಂದೆಯೂ ಇರುವಂತೆ ಅನುಗ್ರಹಿಸಬೇಕು. ಅದರಿಂದ ನಿನ್ನ ಮಾಯೆಯನ್ನತಿಕ್ರಮಿಸಿ ತೀಕ್ಷ್ಣದಲ್ಲಿಯೇ ನಾನು ನಿನ್ನ ರೂಪವನ್ನು ನೋಡಬಹುದು. ಈ ಗರ್ಭಕೂಪದಿಂದ ನನ್ನನ್ನು ತಪ್ಪಿಸುವಂತೆ, ಸಂಸಾರಕೂಪದಿಂದಲೂ ನನ್ನನ್ನು ತಪ್ಪಿಸಿ ರಕ್ಷಿಸಬೇಕು. ಮುಂದೆ ಎಂದೆಂದಿಗೂ ನನಗೆ ಈ ಗರ್ಭವಾಸದುಃಖವು ಬಾರದಂತೆಯೂ ಅನುಗ್ರಹಿಸಬೇಕು. ನಿನ್ನ ಪಾದಾಶ್ರಿತರಿಗೆ ಯಾವ ಕಷ್ಟವೂ ಇಲ್ಲದಂತೆ ಕಾಪಾಡಬೇಕಾದುದು ನಿನ್ನ ಭಾರವಲ್ಲವೆ" ಎಂದು ಗರ್ಭಗೋಳದಲ್ಲಿ ಅಪಾರವಾದ ದುಃಖಕ್ಕೊಳಗಾದ ಜೀವನು, ಭಗವಂತನನ್ನು ಪ್ರಾರ್ಥಿಸುತ್ತ, ಹತ್ತುತಿಂಗಳವರೆಗೆ ಅಲ್ಲಿಯೇ ಅಡಗಿದ್ದಮೇಲೆ, ಒಳಗಿನಿಂದ ಪ್ರಸೂತಿವಾಯುವು ಆ ಜೀವನನ್ನು ಹೊರಕ್ಕೆ ತಳ್ಳುವುದಕ್ಕಾಗಿ ಪ್ರಯತ್ನಿಸುವುದು. ಈ ವಾಯುವಿನ ಒತ್ತುವಿಕೆಯಿಂದ ಜೀವನು ತನ್ನ ಸ್ಥಾನದಿಂದ ಕದಲಿ, ತಲೆಯನ್ನು ಕೆಳಮುಖವಾಗಿ ಮಾಡಿ, ಎಷ್ಟೋ ಕಷ್ಟದಿಂದ ತಾಯಿಯ ಗರ್ಭವನ್ನು ಬಿಟ್ಟು ಹೊರಕ್ಕೆ ಬರುವನು. ಅವನು ಹೊರಕ್ಕೆ ತಲೆಯಿಕ್ಕಿದೊಡನೆಯೇ ಅವನಿಗಿದ್ದ ಹಿಂದುಮುಂದಿನ ಜ್ಞಾನವೆಲ್ಲವೂ ನಷ್ಟವಾಗುವುವು. ರಕ್ತದಿಂದ ತೊಯ್ದ ಮೈಯಳ್ಳವನಾಗಿ, ನೆಲಕ್ಕೆಬಿದ್ದು ಹುಳುವಿನಂತೆ ಒದ್ದಾಡುವನು. ಒಡನೆಯೇ ಅಜ್ಞಾನವು ಬಂದು ಕವಿಯುವುದರಿಂದ, ರೋದಿಸುವುದಕ್ಕೆ ತೊಡಗುವನು. ಅವನ ದುಃಖಕ್ಕೆ ಕಾರಣವೇನೆಂದು

ಬುದನ್ನು ಯಾರೂ ತಿಳಿಯಲಾರರು. ಇವನು ಹೀಗೆ ಬಾಯಿಂದ ಮಾತ ನಾಡಲಾರದೆ ರೋದನಮಾಡುತ್ತಿರುವಾಗ, ಆ ಶಿಶುವಿನ ಅಭಿಪ್ರಾಯವ ನ್ನು ತಿಳಿಯಲಾರದೆ, ತಾಯಿಮುಂತಾದವರು, ತಮಗೆ ತೋರಿದಂತೆ ಚಿಕಿ ತ್ಸೆಯನ್ನಾರಂಭಿಸುವರು. ಹಸಿವಿನ ಬಾಧೆಯಿಂದ ಅಳುವಾಗ ಅಜೀರ್ಣ ಸಂಬಂಧವಾದ ಹೊಟ್ಟೆಯ ನೋವಿಗಾಗಿ ಅಳುವನೆಂದು ತಿಳಿದು, ಬೇವಿನ ರಸ ಮುಂತಾದ ಔಷಧಿಗಳನ್ನು ಸುರಿಯುವರು. ಹೊಟ್ಟೆಯ ನೋವಿಗಾಗಿ ಅಳುವಾಗ, ಹಸಿವಿಗಾಗಿ ಅಳುವನೆಂದು ತಿಳಿದು, ಮೇಲೆಮೇಲೆ ಸ್ತನ್ಯವನ್ನು ಕುಡಿಸುತ್ತಿರುವರು. ಅದರಿಂದ ಆ ಶಿಶುವಿನ ದೇಹಕ್ಕೆ ಮತ್ತಷ್ಟು ಬಾಧೆ ಯುಂಟಾಗುವುದು. ಆಗಾಗ ಆ ಶಿಶುವನ್ನು ತಂಪು ತಿಗಣೆಗಳಿಂದಲೂ, ಸೊಳ್ಳೆಗಳಿಂದಲೂ ತುಂಬಿ ಕಲ್ಮಷವಾದ ಪಾಪಿಗೆಯಲ್ಲಿ ಮಲಗಿಸುವರು. ಇವುಗಳ ಬಾಧೆಯಿಂದ ಬಹಳವಾಗಿ ಸಂಕಟಪಡುತ್ತ, ಮೈಯನ್ನು ತುರಿಸಿಕೊಳ್ಳುವುದಕ್ಕಾಗಲಿ, ಏಳುವುದಕ್ಕಾಗಲಿ, ಕುಳ್ಳಿರುವುದಕ್ಕಾಗಲಿ, ನಡೆಯುವುದಕ್ಕಾಗಲಿ, ಸಾಧ್ಯವಿಲ್ಲದೆ ಸುಮ್ಮನೆ ಅಳುತ್ತಿರುವನು. ಹೀಗೆ ಅನೇಕಬಾಧೆಗಳನ್ನನುಭಸಸುತ್ತ ಎಷ್ಟೋ ಶ್ರಮಪಟ್ಟು ಆ ಬಾಲ್ಯಾವಸ್ಥೆ ಯನ್ನು ಕಳೆಯುವನು. ಈ ಬಾಲ್ಯಾವಸ್ಥೆಯು ಕಳೆಯುತ್ತ ಬರವಾಗಲೇ ಅವ ನ ಮನಸ್ಸಿನಲ್ಲಿ ಕಾಮಕ್ರೋಧಾದಿಗಳು ತಲೆಯೆತ್ತುವುವು. ಈ ಕಾಮಕ್ರೋ ಧಗಳೂ ಅವನ ಶರೀರದೊಡನೆಯೇ ಬೆಳೆಯುತ್ತ ಬರುವುವು ತನ್ನ ನಾಶವ ನ್ನೇ ತಾನು ತಿಳಿಯದೆ, ತನಗೆ ಆಸೆಯು ಹೆಚ್ಚಿದಷ್ಟೂ ತನ್ನ ಇಷ್ಟಕ್ಕೆ ವಿ ರೋಧಿಗಳಾದವರಲ್ಲಿ ಕೋಪವನ್ನೂ ಹೆಚ್ಚಿಸಿಕೊಳ್ಳುವನು. ಪಂಚಭೂತಗ ಳಿಂದ ಕಲ್ಪಿತವಾದ ದೇಹದಲ್ಲಿ ಸೇರಿಕೊಂಡಿರುವ ಆ ಜೀವನು, ವಿವೇಕಹೀನ ನಾಗಿ, ಎಲ್ಲವನ್ನೂ ನಾನೇ ನಡೆಸುವೆನೆಂದೂ, ಎಲ್ಲವೂ ತನ್ನದೆಂದೂ ಅಹಂಕಾರ ಮಮಕಾರಗಳಿಂದ ಬೀಗಿ ಬೆರೆಯುವನು. ಹೀಗೆ ದುರ್ಬುದ್ಧಿ ಯುಳ್ಳ ಮನುಷ್ಯನು, ತಾನು ಯಾವಯಾವ ಕರ್ಮಗಳನ್ನು ನಡೆಸಿದರೆ ತನಗೆ ಸಂಸಾರವು ಕಟ್ಟುವುದೋ, ಅಂತಹ ಕರ್ಮಗಳಲ್ಲಿಯೇ ಪ್ರವರ್ತಿ ಸುತ್ತ, ತಿರುಗಿತಿರುಗಿ ಜನನಮರಣಗಳಿಗೆ ಸಿಕ್ಕಿಬಿದ್ದು, ತಿರುಗಿ ದುಃಖಪ್ರಚು ರವಾದ ಆ ದೇಹವನ್ನೇ ಹೊಂದುವನು. ಕುಟುಂಬಪೋಷಣಕ್ಕಾಗಿ

ಅದರಲ್ಲಿ ಎಷ್ಟೋ ಅಸತ್ಕಾರ್ಯಗಳನ್ನು ನಡೆಸಿ, ನರಕದ ಬಾವಿಯಲ್ಲಿ ಬಿಳುವನು. ಜನನೀ ! ಕುಟುಂಬವ್ಯಸನದಿಂದುಂಟಾಗುವ ಅನರ್ಥಗಳೆಷ್ಟೆಂಬುದನ್ನು ಬಲ್ಲೆಯಾ? ಇದರ ಸಹವಾಸವನ್ನು ತಲೆಯೇರಿಸಿಕೊಂಡ ಷ್ಟೂ, ಮನುಷ್ಯನಿಗೆ ಸತ್ಯ,ಶೌಚ,ದಯೆ,ದಾನ, ಬುದ್ಧಿ, ಸಂಪತ್ತು, ಲಜ್ಜೆ, ಕೀರ್ತಿ,ತಾಳ್ಮೆ ಶಮೆ,ದಮೆ,ಮುಂತಾದ ಗುಣಗಳೆಲ್ಲವೂ ನಾಶಹೊಂದದಿರವು. ವಿವೇಕಿಯಾದವನು ಇಷ್ಟೊಂದನರ್ಥಕ್ಕೆ ಕಾರಣವಾದ ಈ ದುಸ್ಸಹವಾಸವನ್ನು ಮಾಡಬಾರದು. ತಿರ್ಶ್ಚೀವರಪರಾಯಣರಾದ ಅಸತ್ತುಗಳೊಡನೆ ಸೇರಿದವನು, ಅವರಿಂದ ದುರ್ಮಾರ್ಗಕ್ಕೆ ಎಳೆಯಲ್ಪಟ್ಟವನಾಗಿ, ಮೊದಲಿನಂತೆ ನರಕದಲ್ಲಿಯೇ ಬಿಳುವನು. ಯಾರು ಕೇವಲವಿಷಯಾಸಕ್ತರಾಗಿರುವರೋ, ಯಾರು ಸ್ವಸ್ವರೂಪವನ್ನು ತಿಳಿಯದೆ ದೇಹವನ್ನೇ ಆತ್ಮವೆಂದು ಭ್ರಮಿಸುವರೋ, ಯಾರು ವಿವೇಕವಿಲ್ಲದ ಮೂಢಬುದ್ಧಿಯುಳ್ಳವರೋ, ಯಾರು ಮನಸ್ಸಿನಲ್ಲಿ ತಾಳ್ಮೆಯಿಲ್ಲದವರೋ, ಯಾರು ಸ್ತ್ರೀಯರ ಮೋಹಪಾಶಕ್ಕೆ ಸಿಕ್ಕಿಬಿದ್ದು, ಅವರ ಕೈಯಾಟದ ಬೊಂಬೆಗಳಂತೆ ಅವರು ಹೇಳಿದಹಾಗೆ ಆಡುತ್ತಿರುವರೋ, ಅಂತವರನ್ನು ನೋಡಿದಾಗ ಅವರ ದುಸ್ಥಿತಿಗಾಗಿ ಶೋಕಿಸಬೇಕೇಹೊರತು, ಅಂತವರೊಡನೆ ಕ್ಷಣಮಾತ್ರವೂ ಸಹವಾಸವನ್ನು ಮಾಡಬಾರದು. ಸ್ತ್ರೀಸಂಗದಿಂದಾಗಲಿ, ಆ ಸ್ತ್ರೀಸಂಗವುಳ್ಳವರೊಡನೆ ಸಹವಾಸಮಾಡುವುದರಿಂದಾಗಲಿ, ಉಂಟಾಗುವಷ್ಟು ಅನರ್ಥಗಳು ಪುರುಷನಿಗೆ ಬೇರೆ ಯಾವ ಕಾರಣದಿಂದಲೂ ಉಂಟಾಗಲಾರದು ಇದರಿಂದ ದುಃಖವೇಹೊರತು ಎಂದಿಗೂ ಸುಖವಿಲ್ಲ. ಸ್ತ್ರೀಯರ ಮೋಹಪಾಶವೆಂಬುದು, ಮಹಾಜ್ಞಾನಿಗಳನ್ನೂ ಕೂಡ ಬಲವಾಗಿ ಸೆಳೆದು ಕಟ್ಟಿಹಾಕದೆ ಬಿಡಲಾರದು. ಅಮ್ಮಾ ! ಇದಕ್ಕೊಂದು ಇತಿಹಾಸವನ್ನು ಹೇಳುವೆನು ಕೇಳು. ಪೂರ್ವದಲ್ಲಿ ಬ್ರಹ್ಮದೇವನು ತನ್ನ ಕುಮಾರಿಯಾದ ಸರಸ್ವತಿಯನ್ನು ನೋಡಿ, ಅವಳ ಸೌಂದರ್ಯಕ್ಕೆ ಮೋಹಿತನಾಗಿ ಅವಳನ್ನೇ ಪರಿಗ್ರಹಿಸುವುದಕ್ಕೆ ಯತ್ನಿಸಿದನು. ಅವಳು ಮೃಗರೂಪವನ್ನು ಧರಿಸಿ ಓಡುತ್ತಿದ್ದರೂ ಬಿಡದೆ, ತಾನೂ ಮೃಗರೂಪವನ್ನೇ ಧರಿಸಿ, ಅವಳನ್ನು ಬೆನ್ನಟ್ಟಿ ಹೋಗಿ ಹಿಡಿದನು.

ಮಹಾತ್ಮನಾಗಿ ಜ್ಞಾನಾಧಿಕನೆನಿಸಿಕೊಂಡ ಅಂತಹ ಬ್ರಹ್ಮನೇ ಹೀಗೆ ಸ್ತ್ರೀಮೋಹದಿಂದ ಮರುಳಾಗಿ, ಲಜ್ಜೆಯನ್ನು ಬಿಟ್ಟು, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನೇ ಸಂಭೋಗಿಸುವುದಕ್ಕೆ ಯತ್ನಿಸಿದನಲ್ಲವೆ ? ಇನ್ನು ಸಾಮಾನ್ಯಜನರಿಗೆ ಈ ದುರ್ಬುದ್ಧಿಯು ಹುಟ್ಟುವುದೇನಾಶ್ಚರ್ಯವೆ ? ಸ್ತ್ರೀ ಸಾಂಗತ್ಯವೆಂಬುದು, ಅಯಸ್ಕಾಂತವು ಕಬ್ಬಿಣವನ್ನೆಳೆಯುವಂತೆ ಪುರುಷರ ಮನಸ್ಸನ್ನು ಕ್ಷಣಮಾತ್ರದಲ್ಲಿ ಆಕರ್ಷಿಸಿಬಿಡುವುದು. ಆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಮರೀಚಿ ಮೊದಲಾದ ಮಹರ್ಷಿಗಳೂಕೂಡ ಈ ಮೋಹ ಪಾಶವನ್ನು ತಪ್ಪಿಸಿಕೊಳ್ಳಲಾರದೆ ಹೋದರು. ಅತ್ಯಂತಜ್ಞಾನಾಧಿಕನಾದ ನಾರಾಯಣಮಹರ್ಷಿಯೊಬ್ಬನುಹೊರತು ಬೇರೆ ಯಾರೂ ಈ ಸ್ತ್ರೀಮಾಯೆಯನ್ನು ತಪ್ಪಿಸಿಕೊಂಡವರಿಲ್ಲ. ಜನನೀ ! ಸ್ತ್ರೀರೂಪದಿಂದ ಲೋಕದಲ್ಲಿ ಹರಡಿರುವ ಆ ಭಗವನ್ಮಾಯೆಯ ಪ್ರಭಾವವನ್ನೇನೆಂದು ಬಲ್ಲೆ ! ಆ ಸ್ತ್ರೀವ್ಯಕ್ತಿಯು ತನ್ನ ಹುಬ್ಬನ್ನು ಒಂದಾವರ್ತಿ ಕುಣಿಸುವುದರಿಂದಲೇ, ಲೋಕವಿಜಯಿಗಳಾದ ಅನೇಕಶೂರರನ್ನೂ ಸ್ವಾಧೀನಪಡಿಸಿಕೊಂಡು, ಅವರನ್ನೂ ಕುಣಿದಾಡಿಸಿಬಿಡುವುದು. ನನ್ನನ್ನು ಪಾಸನೆ ಮಾಡಿ, ಅದರಿಂದ ಆತ್ಮಜ್ಞಾನವನ್ನು ಕೋರುವವರು, ಮೊದಲು ಈ ಸ್ತ್ರೀಸಂಗವನ್ನು ತುದ್ಧಾಂಗವಾಗಿ ತ್ಯಜಿಸಬೇಕು. ಇಲ್ಲದಪಕ್ಷದಲ್ಲಿ ಎಂತಹ ಜ್ಞಾನಾಧಿಕನಾದರೂ ಬುದ್ಧಿಗೆಟ್ಟು, ಅಕಾರ್ಯಗಳಲ್ಲಿ ಪ್ರವರ್ತಿಸಿ, ಘೋರನರಕಗಳಲ್ಲಿ ಬಿಳುವನು. ಉಪಚಾರ ಮೊದಲಾದ ನೆವದಿಂದ ಮೆಲ್ಲಮೆಲ್ಲಗೆ ತನ್ನ ಕಡೆಗೆ ಬಂದು ಸೇರುತ್ತಿರುವ ಸ್ತ್ರೀರೂಪವಾದ ಈ ಭಗವನ್ಮಾಯೆಯನ್ನು ನೋಡಿದೊಡನೆ ಪುರುಷನು, ಮೇಲೆ ಹುಲ್ಲಿನಿಂದ ಮುಚ್ಚಲ್ಪಟ್ಟ ಹಾಳುಬಾವಿಯಂತೆ, ಅದನ್ನು ತನಗೆ ಮೃತ್ಯುಹೇತುವನ್ನಾಗಿ ತಿಳಿಯಬೇಕೇ ಹೊರತು ಸ್ವಲ್ಪಮಾತ್ರವೂ ಹತ್ತಿರಕ್ಕೆ ಸೇರಿಸಬಾರದು. ಇಂತಹ ಸ್ತ್ರೀಯರು ಪುರುಷನಿಗೆ ತಿಳಿಯದ ಹಾಗೆಯೇ ಸುಖಭ್ರಾಂತಿಯನ್ನು ಹುಟ್ಟಿಸಿ ಮಹಾನರ್ಥಗಳನ್ನು ತಂದು ಸೇರಿಸುವರು. ಇದರಂತೆಯೇ ಸ್ತ್ರೀಯರೂಕೂಡ ಮೋಕ್ಷಾಪೇಕ್ಷೆಯುಳ್ಳವರಾದರೆ ಪುರುಷರ ಸಹವಾಸವನ್ನು ನಿಶ್ಶೇಷವಾಗಿ ತ್ಯಜಿಸಬೇಕು. ಜೀವಾತ್ಮನು ಸ್ತ್ರೀಯರಲ್ಲಿ ಮೋಹಗೊಂ

ಡು, ಮರಣಕಾಲದಲ್ಲಿಯೂ ಆ ಸ್ತ್ರೀವ್ಯಕ್ತಿಯನ್ನೇ ಧ್ಯಾನಿಸುತ್ತ ಬರುವು ದರಿಂದ, ಮುಂದಿನ ಜನ್ಮದಲ್ಲಿ ತಾನೇ ಸ್ತ್ರೀರೂಪವನ್ನು ಹೊಂದುವನು. ಹಿಂದಿನ ಜನ್ಮದಲ್ಲಿ ಪುರುಷನಾಗಿದ್ದ ಜೀವನೇ ಈಗ ಆತ್ಮಸ್ವರೂಪವನ್ನು ಮರೆತು, ತನ್ನನ್ನು ಹೆಂಗಸಾಗಿ ಭಾವಿಸಿಕೊಳ್ಳುವನು. ಪುರುಷರೂಪದಿಂದ ಲೋಕದಲ್ಲಿ ಹರಡಿರುವ ಭಗವನ್ಮಾಯೆಯನ್ನು ಕಂಡು ಮೋಹಗೊಳ್ಳುವನು. ಅಂತವನನ್ನು ಕೈಹಿಡಿದರೆ, ಅವನಿಂದ ತಾನು ಬೇಕಾದ ಉಡಿಗೆಗಳನ್ನೂ, ಐಶ್ವರ್ಯವನ್ನೂ, ಇತರ ಭೋಗಸಾಮಗ್ರಿಗಳನ್ನೂ ಪಡೆಯಬಹುದೆಂದೂ, ಅವನೇ ತನಗೆ ಭರ್ತನೆಂದೂ ಭಾವಿಸುವನು. ಬೇಟೆಗಾರರ ಹಾಡು, ಜಿಂಕೆಗಳಿಗೆ ಅನರ್ಥವನ್ನು ತಂದಿಡುವಂತೆ, ಪುರುಷವ್ಯಕ್ತಿಯೆಂಬ ನನ್ನ ಮಾಯೆಯು,ಸ್ತ್ರೀಯರಿಗೆ ಆಸೆಯನ್ನು ಹುಟ್ಟಿಸಿ, ಅನರ್ಥವನ್ನು ತಂದಿಡುವುದಕ್ಕಾಗಿಯೇ ಏರ್ಪಟ್ಟಿರುವುದೇಹೊರತು ಬೇರೆಯಲ್ಲ. ಜನನೀ ! ಹೀಗೆ ಜೀವನು ಗರ್ಭಕೋಶದಲ್ಲಿಯೂ, ಜನನಕಾಲದಲ್ಲಿಯೂ, ಬಾಲ್ಯ ಯೌವನಗಳಲ್ಲಿಯೂ, ಅದರಿಂದಾಚೆಗೆ ಮುಪ್ಪು, ಸಾವು, ಮುಂತಾದ ಅವಸ್ಥೆಗಳಲ್ಲಿಯೂ ಅನುಭವಿಸಬೇಕಾದ ಕಷ್ಟಗಳೆಲ್ಲವನ್ನೂ ನಿನಗೆ ತಿಳಿಸಿದೆನಷ್ಟೆ ? ಇದರಮೇಲೆ ನಿನಗೆ ಇನ್ನೂ ಕೆಲವು ಸಂದೇಹಗಳುಂಟಾಗಬಹುದು. ಉತ್ಪತ್ತಿವಿನಾಶಗಳೊಂದೂ ಇಲ್ಲದೆ ನಿತ್ಯವಸ್ತುವೆನಿಸಿಕೊಂಡ ಜೀವನಿಗೆ ಜನನಮರಣಗಳೆಂಬುದು ಹೇಗೆ ! ಅಥವಾ ಅವನಿಗುಂಟಾಗುವ ಜನನ ಮರಣಗಳ ಸ್ವರೂಪವೆಂತದು ? ಶರೀರಾನುಭವದಿಂದಲೇ ಸರ್ವಕರ್ಮಗಳೂ ಕ್ಷೀಣಿಸುವುದಾದರೆ, ಅವನು ಒಂದು ಶರೀರವನ್ನೆತ್ತಿದಾಗಲೇ ಅವನ ಪ್ರಾರಬ್ಧಕರ್ಮಗಳು ಕ್ಷೀಣಿಸಿ ಹೋಗಬೇಕಲ್ಲವೆ? ಹೀಗೆ ಕರ್ಮಕ್ಷಯವನ್ನು ಹೊಂದಿದಮೇಲೆ ಜೀವನಿಗೆ ತಿರುಗಿ ಮತ್ತೊಂದು ಶರೀರವುಂಟಾಗುವುದೇಕೆ? ಕರ್ಮಸಂಬಂಧವು ನೀಗಿದಮೇಲೆ ಶರೀರಸಂಬಂಧವೂ ಬಿಟ್ಟು ಹೋಗಬೇಕಲ್ಲವೆ ? ಒಂದುವೇಳೆ ಬೇರೆ ಶರೀರಕ್ಕೆ ಹೋಗಬೇಕಾದರೂ, ಜೀವನಿಗೆ ಆ ಶರೀರದಲ್ಲಿಯೂ ಹಿಂದಿನ ಶರೀರದಲ್ಲಿದ್ದ ಭೂತಸೂಕ್ಷ್ಮಗಳೇ ಅನುಸರಿಸಿಬರುವುವೆ? ಅಥವಾ ಅವು ಬಿಟ್ಟು ಹೋಗುವುವೆ ? ಈವಿಧವಾದ ಸಂಶಯಗಳೆಲ್ಲವೂ ನಿನ್ನ ಮನಸ್ಸಿನಲ್ಲಿ ಹುಟ್ಟುವುದಕ್ಕೆ ಅವಕಾಶವುಂಟು. ಈ ಸಂ

ದೇಹಗಳೆಲ್ಲವನ್ನೂ ನೀಗಿಸುವೆನು ಕೇಳು?ಜೀವನು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರಕ್ಕೆ ಹೋಗುವಾಗ, ನಡುವೆ, ಒಂದು ಸೂಕ್ಷ್ಮಶರೀರವನ್ನು ಹೊಂದಿ, ಪಂಚಭೂತಗಳಿಂದಲೂ, ಇಂದ್ರಿಯಗಳಿಂದಲೂ, ಮನಸ್ಸಿನಿಂದಲೂ, ಕೂಡಿ ಇದೇ ಆತ್ಮವೆಂಬ ಅಭಿಮಾನಕ್ಕೆ ಪಾತ್ರವಾದ ಆ ಸೂಕ್ಷ್ಮಶರೀರದೊಡನೆ ಮತ್ತೊಂದು ಸ್ಥೂಲಶರೀರಕ್ಕೆ ಹೋಗಿ ಸೇರುವನು. ಹಿಂದಿದ್ದ ಸ್ಥೂಲಶರೀರದಲ್ಲಿ ತಾನು ಮಾಡಿದ ಕರ್ಮಗಳಿಗೆ ಫಲವನ್ನನುಭವಿಸುತ್ತ ಬರುವಾಗಲೇ, ತಿರುಗಿ ಮತ್ತೊಂದು ಶರೀರವನ್ನು ಹೊಂದುವುದಕ್ಕೆ ಕಾರಣಗಳಾದ ಕರ್ಮಗಳನ್ನು ಯಾವಾಗಲೂ ನಡೆಸುತ್ತಲೇ ಬರುವನು. ಈ ಸೂಕ್ಷ್ಮಶರೀರದ ಸ್ವರೂಪವನ್ನು ಹೇಳುವೆನು ಕೇಳು. ಸ್ಥೂಲಶರೀರದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದ ಪಂಚಭೂತಗಳೇ, ಕಣ್ಣಿಗೆ ಕಾಣದಷ್ಟು ಸೂಕ್ಷ್ಮದಶೆಯನ್ನು ಹೊಂದುವುದರಿಂದ ಅದು ಸೂಕ್ಷ್ಮಶರೀರವೆನಿಸುವುದು. ಜೀವನು ಆ ಸ್ಥೂಲಶರೀರವನ್ನು ಬಿಟ್ಟು ಸೂಕ್ಷ್ಮಶರೀರಕ್ಕೆ ಹೋಗುವುದೇ ಮರಣವೆನಿಸುವುದು. ಆ ಸೂಕ್ಷ್ಮಶರೀರವು ಸ್ಥೂಲದಶೆಯನ್ನು ಹೊಂದಿ, ನಾನೆಂಬ ಅಭಿಮಾನಕ್ಕೆ ವಿಷಯವಾಗುವುದೇ ಜನನವೆನಿಸುವುದು. ಇದರಿಂದ ಜೀವನಿಗೆ ಜನನಮರಣಗಳೆಂಬುದು ಸ್ಥೂಲಸೂಕ್ಷ್ಮದೇಹಗಳ ಬದಲಾವಣೆಯೇಹೊರತು ಬೇರೆಯಲ್ಲ. ಪೃಥಿವ್ಯಾದಿ ಭೂತಗಳೆಲ್ಲವೂ ಸ್ಪಷ್ಟವಾಗಿ ಕಾಣಿಸುತ್ತಿದ್ದ ದೇಹದಲ್ಲಿ, ಅವು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮದಶೆಯನ್ನು ಹೊಂದುವುದೇ ಮರಣವು. ಹೀಗೆ ಶರೀರಭೇದದಿಂದ ತೋರುವ ಜನನಮರಣಗಳನ್ನು ಆತ್ಮನಲ್ಲಿ ಆರೋಪಿಸುವುದು ಕೇವಲಭ್ರಾಂತಿಯಲ್ಲದೆ ಬೇರೆಯಲ್ಲ ! ಓ ಜನನೀ ! ಈ ದೇಹವನ್ನು ಕುರಿತು ಮತ್ತೆ ಕೆಲವು ವಿಷಯಗಳನ್ನು ತಿಳಿಸುವೆನು ಕೇಳು. ದೇಹದಲ್ಲಿ ನೇತ್ರೇಂದ್ರಿಯಗಳಿಗೆ ಸ್ಥಾನವಾದ ರಂಧ್ರಗಳನ್ನೇ ನಾವು ಕಣ್ಣುಗಳೆಂದು ಹೇಳಿದರೂ, ಆ ರಂಧ್ರಗಳಿಗೆ ಇತರವಸ್ತುಗಳನ್ನು ಕಾಣುವ ಶಕ್ತಿಯಿಲ್ಲವಷ್ಟೆ? ಅದರಂತೆಯೇ ಕೇವಲ ಇಂದ್ರಿಯಗಳಿಗೂ ಆ ಶಕ್ತಿಯಿರುವುದಿಲ್ಲ. ಜೀವಾತ್ಮನ ಸಂಬಂಧವಿದ್ದಾಗಲೇ ಇಂದ್ರಿಯಗಳಿಗೆ ಆ ಶಕ್ತಿಯುಂಟಾಗುವುದು. ಆದುದರಿಂದ ನೋಡತಕ್ಕವನು ಆತ್ಮನೇ ಹೊರತು

ಇಂದ್ರಿಯವಲ್ಲ. ಹೀಗೆ ಸ್ವತಂತ್ರಶಕ್ತಿಯಿಲ್ಲದ ಇಂದ್ರಿಯವನ್ನೇ ಆತ್ಮವೆಂದು ನಾವು ಹೇಗೆ ತಿಳಿಯಬಾರದೋ, ಹಾಗೆಯೇ ಅಚೇತನವಾದ ದೇಹವನ್ನೂ ಆತ್ಮವೆಂದು ಹೇಳಬಾರದು. ದೇಹಕ್ಕೆ ಕಾಲೋಚಿತವಾಗಿ ಬೇರೆಬೇರೆ ವಿಕಾರಗಳುಂಟು. ಆತ್ಮನಿಗೆ ಯಾವ ವಿಕಾರವೂ ಇರುವುದಿಲ್ಲ. ಆತ್ಮನಿಗೆ ಜನನಮರಣಗಳೆಂಬುದು ದೇಹದಮೂಲಕವಾಗಿಯೇ ತೋರ್ಪಡುವುದು. ಆದುದರಿಂದ ಈ ದೇಹದ ಜನನಮರಣಗಳನ್ನುಕುರಿತು ನಾವು ಸ್ವಲ್ಪವೂ ಭಯಪಡಬೇಕಾದುದಿಲ್ಲ. ಇದರಿಂದ ಹೆಂಡಿರುಮಕ್ಕಳ ಮರಣವನ್ನು ನೋಡಿ ದುಃಖಿಸುವುದು ಕೇವಲ ಅಜ್ಞತೆಯಲ್ಲದೆ ಬೇರೆಯಲ್ಲ. ಆದುದರಿಂದ ಸುಖದುಃಖಗಳೆರಡನ್ನೂ ಸಮವಾಗಿ ಭಾವಿಸಿ, ಆತ್ಮಸ್ವರೂಪವನ್ನು ತಿಳಿದು, ದೇಹದಲ್ಲಿಯೂ, ಹೆಂಡಿರುಮಕ್ಕಳು ಮೊದಲಾದ ಪರಿವಾರಗಳಲ್ಲಿಯೂ, ಮನೆ ಮಠ ಮುಂತಾದುವುಗಳಲ್ಲಿಯೂ ಮಮತೆಯನ್ನು ಬಿಟ್ಟು, ಧರ್ಮಗಳನ್ನನುಷ್ಠಿಸುತ್ತಿರಬೇಕು. ಆತ್ಮಸ್ವರೂಪವನ್ನು ತಿಳಿಯತಕ್ಕ ಜ್ಞಾನಯೋಗವನ್ನೂ, ಪರಮಪುರುಷನಲ್ಲಿಹೊರತು ಇತರಸಮಸ್ತ ವಿಷಯಗಳಲ್ಲಿಯೂ ಜಿಹಾಸೆಯನ್ನು ಹೊಂದಿಸತಕ್ಕವೈರಾಗ್ಯವನ್ನೂ ಹಿಡಿದು, ಶಾಸ್ತ್ರಶ್ರವಣದಿಂದ ನಿಸ್ಸಂದೇಹವಾದ ಬುದ್ಧಿಯನ್ನು ಪಡೆದು, ಭಗವಂತನ ಮಾಯೆಯಿಂದೇರ್ಪಟ್ಟ ಈ ಪ್ರಪಂಚವ್ಯಾಪಾರಗಳಲ್ಲಿ ಆಸಕ್ತಿಯಿಲ್ಲದೆ ನಿವೃತ್ತಿ ಧರ್ಮವನ್ನಾಚರಿಸಬೇಕು. ಈ ಪ್ರಪಂಚವೆಲ್ಲವೂ ಭಗವಂತನ ಮಾಯೆಯಿಂದಲೇ ಸೃಷ್ಟಿಸಲ್ಪಟ್ಟಿರುವುದರಿಂದ, ಇದರೊಳಗಿನ ಒಂದೊಂದು ವಸ್ತುವೂ ಆತ್ಮನನ್ನು ಮರುಳುಮಾಡಿ ದುರ್ಮಾರ್ಗಕ್ಕೆ ಸೆಳೆಯುತ್ತಿರುವುದು. ಆದುದರಿಂದ ಬೇರೊಂದರಲ್ಲಿಯೂ ಮನಸ್ಸಿಡದೆ, ಭಗವಂತನ ಪಾದಾರವಿಂದಗಳನ್ನೇ ಭಕ್ತಿಯಿಂದ ಭಾವಿಸುತ್ತಿರಬೇಕು ಜೀವನು ತನ್ನೊಡನೆ ಒಂದಾಗಿ ಸೇರಿದಂತಿರುವ ದೇಹದಲ್ಲಿಯೇ ಅಭಿಮಾನವನ್ನು ತೊರೆಯಬೇಕಾಗಿರುವಾಗ, ಇತರವಸ್ತುಗಳಲ್ಲಿ ಮಮತೆಯನ್ನು ಬಿಟ್ಟುಬಿಡಬೇಕೆಂಬುದನ್ನು ಹೇಳಬೇಕಾದುದೇನು ? ಆದುದರಿಂದ ಓ ಜನನೀ! ಸರ್ವಸಂಗಪರಿತ್ಯಾಗಮಾಡಿ, ಆ ಭಗವಂತನ ಪಾದಾರವಿಂದವನ್ನು ಧ್ಯಾನಿಸುತ್ತ, ಶರೀರಾವಸಾನವನ್ನೇ ಇದಿರುನೋಡುತ್ತ, ನಿವೃತ್ತಿಧರ್ಮವನ್ನು

ಹಿಡಿಯತಕ್ಕವನೇ ಪರಮಪುರುಷಾರ್ಥವನ್ನು ಹೊಂದುವನು. ಇಲ್ಲಿಗೆ ಮೂವತ್ತೊಂದನೆಯ ಅಧ್ಯಾಯವು.

ಪುಣ್ಯಕರ್ಮಗಳನ್ನಾಚರಿಸಿದವರಿಗೂ, ಪರಬ್ರಹ್ಮೋಪಾಸನೆಯನ್ನು ಮಾಡಿದವರಿಗೂ ಪ್ರಾಪ್ತವಾಗುವ ಸದ್ಗತಿಗಳು.

ಅಮ್ಮಾ ! ಇದುವರೆಗೆ ನಿನಗೆ ದುಷ್ಕರ್ಮಗಳನ್ನು ನಡೆಸುವುದರಿಂದುಂಟಾಗುವ ನರಕಗತಿಗಳನ್ನು ತಿಳಿಸಿದೆನು. ಇನ್ನು ಸತ್ಕರ್ಮಗಳನ್ನು ನಡೆಸಿದವರಿಗೆ ಪ್ರಾಪ್ತವಾಗುವ ಗತಿಗಳನ್ನೂ ತಿಳಿಸುವೆನು ಕೇಳು ! ಈ ಸತ್ಕರ್ಮಗಳಲ್ಲಿಯೂಕೂಡ ಫಲಾಪೇಕ್ಷೆಯಿಂದ ನಡೆಸುವ ಪ್ರವೃತ್ತಿಧರ್ಮಗಳೆಂದೂ, ಯಾವ ಫಲವನ್ನೂ ಅಪೇಕ್ಷಿಸದೆ ಭಗವದರ್ಪಣರೂಪವಾಗಿ ನಡೆಸತಕ್ಕ ನಿವೃತ್ತಿಧರ್ಮಗಳೆಂದೂ ಎರಡು ಬಗೆಯೆಂತು ಗೃಹಸ್ಥಾಶ್ರಮದಲ್ಲಿರುವವನು, ಪ್ರಾಯಕವಾಗಿ, ಆ ಆಶ್ರಮಕ್ಕನುಗುಣಗಳಾದ ಕರ್ಮಗಳನ್ನೇ ಆನುಷ್ಠಿಸುತ್ತ, ಅರ್ಥಕಾಮಗಳಲ್ಲಿಯೇ ಆಸಕ್ತನಾಗಿ, ವಿಶೇಷವಾಗಿ ಪ್ರವೃತ್ತಿಧರ್ಮಗಳನ್ನು ನಡೆಸುವನು. ಹೀಗೆ ಕೇವಲಗೃಹಸ್ಥಧರ್ಮಗಳಲ್ಲಿರತಕ್ಕವನು, ವಿಷಯಾಸಕ್ತಿಯಲ್ಲಿಯೇ ಮೂಢನಾಗಿ, ಭಗವದಾರಾಧನದಲ್ಲಿ ದೃಷ್ಟಿಯಿಡದೆ, ಯಾಗಾದಿಗಳಿಂದ ದೇವತೆಗಳನ್ನು ಪೂಜಿಸುವನು. ಶ್ರಾದ್ಧಾದಿಗಳಿಂದ ಪಿತೃದೇವತೆಗಳನ್ನು ಪೂಜಿಸುವನು. ಯಾವಾಗಲೂ ಹೀಗೆ ದೇವತೆಗಳನ್ನೂ, ಪಿತೃದೇವತೆಗಳನ್ನೂ ಪೂಜಿಸುವುದಕ್ಕಾಗಿ ಬಹಳ ಶ್ರದ್ಧೆಯಿಂದ ಏಷ್ಟೋವ್ರತಗಳನ್ನೂ ನಡೆಸುತ್ತಬರುವನು. ಹೀಗೆ ಸೋಮಯಾಗಗಳನ್ನು ಮಾಡುತ್ತಬಂದ ಪುರುಷನು, ಧೂಮಾದಿಮಾರ್ಗವಾಗಿ (ಎಂದರೆ, ಧೂಮ, ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನ, ಪಿತೃಲೋಕ, ಆಕಾಶ, ಚಂದ್ರವೆಂಬೀ ಕ್ರಮದಿಂದ) ಚಂದ್ರಲೋಕವನ್ನು ಸೇರುವನು. ಅಲ್ಲಿ ತನ್ನ ಕರ್ಮಫಲವನ್ನನುಭವಿಸಿದಮೇಲೆ, ಅಲ್ಲಿಂದ ಹಿಂತಿರುಗಿ, ಆಕಾಶ, ವಾಯು, ಧೂಮ, ಮೇಘವೆಂಬೀ ಕ್ರಮದಿಂದ ಕೆಳಕ್ಕಿಳಿದು, ಭೂಮಿಗೆ ಬಂದು ಸೇರುವನು. ಹೀಗೆ ಚಂದ್ರಲೋಕವನ್ನು ಸೇರಿದವರು, ಶಾಶ್ವತವಾಗಿ ಅಲ್ಲಿ

ನಿಲ್ಲಲಾರದೆ, ತಿರುಗಿ ಅಧೋಗತಿಗೆ ಬರಬೇಕಾದುದರಿಂದ, ಇಂತಹ ಕರ್ಮಗಳನ್ನಾಚರಿಸುವುದರಿಂದ ಶಾಶ್ವತಸುಖವು ಕೈಗೂಡಲಾರದು. ಶೇಷಶಾಯಿಯಾದ ಭಗವಂತನು, ಸರ್ಪಶರೀರವೆಂಬ ಹಾಸಿಗೆಯಲ್ಲಿ ಯಾವಾಗ ಯೋಗನಿದ್ರೆಯಿಂದ ಮೇಲಗುವನೋ, ಆಗ ಇಂತಹ ಪುಣ್ಯಲೋಕಗಳೆಲ್ಲವೂ ನಾಶ ಹೊಂದುವುವು. ಎಂದರೆ, ಈ ಪುಣ್ಯಲೋಕಗಳೆಲ್ಲವೂ ಕಲ್ಪಾಂತದವರೆಗೆ ಮಾತ್ರವೇ ಇದ್ದು, ಕಲ್ಪಾವಸಾನದಲ್ಲಿ ಭಗವಂತನು ಪ್ರಪಂಚವೆಲ್ಲವನ್ನೂ ಉಪಸಂಹಾರಮಾಡಿಕೊಳ್ಳುವಾಗ ಇವೂ ನಾಶಹೊಂದುವುವು. ಬೇರೆ ಸಾಧಾರಣ ಧರ್ಮವನ್ನು ನಡೆಸತಕ್ಕವರು ಇಷ್ಟು ಕಾಲದವರೆಗೂಕೂಡ ಅಲ್ಲಿ ನಿಲ್ಲಲಾರರು. ಜನನೀ! ಇನ್ನು ಪರಬ್ರಹ್ಮೋಪಾಸನವನ್ನು ಮಾಡಿದವರಿಗೆ ಉಂಟಾಗುವ ಸದ್ಗತಿಗಳನ್ನು ತಿಳಿಸುವೆನು ಕೇಳು. ದೃಢಮನಸ್ಸುಳ್ಳ ಯಾವ ಸತ್ಪುರುಷರು, ಇಂದ್ರಿಯಗಳನ್ನು ಜಯಿಸಿ, ಅರ್ಥಕಾಮಗಳನ್ನು ಕೈಗೂಡಿಸತಕ್ಕ ವರ್ಣಾಶ್ರಮಧರ್ಮಗಳನ್ನೇ ಪ್ರಧಾನವಾಗಿಟ್ಟುಕೊಳ್ಳದೆ, ದುಸ್ಸಹವಾಸವನ್ನು ಬಿಟ್ಟು, ತಾವು ನಡೆಸತಕ್ಕ ಒಂದೊಂದು ಕರ್ಮಗಳನ್ನೂ ಭಗವಂತನಲ್ಲಿಯೇ ಅರ್ಪಿಸುತ್ತ, ಶಮದಮಾದಿ ಗುಣಗಳಿಂದ ಕೂಡಿದವರಾಗಿ, ಶುದ್ಧ ಮನಸ್ಸುಳ್ಳವರಾಗಿ, ಭಗವಂತನ ಗುಣಗಳನ್ನು ಕೇಳುವುದರಲ್ಲಿಯೂ, ಅವುಗಳನ್ನು ಕೀರ್ತಿಸುವುದರಲ್ಲಿಯೂ, ಶ್ರದ್ಧೆಯುಳ್ಳವರಾಗಿ, ಅಹಂಕಾರ ಮಮಕಾರಗಳನ್ನು ಬಿಟ್ಟು, ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳನೂ ಭಗವದರ್ಪಣರೂಪವಾಗಿಯೇ ನಡೆಸುತ್ತಬರುವರೋ ಅಂತವರು ಸೂರ್ಯಬಿಂಬದ್ವಾರದಿಂದ ಅರ್ಚಿರಾದಿ ಗತಿಯಲ್ಲಿ (ಎಂದರೆ, ಅರ್ಚಿ, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ, ವಾಯು, ಸೂರ್ಯ, ಚಂದ್ರ, ವಿದ್ಯುತ್ತು, ವರುಣ, ಇಂದ್ರ, ಬ್ರಹ್ಮಲೋಕಗಳ ಮಾರ್ಗವಾಗಿ) ಪರಮಪುರುಷನನ್ನು ಸೇರುವರು. ಸರ್ವಜ್ಞನಾಗಿಯೂ, ಈ ಲೋಕದ ಬಂಧಮೋಕ್ಷಗಳಿಗೆ ಕಾರಣನಾಗಿಯೂ, ಸರ್ವನಿಯಾಮಕನಾಗಿಯೂ, ಬ್ರಹ್ಮಾದಿಗಳಿಗೂ ಅಧಿಪತಿಯಾಗಿಯೂ, ಈ ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕರ್ತನಾಗಿಯೂ ಇರುವ ಆ ಪರಮಪುರುಷನನ್ನು ಸೇರುವುದಕ್ಕಾಗಿ, ಮೇಲೆ ಹೇಳಿದಂತೆ ನಿವೃತ್ತಿಧರ್ಮವನ್ನು ಹಿಡಿದ ಯೋಗಿ

ಗಳು, ತಾವು ನಡೆಸತಕ್ಕ ಬ್ರಹ್ಮೋಪಾಸನದಲ್ಲಿ ಪೂರ್ಣವಾದ ಸಿದ್ಧಿಯನ್ನು ಹೊಂದುವುದಕ್ಕೆ ಮೊದಲೇ ಮರಣಹೊಂದಿದಪಕ್ಷದಲ್ಲಿ ಅವರು ಎರಡು ಪರಾರ್ಧಕಾಲದವರೆಗೆ ನಿಲ್ಲತಕ್ಕ ಬ್ರಹ್ಮಲೋಕಕ್ಕೆ ಹೋಗಿ, ಅಲ್ಲಿ ಬ್ರಹ್ಮನೊಡನೆ ವಾಸಿಸುತ್ತಿರುವರು. ಯಾವಾಗ ಭಗವಂತನು ಪೃಥಿವಿ, ಅಪ್ಪು ತೇಜಸ್ಸು, ವಾಯು, ಆಕಾಶ, ಇಂದ್ರಿಯಗಳು, ಶಬ್ದಾದಿವಿಷಯಗಳು, ತಾಮಸಾಹಂಕಾರ, ಇವೇ ಮೊದಲಾದುವುಗಳಿಂದ ಆವೃತವಾದ ಬ್ರಹ್ಮಾಂಡವನ್ನು ತನ್ನಲ್ಲಿ ಲಯಹೊಂದಿಸುವುದಕ್ಕಾಗಿ, ಸ್ಥೂಲರೂಪದಿಂದ ತನಗೆ ಶರೀರವಾಗಿರುವ ಆ ಜಗತ್ತನ್ನೇ, ನಾಮರೂಪವಿಭಾಗಗಳಿಲ್ಲದ ಸೂಕ್ಷ್ಮದಶೆಯಿಂದ ತನಗೆ ಶರೀರವಾಗಿ ಹೊಂದುವನೋ, ಆಗ ಆ ಲೋಕದಲ್ಲಿರುವವರೆಲ್ಲರೂ, ಬ್ರಹ್ಮನೊಡಗೂಡಿ ಭಗವಂತನ ಸಾನ್ನಿಧ್ಯವನ್ನು ಸೇರುವರು ಮೇಲೆ ಹೇಳಿದಂತೆ ಬ್ರಹ್ಮಲೋಕವನ್ನು ಸೇರಿದ ಯೋಗಿಗಳು ಕಲ್ಪಾಂತದವರೆಗೆ ಭಗವಂತನಲ್ಲಿ ಹೊರತು ಬೇರೊಂದರಲ್ಲಿ ದೃಷ್ಟಿಯಿಡದೆ, ಇಂದ್ರಿಯಗಳನ್ನೂ ಮನಸ್ಸನ್ನೂ ತಡೆದು, ವಿರಕ್ತರಾಗಿ ಅಹಂಕಾರ ಮಮಕಾರಗಳೆಲ್ಲವನ್ನೂ ಬಿಟ್ಟಮೇಲೆಯೇ, ಕೊನೆಗೆ ಪರಮಪುರುಷನ ಸಾನ್ನಿಧ್ಯವನ್ನು ಸೇರುವರು. ಅಮ್ಮಾ ! ಸತ್ಕರ್ಮಗಳನ್ನಾಚರಿಸಿದವರಿಗೆ ಹೀಗೆ ಧೂಮಾದಿಗತಿಯೆಂದೂ, ಅರ್ಚಿರಾದಿಗತಿಯೆಂದೂ ಎರಡು ಮಾರ್ಗವುಂಟು. ಪ್ರವೃತ್ತಿಧರ್ಮವನ್ನು ಹಿಡಿದು ಧೂಮಾದಿಗತಿಯಿಂದ ಪುಣ್ಯಲೋಕಗಳನ್ನು ಸೇರಿದವರು, ತಿರುಗಿ ಭೂಮಿಯಲ್ಲಿ ಜನಿಸಬೇಕಾಗುವುದು. ನಿವೃತ್ತಿಧರ್ಮವನ್ನು ಹಿಡಿದು, ಸಮಸ್ತಕರ್ಮಗಳನ್ನೂ ಭಗವದರ್ಪಣವಾಗಿ ಮಾಡಿ ಭಕ್ತಿಯೋಗದಲ್ಲಿ ಪೂರ್ಣವಾದ ಸಿದ್ಧಿಯನ್ನು ಪಡೆದವರು, ನೆಟ್ಟಗೆ ಅರ್ಚಿರಾದಿಗತಿಯಿಂದ ಪರಮಪದವನ್ನು ಸೇರಿದಮೇಲೆ ಅವರಿಗೆ ಪುನರಾವೃತ್ತಿಯಿಲ್ಲವು. ಓ ಜನನೀ ! ಆ ದುದರಿಂದ ನೀನೂ ಸಮಸ್ತಭೂತಗಳ ಹೃದಯಕಮಲದಲ್ಲಿ ನೆಲೆಗೊಂಡಿರುವ ಪುಣ್ಯಕೀರ್ತಿಯಾದ ಆ ಭಗವಂತನನ್ನೇ ದೃಢಮನಸ್ಸಿನಿಂದ ಮರೆಹೊಕ್ಕು, ಸದ್ಗತಿಯನ್ನು ಹೊಂದುವಳಾಗು. ಮೋಕ್ಷವನ್ನು ಹೊಂದುವುದಕ್ಕೆ ಅನೇಕ ಮಾರ್ಗಗಳಿದ್ದರೂ ಭಕ್ತಿಗಿಂತಲೂ ಸುಲಭವಾದ ಮಾರ್ಗವಿಲ್ಲ. ಆ ಮಾರ್ಗವನ್ನೇ ಹಿಡಿದು ನೀನು ಭಗವಂತನನ್ನು ಭಜಿಸುತ್ತಿರು ! ಯಾರಿಗಾದರೇನು ! ಲೋಕದಲ್ಲಿ ದೇಹಾತ್ಮಾಭಿಮಾನವಿರುವವರೆಗೆ ಎಂದಿದ್ದರೂ ಸಂ

ಸಾರದ ಕಟ್ಟು ತಪ್ಪಿದುದಲ್ಲ ! ಸಮಸ್ತಲೋಕಗಳನ್ನೂ ಸೃಷ್ಟಿಸುವ ಮಹಾಮಹಿಮೆಯುಳ್ಳ ಬ್ರಹ್ಮನಾದರೂಕೂಡ, ದೇಹಾತ್ಮಾಭಿಮಾನದಿಂದ ವರ್ತಿಸಿದಪಕ್ಷದಲ್ಲಿ, ಅವನೂ ಸಂಸಾರಕ್ಕೆ ಕಟ್ಟುಬಿದ್ದೇ ತೀರಬೇಕು. ಮತ್ತು ಯಾವುದೋ ಒಂದು ಪುಣ್ಯವಿಶೇಷದಿಂದ ಬ್ರಹ್ಮಲೋಕವನ್ನು ಸೇರಿ,ಫಲಾಪೇಕ್ಷೆಯಿಲ್ಲದಕರ್ಮಗಳಲ್ಲಿ ನಿರತರಾಗಿದ್ದವರೂಕೂಡ, ದೇಹಾತ್ಮಾಭಿಮಾನವುಳ್ಳವರಾದಪಕ್ಷದಲ್ಲಿ, ತಿರುಗಿ ಸಂಸಾರದಲ್ಲಿ ಬಿಳುವರು. ಹೀಗಿರುವಾಗ ಬೇರೆ ಸಾಮಾನ್ಯಜನರು ಈ ದೇಹಾಭಿಮಾನದಿಂದ ಸಂಸಾರದಲ್ಲಿ ಕಟ್ಟುಬಿಳುವರೆಂಬುದನ್ನು ಹೇಳಬೇಕಾದುದೇನು ? ಸೃಷ್ಟಿಕರ್ತನಾಗಿಯೂ, ವೇದಗರ್ಭನಾಗಿಯೂ ಇರುವ ಬ್ರಹ್ಮದೇವನಾಗಲಿ, ಮರೀಚಿ ಮೊದಲಾದ ಮಹರ್ಷಿಗಳಾಗಲಿ, ಯೋಗಪ್ರವರ್ತಕರಾದ ಸನಕಾದಿಗಳಾಗಲಿ, ಇತರಸಿದ್ಧರಾಗಲಿ, ಫಲಾಪೇಕ್ಷೆಯಿಲ್ಲದ ಕರ್ಮಗಳನ್ನು ನಡೆಸಿದವರಾದರೂ, "ನಾನೇ ಕರ್ಮಗಳನ್ನು ಮಾಡತಕ್ಕವ"ನೆಂಬ ಅಹಂಭಾವವನ್ನು ಸ್ವಲ್ಪಮಾತ್ರವಾದರೂ ಇಟ್ಟಪಕ್ಷದಲ್ಲಿ, ಸೂಕ್ಷ್ಮಚಿದಚಿದ್ವಿಶಿಷ್ಟನಾದ ಭಗವಂತನಲ್ಲಿ ಲಯಹೊಂದಿದ್ದು, ತಿರುಗಿ ಸೃಷ್ಟಿದಶೆಯಲ್ಲಿ ಮೊದಲಿನಂತೆಯೇ ಹುಟ್ಟಬೇಕಾಗುವುದೇ ಹೊರತು, ಅಂತವರು ಪರಮಪದವನ್ನು ಸೇರಿ ಭಗವದನುಭವವೆಂಬ ನಿತ್ಯಾನಂದವನ್ನನುಭವಿಸಲಾರರು. ಬ್ರಹ್ಮಪದವಿಯೆಂಬ ಐಶ್ವರ್ಯವೂಕೂಡ ಪುಣ್ಯಕರ್ಮಗಳಿಂದಲೇ ಲಭಿಸತಕ್ಕುದಾದುದರಿಂದ, ಕರ್ಮಾಧೀನವೆನಿಸಿಕೊಳ್ಳುವುದು. ಅದನ್ನನುಭವಿಸಿ ಪರಮಪುರುಷನಲ್ಲಿ ಲೀನವಾಗಿದ್ದು, ತಿರುಗಿ ಇತರಲೋಕಗಳಂತೆ ಸೃಷ್ಟಿಗೊಳಪಡಬೇಕಾಗುವುದು. ಹೀಗೆ ಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನು ನಡೆಸಿದವರೂಕೂಡ ದೇಹಾತ್ಮಾಭಿಮಾನವುಳ್ಳವರಾದರೆ ಸಂಸಾರದಲ್ಲಿ ಸಿಕ್ಕಿ ಬೀಳುವರು. ಹೀಗಿರುವಾಗ ಸಾಂಸಾರಿಕ ಫಲಗಳನ್ನೇ ಅಪೇಕ್ಷಿಸಿ ಕರ್ಮಗಳನ್ನು ನಡೆಸತಕ್ಕ ದೇಹಾಭಿಮಾನಿಗಳಿಗೆ, ಹೇಗೆತಾನೇ ಆ ಸಂಸಾರದ ಕಟ್ಟುಬಿಟ್ಟು ಹೋಗುವುದು ? ಬ್ರಹ್ಮಪದವಿಯೇ ಮೊದಲಾದ ಐಶ್ವರ್ಯಗಳಲ್ಲಿ ಆಸೆಯುಳ್ಳವರು, ಅದಕ್ಕೆ ಬೇಕಾದ ಕರ್ಮಗಳಲ್ಲಿಯೇ ಶ್ರದ್ಧೆಯಿಟ್ಟು, ನಿತ್ಯಕರ್ಮಗಳನ್ನೂಕೂಡ ಆ ಫಲಗಳನ್ನಪೇಕ್ಷಿಸಿಯೇ ನಡೆಸುವರು. ಹೀಗೆ ರಜೋಗುಣದಿಂದ ಮನಸ್ಸು ಕರಗಿದವರು, ಆಯಾ ಫಲಗಳನ್ನು ಕೋರುತ್ತ,ಇಂದ್ರಿಯ

ಗಳನ್ನು ತಡೆಯಲಾರದೆ, ಗೃಹಸ್ಥಧರ್ಮಗಳಲ್ಲಿ ಪ್ರವರ್ತಿಸಿ, ದೇವತೆಗಳನ್ನೂ, ಪಿತೃದೇವತೆಗಳನ್ನೂ ಪೂಜಿಸುವರು. ಹೀಗೆ ಧರ್ಮಾರ್ಥಕಾಮಗಳಲ್ಲಿ ಅಪೇಕ್ಷೆಯುಳ್ಳ ಪುರುಷರು, ಪುಣ್ಯಶ್ಲೋಕನಾಗಿಯೂ, ಸಂಸಾರನಿವರ್ತಕನಾಗಿಯೂ ಇರುವ ಭಗವಂತನಲ್ಲಿ ಮನಸ್ಸನ್ನು ಚೆನ್ನಾಗಿ ನೆಲೆಗೊಳಿಸಲಾರರು. ಇಂತಹ ವಿವೇಕಹೀನರಿಗೆ ಹರಿಕಥಾಶ್ರವಣಾದಿಗಳಲ್ಲಿ ತೃಪ್ತಿಯಿರದು. ಉತ್ತಮಪದಾರ್ಥಗಳನ್ನು ಬಿಟ್ಟು ಅಮೇಧ್ಯವನ್ನು ತಿಂದು ತೃಪ್ತಿಪಡುವ ಹಂದಿ ಮೊದಲಾದುವುಗಳಂತೆ, ಇತರಕಥೆಗಳನ್ನು ಕೇಳುವುದರಲ್ಲಿಯೇ ತೃಪ್ತಿಪಡುತ್ತಿರುವರು. ಜನನೀ! ಇಂಥವರನ್ನು ದೈವದಿಂದ ವಂಚಿಸಲ್ಪಟ್ಟವರೆಂದೇ ಹೇಳಬೇಕು. ಇಂತಹ ದುರ್ಭಾಗ್ಯರಿಗೆ ಪ್ರಾಪ್ತವಾಗುವ ಗತಿಯಾವುದೆಂಬುದನ್ನು ಹೇಳುವೆನು ಕೇಳು. ಇಂತವರು ಸೂರ್ಯನಿಗೆ ದಕ್ಷಿಣದಿಕ್ಕಿನಲ್ಲಿರುವ ಧೂಮಾದಿಮಾರ್ಗದಿಂದ ಪಿತೃಲೋಕಕ್ಕೆ ಹೋಗಿ, ಹಿಂತಿರುಗಿ ತಮ್ಮತಮ್ಮ ಮಕ್ಕಳಿಗೆ ಮಕ್ಕಳಾಗಿ ಹುಟ್ಟುವರು. ಇಂತವರು ಹುಟ್ಟಿ, ಗರ್ಭಾದಾನ ಮೊದಲುಗೊಂಡು, ಶ್ಮಶಾನದಲ್ಲಿ ನಡೆಯತಕ್ಕ ದೇಹಸಂಸ್ಕಾರಗಳೆಲ್ಲವನ್ನೂ ಹೊಂದಿದಮೇಲೆ, ತಿರುಗಿ ಪರಲೋಕವನ್ನು ಸೇರಿ, ಅಲ್ಲಿನ ಸುಖಗಳನ್ನನುಭವಿಸುತಿದ್ದು, ತಮ್ಮ ಪುಣ್ಯಫಲವು ಮುಗಿದಮೇಲೆ ದೇವತೆಗಳಿಂದ ಕೆಳಕ್ಕೆ ನೂಕಲ್ಪಟ್ಟವರಾಗಿ, ತಿರುಗಿ ಈ ಲೋಕದಲ್ಲಿ ಜನಿಸುವರು. ಜನನೀ! ಇದೇ ಕಾಮ್ಯಕರ್ಮಗಳನ್ನು ನಡೆಸತಕ್ಕವರ ಗತಿಯು. ಆದುದರಿಂದ ನೀನು ಸರ್ವಲೋಕನಮಸ್ಕೃತನಾದ ಆ ಭಗವಂತನ ಪಾದಪದ್ಮಗಳನ್ನೇ ಸರ್ವವಿಷಯದಲ್ಲಿಯೂ ನಂಬಿ, ಅವನನ್ನು ಸೇವಿಸುತ್ತಿರು. ಭಗವಂತನಾದ ಆ ವಾಸುದೇವನಲ್ಲಿ ನೆಲೆಗೊಳಿಸಿದ ಭಕ್ತಿರೂಪವಾದ ಜ್ಞಾನವೇ ತೀಕ್ಷ್ಣುಪುಲ್ಲಿ ವಿರಕ್ತಿಯನ್ನೂ ಹುಟ್ಟಿಸಿ, ಕೊನೆಗೆ ಪರಬ್ರಹ್ಮನನ್ನು ಸಾಕ್ಷಾತ್ಕರಿಸುವಂತೆಯೂ ಮಾಡುವುದು. ಯಾವಾಗ ಭಗವದುಪಾಸನೆಮಾಡತಕ್ಕ ಜೀವನ ಮನಸ್ಸು, ಶಬ್ದಾದಿವಿಷಯಗಳನ್ನು ಕಂಡಾಗಲೂ, ಅದರಿಂದ ತೋರಿಬರುವ ಸುಖದುಃಖಗಳೆಂಬ ಭೇದವನ್ನು ಗ್ರಹಿಸದಂತಿರುವುದೋ, ಯಾವಾಗ ಉಪಾಸಕನ ಮನಸ್ಸು, ಶಬ್ದಾದಿವಿಷಯಗಳಲ್ಲಿ ಪ್ರವೃತ್ತಿಯನ್ನು ಬಿಟ್ಟು, ಇಷ್ಟರೆಂದೂ ವಿರೋಧಿ

ಗಳೆಂದೂ ಭೇದಬುದ್ಧಿಯನ್ನಿಡದೆ, ಎಲ್ಲವೂ ಬ್ರಹ್ಮಾತ್ಮಕವೆಂಬ ಸಮಬುದ್ಧಿಯನ್ನು ಹೊಂದಿ, ಶುಭಾಶ್ರಯವಾದ ಭಗವದ್ವಿಗ್ರಹವೊಂದರಲ್ಲಿಯೇ ನೆಲೆಗೊಳ್ಳುವುದೋ, ಆಗ ಅಂತಹ ಮನಸ್ಸಿನಿಂದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಕೇವಲ ಜ್ಞಾನಸ್ವರೂಪನಾಗಿ, ಪರಮಾತ್ಮನೆಂದೂ, ಈಶ್ವರನೆಂದೂ ಹೇಳಲ್ಪಡುವ ಆ ಭಗವಂತನೊಬ್ಬನೇ ಪೃಥಿವಿ ಮೊದಲಾದ ಪಂಚಭೂತಸ್ವರೂಪದಿಂದಲೂ, ಅವುಗಳಿಂದ ಕಲ್ಪಿತವಾದ ದೇಹವುಳ್ಳ ದೇವಮನುಷ್ಯಾದಿ ರೂಪಗಳಿಂದಲೂ, ಕಾಣುತ್ತಿರುವನು. ಆದುದರಿಂದ ಸಮಸ್ತಜಗತ್ತೂ ಬ್ರಹ್ಮಾತ್ಮಕವೆಂದೇ ತಿಳಿ ! ಯೋಗಿಗಳು ಸಾಂಗವಾದ ಈ ಭಕ್ತಿಯೋಗವನ್ನು ಹಿಡಿದುಪಕ್ಕೆ ಪ್ರಕೃತಿಸಂಬಂಧವನ್ನು ನೀಗಿ, ಎಲ್ಲೆಯಿಲ್ಲದ ಆನಂದಸ್ವರೂಪನಾಗಿಯೂ, ಪಾಪನಿವೃತ್ತಿಯೇ ಮೊದಲಾದ ಅಷ್ಟಗುಣಗಳಿಂದ ಕೂಡಿದುದಾಗಿಯೂ ಇರುವ ತಮ್ಮ ಶುದ್ಧಸ್ವರೂಪವನ್ನು ಹೊಂದುವುದೇ ಫಲವು. ಈ ಜೀವನಂತೆಯೇ ಪರಮಾತ್ಮನಿಗೂ ಆ ಪ್ರಕೃತಿಸಂಬಂಧವಿದ್ದರೂ, ಅದರಲ್ಲಿ ಒಂದು ವಿಶೇಷವುಂಟು. ಸತ್ತ್ವಾದಿಗುಣಗಳ ಸಂಬಂಧವಿಲ್ಲದೆ, ಕೇವಲ ಜ್ಞಾನಸ್ವರೂಪನಾದ ಜೀವನು, ಇತರ ವಸ್ತುಗಳನ್ನು ಗೋಚರಿಸುವಹಾಗೆ ಕ್ರಮಾಡತಕ್ಕ ಇಂದ್ರಿಯಗಳಿಂದಲೂ, ಪಂಚಭೂತಗಳಿಂದಲೂ ಏರ್ಪಟ್ಟ ದೇವಮನುಷ್ಯಾದಿರೂಪಗಳನ್ನು ಹೊಂದಿದಾಗ, ಅದನ್ನು ತಾನೆಂದೇ ಭ್ರಮಿಸುವನು. ಭಗವಂತನು ಸರ್ವಜ್ಞನಾದುದರಿಂದ ಅವನಿಗೆ ಆ ಭ್ರಾಂತಿಯಿಲ್ಲ. ಮತ್ತು ಎಲೆ ಮಾತೆ! ಮೊದಲು ಮಹತ್ತತ್ತ್ವದಿಂದ ಅಹಂಕಾರತತ್ತ್ವವಾಗಿ ಮಾರ್ಪಟ್ಟು, ಅದರಲ್ಲಿಯೇ ಸಾತ್ವಿಕ, ರಾಜಸ, ತಾಮಸಗಳೆಂದು ಮೂರುವಿಧವಾಗಿ, ಅದರಲ್ಲಿ ಪೃಥಿವಿ ಮೊದಲಾದ ಭೂತಗಳ ಸ್ವರೂಪದಿಂದ ಐದುವಿಧವಾಗಿ, ಇಂದ್ರಿಯರೂಪದಿಂದ ಹನ್ನೊಂದುವಿಧವಾಗಿಯೂ ಬೇರ್ಪಟ್ಟ ತತ್ತ್ವಗಳೂ ಈ ತತ್ತ್ವಗಳ ಸಮುದಾಯರೂಪವಾವ ಅಂಡವೂ, ಅದರಲ್ಲಿ ಕಾಣಿಸಿಕೊಂಡ ಬ್ರಹ್ಮನೂ, ಮೂಲಪ್ರಕೃತಿವಿಶಿಷ್ಟನಾದ ಯಾವ ಭಗವಂತನಿಂದಲೇ ಉತ್ಪನ್ನವಾದುವೋ ಅಂತಹ ಭಗವಂತನಿಗೆ ಈ ಸಮಸ್ತಪ್ರಪಂಚವೂ ಶರೀರವೆಂಬುದರಲ್ಲಿ ಸಂದೇಹವೇನಿದೆ ? ಹೀಗೆ ಸಮಸ್ತ ಜಗ

ತ್ತೂ ಬ್ರಹ್ಮಾತ್ಮಕವೆಂಬ ವಿಷಯವನ್ನು, ವಿರಕ್ತನಾಗಿಯೂ, ನಿಸ್ಸಂಗನಾಗಿಯೂ, ದೃಢಚಿತ್ತನಾಗಿಯೂ ಇರುವ ಯೋಗಿಯು, ಶದ್ಧೆಯಿಂದಲೂ,ಭಕ್ತಿಯಿಂದಲೂ, ವೈರಾಗ್ಯದಿಂದಲೂ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಓ ಜನನೀ ! ಇದುವರೆಗೆ ನಾನು ನಿನಗೆ ಪ್ರಕೃತಿ, ಪುರುಷ, ಪರಮಾತ್ಮರೆಂಬ ಮೂರು ತತ್ವಗಳ ನಿಶ್ಚಯವನ್ನು ತಿಳಿಸತಕ್ಕ ಜ್ಞಾನಯೋಗವನ್ನು ವಿವರಿಸಿದೆನು. ಭಗವದುಪಾಸನಾರೂಪವಾದ ಭಕ್ತಿಯೋಗವನ್ನೂ ತಿಳಿಸಿದೆನು. ಈ ಜ್ಞಾನಯೋಗಕ್ಕಾಗಲಿ, ಭಕ್ತಿಯೋಗಕ್ಕಾಗಲಿ, ಭಗವಂತನೆಂದು ಹೇಳಲ್ಪಡುವ ಅಪರಮಪುರುಷನೊಬ್ಬನೇ ಉದ್ದೇಶ್ಯವಸ್ತುವೆಂದು ತಿಳಿ. ಇವೆಲ್ಲಕ್ಕೂ ಭಗವಂತನೊಬ್ಬನೇ ಹೇಗೆ ಪ್ರಾಪ್ಯನಾಗುವನೆಂದು ಶಂಕಿಸಬೇಡ. ಹಾಲು ಮೊದಲಾದ ಒಂದೇ ಪದಾರ್ಥವು, ನೇತ್ರೇಂದ್ರಿಯಕ್ಕೆ ಬಿಳುಪು, ಕಪ್ಪು, ಮೊದಲಾದ ಬಣ್ಣದಿಂದಲೂ, ನಾಲಗೆಗೆ ರುಚಿ, ಕಹಿ ಮೊದಲಾದ ಗುಣದಿಂದಲೂ, ತ್ವಗಿಂದ್ರಿಯಕ್ಕೆ ಶೀತೋಷ್ಣಾದಿಗುಣಗಳಿಂದಲೂ ತೋರ್ಪಡುವಂತೆ, ಭಗವಂತನೊಬ್ಬನೇ ಆಯಾ ಶಾಸ್ತ್ರಮಾರ್ಗಗಳಿಂದ ಬೇರೆಬೇರೆವಿಧದಲ್ಲಿ ಉಪಾಸನೆಮಾಡಲ್ಪಡುವನು. ಮತ್ತು ಪಾಂಚರಾತ್ರದಲ್ಲಿ ಹೇಳಲ್ಪಟ್ಟ ಪೂಜಾವಿಧಿಗಳಿಂದಲೂ, ವೇದದ ಪೂರ್ವಭಾಗದಲ್ಲಿ ಹೇಳಲ್ಪಟ್ಟ ಯೆಜ್ಞಾದಿಗಳಿಂದಲೂ, ದಾನಾದಿ ಸತ್ಕರ್ಮಗಳಿಂದಲೂ, ತಪಸ್ಸಿನಿಂದಲೂ, ವೇದಾಧ್ಯಯನದಿಂದಲೂ, ವೇದಾರ್ಥಗಳ ವಿಮರ್ಶೆಗಳಿಂದಲೂ, ಇಂದ್ರಿಯ ನಿಗ್ರಹದಿಂದಲೂ, ಫಲಾಪೇಕ್ಷೆಯಿಂದಲೂ ಫಲಾಪೇಕ್ಷೆಯಿಲ್ಲದೆಯೂ ನಡೆಸತಕ್ಕ ಸಕಾಮ ನಿಷ್ಕಾಮಗಳೆಂಬ ಎರಡು ಬಗೆಯ ಕರ್ಮಗಳಿಂದಲೂ, ನಿವೃತ್ತಿಧರ್ಮದಿಂದಲೂ, ನಾನಾಬಗೆಯ ಅಂಗಗಳುಳ್ಳ ಭಕ್ತಿಯೋಗದಿಂದಲೂ, ಪ್ರಕೃತಿಗಿಂತಲೂ ವಿಲಕ್ಷಣವಾದ ಆತ್ಮತತ್ವವನ್ನು ತಿಳಿಸತಕ್ಕ ಜ್ಞಾನಯೋಗದಿಂದಲೂ, ದೃಢವಾದ ವೈರಾಗ್ಯದಿಂದಲೂ, ಇವೇ ಮೊದಲಾಗಿ ಇನ್ನೂ ನಾನಾವಿಧ ಕಾರ್ಯಗಳಿಂದಲೂ,ಸಮಸ್ತಕಲ್ಯಾಣಗುಣ ಪರಿಪೂರ್ಣನಾಗಿ, ಹೇಯಗುಣ ವೆಲ್ಲದೆ, ಸ್ವಯಂಪ್ರಕಾಶವುಳ್ಳವನಾದ ಆ ಭಗವಂತನೊಬ್ಬನೇ ಬೇರೆಬೇರೆ ದೇವತಾಸ್ವರೂಪದಿಂದ ಉಪಾಸಿಸಲ್ಪಡುವನು. ಓ ಜನನೀ ! ಸಾತ್ವಿಕ, ರಾಜಸ, ತಾಮಸಗಳೆಂಬ

ಮೂರುವಿಧವಾದ ಭಕ್ತಿಯನ್ನೂ, ಅದರಲ್ಲಿಯೂ, ಸರ್ವೋತ್ತಮವೆನಿಸಿ ಕೊಂಡ ನೈರ್ಗುಣ್ಯರೂಪವಾದ (ಆತ್ಯಂತಿಕ) ಭಕ್ತಿಯನ್ನೂ ನಿನಗೆ ತಿಳಿಸಿದೆನು. ಹೀಗೆ ನಾಲ್ಕುಬಗೆಯ ಭಕ್ತಿಯೋಗಗಳನ್ನಲ್ಲದೆ, ಸಮಸ್ತಭೂತಗಳನ್ನೂ ನಾಶ ಹೊಂದಿಸುತ್ತ ಯಾರಿಗೂ ತಿಳಿಯದೆ ನಡೆದುಹೋಗತಕ್ಕ ಕಾಲಸ್ವರೂಪವನ್ನೂ ತಿಳಿಸಿದೆನು. ಮತ್ತು ಜೀವಾತ್ಮನು ಯಾವುದರಲ್ಲಿ ಪ್ರವೇಶಿಸಿ ತನ್ನ ನಿಜಸ್ಥಿತಿಯನ್ನೇ ತಾನು ತಿಳಿಯದೆ ಹೋಗುವನೋ, ಅಂತಹ ಅವಿದ್ಯೆಯ ಸ್ವರೂಪವನ್ನೂ, ಆ ಅವಿದ್ಯೆಯೆ ಕಾರ್ಯಗಳಿಂದ ವಿಚಿತ್ರವಾಗಿ ಹರಡಿರುವ ಸಂಸಾರಗತಿಗಳನ್ನೂ ನಿನಗೆ ತಿಳಿಸಿದೆನು. ಓ ಜನನೀ! ನಾನು ಇದುವರೆಗೆ ನಿನಗುಪದೇಶಿಸಿದ ಈ ವೇದಾಂತಾರ್ಥಗಳನ್ನು ತಕ್ಕ ಅಧಿಕಾರಗಳಿಲ್ಲದೆ ಆ ಸೈತ್ವಾತ್ರಗಳಿಗೆ ಉಪದೇಶಿಸಬಾರದು ಈ ವೇದಾಂತಾರ್ಥವನ್ನು ಪದೇಶ ಹೊಂದುದಕ್ಕೆ ಅಧಿಕಾರಿಗಳಲ್ಲದವರಾರೆಂಬುದನ್ನು ತಿಳಿಸುವೆನು ಕೇಳು. ಇತರರನ್ನು ಭಯಪಡಿಸಿ ಹಿಂಸಿಸತಕ್ಕ ಸ್ವಭಾವವುಳ್ಳವರು, ವಿನಯಗುಣವಿಲ್ಲದ ಮೂರ್ಖರು, ಧೂರ್ತರು, ಆಚಾರಹೀನರು, ಡಾಂಭಿಕರು, ವಿಷಯಾಸಕ್ತರು, ಕುಟುಂಬಧರ್ಮದಲ್ಲಿಯೇ ವಿಶೇಷಾಸಕ್ತಿಯುಳ್ಳವರು, ನನ್ನಲ್ಲಿ ಭಕ್ತಿಯಿಲ್ಲದವರು, ನನ್ನ ಭಕ್ತರನ್ನು ವಿರೋಧಿಸತಕ್ಕವರು; ಇಂತವರೆಲ್ಲರೂ, ಈ ವೇದಾಂತ ತತ್ವವನ್ನು ಉಪದೇಶಹೊಂದುವುದಕ್ಕೆ ಯೋಗ್ಯರಲ್ಲ. ಶ್ರದ್ಧೆಯುಳ್ಳವರಾಗಿಯೂ, ಶಾಂತರಾಗಿಯೂ ನನ್ನಲ್ಲಿ ಭಕ್ತಿಯುಳ್ಳವರಾಗಿಯೂ, ಸದಾಚಾರನಿಷ್ಠರಾಗಿಯೂ, ಮಾತ್ಸರ್ಯಾದಿ ದುರ್ಗುಣವಿಲ್ಲದವರಾಗಿಯೂ ಶುದ್ಧರಾಗಿಯೂ, ಬುದ್ಧಿವಂತರಾಗಿಯೂ, ಸಮಸ್ತಭೂತಗಳಲ್ಲಿಯೂ ಮೈತ್ರಿಯುಳ್ಳವರಾಗಿಯೂ, ವಿರಕ್ತರಾಗಿಯೂ, ಸಮಸ್ತವಸ್ತುಗಳಿಗಿಂತಲೂ ನನ್ನನ್ನೇ ಪ್ರಿಯವಸ್ತುವನ್ನಾಗಿ ಭಾವಿಸತಕ್ಕವರಾಗಿಯೂ ಇರುವ ಸತ್ಪುರುಷರುಮಾತ್ರವೇ ಈ ವೇದಾಂತಾರ್ಥವನ್ನು ಉಪದೇಶಹೊಂದುವುದಕ್ಕೆ ತಕ್ಕ ಅಧಿಕಾರಿಗಳು. ಅಮ್ಮಾ! ನಾನು ಹೇಳಿದ ಈ ವೇದಾಂತಾರ್ಥವನ್ನು ಬಿಂದಾವರ್ತಿಯಾದರೂ ಯಾವನು ಶ್ರದ್ಧೆಯಿಂದ ಕೇಳುವನೋ, ಯಾವನು ಇದನ್ನು ಮತ್ತೊಬ್ಬರಿಗೆ ಉಪದೇಶಿಸುವನೋ, ಅಂತಹ ಪುರುಷನು ನನ್ನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ನನ್ನ ಸಾನ್ನಿಧ್ಯವನ್ನು ಸೇರುವನು" ಎಂದನು. ಇಲ್ಲಿಗೆ ಮೂವತ್ತೆರಡನೆಯ ಅಧ್ಯಾಯವು.

ದೇವಹೂತಿಯು ಕಪಿಲನನ್ನು ಸ್ತೋತ್ರಮಾಡಿ, ಯೋಗಮಾರ್ಗವನ್ನು ಹಿಡಿದು ಮುಕ್ತಿಯನ್ನು ಹೊಂದಿದುದು. ಕಪಿಲಮುನಿಯು ಕರ್ಮರೆಯಾದುದು.

ಆಮೇಲೆ ಮೈತ್ರೇಯಮಹಾಮುನಿಯು, ವಿದುರನನ್ನು ಕುರಿತು, ''ವಿದುರಾ ಕೇಳು ! ಕಪಿಲಮಹಾಮುನಿಯು ಮಾಡಿದ ಈ ಜ್ಞಾನೋಪದೇಶದಿಂದ ದೇವಹೂತಿಯು ಪರಮಸಂತುಷ್ಟಳಾದಳು. ಅವಳ ಜ್ಞಾನೋದಯಕ್ಕೆ ಮರೆಯಾಗಿದ್ದ ಅಜ್ಞಾನವೆಂಬ ತೆರೆಯು ನೀಗಿತು. ಆಗ ಕರ್ದಮವು ತ್ರಿಯಾದ ಆ ದೇವಹೂತಿಯು, ಪ್ರಕೃತಿಪುರುಷೇಶ್ವರರೆಂಬ ಮೂರು ತತ್ವಗಳ ನಿಜಸ್ಥಿತಿಯನ್ನು ತಿಳಿದ ಮಹಾಯೋಗಿಗಳಿಗೂ ಧ್ಯಾನಗೋಚರನಾದ ಆ ಕಪಿಲರೂಪಿಯಾದ ಭಗವಂತನನ್ನು ಹೀಗೆಂದು ಸ್ತೋತ್ರಮಾಡಲಾರಂಭಿಸಿದಳು. ''ಓ ದೇವಾ ! ಸಾಕ್ಷಾತ್ತಾಗಿ ನಿನ್ನ ನಾಭಿಕಮಲದಿಂದಲೇ ಹುಟ್ಟಿ ಈ ಸಮಸ್ತಲೋಕಗಳನ್ನೂ ಸೃಷ್ಟಿಸತಕ್ಕ ಬ್ರಹ್ಮನೂಕೂಡ, ನಿನ್ನನ್ನು ಪ್ರತ್ಯಕ್ಷನಾಗಿ ನೋಡಲಾರದೆ ಧ್ಯಾನದಿಂದ ನಿನ್ನನ್ನು ಸಾಕ್ಷಾತ್ಕರಿಸಿದನು. ಮೊದಲು ಮಹಾಸಮುದ್ರದಲ್ಲಿ ನೀನೊಬ್ಬನೇ ಏಕಾಕಿಯಾಗಿ ಮಲಗಿದ್ದವನು ಈಗ ಭೂಮಿ ಮೊದಲಾದ ಪಂಚಭೂತಗಳಾಗಿಯೂ, ಏಕಾದಶೇಂದ್ರಿಯಗಳಾಗಿಯೂ, ಶಬ್ದಾದಿವಿಷಯಗಳಾಗಿಯೂ ವಿಸ್ತರಿಸಿದ ಪ್ರಕೃತಿಯೂ, ಜೀವಗಳೂ ಆಗ ನಿನಗೆ ಶರೀರರೂಪವಾಗಿಯೇ ಇದ್ದುವು. ಚರಾಚರಾತ್ಮಕವಾದ ಈ ಸಮಸ್ತಪ್ರಪಂಚವನ್ನೂ ಜಠರದಲ್ಲಿಟ್ಟುಕೊಂಡು, ತನ್ನೊಳಗೆ ಸೇರಿದ್ದ ಆಪ್ರಕೃತಿಯ ಗುಣಗಳನ್ನು ಹರಡಿಸಿ ಈ ಪ್ರಪಂಚರೂಪದಿಂದ ಕಾಣಿಸತಕ್ಕ ನಿನ್ನ ಸ್ವರೂಪವನ್ನು, ನಿನ್ನಿಂದ ಸಾಕ್ಷಾತ್ತಾಗಿ ಹುಟ್ಟಿದ ಬ್ರಹ್ಮದೇವನೇ ಪ್ರತ್ಯಕ್ಷದಲ್ಲಿ ಕಾಣಲಾರದಮೇಲೆ, ಇನ್ನು ನನ್ಮಂತವರ ಪಾಡೇನು ? ಓ ! ಮಹಾತ್ಮಾ ! ನೀನು ಪೂರ್ಣಕಾಮನಾದುದರಿಂದ ಉದ್ದೇಶಿಸಿ ನಡೆಸಬೇಕಾದ ಕಾರ್ಯವೊಂದೂ ಇರುವುದಿಲ್ಲ. ಹೀಗೆ ನೀನು ನಿರ್ವ್ಯಾಪಾರನಾಗಿದ್ದರೂ, ಲೀಲಾರ್ಥವಾಗಿಯೇ ಸತ್ವಾದಿಗುಣಗಳನ್ನವಲಂಬಿಸಿ, ಬ್ರಹ್ಮರುದ್ರಾದಿಶರೀರಗಳಲ್ಲಿ ಪ್ರವೇಶಿಸಿ, ನಿನ್ನ ಸಂಕಲ್ಪಶಕ್ತಿಯಿಂದಲೇ ಸೃಷ್ಟಿ, ಸ್ಥಿತಿ ಸಂಹಾರ ಮೊದಲಾದುವುಗಳನ್ನು ನಡೆಸುತ್ತಿರುವೆ ! ನೀನು ಊಹಿಸುವುದಕ್ಕೂ ಸಾಧ್ಯವಿಲ್ಲದ ಅನಂತಶಕ್ತಿಯುಳ್ಳವನಾದುದರಿಂದ, ನಿನಗೆ ಅಸಾ

ಧ್ಯವಾದ ಕಾರ್ಯವೊಂದೂ ಇರುವುದಿಲ್ಲ. ಎಲೈ ದೇವದೇವನೆ ! ನೀನು ಮಹಾಪ್ರಳಯದಲ್ಲಿಯೊಕೂಡ, ಸಮಸ್ತಪ್ರಪಂಚವನ್ನೂ ನಿನ್ನಲ್ಲಿಯೇ ಅಡಗಿಸಿಕೊಂಡು, ಆ ಪ್ರಳಯಸಾಗರದ ಮಧ್ಯದಲ್ಲಿ ಒಂದು ಸಣ್ಣ ಮಗುವಿನಂತೆ, ಆಲದೆಲೆಯಮೇಲೆ ಮಲಗಿ, ಕಾಲ್ಬೆರಳನ್ನು ಬಾಯಲ್ಲಿಟ್ಟು ರುಜಿಸಿನೋಡುತ್ತ, ಲೋಕವೋಹಕವಾದ ಮಾಯಾಶಿಶುಸ್ವರೂಪದಿಂದ ಕಾಣಿಸಿಕೊಳ್ಳುವೆ. ಹೀಗೆ ಸರ್ವಜಗತ್ಕಾರಣನಾಗಿಯೂ, ಸರ್ವನಿಯಾಮಕನಾಗಿಯೂ, ಇರುವ ಪರಮಪುರುಷನಾದ ನೀನು, ಸಾಮಾನ್ಯಸ್ತ್ರೀಯಾದ ಈ ನನ್ನ ಗರ್ಭದಲ್ಲಿ ಹುಟ್ಟಿದಮೇಲೆ, ನನ್ನ ಭಾಗ್ಯವನ್ನೇನೆಂದು ಹೇಳಲಿ ! ನನ್ನನ್ನು ಕೃತಾರ್ಥಳನ್ನಾಗಿ ಮಾಡಿದೆ. ಎಲೈ ಮಹಾತ್ಮನೆ ! ಪಾಪಿಗಳನ್ನು ನಿಗ್ರಹಿಸಿ ಭಕ್ತರನ್ನು ರಕ್ಷಿಸುವುದಕ್ಕಾಗಿ ಇದಕ್ಕೆ ಮೊದಲೇ ವರಾಹಾಶ್ವವತಾರಗಳನ್ನು ಧರಿಸಿದ ನೀನು, ಈ ಲೋಕಕ್ಕೆ ತತ್ವಜ್ಞಾನವನ್ನುಪದೇಶಿಸುವುದಕ್ಕಾಗಿ ಈಗ ನನ್ನ ಗರ್ಭದಲ್ಲಿ ಈ ಕಪಿಲರೂಪದಿಂದವತರಿಸಿದೆ. ದೇವಾ ! ನೀನು ಈ ನಿನ್ನ ಅವತಾರದ ಪ್ರಯೋಜನಕ್ಕಾಗಿ ತತ್ತ್ವೋಪದೇಶದಿಂದ ಲೋಕೋಜ್ಜೀವನವನ್ನು ಮಾಡುವುದು ಹಾಗಿರಲಿ ! ಒಂದಾವರ್ತಿ ನಿನ್ನ ನಾಮವನ್ನು ಭಜಿಸಿದರೂ, ನಿನ್ನ ಸತ್ಕಥೆಗಳನ್ನು ಕಿವಿಯಿಂದ ಕೇಳಿದರೂ, ನಿನ್ನ ಸ್ವರೂಪವನ್ನು ಮನಸ್ಸಿನಲ್ಲಿ ಧ್ಯಾನಿಸಿದರೂ ಕೂಡ, ಚಂಡಾಲಾದಿ ನೀಚಜಾತಿಗೂ ಮುಕ್ತಿಯು ಕೈಗೂಡುವುದು. ಹೀಗಿರುವಾಗ ನಿನ್ನನ್ನು ಪುತ್ರನನ್ನಾಗಿ ಪಡೆದು, ನಿನ್ನ ಸ್ವರೂಪವನ್ನು ಕಣ್ಣಾರೆ ನೋಡುತ್ತಿರುವ ನನಗೆ, ನಿನ್ನ ಅನುಗ್ರಹದಿಂದ ಮುಕ್ತಿಯುಂಟಾಗುವುದರಲ್ಲಿ ಸಂದೇಹವೇನಿದೆ? ಓ ಮಹಾತ್ಮಾ! ಯಾವನ ನಾಲಗೆಯ ತುದಿಯಲ್ಲಿ ನಿನ್ನ ನಾಮಾಕ್ಷರಗಳಿರುವುವೋ, ಅವನು ಚಂಡಾಲನಾಗಿದ್ದರೂ, ಅವನನ್ನೇ ಮಹಾತ್ಮನೆಂದು ಹೇಳಬೇಕು. ಏಕೆಂದರೆ, ಅಂತ್ಯಕಾಲದಲ್ಲಿ ಯಾರು ನಿನ್ನ ನಾಮಕೀರ್ತನವನ್ನು ಮಾಡುವರೋ, ಅಂತವರು ಅನೇಕತಪಸ್ಸುಗಳನ್ನು ಮಾಡಿದವರಾಗಿಯೂ, ಅನೇಕ ಯಜ್ಞಯಾಗಾದಿಸತ್ಕರ್ಮಗಳನ್ನು ನಡೆಸಿದವರಾಗಿಯೂ, ಅನೇಕತೀರ್ಥಯಾತ್ರೆಗಳನ್ನು ಮಾಡಿದವರಾಗಿಯೂ, ವೇದಾಧ್ಯಯನಮಾಡಿದವರಾಗಿಯೂ ಇದ್ದಲ್ಲದೆ. ಆ ವಿಧವಾದ ಮಹಿಮೆಯನ್ನು ಹೊಂದಲಾರರು. ಅಂತ್ಯಕಾಲದಲ್ಲಿ ನಿನ್ನ ನಾಮಸ್ಮರಣವು ಲಭಿಸುವುದ

ಕ್ಕಾಗಿಯೇ ಸಕ್ಕುರುಷರೆಲ್ಲರೂ ಇಷ್ಟೊಂದು ಪ್ರಯತ್ನಪಡುವರು. ಮತ್ತು ಎಲೈ ಪರಮಪುರುಷನೆ! ನೀನು ಸರ್ವಜೀವಗಳಿಗೂ ಅಂತರ್ಯಾಮಿಯಾಗಿ ಅವರಿಂದ ಧ್ಯಾನಿಸಲ್ಪಡತಕ್ಕವನು ಎಣೆಯಿಲ್ಲದ ಮಹಿಮೆಯುಳ್ಳವನು. ಸಮಸ್ತಯೋಗಿಗಳಿಗೂ ಧ್ಯಾನಯೋಗ್ಯನು. ಜೀವಾಂತರ್ಯಾಮಿಯಾಗಿದ್ದರೂ, ಜ್ಞಾನಸಂಕೋಚವಿಲ್ಲದೆ ಸ್ವಯಂಪ್ರಕಾಶವುಳ್ಳವನು. ವೇದಗರ್ಭನು. ಸರ್ವವ್ಯಾಪಿಯಾದುದರಿಂದ ವಿಷ್ಣುವೆಂದು ಕೀರ್ತಿಸಲ್ಪಡತಕ್ಕವನು. ಇಂತಹ ಪರಮಪುರುಷನಾದ ನಿನ್ನ ಪಾದಪದ್ಮಗಳನ್ನು ಮರೆಹುಗುವೆನು." ಎಂದಳು. ಹೀಗೆ ಸ್ತುತಿಸಲ್ಪಟ್ಟ ಕಪಿಲಮುನಿಯು, ಗಂಭೀರವಾಕ್ಯದಿಂದ ತನ್ನ ತಾಯಿಯಾದ ಆ ದೇವಹೂತಿಯನ್ನು ಕುರಿತು "ಅಮ್ಮಾ! ನಾನು ಇದುವರೆಗೆ ನಿನಗೆ ಹೇಳಿದ ಭಕ್ತಿಯೋಗವೆಂಬ ಮೋಕ್ಷೋಪಾಯವನ್ನು, ಬಹಳಸುಖವಾಗಿಯೇ ಸಾಧಿಸಬಹುದು. ಇದೇ ಮಾರ್ಗವನ್ನವಲಂಬಿಸಿದರೆ ತೀಕ್ಷ್ಣಬುದ್ಧಿಯೇ ಮೋಕ್ಷವು ಕೈಗೂಡುವುದು. ಇದೇ ನನ್ನ ಸಿದ್ಧಾಂತವು. ನೀನು ಇದೇ ಮಾರ್ಗವನ್ನು ಹಿಡಿದು ಶ್ರದ್ಧೆಯಿಂದ ನಡೆಯುವಳಾಗು! ಬ್ರಹ್ಮೋಪಾಸನವನ್ನು ನಡೆಸಿದ ಅನೇಕಮಹಾತ್ಮರೂ ಇದನ್ನೇ ಉತ್ತಮಮಾರ್ಗವೆಂದು ನಿಶ್ಚಯಿಸಿರುವರು ಈ ಮಾರ್ಗವನ್ನವಲಂಬಿಸಿದವರು ಸಂಸಾರಭಯವಾಗಲಿ, ಮೃತ್ಯುಭಯವಾಗಲಿ, ಯಾವುದೂ ಇಲ್ಲದ ನನ್ನ ಸ್ಥಾನವನ್ನು ಸುಲಭವಾಗಿ ಸೇರಬಹುದು. ಈ ನನ್ನ ಮತವನ್ನು ನಿರಾಕರಿಸಿದವರಿಗೆ ಎಂದಿದ್ದರೂ ಮೃತ್ಯುಭಯವು ತಪ್ಪದು! ಆದುದರಿಂದ ನೀನು ಈ ವಿಷಯದಲ್ಲಿ ಬಹಳ ಎಚ್ಚರದಿಂದಿರಬೇಕು." ಎಂದನು. ಕಪಿಲನು ಹೀಗೆ ತನ್ನ ತಾಯಿಯಾದ ದೇವಹೂತಿಗೆ ಜ್ಞಾನಮಾರ್ಗವನ್ನು ಪದೇಶಿಸಿದ ಮೇಲೆ, ಆಕೆಯ ಅನುಮತಿಯನ್ನು ಪಡೆದು, ಕಣ್ಮರೆಯಾಗಿ ಹೊರಟು ಹೋದನು. ಇತ್ತಲಾಗಿ ದೇವಹೂತಿಯೂಕೂಡ ತನ್ನ ಪುತ್ರನಾದ ಕಪಿಲಮಹಾಮುನಿಯ ಉಪದೇಶವನ್ನನುಸರಿಸಿ, ಯೋಗಾಭ್ಯಾಸದಿಂದ ಸರಸ್ವತೀನದಿಯ ತೀರಪ್ರದೇಶಕ್ಕೆ ಅಲಂಕಾರಭೂತವಾದ ಆ ಪುಣ್ಯಾಶ್ರಮದಲ್ಲಿಯೇ ಸಮಾಧ್ಯಾನದಲ್ಲಿ ದೃಢಮನಸ್ಸಿಟ್ಟು ಯೋಗನಿಷ್ಠಳಾಗಿದ್ದಳು. ತ್ರಿಸಂಧ್ಯಾಕಾಲಗಳಲ್ಲಿಯೂ ಸ್ನಾನಮಾಡುವುದರಿಂದ ಪಿಂಗಳವರ್ಣವಾಗಿಯೂ, ಸಹಜವಾಗಿಯೇ ಸುರುಳಿಗಟ್ಟಿದ ಮುಂಗುರುಳುಗಳಿಂದ ಶೋಭಿತವಾಗಿಯೂ ಇದ್ದ

ಜಡೆಯನ್ನು ಧರಿಸಿ,ನಾರುಮಡಿಯನ್ನುಟ್ಟು, ಕ್ರೂರತಪಸ್ಸಿನಿಂದ ಕಂದಿದಮೈ
ಯುಳ್ಳವಳಾಗಿ ದೃಢಭಕ್ತಿಯಿಂದ ಭಗವಂತನನ್ನು ಧ್ಯಾನಿಸುತಿದ್ದಳು. ತನ್ನ
ಪತಿಯಾದ ಕರ್ದಮಪ್ರಜಾಪತಿಯು ಬಹುಕಾಲದವರಿಗೆ ನಡೆಸುತಿದ್ದತಪಸ್ಸಿ
ನಿಂದಲೂ, ಯೋಗಾಭ್ಯಾಸದಿಂದಲೂ ಮಹಾನುಭಿಮೆಗೊಂಡುದಾಗಿಯೂ,
ವಿಮಾನಚಾರಿಗಳಾದ ದೇವತೆಗಳಿಗೂ ಆಸೆಹುಟ್ಟಿಸತಕ್ಕುದಾಗಿಯೂ, ಇದು
ವರೆಗೆ ತನ್ನ ಗೃಹಧರ್ಮಗಳಿಗೆ ಸ್ಥಾನವಾಗಿಯೂ ಇದ್ದ ತನ್ನ ಗೃಹದಲ್ಲಿಯೂ,
ಅಲ್ಲಿನ ಸಮಸ್ತಭೋಗಸಾಮಗ್ರಿಗಳಲ್ಲಿಯೂ ಆಸೆಯೆನ್ನು, ತೊರೆದು ಭಗವ
ದುಪಾಸನವೊಂದರಲ್ಲಿಯೇ ಮನಸ್ಸಿಟ್ಟಳು ! ಹಿಂದೆ ಕರ್ದಮನು ಈ ದೇವ
ಹೂತಿಯ ಮನಸ್ಸಂತೋಷಾರ್ಥವಾಗಿ ತನ್ನ ತಪೋಮಹಿಮೆಯಿಂದ ನಿರ್ಮಿ
ಸಿದ ಆ ದಿವ್ಯಭವನದ ಸೊಗಸನ್ನೂ, ಅಲ್ಲಿನ ಭೋಗಸಾಮಗ್ರಿಗಳನ್ನೂ
ಕೇಳಬೇಕೆ ? ನೊರೆಹಾಲಿನಂತೆ ಬಿಳುಪಾದ ಹಾಸಿಗೆಗಳು ! ಅದರಮೇಲೆ
ಸುವರ್ಣದ ಕುಸುರಿಗಳಿಂದ ಚಿತ್ರಿತಗಳಾದ ಮೇಲ್ಹೊಪ್ಪಟಿಗಳು ! ಅಂದನಾ
ದ ಸುಪ್ಪತಿಗೆಗಳು ! ಸುವರ್ಣಮಯವಾಗಿ ಸುಖಸ್ಪರ್ಶವುಳ್ಳ ಆಸ್ತರಣಗಳು!
ಪಚ್ಚೆ, ಕೆಂಪು ಮುಂತಾದ ನವರತ್ನಗಳಿಂದ ಕೆತ್ತಲ್ಪಟ್ಟು, ನಡುನಡುವೆ ಸ್ತ್ರೀ
ಪ್ರತಿಮೆಗಳಿಂದಲಂಕೃತಗಳಾದ ಸ್ಫಟಿಕದ ಗೋಡೆಗಳು ! ಈ ಗೋಡೆಗಳ
ಮೇಲೆ ಅವಿಚ್ಛಿನ್ನವಾಗಿ ಬೆಳಗುತ್ತಿರುವ ರತ್ನದೀಪದ ಸಾಲುಗಳು ! ಇಂತಹ
ಗೋಡೆಗಳಿಂದಾವೃತವಾದ ಮಹೋನ್ನತವಾದ ಉಪ್ಪರಿಗೆಯ ಸುತ್ತಲೂ
ಅಂದವಾದ ಗೃಹೋದ್ಯಾನಗಳು ! ಅದರಲ್ಲಿ ಪುಷ್ಪಸಮೃದ್ಧಗಳಾದ ಮಂ
ದಾರಪಾರಿಜಾತಾದಿ ಕಲ್ಪವೃಕ್ಷಸಮೂಹಗಳು ! ಅಲ್ಲಲ್ಲಿ ಕಿವಿಗಿಂಪಾಗಿ
ಎಗುತ್ತಿರುವ ಪಕ್ಷಿಮಿಥುನಗಳ ಮಧುರಧ್ವನಿಗಳು ! ನಡುನಡುವೆ ಭ್ರಮರ
ಝಂಕಾರಗಳು! ಆ ತೋಟದ ನಡುವೆ ತಾವರೆ ನೈದಿಲೆಗಳಿಂದ ತುಂಬಿ ಘಮ
ಘಮಿಸುತ್ತಿರುವ ನಡೆಬಾವಿಗಳು ! ಸರ್ವಸೌಭಾಗ್ಯವಿತಿಷ್ಟವಾದ ಇಂತಹ
ಭವನಗಳಲ್ಲಿ, ಕಿನ್ನರದಂಪತಿಗಳು ಆಗಾಗ ಬಂದು ತಮ್ಮ ಗುಣಗಳನ್ನು
ಹಾಡಿಬಿಡದೆ ಗಾನಮಾಡುತ್ತಿರುವರು. ಮತ್ತು ಕರ್ದಮನು ಈ ಒಂ
ದೊಂದು ಕ್ರೀಡಾಸರೋವರದಲ್ಲಿಯೂ, ಉದ್ಯಾನಗಳಲ್ಲಿಯೂ, ಎಷ್ಟೋ
ಪ್ರೇಮದಿಂದ ತನ್ನನ್ನು ಉಪಲಾಲಿಸುತ್ತಿದ್ದನು. ಹೀಗೆ ಈ ಭೋಗಸ್ಥಾನಗ

ಳಲ್ಲಿ ಅನೇಕಭೋಗಗಳನ್ನನುಭವಿಸುತ್ತಿದ್ದ ದೇವಹೂತಿಯು, ದೇವತಾಸ್ತ್ರೀ ಯರಿಗೂ ಆಸೆಹುಟ್ಟಿಸತಕ್ಕ ಅವೆಲ್ಲವನ್ನೂ ಪುಲ್ಲಿಗಿಂತಲೂ ಕಡೆಯಾಗಿ ಭಾವಿಸಿ, ಕೇವಲ ಭಗವದ್ಧ್ಯಾನವೊಂದರಲ್ಲಿಯೇ ಮನಸ್ಸಿಟ್ಟು ಅವೆಲ್ಲವನ್ನೂ ಬಿಟ್ಟು ಹೊರಟಳು. ಹೀಗೆ ದೇವಹೂತಿಯು ಕೇವಲವಿರಕ್ತಿಯಿಂದ ಸರ್ವ ಸಂಗಪರಿತ್ಯಾಗಮಾಡಿ ಹೊರಟಾಗಲೂಕೂಡ, ತನ್ನ ಪುತ್ರನಾದ ಕಪಿಲ ಮುನಿಯನ್ನು ಬಿಟ್ಟು ಹೋಗಬೇಕೆಂಬ ವ್ಯಸನವುಮಾತ್ರ ಅವಳ ಮನಸ್ಸನ್ನು ಬಹಳವಾಗಿ ಬಾಧಿಸುತಿತ್ತು. ಹಿಂದೆ ತನ್ನ ಪತಿಯಾದ ಕರ್ದಮನು ತನ್ನನ್ನು ಬಿಟ್ಟು ಹೋದುದೊಂದು, ಈಗಿನ ಪುತ್ರವಿರಹವೊಂದು, ಇವೆರಡೂ ಅವಳ ಮನಸ್ಸನ್ನು ಬಹಳವಾಗಿ ಬಾಧಿಸುತಿತ್ತು. ಈ ದುಃಖದಿಂದ ತಲೆಯನ್ನು ತಗ್ಗಿಸಿ ಕಂಬನಿದ ಮುಖವುಳ್ಳವಳಾಗಿದ್ದಳು ಚಿದಚಿದೀಶ್ವರತತ್ವವನ್ನು ತಿಳಿದವಳಾಗಿದ್ದರೂಕೂಡ ಆ ದೇವಹೂತಿಯು, ಈ ಪುತ್ರ ವಿರಹವನ್ನು ಸಹಿಸಹಾರದೆ, ಕರುವನ್ನಗಲಿದ ಹಸುವಿನಂತೆ ದುಃಖದಿಂದ ತಪಿಸುತಿದ್ದಳು ಸರ್ವಸಂಗಪರಿತ್ಯಾಗಮಾಡಿ ಕೇವಲ ವೈರಾಗ್ಯದಿಂದ ತಪೋವನಕ್ಕೆ ಹೊರಟ ದೇವಹೂತಿಗೆ, ಇನ್ನೂ ಈ ಪುತ್ರವ್ಯೋಹವು ಮಾತ್ರ ಬಿಟ್ಟು ಹೋಗಲಿಲ್ಲವೆ ?" ಎಂದು ನೀನು ಶಂಕಿಸಬಹುದು. ವಿದುರಾ! ಅದು ಹಾಗಲ್ಲ! ಕೇವಲ ಭಗವದ್ಧ್ಯಾನಪರಳಾದ ದೇವಹೂತಿಯ ಮನಸ್ಸು, ಪುತ್ರನೆಂಬ ನೆವದಿಂದ ಭಗವಂತನಲ್ಲಿಯೇ ನೆಲೆಗೊಂಡಿತ್ತಲ್ಲದೆ ಬೇರೆ ವಿಷಯದಲ್ಲಿ ಪ್ರವರ್ತಿಸಲಿಲ್ಲ. ಹೀಗೆ ದೇವಹೂತಿಯು ತನ್ನ ಮನೆಯಲ್ಲಿಯೇ ಸ್ವಲ್ಪಕಾಲ ದವರೆಗೆ ಪುತ್ರವಿರಹದಿಂದ ಕೊರಗುತಿದ್ದು, ಅಲ್ಲಿಂದ ಹೊರಟಮೇಲೆ, ತನ್ನ ಮಗನಾದ ಕಪಿಲಮುನಿಯು ಹೇಳಿದ್ದಂತೆಯೇ ಯೋಗಿಗಳಿಗೆ ಧ್ಯಾನಗೋಚರನಾಗಿಯೂ, ಪ್ರಸನ್ನಮುಖವುಳ್ಳವನಾಗಿಯೂ ಇರುವ ಭಗವಂತನ ಸ್ವರೂಪವನ್ನು, ಮೊದಲು ಸಾಕಲ್ಯವಾಗಿಯೂ, ಅಮೇಲೆ ಆತನ ಬೇರೆಬೇರೆ ಅವಯವಗಳ ಸೌಂದರ್ಯವನ್ನು ಪ್ರತ್ಯೇಕವಾಗಿಯೂ ಧ್ಯಾನಿಸುತ್ತ ಬಂದಳು. ಬ್ರಹ್ಮಪ್ರಾಪ್ತಿಗೆ ಹೇತುವಾದ ಜ್ಞಾನಯೋಗ ಕರ್ಮಯೋಗಗಳಿಂದಲೂ, ವೈರಾಗ್ಯದಿಂದ ಸಹಕರಿಸಲ್ಪಟ್ಟ ಭಕ್ತಿಯೋಗದಿಂದಲೂ, ಮನಸ್ಸನ್ನು ಶುದ್ಧಿಗೊಳಿಸಿ, ಆ ಶುದ್ಧಮನಸ್ಸಿನಿಂದ, ಸರ್ವಜ್ಞನಾಗಿಯೂ, ಸ್ವಯಂಪ್ರ

ಕಾಶವುಳ್ಳವನಾದುದರಿಂದ ಮಾಯಾಗುಣಗಳಾದ ಶೋಕಮೋಹಾದಿಗಳೊಂದೂ ಇಲ್ಲದವನಾಗಿಯೂ ಇರುವ, ಭಗವಂತನನ್ನು ಧ್ಯಾನಿಸುತ್ತ, ಜೀವಾತ್ಮರಿಗೆ ಆಧಾರಭೂತನಾದ ಪರಮಾತ್ಮನಲ್ಲಿ ಮನಸ್ಸನ್ನು ನಿಶ್ಚಲವಾಗಿ ನಿಲ್ಲಿಸಿ, ಶೀತೋಷ್ಣಾದಿಬಾಧೆಗಳನ್ನೂ ಲಕ್ಷ್ಯಮಾಡದೆ, ಆತ್ಮಾನುಭವರೂಪವಾದ ಆನಂದವನ್ನನುಭವಿಸುತಿದ್ದಳು. ಅವಳ ಮನಸ್ಸು, ಪ್ರಕೃತಿವಿಲಕ್ಷಣನಾದ ಅಂತರಾತ್ಮನೊಬ್ಬನಲ್ಲಿಯೇ ಅವಿಚ್ಛಿನ್ನವಾಗಿ ನೆಲೆಗೊಂಡುದರಿಂದ ಅವಳಿಗೆ ಆ ಪ್ರಕೃತಿಗುಣದಿಂದುಂಟಾಗತಕ್ಕ ದೇಹಾತ್ಮಾಭಿಮಾನವೇ ಮೊದಲಾದ ಭ್ರಮೆವೆಲ್ಲವೂ ಕ್ರಮಕ್ರಮವಾಗಿ ಬಿಟ್ಟುಹೋಯಿತು. ನಿದ್ರೆಯಿಂದೆದ್ದವನಿಗೆ ಕನಸಿನಲ್ಲಿ ಕಂಡ ಪದಾರ್ಥಗಳು ಹೇಗೋಹಾಗೆ, ಅವಳಿಗೆ ತನ್ನವೇ ಅಸಾರವೆಂದು ತೋರಿತು. ಅಳವ ಶರೀರಕ್ಕೆ ತಕ್ಕ ಪೋಷಣೆಯಿಲ್ಲದಿದ್ದರೂ, ಅವಳ ಮನಸ್ಸಿಗೆ ಅದರ ಚಿಂತೆಯೊಂದೂ ಅಂಟದುದರಿಂದ ಅವಳ ದೇಹವು ಸ್ವಲ್ಪಮಾತ್ರವೂ ಕೃಶಿಸಿಲಿಲ್ಲ! ಅಭ್ಯಂಗನಾದಿಗಳೊಂದೂ ಇಲ್ಲದೆ ಅವಳದೇಹವು ಕೊಳೆಮುಚ್ಚಿದ್ದರೂ, ಅವಳ ಮನಸ್ಸು ನಿಷ್ಕಲ್ಮಷವಾಗಿದ್ದುದರಿಂದ ಹೊಗೆಯಿಲ್ಲದ ಅಗ್ನಿಯಂತೆ ಪ್ರಕಾಶಿಸುತಿದ್ದಳು. ಮತ್ತು ಆಕೆಯು ತನ್ನ ಮನಸ್ಸನ್ನು ಶ್ರೀಹರಿಯಲ್ಲಿ ನೆಲೆಗೊಳಿಸಿ, ಅದರಿಂದುಂಟಾದ ಆನಂದಸಾಗರದಲ್ಲಿ ಮುಳುಗಿದ್ದುದರಿಂದ, ಇತ್ತಲಾಗಿ, ತಲೆಗೆದರಿ, ಬಟ್ಟೆಯಿಲ್ಲದೆ ನಿರ್ವಾಣವಾಗಿದ್ದ ತನ್ನ ದೇಹವನ್ನೂ ತಾನು ಅರಿಯದಂತಿದ್ದಳು. ಹೀಗೆ ದೇವಹೂತಿಯೂ ಕಪಿಲಮುನಿಯಿಂದುಪದೇಶಿಸಲ್ಪಟ್ಟ ಯೋಗಮಾರ್ಗವನ್ನು ಹಿಡಿದು, ಮಹಾನಂದಸ್ವರೂಪನಾದ ಪರಮಪುರುಷನನ್ನು ತೀಕ್ಷ್ಣುದಲ್ಲಿಯೇ ಸೇರಿಬಿಟ್ಟಳು. ಆಃ! ಇದಲ್ಲವೇ ಆಶ್ಚರ್ಯವು! ಸಾಮಾನ್ಯವಾಗಿ ಸ್ತ್ರೀಯರೇ ಚಪಲಸ್ವಭಾವವುಳ್ಳವರು! ಮತ್ತು ವಿವೇಕಹೀನರು! ಅದರಲ್ಲಿಯೂ ಈ ದೇವಹೂತಿಯು ದೇವತೆಗಳಿಗೂ ಆಸೆಹುಟ್ಟಿಸತಕ್ಕ ಎಣೆಯಿಲ್ಲದ ಭೋಗಗಳನ್ನು ಅನುಭವಿಸಿ ರುಚಿಕಂಡವಳು! ಇಂತವಳೇ ಅವೆಲ್ಲವನ್ನೂ ತೃಣಪ್ರಾಯವಾಗಿ ತೊರೆದು, ಯೋಗಮಾರ್ಗವನ್ನು ಹಿಡಿದು, ಪರಬ್ರಹ್ಮವನ್ನು ಸೇರಿದಮೇಲೆ, ಇದಕ್ಕಿಂತಲೂ ಆಶ್ಚರ್ಯವೇನುಂಟು! ಓ ವಿದುರಾ! ಆ ದೇವಹೂತಿಯು ಯೋಗಸಿದ್ಧಿಯನ್ನು ಪಡೆದ ಪುಣ್ಯಸ್ಥಳವು ಈಗಲೂ ಸಿ

ದ್ಧಾಶ್ರಮವೆಂಬ ಹೆಸರಿನಿಂದ ಮೂರುಲೋಕದಲ್ಲಿಯೂ ಪ್ರಸಿದ್ಧಿಗೊಂಡಿರುವುದು. ಮತ್ತು ಆ ದೇವಹೂತಿಯೆ ಶರೀರವು, ಆವಳು ನಡೆಸುತಿದ್ದ ಯೋಗಬಲದ ಮಹಿಮೆಯಿಂದ, ಜರೆ, ಸುಕ್ಕು, ಮುಂತಾದ ಮುಪ್ಪಿನ ವಿಕಾರಗಳೊಂದೂ ಇಲ್ಲದೆ ದೃಢವಾಗಿದ್ದುದಲ್ಲದೆ, ಅವಳು ಆ ದೇಹವನ್ನು ತೊರೆದಕೂಡಲೇ ಅದು, ಒಂದು ನಿಮಿರೂಪವಿಂದ ಪ್ರವಹಿಸಿ, ಸರ್ವಾರ್ಥ ಸಿದ್ಧಿಯೆನ್ನುವಂಟು ಮಾಡುತ್ತ, ಅನೇಕಸಿದ್ಧಗಣಗಳಿಂದ ಸೇವಿತವಾಗಿದ್ದಿತು. ಅತ್ತಲಾಗಿ ಕಪಿಲಮುನಿಯು ತಾಯಿಯ ಅನುಮತಿಯನ್ನು ಪಡೆದು, ಅಲ್ಲಿನ ಕರ್ದಮಾಶ್ರಮದಿಂದ ಈಶಾನ್ಯದಿಕ್ಕಿಗೆ ಹೊರಟನು. ದಾರಿಯಲ್ಲಿ, ಸಿದ್ಧಚಾರಣ, ಗಂಧರ್ವಾಪ್ಸರಸ್ಸುಗಳೂ ಮಹರ್ಷಿಗಳೂ, ತನ್ನನ್ನು ಸ್ತುತಿಸುತ್ತ ಹಿಂಬಾಲಿಸಿ ಬರಲು, ಅದೇದಾರಿಯಾಗಿ ಸಮುದ್ರತೀರವನ್ನು ಸೇರಿ, ಅಲ್ಲಿ ಸಮುದ್ರನು ತನ್ನನ್ನು ಸತ್ಕರಿಸಿ, ತನಗೆ ಸ್ಥಳವನ್ನು ಕೊಡಲು, ನೀನೇ ತನಗೆ ನಿವಾಸಸ್ಥಾನವಾಗಿ ಮಾಡಿಕೊಂಡು, ಲೋಕಕ್ಷೇಮಾರ್ಥವಾ ತಾನು ಅಲ್ಲಿಯೇ ತಪಸ್ಸನ್ನಾಡುತ್ತ ನಿಂತನು. ಈಗಲೂ ಅಲ್ಲಿ ಕಪಿಲರೂಪಿಯಾದ ಆ ಭಗವಂತನು ಸಾಂಖ್ಯಪ್ರವರ್ತಕರಾದ ಅನೇಕಯೋಗಿಗಳಿಂದ ಸ್ತುತಿಸಲ್ಪಡುತ್ತ ಯೋಗವನ್ನವಲಂಬಿಸಿರುವನು. ಓ ವಿದುರಾ ! ನಿನಗೆ ನಾನು ಸ್ವಾಯಂಭುವಮನುವಿನ ಚರಿತ್ರವನ್ನು ಹೇಳುವುದಕ್ಕೆ ತೊಡಗಿ, ಪ್ರಸ್ತಾವವಶದಿಂದ ಕಪಿಲದೇವಹೂತಿಯ ಸಂವಾದರೂಪವಾದ ಈ ಸಾಂಖ್ಯ ತತ್ವವನ್ನೂ ತಿಳಿಸಿದೆನು. ಲೋಕಪಾವನವಾಗಿಯೂ, ರಹಸ್ಯವಾಗಿಯೂ ಇರುವ ಈ ಆತ್ಮಯೋಗವನ್ನು ಯಾರು ಹೇಳುವರೋ, ಯಾರು ಕೇಳುವರೋ ಅವರು ಭಗವಂತನಲ್ಲಿ ಭಕ್ತಿಯೋಗವನ್ನು ಹೊಂದಿ, ಆಭಗವಂತನ ಪಾದಮೂಲವನ್ನು ಸೇರುವರು" ಎಂದು ಮೈತ್ರೇಯಮಹರ್ಷಿಯು ವಿದುರನಿಗೆ ಹೇಳಿದ ವಿಚಾರವನ್ನು, ಶುಕಮುನಿಯು ಪರೀಕ್ಷಿದ್ರಾಜನಿಗೆ ತಿಳಿಸಿದುದಾಗಿ, ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳಿದನು. ಇಲ್ಲಿಗೆ ಮೂವತ್ತುಮೂರನೆಯ ಅಧ್ಯಾಯವು.

ತೃತೀಯಸ್ಕಂಧವು ಸಮಾಪ್ತವು.

ಶ್ರೀ ಕೃ ಷ್ಣ ಯ ಪ ರ ಬ್ರ ಹ್ಮ ಣೇ ನ ಮಃ.

ಶುಭಂ ಭೂಯಾತ್.